(*c*) It is reported by the Local officers that the sanction of arrear increments to some of the officials is delayed for non-receipt of relevant references from the Officers where they were previously working, and in some other cases, it is delayed for non-sanction of allocation prior to that period.

(*d*) Yes, action is being taken to settle the claims early.

Pay Scales of Non-S.S.L.C. and Untrained Teachers

425. Sri B. P. GANGADHAR (Tumkur).—

Will the Minister for Education be pleased to state:—

(*a*) the pay scales prescribed for non-S.S.L.C. and untrained Teachers ;

(*b*) whether according to the Government Order No. E 1033/EDN/49-47-12 dated 2nd August 1949, the Non-S.S.L.C. and untrained

(SRI B. P. GANGADHAR)

Teachers, who have attained the age of 45 years, are entitled to the pay scale of Rs. 70-2-80-3-110;

(*c*) whether they have given effect to the Government Order No. E. 1033/EDN 49-47-12 dated 2nd August 1949;

(*d*) whether Government had assured on the floor of the House that immediate steps would be taken to give effect to the Government Order stated above;

(*e*) the reasons for the delay in implementing the above orders?

Sri K. V. SHANKARA GOWDA (Minister for Education).—

(*a*) Non-S.S.L.C. Trained Rs. 70-2-80-3-110.
Non-S.S.L.C. Untrained Rs. 65-1-70-2-90.

(*b*) Yes. Such Untrained teachers got to the benefit of getting into trained teachers' scale up to 1st June 1951.

(*c*) Yes. The Government Order was in force only till 1st June 1951.

(*d*) Does not arise.

(*e*) Does not arise.

Inclusion of Archaeology Department in Southern Zone

414. **Sri P. THIMMAIAH** (Basavanagudi).—

Will the Minister for Education be pleased sto tate :—

(*a*) whether the Department of Archaeology of our State is included in the Southern Zone, Madras;

(*b*) whether there is any proposal before the Government to have a separate Circle for Mysore;

(*c*) the reasons for not having a separate circle for Mysore?

Sri K. V. SHANKARA GOWDA (Minister for Education).—

(*a*) No. The Department of Archaeology is not subordinate to the Central Archaeological Department.

(*b*) Yes.

(*c*) The matter is under the consideration of the Government of India.

Construction of Choultry at Srisailam

466. Sri K. M. PUTTASWAMY (Chickballapur).—

Will the Minister for Revenue be pleased to state :—

(*a*) whether Government have decided to construct a choultry at Srisailam (A.P.);

(*b*) if so, the reasons for inordinate delay in executing the work ?

Sri H. V. KOUJALGI (Minister for Revenue).—

(*a*) Government propose to advance a loan of Rs. 5 lakhs towards the cost of construction of a choultry at Srisailam (A.P.).

(*b*) The organisation to whom the loan is to be advanced and certain other legal formalities have to be completed. The matter is under active consideration.

Submersible area of Coffee Plantation

470. Sri H. N. NANJEGOWDA (Arkalgud).—

Will the Chief Minister be pleased to state :—

(*a*) the submersible area of Coffee Plantation and other lands in case the Harangi Reservoir Project is constructed at 'Hardur' and 'Hudgur, Sites (separate figures may kindly be furnished for 100', 120', 140', 160' and 182' at both the sites);

(*b*) the storage capacity of the dam at the height of 100 ft., 120 ft. 140 ft., 160 ft. and 180 ft. after the completion of the project (separate figures in respect of both the sites may kindly be furnished);

(*c*) the extent of land that will be irrigated after its completion (separate figures in respect of different heights at both the sites may kindly be furnished) ?

Sri VEERENDRA PATIL (Chief Minister).—

(*a*) Particulars for 182 ft. at Hardur site and 120 ft. at Hudgur site are furnished as per statement appended. Details for other heights are not surveyed.

(SRI VEERENDRA PATIL)

(*b*) The storage capacity of the Dam at Hudgur and Hardur Sites are as under : —

Heights in feet	Gross Net Capacity in M. C. Ft.	
	Hardur Site	Hudgur Site
100 ft.	4,348	1,435
120 ft.	6,030	3,032
140 ft.	8,001	4,582
160 ft.	9,826	...
180 ft.	12,884	...

(*c*) *Hardur site* :—

182 ft. Dam	1,05,000 Acres
80 ft. Pick up	30,000 Acres

Hudgur site :—

150 ft. Dam	75,000 Acres
120 ft. Dam	51,000 Acres

STATEMENT

Sl. No.	Particulars	Hardur Site (River Bed Level R. L. 2820.00) 182 ft. height (RL 3002)	Hudgur Site (River Bed Level R.L. 2704.00) 120 ft. height (RL 2824)
	Submersion in Acres :		
	(*a*) Coffee lands ...	842	53
	(*b*) Wet lands ...	1,180	816
	(*c*) Cardamom lands...	93	...
	(*d*) Private water lands	2,162	137
	(*e*) Government Waste lands, Forest, River portion, etc.	733	1,315
	Total ...	5,010	2,321

Cancellation of Rice Mill Licence

489. Sri S. H. PUTTARANGANATH (Belur).—

Will the Minister of State for Food and Civil Supplies refer to the reply given to starred Question No. 451 on 8th April 1968 and state :—

(*a*) whether it is a fact that the licence granted to Sri A. P. Puttaswamy to run a rice mill was cancelled by the departmental people on the direction given by the former Minister for Food and Civil Supplies, if so, on what grounds the licence was cancelled ;

(*b*) whether it is a fact that the present Minister of State for Food ordered his subordinates to renew the same licence to the said school master ?

Sri B. VITHALDAS SHETTY (Minister of State for Food and Civil Supplies).—

(*a*) No. However, having come to know that Sri Puttaswamy had not disclosed the fact that he was Government School Master when he applied for grant of a Rice Mill Permit, the Director of Food and Civil Supplies requested the Deputy Commissioner, Hassan, not to renew until further orders the rice mill licence of Sri Puttaswamy which had expired on 31st December 1967.

(*b*) On further consideration of the facts of the case, it was found that there was no valid ground to withhold the renewal of Rice Mill Licence held by Sri Puttaswamy who had retired from service and the Director of Food and Civil Supplies was asked to advise the Deputy Commissioner, Hassan to renew the same.

Lease of land for the Congress Exhibition at the Subhas Nagar Tank, Bangalore

2-00 P.M.

ಶ್ರೀ ಎಸ್. ಶಿವಪ್ಪ (ಶ್ರವಣಬೆಳಗೊಳ).—ಸಭಾಪತಿಯವರೇ, ಕಾಂಗ್ರೆಸ್ ವಸ್ತುಪ್ರದರ್ಶನ ಕ್ಕಾಗಿ ಬೆಂಗಳೂರು ನಗರದಲ್ಲಿ ಅತಿ ಹೆಚ್ಚಿನ ಬೆಲೆಯುಳ್ಳಂಥ ಪ್ರದೇಶವನ್ನು ಕಾಂಗ್ರೆಸ್ಸು ತಾನು ಅಧಿಕಾರದಲ್ಲಿದೆಯೆಂದು, ಆ ಆಸ್ತಿಯನ್ನು ತನ್ನ ಪಕ್ಷಕ್ಕೆ ಈಡು ಮಾಡಿದೆ. ಈ ಪ್ರವೃತ್ತಿ ಎಲ್ಲಿಯ ವರೆಗೆ ಬೆಳಸಿದ್ದೀರಿ ? ಕೊಟ್ಯಾಂತರ ರೂಪಾಯಿ ಬೆಲೆ ಬಾಳತಕ್ಕಂಥ ಭೂಮಿ ಏನು ಇದೆ ಅವನ್ನು ಕಾಂಗ್ರೆಸ್ ಪಕ್ಷದ ಬೆಳವಣಿಗೆಗಾಗಿ ಈಡುಮಾಡಿ ಈ ಒಂದು ದೊಡ್ಡ ಅಪರಾಧ ಮಾಡಿ ಇದರಿಂದ ದೇಶವ ಖಜಾನೆಗೆ ನಷ್ಟ ಮಾಡಿದ್ದೀರಿ. ಆದುದರಿಂದ ಈಗಲೂ ಕೂಡ ತಮ್ಮ ಮುಖಾಂತರ ಮುಖ್ಯಮಂತ್ರಿಗಳನ್ನು ಕೇಳುತ್ತೇನೆ. ಈವತ್ತಿನ ದಿವಸ ಅವರು ಇದಕ್ಕೆ ಉತ್ತರ ಹೇಳಬೇಕು. ಸರ್ಕಾರ ಈ ರೀತಿ ತಮ್ಮ ಪಕ್ಷದ ಬೆಳವಣಿಗೆಗಾಗಿ ಏನಾದರೂ ತೀರ್ಮಾನ ತೆಗೆದುಕೊಂಡಿದ್ದಾರೆಯೇ ಅಥವಾ ತೀರ್ಮಾನ ತೆಗೆದುಕೊಳ್ಳಬೇಕು ಎನ್ನುವ ಒತ್ತಾಯ ಬಂತೇ ? ಆ ಆಸ್ತಿಯನ್ನು ತಮ್ಮ ಪಕ್ಷಕ್ಕೆ ಕೊಡುವುದಾದರೆ ಇದರಿಂದ ದೊಡ್ಡ ಅನಾಹುತವಾಗುತ್ತದೆ; ಅಲ್ಲದೆ ದೊಡ್ಡ ದಂಗೆ ಉಂಟಾಗುತ್ತದೆ. ಆದುದರಿಂದ ಈ ವಿಚಾರದಲ್ಲಿ ಮುಖ್ಯ ಸಚಿವರು ಯೋಚನೆ ಮಾಡಿ ಒಂದು ಸಮಾಧಾನಕರವಾದ ಉತ್ತರವನ್ನು ಹೇಳಬೇಕೆಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

ಶ್ರೀ ಪೌಟಾಳ್ ನಾಗರಾಜ್ (ಚಿಕ್ಕಹೇಟೆ).—ಈ ಪ್ರಶ್ನೆಯ ಸಂಬಂಧವಾಗಿ ಒಂದು ಅಡ್ಜರ್ನ್‌ಮೆಂಟ್ ಮೋಷನ್ ಕೊಟ್ಟಿದ್ದೇನೆ. ಅದರ ವಿಚಾರ ಏನಾಯಿತು, ಸ್ವಾಮಿ ?

ಅಧ್ಯಕ್ಷರು.—ಸುಭಾಷ್ ನಗರ ಕೆರೆಯ ವಿಚಾರವಾಗಿ ನೀವು ಅಡ್ಜರ್ನ್‌ಮೆಂಟ್ ಮೋಷನ್ ಕೊಟ್ಟಿರುವುದು 12.5 ಗಂಟೆಗೆ ನೀವು 2 ಗಂಟೆ ಮುಂಚಿತವಾಗಿ ಕೊಡಬೇಕಾಗಿತ್ತು, ಕೊಟ್ಟಿಲ್ಲ. ಅದನ್ನು ವಿಚಾರ ಮಾಡಿ ನಾಳೆ ಅಡೆರ ಸಂಬಂಧದಲ್ಲಿ ಹೇಳುತ್ತೇನೆ.

ಶ್ರೀ ಎಸ್. ಶಿವಪ್ಪ.—ಇದಕ್ಕೆ ಸಮಾಧಾನಕರವಾದ ಉತ್ತರ ಕೊಡಬೇಕು.

ಅಧ್ಯಕ್ಷರು.—ಈಗ ಜನರರ್ ಡಿಬೇಟ್ ಇದೆ. ಅದರಲ್ಲಿ ಮಾತನಾಡುವುದಕ್ಕೆ ಅವಕಾಶ ಇದೆ. ಈಗ ಒಂದು ನೋಟೀಸ್ ಬರೆದುಕೊಟ್ಟರೆ 6 ಗಂಟೆಗೆ ತೆಗೆದುಕೊಳ್ಳುತ್ತೇನೆ.

ಶ್ರೀ ಎಸ್. ಶಿವಪ್ಪ.—ಇದು ಅತಿ ಜರೂರಾದ ವಿಷಯವಾದುದರಿಂದ ಈವಾಗಲೇ ಇದನ್ನು ತೆಗೆದುಕೊಳ್ಳಬೇಕು. ಇದು ಬೆಂಗಳೂರು ನಾಗರೀಕರ ಗಮನವನ್ನು ಸೆಳೆಯುವಂಥ ವಿಚಾರ. ಇದನ್ನು ಈಗಲೇ ತೀರ್ಮಾನ ಮಾಡಿ ಉತ್ತರ ಹೇಳಬೇಕು.

ಅಧ್ಯಕ್ಷರು.—ಬರೆದುಕೊಡುವುದಕ್ಕೆ ಟೈಂ ಕೊಡುತ್ತೇನೆ, ಬರೆದುಕೊಡಿ. ಶ್ರೀಮಾನ್ ಶಿವಪ್ಪನವರು ಲೀಡರ್ ಆಫ್ ದಿ ಅಪೋಸಿಷನ್ ಆಗಿರುವುದರಿಂದ ಈ ಪ್ರಶ್ನೆ ಬಗ್ಗೆ ಏನು ರೈಸ್ ಮಾಡಿದ್ದಾರೆ ತಾವು ಶಾಂತಿಯಿಂದ ಕೇಳಿ, ಗದಾಚೆ ಮಾಡಬೇಡಿ. ತಮ್ಮ ಪಾಯಿಂಟ್ ಮೇಲೆ ಏನಾದರೂ ಉತ್ತರ ಬೇಕಾಗಿದ್ದರೆ ಜನರರ್ ಡಿಬೇಟ್‌ನಲ್ಲಿ ಮಾತನಾಡಿ, ಈಗ ಕೂತುಕೊಳ್ಳಬೇಕು.

ಒಬ್ಬ ಮಾನ್ಯ ಸದಸ್ಯರು,—ಸ್ವಾಮಿ, ಅದೇ ಜಾಗಕ್ಕೆ 2 ಲಕ್ಷ ಕೊಡುವವರೂ ಇದ್ದಾರೆ.

ಶ್ರೀ ಟಿ. ಆರ್. ಶಾಮಣ್ಣ (ಬೆಂಗಳೂರು-ಕೋಟೆ).—ಸ್ವಾಮಿ, ಜನತಾಪಕ್ಷದವರು 50 ಸಾವಿರ ರೂಪಾಯಿ ಕೊಡುವುದಕ್ಕೆ ಸಿದ್ಧವಾಗಿದ್ದಾರೆ ಅವರಿಗೆ ಕೊಡುತ್ತೀರಾ ?

ಶ್ರೀ ವೀರೇಂದ್ರ ಪಾಟೀರ್ (ಮುಖ್ಯಮಂತ್ರಿಗಳು).—ಸನ್ಮಾನ್ಯ ಅಧ್ಯಕ್ಷರೇ, ಸುಭಾಷ್ ನಗರದ ಗ್ರೌಂಡ್‌ನಲ್ಲಿ ಕಾಂಗ್ರೆಸ್ ವಸ್ತುಪ್ರದರ್ಶನ ಅನೇಕ ವರ್ಷಗಳಿಂದ ನಡೆಯುತ್ತಿದೆ. ನಾನು ಈ ರಾಜ್ಯಕ್ಕೆ ಬಂದದ್ದು 1956ರಲ್ಲಿ. ನಾನು ಕೇಳಿದ್ದು ಅನೇಕ ವರ್ಷಗಳಿಂದ ಸುಭಾಸ್ ನಗರ ಗ್ರೌಂಡ್‌ನಲ್ಲಿ.....

ಶ್ರೀ ಟಿ. ಆರ್. ಶಾಮಣ್ಣ.—ಅನೇಕ ವರ್ಷಗಳಿಂದ ಅಲ್ಲ, 15 ವರ್ಷಗಳಿಂದ ಮಾತ್ರ ನಡೆಯುತ್ತಿದೆ,

ಅಧ್ಯಕ್ಷರು.—ಮಾನ್ಯ ಸದಸ್ಯರು ಮುಖ್ಯ ಮಂತ್ರಿಗಳು ಹೇಳುವುದನ್ನು ಕೇಳಬೇಕು.

ಶ್ರೀ ಕೆ. ಎಚ್. ರಂಗನಾಥ್.—ಅವರು ಈ ಊರಿನವರು.

ಶ್ರೀ ವೀರೇಂದ್ರ ಪಾಟೀರ್.—ನಾನು ಹೇಳಬೇಕು ಎನ್ನುವಂಥಾದ್ದನ್ನು ಮಾನ್ಯ ಸದಸ್ಯರಿಗೆ ಕೇಳಬೇಕು ಎನ್ನುವ ಇಚ್ಛೆ ಇದ್ದರೆ ದಯವಿಟ್ಟು ಮಧ್ಯದಲ್ಲಿ ಅವರು ಏನಾದರೂ ಮಾತನಾಡದೆ ನನಗೆ ಹೇಳುವುದಕ್ಕೆ ಅವಕಾಶ ಕೊಟ್ಟರೆ ಹೇಳುತ್ತೇನೆ.

ನಾನು ಈ ರಾಜ್ಯಕ್ಕೆ ಬಂದದ್ದು 1956ರಲ್ಲಿ. ಅದಕ್ಕೂ ಪೂರ್ವದಲ್ಲಿ ಅನೇಕ ವರ್ಷಗಳಿಂದ ಕಾಂಗ್ರೆಸ್ ವಸ್ತುಪ್ರದರ್ಶನ ಇಲ್ಲಿ ನಡೆಯುತ್ತಿತ್ತು ಎನ್ನುವಂಥದ್ದು ಅನೇಕ ಸದಸ್ಯರಿಗೆ ಗೊತ್ತೇ ಇದೆ. ಕಾಂಗ್ರೆಸ್ ವಸ್ತುಪ್ರದರ್ಶನವನ್ನು ನಡೆಸಿದವರು, ಕಾಂಗ್ರೆಸ್ ವಸ್ತುಪ್ರದರ್ಶನದಲ್ಲಿ ಪದಾಧಿಕಾರಿಗಳಾಗಿದ್ದವರು, ಕಾಂಗ್ರೆಸ್ ವಸ್ತುಪ್ರದರ್ಶನಕ್ಕೆ ಈಗ ಎಲ್ಲಿ ಪ್ರದರ್ಶನ ನಡೆಯುತ್ತಿದೆಯೋ ಆ ಜಾಗ ಬೇಕು ಎಂದು ಕೇಳಿದವರ ಪೈಕಿ ಕೆಲವರು ಈವೂತ್ತು ಆ ಕಡೆ ಕುಳಿತಿದ್ದಾರೆ.....

(ಕೆಲವು ಸದಸ್ಯರು ಒಮ್ಮೆಲೇ ಮಾತನಾಡಲು ಎದ್ದರು)

ಶ್ರೀ ಎಸ್. ಚನ್ನಯ್ಯ.—ಮಧ್ಯೆ ಮಾತನಾಡಲು ನಮಗೂ ಅವಕಾಶ ಕೊಡಬೇಕು.

ಅಧ್ಯಕ್ಷರು.—ಈಗ ಮಾನ್ಯ ಮುಖ್ಯಮಂತ್ರಿಗಳ ಹೇಳಿಕೆಯನ್ನು ಕೇಳಿ. ಅನಂತರ ಏನಾದರೂ ಹೇಳುವುದಿದ್ದರೆ ಅದಕ್ಕೆ ಅವಕಾಶ ಕೊಡುತ್ತೇನೆ.

ಶ್ರೀ ಎಸ್. ಚನ್ನಯ್ಯ.—ಅವರು ಹೇಳಿಕೆ ನೀಡುವಾಗ ಮಧ್ಯೆ ಏನಾದರೂ ಕೇಳುವುವಕ್ಕೆ ನಮಗೆ ಹಕ್ಕು ಇದೆ.

ಅಧ್ಯಕ್ಷರು.—ಮಾನ್ಯ ಸದಸ್ಯರಿಗೆ ಪ್ರಶ್ನೆ ಕೇಳುವುದಕ್ಕೆ ಅಧಿಕಾರವಿದೆ. ಆದರೆ ಅವರು ಹೇಳಿಕೆ ಕೊಟ್ಟ ನಂತರ ಏನಾದರೂ ಕೇಳುವುದಕ್ಕೆ ತಮಗೆ ಪರವಾನಗಿ ಕೊಡುತ್ತೇನೆ.

ಶ್ರೀ ಎಸ್. ಚನ್ನಯ್ಯ.—ಈ ಕಡೆ ಕುಳಿತವರು ಎಂದರೆ ಯಾರು ಎಂದು ಹೇಳಬೇಕು.

ಶ್ರೀ ವೀರೇಂದ್ರ ಪಾಟೀರ್.—ಏನು ಹೇಳಬೇಕು, ಏನು ಬಡಬೇಕು ಎನ್ನುವುದು ನನಗೆ ಬಿಟ್ಟ ವಿಚಾರ. ನಾನು ಹೇಳಿದೆ.....

ಶ್ರೀ ಎಸ್. ಚನ್ನಯ್ಯ.—ಅವರ ಹತ್ತಿರ ಪಾಠ ಕಲಯಬೇಕಾದ್ದಿಲ್ಲ. ಅವರಿಗೆ ಕಲಸಿ ಕೊಡುತ್ತೇವೆ.

Sri VEERENDRA PATIL.—I am making the statement because the Hon. Leader of the Opposition wanted me to make a statement. If the House is not anxious to listen to me, I do not want to make a statement.

Mr. SPEAKER.—I want to know whether the hon. Members want to listen to the Hon. Chief Minister's statement.

ಶ್ರೀ ವಾಟಾಳ್ ನಾಗರಾಜ್.—ಮೊದಲು ಅಗ್ರಿಮೆಂಟ್ ನಿಲ್ಲಸಲಿ ಅವರ ಸ್ಟೇಟ್‌ಮೆಂಟ್ ನಮಗೇತಕ್ಕೆ ?

ಅಧ್ಯಕ್ಷರು.—ಮುಖ್ಯ ಮಂತ್ರಿಗಳು ಶ್ರೀ ವಾಟಾಳ್ ನಾಗರಾಜ್‌ರವರಿಗೋಸ್ಕರ ಸ್ಟೇಟ್‌ಮೆಂಟ್ ಮಾಡುತ್ತಿಲ್ಲ, ಸಭೆಗಾಗಿ ಮಾಡುತ್ತಿದ್ದಾರೆ. ಸಭೆಯಲ್ಲಿರುವ ಸದಸ್ಯರು ಯಾರಿದ್ದಾರೆ ಅವರ ಹೈಕಿ ಶ್ರೀ ವಾಟಾಳ್ ನಾಗರಾಜ್ ರವರೂ ಒಬ್ಬರು. ವಿರೋಧ ಪಕ್ಷದ ನಾಯಕರು ಒಂದು ಸ್ಟೇಟ್‌ಮೆಂಟ್ ಮಾಡಬೇಕೆಂದು ಕೇಳಿದ್ದಾರೆ. ಅವರ ಬೇಡಿಕೆಯಂತೆ ಮಾಡಬೇಕಾಗಿದೆ.

ಶ್ರೀ ಎಸ್. ಚನ್ನಯ್ಯ.—ಅದು ನಮಗೂ ಗೊತ್ತಿದೆ. ಆದರೆ ಮಧ್ಯೆ ಬೇಕಾದರೆ ಮಾತ ನಾಡುವುದಕ್ಕೆ ನಮಗೆ ಅವಕಾಶ ಕೊಡಬೇಕು.

ಶ್ರೀ ವೀರೇಂದ್ರ ಪಾಟೀರ್.—ನನ್ನಾನ್ಯ ಅಧ್ಯಕ್ಷರೇ, ಅನೇಕ ವರ್ಷಗಳಿಂದ ಕಾಂಗ್ರೆಸ್ ವಸ್ತುಪ್ರದರ್ಶನವನ್ನು ಬೆಂಗಳೂರು ನಗರದಲ್ಲಿರುವ ಸುಭಾಷ್ ನಗರದಲ್ಲಿ ನಡೆಸುತ್ತಿದ್ದರು ಎಂದು ನಾನು ಹೇಳುತ್ತಿದ್ದೆ. ಅನೇಕ ವರ್ಷಗಳಿಂದ ಎಲ್ಲಿ ಕಾಂಗ್ರೆಸ್ ವಸ್ತುಪ್ರದರ್ಶನ ನಡೆಯುತ್ತಿದೆಯೋ ಅಲ್ಲಿ ಒಂದು ಪರ್ಮನೆಂಟ್ ಎಗ್ಜಿಬಿಷನ್ ಆಗಬೇಕು, ಅದಕ್ಕೆ ಪರ್ಮನೆಂಟ್ ಕಟ್ಟಡವಾಗಬೇಕು, ಅದಕ್ಕೆ ಸ್ಥಳ ಕೊಡಬೇಕು ಎಂದು ಕಾಂಗ್ರೆಸ್ ವಸ್ತುಪ್ರದರ್ಶನವನ್ನು ನಡೆಸುವವರು ಕೇಳುತ್ತಿದ್ದರು. ಆದರೆ ಹೀಗೆ ಕೇಳುತ್ತಿದ್ದರೂ ಕೂಡ ಈ ಬಗ್ಗೆ ನಿರ್ಣಯ ಮಾಡುವುದಕ್ಕೆ ಸಾಧ್ಯವಾಗಿರಲಿಲ್ಲ. ಇವತ್ತು ಸರಕಾರ ಸರಿಯಾಗಿ ವಿಚಾರಮಾಡಿ, ಬಹುಶಃ ಕಾಂಗ್ರೆಸ್ ವಸ್ತುಪ್ರದರ್ಶನ ನಡೆಸುವವರಿಗೆ ಕೊಡುವುದಕ್ಕೆ ಸಾಧ್ಯವಾಗಬಹುದು ಎಂದು ನಿರ್ಣಯ ಮಾಡಿಕೊಂಡಿದ್ದೇವೆ. ಆದರೆ ನಾವು ನಿರ್ಣಯ ಮಾಡಿದರೆ ಅದೇ ಕೊನೆಯಲ್ಲ. ನಿರ್ಣಯ ಮಾಡಿರುವುದನ್ನು ವಸ್ತುಪ್ರದರ್ಶನ ನಡೆಸುವ ಸಮಿತಿಯು ಒಪ್ಪುತ್ತದೆಯೇ, ಒಪ್ಪಿದರೆ ಯಾವ ಕಂಡಿಷನ್ನಿನ ಮೇಲೆ ಒಪ್ಪುತ್ತದೆ, ಎಂಬುದನ್ನು ತಿಳಿದು ಚರ್ಚೆ ಮಾಡಿ ಒಂದು ನಿರ್ಣಯ ಕ್ಕೆಕೊಳ್ಳಬೇಕು. ಇಂದು ಒಂದು ನಿರ್ಣಯ ಮಾಡಿದ್ದೇವೆ. ಆದರೆ ಅದರ ಬಗ್ಗೆ ಅಗ್ರಿಮೆಂಟ್ ಆಗಿಲ್ಲ. ಅಗ್ರಿಮೆಂಟ್ ಆಗಿ ಗವರ್ನಮೆಂಟ್ ಆರ್ಡರ್ ಇಷ್ಯೂ ಆದಮೇಲೆ ಫೈನಲ್ ಆಯಿತು ಎಂದು ಹೇಳಬಹುದು. ವಸ್ತು ಪ್ರದರ್ಶನ ನಡೆಸುವ ಸ್ಥಳ ಯಾವ ಕಂಡಿಷನ್ನಿನಮೇಲೆ ಕೊಡಬೇಕು, ಅದರಲ್ಲಿ ಸರಕಾರದ ಹಿತರಕ್ಷಣೆ ಯಾವ ರೀತಿ ಮಾಡಬೇಕು ಮತ್ತು ಸ್ಥಾಯಿಕವಾದ ಒಳ್ಳೆಯ ಎಗ್ಜಿಬಿಷನ್ ಬೆಂಗಳೂರು ನಗರದಲ್ಲಿ ಮಾಡಬೇಕು ಮತ್ತು ಸ್ಥಾಯಿಕವಾದ ಒಳ್ಳೆಯ ಎಗ್ಜಿಬಿಷನ್ ಬೆಂಗಳೂರು ನಗರದಲ್ಲಿ ಆಗುವುದಕ್ಕೆ ಏನು ಕ್ರಮ ತೆಗೆದು ಕೊಳ್ಳಬೇಕು ಎಂಬುದನ್ನು ಕೂಲಂಕಷವಾಗಿ ಪರಿಶೀಲಿಸಿ ಪರ್ಮನೆಂಟ್ ಎಗ್ಜಿಬಿಷನ್ ನಡೆಸಲು ಸಂಬಂಧಪಟ್ಟವರೊಡನೆ ಚರ್ಚೆಮಾಡಿ ಅಂತಿಮ ನಿರ್ಣಯ ಮಾಡಲಲ್ಲ. ಹಾಗೆ ಮಾಡದಿರುವುದರಿಂದ ಯಾವ ಆರ್ಡರನ್ನೂ ಮಾಡಿಲ್ಲ. ಇನ್ನೂ ಅಗ್ರಿಮೆಂಟ್ ಮಾಡಿಕೊಂಡಿಲ್ಲ ಎಂದು ವಿನಯದಿಂದ ತಿಳಿಸುತ್ತಿದ್ದೇನೆ.

ಶ್ರೀ ಎಸ್. ಶಿವಪ್ಪ.—ಅಲ್ಲಿ ಖಾಯಮಾಗಿ ಒಂದು ವಸ್ತು ಪ್ರದರ್ಶನ ನಡೆಸುವ ವಿಚಾರ ಕೂಡ ಸರಕಾರದ ಮುಂದಿದೆ. ಪರ್ಮನೆಂಟ್ ಕಟ್ಟಡ ಕಟ್ಟಿ ವಸ್ತುಪ್ರದರ್ಶನ ನಡೆಸುವಾಗ ಸರ ಕಾರವೇ ಏಕೆ ಅದನ್ನು ನಡೆಸಬಾರದು ! ಈ ವಿಚಾರ ಪರಿಶೀಲನೆಯಲ್ಲಿದೆಯೇ ! ಯಾವುದೇ ಒಂದು ಪಕ್ಷಕ್ಕೆ ಸರಕಾರದ ಆಸ್ತಿಯನ್ನು ಕೊಟ್ಟು ಅದು ಪ್ರದರ್ಶನ ನಡೆಸುವುದಕ್ಕೆ ಬದಲಾಗಿ ಹೀಗೆ ಒಂದು ರಾಜಕೀಯ ಪಕ್ಷಕ್ಕೆ ಕೊಡುವುದನ್ನು ಕೈಬಿಟ್ಟು ಸರಕಾರ ಅಥವ ಕಾರ್ಪೊರೇಷನ್ ಈ ಜಾಗವನ್ನು ತೆಗೆದುಕೊಂಡು ಖಾಯಮಾಗಿ ಏಕೆ ವಸ್ತುಪ್ರದರ್ಶನ ನಡೆಸುವ ವಿಚಾರ ಮಾಡಬಾರದು ? ಈಗ ಕಾಂಗ್ರೆಸ್ ಪಕ್ಷಕ್ಕೆ ಕೊಡಬೇಕೆಂದಿರುವ ಅವಕಾಶ ಕೈಬಿಡಲು ಪ್ರಯತ್ನ ಮಾಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಬಹುಶಃ ವಿರೋಧ ಪಕ್ಷದ ನಾಯಕರು ನಾನು ಹೇಳಿದ್ದನ್ನು ಸರಿಯಾಗಿ ತಿಳಿದುಕೊಂಡಿಲ್ಲವೆಂದು ಕಾಣುತ್ತದೆ. ಕಾಂಗ್ರೆಸ್ ವಸ್ತುಪ್ರದರ್ಶನಕ್ಕೆ ಸಂಬಂಧಪಟ್ಟವರು ಅನೇಕ ದಿವಸಗಳಿಂದ ಈ ಸ್ಥಳ ಕೊಟ್ಟರೆ ಸ್ಥಾಯಿಕ ಪರ್ಮನೆಂಟ್ ಎಗ್ಸಿಬಿಷನ್ ನಡೆಸುತ್ತೇವೆ ಎಂದು ಕೇಳುತ್ತಿದ್ದರು. ಅದಕ್ಕೆ ಅವಕಾಶ ಕೊಡಬೇಕೆಂದು ವಿಚಾರ ಮಾಡಿಕೊಂಡಿದ್ದೆವು. ಆದರೆ ಈ ವಿಷಯವನ್ನು ಚರ್ಚೆಮಾಡಿ ಕಂಡೀಷನ್ ಯಾವರೀತಿ ಹಾಕಬೇಕು, ಏನು ಕಂಡೀಷನ್ ಹಾಕಬೇಕು, ಪ್ಲಾನ್ ಯಾವರೀತಿ ಮಾಡಬೇಕು ಎಂದು ಸಂಬಂಧಪಟ್ಟವರೊಡನೆ ಚರ್ಚಿಸಿ ಅಂತಿಮ ತೀರ್ಮಾನ ಮಾಡಿರುವುದಿಲ್ಲ. ಈ ಬಗ್ಗೆ ಅಗ್ರಿಮೆಂಟ್ ಕೂಡ ಆಗಿಲ್ಲ. ಈ ಎಲ್ಲಾ ವಿಚಾರಗಳನ್ನೂ ತಪಶೀಲಾಗಿ ಇಂದು ಹೇಳುವುದು ಕಷ್ಟ. ಯಾವ ವಿಧವಾದ ಅಗ್ರಿಮೆಂಟ್ ಮಾಡಿಕೊಳ್ಳಬೇಕು, ಹೇಗೆ ಮಾಡಿಕೊಂಡರೆ ದೇಶದ ಹಿತ, ರಾಜ್ಯದ ಹಿತ ರಕ್ಷಣೆ ಮಾಡಬಹುದು, ಅಲ್ಲದೆ ಒಳ್ಳೆಯ ವಸ್ತು ಪ್ರದರ್ಶನ ಸ್ಥಾಯಿಕವಾಗಿ ನಡೆಸುವುದಕ್ಕೆ ಅನುಕೂಲವಾಗುತ್ತದೆ ಎಂಬುದನ್ನು ಯೋಚಿಸಿ ಅದಕ್ಕೆ ತಕ್ಕ ಕ್ರಮ ಮುಂದೆ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—ಸ್ವಾಮಿ, ಶಾಶ್ವತವಾದ ಒಂದು ವಸ್ತುಪ್ರದರ್ಶನವನ್ನು ರಾಜ್ಯಸರ್ಕಾರದ ವತಿಯಿಂದ ಏರ್ಪಾಡು ಮಾಡುವುದಾದರೆ, ಅದಕ್ಕೆ ಸರ್ಕಾರದವರು ಏನಾದರೂ ಪ್ರಯತ್ನ ಮಾಡಿದ್ದಾರೆಯೇ, ವಿಚಾರ ಮಾಡಿದ್ದಾರೆಯೇ ಅನ್ನುವುದು ಒಂದು. ಈ ಕಾಂಗ್ರೆಸ್ ಒಂದು ರಾಜಕೀಯ ಸಂಸ್ಥೆಗೆ ನೀವು ಅವಕಾಶ ಕೊಟ್ಟರೆ ಪಿ. ಎಸ್. ಪಿ. ಅವರು, ಸಂಯುಕ್ತ ಸೋಷಿಯಲಿಸ್ಟ್ ಪಾರ್ಟಿಯವರು, ಜನತಾ ಪಕ್ಷದವರು, ಜನಸಂಘದವರು, ರಿಪಬ್ಲಿಕನ್ ಪಾರ್ಟಿಯವರು, ಕಮ್ಯೂನಿಸ್ಟ್ ಪಾರ್ಟಿಯವರು, ಇನ್ನು ಉಳಿದಿರುವ ಪಾರ್ಟಿಯವರು ಅವರೆಲ್ಲರಿಗೂ ಸುಭಾಷ್‌ನಗರದಲ್ಲಿ ಶಾಶ್ವತವಾಗಿ ವಸ್ತು ಪ್ರದರ್ಶನ ಮಾಡುವುದಕ್ಕೆ ಅವಕಾಶ ಕೊಡುವಂತಹ ವಿಚಾರವನ್ನು ಮಾಡಿದ್ದೀರಾ? ಕಾಂಗ್ರೆಸ್ ವಸ್ತುಪ್ರದರ್ಶನದಿಂದ ಬಂದ ಪೂರ್ತಿ ಹಣ ಸರ್ಕಾರಕ್ಕೆ ಬರುವಂತೆ ಮಾಡುತ್ತೀರಾ ಅನ್ನುವುದು ಇನ್ನೊಂದು ಪ್ರಶ್ನೆ.

ಎರಡನೆಯದಾಗಿ ದಯಾದಂದ ನಾಗರ್‌ರವರು ಒಂದು ರಾಷ್ಟ್ರೀಯ ಪ್ರದರ್ಶನ ಮಾಡಿದ್ದಾರಲ್ಲಾ ಅದಕ್ಕೆ ತಾವು ಮೊದಲು ಅಂಗೀಕಾರ ಕೊಟ್ಟಿದ್ದು ಉಂಟೇ? ಮೈನೂರು ಸರ್ಕಾರದ ಸ್ಟಾಲ್‌ಗಳನ್ನು ಕೊಡುತ್ತೇವೆ ಎಂದು ಒಪ್ಪಿಗೆ ಕೊಟ್ಟು ಪತ್ರ ಬರೆದದ್ದು ಉಂಟೇ? ಅನಂತರದಲ್ಲಿ ಅವರಿಗೂ ನಿಮಗೂ ಭಿನ್ನಾಭಿಪ್ರಾಯ ಬಂದು ಆ ಕಾಗದಪತ್ರಗಳನ್ನೆಲ್ಲೂ ವಾಪಸು ತೆಗೆದುಕೊಂಡು ಅವರು ವಸ್ತು ಪ್ರದರ್ಶನ ನಡೆಸದಂತೆ ತಾವು ಪ್ರಯತ್ನ ಮಾಡಿದ್ದು ಉಂಟೇ? ಈ ಎರಡು ಪ್ರಶ್ನೆಗಳಿಗೆ ಉತ್ತರ ಕೊಡಬೇಕು.

ಶ್ರೀ ವೀರೇಂದ್ರ ಪಾಟೀಲ್.—ಕಾಂಗ್ರೆಸ್ ವಸ್ತುಪ್ರದರ್ಶನ ಯಾವ ಸ್ಥಳದಲ್ಲಿ ನಡೆಯುತ್ತಾ ಇವೆ ಅದೇ ಪ್ರಕಾರ ಪಿ.ಎಸ್.ಪಿ. ಯವರು, ಎಸ್.ಎಸ್.ಪಿ. ಯವರು, ಜನಸಂಘದವರು ಮತ್ತು ಇನ್ನೂ ಅನೇಕ ಪಾರ್ಟಿಗಳವರು ಕೇಳಿದರೆ ಅವರಿಗೂ ಅವಕಾಶ ಕೊಡುತ್ತೀರಾ ಹೇಗೆ ಅಂತ ಮಾನ್ಯ ಗೋಪಾಲಗೌಡರು ಕೇಳಿದರು. ಈಗ ಪ್ರಶ್ನೆ ಬಂದಿರುವಂತಹದು, ಕಾಂಗ್ರೆಸ್ ವಸ್ತು ಪ್ರದರ್ಶನ ಸಮಿತಿಯವರು ಆ ಸ್ಥಳ ನಮಗೆ ಸ್ಥಾಯಿಕವಾಗಿ ಪ್ರದರ್ಶನ ನಡೆಸುವುದಕ್ಕೆ ಕೊಡಬೇಕೆಂದು ಕೇಳಿದ್ದು ಇವತ್ತು ಕೇಳಿದ್ದಲ್ಲ, ಅನೇಕ ವರ್ಷಗಳಿಂದ ಅವರ ಬೇಡಿಕೆ ಸರ್ಕಾರದ ಮುಂದೆ ಇದೆ. ಈ ರೀತಿಯಿಂದ ಬಹುಶಃ ಎರಡನೇ ಯಾವ ರಾಜಕೀಯ ಪಾರ್ಟಿಯಿಂದಲೂ ಬಂದಿಲ್ಲ. ಮತ್ತು ಯಾವ ರಾಜಕೀಯ ಪಕ್ಷಗಳೂ ನನಗೆ ತೆನಪು ಇದ್ದಂತೆ ಅಲ್ಲಿ ವಸ್ತುಪ್ರದರ್ಶನ ಮಾಡಿ ಅದ್ದರಿಂದ ಪ್ರಶ್ನೆ ಉದ್ಭವಿಸುವುದಿಲ್ಲ. ಎರಡನೆಯದು ನ್ಯಾಷನಲ್ ಫೇರ್ ಪ್ರಶ್ನೆ. ಇದಕ್ಕೆ ಅನುಮತಿ ಕೊಟ್ಟಿದ್ದು, ಸ್ಟಾಲ್ ಹಾಕುವುದಕ್ಕೆ ಒಪ್ಪಿಗೆ ಕೊಟ್ಟು ಅನಂತರ ವಿತ್‌ಡ್ರಾ ಮಾಡಿದ್ದೀರಿ ಅನ್ನುವ ಮಾತನ್ನು ಹೇಳಿದ್ದಾರೆ. ಆ ಬಗ್ಗೆ ನವಿಸ್ತಾರವಾಗಿ ಹೇಳುವಂತಹ ಪರಿಸ್ಥಿತಿಯಲ್ಲಿ ಈಗ ನಾನು ಇಲ್ಲ. ಪ್ರತ್ಯೇಕ ಪ್ರಶ್ನೆ ಅಥವಾ ಮತ್ತಿನ್ನೇನಾದರೂ ಕೇಳಿದಾಗ ಉತ್ತರ ಕೊಡುವುದಕ್ಕೆ ನಿದ್ದವಾಗಿದ್ದೇನೆ.

ಶ್ರೀ ಎಸ್ ಚನ್ನಯ್ಯ.—ಪ್ರತ್ಯೇಕ ಪ್ರಶ್ನೆ ಎಂದರೆ ಅರ್ಥವೇನು, ಪುನ: ಬೇರೆ ಬರೆದು ಕಳುಹಿಸಬೇಕೇ?

ಶ್ರೀ ವೀರೇಂದ್ರ ಪಾಟೀಲ್.—ನ್ಯಾಷನಲ್ ಫೇರ್ ಅಂತ ಈಗ ನಡೆಯುತ್ತಾ ಇರುವ ಜಾಗ ನಮ್ಮದು ಅಂತ ನಾವು ಅನೇಕ ವರ್ಷಗಳಿಂದ ತಕರಾರು ಹಾಕಿದ್ದೇವೆ. ಮಿಲಿಟರಿಯವರು ತಮ್ಮದು ಅಂತ ಅವರು ತಕರಾರು ಹಾಕಿದ್ದಾರೆ. ನ್ಯಾಷನಲ್ ಫೇರ್ ನಡೆಸಬೇಕೆನ್ನುವುದಕ್ಕೆ ಮಿಲಿಟರಿಯವರ ಹತ್ತಿರ ಅವರು ಪರ್ಮಿಷನ್ ತೆಗೆದುಕೊಂಡು ಅಮೇಲೆ ನಮ್ಮ ಹತ್ತಿರ ಪತ್ರವ್ಯವಹಾರ ಮಾಡಿದ್ದಾರೆ, ಆದ್ದರಿಂದ ಈ ಮಾನ್ಯ ಸಭೆಗೆ ಹೇಳಬೇಕಾಗಿದ್ದರೆ ವಿಷಯಗಳನ್ನು ತಿಳಿದುಕೊಂಡು ಹೇಳಬೇಕಾಗುತ್ತದೆ, ನನ್ನ ತರಯಲ್ಲಿ ಎಷ್ಟು ಇದೆಯೋ ಅದನ್ನು ಹೇಳಿದರೆ ತಪ್ಪಾಗುತ್ತದೆ.

. ಶ್ರೀ ಎಸ್. ಚನ್ನಯ್ಯ.—ಅವರಿಗಿಂತ ಹೆಚ್ಚಾಗಿ ನನಗೆ ಗೊತ್ತಿದೆ ಆ ಜಾಗ ಯಾರು ಅಂತ. ಮುನಿಸಿಪಲ್ ಕಾರ್ಪೊರೇಷನ್ ಕಟ್ಟಡ ಕಟ್ಟಕೊಡದು ಅಂತ ಹೇಳಿದ್ದಾರೆ ಆ ವಿಚಾರ ಬೇರೆ. ಎರಡನೆಯ ಪ್ರಶ್ನೆ ಕೇಳಿದರೆ ಉತ್ತರ ಹೇಳುತ್ತೇನೆಂದರೆ ಏನರ್ಥ ?

ಶ್ರೀ ವೀರೇಂದ್ರ ಪಾಟೀಲ್.—ನಾನು ಎರಡ್ನಾ ರಿಕಾರ್ಡ್ಸ್ ನೋಡಿಕೊಂಡು ಉತ್ತರ ಹೇಳುತ್ತೇನೆ. ನಾನು ಬಹುಶಃ ಸರ್ವಜ್ಞನಾಗಿದ್ದರೆ ಕಳಕಳಿಯಿಂದ ತಕ್ಷಣ ಉತ್ತರ ಹೇಳಬಹುದಾಗಿತ್ತು. ನಾನು ಉತ್ತರ ಹೇಳಬೇಕಾದರೆ ಬಹಳ ಜವಾಬ್ದಾರಿಯುತವಾಗಿ ಹೇಳಬೇಕಾಗಿದೆ.

ಶ್ರೀ ಎಸ್. ಚನ್ನಯ್ಯ.—ಅಧ್ಯಕ್ಷರೇ, ಅವರಿಗೆ ಎಷ್ಟು ಜವಾಬ್ದಾರಿ ಇದೆಯೋ ನಮಗೂ ಅಷ್ಟೇ ಜವಾಬ್ದಾರಿ ಇದೆ.

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಶ್ರೀ ಗೋಪಾಲಗೌಡರು ಒಂದು ವಿಚಾರವನ್ನು ಕೇಳಿದರು. ಅದು ನ್ಯಾಷನರ್ ಫೈರ್‌ನ್ಲ್ಲಿ ಸ್ಕಾರ್ಫ್ಸ್ ಹಾಕುತ್ತೇವೆಂದು ಹೇಳಿ ಹಾಕಲಾರದೆ ಅವನ್ನು ವಿತ್‌ಡ್ರಾಮಾಡಿದ್ದೇವೆಂದು ಅದರ ಬಗ್ಗೆ ಏನು ಬರೆದುಕೊಟ್ಟಿದ್ದೇವೆಂಬುದನ್ನು ಗೊತ್ತಿಲ್ಲದೆ ಒಮ್ಮೆಯೇ ಹೇಗೆ ಇಲ್ಲ ಹೇಳಲಿ. ಅದನ್ನು ತಿಳಿದುಕೊಂಡು ಹೇಳುವುದಕ್ಕೆ ತಯಾರಿದ್ದೇನೆ. ಈಗ ಹೇಳುವುದಕ್ಕೆ ನಾನು ತಯಾರಿಲ್ಲ.

ಶ್ರೀ ಎಸ್. ಚನ್ನಯ್ಯ.—ಇವರು ಸ್ಕಾರ್ಫ್ಸ್ ಹಾಕುತ್ತೇವೆಂದು ಮೊದಲು ಪ್ರಾಮಿಸ್ ಮಾಡಿರಲಿಲ್ಲವೇ ? ಇವರು ಒತ್ತಾಯ ಬಂದದ್ದರಿಂದ ಅದನ್ನು ನಿಲ್ಲಿಸಿದ್ದಾರೆ. ಇವರು ಮೊದಲು ಒಪ್ಪಿಕೊಂಡು ಆಮೇಲೆ ಏಕೆ ಅದಕ್ಕೆ ವಿರೋಧವಾಗಿ ವರ್ತಿಸಿದರು ? ನಾನೇನು ಮಾನ್ಯ ಶ್ರೀ ದಯಾನಂದಸಾಗರ್ ಅವರಿಗೆ ಸಪೋರ್ಟ್‌ಮಾಡುತ್ತಿಲ್ಲ. ಈ ದೇಶದ ಮುಖ್ಯಮಂತ್ರಿಗಳು ವಚನ ಕೊಟ್ಟು ನಂತರ ಅದನ್ನು ಹಿಂದುರುಗಿ ತೆಗೆದುಕೊಂಡಿದ್ದಾರೆಂದು ಹೇಳಿದರೆ ಇವರು ಏನು ಮಾಡುವುದಕ್ಕೂ ತಯಾರಾಗಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).—ಮಾನ್ಯ ಮುಖ್ಯ ಮಂತ್ರಿಗಳು ಕಾಂಗ್ರೆಸಿನವರು ಮೊದಲೇ ಅರ್ಜಿ ಹಾಕಿಕೊಂಡರು, ಇನ್ನಾವ ರಾಜಕೀಯ ಪಕ್ಷಗಳು ಅರ್ಜಿ ಹಾಕಿಕೊಳ್ಳಲಿಲ್ಲ ಆದ್ದರಿಂದ ಕಾಂಗ್ರೆಸ್ಸಿನವರ ಅರ್ಜಿಯನ್ನು ಪರಿಶೀಲನೆಮಾಡಿದ್ದೇವೆಂದು ಹೇಳುತ್ತಾರೆ. ನಾನು ಯೋಚನೆಮಾಡುವುದು ಏನೆಂದರೆ, ಇದು ಕಾಂಗ್ರೆಸ್ ಮತ್ತು ಕಾಂಗ್ರೆಸ್ಸೇತರರ ಪ್ರಶ್ನೆಯಿಲ್ಲ, ಇದು ಈದೇಶದ ಹಾಗೂ ಜನಗಳ ಹಿತದ ಪ್ರಶ್ನೆ. ಆ ಒಂದು ದೃಷ್ಟಿಯಿಂದ ಈ ವನ್ನು ಪ್ರದರ್ಶ ಆಗಬೇಕು. ಸರ್ಕಾರಕ್ಕೂ ಹೆಚ್ಚಿಗೆ ಇದರಿಂದ ವರಮಾನ ಬರಬೇಕು. ಇದು ನನ್ನ ಅಭಿಪ್ರಾಯ. ಮೈಸೂರಿನಲ್ಲಿ ಎಗ್ಜಿಬಿಷನ್ ನಡೆಯುತ್ತಾ ಇರುತ್ತದೆ. ಅದರ ವರಮಾನದ ಮೇಲೆ ಯಾವ ರಾಜಕೀಯಪಕ್ಷಕ್ಕೂ ಹಕ್ಕಿಲ್ಲ. ಅದರ ಬಗ್ಗೆ ಏನೂ ಆಭ್ಯಂತರವಿಲ್ಲ. ತಕರಾರು ಇಲ್ಲ. ಆದ್ದರಿಂದ ಇಲ್ಲಿಯೂ ಸಹ ಎಲ್ಲರಿಗೂ ಅನುಕೂಲವಾಗುವಂತೆ ಈ ಸಾರ್ವಜನಿಕ ಸ್ಥಳವನ್ನು ಒಂದು ಪಕ್ಷಕ್ಕೇ ಕೊಡದೆ, ಎಲ್ಲ ಪಕ್ಷದವರಿಗೂ ಅನ್ವಯಿಸುವ ಹಾಗೆ ಸರ್ಕಾರದವರೇ ಒಂದು ಎಗ್ಜಿಬಿಷನ್ ಮಾಡುವುದಕ್ಕೆ ಆಗುವುದಿಲ್ಲವೇ ? ಆ ರೀತಿ ಮಾಡುವುದು ಉತ್ತಮ, ಒಳ್ಳೆಯದು. ವಿರೋಧ ಪಕ್ಷದವರು ಕಳಕಳಿಯಿಂದ ಒತ್ತಾಯಮಾಡುವುದರಿಂದ ಅದರ ಬಗ್ಗೆ ಧೈರ್ಯವಾಗಿ ಯೋಚನೆ ಮಾಡಿ ಸರ್ಕಾರದವರು ತೆಗೆದುಕೊಂಡಿರುವುದನ್ನು ಕೈಬಿಡಬೇಕೆಂದು ನನ್ನ ಪ್ರಾರ್ಥನೆ.

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರು ಇನ್ನೊಂದು ಪ್ರಶ್ನೆ ಕೇಳಿದ್ದಾರೆ. ನಾನು ಇಲ್ಲಿಯವರೆಗೂ ಏನಾಗಿದೆಯೆಂದು ಹೇಳಿದ್ದೇನೆ. ಅವರು ಹೇಳುವುದು ಇದನ್ನು ಪೂರ್ತಿಯಾಗಿ ಕೈಬಿಡಬೇಕೆಂದು. ಅವರು ಸರ್ಕಾರದ ವತಿಯಿಂದ ಒಂದು ಎಗ್ಜಿಬಿಷನ್ ಕಟ್ಟಿಸಬೇಕು ಎಂಬುದಾಗಿ ಹೇಳಿದ್ದಾರೆ. ಅದನ್ನು ಪರಿಶೀಲನೆಮಾಡಬಹುದು. ಆದರೆ ಅದರ ಬಗ್ಗೆ ಇವತ್ತು ಏನೂ ಹೇಳುವುದಕ್ಕಾಗುವುದಿ.

ಶ್ರೀ ಎಸ್. ಶಿವಪ್ಪ.—ಈಗ ಮಾನ್ಯ ಮುಖ್ಯಮಂತ್ರಿಗಳು ಈ ಜಾಗವನ್ನು ಕಾಂಗ್ರೆಸ್ಸಿನವರು ಕೇಳಿದ್ದಾರೆ, ಅದನ್ನು ಕೊಡಬೇಕೇ ಬಿಡಬೇಕೇ, ಅವರ ಬಗ್ಗೆ ಯಾವರೀತಿ ಅಗ್ರಿಮೆಂಟ್ ಆಗಬೇಕ ಅದಕ್ಕೆ ಏನು ಕಂಡೀಷನ್ಸ್ ಹಾಕಬೇಕು ಎನ್ನುವ ವಿಚಾರದಲ್ಲಿ ಇನ್ನೂ ಅಗ್ರಿಮೆಂಟ್ ಆಗಿಲ್ಲವೆಂದ ಹೇಳಿದ್ದಾರೆ. ಇದು ಇನ್ನೂ ಆ ಮಟ್ಟದಲ್ಲಿರಬೇಕಾದರೆ, ಕೊನೆಯ ತೀರ್ಮಾನ ತೆಗೆದುಕೊಳ್ಳುವು ದಕ್ಕೆ ಮುಂಚೆ ಎಲ್ಲಾ ವಿರೋಧಪಕ್ಷದ ಮುಖಂಡರನ್ನು ಕರೆಸಿ ಆ ಜಾಮೀನು ಬಗ್ಗೆ ಒಂದು ಆಖೈರು ತೀರ್ಮಾನ ಮಾಡಬೇಕು. ಇದನ್ನು ಸರ್ಕಾರದವರು ಮಾಡುವುದು ಅಥವಾ ಕಾರ್ಪೊರೇಷನ್ನಿಗೆ ಕೊಡುವುದು ಇದರ ಬಗ್ಗೆ ಎಲ್ಲರ ಹತ್ತಿರ ಸಮಾಲೋಚನೆ ಮಾಡಿ ಒಂದು ಅಂತ್ಯ ತೀರ್ಮಾನ ಮಾಡುತ್ತೇವೆಂದು ಹೇಳಿಕೆ ಕೊಟ್ಟರೆ ನಮಗೆ ಸಮಾಧಾನವಾಗುತ್ತದೆ.

ಶ್ರೀ ವೀರೇಂದ್ರ ಪಾಟೀಲ್.—ಆ ರೀತಿ ಇವತ್ತಿನ ದಿವಸ ಭರವಸೆ ಕೊಡುವುದಕ್ಕೆ ಸಾಧ್ಯವಿಲ್ಲ. ಯಾವುದಾವರೂ ನಿರ್ಣಯ ತೆಗೆದುಕೊಳ್ಳುವಾಗ ಅದು ರಾಜ್ಯದ ಹಿತದೃಷ್ಟಿಯಿಂದ ಮತ್ತು ಬೆಂಗಳೂರಿನಲ್ಲಿ ಒಳ್ಳೆಯ ಭೂಷಣಪ್ರಾಯವಾದ ವಸ್ತುಪ್ರದರ್ಶನ ಬರುವಂತಹ ದೃಷ್ಟಿಯಿಂದ ನಿರ್ಣಯ ತೆಗೆದುಕೊಳ್ಳುತ್ತೇವೆ. ಸರ್ಕಾರಿ ಮಟ್ಟದಲ್ಲಿ ಅನೇಕ ನಿರ್ಣಯಗಳನ್ನು ತೆಗೆದು ಕೊಳ್ಳುತ್ತೇವೆ. ಅನೇಕ ಡಿಸ್ಕ್ರಿಶಿನರಿ ನಿರ್ಣಯಗಳನ್ನು ತೆಗೆದುಕೊಳ್ಳುತ್ತೇವೆ. ಎಲ್ಲಿ ವಿರೋಧ ಪಕ್ಷದ ನಾಯಕರನ್ನು ಸಮಾಲೋಚನೆ ಮಾಡುವ ಅವಶ್ಯಕತೆ ಇದೆ ಎಂದು ಕಂಡುಬಂದಾಗ, ಅಲ್ಲಿ ಆ ರೀತಿ ಮಾಡುತ್ತೇವೆ. ಎಲ್ಲಿ ಅವಶ್ಯವಿಲ್ಲವೋ, ಅಲ್ಲಿ ಮಾಡುವಂತಹ ಪ್ರಸಂಗ ಬರುವುದಿಲ್ಲ. ಆದ್ದರಿಂದ ಸಮಾಲೋಚನೆ ಮಾಡಿ ನಿರ್ಣಯ ತೆಗೆದುಕೊಳ್ಳುತ್ತೇವೆ ಎನ್ನುವ ಭರವಸೆಯನ್ನು ನೀಡುವುದು ಕಷ್ಟ.

ಅಧ್ಯಕ್ಷರು.—ಈ ರೀತಿ ಸಭೆಯಲ್ಲಿಯೇ ಮಾತಾನಾಡುತ್ತಾ ಇದ್ದರೆ, ಈ ಮಾತು ಮುಗಿಯುವುದು ಕಷ್ಟ. ಆದ್ದರಿಂದ ವಿರೋಧಪಕ್ಷದ ನಾಯಕರೂ ಮತ್ತು ಸಭಾನಾಯಕರೂ ಒಟ್ಟಿಗೆ ಕೂತುಕೊಂಡು ಮಾತುಕತೆ ನಡೆಸಬಹುದು.

ಶ್ರೀ ಎಸ್. ಚನ್ನಯ್ಯ. ಅದನ್ನು ಅವರಿಗೆ ಹೇಳಿ, ಸ್ವಾಮಿ.

ಅಧ್ಯಕ್ಷರು.—ಅವರು ಹೇಳುವ ಉತ್ತರದಲ್ಲಿ ತಮಗೆ ಸಮಾಧಾನ ಇಲ್ಲವೆಂದು ಕಾಣುತ್ತದೆ. ಅದಕ್ಕೆ ಈಗ ಎರಡು ವಿಧಾನ ಇದೆ. ಒಂದು ಈ ಮನೆಯು ಓಟು ತೆಗೆದುಕೊಳ್ಳುವುದು. ಇನ್ನೊಂದು ಪ್ರತ್ಯೇಕವಾಗಿ ಪ್ರೈವೇಟ್ ಆಗಿ ಚರ್ಚೆ ಮಾಡುವುದು. ಅದಲ್ಲದೆ, ಇದರಲ್ಲಿ ಅಧ್ಯಕ್ಷರು ಏನು ಹೇಳುವುದಕ್ಕಾಗುತ್ತದೆ? ಇಲ್ಲಿ ಕೂತು ಅವರು ಒಂದು ಹೇಳುವುದು, ನೀವು ಒಂದು ಪ್ರಶ್ನೆ ಕೇಳುವುದು? ಇದು ಒಂದು ಡಿಂಗ್ ಡಾಂಗ್ ಫೈಟ್ ಆಗುತ್ತವೆ ಅಷ್ಟೆ. ಆದ್ದರಿಂದ ನಾನು ಈಗ ಮನೆಯನ್ನು ಅಜರ್ನ್ ಮಾಡಲೋ?

ಶ್ರೀ ಪಾಟಾಳ್ ನಾಗರಾಜ್.—ಅಡ್ಜರ್ನ್ ಆಗಲಿ.

ಅಧ್ಯಕ್ಷರು.—ಮಾನ್ಯ ಸದಸ್ಯರು ಪದೇ ಪದೇ ಎದ್ದು ನಿಲ್ಲುವುದು ಕೂತುಕೊಳ್ಳುವುದು ಸರಿಯಲ್ಲ.

ಶ್ರೀ ಪಾಟಾಳ್ ನಾಗರಾಜ್.—ಏನು ಸ್ವಾಮಿ, ಈ ರೀತಿ ಹೇಳುತ್ತೀರಿ! ನಮಗೆ ಮಾತನಾಡಲು ತಾವು ಅವಕಾಶ ಕೊಡುತ್ತಾ ಇಲ್ಲ. ತಾವು ಎದ್ದುನಿಲ್ಲುತ್ತೀರಿ, ಕೂತುಕೊಳ್ಳುತ್ತೀರಿ ಎಂದು ಹೇಳುತ್ತೀರಿ, ನಾವು ಏನು ಮಾಡೋಣ?

2-30 P.M.

ಶ್ರೀ ಎಸ್. ಚನ್ನಯ್ಯ.—ತಾವು ಹೇಳಿದ್ದನ್ನು ನಾವು ಒಪ್ಪಿಕೊಳ್ಳುತ್ತೇವೆ. ನಾವು ಕೇಳುವುದಕ್ಕೆ ಸರಿಯಾಗಿ ಉತ್ತರ ಕೊಡದಿದ್ದರೆ, ಏನು ಮಾಡೋಣ. ತಾವು ಹೇಳಿದಿರಿ, ನಾವು ಪ್ರಶ್ನೆ ಹಾಕಿದರೆ, ಅವರು ಉತ್ತರ ಕೊಡುತ್ತಾರೆಂದು. ನಾವು ಕೇಳಿದ್ದಕ್ಕೆ ಸರಿಯಾದ ಉತ್ತರ ಕೊಡುವುದಿಲ್ಲವಲ್ಲ! ಆದ್ದರಿಂದ ನಾನು ತಮ್ಮನ್ನು ವಿನಯದಿಂದ ಕೇಳಿಕೊಳ್ಳುತ್ತೇನೆ ತಾವು ಎಲ್ಲರಿಗೂ ಹೇಳಿ. ತಾವು ಶ್ರೀವಾನ್ ಶಿವಪ್ಪನವರಿಗೆ ಮಾತ್ರ ಹೇಳಬೇಡಿ.

Mr. SPEAKER.—I am requesting all the hon. Members to decide the matter in a constitutional way. As I said, there are two ways of doing it. It is apparent that there is difference of opinion and that difference can be resolved by a vote in this House or by private discussion. Let us stop this discussion and go over to the important subject of General Discussion on the Budget. We are hard pressed for time and several hon. Members want to take part in this discussion. Hon. Members can bring up this matter in the course of the debate.

ಶ್ರೀ ಎಸ್. ಶಿವಪ್ಪ.—ಸ್ವಾಮಿ, ಈ ವಿಷಯ ಏನೆದೆ ಇದು ಬರೀ ಬೆಂಗಳೂರು ನಗರಕ್ಕೆ ಮಾತ್ರ ಸಂಬಂಧಪಟ್ಟ ವಿಷಯವಲ್ಲ, ಇಡೀ ಮೈಸೂರು ದೇಶದ ಜನತೆಯ ಗಮನವನ್ನು ಸೆಳೆಯುವ ಮಹತ್ವಪೂರ್ಣವಾದ ವಿಚಾರ. ಸರ್ಕಾರ ಬಿಗಿ ಮುಷ್ಠಿಯಿಂದ ನಾವು ಕೊಟ್ಟಿದ್ದು ಕೊಟ್ಟಿದ್ದೇ ಎಂದರೆ ಸುಭಾಷ್ ನಗರವಲ್ಲಿ ಕಾಂಗ್ರೆಸ್ ಎಗ್ಜಿಬಿಷನ್‌ನಲ್ಲಿ ಬಾವುಟ ಹಾರಿಸಿ ಅವರು ವಸ್ತು ಪ್ರದರ್ಶನ ಮಾಡುವುದಕ್ಕೆ ಮೈಸೂರಿನ ಜನತೆ ಬಿಟ್ಟುಕೊಡುವುದಕ್ಕೆ ತಯಾರಾಗಿಲ್ಲ ಎಂದು ನಾನು

ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಪಕ್ಷದ ಹಿತಕ್ಕೋಸ್ಕರ ಇದನ್ನು ಕೊಡುವುದು ಪ್ರಜಾಪ್ರಭುತ್ವ ನೀತಿಗೆ ವಿರೋಧವಾಗಿದೆ. I am prepared for a talk even now. If the Hon. Chief Minister wants something else, we are prepared for that also. I do not want to make a threat like that but I wish to mention that the people are agitated over this issue. I am again appealing to the Government to give up the idea of giving this costly land to a political party.

Mr. SPEAKER.—I understand that the matter is not yet decided and is still under negotiation.

(*Several members stood up and began to speak simultaneously*)

Mr. SPEAKER.—In view of this confusion, I adjourn the House for half an hour. The House will meet again at 3 P.M.

The House adjourned at Thirty-five Minutes past Two of the Clock and reassembled at Forty-five Minutes past Three of the Ctock.

(Mr. SPEAKER in the Chair)

Sri K. PUTTASWAMY (Minister for Law, Labour and Parliamentary Affairs).—Sir, it is a matter for regret that the House had to be adjourned on a very, very small matter.

(*Interruptions*)

ಶ್ರೀ ವಾಟಾಳ್ ನಾಗರಾಜ್.—ಕೋಟ್ಯಾಂತರ ರೂಪಾಯಿ ಲೂಟಿ ಆಗತಕ್ಕ ವಿಷಯ ಇದು ಮಾನ್ಯ ಮಂತ್ರಿಗಳು ಹೇಳುವ ಹಾಗೆ ಸಣ್ಣ ವಿಷಯವಲ್ಲ.

ಅಧ್ಯಕ್ಷರು.—ಅವರು ಏನು ಹೇಳುತ್ತಾರೆಯೋ ಕೇಳೋಣ. ತಮಗೆ ದೊಡ್ಡದು ಅನ್ನಿಸಿದು ಅವರಿಗೆ ಸಣ್ಣದಿರಬಹುದು, ತಮಗೆ ಸಣ್ಣದು ಅನ್ನಿಸಿದ್ದು ಅವರಿಗೆ ದೊಡ್ಡದು ಅನ್ನಿಸಬಹುದು.

(ಅನೇಕ ಸದಸ್ಯರು ಒಟ್ಟಿಗೇ ಎದ್ದು ಮಾತನಾಡಲು ಪ್ರಯತ್ನ ಮಾಡಿದರು.)

ಶ್ರೀ ಎಚ್. ಎನ್. ನಂಜೇಗೌಡ.—ಗ್ರಾಂಡ್ ಫಾದರ್ಸ್ ಪ್ರಾಪರ್ಟಿ ಅಲ್ಲ.....

Sri K. PUTTASWAMY.—I do appreciate the feelings of the hon. Members. Sri Nanje Gowda was heard to say—if I am wrong I will apologise, that it is not my grandfather's property. It is no doubt true that it is not my grandfather's property, but that is the property belonging to the entire 2½ crores of people and I am one of them. I never meant that it was a small matter. It is a matter which has agitated a fairly sizable section of this House. What I was referring to was the last portion, namely, the Leader of the Opposition wanting an assurance from the Chief Minister that he should have prior discussion and consultation of the matter with the leaders of several Opposition parties before taking a decision. The Leader of the House, the Chief

(SRI K. PUTTASWAMY)

Minister, made it very clear that a final decision has not been taken. When the Leader of the Opposition wanted an assurance, what the Chief Minister said was that it would be rather difficult for the Government to give such an assurance as that would set up a wrong precedent Perhaps the Leader of the Opposition did not expect the Chief Minister to give an assurance of consultation on every matter. Perhaps what he was referring to was this particular matter.

We know this is fairly an important matter. Let not my hon. friends think that I am small enough to think that this is a very small matter. I know it is twelve acres of land and the adjacent land had been sold at Rs. 125 per sq. yard to a corporate body which is functioning under the Government. I do not feel that it is small matter. But now the point at issue is, whether the Chief Minister has to consult the leaders of the Opposition parties before taking a final decision in this matter. Sir, under a democratic set up, whenever any Member desire to discuss—whether he belongs to this Party or tha Party—it is the duty of those in charge of the administration to give an opportunity to discuss the matter and then take any decision they like. So far as this particular instance is concerned, I do not think the Chief Minister would refuse to consult the hon. Members, especially the Leader of the Opposition. Therefore, I feel that if the Leader of the Opposition has in his mind only this particular instance and discussion on this matter before the Government takes decision, I do not think there would be any difficulty for the Chief Minister to consider this very favourably. I would like the Leader of Opposition to make his position clear to enable the Chief Minister to make his position clear in respect of this matter.

ಶ್ರೀ ಎಸ್. ಚೆನ್ನಯ್ಯ—ಶ್ರೀ ಕೆ. ಪುಟ್ಟಸ್ವಾಮಿಯವರು ಹೇಳಿದುದು ಸರಿಯಾಗಿ ಅರ್ಥವಾಗಲಿಲ್ಲ. ಈ ರೀತಿಯಾಗಿ ಅವರು ಹೇಳುತ್ತಾರೆಂದು ನಾನು ತಿಳಿದಿರಲಿಲ್ಲ. ಯಾರಿಗೆ ಬೇಕಾದರೂ ಕೊಡಲಿ ಕೊಡುವುದಕ್ಕೆ ಎಲ್ಲರನ್ನೂ ಕನ್‌ಸಲ್ಟ್ ಮಾಡಲಿ. ಸರಕಾರದವರು ಎಲ್ಲ ಪಕ್ಷದವರನ್ನೂ ಕರೆಸಿ ಅವರೊಂದಿಗೆ ಮಾತನಾಡಿ ಎಲ್ಲರ ಒಪ್ಪಿಗೆಯನ್ನೂ ಪಡೆದು ಕೊಡಬೇಕು. ಶ್ರೀ ಪುಟ್ಟಸ್ವಾಮಿಯವರು ಹೇಳಿದ್ದನ್ನು ಒಪ್ಪುವುದಕ್ಕಾಗುವುದಿಲ್ಲ.

†ಶ್ರೀ ಎಸ್. ಶಿವಪ್ಪ.—ಮಾನ್ಯ ಪಾರ್ಲಿಮೆಂಟರಿ ಸಚಿವರು ನಮ್ಮ ನಿಲುವನ್ನು ಸ್ಪಷ್ಟಪಡಿಸಬೇಕೆಂದು ಹೇಳಿದ್ದಾರೆ. ಅದನ್ನು ಈಗ ಸ್ಪಷ್ಟಪಡಿಸುತ್ತೇನೆ. ಸುಭಾಷ್ ನಗರದಲ್ಲಿರುವ ಭೂಮಿಯನ್ನು ಕಾಂಗ್ರೆಸ್ ಪಕ್ಷದ ವಸ್ತುಪ್ರದರ್ಶನ ನಡೆಸುವುದಕ್ಕೆ ಸರಕಾರ ಅನೇಕ ವರ್ಷಗಳವರೆಗೆ ಲೀಸ್ ಮೂಲಕ ಅಥವ ಖರೀದಿಯ ಮೂಲಕ ಕೊಡಬೇಕೆಂಬ ಅರಿಕೆ ಸರಕಾರದ ಮುಂದಿದೆ. ಸರಕಾರ ಏಕಾಏಕಿ ತಮ್ಮ ಹತ್ತಿರ ಅರ್ಜಿ ಬಂದರೆ ಒಂದು ತೀರ್ಮಾನ ಮಾಡುವುದು, ಒಂದು ನಿರ್ಣಯಕ್ಕೆ ಬಂದು ತನ್ನ ಪಕ್ಷಕ್ಕೆ ಸಹಾಯ ಮಾಡುವುದು, ಈ ನಿಂಬಂಧವಾದ ನಿಲುವನ್ನು ಕೈಕೊಂಡಿರುವುದು ಅಪಾಯಕಾರಿ. ಇದುವರೆಗೆ ಈ ಭೂಮಿಯನ್ನು ಕೊಡುವ ವಿಚಾರವನ್ನು ಇತ್ಯರ್ಥ ಮಾಡಿಲ್ಲ ಎಂದು ಈಗಾಗಲೇ ಸಭಾ ನಾಯಕರು ತಿಳಿಸಿದ್ದಾರೆ. ಆದುದರಿಂದ ಪುನಃ ಹೇಳುವುದು ಆ ಭೂಮಿಯನ್ನು ಯಾರಿಗಾದರೂ ವಿಲೇ ಮಾಡುವುದಕ್ಕೆ ಮುಂಚೆ ಈ ಸಭೆಯ ವಿರೋಧ ಪಕ್ಷವನ್ನು ನಂಬಿಕೆಗೆ ತೆಗೆದುಕೊಂಡು, ಅದನ್ನು ಭೇಟಿ ಮಾಡಿ, ಆದರೊಂದಿಗೆ ಚರ್ಚೆ ಮಾಡಿ ತೀರ್ಮಾನಮಾಡಬೇಕು. ಇದಕ್ಕೆ ಮುಂಚೆ ಯಾವುದೇ ತೀರ್ಮಾನ ಮಾಡಬಾರದು ಎಂಬ ಭರವಸೆಯನ್ನು ಸಭಾ ನಾಯಕರು ಈ ಸಭೆಗೆ ಕೊಡಬೇಕು. ಇದನ್ನು ನಾನು ವಿರೋಧಪಕ್ಷದ ಪರವಾಗಿ ಒತ್ತಾಯ ಮಾಡುತ್ತೇನೆ.

†ಶ್ರೀ ಎಸ್. ಗೋಪಾಲಗೌಡ.—ಈಗ ನಡೆದ ಚರ್ಚೆಯಲ್ಲಿ ಅನೇಕ ವಿಷಯಗಳು ನಭೆಯ ಗಮನಕ್ಕೆ ಬಂದಿದೆ. ಈ ಭೂಮಿಯು ಹಾರ್ಟಿಕರ್‌ಚರ್ ಇಲಾಖೆಗೆ ಸೇರಿದೆ ಎಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದರು. ಮತ್ತೊಬ್ಬರನ್ನು ಕೇಳಿದಾಗ ಕಾರ್ಪೊರೇಷನ್‌ಗೆ ಆ ಜಮೀನು ಸೇರಿದೆ, ಅದಕ್ಕಾಗಿ ಹೈಕೋರ್ಟಿಗೆ ಹೋಗುತ್ತೇವೆ ಎಂದು ಹೇಳಿದರು. ಆದುದರಿಂದ ಈ ಭೂಮಿ ಯಾರಿಗೆ ಸೇರಿದೆ ಎಂಬುದು ಇನ್ನೂ ನಿರ್ಧಾರವಾಗಿಲ್ಲ.

ಎರಡನೆಯದಾಗಿ ಕಾಂಗ್ರೆಸ್ ವಸ್ತುಪ್ರದರ್ಶನ ಬಹಳ ವರ್ಷದಿಂದ ನಡೆಸಿಕೊಂಡು ಬರುತ್ತಿದೆ. ಅದನ್ನು ಸಹಿಸಿಕೊಂಡು ಬಂದಿದ್ದಾರೆ. ಆದರೆ ನೀವು 90 ವರ್ಷಕ್ಕೆ 100 ವರ್ಷಕ್ಕೆ ಹೀಗೆ ದಾನಕೊಡುವುದಾದರೆ ಇದು ಇತಿಹಾನದಲ್ಲಿ ದೊಡ್ಡ ತಪ್ಪಾಗುತ್ತದೆ. 90 ವರ್ಷ ಕಾಂಗ್ರೆಸ್ ಪಕ್ಷ ಅಧಿಕಾರದಲ್ಲಿರುತ್ತದೆಯೆಂಬ ನಂಬಿಕೆ ನನಗೇನೋ ಇಲ್ಲ. ಆದುದರಿಂದ ಈ ಅಗ್ರಿಮೆಂಟ್ ಆನರ್ ಮಾಡಬೇಕಾದರೆ ಮತ್ತೊಂದು ನರಕಾರ ಪುನಃ ಕೋರ್ಟಿಗೆ ಹೋಗಬೇಕಾಗಬಹುದು ಎಂಬುದು ಕೆಲವು ವಕೀಲರ ಅಭಿಪ್ರಾಯ. ನನ್ನ ಅಭಿಪ್ರಾಯದಲ್ಲಿ ಅಗ್ರಿಮೆಂಟ್ ಕ್ಯಾನ್ಸರ್ ಮಾಡ ಬಹುದು. ಅದು ಬೇರೆಯ ವಿಷಯ. ಇದು ಇಡೀ ರಾಜ್ಯದ ಜನರ ಮನವನ್ನು ನೆಳೆದಿರುವುದು. ಈಗ ಬಹಳ ದಿವನಗಳಿಂದ ಇವರ ಬಗ್ಗೆ ಚಳುವಳಿಯಾಗುತ್ತಿದೆ. ಅಲ್ಲದೆ ಈ ವಸ್ತುಪ್ರದರ್ಶನದಿಂದ ಬರುವ ಹಣ ಪೂರ್ತಿಯಾಗಿ ಕಾಂಗ್ರೆಸ್ಸಿಗೆ ಬರುತ್ತದೆಂಬ ನಂಬಿಕೆ ನನಗಾದರೂ ಇಲ್ಲ. ಅಲ್ಲಿ ಕೆಲವು ಹಿತಾನಕ್ತಿಗಳು ಹುಟ್ಟಿಕೊಂಡಿವೆ. ಆದುದರಿಂದ ಕಾಂಗ್ರೆಸ್ಸಿಗೆ ಪ್ರಯೋಜನವಾಗುವುದಿಲ್ಲ. ಇದಕ್ಕಾಗಿ ನಾನು ತಮ್ಮ ಮೂಲಕ ಮುಖ್ಯ ಮಂತ್ರಿಗಳಿಗೆ ಒಂದು ಸಲಹೆ ಮಾಡುತ್ತೇನೆ. ವಸ್ತು ಪ್ರದರ್ಶನ ಏರ್ಪಡಿಸಬೇಕೆಂಬ ಅಭಿಪ್ರಾಯ ನರ್ಕಾರಕ್ಕೆ ಇದ್ದರೆ ಅದನ್ನು ಒಂದು ಶಾಶ್ವತವಾದ ಒಳ್ಳೆಯ ಸ್ಥಳದಲ್ಲಿ ಮಾಡಬೇಕು. ಅಲ್ಲಿ ನರಕಾರದ ಎರ್ಲಾ ಇಲಾಖೆಗಳೂ ಕಡಿಮೆ ಬಾಡಿಗೆಯಲ್ಲಿ ಸ್ಥಳ ಪಡೆಯಲಿ. ಅಲ್ಲಿ ಮನರಂಜನೆಗೂ ಅವಕಾಶ ಮಾಡಲಿ. ಜನರು ಹಣ ಕೊಡುವರು. ನರಕಕ್ಕೆ ಈಗ ರಾಟರಿ ನಡೆಸಬೇಕೆಂಬ ಅಭಿಪ್ರಾಯವಿದೆ. ಈ ಯೋಚನೆಗಿಂತ ಶಾಶ್ವತವಾದ ಒಳ್ಳೆಯ ಸ್ಥಳದಲ್ಲಿ ಉತ್ತಮವಾದ ರೀತಿಯಲ್ಲಿ ವಸ್ತು ಪ್ರದರ್ಶನ ನಡೆಸಲಿ. ಅದರಮೇಲೆ ಒಳ್ಳೆಯ ರೀತಿಯಲ್ಲಿ ಹತೋಟಿಯನ್ನಿಟ್ಟುಕೊಂಡರೆ ಪ್ರತಿ ದಿವನ 2–3 ನಾವಿರ ರೂಪಾಯಿಗಳ ಆದಾಯ ನರಕಾರಕ್ಕೆ ಬರುತ್ತದೆ. ನರಕಾರಕ್ಕೂ ಒಳ್ಳೆಯ ಹೆನರು ಬರುತ್ತದೆ. ಈ ರೀತಿಯ ಗೊಂದಲವೂ ತಪ್ಪುವುದು. ಆದುದರಿಂದ ಮಾನ್ಯ ಶಿವಪ್ಪನವರು ಹೇಳಿರುವ ರೀತಿಯಲ್ಲಿ ವಿಚಾರಮಾಡಿ ಜೊತೆಗೆ ನಾನು ಕೊಟ್ಟಿರುವ ನಲಹೆಯನ್ನು ನಹ ಗಮನಿನಿ, ಶ್ರೀ ಎಂ. ಎನ್. ಕೃಷ್ಣನ್ ಹೇಳಿರುವುದನ್ನೂ ಮನನ್ಸಿನಲ್ಲಟ್ಟುಕೊಂಡು ಒಂದು ತೀರ್ಮಾನಕ್ಕೆ ಬರಬೇಕು ಎಂದು ಕೇಳಿಕೊಳ್ಳುತ್ತೇನೆ.

†ಶ್ರೀ ಟಿ. ಆರ್. ಶಾಮಣ್ಣ.—ಎರಡು ವಿಚಾರ. ನುಭಾಷ್ ನಗರದ ಜಮೀನಿನಲ್ಲಿ ಅರ್ಧಭಾಗ ರೋಡ್ ಟ್ರಾನ್ಸ್‌ಪೋರ್ಟ್ ಕಾರ್ಪೊರೇಷನ್ನಿಗೆ ಕೊಟ್ಟಾಗ, 1 ಕೋಟಿ 45 ಲಕ್ಷಕ್ಕೆ ಕೊಟ್ಟಾಗ ಕಾರ್ಪೊರೇಷನ್ ಅವು ನಮ್ಮ ಜಾಗ, ಅದನ್ನು ಇತರರು ಕೊಡುವುದಕ್ಕೆ ಅವಕಾಶ ಅಲ್ಲಿ ಕೆಲವು ನಿರ್ಣಯ ಮಾಡಿದ್ದಾರೆ. ಕಳೆದ 5 ವರ್ಷಗಳಿಂದ ನತತವಾಗಿ ಇದು ಕಾರ್ಪೊರೇಷನ್ ಜಾಗ, ನರಕಾರ ಅದನ್ನು ಬೇರೆಯವರಿಗೆ ಕೊಡುವುದಕ್ಕೆ ಅವಕಾಶವಿಲ್ಲ, ಇದಕ್ಕೆ 50 ವರ್ಷಗಳ ರಿಕಾರ್ಡಿದೆ, ಕಾರ್ಪೊರೇಷನ್ ಪ್ರಾಪರ್ಟಿ ಲಿಸ್ಟ್‌ನಲ್ಲಿ, ರಿಜಿಸ್ಟರಿನಲ್ಲಿ ಸ್ಪಷ್ಟವಾಗಿ ಇದಕ್ಕೆ ದಾಖಲೆ ಇದೆ. ಮತ್ತು ಇದು ಬೆಂಗಳೂರು ನಗರಕ್ಕೆ ನೀರು ಒದಗಿನುವ ಜಾಗ. ಆದುದರಿಂದ ಇದು ಕಾರ್ಪೊರೇಷನ್ನಿಗೇ ಸೇರಬೇಕು ಎಂದು ನಿರ್ಣಯಮಾಡಿದೆ, ಹೀಗೆ ನಿರ್ಣಯವನ್ನು ಕಾರ್ಪೊರೇಷನ್ ಮಾಡಿ ಅದಕ್ಕೆ ದಾಖಲೆ ಕೊಟ್ಟಿದೆ. ಆದುದರಿಂದ ಇಡೀ ಮಾಲೀಕತ್ವದ ಬಗ್ಗೆ ಪ್ರಶ್ನೆ ಇರುವಾಗ ಒಂದು ತೀರ್ಮಾನ ಮಾಡುವುದು ನರಿಯಲ್ಲ. ಇದನ್ನು ಒಂದು ಪಕ್ಷದವರಿಗೆ ಕೊಡುವುದು ನರಿಯಲ್ಲ. ಇದರ ಬಗ್ಗೆ ಚರ್ಚೆ ಮಾಡಲು ಮುಖ್ಯ ಮಂತ್ರಿಗಳು ನಾಕಾದಷ್ಟು ಅವಕಾಶ ಕೊಡಬೇಕು ಎಂದು ಕೇಳಿ ಕೊಳ್ಳುತ್ತೇನೆ.

4-00 P. M.

†ಶ್ರೀ ಎಂ. ಎನ್. ಕೃಷ್ಣನ್.—ಶ್ರೀಮಾನ್ ಶಾಮಣ್ಣನವರು ಒಂದು ಮಾತು ಹೇಳಿದರು, ಇನ್ನೊಂದು ವಿಷಯವನ್ನು ತಮ್ಮ ಮೂಲಕ ಮಂತ್ರಿಗಳ ಗಮನಕ್ಕೆ ತರುತ್ತೇನೆ. ನುಭಾಷ್ ನಗರದ ಮೈದಾನದ ಒಂದು ಭಾಗವನ್ನು ರೋಡ್ ಟ್ರಾನ್ಸ್‌ಪೋರ್ಟ್ ಕಾರ್ಪೊರೇಷನ್‌ಗೆ ಒಂದು ಕೋಟಿ ಚಿಲ್ಲರೆ ಲಕ್ಷ ರೂಪಾಯಿಗಳಿಗೆ ಕೊಡಲಾಗಿದೆ ಎಂದು ತಿಳಿದು ಬಂದಿದೆ. ಈಗ ಕಾಂಗ್ರೆಸ್ ಎಕ್ಸಿಬಿಷನ್‌ಗೆ ಕೊಡಬೇಕೆಂದಿರುವ ಜಾಗದಲ್ಲೂ ನಹ ಒಂದು ಭಾಗ ರೋಡ್ ಟ್ರಾನ್ಸ್‌ಪೋರ್ಟ್ ಕಾರ್ಪೊರೇಷನ್‌ಗೆ ಸೇರಿದೆಯೆಂದು ತಿಳಿದು ಬಂದಿದೆ. ಹಾಗೆ ಕೊಡುವಾಗ ಎಷ್ಟು ಹಣ ಕೊಡುವುದು ಅಂತ ಜಿಜ್ಞಾನೆ ಬಂದಿದೆ. ಈ ತಕರಾರು ಇರಬೇಕಾದರೆ, ವ್ಯಾಪಾರಿ

(ಶ್ರೀ ಎಂ. ಎಸ್. ಕೃಷ್ಣನ್)

ರೈಟ್ಸ್ ಯಾರದು ಅನ್ನುವುದು ಗೊತ್ತಿಲ್ಲದೆ ಇರುವಾಗ ಈ ತರಹ ಆ ಜಾಗವನ್ನು ಒಂದು ಪಕ್ಷಕ್ಕೆ ಕೊಡುವುದು ಸರಿಯಾದ್ದಲ್ಲ ಎಂದು ಮಾತ್ರ ಪುನಃ ಏನಂತಿ ಮಾಡಿಕೊಳ್ಳಬೇಕಾಗಿದೆ. ಆಗರೇ ಇದನ್ನು ಮಾನ್ಯ ಮಂತ್ರಿಗಳು ಪರಿಶೀಲನೆ ಮಾಡಬೇಕಾದ ಒಂದು ಸಲಹೆ ಎಂದು ಹೇಳಿದರು. ಸಾರ್ವಜನಿಕರಿಗೆ ಸಂಬಂಧಪಟ್ಟ ಹಾಗೆ ಸರ್ಕಾರದವರೇ ಒಂದು ಎಕ್ಸಿಬಿಷನ್ ಶ್ರೀಮಾನ್ ಗೋಪಾಲ ಗೌಡರು ಹೇಳಿದ ಹಾಗೆ ಮಾಡಿದರೆ ಒಳ್ಳೆಯದು. ಹಾಗೆ ಮಾಡಿದರೆ ಸರ್ಕಾರದ ಬೊಕ್ಕಸಕ್ಕೂ ಹಣ ತುಂಬುತ್ತದೆ. ಈ ಒಂದು ಸಲಹೆಯನ್ನು ಗಮನದಲ್ಲಿಟ್ಟುಕೊಂಡು ಇದನ್ನು ಪರಿಗೆ ತರಬೇಕೆಂದು ಅವರಲ್ಲಿ ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಪಾಟೀಳ್ ನಾಗರಾಜ್.—ವಿರೋಧ ಪಕ್ಷದ ನಾಯಕರಾದ ಶ್ರೀಮಾನ್ ಶಿವಪ್ಪನವರು ಹೇಳಿದುದನ್ನು ನಾನು ಸ್ವಾಗತಿಸುತ್ತೇನೆ. ವಿರೋಧ ಮಾಡುವುದಿಲ್ಲ. ಸುಭಾಷ್ ನಗರದಲ್ಲಿ ಈಗಾಗಲೇ ಮುಕ್ಕಾಲು ಭಾಗ ಸ್ಟಾರ್‌ಗಳು ಏಳುತ್ತಾ ಇವೆ, ಮುಗಿದಿದೆ. ಸರ್ಕಾರದವರು ಆಲ್ಲಿ ಸ್ಟಾರ್ ತೆರೆಯಬೇಕೆಂದು ತೀರ್ಮಾನವಾಗಿದೆ. ಆದ್ದರಿಂದ ಒಂದು ಪಕ್ಷದ ಹೆಸರಿನಲ್ಲಿ ವಸ್ತು ಪ್ರದರ್ಶನ ನಡೆಸಬಾರದು ಎಂದು ಹೇಳಿ ತಿಳಿಸುತ್ತೇನೆ.

† ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಅಧ್ಯಕ್ಷರೇ, ಈ ವಿಷಯದ ಬಗ್ಗೆ ನಾನು ಈಗಾಗಲೇ ನನ್ನ ಅಭಿಪ್ರಾಯವನ್ನು ಈ ಸಭೆಗೆ ವ್ಯಕ್ತಪಡಿಸಿದ್ದೇನೆ. ಸರ್ಕಾರ ಇನ್ನೂ ಅಂತಿಮವಾಗಿ ಇದರ ಬಗ್ಗೆ ಆರ್ಡರ್ ಹೊರಡಿಸಿಲ್ಲ, ಏಕೆಂದರೆ ಯಾವ ಷರತ್ತಿನಮೇರೆ ಕೊಡಬೇಕೆನ್ನುವುದರ ಬಗ್ಗೆ ನಾವು ಇನ್ನೂ ಅಂತಿಮ ನಿರ್ಧಾರಕ್ಕೆ ಬಂದಿಲ್ಲ. ಅದಕ್ಕೆ ಪೂರ್ವದಲ್ಲೇ ಹೇಳಿದೆ ಅಂತಿಮ ತೀರ್ಮಾನ ತೆಗೆದುಕೊಳ್ಳುವ ಮುಂದೆ ಎಲ್ಲಾ ವಿಚಾರಗಳನ್ನೂ ಗಮನದಲ್ಲಿ ಇಟ್ಟುಕೊಂಡು ಅಲ್ಲಿ ಒಂದು ಸ್ಥಾಯಿಕವಾಗಿ ಎಕ್ಸಿಬಿಷನ್ ಆಗಬೇಕು ಮತ್ತು ಸರ್ಕಾರದ ಹಿತರಕ್ಷಣೆ ಆಗಬೇಕು ಎನ್ನುವ ದೃಷ್ಟಿಯಿಂದ ಮಾಡಬೇಕೆಂದಿದ್ದೇವೆ ಎಂದು. ವಿರೋಧ ಪಕ್ಷದ ನಾಯಕರು ಮತ್ತು ಕೆಲವು ಮಾನ್ಯ ಸದಸ್ಯರು ನೀವು ಈ ಸಭೆಗೆ ಒಂದು ಆಶ್ವಾಸನೆಯನ್ನು ಕೊಡಬೇಕು, ಏನಾದರೂ ಒಂದು ಅಂತಿಮ ನಿರ್ಣಯ ತೆಗೆದುಕೊಳ್ಳುವ ಪೂರ್ವದಲ್ಲಿ ನಮ್ಮ ಜೊತೆಯಲ್ಲಿ ಸಮಾಲೋಚನೆ ಮಾಡಬೇಕು ಎನ್ನುವ ಮಾತನ್ನು ಹೇಳಿದ್ದಾರೆ. ಅದಕ್ಕೆ ನಾನು ಮೊದಲೇ ಹೇಳಿದೆ ಆ ರೀತಿಯಿಂದ ಸರ್ಕಾರ ದಿನಂಪ್ರತಿ ಕೆಲಸಕಾರ್ಯಗಳನ್ನು ಮಾಡುವ ಮುಂದೆ ಅನೇಕ ನಿರ್ಣಯಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಅನೇಕ ನಿರ್ಣಯಗಳನ್ನು ತೆಗೆದುಕೊಳ್ಳುವ ಮುನ್ನ ವಿರೋಧಪಕ್ಷದ ನಾಯಕರ ಜೊತೆಗೆ ಸಮಾಲೋಚನೆ ಮಾಡಿ ನಿರ್ಣಯ ತೆಗೆದುಕೊಳ್ಳಬೇಕೆಂದರೆ ಸರ್ಕಾರ ನಡೆಸುವುದಕ್ಕೆ ಕಷ್ಟವಾಗುತ್ತದೆ, ಅದನ್ನು ಯಾರೂ ಒಪ್ಪುವುದಿಲ್ಲ. ಆದಕ್ಕೇ ನನ್ನ ಮನಸ್ಸಿನಲ್ಲಿರುವ ಭಯ ಎಂದರೆ ಇದನ್ನೇ ಒಂದು ಪ್ರಿಸೀಡೆಂಟ್ ಅಂತ ಮುಂದೆ ಕ್ವೋಟ್ ಮಾಡಬಾರದು. ಆ ದೃಷ್ಟಿಯಿಂದ ಹೇಳಿದೆ ಈ ತರಹದ ಭರವಸೆಯನ್ನು ನೀಡುವುದಕ್ಕೆ ಸಾಧ್ಯವಾಗುವುದಿಲ್ಲ ಎಂದು. ಇದರ ಬಗ್ಗೆ ಬಹಳ ಕಳವಳಕ್ಕೆ ಕಾರಣವಾಗಿದೆ ಎಂದು ವಿರೋಧ ಪಕ್ಷದ ನಾಯಕರು ಹೇಳಿದರು, ಮತ್ತು ಅದಕ್ಕಾಗಿಯೇ ಸಮಾಲೋಚನೆ ಮಾಡಬೇಕೆನ್ನುವ ಮಾತನ್ನೂ ಹೇಳಿದರು. ಈ ಸಂದರ್ಭದಲ್ಲಿ ಸ್ಪಷ್ಟವಾಗಿ ಹೇಳಬೇಕಾಗಿದ್ದರೆ ಮುಂದೆ ಯಾವ ರೀತಿಯಿಂದಲೂ ಇದನ್ನು ಪ್ರಿಸಿಡೆಂಟ್ ಅಂತ ಕೋಟ್ ಮಾಡದಂತೆ ಇದರ ಬಗ್ಗೆ ಅವರ ಅಭಿಪ್ರಾಯ ಏನಿದೆ ಅದನ್ನು ತಿಳಿದುಕೊಂಡು ಮುಂದೆ ಕಾರ್ಯಕ್ರಮ ತೆಗೆದುಕೊಳ್ಳುತ್ತೇನೆ ಎಂದು ಇಷ್ಟು ಮಾತ್ರ ಹೇಳುತ್ತೇನೆ.

Leave of Absence to Sri G. N. Desai—Grant of

Mr. SPEAKER.—I have received a letter dated 24th February, 1969 from Sri G. N. Desai, Member, Legislative Assembly requesting under Rule 185 for leave of absence from attending the current sittings of Assembly till March 15th, 1969 due to ill-health.

Is it the pleasure of the Assembly that permission be granted to Sri G. N. Desai from being absent from attending the curernt Sittings of the Assembly till March 15, 1969?

HON. MEMBERS.—Yes.

Mr. SPEAKER.—Permission to remain absent is granted.

I now call upon Hon. Member Sri T. R. Shamanna to continue his speech.

Point of Order *re* : discrimination between members by the Chair

ಶ್ರೀ ಕೆ. ಪುಟ್ಟಸ್ವಾಮಿ.—ಸ್ವಾಮಿ ಕ್ಷಮಿಸಬೇಕು. ಪ್ರಶ್ನೋತ್ತರದ ವೇಳೆಯಲ್ಲಿ ನಾನು ಒಂದು ಕ್ರಿಯಾಲೋಪ ಎತ್ತಿದ್ದೆ. ಆಗ ಮಾನ್ಯಸದನ್ಯರು ಪ್ರಶ್ನೋತ್ತರ ವೇಳೆಯಲ್ಲ ಕ್ರಿಯಾಲೋಪ ಎತ್ತುವುದ ಕ್ಕಾಗುವುದಿಲ್ಲ ಎಂದು ಆಕ್ಷೇಪಣೆ ತೆಗೆದರು, ಆದ್ದರಿಂದ ನಾನು ಅಲ್ಲಗೇ ನಿಲ್ಲಿಸಿದೆ. ಈಗ ಆ ಕ್ರಿಯಾಲೋಪವನ್ನು ಎತ್ತುವುದಕ್ಕೆ ಅವಕಾಶ ಮಾಡಿಕೊಡಬೇಕು. ಮಾನ್ಯ ಸದನ್ಯರಾದ ಶ್ರೀಮಾನ್ ಗಂಗಾಧರ್‌ರವರು ತಮ್ಮನ್ನು ಉದ್ದೇಶಿಸಿ ಕೆಲವು ಮಾತುಗಳನ್ನು ಆಡಿದರು. "I am being discriminated by the Chair" ಎಂದು ಹೇಳಿದರು. ನೀವು ಅನೇಕ ಸಾರಿ ಪದೇ ಪದೇ ಆ ವಿಚಾರದಲ್ಲ ಅವರು ಹೇಳಿದ್ದು ಸರಿಯಲ್ಲ ಎಂದು ಹೇಳಿದರೂ ಕೂಡ ಅದೇ ವಿಚಾರವನ್ನು ಅವರು ಪದೇ ಪದೇ ಪ್ರಸ್ತಾಪ ಮಾಡಿದರು. ತಾವು ಒಂದು ರೂಲಿಂಗ್ ಕೂಡ ಕೊಟ್ಟರಿ—ಆ ಪದಗಳನ್ನು — ಆ ವಾಕ್ಯವನ್ನು ಹಿಂದೆಗೆದುಕೊಳ್ಳಬೇಕು ಎಂದು ಹೇಳಿದಿರಿ, ಅದನ್ನು ಅವರು ಆಗ ಮಾನ್ಯ ಮಾಡಲಲ್ಲ, ಮಾನ್ಯ ಮಾಡಿದ್ದರೆ ಚೆನ್ನಾಗಿತ್ತು. ನಾನಾದರೂ ಈಗ ಎತುತ್ತಾ ಇರತಕ್ಕ ಕ್ರಿಯಾಲೋಪ ಅವರು ಹೇಳಿದಂತಹ ವಾಕ್ಯ ಏನಿದೆ ಅದು ಸರಿಯಾದ್ದಲ್ಲ ಅದು ಅಧ್ಯಕ್ಷರ ಮೇರೆ ಆರೊಪಣೆ ಬರುವಂತಹ ಮಾತು, ಆ ಮಾತನ್ನು ಅವರು ವಾಪಸು ಪಡೆದುಕೊಳ್ಳಬೇಕು. ಆ ಮಾತನ್ನು ಅವರು ಉಪಯೋಗಿಸಿದ್ದಕ್ಕಾಗಿ ಈ ಸಭೆಗೆ ಕ್ಷಮಾಪಣೆಯನ್ನು ಕೇಳಬೇಕು.

Mr. SPEAKER.—Let the hon. Member Sri B. P. Gangadhar state clearly.

Sri B. P. GANGADHAR.—Sir, I did not follow what the Minister said.

ಅಧ್ಯಕ್ಷರು.—"ನೀವು ಡಿಸ್ಕ್ರಿಮಿನೇಷನ್ ಮಾಡುತ್ತಾ ಇದ್ದೀರಿ" ಎಂದು ಹೇಳಿದಿರಿ, ಸ್ಪೀಕರ್ ಎಂದೆಂದೂ ಡಿಸ್ಕ್ರಿಮಿನೇಟ್ ಮಾಡಿಲ್ಲ. ಒಂದೇ ವ್ಯಾಳ್ಯಕ್ಕೆ 3-4 ಜನರು ಎದ್ದು ಮಾತನಾಡುವುದಕ್ಕೆ ಪ್ರಾರಂಭ ಮಾಡಿದಾಗ ಹಾಗೆ ಹೇಳಬೇಕಾಗಿ ಬರುತ್ತದೆ. ಅದು ಡಿಸ್ಕ್ರಿಮಿನೇಷನ್ ಮಾಡಿದಂತೆ ಅಲ್ಲ, ಮಾನ್ಯಸದಸ್ಯರು ಹೇಳಿದ್ದನ್ನು ವಾಪಸು ತೆಗೆದುಕೊಳ್ಳಬೇಕೆಂದು ನಾನು ಹೇಳಿದೆ. ಆ ರೀತಿ ಆವಾದನೆ ಮಾಡಿದರೆ ಬರೀ ಚೇರ್‌ಗೆ ಮಾತ್ರವಲ್ಲ, ಇಡೀ ಸಭೆಗೆ ಅನ್ಯಾಯವಾಗುತ್ತದೆ. ಆದ್ದರಿಂದ ಮಾನ್ಯ ಸದನ್ಯರು ಹೇಳಿದ್ದನ್ನು ವಾಪಸು ತೆಗೆದುಕೊಳ್ಳಬೇಕೆಂದು ಸೂಚನೆ ಮಾಡುತ್ತಾ ಇದ್ದೇನೆ.

ಶ್ರೀ ಬಿ. ಪಿ. ಗಂಗಾಧರ್.—ಪ್ರೊಸೀಡಿಂಗ್ಸ್ ಕಾಪಿಯನ್ನು ಕೊಡಿಸಬೇಕು ಸ್ವಾಮಿ. Before I say anything, I want to go through the proceedings as to how it is recorded, because I feel that I have not expressed in that language ; that is not the language that is used by me. Let a copy of the proceedings be made available to me.

Mr. SPEAKER.—The office will give a copy of that portion of the proceedings to the hon. Member.

Lease of Land for the Congress Exhibition at the Subhash Nagar Tank, Bangalore

ಶ್ರೀ ಎಲ್. ಶ್ರೀಕಂಠಯ್ಯ (ನಂಜನಗೂಡು).—ಮುಖ್ಯಮಂತ್ರಿಗಳು ವಿರೋಧಪಕ್ಷಗಳ ನಾಯಕರುಗಳನ್ನು ಕರೆಸಿ ಇದರ ಬಗ್ಗೆ ಸಮಾಲೋಚನೆ ನಡೆಸಿ ಒಂದು ಅಂತ್ಯ ತೀರ್ಮಾನ ತೆಗೆದು ಕೊಳ್ಳುತ್ತೇವೆಂದು ಹೇಳಿದರು. ಅದರ ಬಗ್ಗೆ ನನಗೆ ಒಂದು ಸಂದೇಹ ಬಂದಿದೆ. ಅದನ್ನು ತಮ್ಮ ಮುಂದೆ ಇಡುತ್ತೇನೆ.

Mr. SPEAKER.—When the atmosphere has been cleared, I request the hon. Member not to add to the bitterness.

ಶ್ರೀ ಎಚ್. ಶ್ರೀಕಂಠಯ್ಯ.—ಈ ಜಮೀನಿನ ವಿಷಯದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಪರೋಧಪಕ್ಷದ ನಾಯಕರನ್ನು ಕೇಳಿ ತೀರ್ಮಾನ ತೆಗೆದುಕೊಳ್ಳುತ್ತೇವೆಂದು ಇಲ್ಲಿ ಹೇಳುವುದು, ಅಮೇರೆ ತಮ್ಮ ಇಷ್ಟಬಂದ ಹಾಗೆ ಮಾಡುತ್ತೇವೆಂದು ಹೇಳುವುದು ಸರಿಯೇ ? ಇಲ್ಲಿ ಇಷ್ಟು ಈ ಲ್ಯಾಂಡ್ ಡಿಸ್‌ಪೋಜರ್ ಬಗ್ಗೆ ಚರ್ಚೆಮಾಡಿ ನಾವು ಹೇಳಿದ ಅಭಿಪ್ರಾಯ ಸರ್ಕಾರದ ಮೇರೆ ಬದ್ಧಪಡಿಸುತ್ತದೆಂದು ವ್ಯ..ಪಡಿಸಲಲ್ಲ. ಅಂದಮೆರೆ ನೀವು ಹೇಳುವುದು ಹೇಳಿ, ನಾವು ಮಾಡುವುದು ಮಾಡುತ್ತೇವೆಂದು ಅಭಿಪ್ರಾಯವೆ ?

Mr. SPEAKER.—Let the matter lie over as it is. I request the Member not to try to complicate the things in the interest of smooth working of the House.

ಶ್ರೀ ಎಚ್. ಎನ್. ನಂಜೇಗೌಡ (ಆರಕಲಗೂಡು).—ಬೀಸುವ ದೊಣ್ಣೆಗೆ ತಲೆ ತಪ್ಪಿಸಿಕೊಂಡರೆ ಸಾವಿರ ವರ್ಷಗಳ ಆಯುಸ್ಸಂತೆ. ಆ ರೀತಿ ಇಲ್ಲಿ ಆಗಿದೆ. ನಮ್ಮ ಅಭಿಪ್ರಾಯಕ್ಕೆ ಮನ್ನಣೆಕೊಟ್ಟು ಅದನ್ನು ಸರಿಯಾದ ರೀತಿಯಲ್ಲಿ ವ್ಯವಹರಿಸುತ್ತೇವೆಂದು ಹೇಳುವುದು ಒಂದು ರೀತಿ. ಆದನ್ನು ಬಿಟ್ಟು ನಾನು ಮಹಾರಾಜ, ನೀವು ಪ್ರಜೆಗಳು, ದೂರು ಕೊಡಿರಿ, ನಾವು ತೀರ್ಮಾನ ತೆಗೆದುಕೊಳ್ಳುತ್ತೇವೆಂದು ಅವರು ಹೇಳುವುದಾದರೆ ಅದು ಬಹಳ ಕಷ್ಟವಾಗುತ್ತದೆ. ಆದ್ದರಿಂದ ಇದು ಸರಿಯೋ ತಪ್ಪೋ ಎಂದು ಹೇಳುವಂಥ ಅಭಿಪ್ರಾಯಕ್ಕೆ ಮನ್ನಣೆ ಕೊಟ್ಟು ಸರ್ವರಿಗೂ ಒಪ್ಪಿಗೆಯಾಗುವ ರೀತಿ ಜಾಗ್ರತೆಯಾಗಿ ತೀರ್ಮಾನವನ್ನು ಅದರ ಬಗ್ಗೆ ತೆಗೆದು ಕೊಳ್ಳುತ್ತೀರಾ ?

Sri S. V. AGNIHOTRI (Dharwar Rural).—I rise to a point of order.

Mr. SPEAKER.—Under what rule ?

Sri S. V. AGNIHOTRI.—It is under convention.

Sri S. BANGARAPPA (Sorab).—When there is no point, there can be never any point of order.

Mr. SPEAKER.—When the hon. Member rises, should I not listen to him ? I have already indicated to the hon. Members that whenever they rise to a point of order they should indicate in the first instance what particular rule or provision of the regulatory procedure is violated and then substantiate the point. The hon. Member is explaining. Should I not hear him ?

Sri K. H. PATIL (Hubli).—When the Speaker is convinced that the State's interest is in clash at the hands of the Government, it is within the discretion of the Chair to suspend the rules and allow the House to get proper replies from the Government.

ಶ್ರೀ ಎಸ್. ವಿ. ಅಗ್ನಿಹೋತ್ರಿ.—ಪಾಯಿಂಟ್ ಆಫ್ ಆರ್ಡರ್ ರೈಸ್ ಮಾಡಬೇಕಾದರೆ, ರೂರ್ಸ್ ಆಫ್ ಪ್ರೊಸೀಜರ್ ನೋಡಿ ರೂರ್ ಕೋಟ್ ಮಾಡಬಹುದು. ಕೆಲವೊಂದು ಪಾಯಿಂಟ್ ಆಫ್ ಆರ್ಡರ್ಸ್ ಕನ್‌ವೆನ್‌ಷನ್ ಪ್ರಕಾರ ಕೇಳಲಿಕ್ಕೆ ಬರುತ್ತದೆ. ಈ ಮಾನ್ಯ ಸಭೆಯಲ್ಲಿ ಕೆಲವು ಸದಸ್ಯರು ಹೊಸಬರು ಇದ್ದಾರೆ. ಅವರಿಗೆ ಒಂದು ವಿಷಯವನ್ನು ಹೇಳಬಯಸುತ್ತೇನೆ. ಈಗ ನನ್ನ ಪಾಯಿಂಟ್ ಆಫ್ ಆರ್ಡರ್ ಏನೆಂದರೆ, ಈ ಮಾನ್ಯ ಸಭೆಯಲ್ಲಿ ಉಚ್ಚತರಗತಿಯ ಸಂಪ್ರದಾಯವನ್ನು ಹಿಂದೆ ಇದ್ದಂಥ ಸ್ಪೀಕರ್ ಅವರು, ಅವರ ಹಿಂದೆ ಇದ್ದಂಥ ಸ್ಪೀಕರ್ ಅವರು ಇನ್ನೂ ಅನೇಕ ಗಣ್ಯ ಸದಸ್ಯರು ಜಾರಿಯೊಳಗೆ ತಂದಿದ್ದಾರೆ. ಈ ಸಭೆಯಲ್ಲಿ ಯಾರೇ ಆಗಲಿ, ಈ ಮನೆಯ ಸದಸ್ಯರಲ್ಲದವರ ಹೆಸರನ್ನು ಎತ್ತಿ ಅವರ ಬಗ್ಗೆ ಏನೂ ಮಾತನಾಡಬಾರದೆಂಬುದಾಗಿ ಒಂದು ನಿಯಮವಿದೆ. ಮಾನ್ಯ ಸದಸ್ಯರಾದ ಶ್ರೀ ನಂಜೇಗೌಡ ಅವರು ಈ ಸಭೆಯ ಸದಸ್ಯರಲ್ಲದವರ ಬಗ್ಗೆ ಮಾತನಾಡಿ, ನಮ್ಮ ಅಪ್ಪ, ನಮ್ಮ ದೊಡ್ಡಪ್ಪ, ಅಜ್ಜ ಎಂಬುದಾಗಿ ಹೇಳಿದರೆ ಅವರನ್ನು ಹೆಸರಿನಿಂದ ಕರೆಸಿ ಅವರ

ಬಗ್ಗೆ ತಿಳಿಸಿ ಹೇಳುವುದಕ್ಕೆ ಸಾಧ್ಯವಿಲ್ಲ. ಈ ಮಾನ್ಯ ಸಭೆಯ ಗೌರವ ಉಳಿಯಬೇಕಾದರೆ, ಅಪ್ಪ, ದೊಡ್ಡಪ್ಪ ಹೀಗೆ ಬೇರೆ ಜನರನ್ನು ಕರೆಸಲಕ್ಕೆ ಸಾಧ್ಯವಿಲ್ಲ. ಇದನ್ನು ತಾವು ನಡೆಯಕೊಟ್ಟರೆ ಎರ್ಲಾ ಸದಸ್ಯರೂ ತೊಂದರೆಗೊಳಪಡುತ್ತಾರೆ. ಸ್ವಲ್ಪ ದಯಮಾಡಿ ಈ ಸಭೆಯ ಸದಸ್ಯರಲ್ಲದವರ ಮತ್ತು ಸ್ವರ್ಗರೋಹದಲ್ಲಿರುವವರ ಹೆಸರನ್ನು ಈ ಸಭೆಯಲ್ಲಿ ತರುವಹಾಗೆ ಮಾಡಬೇಡಿ.

ಶ್ರೀ ಎಸ್. ಬಂಗಾರಪ್ಪ.—ತಾವು ರೂಲಿಂಗ್ ಕೊಡುವುದಕ್ಕೆ ಮೊದಲು ಒಂದು ಮಾತನ್ನು ಹೇಳುತ್ತೇನೆ. ಪಾಯಿಂಟ್ ಆಫ್ ಆರ್ಡರ್ ರೈಜ್ ಮಾಡಬೇಕಾದರೆ ರೂಲ್ಸ್ ಪ್ರಕಾರ ಯಾವ ರೂಲ್ ಎಂದು ನಮ್ಮನ್ನು ಕೇಳುವ ಪ್ರಕಾರ, ಹಾಗೆಯೇ ಅವರಿಗೂ ತಾವು ಕೇಳಬೇಕು. ಹಿಂದೆ ಇರತಕ್ಕ ಅನುಭವಸ್ಥರು, ಈ ಮಾನ್ಯ ಸಭೆಯ ಸದಸ್ಯರು ಆ ಒಂದು ಕನ್‌ವೆನ್‌ಷನ್ನನ್ನು ಬಿಟ್ಟು ಹೋಗಿದ್ದಾರೆ. ಅದನ್ನು ಪರಿಪಾಲನೆಮಾಡಬೇಕಾಗುತ್ತದೆ. ಆ ಪ್ರಕಾರ ಪಾಯಿಂಟ್ ಆಫ್ ಆರ್ಡರ್ ರೈಜ್ ಮಾಡಬೇಕಾಗುತ್ತದೆ. ಹಾಗೆ ಮಾಡಬೇಕಾಗಿದೆಯೇ ಎಂಬುದನ್ನು ಮೊದಲು ತಿಳಿಸಿದರೆ, ಅಮೇಲೆ ರೂಲಿಂಗ್ ವಿಷಯ ಯಾವಾಗ ಬೇಕಾದರೂ ಹೇಳಬಹುದು.

ಅಧ್ಯಕ್ಷರು.—ಪ್ರೊಸೀಡಿಂಗ್ಸ್ ಎಲ್ಲಾ ನೋಡಿ, ನನ್ನ ರೂಲಿಂಗ್ ಕೊಡುತ್ತೇನೆ. ಬಡ್ಜೆಟ್ ಚರ್ಚೆ ಕಾಲದಲ್ಲಿ ಯಾರು ಬೇಕಾದರೂ ಈ ವಿಚಾರದ ಬಗ್ಗೆ ಮಾತನಾಡಬಹುದು.

ಶ್ರೀ ಎಚ್. ಎನ್. ನಂಜೇಗೌಡ.—ನಾನು ಒಂದೆರಡು ಮಾತುಗಳನ್ನು ಹೇಳಬೇಕೆಂದಿದ್ದೇನೆ. ನರಿಯಾಗಿ ಅವರಿಂದ ಉತ್ತರ ಬರಲಿಲ್ಲ. ಬಡ್ಜೆಟ್ ಚರ್ಚೆಯ ಕಾಲದಲ್ಲಿ ಮಾತನಾಡಬೇಕೆಂದು ಹೇಳಿದರೆ, ಈ ಕಥೆ ಇನ್ನೂ ಇಲ್ಲಗೇ ಮುಗಿಯುಲಲ್ಲ. ಇದು ಬಡ್ಜೆಟ್ ಸ್ಪೀಚ್‌ಗೆ ಸಂಬಂಧಪಟ್ಟಿಲ್ಲ ಮುಗಿದಿದ್ದು ಸಮಾಧಾನಕರವಾಗಿ ಮುಗಿದಿಲ್ಲ.

ಅಧ್ಯಕ್ಷರು.—ಈಗಾಗಲೇ ವಿರೋಧಪಕ್ಷದ ಮುಖಂಡರು ಹೇಳಿದರು, ಮತ್ತು ಈ ಸಭೆಯ ನಾಯಕರು ಉತ್ತರ ಕೊಟ್ಟರು. The matter should stand there. ಯಾವುದೇ ಪಬ್ಲಿಕ್ ಇಂಟರೆಸ್ಟ್ ಅಡ್ವಾನ್ಸ್ ಮಾಡಬೇಕಾದರೂ ಅದಕ್ಕೆ ಒಂದು ಪ್ರೊಸೀಜರ್ ಇದೆ. The matter is entrusted to the Leader of the Opposition and therefore the Leader of the House will consult him and the matter should end there. Nothing is going to happen. ಯಾವಾಗಲೂ ಈ ವಿಚಾರದಲ್ಲಿ ಮ್ಯಾಚಮಾಟಿಕರ್ ಫಾರ್ಮುಲಾ ಅನುಸರಿಸಬಾರದು. Hon. Member should construe matters as an advocate. He should not try to add to the trouble. We are losing time. Hon. Member should know that we are spending thousands of rupees every day in this House.

ಶ್ರೀ ವಾಟಾಳ್ ನಾಗರಾಜ್.—ವಿರೋಧಪಕ್ಷದ ನಾಯಕರು ಹೇಳಿದ್ದು ನಿಮಗೆ ಗೊತ್ತಾಗಲಲ್ಲ. ಮಾನ್ಯ ಶ್ರೀ ಎಲ್. ಶ್ರೀಕಂಠಯ್ಯನವರ ಮತ್ತು ಮಾನ್ಯ ಶ್ರೀ ನಂಜೇಗೌಡರ ವಾದ ಇಷ್ಟೇ. ಮಾನ್ಯ ಶ್ರೀ ಶಿವಪ್ಪನವರು ಇದರ ಬಗ್ಗೆ ತೀರ್ಮಾನಮಾಡುವುದಕ್ಕೆ ಮುಂಚಿತವಾಗಿ ವಿರೋಧಪಕ್ಷದ ಎರ್ಲಾ ನಾಯಕರನ್ನು ಕರೆದು ಸಮಾಲೋಚನೆ ಮಾಡಿ ಮುಂದೆ ಹೋಗಬೇಕೆಂದು ಹೇಳಿದರು. ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುವಾಗ ಬಹಳ ನಾಜೂಕಾಗಿ ತಪ್ಪಿಸಿಕೊಂಡು ಉತ್ತರ ಕೊಟ್ಟದ್ದಾರೆಂಬ ಅಭಿಪ್ರಾಯವನ್ನು ನಾನು ತಿಳಿಯುತ್ತೇನೆ. ಅವರು ಏನು ಮಾಡುತ್ತಾರೆಂಬುದು ಗೊತ್ತಾಗಲಲ್ಲ.

Sri H. N. NANJE GOWDA,—If the lands are disposed of tomorrow the people will fix the responsibility not only on the Government, but on the Leader of the Opposition if they are not convinced and if their opinion is not carried out. It is not a simple matter.

Mr. SPEAKER.—In my view the opinion of the House is final. It is not the opinion of one section or the other. He has given certain assurance and therefore, the matter should end there. The members should have confidence in their leader. I cannot compel the Chief Minister to make a statement.

Sri H. N. NANJE GOWDA.—I want Sri Shivappa to have a fixed responsibility in this matter. Nothing of that sort is forthcoming. The proceedings will show that.

Mr. SPEAKER.—I request the hon. Member not to raise the problem again.

ಶ್ರೀ ಬಿ. ಪಿ. ಗಂಗಾಧರ್.—ಅನೆಂಬ್ಲಿ ಮುಗಿದ ಮೇಲೆ ಶಿವಪ್ಪನವರಿಗೆ ಅವರು ಒಂದು ಕಾಗದ ಬರೆಯುತ್ತಾರೆ. ಅಲ್ಲಗೆ ನಮ್ಮ ರೆಸ್ಪಾನ್ಸಿಬಿಲಿಟಿ ಮುಗಿಯುತ್ತು ಎಂದು ಒಂದು ಡಿಸಿಶನ್ ತೆಗೆದುಕೊಂಡು 99 ವರ್ಷಕ್ಕೆ ಲೀಸ್ ಮಾಡಿದರೆ ಏನು ಮಾಡುವುದು? This matter is a vital matter costing crores and crores of rupees. We want this matter to be settled. Let the State Government run the show. We want to give them full support. If the Government wants to give the land to a particular party, our protest, warning and everything is there. ಇವರು ದೇಶದ ಸೊತ್ತು ಲಪಟಾಯಿಸುವುದಿಲ್ಲವೆಂದು ಹೇಳಲಿ.

†Sri K. H. PATIL —The party in power in enjoying the benefits of that property and this House is only anxious to know the exact opinion of the Government. The very same Government wanted to acquire Ramapriya building at a very high cost. When such is the attitude of the Government, there is no wonder if they give this bit of land at this rate to their Organisation. No prudent Government would do like this. The opinion of this House is against giving this land. Therefore it is our desire that the Leader of the House and the Leader of the Opposition should make us feel that no wrong act will be done. Our interest should be safeguarded. There is no remedy left for us except urging the Government to come forward with a statement. Therefore, I earnestly request the Speaker to give protection to the Hon. Members of this House and see that this malpractice is stopped and such things are brought to order. The Leader of the House has said that the Government has decided to give it on lease. His party will be benefited by this deal. This is nothing but swindling the public money. There is an offer of Rs. 50,000 from Janatha Party. But the Leader of the House wants to lease it to his party. herefore our blood is boiling when we hear all these things. We are not in a mood to follow the constitutional method when things have not been done fairly. We are here to co-operte and respect the Chair but at the same time we would like you to understand our feelings also.

ಶ್ರೀ ಕೆ. ಪುಟ್ಟಸ್ವಾಮಿ.—ಸ್ವಾಮಿ, ಬಹುಶಃ ಮಾನ್ಯ ಮುಖ್ಯಮಂತ್ರಿಯವರು ಏನು ಹೇಳಿದರು, ಅದನ್ನು ಈ ಸಭೆಯವರು ತಿಳಿದುಕೊಂಡಿದ್ದಾರೆಂದು ಕಾಣುತ್ತದೆ. ಮಾನ್ಯ ಮುಖ್ಯ ಮಂತ್ರಿಯವರು ಸ್ಪಷ್ಟವಾಗಿ ಹೇಳಿದ್ದಾರೆ ಅಖೈರು ತೀರ್ಮಾನ ಇನ್ನೂ ತೆಗೆದುಕೊಂಡಿಲ್ಲವೆಂದು. ಮತ್ತು ಮಾನ್ಯ ವಿರೋಧ ಪಕ್ಷದ ನಾಯಕರು, ಈ ವಿಚಾರವನ್ನು ಸಮಾಲೋಚಿಸುತ್ತೀರಾ ಎಂದಾಗ, ಅದಕ್ಕೂ ಅಗಲಿ ಎಂದು ಹೇಳಿದ್ದಾರೆ. ಈಗ ಈ ಸಭೆಯಲ್ಲಿ ಹೇಳುವಅಭಿಪ್ರಾಯ ಬಹಳ ಅಶ್ಚರ್ಯವನ್ನುಂಟು ಮಾಡುತ್ತದೆ.

ಶ್ರೀ ಎರ್. ಶ್ರೀಕಂಠಯ್ಯ.—ಸ್ವಾಮಿ. ಅದು ಅಡ್ಡಗೋಡೆಯ ಮೇಲೆ ದೀಪ ಇಟ್ಟು ಹಾಗೆ ಇದೆ.

ಶ್ರೀ ಕೆ. ಪುಟ್ಟಸ್ವಾಮಿ.—ಈಕೆ ಯಾರಿಗೂ ಕೊಡುವುದಿಲ್ಲವೆಂದು ಹೇಳಿಬಿಡಿ, ಅಥವಾ ವಿರೋಧಪಕ್ಷದ ನದನ್ಯರು ಹೇಳಿದಂತೆ ಮಾಡಿಬಿಡಿ, ಎಂದು ಹೇಳಿದರೆ ನಾನಾದರೂ ಹೇಳಬೇಕಾಗುತ್ತದೆ, ಏನೆಂದರೆ ಯಾವುದೇ ಸರ್ಕಾರವೂ ಕೂಡ ಅಂಥ ಪರಿಸ್ಥಿತಿಯನ್ನು ಒಪ್ಪುವುದಕ್ಕಾಗುವುದಿಲ್ಲ ಎಂದು. ವಿರೋಧ ಪಕ್ಷದವರ ಜೊತೆಗೆ ಸಮಲೋಚನೆ ಮಾಡುವುದಕ್ಕೆ ಸಿದ್ಧವಾಗಿದ್ದೇವೆ. ನಾನಾದರೂ ಹೇಳುತ್ತೇನೆ, ಈಗ ಬಹಳ ಮುಖ್ಯವಾವಂತಹ ವಿಚಾರ, ದೇಶದ ಆಯವ್ಯಯದ ವಿಚಾರ, ಚರ್ಚೆಯಾಗುವುದು ಇದೆ. ಅದಕ್ಕೆ ಅವಕಾಶ ಮಾಡಿಕೊಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಬಿ. ಪಿ. ಗಂಗಾಧರ್.—ದೇಶದ ಸೊತ್ತು, ದೇಶಕ್ಕೆ ಇರಲಿ, ಎಂದು ಹೇಳಿದರೆ, ಅದಕ್ಕೆ ಒಂದು ಅಶ್ಯೂರೆನ್ಸ್ ಕೊಡುವುದಕ್ಕಾಗುವುದಿಲ್ಲವೆಂದರೆ, ಏನು ಅರ್ಥ ?

ಶ್ರೀ ವಾಟಾಳ್ ನಾಗರಾಜ್.—ಸ್ವಾಮಿ, ಮಾನ್ಯ ಮುಖ್ಯಮಂತ್ರಿಯವರು ಉತ್ತರ ಕೊಡುವುದರಲ್ಲಿ ತಪ್ಪಿಸಿಕೊಂಡಿದ್ದಾರೆ. ಈಗ ದೇಶದ ಸೊತ್ತು ಕ್ಷೀಣಾಯವಾಗಿ ಹೋಗುತ್ತಿದೆ. ಅದನ್ನು ಒಂದು ಪಾರ್ಟಿಯ ಉದ್ಧಾರಕ್ಕಾಗಿ ಮಾರುತ್ತಿದ್ದಾರೆ. ಇದನ್ನು ಮಾರುವುದಕ್ಕೆ ಮುಂಚೆ ವಿರೋಧಪಕ್ಷದ ಎರ್ಲಾ ಸದಸ್ಯರನ್ನು ಕರೆಸಿಕೊಂಡು ಮಾತನಾಡಿ, ಅವರ ಅಭಿಪ್ರಾಯವನ್ನು ತಿಳಿದು ಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

(ಹಲವು ಸದಸ್ಯರುಗಳು ಮಾತನಾಡಲು ಎದ್ದು ನಿಂತರು)

ಅಧ್ಯಕ್ಷರು.—ತಾವು ಹೇಳುತ್ತಾ ಇರುವುದು ನನಗೆ ತಿಳಿದಿದೆ. ಇದು ಬಹಳ ಮುಖ್ಯವಾದ ಅಸ್ತಿ ಇದೆ. ಅದನ್ನು ನಾನು ತಿಳಿದುಕೊಂಡಿದ್ದೇನೆ.

4-30 P.M.

ಶ್ರೀಮತಿ ಚಂಪಾಬಾಯಿ ಭೋಗಲೆ (ಕಾಗವಾಡ್).—ಸ್ವಾಮಿ, ಅಧ್ಯಕ್ಷರೇ, ಇವರು ಪ್ರಜಾ ಪ್ರಭುತ್ವವನ್ನು ಕೊಲೆ ಮಾಡುತ್ತಿದ್ದಾರೆ. ನಾವು ಪ್ರತಿಯೊಬ್ಬ ಸದಸ್ಯರೂ ಒಂದು ದಿವಸಕ್ಕೆ 25 ರೂಪಾಯಿ ತೆಗೆದುಕೊಂಡು ಸರಿಯಾಗಿ ಸಭೆಯ ಕಾರ್ಯಕಲಾಪಗಳನ್ನು ನಡೆಸದೆ ಸಭೆಯ ಕಾಲವನ್ನು ವ್ಯರ್ಥ ಮಾಡುವುದು ಸರಿಯಲ್ಲ.

ಶ್ರೀ ವಾಟಾಳ್ ನಾಗರಾಜ್.—ಮಹಾತಾಯಿ ಚಂಪಾಬಾಯಿ ಭೋಗಲೆಯವರ ಬಗ್ಗೆ ನಮಗೆ ಗೌರವ ಇದೆ.

Sri B. P. GANGADHAR.—This is an important matter. Let an assurance be given by the Government that thay will not dispose of this property and this public property will be retained.

Sri K. PUTTASWAMY.—I am not going to give any assurance.

(*Several members rose to speak*)

Sri B. P. GANGADHAR.—This is a very important matter and we are more serious about this matter more than the budget. We are particularly interested to see that this public property is saved to the State.

Mr. SPEAKER.—I know that every hon. Member here is as anxious as hon. Members Sri Gangadhar or Sri Nagaraj or Sri Nanje Gowda. I am sure Government is not going to part with this property in favour of anybody.

Sri H. N. NANJE GOWDA.—Shall I give you an example, Sir. This very Government has disposed of about 52 acres of revenue land. I have got evidence to prove that.

Sri B. P. GANGADHAR.—What we want is that good sense should prevail upon the Government in the interest of the State to retain this public property with the Government.

Mr. SPEAKER.—I cannot compel the Hon. Minister or anybody to give an assurance. Under what provisions of the rules or Constitution can I compel the Hon. Minister to give an assurance on the matter? ಇದೇ ಪ್ರಕಾರ ನೀವು ಮಾಡಬೇಕು ಎಂದು ನಾನು ಅವರಿಗೆ ಹೇಳುವುದಕ್ಕಾಗುವುದಿಲ್ಲ. ಇದೇ ರೀತಿ ನಿರ್ಣಯ ಮಾಡಿ ಎಂದೂ ನಾನು ಅವರಿಗೆ ಹೇಳುವುದಕ್ಕೆ ಅಧಿಕಾರವಿಲ್ಲ.

ಒಬ್ಬ ಸದಸ್ಯರು.—ಆ ಅಧಿಕಾರ ಈ ಕಡೆಯ ಸದಸ್ಯರಿಗೂ ಇಲ್ಲ. ಆ ಕಡೆಯ ಸದಸ್ಯರಿಗೂ ಇಲ್ಲ.

(ಶ್ರೀ ಪಾಟಾಳ್ ನಾಗರಾಜ್ ಅವರು ಮಾತನಾಡುವುದಕ್ಕೆ ಎದ್ದು ನಿಂತರು).

(Interruptions)

Smt. K. LEELAVATHI RAI (Bantwal) I rise to a point of order, Sir.

Sri H. N. NANJE GOWDA.—Sir, there cannot be any point of order when the Hon, Speaker is on his legs.

ಅಧ್ಯಕ್ಷರು.—ಮಾನ್ಯ ಸದಸ್ಯರು ಮೊದಲು ದಯವಿಟ್ಟು ಕುಳಿತುಕೊಳ್ಳಬೇಕು. ಸರ್ಕಾರದವರು ಇದೇ ರೀತಿ ನಿರ್ಣಯ ಮಂಡಬೇಕು ಎಂದು ಯಾವ ಸದಸ್ಯರು ಹೇಳುವುದಕ್ಕಾಗುವುದಿಲ್ಲ. ಶ್ರೀಮಾನ್ ಶಿವಪ್ಪನವರ ಸರ್ಕಾರ, ಎಂದರೆ ವಿರೋಧ ಪಕ್ಷದವರ ಸರ್ಕಾರ ಬಂದರೂ ಕೂಡ, ಸರ್ಕಾರದವರು ಇದೇ ರೀತಿ ನಿರ್ಣಯ ಮಾಡಬೇಕೆಂದು ಯಾವ ಸದಸ್ಯರೂ ಹೇಳುವುದಕ್ಕಾಗುವುದಿಲ್ಲ. ಅಸೆಂಬ್ಲಿಯಲ್ಲಿ ಅದಂತಹ ನಿರ್ಣಯ ಮಾತ್ರ ಖಾಯಂ ಆಗುತ್ತದೆ. ಈ ಬಗ್ಗೆ ಅಷ್ಯೂರೆನ್ಸ್ ಕೊಡಿ ಎಂದು ಮಾನ್ಯ ಮಂತ್ರಿಗಳಿಗೆ ಹೇಳುವುದಕ್ಕಾಗುವುದಿಲ್ಲ. ಈ ಸಭೆಯ ಪೇಳೆಯೆರ್ಲಾ ಕಳೆದು ಹೋಗುತ್ತಿದೆ. ಮುಂದೆ ಬಡ್ಜೆಟ್ಟಿನ ಮೇಲೆ ಜನರಲ್ ಡಿಸ್‌ಕಷನ್ ಆಗಬೇಕಾಗಿದೆ. ಅದು ಬಹಳ ಮಹತ್ವದ್ದು ಇದೆ.

† ಶ್ರೀ ಎಸ್. ಗೋಪಾಲಗೌಡ.—ಮಾನ್ಯ ಅಧ್ಯಕ್ಷರೇ, ಆಯವ್ಯಯದ ಮೇಲೆ ಚರ್ಚೆ ನಡೆಯುವುದಕ್ಕು ಎನ್ನುವುದರ ಬಗ್ಗೆ ತಮಗೆ ಎಷ್ಟು ಕಾತುರ ಇದೆಯೋ, ಅಷ್ಟೇ ಕಾತುರ ಈ ಮನೆಗೂ ಇದೆ. ವಿರೋಧಪಕ್ಷದ ಸದಸ್ಯರಿಗೂ ಇದೆ. ಆದರೆ ಇದರಲ್ಲಿ ಒಂದು ತಪ್ಪು ಇದೆ. ತಾವು ಈ ಸಭೆಯನ್ನು ಅಡ್ಜರ್ನ್ ಮಾಡಿದ ಮೇಲೆ ನಾವು ಕೆಲವರು ಒಳಗಡೆ ಬಂದು ನಮ್ಮಾಲೋಚನಾ ಸಭೆಯಲ್ಲಿ ಭಾಗವಹಿಸಿದ್ದೇವೆ. ಆದರೆ ಈಗ ವಾಸ್ತವವಾಗಿ ಸ್ಪಷ್ಟವಾದ ಒಂದು ಭರವಸೆ ಸರ್ಕಾರದಿಂದ ಈ ಸಭೆಗೆ ಬರಲಿಲ್ಲ. ಇದು ಸಾರ್ವಜನಿಕರ ವಿಷಯ ಎನ್ನುವುದು ವಿರೋಧಪಕ್ಷದ ಸದಸ್ಯರಿಗೂ ಮತ್ತು ಎಲ್ಲರಿಗೂ ಗೊತ್ತಿದೆ. ಈಗ ಮುಖ್ಯ ಮಂತ್ರಿಗಳು ಈ ಸಭೆಯಲ್ಲಿ ಹಾಜರು ಇಲ್ಲ. ಅವರು ಕೊಟ್ಟಂಥ ಹೇಳಿಕೆ ಅಷ್ಟು ಸ್ಪಷ್ಟವಾಗಿದೆ, ಭರವಸೆ ರೂಪದಲ್ಲಿ ಇದೆ, ಎಂದು ನಾವು ತಿಳಿದುಕೊಳ್ಳುವುದಕ್ಕಾಗುವುದಿಲ್ಲ. ಈಗ ಮೊದಲನೆಯದಾಗಿ ಶ್ರೀಮಾನ್ ಪುಟ್ಟಸ್ವಾಮಿಯವರು ಈ ಸಭೆಗೆ ಒಂದು ಅಷ್ಯೂರೆನ್ಸ್ ಕೊಡಬೇಕೆಂದು ಅನೇಕ ಮಾನ್ಯ ಸದಸ್ಯರು ಹೇಳಿದರು. ಈ ಭೂಮಿ ಇನ್ನು ಯಾರಿಗೆ ಸೇರಿದೆ ಎನ್ನುವುದು ವಿವಾದಾಸ್ಪದವಾದ ವಿಷಯ ಎನ್ನುವುದು ಒಂದು. ಕಾಂಗ್ರೆಸ್ಸಿನವರು ಬಹಳ ವರ್ಷಗಳಿಂದ ಆ ಜಾಗದಲ್ಲಿ ಪ್ರದರ್ಶನವನ್ನು ನಡೆಸುತ್ತಾ ಇರಬಹುದು. ಆದರೆ ಅದು ಅವರಿಗೆ ಹಕ್ಕು ಬರುವುದಿಲ್ಲ. ಬಹಳ ಕಾಲದಿಂದ ಅಲ್ಲಿ ವಸ್ತುಪ್ರದರ್ಶನ ನಡೆಸುತ್ತಿದ್ದೇವೆ ಎಂದ ಮಾತ್ರಕ್ಕೆ ಆ ಭೂಮಿಯನ್ನು 99ವರ್ಷದ ಗುತ್ತಿಗೆಗೆ ಪಡೆದುಕೊಳ್ಳುವುದಕ್ಕೆ ಹಕ್ಕು ಅವರಿಗೆ ಬರುವುದಿಲ್ಲ ಈ ವಿಚಾರದಲ್ಲಿ ಮಾನ್ಯ ಶಿವಪ್ಪನವರು ಬಹಳ ಸೌಜನ್ಯದಿಂದ ಈಗ ಒಳಗೆ ನಡೆದ ಸಭೆಯಲ್ಲಿ ಅಭಿಪ್ರಾಯಗಳನ್ನು ಗ್ರಹಿಸಿಕೊಂಡು ಹೊರಗೆ ಬಂದು ವಿರೋಧಪಕ್ಷದ ಸದಸ್ಯರಿಗೆ ಸಮಾಧಾನಕರವಾದಂತಹ ರೀತಿಯಲ್ಲಿ ಹೇಳುತ್ತಾರೆಂದು ನಮ್ಮ ಕಡೆಯ ಸದಸ್ಯರು ತಿಳಿದಿದ್ದರು. Will you give us a categorical assurance that this land would not be leased out to Congress for 99 years? ಒಳಗೆ ಒಂದು, ಹೊರಗೆ ಒಂದು ಹೇಳುವುದಕ್ಕಾಗುವುದಿಲ್ಲವೆಂದು ನಾನು ಹೇಳಿದ್ದೇನೆ. ನಮ್ಮ ಮಾನ ತೆಗೆಯುವ ಸ್ಥಿತಿಗೆ ತಾವು ಬಂದಿದ್ದೀರಿ. ನಾವು ಒಳಗೆ ಹೋಗಿ ಕಾಫಿ ಕುಡಿದು ಅವರು ಹೇಳಿದಂತೆ ಕೇಳಿಕೊಂಡು ಬರುತ್ತೇವೆ ಎಂದು ನಮ್ಮ ಕಡೆಯ ತರುಣ ಸದಸ್ಯರು ಯಾರೂ ಅನುಮಾನಪಡಬೇಕಾಗಿಲ್ಲ. ಅವರು ನಮಗೆ ಕಾಫಿ ಕುಡಿಸಿ ತಲೆಯ ಮೇಲೆ ಕೈಬಿಳೆಯುತ್ತಾರೆಂದು ತಾವು ತಿಳಿಯಬಾರದು. ನಮ್ಮ ಕಡೆಯ ಅನೇಕ ಮಾನ್ಯ ಸದಸ್ಯರು ಈಗ ಹೇಳಿದಂತೆ ಈ ಭೂಮಿಯ ಸ್ವತ್ತು ಇಡೀ ದೇಶಕ್ಕೆ ಸೇರಿದ್ದು. ಇದನ್ನು ಯಾವ ಒಂದು ಪಕ್ಷವೂ ಅನುಭವಿಸುವುದಕ್ಕೆ ಸಾಧ್ಯವಿಲ್ಲ. ಪ್ರದರ್ಶನ ರೂಪದಲ್ಲಿ ಆಗಲೀ ಬಾಡಿಗೆ ರೂಪದಲ್ಲಿ ಆಗಲೀ ಆಥವಾ ಬೇರೆ ಯಾವ ರೂಪದಲ್ಲಿ ಆಗಲೀ ಅನುಭವಿಸುವುದಕ್ಕೆ ಸಾಧ್ಯವಿಲ್ಲ. ಈ ಚರ್ಚೆಯನ್ನು ಉಪಶಮನ ಮಾಡಿದ್ದಿದ್ದರೆ ಸಭೆಯನ್ನು ಮುಂದಕ್ಕೆ ಹಾಕುತ್ತೇನೆಂದು ಅಧ್ಯಕ್ಷರು ಹೇಳುವುದು ಬೇರೆ ಮಾತು. ಈ ಬಗ್ಗೆ ಶ್ರೀಮಾನ್ ಪುಟ್ಟಸ್ವಾಮಿಯವರು ಸರ್ಕಾರದ ಪರವಾಗಿ ಆಶ್ವಾಸನೆ ಕೊಡಬಲ್ಲವರು ಎಂದು ನಾನು ತಿಳಿದಿದ್ದೇನೆ. ಈಗ ಆ ಜಾಗದಲ್ಲಿ ಸ್ಟಾಲ್‌ಗಳನ್ನು ಕಟ್ಟುತ್ತಾ ಇದ್ದಾರೆಂದು ಶ್ರೀಮಾನ್ ಪಾಟಾಳ್ ನಾಗರಾಜ್ ಅವರು ಹೇಳಿದರು. ತಮಗೆ

ಮನಸ್ಸಿಗೆ ಬಂದಂತೆ ನಡೆದುಕೊಳ್ಳುವುದು ಪ್ರಜಾಪ್ರಭುತ್ವದ ನೀತಿಯಲ್ಲ. ಇಷ್ಟೆಲ್ಲಾ ಕೂಗಾಟ ಮಾಡಿದ ಮೇಲೂ ಕೂಡ ಕಾಂಗ್ರೆಸ್ ಪಕ್ಷಕ್ಕೆ 99 ವರ್ಷಗಳ ಗುತ್ತಿಗೆಗೆ ಕೊಡುತ್ತೇವೆಂದು ತಾವು ಹೇಳುವುದಾದರೆ, ಅಲ್ಲಿಂದ ಬರುವ ಆದಾಯ ಸರ್ಕಾರದ ಬೊಕ್ಕಸಕ್ಕೆ ಬರಬೇಕು. ಹಿಂದಿನ ಸರ್ಕಾರದವರು ಒಂದು ಮನೆಯನ್ನು ದಾನದ ರೂಪದಲ್ಲಿ ಒಂದು ರೂಪಾಯಿ ಬಾಡಿಗೆಯ ರೂಪದಲ್ಲಿ ಕೊಟ್ಟಿರುವ ಉದಾಹರಣೆ ಇದೆ.

ಶ್ರೀ ಪಿ. ಎನ್. ಪಾಟೀಲ್ (ಹಮ್‌ನಾಬಾದ್).—ಆಗ ರಾಜರುಗಳ ಸರ್ಕಾರ ಇತ್ತು. ಆ ಕಾರಣದಿಂದ ಕೊಟ್ಟಿರಬಹುದು.

ಶ್ರೀ ಎಸ್ ಗೋಪಾಲಗೌಡ.—ಆದ್ದರಿಂದ ಆ ಕಾಲ ಹೋಯಿತು. ಈ ಜಾಗದಲ್ಲಿ ಕಟ್ಟುವ ಸ್ಪಾರ್‌ಗಳಿಂದ ಒರುವ ಆದಾಯ ಸರ್ಕಾರದ ಬೊಕ್ಕಸಕ್ಕೆ ಬರಬೇಕು ಇಲ್ಲದಿದ್ದರೆ ಎಲ್ಲಾ ಪಕ್ಷಗಳಿಗೂ ಸಮನಾಗಿ ಹಂಚಬೇಕು. ತಾವು ಮಾಡುತ್ತಿರುವ ಅನ್ಯಾಯಗಳನ್ನು ಹಿಂದಿನಿಂದಲೂ ಸಹಿಸಿ ಕೊಂಡು ಬಂದಿದ್ದಾಯಿತು. ಇನ್ನು ಮುಂದೆ ಸಹಿಸುವುದಕ್ಕಾಗುವುದಿಲ್ಲ. ಫೈನಲ್ ನೋಡದೆ ತಪ್ಪು ಉತ್ತರ ಕೊಟ್ಟೆ ಎಂದು ಒಬ್ಬ ಮಂತ್ರಿಗಳು ಹೇಳಿದರು. ಅಂತಿಮ ತೀರ್ಮಾನವಾಗಿಲ್ಲ ಎಂದು ಮತ್ತೊಬ್ಬ ಮಂತ್ರಿಗಳು ಹೇಳಿದರು. ಒಂದು ನಿರ್ಣಯ ತೆಗೆದುಕೊಳ್ಳುವುದಕ್ಕೆ ಮುಂಚೆ ಕೂಲಂಕಷವಾಗಿ ವಿಚಾರವಾಗಬೇಕು ಎಂದು ಇನ್ನೊಬ್ಬ ಮಂತ್ರಿಗಳು ಹೇಳಿದರು. ಈ ರೀತಿ ಮೂರು ಜನ ಮಂತ್ರಿಗಳು ಮೂರು ತರಹ ಉತ್ತರ ಕೊಟ್ಟಿದ್ದಾರೆ. ಕಾಂಗ್ರೆಸ್ ಪಕ್ಷಕ್ಕೇ 99 ವರ್ಷದ ಗುತ್ತಿಗೆಗೆ ಈ ಜಮೀನನ್ನು ಕೊಡುತ್ತೇವೆಂದು ಶ್ರೀ ಪುಟ್ಟಸ್ವಾಮಿಯವರು ಬೇಕಾದರೆ ಒಂದು ನಿರ್ಣಯ ತರಲಿ. ಅದು ಬಹುಮತದಿಂದ ತೀರ್ಮಾನವಾದರೆ ಅದಕ್ಕೆ ನಾವು ತಲೆಬಾಗುತ್ತೇವೆ. ಸರ್ಕಾರ ತನ್ನ ಕೈಯಲ್ಲಿ ಅಧಿಕಾರವಿದೆಯೆಂದುಕೊಂಡು ಯಾವ ಭೂಮಿಯನ್ನು ಬೇಕಾದರೂ ಸಹ ತನಗೆ ಬೇಕಾದವರಿಗೆ ಕೊಡುವುದಾದರೆ ಅದಕ್ಕೆ ನಾವು ಒಪ್ಪುವುದಕ್ಕಾಗುವುದಿಲ್ಲ. ಇಂತಹ ತೀರ್ಮಾನಗಳಿಗೆ ನಾವು ಭಾಗಿಗಳಾಗುವುದಿಲ್ಲ. ಅದಕ್ಕೆ ನಮ್ಮ ಪ್ರತಿಭಟನೆ ಇದೆ. ಈ ಮಾತನ್ನು ನಮ್ಮ ಸ್ನೇಹಿತರು ಉದ್ವೇಗದಿಂದ ಹೇಳಿದ್ದಾರೆ. ಈ ಬಗ್ಗೆ ಸರ್ಕಾರ ಒಂದು ನಿರ್ಣಯ ತೆಗೆದುಕೊಳ್ಳುವುದಕ್ಕೆ ಮುಂಚೆ ನಮ್ಮನ್ನು ಆತ್ಮವಿಶ್ವಾಸಕ್ಕೆ ತೆಗೆದುಕೊಳ್ಳಬೇಕು. ಜನತೆ, ದೇಶ ಎಲ್ಲರೂ ಒಪ್ಪುತಕ್ಕಂಥ ನಿರ್ಣಯವನ್ನು ಸರ್ಕಾರ ತೆಗೆದುಕೊಳ್ಳಬೇಕು. ಇದರಲ್ಲಿ ಕಿಂಚಿತ್ ಕಮ್ಮಿ ಯಾದರೂ ಸಹ ಈ ವಿಷಯದಲ್ಲಿ ದೊಡ್ಡ ಪ್ರಕರಣವಾಗುತ್ತದೆ ಮತ್ತು ಇದಕ್ಕೆ ಸರ್ಕಾರ ಹೊಣೆ ಯಾಗುತ್ತದೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ. ಪುಟ್ಟಸ್ವಾಮಿ.—ಸ್ವಾಮಿ, ಈ ವಿಚಾರದಲ್ಲಿ ಪದೇ ಪದೇ ಚರ್ಚೆಯಾಗುತ್ತಿದೆ. ಆದರೂ ಸಹ ಶ್ರೀ ಗೋಪಾಲಗೌಡರು ಕೆಲವು ಪ್ರಶ್ನೆಗಳನ್ನು ಎತ್ತಿದ್ದಾರೆ. ಈ ಜಾಗ ಯಾರಿಗೆ ಸೇರಿದ್ದು ಎಂಬ ಬಗ್ಗೆ ವಿವಾದಾಸ್ಪದವಾದುದಾಗಿದೆ. ಈ ಜಾಗದ ಬಗ್ಗೆ ಸರ್ಕಾರದಲ್ಲಿ ಕೆಲವು ದಾಖಲೆಗಳು ಇವೆ. ಈ ದಾಖಲೆಗಳ ಪ್ರಕಾರ ಈ ಜಾಗ ಸರ್ಕಾರಕ್ಕೆ ಸೇರಿದ್ದು ಎಂಬ ಕಾರಣ ದಿಂದ ಆ ಜಾಗದ ಒಂದು ಭಾಗವನ್ನು ರೋಡ್ ಟ್ರಾನ್ಸ್‌ಪೋರ್ಟ್‌ಗೆ ಕೊಟ್ಟಿದ್ದೇವೆ. ಬೆಂಗಳೂರು ಕಾರ್ಪೊರೇಷನ್ ಸ್ವಾಧ್ಯುಟರಿ ಬಾಡಿ. ಅದು ಅಸ್ತಿತ್ವಕ್ಕೆ ಬಂದಮೇಲೆ ಕಾರ್ಪೊರೇಷನ್ ನಡೆಸುವವರು ಈ ಜಾಗದ ಬಗ್ಗೆ ವಿವಾದವನ್ನು ಎತ್ತುವುದಕ್ಕೆ ಅವಕಾಶವಿದೆ. ಆ ವಿಷಯಕ್ಕೆ ನಾನು ಈಗ ಹೋಗುವುದಿಲ್ಲ. ಶ್ರೀಮಾನ್ ಗೋಪಾಲಗೌಡರು ಇನ್ನೊಂದು ವಿಚಾರ ಹೇಳಿದರು. ಏನೆಂದರೆ ಈ ವಿಚಾರದಲ್ಲಿ ಎಲ್ಲರ ಮನಸ್ಸು ಸಹ ಕಲಕಿದೆ ಎಂದು. ಈ ವಿಚಾರದಲ್ಲಿ ಎರಡುಗಂಟೆ ಯಿಂದ ಮಾನ್ಯ ಸದಸ್ಯರು ತಮ್ಮ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಿದ್ದಾರೆ. ಆದ್ದರಿಂದ ಎಲ್ಲರ ಮನಸ್ಸು ಕಲಕಿದೆ ಎಂಬುದು ಸ್ಪಷ್ಟವಾಗಿದೆ. ಮತ್ತು ಈ ವಿಚಾರದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ಒಂದು ಸರಿಯಾದ ನಿಲುವನ್ನು ತಳೆದರು. ಏನೆಂದರೆ ಈ ವಿಚಾರದಲ್ಲಿ ಮುಖ್ಯ ಮಂತ್ರಿಗಳು ಇನ್ನೂ ತೀರ್ಮಾನವಾಗಿಲ್ಲ ಎಂದಾಗ, ತೀರ್ಮಾನ ಮಾಡುವುದಕ್ಕೆ ಮುಂಚೆ ವಿರೋಧ ಪಕ್ಷದ ಪ್ರಮುಖರಲ್ಲಿ ಸಮಾಲೋಚನೆ ಮಾಡಿ ಅವರ ಒಂದು ಅಭಿಪ್ರಾಯ ಪಡೆದುಕೊಂಡು ತೀರ್ಮಾನ ಮಾಡುತ್ತೇವೆ ಎನ್ನುವ ಭರವಸೆ ಕೊಡುತ್ತೀರಾ ಎಂದು ಹೇಳಿದರು. ಅದಕ್ಕೆ ಮಾನ್ಯ ಮುಖ್ಯ ಮಂತ್ರಿಗಳು ಏನು ಉತ್ತರ ಕೊಟ್ಟರು ಎಂಬುದು ಎಲ್ಲರಿಗೂ ಗೊತ್ತಿದೆ. ನಾನು ಅರ್ಥ ಮಾಡಿ ಕೊಂಡಿದ್ದದಲ್ಲಿ ಸರ್ಕಾರ ಇಂತಹ ವಿಚಾರ ಬಂದಾಗ ಮಾನ್ಯ ಸದಸ್ಯರು ಹೇಳಿದಂತೆ ಒಪ್ಪಿ ಕೊಳ್ಳುವುದಕ್ಕೆ ಸಾಧ್ಯವೇ ಎನ್ನುವ ಬಗ್ಗೆ ಒಂದು ಸಂತಯ ಬಂದಿದೆ. ಈ ಜಾಗವನ್ನು ಕಾಂಗ್ರೆಸ್ ವಸ್ತುಪ್ರದರ್ಶನಕ್ಕೆ ಕೊಡುವುದಿಲ್ಲ ಎನ್ನುವ ಭರವಸೆಯನ್ನು ಕೊಡಬೇಕೆಂದು ಮಾನ್ಯ ಸದಸ್ಯರು ಕೇಳುತ್ತಿದ್ದಾರೆ. ಇದರ ಅರ್ಥ ಏನಾಯಿತು ಎಂದರೆ, ವಿರೋಧಪಕ್ಷದವರೊಡನೆ ವಿಚಾರವಿನಿಮಯ ಮಾಡಿಕೊಳ್ಳದೆ ಈ ಬಗ್ಗೆ ಆಜ್ಞೆರು ತೀರ್ಮಾನ ತೆಗೆದುಕೊಳ್ಳುವುದಕ್ಕೆ ಸರ್ಕಾರಕ್ಕೆ ಸ್ವಾತಂತ್ರ್ಯ ಎಲ್ಲ ಎಂಬುದಾಗಿ. ಇದುವರೆಗೆ ಈ ವಿಷಯದ ಬಗ್ಗೆ ಬಹಳವಾಗಿ ಚರ್ಚೆಯಾಗಿ ಎಲ್ಲರ ಮನಸ್ಸು

(ಶ್ರೀ ಕೆ. ಪುಟ್ಟಸ್ವಾಮಿ)

ಕಲಕಿದೆಯೆಂದು ಹೇಳುತ್ತೇನೆ. ಈ ಬಗ್ಗೆ [ಒಂದು ಭರವಸೆ ಕೊಟ್ಟರೆ ಮುಂದಿನ ಕಾರ್ಯವನ್ನು ತೆಗೆದುಕೊಳ್ಳುವುದಕ್ಕೆ ಅವಕಾಶ ಕೊಡುತ್ತೇವೆ ಎಂದು ಕೆಲವು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಈಗ ಅಂತಹ ಭರವಸೆ ಕೊಡುವುದಕ್ಕಾಗುವುದಿಲ್ಲವೆಂದು ಹೇಳುತ್ತೇನೆ.

ಶ್ರೀ ಎಸ್. ಗೋಪಾಲಗೌಡ.—ಎಂತಹ ಭರವಸೆ ?

ಶ್ರೀ ಕೆ. ಪುಟ್ಟಸ್ವಾಮಿ.—ಕಾಂಗ್ರೆಸ್ ವಸ್ತುಪ್ರದರ್ಶನಕ್ಕೆ ಕೊಡುವುದಿಲ್ಲ ಎನ್ನುವ ಭರವಸೆ ಕೊಡುವುದಕ್ಕಾಗುವುದಿಲ್ಲ ಎಂದು ಹೇಳಿದ್ದೇನೆ ಹೊರತು ಅಖೈರಾಗಿ ಏನು ತೀರ್ಮಾನ ಮಾಡಿದ್ದೇವೆ ಎಂದು ಹೇಳಲಿಲ್ಲ. ನಮ್ಮ ಮಾನ್ಯ ಸದಸ್ಯರಾದ ಶ್ರೀಮಾನ್ ವಾಟಾಳ್ ನಾಗರಾಜ್‌ರವರ ತೀವ್ರತೆಯನ್ನು ನಾನು ಪ್ರಶಂಸೆ ಮಾಡುತ್ತೇನೆ. ಅವರು ಬೆಂಗಳೂರು ನಗರದಲ್ಲಿ ಪೌರನಭಾ ಸದಸ್ಯರಾಗಿದ್ದಂತಹವರು ಮತ್ತು ನಗರದಲ್ಲಿ ಯಾವ ಚಳುವಳಿಯೇ ನಡೆಯಲಿ ಅದಕ್ಕೆ ಮೊದಲಲ್ಲೇ ಶ್ರೀಮಾನ್ ವಾಟಾಳ್ ನಾಗರಾಜ್‌ರವರ ಹೆಸರು ಬರುತ್ತದೆ. ಇದರಲ್ಲಿ ಮಾನ್ಯ ಮುಖ್ಯಮಂತ್ರಿಗಳು ಹಾಗೂ ನಮ್ಮ ಸಹೋದ್ಯೋಗಿಗಳಾದ ಶ್ರೀಮಾನ್ ರಾಚಯ್ಯನವರು ಹೇಳಿದುದು ಇದರ ಅಂಕಿ ಅಂಶಗಳ ಬಗ್ಗೆ ಇನ್ನೂ ಅಖೈರಾಗಿ ತೀರ್ಮಾನವಾಗಿಲ್ಲ. ಇದನ್ನು ಪರಿಶೀಲನೆ ಮಾಡುವಾಗ Loud thinking became an offence ಎಂದಂತಾಗಿದೆ. ಈಗ ಇಲ್ಲಿ ಮಾನ್ಯ ಸದಸ್ಯರಾದ ಶ್ರೀಮಾನ್ ಗೋಪಾಲಗೌಡರು ಕೇಳುತ್ತ ಇರತಕ್ಕದ್ದು ಇದನ್ನು ಮಾಡುವುದಿಲ್ಲ ಎನ್ನುವ ಭರವಸೆಯನ್ನು ಈಗಲೇ ಕೊಡಬೇಕು ಎಂದು. ಇದರಲ್ಲಿ 30 ವರ್ಷಗಳೇ ಇಲ್ಲವೇ 99 ವರ್ಷಗಳೇ ಮಾಡಬೇಕೇ ಇಲ್ಲವೇ ಯಾವ ಕಂಡಿಷನ್‌ಗಳ ಮೇಲೆ ಮಾಡಬೇಕೇ ಎನ್ನುವುದು ಇನ್ನೂ ಇತ್ಯರ್ಥವಾಗಿಲ್ಲ.

ಶ್ರೀ ಹಂಜೀ ಶಿವಣ್ಣ (ತರೀಕೆರೆ).—99 ವರ್ಷ ಎಂದಿರುವುದನ್ನು 999 ವರ್ಷಗಳು ಎಂದು ಮಾಡಿ ಆಗ ಸರಿಹೋಗುತ್ತದೆ.

ಶ್ರೀ ಕೆ. ಪುಟ್ಟಸ್ವಾಮಿ.—999 ವರ್ಷಗಳೂ ಆಗುತ್ತವೆ. ಮಾನ್ಯ ಸದಸ್ಯರಿಗೆ ಗೊತ್ತಿರಬಹುದು. ಹತ್ತಿರ ಇರುವ ಗೋರ್ಖಾ ಕ್ಲಬ್‌ಗೆ ಜಾಗವನ್ನು 999 ವರ್ಷಗಳವರೆಗೆ ಲೀಸ್ ಮೇಲೆ ಕೊಡರಾಗಿದೆ. ಇದರಲ್ಲಿ ಎಷ್ಟು ವರ್ಷಗಳ ಕಾಲ ಲೀಸು ಕೊಡರಾಗಿದೆ ಎಂತೆಂತಹ ಕಂಡಿಷನ್‌ಗಳ ಮೇಲೆ ಮತ್ತು ಎಷ್ಟು ಹಣ ಬಾಡಿಗೆಯಾಗಿ ಬರುತ್ತದೆ ಇದರ ಬಗ್ಗೆ ಇನ್ನೂ ತೀರ್ಮಾನವಾಗಿಲ್ಲ. ಆದರೆ ಇಲ್ಲ ಜಾಗ ಕೊಡುವುದರ ಬಗ್ಗೆ ಈ ದಿವಸ ಇಲ್ಲಿ ನುಮಾರು ಒಂದು ಗಂಟೆಯಿಂದ ಆರಂಭವಾಗಿ ಇಲ್ಲಿ ಎರಡು ಮೂರು ಗಂಟೆಗಳ ಕಾಲ ಡಿಸ್‌ಕಷನ್ ಆಗಿದೆ. 99 ವರ್ಷಗಳ ಕಾಲ ಇದನ್ನು ಕೊಡಬೇಕು ಎನ್ನುವ ತೀರ್ಮಾನ ಮಾಡಿದ್ದೀರಾ ಇಲ್ಲವೇ ಎನ್ನುವುದನ್ನು ನಿರ್ದಿಷ್ಟವಾಗಿ ಹೇಳಬೇಕೆಂದು ಕೇಳುತ್ತಿದ್ದಾರೆ. ಇದರಲ್ಲಿ ತೀರ್ಮಾನ ಮಾಡಬೇಕಾದರೆ ಸಾಕಷ್ಟು ಕಾರಾವಕಾಶ ಬೇಕಾಗುತ್ತದೆ. ಇದರ ಬಗ್ಗೆ ಇನ್ನೂ ಯಾವ ಅಂತಿಮ ತೀರ್ಮಾನವನ್ನು ಮಾಡಿಲ್ಲ.

ಶ್ರೀ ಜಿ. ದುಗ್ಗಪ್ಪ (ಧರ್ಮಸಾಗರ).—ಸ್ವಾಮಿ, ಮಾನ್ಯಮಂತ್ರಿಗಳು ಇಲ್ಲ ರೌಂಡ್‌ಥಿಂಕಿಂಗು ಬಗ್ಗೆ ಇಲ್ಲ ಪ್ರಸ್ತಾಪ ಮಾಡುತ್ತಿದ್ದಾರೆ. ಇದರಲ್ಲಿ ಸರ್ಕಾರ ಈಗಾಗಲೇ ತೀರ್ಮಾನ ತೆಗೆದುಕೊಂಡಿದ್ದಾರೆ. ಇದರಲ್ಲಿ ಅಗ್ರಿಮೆಂಟು ಡೀಟೇರ್ಸ್ ಇವುಗಳನ್ನು ಮಾತ್ರ ವರ್ಕ್ ಔಟ್ ಮಾಡಬೇಕಾಗಿದೆ ಎಂದು ಹೇಳಿದರು. ಎಂದರೆ ಸರಕಾರ ಇದರ ಬಗ್ಗೆ ಆಗಲೇ ತೀರ್ಮಾನ ತೆಗೆದುಕೊಂಡುಬಿಟ್ಟಿದ್ದಾರೆ. It is not loud thinking as you just now said. ಇದರ ಕಾಂಟೆಕ್ಟ್ಸ್ ಏನು ಎನ್ನುವುದನ್ನು ಮಾತ್ರ ಇಲ್ಲಿ ತಮಗೆ ತಿಳಿಸುತ್ತಿದ್ದೇನೆ.

ಶ್ರೀ ಕೆ. ಪುಟ್ಟಸ್ವಾಮಿ.—ಮಾನ್ಯ ಸದಸ್ಯರಿಗೆ ನಾನು ಬಹಳ ಕೃತಜ್ಞನಾಗಿದ್ದೇನೆ. ನಾನು ಇಲ್ಲ ಒಂದು ವಿಚಾರವನ್ನು ಹೇಳುವುದನ್ನು ಮರೆತೆ. ಅಗ್ರಿಮೆಂಟು ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಇದರ ಬಗ್ಗೆ ಇನ್ನೂ ಅಖೈರು ತೀರ್ಮಾನವೇ ಆಗಿಲ್ಲ ಎಂದು ಹೇಳಿದರು. ಯಾವುದಾದರೂ ಒಂದು ಒಪ್ಪಿಗೆ ಕರಾರು ಆಗಬೇಕಾದರೆ ಉಭಯ ಪಕ್ಷಗಳವರೂ ಮೊದಲು ಒಪ್ಪಬೇಕು. ಇಲ್ಲಿ ಉಭಯ ಪಕ್ಷಗಳೂ ಒಪ್ಪುವ ಸ್ಥೇಜೇ ಬಂದಿಲ್ಲ. ಹಾಗೂ ಕಾಂಗ್ರೆಸ್ಸು ವಸ್ತುಪ್ರದರ್ಶನಕ್ಕೆ ಕೊಡಬೇಕೇ ಎನ್ನುವುದು ಇನ್ನೂ ಅಖೈರು ತೀರ್ಮಾನವಾಗಿಲ್ಲ. ಮಾನ್ಯ ದೇವರಾಜ ಅರಸಿನವರು ಆಗಲೇ ಹೇಳಿದಂತೆ ಇನ್ನೂ ಅವರನ್ನು ಯಾರು ಕನ್‌ನಲ್ಲೇ ಮಾಡಿಲ್ಲ. ಇನ್ನು ಮಾನ್ಯ ಸದಸ್ಯರಾದ ಶ್ರೀ ಗೋಪಾಲ ಗೌಡರು ಇನ್ನೊಂದು ವಿಚಾರ ಹೇಳಿದರು. ಕಾನೂನು ಪ್ರಕಾರ ಈ ಜಾಗವನ್ನು ಕೊಡಲು ಅವಕಾಶವಿದೆಯೇ ಈಗ ಯಾವ ರೀತಿಯಾಗಿ ವಸ್ತು ಪ್ರದರ್ಶನ ನಡೆಯಲು ಅವಕಾಶ

ಕೊಟ್ಟಿದ್ದೀರಿ. ದೀರ್ಘಾವಧಿ ಕಾಲಕ್ಕೆ ಕೊಟ್ಟಿದ್ದಾರೆಯೇ ಮತ್ತು ಎಷ್ಟು ಬಾಡಿಗೆ ಕೊಡುತ್ತಿದ್ದಾರೆ ಎಂದು ಕೇಳಿದರು. ಪ್ರತಿವರ್ಷವೂ ಯಾವ ರೀತಿಯಾಗಿ ಎಷ್ಟು ಕಾಲಕ್ಕೆ ಕೊಡಬೇಕು ಎಂದು ಮಾಡಿದ್ದಾರೋ ಆದೇ ಅವಧಿಗೆ ಬಾಡಿಗೆಗೆ ಈ ಸಾಲಗೂ ಅದನ್ನು ಅನುಸರಿಸಿಯೇ ಕೊಡುತ್ತಿದ್ದಾರೆ. ಅದರೆ ಇಲ್ಲ ನಾನು ಆಗಲೇ ತಿಳಿಸಿದಂತೆ ಇದರ ಬಗ್ಗೆ ಅಖೈರು ತೀರ್ಮಾನ ಮಾಡಿಲ್ಲ. ಇದರಲ್ಲಿ 99 ವರ್ಷಗಳಿಗೆ ಕೊಡಬೇಕೇ ಮೂವತ್ತು ವರ್ಷಗಳಿಗೆ ಕೊಡಬೇಕೇ ಅಥವಾ 50 ವರ್ಷಗಳಿಗೆ ಕೊಡಬೇಕೇ ಇಲ್ಲವೇ ಹತ್ತು ವರ್ಷಗಳಿಗೆ ಕೊಡಬೇಕೇ ಅಥವಾ ಇದಕ್ಕೂ ಕಡಿಮೆ ಅವಧಿಗೆ ಕೊಡಬೇಕೇ ಎನ್ನುವುದು ಯಾವುದೂ ಇನ್ನೂ ನಿಶ್ಚಿತವಾಗಿ ಆಗಿಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರೊಡನೆ ಇದರ ಬಗ್ಗೆ ಸಮಾಲೋಚನೆ ಮಾಡಲು ಮುಖ್ಯ ಮಂತ್ರಿಗಳು ಕ್ರಮ ತೆಗೆದುಕೊಂಡು ತೀರ್ಮಾನ ಮಾಡುತ್ತಾರೆ ಎಂದು ಆಗಲೇ ಹೇಳಲಾಗಿದೆ. ಇದಕ್ಕಿಂತ ಹೆಚ್ಚು ಇನ್ನೇನೂ ಹೇಳಬಯಸುವುದಿಲ್ಲ. ಮಾನ್ಯ ಸದಸ್ಯರಿಗೆ ನಾನು ಇಷ್ಟು ಮಾತ್ರ ಆಶ್ವಾಸನೆ ಕೊಡುತ್ತೇನೆ. ಆದುದರಿಂದ ಇದರ ಬಗ್ಗೆ ಹೆಚ್ಚು ಚರ್ಚೆ ಮಾಡದೇ ಇಲ್ಲಿರುವ ಮುಂದಿನ ಕಾರ್ಯಕ್ರಮಗಳನ್ನು ಮಾಡಲು ಒಳ್ಳೆಯ ವಾತಾವರಣವನ್ನು ಉಂಟು ಮಾಡಬೇಕು ಎಂದು ನಾನು ಅವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಸದಾಶಿವಪ್ಪ ಪಾಟೀಲ್(ದೇವದುರ್ಗ).—ಸ್ವಾಮೀ, ಇದರ ಬಗ್ಗೆ ನಾನು ತಮಗೆ ಒಂದು ವಿಚಾರ ಹೇಳುತ್ತೇನೆ. ಈ ಜಾಗವನ್ನು ಕಾಂಗ್ರೆಸ್ಸು ಪಕ್ಷಕ್ಕೂ ಕೊಡಬೇಡಿ, ವಿರೋಧ ಪಕ್ಷಕ್ಕೂ ಕೊಡಬೇಡಿ, ಹರಾಜು ಹಾಕಿ ಬಿಡಿ. ಆಗ ಯಾರು ಬೇಕಾದರೂ ತೆಗೆದುಕೊಳ್ಳಲಿ.

ಶ್ರೀ ಎನ್. ಹುಚ್ಚಮಾಸ್ತಿ ಗೌಡ (ಹುಲಿಯೂರುದುರ್ಗ).—ಇವೊತ್ತು, ಬೆಳಿಗ್ಗೆ ಮಾನ್ಯ ಮುಖ್ಯಮಂತ್ರಿಗಳು ಕೊಟ್ಟ ಹೇಳಿಕೆಯಂತೆ ಇದು ಇನ್ನೂ ತೀರ್ಮಾನವಾಗಿಲ್ಲ ಇದರ ಬಗ್ಗೆ ಎಲ್ಲ ರೊಡನೆ ಸಮಾಲೋಚನೆ ಮಾಡುತ್ತೇವೆ ಎಂದು ಹೇಳಿದ್ದಾರೆ. ಆದರೆ ಈಗ ನಮ್ಮ ಪಾರ್ಲಮೆಂಟರಿ ವ್ಯವಹಾರ ಶಾಖಾ ಸಚಿವರು ಹೇಳುವುದನ್ನು ಕೇಳಿದರೆ ಅದಕ್ಕೆ ತದ್ವಿರುದ್ಧವಾಗಿ ಕಾಣುತ್ತಿದೆ. ಇದರ ಬಗ್ಗೆ ತೀರ್ಮಾನವಾಗಿದೆ. ಇದರ ವಿವರಗಳನ್ನು ಮಾತ್ರ ಈಗ ಪರಿಶೀಲನೆ ಮಾಡಿ ನಿರ್ಧಾರ ಮಾಡಬೇಕು ಎಂದು ಹೇಳುತ್ತಾರೆ. ಇದನ್ನು ನೋಡಿದರೆ ಒಂದಕ್ಕೊಂದು ವ್ಯತ್ಯಾಸವಿರುವಂತೆ ಕಾಣುತ್ತದೆ, ಹಾಗಿರುವ ಪಕ್ಷಕ್ಕೆ ನಮ್ಮನ್ನು ಕನ್‌ಸಲ್ಟ್ ಮಾಡುವ ಅಗತ್ಯವೇ ಇಲ್ಲ. ಅದರ ವಿವರಗಳು ಮತ್ತು ಷರತ್ತುಗಳನ್ನು ಚರ್ಚೆ ಮಾಡುವುದಕ್ಕೆ ಬೇಕಾದರೆ ಇಲ್ಲಿರುವ ನಾವು ಎದುರು ಪಕ್ಷದವರು ಇದರಲ್ಲಿ ಭಾಗವಹಿಸಲು ಇಷ್ಟಪಡುವುದಿಲ್ಲ. ಈ ರೀತಿ ತೀರ್ಮಾನವಾಗಿರುವ ವಿಚಾರವನ್ನು ನಮ್ಮ ಜೊತೆಯಲ್ಲಿ ಕನ್‌ಸಲ್ಟ್ ಮಾಡುವ ಅಗತ್ಯವೇನೂ ಕಾಣುವುದಿಲ್ಲ. ಏನಾದರೂ ತೀರ್ಮಾನ ಮಾಡುವುದಕ್ಕೆ ಮುಂಚೆ ವಿಚಾರಗಳು ಇದ್ದರೆ ಆಗ ನಮ್ಮನ್ನು ಕನ್‌ಸಲ್ಟ್ ಮಾಡಿದ್ದರೆ ಅದರಿಂದ ಏನಾದರೂ ಉಪಯೋಗವಾಗುತ್ತಿತ್ತು.

ಶ್ರೀ ಸದಾಶಿವಪ್ಪ ಪಾಟೀಲ್.—ಇದಕ್ಕೆ ಸ್ವಾಮೀ ನಾನು ಹೇಳುತ್ತಿರುವುದು ಸರಕಾರದ ಪಕ್ಷದವಂಗೂ ಬೇಡ ಇತರ ವಿರೋಧ ಪಕ್ಷಗಳಿಗೂ ಬೇಡ ಇದನ್ನು ಹರಾಜು ಹಾಕಿಬಿಟ್ಟರೆ ಆಯಿತು.

ಶ್ರೀ ಕೆ. ಪುಟ್ಟಸ್ವಾಮಿ.—ಸ್ವಾಮೀ, ಮಾನ್ಯ ಸ್ನೇಹಿತರಾದ ಶ್ರೀಮಾನ್ ಹುಚ್ಚಮಾಸ್ತಿಗೌಡರು ಇದರ ಬಗ್ಗೆ ತೀರ್ಮಾನವಾಗಿದೆ. ನಾವು ಇದರಲ್ಲಿ ಏಕೆ ಭಾಗವಹಿಸಬೇಕು ಎಂದು ಹೇಳಿದರು. ಇದುವರೆಗೆ ಇಲ್ಲಿ ಚರ್ಚೆಯಾಗಿರುವಂತೆ ಈ ವಿಚಾರದಲ್ಲಿ ಇನ್ನೂ ಅಖೈರಾಗಿ ಯಾವ ತೀರ್ಮಾನವೂ ಆಗಿಲ್ಲ ಎಂದು ನಾನು ತಿಳಿಯುತ್ತೇನೆ. ಇದುವರೆಗೆ ಆದ ಚರ್ಚೆಯನ್ನೆಲ್ಲಾ ಕೂಲಂಕಷವಾಗಿ ನೋಡಿದರೆ ಸ್ಪಷ್ಟವಾಗಿ ಇದನ್ನು ಯಾರಿಗೆ ಕೊಡಬೇಕು ಎನ್ನುವುದು ಇನ್ನೂ ತೀರ್ಮಾನವಾಗಬೇಕಾಗಿದೆ ಅಂತಿಮವಾಗಿ ಯಾವ ತೀರ್ಮಾನವೂ ಆಗಿಲ್ಲ.

ಶ್ರೀ ಎಸ್. ಶಿವಪ್ಪ.—ಸ್ವಾಮಿ, ಇದರಲ್ಲಿ ಪಾರ್ಲಮೆಂಟರಿ ಶಾಖಾ ಸಚಿವರು ಈ ವಿಷಯವನ್ನು ಮತ್ತಷ್ಟು ಗೊಂದಲಕ್ಕೆ ಈಡು ಮಾಡುತ್ತಿದ್ದಾರೆ. ಮಾನ್ಯ ಅಧ್ಯಕ್ಷರ ಕೊಠಡಿಯಲ್ಲಿ ಇದರ ಬಗ್ಗೆ ಮಾತುಕತೆಗಳನ್ನು ಮಾಡಿದಾಗ ಹೇಳಿದ ವಿಚಾರಗಳಿಗೂ ಇಲ್ಲಿ ಹೇಳುತ್ತಿರುವುದಕ್ಕೂ ಅಜಗಜಾಂತರ ವ್ಯತ್ಯಾಸಗಳಿವೆ. ಮಾನ್ಯ ಮುಖ್ಯ ಮಂತ್ರಿಗಳು ಇನ್ನೂ ಯಾವ ತೀರ್ಮಾನಕ್ಕೂ ಬಂದಿಲ್ಲ ಎಂದು ಹೇಳುವಾಗ ಅವರು ಈ ಮಾತುಗಳೊಂದನ್ನೂ ತಿಳಿಸಲಿಲ್ಲ. ಇದರಿಂದ ಈ ಸಭೆಯ ಸದಸ್ಯರ ನಂಬಿಕೆಗೆ ಮೋಸ ಮಾಡಿ ಅವರು ಇಂದು ಈ ಮಾತನ್ನು ಹೇಳಿ ಈ ರೀತಿ ನಂಬಿಕೆ ದ್ರೋಹ ಮಾಡಿದ್ದಾರೆ. ಇವರು ಯಾವುದೋ ಬೇರೆ ಅರ್ಥ ಬರುವ ರೀತಿಯಲ್ಲಿ ಇಲ್ಲಿ ನಮಗೆ ಹೇಳುತ್ತಿದ್ದಾರೆ. ನಮ್ಮನ್ನು ಇಲ್ಲಿ ಇಕ್ಕಟ್ಟಿಗೆ ಸಿಕ್ಕಿಸುತ್ತಿದ್ದಾರೆ. ಇದನ್ನು ಅವರು ಸರಿಯಾಗಿ ಸೃಷ್ಟೀಕರಿಸಬೇಕು ಎಂದು ಹೇಳುತ್ತಿದ್ದೇನೆ.

ಶ್ರೀ ಎಂ. ಎಸ್. ಕೃಷ್ಣನ್.—ತೀರ್ಮಾನ ಮಾಡಿಬಿಟ್ಟಿದ್ದರೆ ಈ ಮನೆಯೊಳಗೆ ಇದನ್ನು ಚರ್ಚೆ ಮಾಡಿ ಪರೀಕ್ಷೆ ಮಾಡುವ ಪ್ರಶ್ನೆಯೇ ಬರುವುದಿಲ್ಲ. ಮತ್ತು ಇದರಲ್ಲಿ ನಾವು ಸಲಹೆ ಮಾಡುವುದೇನಿದೆ?

5-00 P.M.

Sri B. P. GANGADHAR.—This is a very serious matter. A categorical assurance must be given by the Government that this Government property would be retained for the State.

Mr. SPEAKER.—I think there is much confusion. I have been a very impartial listener of what is going on. What I have understood is, there is a sort of contemplation in the mind of the Government to give the property to the Congress if certain conditions are fulfilled. It is merely a contemplation; it is no decision. The Hon. Chief Minister made it completely clear and the impression I carry is that there is no decision to hand over the property to the Congress for the purpose of its occupation.

Sri C. DUGGAPPA.—Government have taken a decision. Please look into the records.

Sri H. N. NANJE GOWDA.—The Chair should not misinterpret the statement of the Minister or the opinion of the Government.

Mr. SPEAKER.—I have stated what has happened because there is confusion. I am not mis-interpreting anybody. I want the time of the House to be properly utilised.

Sri H. N. NANJE GOWDA.—The Leader of the Opposition should not be treated like that.

Mr. SPEAKER.—The Leader of the opposition is properly treated.

ಶ್ರೀ ಎಂ. ಎಸ್. ಕೃಷ್ಣನ್.—ಸ್ವಾಮಿ, ತಾವು ಕಾಂಚೆಂಪ್ಲೀಷನ್ ಎಂದು ಹೇಳಿದಿರಿ. ಮಾನ್ಯ ರಾಜಯ್ಯನವರೂ ಮತ್ತು ಮಾನ್ಯ ಪುಟ್ಟಸ್ವಾಮಿಯವರೂ ಬಹಳ ಸ್ಪಷ್ಟವಾಗಿ ಹೇಳಿದ್ದಾರೆ, ಡಿಸಿಷನ್ ತೆಗೆದುಕೊಂಡಿದೆ ಆದರೆ ನಟರ್‌ಮೆಂಟ್ ಆಗಿಲ್ಲ, ಅಗ್ರಿಮೆಂಟ್ ಬರೆದುಕೊಟ್ಟಿಲ್ಲ ಎಂದು. ನಾನು ತಿಳಿದುಕೊಂಡ ಹಾಗೆ ಕೊಡಬೇಕು ಎನ್ನುವ ತೀರ್ಮಾನ ಆಗಬೇ ಇದ್ದರೆ, ಶ್ರೀಮಾನ್ ಶಿವಪ್ಪನವರನ್ನಾಗಲಿ ಬೇರೆಯವರನ್ನಾಗಲೀ ಕೇಳುವ ಪ್ರಮೇಯ ಇದೆ. ಆದುದರಿಂದ ಡಿಸಿಷನ್ ತೆಗೆದುಕೊಳ್ಳಬೇಕೋ, ಬಿಡಬೇಕೋ ಎನ್ನುವುದನ್ನು ವಿರೋಧಪಕ್ಷದ ನಾಯಕರನ್ನು ಕರೆಸಿ ಅವರ ಜೊತೆಯಲ್ಲಿ ಚರ್ಚಿಸಿ ತೀರ್ಮಾನ ಮಾಡಿ ಇಲ್ಲದಿದ್ದರೆ ನಮಗೆ ಸಮಾಧಾನವಾಗುವುದಿಲ್ಲ.

ಶ್ರೀ ಡಿ. ದೇವರಾಜ್ ಅರಸ್ (ಹುಣಸೂರು).—ಈಗ ಸಭೆಯ ಮುಂದಿರತಕ್ಕಂಥ ವಿಚಾರ ನೋಡಿದರೆ ನಮಗಂತೂ ಇದು ಹೆಚ್ಚಿನ ಗೊಂದಲವಾಗಬಹುದು ಎಂದು ಕಾಣುತ್ತದೆ. ಕಾರಣ ಏನೆಂದರೆ ಶ್ರೀಮಾನ್ ಶಿವಪ್ಪನವರು ಹೇಳುವುದನ್ನೂ ಕೇಳಿದೆ ಮತ್ತು ಶ್ರೀಮಾನ್ ಪುಟ್ಟಸ್ವಾಮಿಯವರು 2—3 ಸಾರಿ ಹೇಳುವುದನ್ನೂ ಕೇಳಿದ್ದೇನೆ. ಈಗ ಶಿವಪ್ಪನವರೂ ಇದ್ದಾರೆ. ವಿರೋಧಪಕ್ಷದವರ ಅಭಿಪ್ರಾಯ ಇದುವರೆಗೆ ತಾವು ತಿಳಿದುಕೊಂಡಿರುವ ಹಾಗೆ ಸರ್ಕಾರ ಇನ್ನೂ ಅಂತ್ಯ ತೀರ್ಮಾನ ತೆಗೆದುಕೊಂಡಿಲ್ಲ ಅದಕ್ಕೆ ಪೂರ್ವಭಾವಿಯಾಗಿಯೇ ವಿರೋಧಪಕ್ಷದ ನಾಯಕರನ್ನು ಕೇಳುತ್ತೇವೆ ಈ ರೀತಿ ಮುಖ್ಯ ಮಂತ್ರಿಗಳು ಅಭಿಪ್ರಾಯ ಇಟ್ಟುಕೊಂಡಿದ್ದರು ಎಂದು ಅವರು ಹೇಳುತ್ತಾರೆ. ಅದು ಸರಿಯೇ? ಅದಕ್ಕೆ ನಮ್ಮ ಮಂತ್ರಿಗಳು ಹೇಳುತ್ತಾರೆ, ತೀರ್ಮಾನವನ್ನು ತೆಗೆದುಕೊಂಡಿದ್ದೇವೆ ಮತ್ತೇ ಆ ತೀರ್ಮಾನವನ್ನು ಯಾವರೀತಿ ಜಾರಿಗೆ ತರಬೇಕು, 30 ವರ್ಷಕ್ಕೋ, 20 ವರ್ಷಕ್ಕೋ, 5 ವರ್ಷಕ್ಕೋ, 5 ಗಂಟೆಗೋ ಎನ್ನುವುದನ್ನು ನಾವು ಆಲೋಚನೆ ಮಾಡೋಣ ಎಂದು. ಇದರ ಮೇಲೆ ಚರ್ಚೆ ಮಾಡುವುದಕ್ಕಿಂತ ಮುಖ್ಯಮಂತ್ರಿಗಳು ಇದರ ಬಗ್ಗೆ ಅಂತ್ಯ ತೀರ್ಮಾನ ತೆಗೆದುಕೊಂಡಿದ್ದಾರೆಯೇ ಎಂಬುದನ್ನು ಮೊದಲು ತಿಳಿದುಕೊಳ್ಳಬೇಕು. ತೀರ್ಮಾನ ವಾಗಬೇಕಾದರೆ ಉಭಯತ್ರರೂ ಕೂಡ ಒಪ್ಪಬೇಕು ಎಂದು ಹೇಳುವುದು ಅದರ ಅರ್ಥ.

ಆದುದರಿಂದ ಈ ಸಭೆಯನ್ನು 10 ನಿಮಿಷ ಅಡ್ಜರ್ನ್ ಮಾಡಿ ಒಬ್ಬರಿಗೊಬ್ಬರು ಸಮಲೋಚನೆ ಮಾಡಿಕೊಂಡು ಅವರು ತೀರ್ಮಾನ ತೆಗೆದುಕೊಂಡಿದ್ದಾರೆಯೇ ಇಲ್ಲವೇ ಎನ್ನುವುದನ್ನು ತಿಳಿದುಕೊಂಡು ಆಮೇಲೆ ಅವರು ಸ್ಪಷ್ಟವಾಗಿ ಹೇಳಲಿ.

† ಶ್ರೀ ಜಿ. ದುಗ್ಗಪ್ಪ.—ಅಧ್ಯಕ್ಷರೇ, ಇದು ಬಹಳ ವಿಚಿತ್ರವಾದ ಪರಿಸ್ಥಿತಿ ಎಂದು ಕಾಣುತ್ತದೆ. ಇದಕ್ಕೆ ತೆಲುಗಿನಲ್ಲಿ ಒಂದು ಗಾದೆ ಇದೆ. ಅದು ಏನೆಂದರೆ ಕುದುರೆಗಿಂತ ಲದ್ದಿ ಬರುಸು ಎಂಬಂತೆ ಆಗಿದೆ. ಶ್ರೀಮಾನ್ ನಿಜಲಿಂಗಪ್ಪನವರು ಇದ್ದರೆ ಈ ರೀತಿ ಅವ್ಯವಹಾರ ಮಾಡುತ್ತಾ ಇರಲಿಲ್ಲ. ಶ್ರೀಮಾನ್ ನಿಜಲಿಂಗಪ್ಪನವರು ಎ.ಐ.ಸಿ.ಸಿ. ಅಧ್ಯಕ್ಷರಾಗಿದ್ದರೂ ಸಹ ಅವರು ಈ ರೀತಿ ಡಿಸಾಫ್ ಮಾಡುತ್ತಾ ಇರಲಿಲ್ಲ. ಏನು ಸ್ವಾಮಿ, ಇವರು ಅವರನ್ನು ಮೀರಿಸಿ ಹೋರಟಿದ್ದಾರೆ. ಶ್ರೀಮಾನ್ ರಾಚಯ್ಯನವರು ಉತ್ತರ ಕೊಡುವಾಗ 30 ವರ್ಷ ಎಂದು ಹೇಳಿ ಕೊನೆಗೆ ನಾನು ತಪ್ಪು ಹೇಳಿದೆ ಅದನ್ನು ಕರೆಕ್ಟ್ ಮಾಡಿದೆ ಎಂದು ಹೇಳಿದರು. ಈ ರೀತಿ 30 ವರ್ಷಕ್ಕೆ, 99 ವರ್ಷಕ್ಕೆ ಆವರು ಕೇಳಿದರು ಕೊಡುವುದಕ್ಕೆ ತಯಾರಿದ್ದೀರಾ? ಶ್ರೀಮಾನ್ ಪುಟ್ಟಸ್ವಾಮಿಯವರು ತಿಂಗಳು ಎಂದು ಹೇಳಿದರು. 99 ವರ್ಷದ ಮೇಲೂ ಕಾಂಗ್ರೆಸ್ಸಿನವರು ಇರುತ್ತಾರೆಯೇ! ವಿರೋಧ ಪಕ್ಷದವರ ಹತ್ತಿರ ಮಾತನಾಡಬೇಕು ಎನ್ನುವ ಅಭಿಪ್ರಾಯ ಇದ್ದರೆ ನೀವು ತೀರ್ಮಾನ ತೆಗೆದು ಕೊಳ್ಳುವುದಕ್ಕಿಂತ ಮುಂಚಿತವಾಗಿ ಕರೆಸಿಕೊಂಡು ಮಾತನಾಡಿ. ಮನಸ್ಸಿನಲ್ಲಿ ಒಂದು, ಹೊರಗಡೆ ಒಂದು ಈ ರೀತಿಯು ದ್ವಂದ್ವ ಭಾಷಣದಲ್ಲಿ ಅರ್ಥವಿಲ್ಲ. ಇದು ನನ್ನ ಸ್ಪಷ್ಟವಾದ ನಿಲುವು.

ಶ್ರೀ ಎಂ. ನಾಗಪ್ಪ (ರಾಯಚೂರು).—ಸ್ವಾಮಿ, ಈಗ ಏನು ಗೊಂದಲ ಉಂಟು ಮಾಡಿದೆ ಈಗ ಏನು ನಡೆಯುತ್ತಿದೆ ಅದನ್ನು ನೋಡಿದರೆ ನಾವು ಮಿನ್‌ಅಸ್ಪೆಹೆನ್‌ಷನ್‌ನಲ್ಲಿ ಇದ್ದೇವೆ ಎಂದು ನನಗನ್ನಿಸುತ್ತದೆ. ಈ ಪ್ರಶ್ನೆಗೆ ಉಪಮಂತ್ರಿಗಳು ಉತ್ತರ ಕೊಡುವ ಕಾಲಕ್ಕೆ ಇಂಟರ್‌ವೀನ್ ಮಾಡಿ ಮಾನ್ಯ ಸಚಿವರಾದ ರಾಚಯ್ಯನವರು ಹೇಳಿದರು, ಮೊದಲು ಕೊಟ್ಟಂಥ ಉತ್ತರ ಅಲ್ಲಿಂದೀಚೆಗೆ ಇದರ ಬಗ್ಗೆ ತೀರ್ಮಾನ ತೆಗೆದುಕೊಂಡಿದ್ದೇವೆ, ಇದನ್ನು ಸಬ್‌ಸ್ಟಿಟ್ಯೂಟ್ ಅನ್ಸರ್ ಎಂದು ತೆಗೆದುಕೊಳ್ಳಬೇಕು ಎಂದು ತಿಳಿಸಿ ಟಮ್ಸ್ ಅಂಡ್ ಕಂಡೀಷನ್ಸ್ ಮಾತ್ರ ಉಳಿದಿದೆ ಎನ್ನುವ ಮಾತನ್ನು ಹೇಳಿದರು. ಈಗ ಅವರು ಹೇಳಿದ ಮಾತಿನಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಸ್ಪಷ್ಟವಾಗಿ ಸಭೆಗೆ ಹೇಳಲೇ ಇಲ್ಲ. ಅವರು ಸ್ಪಷ್ಟವಾಗಿ ಹೇಳಲಿ ಎಂದರೆ ಅಂತಿಮ ನಿರ್ಣಯ ತೆಗೆದು ಕೊಳ್ಳುವುದಕ್ಕೆ ಮುಂಚಿತವಾಗಿ ನಾನು ವಿರೋಧಪಕ್ಷದ ಎರಡ್ಮೂ ನಾಯಕರನ್ನು ಕರೆಸಿ ಕೇಳಿ ಟರ್ಮ್ಸ್ ಅಂಡ್ ಕಂಡೀಷನ್ಸ್ ಸೆಟಲ್ ಮಾಡುತ್ತೇನೆ ಎಂದು ಹೇಳಿದ್ದಾರೆ. ಶ್ರೀಮಾನ್ ಪುಟ್ಟಸ್ವಾಮಿಯವರು ಆ ಮಾತನ್ನು ಸ್ಥಿರಪಡಿಸಿದ್ದಾರೆ. ಆದಕ್ಕಾಗಿ ಈ ಸಭೆಯಲ್ಲಿ ಈ ದೃಷ್ಟಿಯಿಂದ ಮಾನ್ಯ ಮಂತ್ರಿಗಳು ಒಬ್ಬರು ಒಂದು ತರಹ ಉತ್ತರ, ಇನ್ನೊಬ್ಬರು ಇನ್ನೊಂದು ತರಹ ಉತ್ತರ ಕೊಟ್ಟು ಪರಿಣಾಮವಾಗಿ ಶಬ್ದಗಳ ಜಾಲದಲ್ಲಿ ನಮ್ಮನ್ನು ಹಾಕಿ ನಮ್ಮನ್ನೆಲ್ಲ ಬೇರೆ ಮಾರ್ಗಕ್ಕೆ ತೆಗೆದುಕೊಂಡು ಹೋಗತಕ್ಕ ವ್ಯವಸ್ಥೆಯನ್ನುಂಟುಮಾಡಿದ್ದಾರೆ. ಅದನ್ನು ಬಹಳ ಸಣ್ಣ ವಿಷಯ ಎಂದು ತಾವು ತಿಳಿದಿರಬಹುದು. ಹಣಕಾಸು ಪಟ್ಟಿಯಷ್ಟೇ ಇದ್ದೂ ಬಹಳ ಮುಖ್ಯವಾದುದು ಎಂದು ನಾನು ತಿಳಿದುಕೊಂಡಿದ್ದೇನೆ. ಕೋಟಿಗಟ್ಟಲೆ ಬಾಳತಕ್ಕ ಆಸ್ತಿಯನ್ನು ಸರ್ಕಾರದವರು ತಮ್ಮ ಪಕ್ಷಕ್ಕೆ ಜಮೀನನ್ನು ಕೊಡಲು ತೀರ್ಮಾನ ಮಾಡಿದ್ದಾರೆ. ಕಾಂಗ್ರೆಸ್ ವರ್ಕಿಂಗ್ ಕಮಿಟಿ ಹೇಳಿ ದಂತೆ ನಮ್ಮ ಸರ್ಕಾರ ನಡೆದಿದೆ ಎಂದು ತಿಳಿದುಕೊಳ್ಳತಕ್ಕ ಪರಿಸ್ಥಿತಿಯಲ್ಲಿ ಅವರಿದ್ದಾರೆ. ಅಂಥ ರೀತಿಯಲ್ಲಿ ಅವರು ಏನೋ ಮಾಡಿಕೊಂಡಿದ್ದಾರೆ ಎನ್ನುವ ಪರಿಸ್ಥಿತಿ ಇದೆ. ಇಂಥ ಪರಿಸ್ಥಿತಿಯಲ್ಲಿ ಈ ಸಭೆಯ ನಿರ್ಣಯ ತಿಳಿದು ನಿರ್ಣಯ ಮಾಡಲಕ್ಕೆ ಸಾಧ್ಯವೇ ಎಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದರು. ಅಲ್ಲದೆ ಇದು ಒಂದು ಪ್ರಿಸಿಡೆಂಟ್ ಆಗಕೂಡದು, ಅಂಥ ಪ್ರಿಸಿಡೆಂಟ್ ಆಗುವುದಕ್ಕೆ ಅವಕಾಶ ಕೊಡಬಾರದು ಎಂದು ಹೇಳಿದರು. ಅವರು ರಾಜರಂತೆ ಮಾತನಾಡತಕ್ಕುದಲ್ಲ. He is subordinate to this House. ಸಭೆಯ ನಿರ್ಣಯವನ್ನು ಅವರು ತಲೆಯ ಮೇರೆ ಹೊತ್ತು ಕೊಂಡು ಹೋಗಬೇಕಾಗುತ್ತದೆ. ವಾಸ್ತವವಾಗಿ ಅವರು ಒಂದು ಪಕ್ಷವನ್ನು ಮಾತ್ರ ಈ ಸಭೆಯಲ್ಲಿ ಪ್ರತಿನಿಧಿಸುತ್ತಿಲ್ಲ. ಇಡೀ ಸಭೆಯು ಎಲ್ಲ ಸದಸ್ಯರು, ವಿರೋಧಪಕ್ಷದಲ್ಲಿ ಇದ್ದವರು, ಆ ಕಡೆ ಆಳುವ ಪಕ್ಷದಲ್ಲಿರುವವರು ಎಲ್ಲರಿಗೂ ಸಭಾ ನಾಯಕರೇ ಹೊರತು ಕಾಂಗ್ರೆಸ್ ಪಕ್ಷದ ನಾಯಕರು ಮಾತ್ರವಲ್ಲ. ಹಾಗೆ ಆಗುವುದಾದರೆ ಲೀಡರ್ ಆಫ್ ದಿ ಹೌಸ್ ಎನ್ನುವ ಮಾತನ್ನು ತೆಗೆದುಹಾಕ ಬೇಕು ಅಥವಾ ತಿದ್ದುಪಡಿ ಮಾಡಬೇಕು. ಶ್ರೀ ಎಂ. ಎನ್. ಕೌಲ್ ಅವರ ಪ್ರಾಕ್ಟೀಸ್ ಅಂಡ್ ಪ್ರೊಸೀಜರ್ ಎಂಬ ಪುಸ್ತಕದ 104ನೇ ಪುಟದಲ್ಲಿ 'ಲೀಡರ್ ಆಫ್ ದಿ ಹೌಸ್' ಅವರ ಜವಾಬ್ದಾರಿಗಳೇನು ಎನ್ನುವ ವಿಷಯವಾಗಿ ಕೆಲವು ಮಾತುಗಳನ್ನು ಹೇಳಿದ್ದಾರೆ. ಅದನ್ನು ಓದುತ್ತೇನೆ :

"The responsibility of the Leader of the House is not only to the Government and its supporters in the House but to the

(ಶ್ರೀ ಎಂ. ನಾಗಪ್ಪ)

Opposition and the House as a whole. He maintains liaison between the Government and the Opposition groups in the House. He is the guardian of the legitimate rights of the Opposition as well as those of the Government. As such, he should be among the foremost champions of the rights of the House as a whole and see that the House is not denied, despite pressure from any quarter, its rightful opportunities.

The Leader of the House, it has been aptly said, should possess an intuitive instinct about what is going on in the minds of the members of both sides, and in case of any trouble brewing, he should be able to estimate the nature and extent of the commotion. When there is a strong parliamentary pressure on any matter, especially when it comes from both sides, he must be ready to bend to it."

ಯಾವುದಾದರೂ ಒಂದು ವಿಷಯವನ್ನು ಈ ಸಭೆಯಲ್ಲಿ ಒತ್ತಿ ಹೇಳಿ ಸರ್ಕಾರ ಅನ್ಯಾಯ ಮಾಡುತ್ತಿದೆ ಎನ್ನುವ ಪರಿಸ್ಥಿತಿಯಲ್ಲಿ, ವಿರೋಧಪಕ್ಷದವರೆಲ್ಲ ಒಟ್ಟಾಗಿ ಧರಣಿಯನ್ನು ಕೊಡಬೇಕು ಎಂದು ಕೇಳಿದ ಕಾಲಕ್ಕೆ ಇದು ಒಂದು ಪ್ರಿಸಿಡೆಂಟ್ ಆಗಬಾರದು, ಅದನ್ನು ಒಪ್ಪಲಿಕ್ಕೆ ತಯಾರಿಲ್ಲ ಎನ್ನುವ ಮಾತನ್ನು ಅವರು ಪಾಪನು ತೆಗೆದುಕೊಳ್ಳಬೇಕು. ಅದು ಅವರ ಕರ್ತವ್ಯ. ವಿರೋಧ ಪಕ್ಷದವರು ಹೇಳುವ ಇಂಥ ಮಾತುಗಳನ್ನು ಅವರು ಸ್ವಾಗತಿಸಬೇಕು, ಅದರಂತೆ ವರ್ತಿಸಬೇಕು, ಅದರಂತೆ ಕೆಲಸಮಾಡಬೇಕು. ಈಗ ಸಭೆಯಲ್ಲಿ ಬಂದಿರುವ ವಿಷಯದ ಬಗ್ಗೆ ಭಾಷಣದ ಗೊಂದಲದಲ್ಲಿ ಸ್ಪಷ್ಟವಾಗಿ ಹೇಳಿಲ್ಲ. ವಿರೋದಪಕ್ಷದ ಎಲ್ಲ ಪ್ರಮುಖರನ್ನೂ ಕರೆಸಿ, ಮಾತನಾಡಿ ಅವರ ನಿರ್ಣಯ ತೆಗೆದುಕೊಂಡು ಅವರು ಸರಿ ಎಂದರೆ ಮಾತ್ರ ಅದನ್ನು ಒಪ್ಪುತ್ತೇವೆ, ಇಲ್ಲದೆ ಇದ್ದರೆ ಕೈ ಬಿಡುತ್ತೇವೆ ಎನ್ನುವ ಸ್ಪಷ್ಟವಾದ ಆಶ್ವಾಸನೆಯನ್ನು ಈ ಸಭೆಗೆ ಅವರು ಕೊಡಬೇಕು. ದೇಶದ ಹಿತದೃಷ್ಟಿಯಿಂದ ನಾವು ಮಾತನಾಡುತ್ತಿದ್ದೇವೆ. ಅದಕ್ಕಾಗಿ ಉಪಯೋಗವಾಗಿರುವ ಮೂರು ಗಂಟೆ ಸಮಯ ಏನೋ ವ್ಯರ್ಥವಾಗಿ ಕಳೆದಿದ್ದೇವೆ ಎನ್ನುವ ಅಭಿಪ್ರಾಯವನ್ನು ಪಡಬಾರದು. ಇದು ದೊಡ್ಡ ಆತ್ಮೀಯ ಪ್ರಶ್ನೆ ಇದೆ. ಅದಕ್ಕಾಗಿ ದಯವಿಟ್ಟು ಮಾನ್ಯ ಮುಖ್ಯ ಮಂತ್ರಿಗಳಾಗಲೀ, ಡಾಯಿಂಟ್ ರೆಸ್ಪಾನ್ಸಿಬಿಲಿಟಿ ಇದ್ದರೆ ಯಾರಾದರೂ ಮಂತ್ರಿಯವರು ಎದ್ದು ಈ ವಿಷಯವನ್ನು ಪುನರಪಿ ಹೊಸದಾಗಿ ಪರಿಶೀಲಿಸುತ್ತೇವೆ ಎನ್ನುವ ವಿಷಯವನ್ನು ಸ್ಪಷ್ಟಪಡಿಸಿದರೆ ಮುಂದಿನ ವ್ಯವಹಾರ ನಡೆಯಬಹುದು. ಇಲ್ಲವಾದರೆ 1967ರಲ್ಲಿ ನಡೆದಂತೆ ಪರಿಸ್ಥಿತಿ ಬರಬಹುದು. ಆ ರೀತಿ ಆಗಬಾರದು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

Mr. SPEAKER:—I have heard the Hon. Member He has raised various points regarding the duties of the Leader of the House. I request the hon. Member to pass on the book to me. I shall go through it and also the proceedings and give my considered ruling on the points raised by him.

† ಶ್ರೀ ಎಚ್. ಎನ್. ನಂಜೇಗೌಡ.—ನಾನೊಂದು ಕ್ರಿಯಾರೋಪವನ್ನು ಸೂಚಿಸುತ್ತೇನೆ ಶ್ರೀ ಕೆ. ಪುಟ್ಟಸ್ವಾಮಿಯವರು ಮಂತ್ರಿಗಳಾಗಿ ಇಲ್ಲಿ ಏನಾದರೂ ಹೇಳುವುದು ಲೋಪವಾಗುತ್ತದೆ. ಅದಕ್ಕೆ ಕಾರಣ ಹೇಳುತ್ತೇನೆ. ಅಧ್ಯಕ್ಷರು ಸರಕಾರದ ಅಭಿಪ್ರಾಯ ಬದಲಾಯಿಸಿ ಹೇಳಬಾರದು ಎಂದೇನು ಹೇಳಿಲ್ಲ ಅದಕ್ಕೆ ವಿರಾದ ವ್ಯಕ್ತಪಡಿಸುತ್ತೇನೆ. ಸಭಾಧ್ಯಕ್ಷರು ಹೇಳಿದ್ದರಲ್ಲಿ ನನಗೆ ಗೌರವವಿದೆ. ಮುಖ್ಯ ಮಂತ್ರಿಗಳು ತೀರ್ಮಾನವಾಗಿಲ್ಲವೆಂದು ಹೇಳಿದರೆಂದು ತಾವು ಹೇಳಿದಿರಿ. ತೀರ್ಮಾನಮಾಡುವಾಗ ವಿರೋಧ ಪಕ್ಷವನ್ನು ನಂಬಿಕೆಗೆ ತೆಗೆದುಕೊಂಡು ತೀರ್ಮಾನ ಮಾಡುತ್ತಾರೆ ಎಂದು ಹೇಳಿದರು. ಹಾಗಿರುವಾಗ ಇನ್ನೊಬ್ಬ ಮಂತ್ರಿಗಳು ತೀರ್ಮಾನವಾಗಿದೆ ಎಂದು ತದ್ವಿರುದ್ಧವಾದ ಸಂಗತಿ ಹೇಳಿ ಈ ಸಭೆಯನ್ನು ತಪ್ಪುಮಾರ್ಗಕ್ಕೆ ಎಳೆಯುವುದು ಸರಿಯಿಲ್ಲ. ಮುಖ್ಯ ಮಂತ್ರಿಗಳ ಹೇಳಿಕೆ ತಪ್ಪಾಗಿರಬಹುದು. ಅಧ್ಯಕ್ಷರು ಮುಖ್ಯ ಮಂತ್ರಿಗಳು ಹೇಳಿರುವುದು ನಿಜ ಎಂದು

ಹೇಳಿದರು. ಆದರೆ ಅವರು ಹೇಳಿರುವುದು ಸತ್ಯಕ್ಕೆ ದೂರವಾದುದು, ತಪ್ಪು ದಾರಿಗೆ ಎಳೆಯಲು ಪ್ರಯತ್ನ ಪಟ್ಟಿದ್ದಾರೆ. ಮಂತ್ರಿಗಳಾಗಿ ಮಾತನಾಡುವ ಹಕ್ಕು ಶ್ರೀ ಪುಟ್ಟಸ್ವಾಮಿಯವರಿಗಿಲ್ಲ, ಅವರು ಮಾತನಾಡುವುದಾದರೆ ಸಾಮಾನ್ಯ ಸದಸ್ಯರಾಗಿ ಮಾತನಾಡಬೇಕು. ಮಂತ್ರಿಗಳಾಗಿ ಅವರು ಹೇಳುವುದಾದರೆ ಅವರು ತಾವು ಕೊಟ್ಟಿರುವ ಅಭಿಪ್ರಾಯವನ್ನು ವಾಪಸ್ಸು ಪಡೆದು ತಾವು ಹೇಳಿರುವುದು ಸತ್ಯ ಸಂಗತಿಯಲ್ಲ ಎಂದು ಒಪ್ಪಿಕೊಂಡು ಮಾತನಾಡಬೇಕು. ಇಲ್ಲದಿದ್ದರೆ ಅವರು ಮಾತನಾಡುವುದು ಬೇಕಾಗಿಲ್ಲ.

† SRI K. H. PATIL.—Sir, I agree with the hon. Member Sri H. N. Nanje Gowda. The Hon. Minister Sri Puttaswamy might have told the truth and the Hon. Chief Minister might not have told the truth. The Hon. Minister Sri Rachaiah said that the Cabinet has taken a decision. There is a little difference between what the Chief Minister said and what Sri Rachiah said and Sri Puttaswamy has made it clear. After hearing all the three Ministers, I feel that Sri Puttaswamy may be correct and that the Chief Minister and Sri Rachiah are trying to hide something from this House. So, we are in a confusion. I therefore appeal to the Chair to call upon the Chief Minister to produce all the records that are relevant for the purpose. This site has been given to the Congrees and Congress is not a registered institution ; it has no legal entity. It may be a political party but it has no legal basis to own property. All these things are quite necessary to come to a conclusion. When all the records are placed before us, we will express our views, we will come to a decision and we will direct the Government. If we suspect the bona fides of the Government, we will try to dismiss this Ministry on this ground. This is another Rampriya deal. So, every material should be placed before the House.

ಶ್ರೀ ಕೆ. ನಂಗನಗೌಡ (ಲಂಗ್ಸುಗೂರು).—ಇಲ್ಲಿ ಶ್ರೀ ರಾಜಯ್ಯನವರಾಗಲಿ ಅಥವ ಶ್ರೀ ಪುಟ್ಟಸ್ವಾಮಿಯವರಾಗಲಿ ಸುಭಾಷ್ ನಗರದಲ್ಲಿರುವ ಜಮೀನನ್ನು ಲೀಜ (lease) ಕೊಡುವ ಬಗ್ಗೆ ಆರ್ಡರು ಮಾಡಿದ್ದಾರೆ ಅಂತಾ ಹೇಳಿದರು. ಆದುದರಿಂದ ಈ ಸಭೆಯು ಯಾವ ಸದಸ್ಯರೂ ಕೂಡ ತಪ್ಪಭಿಪ್ರಾಯ ಪಡುವುದಕ್ಕೆ ಅವಕಾಶವಿಲ್ಲ. ಏಕೆಂದರೆ ಈ ಜಮೀನನ್ನು ಲೀಜ್ ಮೇಲೆ ಕೊಡಲು ಸರಕಾರ ತೀರ್ಮಾನಮಾಡಿದೆ, ಅದು ಯಾವ ಉದ್ದೇಶಕ್ಕೆ ಬೇಕಾದರೂ ಇರಲಿ. ಶ್ರೀ ಪುಟ್ಟಸ್ವಾಮಿಯವರು ಮತ್ತು ಸಂಬಂಧಪಟ್ಟವರು ಈ ಬಗ್ಗೆ ನಿರ್ಣಯವಾಗಿದೆ ಎಂದು ಹೇಳಿದರೇ ಹೊರತು ಅಂತಿಮ ತೀರ್ಮಾನವಾಗಿದೆ ಮತ್ತು ಕೊಡಬೇಕೆಂದು ಆರ್ಡರಾಗಿದೆ ಎಂದು ಹೇಳಲಿಲ್ಲ. ಇದಕ್ಕೆ ಈ ಮನೆಯ ಲೀಡರ್ ಅಂದರೆ ಮುಖ್ಯ ಮಂತ್ರಿಗಳು ಅಂತಿಮ ತೀರ್ಮಾನ ತೆಗೆದುಕೊಳ್ಳುವುದಕ್ಕೆ ಮುಂಚೆ ವಿರೋಧಪಕ್ಷದ ನಾಯಕರನ್ನು ಕೇಳಿ ತೀರ್ಮಾನ ತೆಗೆದುಕೊಳ್ಳುವುದಾಗಿ ಸೂಕ್ಷ್ಮವಾಗಿ ಹೇಳಿರುವುದು ಸರಿಯಾಗಿದೆ. ಶ್ರೀ ಪುಟ್ಟಸ್ವಾಮಿಯವರು ಲೀಸ್ ಮೇಲೆ ಕೊಡುವುದಕ್ಕೆ ನಿರ್ಣಯವಾಗಿದೆ ಎಂದು ಹೇಳಿದ್ದಾರೆ. ಆದರೆ ಅಂತಿಮ ತೀರ್ಮಾನ ತೆಗೆದುಕೊಂಡಿದೆಯೆಂದು ಹೇಳಿಲ್ಲ. ಆದುದರಿಂದ ತಪ್ಪು ಅಭಿಪ್ರಾಯವೇನೂ ಹೊರಬಿದ್ದಿಲ್ಲ ಕೇವಲ ಲೀಸ್ ಮೇಲೆ ಕೊಡುವುದಕ್ಕೆ ನಿರ್ಣಯವಾಗಿದೆ ಎಂದು ಮಾತ್ರ ಹೇಳಿದ್ದಾರೆ. ಆದುದರಿಂದ ಈ ಚರ್ಚೆಯನ್ನು ಇಲ್ಲಿಗೇ ಮುಕ್ತಾಯಮಾಡಬೇಕು. ಮುಂದೆ ಬೆಳೆಸಬಾರದು.

ಶ್ರೀ ನದಾಶಿವಪ್ಪ ಪಾಟೀಲ್.—ಕಾಂಗ್ರೆಸ್ ಪಕ್ಷಕ್ಕೆ ಕೊಡಬೇಕೆಂದು ತೀರ್ಮಾನವಾಗಿದೆ, ಬೇರೆ ಪಕ್ಷಗಳಿಗೆ ಕೊಡುವ ಇಚ್ಛೆಯಿಲ್ಲ. ನಿರ್ಣಯವನ್ನು ಯಾವ ಆಧಾರದಮೇಲೆ ತೆಗೆದುಕೊಂಡಿದೆ ? ಯಾವ ವಿಷಯದ ಮೇಲೆ ನಿರ್ಣಯ ಕೈಕೊಳ್ಳಲಾಗಿದೆ ? ಕಾಂಗ್ರೆಸ್ ಪಕ್ಷದವರಿಗೇ ಕೊಡಬೇಕೆಂದು ಹೇಗೆ ತೀರ್ಮಾನ ಮಾಡಲಾಯ್ತು ? ರೋಡ್ ಟ್ರಾನ್ಸ್‌ಪೋರ್ಟ್ ಇಲಾಖೆಗೆ ಕೊಟ್ಟಿರುವುದಕ್ಕೆ ನಮ್ಮ ಅಭ್ಯಂತರವಿಲ್ಲ.

ಶ್ರೀ ಎಚ್. ಎನ್. ನಂಜೇಗೌಡ.—ಅಧ್ಯಕ್ಷರು ರೂಲಿಂಗ್ ಕೊಡಲಿಲ್ಲ.

ಅಧ್ಯಕ್ಷರು.—ಕೊಡುತ್ತೇನೆ.

ಶ್ರೀ ಎಚ್. ಎನ್. ನಂಜೇಗೌಡ.—ನಾನು ವಿಶದವಾಗಿ ಹೇಳಿದ್ದೇನೆ. ನಾನು ಆಡಿದ ಕೆಲವು ಮಾತುಗಳಿಗೆ ವಿಷಾದವನ್ನು ವ್ಯಕ್ತಪಡಿಸಿದ್ದೇನೆ. ಅಧ್ಯಕ್ಷರ ಬಗ್ಗೆ ಬಗಿಯಾಗಿ ಮಾತನಾಡಿದ್ದಕ್ಕೆ ವಿಷಾದಿಸುತ್ತೇನೆ. ಈ ಸಭೆಯನ್ನು ತಪ್ಪುದಾರಿಗೆ ಎಳೆಯುವುದಕ್ಕೆ ಅವಕಾಶವಿರಬಾರದು. ಮುಖ್ಯ ಮಂತ್ರಿಗಳ ಸ್ಟೇಟ್‌ಮೆಂಟ್ ಇದೆ. ಅಧ್ಯಕ್ಷರು ತಪ್ಪು ಜಾರಿಗೆ ಎಳೆದರು ಎಂದು ಅನುಮಾನ ಬರ ಬಾರದು. ಇದನ್ನು ಗಮನಿಸಬೇಕು. ಶ್ರೀ ಪುಟ್ಟಸ್ವಾಮಿಯವರು ಆಗಾಗ್ಗೆ ಎದ್ದುನಿಂತು ಈ ವಿಚಾರದಲ್ಲಿ ಬಾಯಿಹಾಕುವುದಕ್ಕೆ ಅವಕಾಶ ಕೊಡಬಾರದು.

† ಶ್ರೀ ಬಿ. ಪರಮೇಶ್ವರಪ್ಪ (ಹೊಳಲ್ಕೆರೆ).—ಇದುವರೆಗೆ ಮಂತ್ರಿಗಳು ಯಾವರೀತಿಯಲ್ಲಿ ತಪ್ಪುದಾರಿಗೆ ಎಳೆದಿದ್ದಾರೆ ಎಂಬುದನ್ನು ಬಹಳ ಮಂದಿ ಸ್ಪಷ್ಟವಾಗಿ ಹೇಳಿದ್ದಾರೆ. ಬಹಳಮಟ್ಟಿಗೆ ಇದುವರೆಗೆ ಕಾಂಗ್ರೆಸ್ ಪಕ್ಷ ಒಗ್ಗಟ್ಟಿನಿಂದ ಮತ್ತು ಶಿಸ್ತಿನಿಂದ ಇದೆ, ವಿರೋಧಪಕ್ಷ ಹಾಗಿಲ್ಲ ಎಂದು ಹೇಳಿದ್ದಾರೆ. ನಿಜವಾಗಿಯೂ ಹೇಳುವುದಾದರೆ ಇಂದು ಮೂರು ಜನ ಮಂತ್ರಿಗಳು ಉತ್ತರ ಹೇಳಿದ್ದಾರೆ, ಶ್ರೀ ರಾಜಯ್ಯನವರು ಹೇಳಿದರು, ಅವರು ಹೇಳಿದ್ದು ತಪ್ಪು, ರಿಕಾರ್ಡ್ ತರಿಸಿ ನೋಡಬಹುದು, ಒಂದೊಂದು ಸರ ಒಂದೊಂದು ರೀತಿಯಲ್ಲಿ ಅವರು ಹೇಳಿದರು. ಒಂದು ಸಾರಿ 30 ವರ್ಷ ಎಂದು, ಇನ್ನೊಂದು ಸಾರಿ 40 ವರ್ಷ ಎಂದು, ಇನ್ನೊಂದು ಸರ 99 ವರ್ಷ ಎಂದು ಹೇಳಿದ್ದಾರೆ. ಒಟ್ಟಿನಮೇಲೆ ವಿರೋಧಪಕ್ಷದ ಮುಖಂಡರನ್ನು ಕರೆಸಿ ಪೂರ್ಣವಾಗಿ ಈ ವಿಚಾರ ಇತ್ಯರ್ಥ ಮಾಡುವಾಗ ಮುಂಚೆ ಅಭಿಪ್ರಾಯ ತಿಳಿದು ನಿರ್ಣಯಮಾಡುತ್ತೇವೆ ಎಂದು ಹೇಳಿದರು. ಹೀಗೆ ಹೇಳಿ ಸಮಾಧಾನ ಮಾಡಿದರು. ಇದರ ಜೊತೆಗೆ ಶ್ರೀ ಪುಟ್ಟಸ್ವಾಮಿಯವರು ಎದ್ದು ಮಾತನಾಡಿ ಗೊಂದಲವನ್ನುಂಟುಮಾಡಿದರು. ರಿಕಾರ್ಡ್ ನೋಡಿ ಹೇಳುವುದಿಲ್ಲ, ಒಬ್ಬೊಬ್ಬರು ಒಂದೊಂದು ರೀತಿ ಹೇಳುವುದು ಸರಿಯಲ್ಲ. ನಿರ್ಣಯವಾಗಿದೆ ಎಂದು ಅಧಿಕೃತವಾಗಿ ಹೇಳಿ, ಕೊಡುವಾಗ ಏನು ಕಂಡೀಷನ್ ಹಾಕಬೇಕು ಎಂಬುದು ತೀರ್ಮಾನವಾಗಬೇಕು, ಅದು ಉಳಿದಿದೆ ಎಂದು ಹೇಳಿದರು. ಹೀಗೆ ಒಂದೊಂದು ಸರ ಒಂದೊಂದು ರೀತಿಯಲ್ಲಿ ಒಬ್ಬೊಬ್ಬರು ಒಂದೊಂದು ರೀತಿ ಹೇಳುವಾಗ ಹೇಗೆ ತಾಳ್ಮೆಯಿಂದಿರುವುದಕ್ಕೆ ಸಾಧ್ಯ? ಅಧ್ಯಕ್ಷರು ಸಭೆಯ ಗೌರವ ಕಾಪಾಡಬೇಕು, ಲೆಕ್ಕಾಚಾರ ಸರಿಯಾಗಿ ನಡೆಯಬೇಕು. ದಾರಿ ತಪ್ಪಿ ಹೋಗುವಾಗ ನುಮ್ಮನಿರಲು ಹೇಗೆತಾನೆ ಸಾಧ್ಯ! ತಾಳ್ಮೆ ಹೇಗಿರುವುದು! ಆದುದರಿಂದ ದಯವಿಟ್ಟು ಆಡಿದಂತೆ ಖಚಿತವಾಗಿ ಕೊಟ್ಟಿದ್ದಾಗಿದೆಯೇ ಎಂಬುದು ತಿಳಿಯಬೇಕು. ಮುಖ್ಯ ಮಂತ್ರಿಗಳು ಹೇಳಿದ್ದು ಸರಿಯೇ ಅಥವ ಇತರ ಮಂತ್ರಿಗಳು ಹೇಳಿದ್ದು ಸರಿಯೇ ಎಂಬುದನ್ನು ರಿಕಾರ್ಡ್ ನೋಡಿ ತಿಳಿಯಬೇಕು. ಯಾರಾದರೂ ಒಬ್ಬರು ಹೇಳಿದ್ದು ಆದರೂ ಸರಿಯಾಗಿರಬೇಕು. ಯಾರು ಹೇಳಿರುವುದು ಸರಿಯಾಗಿದೆ ಎಂಬುದು ಗೊತ್ತಾಗಬೇಕು.

ಅಧ್ಯಕ್ಷರು.—ಮಂತ್ರಿಗಳಿಗೆ ನಿಮ್ಮ ಗೈಡೆನ್ಸ್ ಬೇಕಾಗಿಲ್ಲ, ಮಾನ್ಯ ಸದಸ್ಯರು ರೈಸ್ ಮಾಡಿರುವ ಪಾಯಿಂಟಿಗೆ ಉತ್ತರ ನಾನು ಕೊಡುತ್ತಿದ್ದೇನೆ.

5-30 P.M.

Hon. Member Sri H. N. Nanje Gowda wanted me to say as to what role was played by the Hon. Minister for Parliamentary Affairs in this. I do not understand how any motive can be attributed to any one. I am grateful to the Hon. Member Sri Nanje Gowda for expressing his regert for having used certain words. I know the hon. Member is not a person to offend anybody and least the Chair. This is a matter, which, of course, is not free from doubt. We have spent about 3½ hours on this. The doubt that has arisen is that the Hon. Deputy Minister for Agriculture said something, the Hon. Minister for Agriculture said something. Then the Hon. Minister for Labour and Parliamentary Affairs said something. And finally the Hon. Chief Minister also said something on this subject. There was not perfect harmony between all these statements. Therefore, the statement made by the Hon. Chief Minister may be accepted. I have no objection if the Hon. Minister for Parliamentary Affairs were to explain the position.

Sri K. H. PATIL.—Is it not possible to get the documents produced befor the House, Sir?

Mr SPEAKER.—Let the Hon. Member point out the authority on which I can order the Government to produce the documents!

Sri H. N. NANJE GOWDA.—When we accept the statement of the Hon. Chief Minister, it means that the other Ministers have misled the House, and they must withdraw.

Mr. SPEAKER.—It is not like that. There is no such inconsistency between these statements. It is only a question of harmonious interpretation. It is not proper to attribute any motive to any Member or Minister. I just now received a copy of the statement made by the Hon. Chief Minister, and it should be taken to be an authoritative one. I think, the Hon. Minister for Parliamentary Affairs wants to say something, and he may do so.

ಶ್ರೀ ಕೆ. ಪುಟ್ಟಸ್ವಾಮಿ.—ಸ್ವಾಮಿ, ತಮ್ಮಲ್ಲಿ ನಾನು ಬಹಳ ನಮ್ರವಾಗಿ ವಿನಂತಿ ಮಾಡಿಕೊಳ್ಳುತ್ತೇನೆ, ಬಹುಶಃ ನಾನ ಇನ್ನು ಎರಡು ಮೂರು ವಾಕ್ಯ ಹೇಳಿದ್ದರೆ ನನ್ನ ಭಾಷಣ ಮುಗಿಯುತ್ತಾ ಇತ್ತು. ಆ ಮಧ್ಯೆ ಕ್ರಿಯಾಲೋಪ ಎತ್ತಿದ್ದರಿಂದ ಕುಳಿತುಕೊಳ್ಳಬೇಕಾಗಿ ಬಂದು ಆ ಮಧ್ಯೆ ಬೇಕಾದಷ್ಟು ಭಾಷಣಗಳು ಆದವು. ಆದರ ಮೇಲೆ ನಾನು ಏನೂ ವ್ಯಾಖ್ಯಾನ ಅಥವಾ ಟೀಕೆ ಮಾಡುವುದಕ್ಕೆ ಹೋಗುವುದಿಲ್ಲ. ಈ ನಭೆಯಲ್ಲ ಮುಂತ್ರಿಯಾಗಿ ಮಾತನಾಡತಕ್ಕ ಹಕ್ಕನ್ನು ನಾನು ಕಳೆದುಕೊಂಡಿದ್ದೇನೆ, ನಭೆಯನ್ನು ತಪ್ಪು ಮಾರ್ಗಕ್ಕೆ ಎಳೆದಿದ್ದೇನೆ ಎಂದು ಮಾನ್ಯ ಮಿತ್ರರಾದ ನಂಜೇಗೌಡರು ಹೇಳಿದರು.

Sri H. N. NANJE GOWDA. - Sir, when the ruling has already been given, what is the fun of the Hon. Minister arguing the same point?

ಶ್ರೀ ಕೆ. ಪುಟ್ಟಸ್ವಾಮಿ.—ಸ್ವಾಮಿ, ಮಾನ್ಯ ಸದಸ್ಯರು ತಾವು ಹೇಳಬಹುದಾದ್ದನ್ನು ಹೇಳಬಹುದು ನಮಗೆ ಅದಕ್ಕೆ ಪ್ರತಿಯಾಗಿ ಹೇಳತಕ್ಕ ಸ್ವಾತಂತ್ರ್ಯ ಇಲ್ಲ ಎಂದು ತಿಳಿದುಕೊಂಡಿದ್ದಾರೆ, ಅದು ತಪ್ಪು. ನಾನಾದರೂ ಹೇಳುವುದು ಇಷ್ಟೆ, ನಾನು ಯಾವ ವಿಧವಾದ ತಪ್ಪು ಅಭಿಪ್ರಾಯ ಬರುವಂತಹ ಮಾತನ್ನು ಆಡಿಲ್ಲ ಎಂದು ಹೇಳಿ ಇನ್ನೊಂದು ಸಾರಿ ನಾನು ಏನು ಹೇಳಿದೆ ಎಂಬುದನ್ನು ಸ್ಪಷ್ಟಪಡಿಸುವುದಕ್ಕೆ ಅಪೇಕ್ಷೆಪಡುತ್ತೇನೆ. ನಾನು ಹೇಳಿದ್ದು ನಾವು ತೀರ್ಮಾನ ಮಾಡಿಕೊಂಡಿದ್ದೇವೆ, ಅಗ್ರಿಮೆಂಟ್ ಆಗಿಲ್ಲ, ಪೂರ್ತಿಯಾಗಿ ಕಂಡೀಷನ್‌ಗಳನ್ನೆಲ್ಲಾ ಒಪ್ಪಿಲ್ಲ ಆದ್ದರಿಂದ ಅಂತಿಮವಾಗಿ ತೀರ್ಮಾನವಾಗಿಲ್ಲ ಎಂದು ಈ ರೀತಿ ನಾನು ಹೇಳಿದ್ದಕ್ಕೂ ಮುಖ್ಯಮಂತ್ರಿಗಳು ಹೇಳಿದ್ದಕ್ಕೂ ರಾಚಯ್ಯನವರೂ ಹೇಳಿದ್ದಕ್ಕೂ ಯಾವ ವ್ಯತ್ಯಾಸವೂ ಇಲ್ಲ. ಆದರೆ ಏನಾಗುತ್ತದೆ, ಅನೇಕವೇಳೆ ಮಾತನಾಡುವಾಗ ಒಂದೊಂದು ಸಾರಿ ಒಂದೊಂದು ಮಾತು ಬರುತ್ತದೆ.

Sri K. H. PATIL.—Sir, I rise to a Point of Order. The Hon. Speaker has categorically made it clear in his Ruling that there is some difference in the statement made by the four Ministers. Having once accepted the Ruling, can any Member—even though he is from the Treasury Bench—make any statement challenging the Ruling? With great respect to the Hon. Minister Sri Puttaswamy, I should say that he is not right, he is not within his limit to contradict the Ruling. He is also not competent to say anything more than what he has stated already, because unless the documents are here before us, it is very difficult to believe the version that has been adduced by the Treasury Bench.

Mr. SPEAKER.—I said that there are certain matters not in harmony with each other, and that is why I permitted the Hon. Minister

(MR. SPEAKER)

for Parliamentary Affairs to find out whether all the matters can be harmonised. He is trying to do it to clarify the position, and he is perfectly right in doing it.

ಶ್ರೀ ಕೆ. ಪುಟ್ಟಸ್ವಾಮಿ:—ಈಗ ಚರ್ಚೆಗೆ ಆಸ್ಪದ ಕೊಡದೆ, ಈಗ ಎದ್ದಿರುವ ವಿವಾದದ ಬಗ್ಗೆ ಅಖೈರು ತೀರ್ಮಾನ ಆಗಬೇಕಾದರೆ, ತಮ್ಮ ಆಫೀಸಿನಿಂದ ಇದಕ್ಕೆ ಸಂಬಂಧಪಟ್ಟ ಪ್ರೊಸೀಡಿಂಗ್ಸನ್ನು ಪಡೆದಿದ್ದೇನೆ ಅದನ್ನು ತಮ್ಮ ಅಪ್ಪಣೆ ಪಡೆದು ಓದುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಈ ರೀತಿ ಹೇಳಿದ್ದಾರೆ: "ಸನ್ಮಾನ್ಯ ಅಧ್ಯಕ್ಷರೇ, ಅನೇಕ ವರ್ಷಗಳಿಂದ ಕಾಂಗ್ರೆಸ್ ವಸ್ತುಪ್ರದರ್ಶನವನ್ನು ಬೆಂಗಳೂರು ನಗರದಲ್ಲಿರುವ ಸುಬಾಷ್‌ನಗರದಲ್ಲಿ ನಡೆಸುತ್ತಿದ್ದರು ಎಂದು ನಾನು ಹೇಳುತ್ತಿದ್ದೆ. ಅನೇಕ ವರ್ಷಗಳಿಂದ ಎಲ್ಲಿ ಕಾಂಗ್ರೆಸ್ ವಸ್ತುಪ್ರದರ್ಶನ ನಡೆಯುತ್ತಿದ್ದೆಯೋ ಅಲ್ಲಿ ಒಂದು ಪರ್ಮನೆಂಟ್ ಎಗ್ಜಿಬಿಷನ್ ಆಗಬೇಕು, ಅದಕ್ಕೆ ಪರ್ಮನೆಂಟ್ ಕಟ್ಟಡವಾಗಬೇಕು, ಅದಕ್ಕೆ ಸ್ಥಳ ಕೊಡಬೇಕು ಎಂದು ಕಾಂಗ್ರೆಸ್ ವಸ್ತುಪ್ರದರ್ಶನವನ್ನು ನಡೆಸುವವರು ಕೇಳುತ್ತಿದ್ದರು. ಆದರೆ ಹೀಗೆ ಕೇಳುತ್ತಿದ್ದರೂ ಕೂಡ ಈ ಬಗ್ಗೆ ನಿರ್ಣಯಮಾಡುವುದಕ್ಕೆ ಸಾಧ್ಯವಾಗಿರಲಿಲ್ಲ. ಇವತ್ತು ಸರ್ಕಾರ ಸರಿಯಾಗಿ ವಿಚಾರಮಾಡಿ, ಬಹುಶಃ ಕಾಂಗ್ರೆಸ್ ವಸ್ತುಪ್ರದರ್ಶನ ನಡೆಸುವವರಿಗೆ ಕೊಡುವುದಕ್ಕೆ ಸಾಧ್ಯವಾಗಬಹುದು ಎಂದು ನಿರ್ಣಯ ಮಾಡಿಕೊಂಡಿದ್ದೇವೆ. ಆದರೆ ನಾವು ನಿರ್ಣಯಮಾಡಿದರೆ ಅದೇ ಕೊನೆಯಲ್ಲ. ನಿರ್ಣಯಮಾಡಿರುವುದನ್ನು ವಸ್ತುಪ್ರದರ್ಶನ ನಡೆಸುವ ಸಮಿತಿಯು ಒಪ್ಪುತ್ತದೆಯೋ, ಒಪ್ಪಿದರೆ ಯಾವ ಕಂಡೀಷನ್ನಿನ ಮೇಲೆ ಒಪ್ಪುತ್ತದೆ, ಎಂಬುದನ್ನು ತಿಳಿದು ಚರ್ಚೆ ಮಾಡಿ ಒಂದು ನಿರ್ಣಯ ಕೈಕೊಳ್ಳಬೇಕು. ಇಂದು ಒಂದು ನಿರ್ಣಯಮಾಡಿದ್ದೇವೆ. ಆದರೆ ಅದರ ಬಗ್ಗೆ ಅಗ್ರಿಮೆಂಟ್ ಆಗಿಲ್ಲ. ಅಗ್ರಿಮೆಂಟ್ ಆಗಿ ಗವರ್ನ್‌ಮೆಂಟ್ ಆರ್ಡರ್ ಇಷ್ಯೂ ಆದಮೇಲೆ ಫೈನಲ್ ಆಯಿತು ಎಂದು ಹೇಳಬಹುದು. ವಸ್ತುಪ್ರದರ್ಶನ ನಡೆಸುವ ಸ್ಥಳ ಯಾವ ಕಂಡೀಷನ್ನಿನ ಮೇಲೆ ಕೊಡಬೇಕು, ಅದರಲ್ಲಿ ಸರ್ಕಾರದ ಹಿತರಕ್ಷಣೆ ಯಾವ ರೀತಿ ಮಾಡಬೇಕು ಮತ್ತು ಸ್ಥಾಯಿಕವಾದ ಒಳ್ಳೆಯ ಎಗ್ಜಿಬಿಷನ್ ಬೆಂಗಳೂರು ನಗರದಲ್ಲಿ ಮಾಡಬೇಕು ಮತ್ತು ಸ್ಥಾಯಿಕವಾದ ಒಳ್ಳೆಯ ಎಗ್ಜಿಬಿಷನ್ ಬೆಂಗಳೂರು ನಗರದಲ್ಲಿ ಆಗುವುದಕ್ಕೆ ಏನು ಕ್ರಮ ತೆಗೆದುಕೊಳ್ಳಬೇಕು ಎಂಬುದನ್ನು ಕೂಲಂಕಷವಾಗಿ ಪರಿಶೀಲಿಸಿ ಪರ್ಮನೆಂಟ್ ಎಗ್ಜಿಬಿಷನ್ ನಡೆಸಲು ಸಂಬಂಧಪಟ್ಟವರೊಡನೆ ಚರ್ಚೆಮಾಡಿ ಅಂತಿಮ ನಿರ್ಣಯ ಮಾಡಲಿಲ್ಲ. ಹಾಗೆ ಮಾಡದಿರುವುದರಿಂದ ಯಾವ ಆರ್ಡರನ್ನೂ ಮಾಡಿಲ್ಲ. ಇನ್ನು ಅಗ್ರಿಮೆಂಟ್ ಮಾಡಿಕೊಂಡಿಲ್ಲವೆಂದು ಏನಯದಿಂದ ತಿಳಿಸುತ್ತಿದ್ದೇವೆ. ಈ ಮಧ್ಯೆ ಮಾನ್ಯ ವಿರೋಧಪಕ್ಷದ ನಾಯಕರು ಒಂದು ಮಾತನ್ನು ಹೇಳಿದ್ದಾರೆ. ಅದನ್ನೂ ಸಹ ಓದುತ್ತೇನೆ. ಏಕೆಂದರೆ ಸದಸ್ಯರಿಗೆ ಅವರು ಏನು ಹೇಳಿದ್ದಾರೋ, ಏನೋ ಎಂಬ ಸಂಶಯ ಬರಬಾರದು. ಅದು ಈ ರೀತಿ ಇದೆ:

> "ಶ್ರೀ ಎಸ್. ಶಿವಪ್ಪ.—ಆಲ್ಲ ಖಾಯಂಆಗಿ ಒಂದು ವಸ್ತುಪ್ರದರ್ಶನ ನಡೆಸುವ ವಿಚಾರ ಕೂಡ ಸರ್ಕಾರದ ಮುಂದಿದೆ. ಪರ್ಮನೆಂಟ್ ಕಟ್ಟಡ ಕಟ್ಟಿ ವಸ್ತುಪ್ರದರ್ಶನ ನಡೆಸುವಾಗ ಸರ್ಕಾರವೇ ಏಕೆ ಅದನ್ನು ನಡೆಸಬಾರದು? ಈ ವಿಚಾರ ಪರಿಶೀಲನೆಯಲ್ಲಿದೆಯೇ? ಯಾವುದೇ ಒಂದು ಪಕ್ಷಕ್ಕೆ ಸರ್ಕಾರದ ಆಸ್ತಿಯನ್ನು ಕೊಟ್ಟು ಅದು ಪ್ರದರ್ಶನ ನಡೆಸುವುದಕ್ಕೆ ಬದಲಾಗಿ ಹೀಗೆ ಒಂದು ರಾಜಕೀಯ ಪಕ್ಷಕ್ಕೆ ಕೊಡುವುದನ್ನು ಕೈಬಿಟ್ಟು ಸರ್ಕಾರ ಅಥವಾ ಕಾರ್ಪೊರೇಷನ್ ಈ ಜಾಗವನ್ನು ತೆಗೆದುಕೊಂಡು ಖಾಯಂ ಆಗಿ ಏಕೆ ವಸ್ತುಪ್ರದರ್ಶನ ನಡೆಸುವ ವಿಚಾರಮಾಡಬಾರದು? ಈಗ ಕಾಂಗ್ರೆಸ್ ಪಕ್ಷಕ್ಕೆ ಕೊಡಬೇಕೆಂದಿರುವ ಅವಕಾಶ ಕೈಬಿಡಲು ಪ್ರಯತ್ನಮಾಡುತ್ತೀರಾ?
>
> ಶ್ರೀ ವೀರೇಂದ್ರ ಪಾಟೀಲ್.—ಬಹುಶಃ ವಿರೋಧಪಕ್ಷದ ನಾಯಕರು ನಾನು ಹೇಳಿದ್ದನ್ನು ಸರಿಯಾಗಿ ತಿಳಿದುಕೊಂಡಿಲ್ಲವೆಂದು ಕಾಣುತ್ತದೆ. ಕಾಂಗ್ರೆಸ್ ವಸ್ತುಪ್ರದರ್ಶನಕ್ಕೆ ಸಂಬಂಧಪಟ್ಟವರು ಅನೇಕ ದಿವಸಗಳಿಂದ ಈ ಸ್ಥಳ ಕೊಟ್ಟರೆ ಸ್ಥಾಯಿಕ ಪರ್ಮನೆಂಟ್ ಎಗ್ಜಿಬಿಷನ್ ನಡೆಸುತ್ತೇವೆಂದು ಕೇಳುತ್ತಿದ್ದರು. ಅದಕ್ಕೆ ಅವಕಾಶ ಕೊಡಬೇಕೆಂದು ವಿಚಾರಮಾಡಿಕೊಂಡಿದ್ದೆವು. ಆದರೆ ಈ ವಿಷಯವನ್ನು ಚರ್ಚೆಮಾಡಿ ಕಂಡೀಷನ್ ಯಾವರೀತಿ ಹಾಕಬೇಕು, ಏನು ಕಂಡೀಷನ್ ಹಾಕಬೇಕು, ಪ್ಲಾನ್ ಯಾವ ರೀತಿ ಮಾಡಬೇಕು ಎಂದು ಸಂಬಂಧಪಟ್ಟವರೊಡನೆ ಚರ್ಚಿಸಿ ಅಂತಿಮ ತೀರ್ಮಾನ ಮಾಡಿರುವುದಿಲ್ಲ. ಈ ಬಗ್ಗೆ ಅಗ್ರಿಮೆಂಟ್ ಕೂಡ ಆಗಿಲ್ಲ. ಈ ಎರ್ಲಾ ವಿಚಾರಗಳನ್ನು ತಪಶೀಲಾಗಿ ಇಂದು ಹೇಳುವುದು ಕಷ್ಟ. ಯಾವ ವಿಧವಾದ ಅಗ್ರಿಮೆಂಟ್

ಮಾಡಿಕೊಳ್ಳಬೇಕು, ಹೇಗೆ ಮಾಡಿಕೊಂಡರೆ ದೇಶದ ಹಿತ, ರಾಜ್ಯದ ಹಿತರಕ್ಷಣೆ ಮಾಡ ಬಹುದು, ಅಲ್ಲದೆ ಒಳ್ಳೆಯ ವಸ್ತುಪ್ರದರ್ಶನ ಸ್ಥಾಯಿಕವಾಗಿ ನಡೆಸುವುದಕ್ಕೆ ಅನುಕೂಲವಾಗುತ್ತದೆಂಬುದನ್ನು ಯೋಚಿಸಿ ಅದಕ್ಕೆ ತಕ್ಕ ಕ್ರಮ ಮುಂದೆ ತೆಗೆದು ಕೊಳ್ಳಬೇಕಾಗುತ್ತದೆ.''

ಇದು ಒಂದು. ಹಾಗೆಯೇ ಪುನಃ ಮುಂದುವರಿಸಿ, ಮಾನ್ಯ ಮುಖ್ಯ ಮಂತ್ರಿಗಳು ಹೀಗೆ ಹೇಳಿದ್ದಾರೆ.

''ಮಾನ್ಯ ಅಧ್ಯಕ್ಷರೇ, ಈ ವಿಷಯದ ಬಗ್ಗೆ ನಾನು ಈಗಾಗಲೇ ನನ್ನ ಅಭಿಪ್ರಾಯವನ್ನು ಈ ಸಭೆಗೆ ವ್ಯಕ್ತಪಡಿಸಿದ್ದೇನೆ. ಸರ್ಕಾರ ಇನ್ನೂ ಅಂತಿಮವಾಗಿ ಇದರ ಬಗ್ಗೆ ಆರ್ಡರ್ ಹೊರಡಿಸಿಲ್ಲ, ಏಕೆಂದರೆ ಯಾವ ಪರಿತ್ರಾಣ ಮೇಲೆ ಕೊಡಬೇಕೆನ್ನುವುದರ ಬಗ್ಗೆ ಇನ್ನೂ ಅಂತಿಮ ನಿರ್ಧಾರಕ್ಕೆ ಬಂದಿಲ್ಲ. ಅದಕ್ಕೆ ಪೂರ್ವದಲ್ಲಿಯೇ ಹೇಳಿದೆ, ಅಂತಿಮ ತೀರ್ಮಾನ ತೆಗೆದುಕೊಳ್ಳುವ ಮುಂಚೆ ಎಲ್ಲಾ ವಿಚಾರಗಳನ್ನೂ ಗಮನದಲ್ಲಿಟ್ಟುಕೊಂಡು ಅಲ್ಲಿ ಒಂದು ಸ್ಥಾಯಿಕವಾಗಿ ಎಗ್ಸಿಬಿಷನ್ ಆಗಬೇಕು ಮತ್ತು ಸರ್ಕಾರದ ಹಿತರಕ್ಷಣೆಯಾಗಬೇಕು ಎನ್ನುವ ದೃಷ್ಟಿಯಿಂದ ಮಾಡಬೇಕೆಂದಿದ್ದೇವೆ ಎಂದು ವಿರೋಧಪಕ್ಷದ ನಾಯಕರು ಮತ್ತು ಕೆಲವು ಮಾನ್ಯ ಸದಸ್ಯರು ನೀವು ಈ ಸಭೆಗೆ ಒಂದು ಆಶ್ವಾಸನೆ ಯನ್ನು ಕೊಡಬೇಕು, ಏನಾದರೂ ಒಂದು ಅಂತಿಮ ನಿರ್ಣಯ ತೆಗೆದುಕೊಳ್ಳುವ ಪೂರ್ವದಲ್ಲಿ ನಮ್ಮ ಜೊತೆಯಲ್ಲಿ ಸಮಾಲೋಚನೆಮಾಡಬೇಕು ಎನ್ನುವ ಮಾತನ್ನು ಹೇಳಿದ್ದಾರೆ. ಅದಕ್ಕೆ ನಾನು ಮೊದಲೇ ಹೇಳಿದೆ. ಆರೀತಿಯಿಂದ ಸರ್ಕಾರ ದಿನಂಪ್ರತಿ ಕೆಲಸಕಾರ್ಯಗಳನ್ನು ಮಾಡುವ ಮುಂದೆ ಅನೇಕ ನಿರ್ಣಯಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಅನೇಕ ನಿರ್ಣಯಗಳನ್ನು ತೆಗೆದುಕೊಳ್ಳು ಮುನ್ನ ವಿರೋಧ ಪಕ್ಷದ ನಾಯಕರ ಜೊತೆಗೆ ಸಮಾಲೋಚನೆಮಾಡಿ ನಿರ್ಣಯ ತೆಗೆದುಕೊಳ್ಳ ಬೇಕಾದರೆ ಸರ್ಕಾರ ನಡೆಸುವುದಕ್ಕೆ ಕಷ್ಟವಾಗುತ್ತದೆ. ಅದನ್ನು ಯಾರೂ ಒಪ್ಪುವುದಿಲ್ಲ. ಅದಕ್ಕೆ ನನ್ನ ಮನಸ್ಸಿನಲ್ಲಿರುವ ಭಯ ಎಂದರೆ, ಇದನ್ನೇ ಒಂದು ಪ್ರಿಸಿಡೆಂಟ್ ಅಂತ ಮುಂದೆ ಕ್ವೋಟ್ ಮಾಡಬಾರದು. ಆ ದೃಷ್ಟಿಯಿಂದ ಹೇಳಿದೆ, ಈ ತರಹದ ಭಾವನೆಯನ್ನು ನೀಡುವುದಕ್ಕೆ ಸಾಧ್ಯ ವಾಗುವುದಿಲ್ಲ ಎಂದು ಇದರ ಬಗ್ಗೆ ಬಹಳ ಕಳವಳಕ್ಕೆ ಕಾರಣವಾಗಿದೆ ಎಂದು ವಿರೋಧ ಪಕ್ಷದ ನಾಯಕರು ಹೇಳಿದರು. ಮತ್ತು ಅದಕ್ಕಾಗಿಯೇ ಸಮಾಲೋಚನೆ ಮಾಡಬೇಕೆನ್ನುವ ಮಾತನ್ನೂ ಹೇಳಿದರು. ಈ ಸಂದರ್ಭದಲ್ಲಿ ಸ್ಪಷ್ಟವಾಗಿ ಹೇಳಬೇಕಾಗಿದ್ದರೆ ಮುಂದೆ ಯಾವ ರೀತಿಯಿಂದಲೂ ಇದನ್ನು ಪ್ರಿಸಿಡೆಂಟ್ ಅಂತ ಕ್ವೋಟ್ ಮಾಡದಂತೆ ಇದರ ಬಗ್ಗೆ ಅವರ ಅಭಿಪ್ರಾಯ ಏನಿದೆ ಅದನ್ನು ತಿಳಿದುಕೊಂಡು ಮುಂದೆ ಕಾರ್ಯಕ್ರಮ ತೆಗೆದುಕೊಳ್ಳುತ್ತೇನೆಂದು ಇಷ್ಟು ಮಾತ್ರ ಹೇಳುತ್ತೇನೆ.''

ನಾನು ತಮ್ಮಲ್ಲಿ ಅತಿ ವಿನಯದಿಂದ ಅರಿಕೆಮಾಡಿಕೊಳ್ಳುತ್ತೇನೆ. ಮಾನ್ಯ ಶ್ರೀ ರಾಚಯ್ಯನವರು ಹೇಳಿದ್ದರಲ್ಲಾಗಲೀ, ಮುಖ್ಯಮಂತ್ರಿಗಳು ಹೇಳಿದ್ದರಲ್ಲಾಗಲೀ, ನಾನು ಹೇಳಿದ್ದರಲ್ಲಾಗಲೀ ಯಾವ ವಿಧವಾದ ವ್ಯತ್ಯಾಸವೂ ಇಲ್ಲ. ಇರತಕ್ಕ ಪರಿಸ್ಥಿತಿಯನ್ನು ಮತ್ತೊಮ್ಮೆ ಸ್ಪಷ್ಟಪಡಿಸುವುದಕ್ಕೆ ಅಪೇಕ್ಷಪಡುತ್ತೇನೆ. ಸರ್ಕಾರ ತನ್ನ ಒಂದು ನಿರ್ಣಯ ಮಾಡಿಕೊಂಡಮ್ಲು ಕೂಡಬಹುದೆಂದು ಆದರೆ, ಯಾವ ಪರಿತ್ರಾಣ ಮೇಲೆ ಯಾವ ಬಾಡಿಗೆ ಮೇಲೆ, ಎಷ್ಟು ಕಾಲ ಕೊಡಬೇಕು ಎನ್ನುವುದು ಯಾವುದೂ ಕೂಡ ಇನ್ನೂ ತೀರ್ಮಾನವಾಗಿಲ್ಲ. ನಮ್ಮ ಮನಸ್ಸಿನಲ್ಲಿ ಏನೇನೋ ಇರಬಹುದು. ಅದು ಏಕಪಕ್ಷೀಯವಾಗಿ ತೀರ್ಮಾನವಾಗುತ್ತದೆ. ಆ ಒಂದು ಒಪ್ಪಂದವಾಗಬೇಕಾದರೆ, ಉಭಯ ಪಕ್ಷಗಳು ಸೇರಬೇಕೆಂಬುದು ಪಾಯಿಂಟ್ ಅಲ್ಲಿ.

Sri H. N. NANJE GOWDA.—On a point of order under Rule 311. He is misleading the House. Again he is mis-interpreting. Mr. Rachiah told in the first instance that it is leased out for 10 years. For the second time, he told that it is leased out for many years. You cannot interpret now.

ಶ್ರೀ ಕೆ. ಪುಟ್ಟಸ್ವಾಮಿ.—ಮಾನ್ಯ ಸದಸ್ಯರಾದ ಶ್ರೀ ನಂಜೇಗೌಡರಲ್ಲಿ ಒಂದು ನಮ್ರವಾದ ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ನನ್ನದು ಆ ಕಸುಬಲ್ಲ. ನನ್ನ ಕಸುಬಿನಲ್ಲಿ ಬೇರೆಯವರಿಗೆ ತಪ್ಪು ದಾರಿ ತೋರಿಸುವ ಹಾಗೆ ಯಾವತ್ತೂ ಮಾಡಿಲ್ಲ. ಮಾನ್ಯ ಸದಸ್ಯರು ಕೊಡುವ ಎಚ್ಚರಿಕೆಗೆ ನಾನು ಕೃತಜ್ಞನಾಗಿದ್ದೇನೆ. ನಮ್ಮ ಮೂರು ಜನರ ನಿಲುವಳಿಯಲ್ಲಿ ಯಾವ ವಿಧವಾದಂಥ ವ್ಯತ್ಯಾಸ ವಿಲ್ಲವೆನ್ನುವುದನ್ನು ನಾನು ಸ್ಪಷ್ಟಪಡಿಸಿದ್ದೇನೆ. ಮತ್ತು ಒಂದು ಪ್ರಶ್ನೆಗೆ ಉತ್ತರ ಹೇಳಬೇಕಾದುದು ಅಗತ್ಯ. ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಇನ್ನೂ ಅನೇಕ ವಿರೋಧ ಪಕ್ಷದ ಮಾನ್ಯ ಸದಸ್ಯರು 'ನಿಮ್ಮ ತೀರ್ಮಾನವಾದ ಮೇಲೆ, ಟರ್ಮ್ಸ್ ಅಂಡ್ ಕಂಡಿಶನ್ಸ್ ವಿಚಾರದಲ್ಲಿ ನಮ್ಮ ಜೊತೆಯಲ್ಲಿ ಕನ್ಸಲ್ಟ್ ಮಾಡುತ್ತೀರಾ, ಹಾಗಿದ್ದ ಮೇಲೆ, ನಮ್ಮಲ್ಲಿ ಡಿಬೇಟ್ ಮಾಡಿ ಏನು

(ಶ್ರೀ ಕೆ. ಪುಟ್ಟಸ್ವಾಮಿ)

ಪ್ರಯೋಜನ?' ಎಂದು ಕೇಳಿದರು. ಅದು ಸ್ವಾಭಾವಿಕವಾದ ಪ್ರಶ್ನೆ. ನನ್ನ ಅಶ್ವಾಸನೆಯನ್ನು ಇದರಲ್ಲಿ ಹೇಳುವುದಕ್ಕಿಂತ, ಮಾನ್ಯ ಮುಖ್ಯಮಂತ್ರಿಯವರು ಏನು ಹೇಳಿದ್ದಾರೆ, ಅದನ್ನೇ ಇಲ್ಲಿ ಪುನಃ ಹೇಳಿದರೆ, ಸಾಕಾಗುತ್ತದೆ ಎಂದು ಕಾಣುತ್ತದೆ. ನಮ್ಮ ಕೈಯಲ್ಲಿ ಎಷ್ಟು ಶಕ್ತಿ ಇದೆ, ಅಷ್ಟು ಹೇಳುತ್ತೇವೆ. ಮಾನ್ಯ ಸದಸ್ಯರನ್ನು ಸಮಾಧಾನಗೊಳಿಸತಕ್ಕಂತಹ ಹೇಳಿಕೆ ಕೊಡುವ ಶಕ್ತಿ, ನನಗೆ ಇದ್ದಿದ್ದರೆ, ನಾನು ಬಹಳ ಕೃತಜ್ಞನಾಗುತ್ತಿದ್ದೆ. ಆದರೆ ಅನೇಕ ವೇಳೆ, ನಾನು ಹೇಳಿದ್ದು ಅವರಿಗೆ ಸಮಾಧಾನವಾಗುವುದಿಲ್ಲ. ಆದರೆ, ಈ ಒಂದು ಸಭೆಯಲ್ಲಿರುವಾಗ, ಇಂಥ ಅನಿವಾರ್ಯವಾದಂತಹ ಅತೃಪ್ತಿ ಇದ್ದರೂ ಕೂಡ ಈ ಸಭೆಯಲ್ಲಿ ಸಾಮರಸದಿಂದ ಕೆಲಸ ಮಾಡತಕ್ಕದ್ದು ಅವಶ್ಯಕ.

ಶ್ರೀ ಎಲ್. ಶ್ರೀಕಂಠಯ್ಯ.—ಸ್ವಾಮಿ, ನಿರ್ಣಯವನ್ನು ಮಾಡಿಕೊಂಡಿದ್ದೀವೆ ಎಂದರೆ ಅರ್ಥವೇನು ?

ಶ್ರೀ ಕೆ. ಪುಟ್ಟಸ್ವಾಮಿ.—ಮಾನ್ಯ ಶ್ರೀಕಂಠಯ್ಯನವರು ಹಲವು ಕಾಲ ಪ್ರಾಧ್ಯಾಪಕರಾಗಿದ್ದರು ಈಗ ವಕೀಲ ನಡೆನುತ್ತಿದ್ದಾರೆ. ಇಲ್ಲಿ, ಈ ಸದನದಲ್ಲಿ ಅದಂತಹ ಕಾನೂನುಗಳ ಮೇರೆ, ಅಲ್ಲಿ ಮೊಕದ್ದಮೆಗಳಲ್ಲಿ ಅವಾದ್ದೇ ಅದಂತಹ ವ್ಯಾಖ್ಯಾನವನ್ನು ಮಾಡುತ್ತಾರೆ. ನಾನು ಏನು ಹೇಳಿದ್ದೇನೆ, ಅದರಿಂದ ಯಾವ ಅರ್ಥವಾಗುತ್ತದೆ, ಅದನ್ನು ಮಾಡಿಕೊಳ್ಳಲಿ. ಮಾನ್ಯ ಮುಖ್ಯಮಂತ್ರಿಯವರು ಹೇಳಿದರು : ''ಇದರ ಬಗ್ಗೆ ಅಂತಿಮವಾದ ಆರ್ಡರ್ ಹೊರಡಿಸಿಲ್ಲ. ಯಾವ ಶರತ್ತುಗಳಲ್ಲಿ ಕೊಡಬೇಕೆಂಬುದರ ಬಗ್ಗೆ ಇನ್ನೂ ಅಂತಿಮ ನಿರ್ಧಾರಕ್ಕೆ ಬಂದಿಲ್ಲ. ಅದಕ್ಕೆ ಪೂರ್ವದಲ್ಲೇ ಹೇಳಿದೆ ಅಂತಿಮ ತೀರ್ಮಾನ ತೆಗೆದುಕೊಳ್ಳುವ ಮುಂಚೆ ಎಲ್ಲಾ ವಿಚಾರಗಳನ್ನೂ ಗಮನದಲ್ಲಿ ಇಟ್ಟುಕೊಂಡು ತೀರ್ಮಾನ ಮಾಡುತ್ತೇವೆ, ಮತ್ತು ಇದರ ಬಗ್ಗೆ ಬಹಳ ಕಳವಳಕ್ಕೆ ಕಾರಣವಾಗಿದೆ ಎಂದು ವಿರೋಧ ಪಕ್ಷದ ನಾಯಕರು ಹೇಳಿದರು. ಈ ಸಂದರ್ಭದಲ್ಲಿ ಸ್ಪಷ್ಟವಾಗಿ ಹೇಳಬೇಕಾಗಿದ್ದರೆ, ಮುಂದೆ ಯಾವ ರೀತಿಯಿಂದಲೂ ಇದನ್ನು ಪ್ರಿಸಿಡೆಂಟ್ ಅಂತ ಕ್ಲೋಸ್ ಮಾಡದಂತೆ ಇದರ ಬಗ್ಗೆ ಅವರ ಅಭಿಪ್ರಾಯ ಏನಿದೆ ಅದನ್ನು ತಿಳಿದುಕೊಂಡು ಮುಂದೆ ಕಾರ್ಯಕ್ರಮ ತೆಗೆದುಕೊಳ್ಳುತ್ತೇನೆ ಎಂದು ಇಷ್ಟು ಮಾತ್ರ ಹೇಳುತ್ತೇನೆ.' ಎಂದು ಅದಕ್ಕಿಂತ ಹೆಚ್ಚಿ ಹೇಳುವುದಕ್ಕೆ ಸಾಧ್ಯವಿಲ್ಲ.

†ಶ್ರೀ ಎಸ್. ಶಿವಪ್ಪ.—ತಾವು ಹೇಳಿದ ರೀತಿಯಲ್ಲಿ, ರಾಜಯ್ಯನವರು ಹೇಳಿದ್ದು ಏನಿದೆ ಪುಟ್ಟಸ್ವಾಮಿಯವರು ಹೇಳಿದ ವ್ಯಾಖ್ಯಾನ ಏನಿದೆ, ಮಾನ್ಯ ಮುಖ್ಯಮಂತ್ರಿಯವರು ಹೇಳಿದ್ದು ಏನಿದೆ' ಇದರಲ್ಲಿ ಅಷ್ಟೊಂದು ಹಾರ್ಮನಿ ಇಲ್ಲ. ನಾನು ರಾಜಯ್ಯನವರು ಹೇಳಿದಾಗ ಇಲ್ಲ ಇರಲಿಲ್ಲ' ನಾನು ಬಂದಾಗ ಈ ವಿಚಾರ ನಡೆಯುತ್ತಿತ್ತು. ಆವಾಗ ನಾನು ಮಾನ್ಯ ಮುಖ್ಯ ಮಂತ್ರಿಯವರನ್ನು ಕೇಳಿದೆ, ಈ ವಿಚಾರದಲ್ಲಿ ಏನು ಮಾಡಿದ್ದೀರಿ, ಕಾಂಗ್ರೆಸ್ ಸಂಸ್ಥೆಗೆ ಕೊಡಬೇಕೆಂದು ಮಾಡಿದ್ದೀರಾ, ಎಂದು. ಇದರ ಮೇಲೆ ನಾನು ಏನೂ ಅಂತಿಮ ತೀರ್ಮಾನ ತೆಗೆದುಕೊಂಡಿಲ್ಲ, ಅಗ್ರಿಮೆಂಟ್ ಮಾಡಿಕೊಂಡಿಲ್ಲವೆಂದು ಹೇಳಿದರು. ಮತ್ತು ಈ ವಿಚಾರವನ್ನು ನಮ್ಮ ಜೊತೆ ಸಮಾಲೋಚನೆ ಮಾಡಿ ಮಾಡುವುದಕ್ಕಾಗುವುದಿಲ್ಲವೆಂದು ಹೇಳಿದರು. ಆಮೇಲೆ ತಾವು ಸಭೆಯನ್ನು ಮುಂದೂಡಿದಿರಿ. ನಾವು ಎಲ್ಲಾ ಅಲ್ಲಿ ಮಾತನಾಡುವುದಕ್ಕೆ ಹೋಗಿದ್ದೆವು. ಗೋಪಾಲಗೌಡರು, ಚನ್ನಯ್ಯನವರು ಎಲ್ಲಾ ಸೇರಿ ಸ್ಪಷ್ಟವಾಗಿ ಹೇಳಿದ್ದೇವೆ. ಅಂತಿಮವಾಗಿ ನಿರ್ಣಯವಾಗಿಲ್ಲ ಇನ್ನೂ ಅಗ್ರಿಮೆಂಟ್ ಆಗಿಲ್ಲ ಎಂದು ಹೇಳುತ್ತಿದ್ದಾರೆ. ಈ ವಿಚಾರದಲ್ಲಿ ಕಾಂಗ್ರೆಸ್ಸಿನವರಿಗೆ ಜಾಗವನ್ನು ಕೊಡತಕ್ಕ ವಿಚಾರದಲ್ಲಿ ಒಂದು ಖಡಾಖಂಡಿತವಾದ ಉತ್ತರವನ್ನು ಹೇಳಬೇಕಾಗಿದೆ. ನಮ್ಮ ಎಲ್ಲಾ ವಿರೋಧ ಪಕ್ಷದ ಸದಸ್ಯರನ್ನೂ ಕರೆಸಿಕೊಂಡು ಅವರ ಅಭಿಪ್ರಾಯವನ್ನು ತೆಗೆದುಕೊಳ್ಳಬೇಕೆಂದು ನಾವು ಸ್ಪಷ್ಟವಾಗಿ ಹೇಳಿದ್ದೇವೆ. ಅದಕ್ಕೆ ನಾವು ಅವನ್ನು ಪ್ರಿಸಿಡೆಂಟ್ ಆಗಿ ಮಾಡುವುದಿಲ್ಲವೆಂದು ಹೇಳಿದ್ದಾರೆ. ಅದನ್ನು ಅವರೇ ಹೇಳಿಕೊಂಡಿದ್ದಾರೆ. ಅದಕ್ಕೆ ನಾವು ಬದ್ಧರಲ್ಲ. ಮುಂದೆ ನಿಮ್ಮ ಅಭಿಪ್ರಾಯವನ್ನು ತೆಗೆದುಕೊಳ್ಳುತ್ತೇವೆಂದು ಅಶ್ವಾಸನೆ ಕೊಟ್ಟರೂ, ಈ ಮಧ್ಯೆ ಮಾನ್ಯ ಪುಟ್ಟಸ್ವಾಮಿಯವರು ಹೇಳಿದರು, ಆಗಲೇ ಸರ್ಕಾರ ನಿರ್ಣಯ ಮಾಡಿದೆ, ಮ್ಯಾಟರ್ ಆಫ್ ಡಿಜೈಲ್ಸ್, ಟರ್ಮ್ಸ್ ಅಂಡ್ ಕಂಡಿಶನ್ಸ್ ಎನ್ನುತಕ್ಕಂತಹ ಒಪ್ಪಂದವಾಗಿಲ್ಲವೆಂದು ಹೇಳಿದರು. ನನಗನ್ನಿಸುತ್ತದೆ, ಇವರನ್ನು ನಾವು ಇವತ್ತಿನ ದಿವಸ ಥೇಟು ಮಾಡುವುದು ಏಕೆ? ಸಮಾಲೋಚನೆ ಏಕೆ ಮಾಡಬೇಕು? ಇವರು ಲಾಯರು ಆಗಿದ್ದಾರೆ. ಇವತ್ತು ಏನು ಈಗ ಈ ಟರ್ಮ್ಸ್ ಅಂಡ್ ಕಂಡಿಷನ್ಸ್ ಮಾತ್ರ ಒಂದು ಆಗುವ ಹಂತದಲ್ಲಿದ್ದರೆ, ಆ ರೀತಿ ನಿಮ್ಮ ವ್ಯಾಖ್ಯಾನವಾಗಿದ್ದರೆ, ಅದಕ್ಕೆ ನಾವು ಒಪ್ಪುವುದಕ್ಕೆ ತಯಾರಿಲ್ಲವೆಂದು ಸ್ಪಷ್ಟವಾಗಿ ಹೇಳುತ್ತೇನೆ. ಮಾನ್ಯ ಮುಖ್ಯ ಮಂತ್ರಿಯವರ ಹತ್ತಿರ ಈ ತರದ ಒಂದು

ವಿಚಾರವಿದ್ದರೆ, ಅವರ ಹತ್ತಿರ ಹೋಗುವುದಿಲ್ಲ. ಈ ವಿಚಾರ ಅವರಲ್ಲಿದ್ದರೆ, ಅವರನ್ನು ಭೇಟಿ ಮಾಡುವುದು ನಿಷ್ಫಲ ಮತ್ತು ಪ್ರಯೋಜನವಿಲ್ಲವೆಂದು ಸ್ಪಷ್ಟವಾಗಿ ಹೇಳಬೇಕಾಗಿದೆ ಆದರೆ, ಇವತ್ತಿನ ದಿವಸ ನೀವು ಏನು ಒಂದು ತೀರ್ಮಾನ ಮಾಡುತ್ತಿದ್ದೀರಿ, ಅದು ಒಂದು ರೀತಿಯ ನಾಟಕದ ರೀತಿಯಲ್ಲಿ ಮಾಡುತ್ತಿದ್ದೀರಿ. ಆದ್ದರಿಂದ ನೀವು ಇದರಲ್ಲಿ ಒಂದು ತೀರ್ಮಾನವನ್ನು ತೆಗೆದುಕೊಂಡಿಲ್ಲವೆಂದು ಸ್ಪಷ್ಟವಾಗಿ ನಮಗೆ ಹೇಳಬೇಕು. ನೀವು ಸುಮ್ಮನೆ ನಿರ್ಣಯ ಮಾಡುತ್ತೀವೆ, ನಮಾಲೋಚನೆ ಮಾಡುತ್ತೀವೆ ಎಂದು ಹೇಳಿದರೆ ಅದು ಬಹಳ ಅಪಹಾಸ್ಯವಾಗುತ್ತದೆ. ಇದನ್ನು ಸರ್ಕಾರ ಬಹಳ ಗೋಪ್ಯವಾಗಿಟ್ಟು, ಈ ರೀತಿ ಮಾಡುತ್ತಾ ಇರುವುದು ಒಳ್ಳೆಯದಲ್ಲ. ಹಿಂದೆ ರಾಮಪ್ರಿಯದ ವಿಚಾರ ಕೂಡ ಇದೇ ರೀತಿ ಬಂದು ಅನೇಕ ಚರ್ಚೆಯಾಯಿತು. ಅದನ್ನು ಕೂಡ ಮುಚ್ಚಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಕೊನೆಗೆ, ಮಾಡಿದ್ದು ತಪ್ಪು ಎಂದು ತಿಳಿದು ಆ ವ್ಯವಹಾರವನ್ನು ಕೈಬಿಟ್ಟದ್ದು ಈ ನಭೆಗೆ ಗೊತ್ತಿದೆ. ಅದಕ್ಕಿಂತಲೂ 100 ರಷ್ಟು ಉಗ್ರವಾದ ಕೆಲಸ ಇದು. ಇಂಥದರಲ್ಲಿ ಸರ್ಕಾರದವರು ಧೈರ್ಯವಾಗಿ ಹೇಳಬೇಕು. ಎಲ್ಲಿ ಹೇಳಿ ಬಿಟ್ಟರೆ ಅವಮಾನವಾಗುತ್ತದೆ ಎಂದು ತಿಳಿದುಕೊಳ್ಳುವುದು ಬೇಡ. ಇಷ್ಟು ಹೊತ್ತು ಚರ್ಚೆ ಮಾಡಿ, ಪ್ರಚೋದನೆ ಮಾಡಿರತಕ್ಕ ವಿಚಾರದಲ್ಲಿ ಸರ್ಕಾರ ಇದನ್ನು ಮನಸ್ಸಿಗೆ ತೆಗೆದುಕೊಂಡು ನಾವು ಈ ವ್ಯವಹಾರದಲ್ಲಿ ಮುಂದುವರಿಯುವುದಿಲ್ಲ, ಎಂದು ಒಂದು ಸ್ಪಷ್ಟವಾದ ಹೇಳಿಕೆಯನ್ನು ಕೊಟ್ಟರೆ, ನಮಗೆ ಸಮಾಧಾನವಾಗುತ್ತದೆಂದು ಹೇಳುತ್ತೇನೆ. ಆದ್ದರಿಂದ, ಮಾನ್ಯ ಮುಖ್ಯಮಂತ್ರಿಯವರೇ ಆಗಲಿ, ಯಾರೇ ಆಗಲಿ, ಈ ವಿಚಾರದಲ್ಲಿ ಒಂದು ಸ್ಪಷ್ಟವಾದ ಅಂತವನ್ನು ಹೇಳಿದರೆ, ಈ ನಭೆಯ ನಂಬಿಕೆಗೆ ನೀವು ಪಾತ್ರರಾಗುತ್ತೀರಿ. ಆ ಒಂದು ಸ್ಪಷ್ಟೀಕರಣವನ್ನು ಚೆನ್ನಾಗಿ ಕೊಡಬೇಕೆಂದು ಬಹಳ ವಿಷಾದದಿಂದ ಹೇಳಬೇಕಾಗಿದೆ.

ಶ್ರೀ ಎಸ್. ಸದಾಶಿವಪ್ಪ ಪಾಟೀಲ್.—ಸ್ವಾಮಿ, ಈಗ ಎರ್ನಾ ಕಡೆಯು ಎ. ಐ. ಸಿ. ಸಿ. ಅಧಿವೇಶನ ಮಾಡಿದ ಭಾಗಗಳಲ್ಲ, ಆ ಸ್ಥಳವನ್ನೆರ್ನಾ ಕಾಂಗ್ರೆಸ್ ನದನ್ಯರಿಗೆ ಮತ್ತು ಬೇಕಾದವರಿಗೆ ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಅಥವಾ ಇತರ ಉದ್ದೇಶಗಳಿಗೆ ಲೀಸ್‌ನಲ್ಲಿ ಕೊಡುತ್ತಿದ್ದಾರೆ. ಹಾಗೆ ಮಾಡಿದೆ ಇದನ್ನು ಸಾರ್ವಜನಿಕರಿಗಾಗಿ ಆಕ್ಷನ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

6-00 P.M.

Mr. SPEAKER.—I am just putting across certain points to the Hon. Leader of the Opposition. Let us forget what has happened, on this understanding that the statement made by the Hon. Chief Minister may be accepted as final by the Leader of the Opposition and other Leaders of Parties. The Chief Minister is the head of the administration and therefore his statement should be accepted as final by all the members.

Sri K. PUTTASWAMY.—That would land me in a rather very compromising position.

Mr. SPEAKER.—I am saying that the Chief Minister's statement should be accepted as final.

Sri K. H. PATIL.—Sir, the Speaker should call for all the relevant records and files.

Mr. SPEAKER.—I have absolutely no objection for that. But there is no authority under the Constitution or under the rules vested in the Speaker to order the the Government to produce their files. If the members can show that the Speaker has such an authority, I will consider it.

Sri K. H. PATIL.—But the Hon. Speaker has every right to bring moral pressure on the Government to produce the files. If they have a clean slate, let the Government produce the files and document.

ಶ್ರೀ ಎಸ್. ಗೋಪಾಲಗೌಡ.—ಈಗ ಯಾವ ಒಂದು ಸಾರ್ವಜನಿಕರ ವಿಷಯವನ್ನೂ ಈ ಸಭೆಗೆ ಮುಚ್ಚಿಡಬಾರದು. ಇದು ಪಾರ್ಲಮೆಂಟಿನಲ್ಲಿ ತೀರ್ಮಾನವಾಗಿದೆ, ಹೌಸ್ ಆಫ್ ಕಾಮನ್ಸ್‌ನ ಲ್ಲಿಯೂ ತೀರ್ಮಾನವಾಗಿದೆ, ಮಂತ್ರಿಗಳು ಸ್ವಲ್ಪ ಮಿಸ್ ಲೀಡ್ ಮಾಡುವ ಹೇಳಿಕೆಯನ್ನು ಕೊಟ್ಟರೂ ಅವರಿಗೆ ಶಿಕ್ಷೆ ಯಾಗುತ್ತದೆ. ನುಳ್ಳು ಹೇಳಿದರು ಶಿಕ್ಷೆಯಾಗುತ್ತದೆ. ಶ್ರೀಮಾನ್ ಪುಟ್ಟಸ್ವಾಮಿಯ ವರು ಹೇಳುವುದು ನಿಜವಾಗಿದ್ದು, ಮಾನ್ಯ ಮುಖ್ಯ ಮಂತ್ರಿಗಳು ಅದನ್ನು ಮರೆ ಮಾಚಿದ್ದರೆ ಅದು ಮತ್ತೊಂದು ದೊಡ್ಡ ಅಫೆನ್ಸ್ ಆಗುತ್ತದೆ.

Mr. SPEAKER.—Without casting any aspersion upon any hon. Member or the Hon. Minister as ragards what is stated, I am putting forward in the interest of the work of the House, one proposition before the Leader of the Opposition and Leading members of the Opposition that the Statement made by the Chief Minister should be accepted.

ಶ್ರೀ ಎಚ್. ಎನ್. ನಂಜೇಗೌಡ.— ವಿರೋಧಪಕ್ಷದವರ ಮಾತಿಗೆ ಬೆಲೆ ಕೊಟ್ಟು ವಿರೋಧಪಕ್ಷ ದವರ ಜೊತೆಯಲ್ಲಿ ಚರ್ಚೆ ಮಾಡಿ ಈ ಬಗ್ಗೆ ಆಖೈರು ತೀರ್ಮಾನವನ್ನು ಕೈಗೊಳ್ಳುತ್ತೇವೆಂಬ ಭರವಸೆ ಯನ್ನು ಕೊಡಬೇಕೆಂದು ಕೇಳಿದೆವು. Our objection started with the statement of the Chief Minister. It is not a clear assurance to the Opposition Party Leader.

Mr. SPEAKER.—Consultation means consultation. It cannot go beyond consultation.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈ ಜಾಗವನ್ನು ಈಗಾಗಲೇ ಕಾಂಗ್ರೆಸ್ ವಸ್ತು ಪ್ರದರ್ಶನಕ್ಕೆ ಕಾಂಗ್ರೆಸ್ಸಿನವರಿಗೆ ಕೊಡುವುದಕ್ಕೆ ತೀರ್ಮಾನ ತೆಗೆದುಕೊಂಡಿದ್ದೇವೆ ಇದರ ಬಗ್ಗೆ ವಿವರಗಳು ಮಾತ್ರ ಉಳಿದಿವೆ ಎನ್ನುವ ಅರ್ಥ ಇದ್ದರೆ ಶ್ರೀಮಾನ್ ಪುಟ್ಟಸ್ವಾಮಿಯವರ ಹೇಳಿಕೆಯನ್ನು ನಾವು ಒಪ್ಪುವುದಕ್ಕಾಗುವುದಿಲ್ಲ. ನಮಗೆ ಇದರಲ್ಲಿ ಸಮಾಧಾನ ಆಗುವುದಿಲ್ಲ. ಮಾನ್ಯ ಪಾರ್ಲಮೆಂಟರಿ ಮಂತ್ರಿಗಳು ಸ್ಪಷ್ಟವಾಗಿ ಹೇಳಿದ್ದಾರೆ. ಶ್ರೀಮಾನ್ ರಾಚಯ್ಯನವರ ಹೇಳಿಕೆಯಾಗಲೀ, ಮಾನ್ಯ ಮುಖ್ಯ ಮಂತ್ರಿಗಳ ಹೇಳಿಕೆಗಾಗಲಿ, ನನ್ನ ಹೇಳಿಕೆಗಾಗಲೀ ಯಾವ ವ್ಯತ್ಯಾಸವೂ ಇಲ್ಲ ಆ ಜಾಗವನ್ನು ಕಾಂಗ್ರೆಸ್ಸಿನವರಿಗೆ ಕೊಡಬೇಕೆಂದು ತೀರ್ಮಾನ ಮಾಡಿದ್ದೇವೆ, ವಿವರಗಳು ಮಾತ್ರ ಉಳಿದಿವೆ ಎಂದು ಹೇಳಿದ್ದಾರೆ. ಆ ರೀತಿ ಮುಖ್ಯ ಮಂತ್ರಿಗಳ ಹೇಳಿಕೆ ಇದ್ದರೆ ನಾವು ಅದನ್ನು ಒಪ್ಪುವುದಿಲ್ಲ. ನಾವು ಇದರಲ್ಲಿ ಭಾಗವಹಿಸುವುದಕ್ಕೆ ಇಷ್ಟ ಪಡುವುದಿಲ್ಲ. ಇದು ನಮ್ಮ ಸ್ಪಷ್ಟ ಅಭಿಪ್ರಾಯ.

†ಶ್ರೀ ಎಂ. ಎಸ್. ಕೃಷ್ಣನ್.—ಈಗ ಈ ವಿಚಾರದಲ್ಲಿ ಪ್ರತಿಯೊಬ್ಬ ಸದಸ್ಯರೂ ಪದೇ ಪದೇ ಮಾತನಾಡುತ್ತಿದ್ದಾರೆ. ಆದರೆ ಇದರಲ್ಲಿ ಏನು ಸ್ಪಷ್ಟತೆ ಇದೆಯೆಂಬುದು ಗೊತ್ತಾಗಲಿಲ್ಲ. ಈ ಜಾಗವನ್ನು ಕಾಂಗ್ರೆಸ್ ವಸ್ತು ಪ್ರದರ್ಶನಕ್ಕೆ ಕೊಡುವುದಕ್ಕೆ ತೀರ್ಮಾನ ತೆಗೆದುಕೊಂಡಿದ್ದೇವೆ. ಇದರ ಬಗ್ಗೆ ವಿವರಗಳು ಮಾತ್ರ ಉಳಿದಿವೆ, ಇದರ ವಿವರಗಳು ಮತ್ತು ಷರತ್ತುಗಳನ್ನು ಮಾತ್ರ ವಿರೋಧಪಕ್ಷದವರೊಡನೆ ಚರ್ಚೆ ಮಾಡಿ ಈ ಬಗ್ಗೆ ತೀರ್ಮಾನವನ್ನು ತೆಗೆದುಕೊಳ್ಳುತ್ತೇವೆ ಎಂದು ಹೇಳುವುದಾದರೆ ಇದು ಬಹಳ ತೊಂದರೆಯಾಗುತ್ತದೆ; ಮತ್ತು ಬಹಳ ಗೊಂದಲಕ್ಕೆ ಅವಕಾಶವಾಗು ತ್ತದೆ. ಈ ವಿಷಯಕ್ಕೆ ವಿರೋಧಪಕ್ಷದವರಾದ ನಾವು ಒಪ್ಪಿಕೊಳ್ಳುವುದಕ್ಕೆ ತಯಾರಾಗಿಲ್ಲ. ಏನಾದರೂ ತೀರ್ಮಾನಕ್ಕೆ ಮುಂಚೆ ಮಾನ್ಯ ಮುಖ್ಯ ಮಂತ್ರಿಗಳು ನಮ್ಮೊಡನೆ ಸಮಾಲೋಚನೆ ಮಾಡುವುದಾದರೆ ಮಾಡಲಿ, ಏನೋ ಮರ್ಯಾದೆಗೋಸ್ಕರ ನಮ್ಮೊಡನೆ ಸಮಾಲೋಚನೆ ಮಾಡುತ್ತೇವೆ ಎಂದು ಹೇಳಿದರೆ ಅವು ಮರ್ಯಾದೆಯ ಮೇಲೆ ನಿಂತುಕೊಳ್ಳಬೇಕಾಗಿಲ್ಲ. ಆದ್ದರಿಂದ ಈ ಬಗ್ಗೆ ಸ್ಪಷ್ಟವಾದ ಅಭಿ ಪ್ರಾಯವನ್ನು ಹೇಳಿ. ಏನೋ ಮರ್ಯಾದೆಗೋಸ್ಕರ ವಿರೋಧಪಕ್ಷದವರೊಡನೆ ಸಮಾಲೋಚನೆ ಮಾಡಿ ಈ ಬಗ್ಗೆ ತೀರ್ಮಾನ ತೆಗೆದುಕೊಳ್ಳುತ್ತೇವೆ ಎಂದು ಹೇಳಿದರೆ ಅದರಿಂದ ಬೆಂಗಳೂರು ಜನತೆಗೆ ಸಮಾಧಾನವಾಗುವುದಿಲ್ಲ. ಮೈಸೂರು ರಾಜ್ಯದ ಜನಗಳಿಗೆ ಸಮಾಧಾನವಾಗುವುದಿಲ್ಲ. ಇದರಿಂದ ಒಂದ ದೊಡ್ಡ ತಪ್ಪುಮಾತ್ರವಲ್ಲ, ಒಂದು ಲೋಪ ಕೂಡ ಆಗುತ್ತದೆ.

Mr. SPEAKER.—Bangalore City is a part of the entire State of Mysore. It is not a question of satisfying one town or one city. More than that this city of Bangalore which is the capital of the State, does not belong only to people here but it belongs to the entire State and the entire State is represented in this body which is supreme. We are al

governed by the Constitution. Constitution is supreme. I am stating these points for the consideration of the hon. Members. I just permitted the Leader of the Opposition to raise the point about which he was anxious and the Chief Minister replied to that. I permitted on the assurance that he wanted to give notice under rule 312. He did it and I accepted it and the discussion went on. While permitting notice under rule 312 I thought it would shorten the whole thing and the normal proceedings can go on to the advantage of all the hon Members. Now it seems to me that we are not coming to any decision, and I am unable to bring the two sides together. Of course, I must say that I have become helpless in the matter. Therefore the only way to end this sort of discussion is far an hon. Member to move a motion upon which a decision of this House can be taken and I can allow it. We have taken oath of allegiance to the Constitution; let us abide by it. The Constitution is final and the rules regulating the procedure in this House are final. Therefore if any member wants a decision of this House to be taken, let a regular motion be moved under the Rules of Procedure. I will consider that motion and try to help the members to come to a decision in the matter. In the absence of such a motion, I request the hon. Members to stop this kind of discussion because no discussion can take place except on a motion.

AN HON. MEMBER.—Let us now adjourn.

Mr. SPEAKER.—The time is up to 7 p.m. and I am going to sit up to 7 p.m. Therefore, if the members want to have a decision in this matter, let them move a motion. Let us stop this and continue the work.

Sri K. H. PATIL.—On a point of order.

Mr. SPEAKER.—There can be no point of order against the ruling of the Chair.

Sri H. N. NANJE GOWDA.—We are seized of this matter. That being so, how can we give another motion ?

Mr. SPEAKER.—The hon. Member is probably talking out of ignorance. A request was made to raise the matter under rule 312. It is not a motion. It is only a point and explanation was given by the Chief Minister. It is not a motion.

Sri L. SRIKANTAIAH.—Sir, you were pleased to state that motion is not there. But you yourself was pleased to state "Will the House accept the Chief Minister's statement". That is the point at issue. The Chief Minister's statement is not clear. We wanted to clarify the matter.

Mr. SPEAKER.—I am not here to interpret. That statement is there. The hon. Members are at liberty to interpret. I only want to say it is only a point and no motion is before the House.

Sri H. N. NANJE GOWDA.—The Chief Minister is not a dictator. He can be summoned and asked to explain.

Mr. SPEAKER.—There is no scope for further discussion here. If the member wants to move a motion, he may do so. I will permit.

ಶ್ರೀ ಎಚ್. ಎನ್. ನಂಜೇಗೌಡ.—ನಾವುಗಳು ಕಳೆದ ನಾಲ್ಕು ಘಂಟೆಯಿಂದ ಅಪಾದನೆ ಮಾಡುತ್ತಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳೇನೂ ಸ್ವರ್ಗ ಲೋಕದಲ್ಲಿ ಇಲ್ಲ. ಇಲ್ಲಯೇ ಇರಬಹುದು. ಅವರಿಗೆ ಕೇಳಿಕಳಿಸಿ. ಅವರು ಬಂದು ಈ ವಿಷಯದಲ್ಲಿ ಭರವಸೆ ಕೊಡಬೇಕು. That will end the matter. We do not want to have a bad name. Why should the names of our leaders be dragged into this? ತೀರ್ಮಾನ ತೆಗೆದು ಕೊಳ್ಳುವುದು ಬಿಡುವುದು ನಮಗೆ ಸೇರಿದ್ದು, ನಾವು ಸರ್ಕಾರಿಕಾರಿಗಳಂತೆ ತೀರ್ಮಾನ ತೆಗೆದು ಕೊಳ್ಳುತ್ತೇವೆ, ಕಾಂಗ್ರೆಸ್ ವಸ್ತು ಪ್ರದರ್ಶನ ನಡೆಸುವುದಕ್ಕೆ ಆ ಜಾಗವನ್ನು ಕೊಡುತ್ತೇವೆ ಎಂದು ಹೇಳುವುದಾದರೆ ಹೇಳಿಬಿಡಲಿ. ಈ ಬಗ್ಗೆ ಒಂದು ಜಾಯಿಂಟ್ ಸ್ಟಾಕ್ ಕಂಪನಿ ಮಾಡಿಕೊಂಡು ಲಾಭ ಮಾಡಿಕೊಳ್ಳುತ್ತೇವೆಂದು ಹೇಳುವುದಾದರೆ ಹೇಳಿಬಿಡಲಿ. ನಾವು ಸುಮ್ಮನೆ ಗಾಳಿಗೆ ಗುದ್ದಿ ಕೈನೋಯಿಸಿಕೊಳ್ಳುವುದಕ್ಕೆ ಇಲ್ಲಿಗೆ ಬಂದಿಲ್ಲ.

Mr. SPEAKER.—It is not fair to attribute motives. No hon. Member should attribute motives. If members want a decision of this House let a proper motion be moved under the rules. At present there is no motion before the House.

Sri B. P. GANGADHAR.—I agree, motives should not be attributed to anybody. In fact we may have the impression that no motive is there. But what they are doing is beyond doubt and there is all the motive about it. They want to knock off this property. We want to dissociate ourselves from that.

ಶ್ರೀ ವಾಟಾಳ್ ನಾಗರಾಜ್.—ನಾವು ಬಹಳವಾಗಿ ಒತ್ತಾಯ ಮಾಡುತ್ತಿದ್ದೇವೆ. ಈಗ ಉತ್ತರ ಕೊಟ್ಟಿರುವುದು ನಮಗೆ ಸಮಂಜಸವಾಗಿ ಕಾಣುತ್ತಿಲ್ಲ. ಆದ್ದರಿಂದ ಕೂಡಲೇ ಮುಖ್ಯಮಂತ್ರಿಗಳನ್ನು ಕರೆಸಿ, ಇಲ್ಲದಿದ್ದರೆ ಸಭೆಯನ್ನು ಮುಂದಕ್ಕೆ ಹಾಕಿ. ಈ ಬಗ್ಗೆ ಸತ್ಯ ಸಂಗತಿಯನ್ನು ಸಭೆಗೆ ಮುಖ್ಯಮಂತ್ರಿಗಳು ತಿಳಿಸುವವರೆಗೂ ನಾವು ಜೀರೋ ಕಾರ್ಯಕಲಾಪಗಳನ್ನು ನಡೆಸುವುದಕ್ಕೆ ಬಿಡುವುದಿಲ್ಲ. ಈಗ ಮೂರು ಜನ ಮಂತ್ರಿಗಳು ಮೂರು ರೀತಿಯ ಉತ್ತರ ಕೊಟ್ಟಿದ್ದಾರೆ. ಯಾವುದು ಸರಿ ಎಂಬುದು ನಮಗೆ ತಿಳಿಯುತ್ತಿಲ್ಲ. ಮುಖ್ಯಮಂತ್ರಿಗಳು ಕಾಟಾಚಾರಕ್ಕೆ ಏನೋ ಒಂದು ಹೇಳಿಕೆ ಕೊಟ್ಟು ಹೋಗಿದ್ದಾರೆ. ಅವರನ್ನು ಮತ್ತೆ ಕರೆಸಿ ಸ್ಪಷ್ಟವಾದ ಹೇಳಿಕೆಯನ್ನು ತಾವು ಕೊಡಿಸಬೇಕು. ಅದುವರೆಗೆ ಮುಂದಿನ ಕಾರ್ಯಗಳನ್ನು ನಡೆಸುವುದಕ್ಕೆ ಬಿಡುವುದಿಲ್ಲವೆಂದು ನಾನು ಘಂಟಾಘೋಷವಾಗಿ ಹೇಳುತ್ತೇನೆ.

ಶ್ರೀ ಎಚ್. ಎನ್. ನಂಜೇಗೌಡ.—ಸರ್ಕಾರದವರು ಈ ವಿಷಯದಲ್ಲಿ ಭರವಸೆ ಕೊಡಬೇಕು. ಇಲ್ಲದಿದ್ದರೆ ಸರ್ಕಾರದವರು ತಮಗೆ ಇಷ್ಟಬಂದಂತೆ ತೀರ್ಮಾನ ತೆಗೆದುಕೊಳ್ಳುತ್ತೇವೆ, ವಿರೋಧ ಪಕ್ಷದವರನ್ನು ಕೇವಲ ಕೇಸ್‌ವರ್ಕರ್ ರೀತಿ ಇಟ್ಟುಕೊಳ್ಳುತ್ತೇವೆ ಎಂಬುದನ್ನಾದರೂ ಹೇಳಲಿ. ನಮ್ಮ ಅಭಿಪ್ರಾಯ ತೆಗೆದುಕೊಳ್ಳುವುದು ಬೇಡ ಅನ್ನತಕ್ಕಂಥ ಒಂದು ನಿರ್ದಿಷ್ಟವಾದ ಹೇಳಿಕೆಯನ್ನು ಸರ್ಕಾರದವರು ಕೊಡಲಿ, ಅದನ್ನು ದೇಶದ ಜನರು ಸಹ ಅರ್ಥಮಾಡಿಕೊಳ್ಳುತ್ತಾರೆ.

ಅಧ್ಯಕ್ಷರು.—ಹೊರಗೆ ತಾವು ಹೇಗೆ ಬೇಕಾದರೂ ಮಾತನಾಡಬಹುದು. ಆದರೆ ಸಭೆಯ ಒಳಗೆ ಮಾತನಾಡುವಾಗ ಸ್ವಲ್ಪ ಗಂಭೀರವಾಗಿ ಮಾತನಾಡಿದರೆ, ಚೆನ್ನಾಗಿರುತ್ತದೆ.

ಶ್ರೀ ವಾಟಾಳ್ ನಾಗರಾಜ್.—ಜವಾಬುದಾರಿ ಹೊತ್ತ ಮುಖ್ಯಮಂತ್ರಿಗಳು ಇಲ್ಲಿ ಹೇಳಬೇಕು.

† ಶ್ರೀ ಡಿ. ದೇವರಾಜ ಅರಸ್.—ಸ್ವಾಮಿ, ಇದುವರೆಗೆ ಮೂರು ಜನ ಮಂತ್ರಿಗಳು ಬೇರೆ ಬೇರೆಯಾಗಿ ಇಲ್ಲಿ ಏನು ಹೇಳಿದ್ದಾರೆ ಅದು ಆಗಲೇ ಇಲ್ಲಿನ ಪ್ರೊಸೀಡಿಂಗ್ಸ್‌ನಲ್ಲಿದೆ. ಇದರಲ್ಲಿ ಮೂರು ಜನ ಮಂತ್ರಿಗಳು ಹೇಳಿರುವ ಹೇಳಿಕೆ ಒಂದಕ್ಕೊಂದು ವಿರೋಧವಾಗಿವೆ ಎನ್ನುವ ವಿಚಾರಗಳ ಬಗ್ಗೆ ತಕ್ಷಣ ತಾವು ರಿಕಾರ್ಡ್‌ಗಳನ್ನು ತರಿಸಿ ಮಂತ್ರಿಗಳು ಹೇಳಿರುವ ಹೇಳಿಕೆಗಳಲ್ಲಿ ಅಂತಹ ಯಾವ ವಿಚಾರಗಳೂ ಇಲ್ಲ ಎಂದು ಕ್ಲಾರಿಫೈ ಮಾಡಿ ಹೇಳುತ್ತಾ ಎಲ್ಲ ಮಂತ್ರಿಗಳು ಹೇಳಿರುವ ಹೇಳಿಕೆಗಳಲ್ಲಿ ತಾತ್ವಿಕವಾಗಿ ಒಂದೇ ರೀತಿಯಾಗಿವೆ ಇದರಲ್ಲಿ ಯಾವ ರೀತಿಯಾದ ಭೇದ ಭಾವವೂ ಇಲ್ಲ ಎಂದು ಸ್ಪಷ್ಟವಾಗಿ ಹೇಳಿದ್ದೀರಿ. ನಮ್ಮ ವಿರೋಧ ಪಕ್ಷದ ನಾಯಕರು ಶಂಕೆ ವ್ಯಕ್ತಪಡಿಸುತ್ತಿರುವುದು

ಮುಖ್ಯ ಮಂತ್ರಿಗಳು ಹೇಳಿರುವ ಮಾತುಗಳನ್ನು ಒಪ್ಪುವುದು ಒಳ್ಳೆಯದು ಎಂದರೂ, ಪಾರ್ಲಿಮೆಂಟರಿ ಮಿನಿಸ್ಟರ್‌ವರು ವಿಶದೀಕರಣ ಮಾಡುವಾಗ, ಇದರ ಬಗ್ಗೆ ತೀರ್ಮಾನವಾಗಿದೆ ಇದರ ಡೀಟೆಲ್ಸ್‌ಗಳನ್ನು ಮಾತ್ರ ಪರಿಶೀಲನೆ ಮಾಡಬೇಕು ಎಂದಾಗ ಇದನ್ನು ಒಪ್ಪುವುದು ಕಷ್ಟವಾಗುತ್ತದೆ ಎಂದು ಅವರು ಹೇಳುತ್ತಾರೆ. ಇನ್ನೂ ಕೆಲವು ಮಾನ್ಯ ಸದಸ್ಯರು ಶ್ರೀಮಾನ್ ವಾಟಾಳ್ ನಾಗರಾಜ್‌ರವರು, ಶ್ರೀಮಾನ್ ನಂಜೇಗೌಡರು ಇನ್ನೂ ಸ್ಪಷ್ಟವಾಗಿ ಹೇಳಬೇಕೆಂದು ಕೇಳುತ್ತಿದ್ದಾರೆ. ಆಗಲೇ ಇವೆರೆಲ್ಲಾ ಸ್ಪಷ್ಟವಾಗಿ ಹೇಳಬೇಕಾದುದನ್ನೆಲ್ಲಾ ಹೇಳಿಬಿಟ್ಟಿದ್ದಾರೆ. ಅದು ಸರಿಯೇ ತಪ್ಪೇ ಎನ್ನುವುದರ ಬಗ್ಗೆ ಮುಖ್ಯಮಂತ್ರಿಗಳು ವಿವರಣೆ ಕೊಡಬೇಕೆಂದು ಕೇಳುತ್ತಿದ್ದಾರೆ. ಸಂಬಂಧಪಟ್ಟ ಮಂತ್ರಿಗಳೇ ಆಗಲಿ ಮುಖ್ಯ ಮಂತ್ರಿಗಳೇ ಆಗಲಿ ಇದರ ಬಗ್ಗೆ ಹೇಳುವುದನ್ನೆಲ್ಲಾ ಹೇಳಿರುವಾಗ ಇಲ್ಲಿ ಸಭೆಯ ನಡೆವಳಿಕೆಗಳನ್ನು ನಡೆಸುವುದಕ್ಕೆ ಬಿಡುವುದಿಲ್ಲ ಎಂದು ಹೇಳಿದರೆ ಹೇಗೆ? ಕಾನೂನು ಪ್ರಕಾರ ಮಂತ್ರಿಗಳೇ ಆಗಲೀ ಮುಖ್ಯ ಮಂತ್ರಿಗಳೇ ಆಗಲೀ ಹೇಳಲೇಬೇಕು ಎಂದು ನಿರ್ಬಂಧ ಮಾಡುವುದು ನನಗೆ ಅರ್ಥವಾಗುವುದಿಲ್ಲ. ಸರಕಾರದವರು ತಮಗೆ ಇಷ್ಟಪಟ್ಟು ಹೇಳುವುದನ್ನೆಲ್ಲಾ ಹೇಳಿದ್ದಾರೆ. ಮತ್ತೆ ಈ ಸಭೆಯಲ್ಲಿ ಮುಂದಿನ ಯಾವ ಕಾರ್ಯ ಕ್ರಮಗಳನ್ನೂ ನಡೆಸುವುದಕ್ಕೆ ಬಿಡುವುದಿಲ್ಲ ಎಂದು ಶ್ರೀಮಾನ್ ವಾಟಾಳ್ ನಾಗರಾಜ್‌ರವರು ಹೇಳುವುದು ನನಗಂತೂ ಸ್ಪಷ್ಟವಾಗಿ ಅರ್ಥವಾಗುತ್ತಿಲ್ಲ. ಅವರೊಬ್ಬರಿಗಾಗಿಯೇ ಏನು ಈ ಸಭೆಯನ್ನು ನಡೆಸುತ್ತಿರುವುದು? ಈ ಸಭೆಯಲ್ಲಿ ಇನ್ನೂ ಇತರ ಸದಸ್ಯರುಗಳೂ ಇದ್ದಾರೆ ಅವರೆಲ್ಲರೂ ಇದನ್ನು ಕೇಳಿಕೊಂಡೇ ಇರಬೇಕೇನು? ಒಂದು ವೇಳೆ ಸರಕಾರ ತೀರ್ಮಾನ ಮಾಡಿರುವುದು ತಪ್ಪು ಎಂದು ಅವರಿಗೆ ಕಂಡುಬಂದ ಪಕ್ಷದಲ್ಲಿ ವಿರೋಧ ಪಕ್ಷದವರು ಬೇರೆ ವಿಚಾರ ತಂದು ಇಲ್ಲಿ ಸರಿಯಲ್ಲ ಎಂದು ಹೇಳಲಿ. ಬೇಕಾದರೆ, ಈ ಅಸೆಂಬ್ಲಿ ಮುಂದೆ ಈ ರೀತಿ ಮಾಡುವುದು ಸರಿಯಲ್ಲ ಎಂದು ಒಂದು ಖಂಡನಾ ನಿರ್ಣಯವನ್ನು ಕೂಡಲೇ ತಂದು ಅದರ ಬಗ್ಗೆ ಚಾತನಾದಬಹುದಲ್ಲ. ಇದನ್ನು ಬಿಟ್ಟು ಸಭೆಯ ನಡವಳಿಕೆಗಳನ್ನು ನಡೆಯಲು ಬಿಡುವುದಿಲ್ಲ ಎಂದು ಹೇಳುವುದು ತೀರಾ ವಿಷಾದಕರವಾದುದು. ಇಂತಹ ಒಂದು ಆಟಿಟ್ಯೂಡ್ ವಿರೋಧ ಪಕ್ಷದ ಸದಸ್ಯರಲ್ಲಿ ಇರುವುದು ಸರಿಯಲ್ಲ. ಅಂಥ ಒಂದು ಭಾವನೆ ಅಷ್ಟು ಸೂಕ್ತವೂ ಅಲ್ಲ. ಅವರೆಲ್ಲರೂ ಈ ಸಭೆ ಸೂಕ್ತವಾಗಿ ನಡೆಯುವುದಕ್ಕೆ ದಯಮಾಡಿ ಅವಕಾಶ ಕೊಡಲಿ. ಈ ರೀತಿ ಅಡ್ಡಿ ಮಾಡುವುದು ಸರಿಯಲ್ಲ. ಈ ವಿಚಾರದಲ್ಲಿ ಎಷ್ಟು ಚರ್ಚೆ ಮಾಡಿದರೂ ಸಮಾಧಾನಕರವಾಗಿಲ್ಲ ಎಂದರೆ ಬಿಡಿ. ಮುಂದಿನ ಸಭಾಕಾರ್ಯಕಲಾಪಗಳು ನಡೆಯಲು ಅವಕಾಶ ಮಾಡಿಕೊಡಿ. ಮೂರು ಜನ ಮಂತ್ರಿಗಳು ಅವರು ಹೇಳುವುದನ್ನೆಲ್ಲಾ ಹೇಳಿದ್ದಾರೆ. ಇದನ್ನು ಅಲ್ಲಗೇ ಬಿಡಿ.

The rice that we have been making available through the public distribution system is from (a) allotments from the Government of India from the Central pool and (b) paddy procured within the State. The Central allotments have been stopped from August 1968. We had, therefore, to depend entirely on internal procurement of paddy for sustaining the public distribution system. By the end of December 1968, practically all the rice stocks with Government from earlier procurement were exhausted and, in the absence of any allotment of rice by the Central Government, we had perforce to reduce the scale of issues of rice in Bangalore City. Procurement under the Paddy Levy Order for the 1968-69 season no doubt commenced in November last year and by now we have built up a sizeable stock of about 80,000 tonnes of paddy. But the procured paddy being wet, it will take some time before it is milled and made available through the public distribution system. In the circumstances, I made a special request to the Government of India for an emergent allotment of 5,000 tonnes of rice and I am glad to inform the House that they have done so. As a result, we have been able to enhance the issues from 50 per cent to 75 percent of the normal issues.

I should like to point out here that the policy of the Government is so to adjust the distribution that we are in a position to make liberal issues though the Fair Price Shops at a time when the ruling prices in the open market are high and the consuming public is really in need of such issues at reasonable prices. At present no such exigency exists. I may be permitted to say that this being the post-harvest season, there is an easy availiability of grains in the market and the ruling prices are also not high, particularly on account of a good harvest. In fact, the current ruling prices are much less than those prevailing at the corresponding period last year. The House will agree with me that it would be prudent to conserve the stocks of rice available with the Food Department for issue during the lean months to come.

While we are not wholly satisfied with the quality of rice issued through Fair Price Shops, I would like to mention that a number of steps have been taken to improve the quality. Strict instructions have been given to the staff at all levels to pay particular attention to quality control at procurement, milling and distribution points. All the retail agents have been instructed to return any sub-standard rice that they may receive from the wholesalers and the Department has made arrangements for replacing such stocks by good quality grains. So far as wheat is concerned, it cannot be admitted that wheat is generally bad, even though the allotments now being received in the State are from the older stocks held by the Government of India. Nonetheless instructions have been issued to the concerned people that wheat should be issued to retailers only after due cleaning wherever necessary. Retailers have also been advised to return any bad quality stock of wheat which they might have received in spite of these instructions and to take back good grains.

Because of the liberal allotment of wheat by the Government of India in the last few months, we have built up a comfortable stock of wheat and are now in a position to make liberal issues. The quantity of wheat issued from the Fair Price Shops has been doubled and consumers are enabled through special permits to make bulk purchases of wheat to the extent of one quintal per card per month. Wheat products like maida and sojee are also available in plenty in the Fair Price Shops as well as in the open market. This should more than make up the shortfall in the issues of rice.

Hon'ble Members are aware that till the month of November 1967, the entire production of sugar in the country was controlled and was availeble for issues by the Government. The State Government, at that time, used to get a monthly allotment of 7,938 tonnes of sugar. We were issuing this sugar not only to domestic consumers, but also to bulk consumers and industries. Subsequent to the partial decontrol of sugar, under which 40 per cent of the production was released for the open market, the State Government's allotment was reduced to 5,036 tonnes. As a result of this reduction, we wereforced to confine the issues of sugar primarily to domestic consumers and leave others to buy their requirement from the open market. As a result, we were able to maintain the issues to card-holders at the same level as before.

From the sugar-month January-February 1969, the allotment to the State has been increased to 6,387 tonnes per month. We have, therefore, been able to issue an extra kg. of sugar per card per month in Bangalore City. Additional requirements will perforce have to be met by purchases in the open market where it is freely available. It would be appreciated that the scale of issue of sugar through the Fair Price Shops would depend on the allotments made by the Government of India to the State.

Papers laid on the Table

Sri RAMAKRISHNA HEGDE (Minister for Finance, Planning and Youth Welfare).—I beg to lay Notification No. HD 24 EFL 68 dated 16th January 1969—The Mysore Excise (Manufacture of Wines from Grapes) Rules, 1968 under sub-section (4) of Section 71 of the Mysore Excise Act. 1965.

Sri H. V. KOUJALGI (Minister for Revenue).—I beg to lay Order No. RD 33 GST 62 dated 18th February 1969 Reduction or Remission of Stamp duties chargeable under sub-section (2) of Section 9 of the Mysore Stamp Act, 1957.

Mr. SPEAKER.—The Notification and the order are laid on the Table.

Sri RAMAKRISHNA HEGDE.—Sir, on behalf of the Minister for Industries, Information and Publicity, I beg to lay Annual Report for 1967-68—Tungabhadra Steel Product Limited, Bellary, under section 619 (A) of the Companies Act, 1956.

Mr. SPEAKER.—The Report is laid on the Table.

Budget Estimate for 1969-70
General Discussion

(Debate Continued)

Mr. SPEAKER.—Now, the General Discussion on the Budget Estimates will continue. Sri T. R. Shamanna will continue his speech.

† ಶ್ರೀ ಟಿ. ಆರ್. ಶಾಮಣ್ಣ.—ಮಾನ್ಯ ಅಧ್ಯಕ್ಷರೇ, ಈ ಬಜೆಟ್ ಮೇಲೆ ಮೊನ್ನೆ ಮಾತನಾಡುತ್ತಾ ಬೆಂಗಳೂರು ನಾಗರೀಕರಿಗೆ ಒದಗಬೇಕಾಗಿದ್ದ ಉಚಿತ ನೀರಿನ ಸೌಲಭ್ಯ 1965 ರಿಂದಲೂ ಜಾರಿಗೆ ಬರಬೇಕೆಂದು ಹೇಳುತ್ತಿದ್ದೆ. ಅದಕ್ಕೆ ಕಾರಣವಾದರೂ ಇಷ್ಟೆ, ಮನೆ ಕಂದಾಯದ ಮೇಲೆ ಹೆಚ್ಚಿನ ತೆರಿಗೆಯನ್ನು ಉಚಿತ ನೀರನ್ನು ಕೊಡುವ ಉದ್ದೇಶದಿಂದ 1965ರಲ್ಲಿ ಹಾಕಿದರು. ಆದರೂ ಸಹ ವಿನಾಕಾರಣವಾಗಿ ನೀರಿನ ದರವನ್ನು 1965ರಿಂದ ಹೆಚ್ಚು ಮಾಡಿದ್ದಾರೆ. ಇದು ಸರಿಯಲ್ಲ. ಈಗ ಕೊಟ್ಟಿರುವ ಉಚಿತ ನೀರಿನ ಸೌಲಭ್ಯವನ್ನು 1965ರಿಂದಲೂ ಕೊಡಬೇಕೆಂದು ಒತ್ತಾಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ. ಇದರ ಬಗ್ಗೆ ಇನ್ನೂ ಹೆಚ್ಚಿನ ಚರ್ಚೆ ಮಾಡಬೇಕಾದ ಅವಶ್ಯಕತೆ ನನಗೆ ಕಾಣುತ್ತಿಲ್ಲ.

ಇನ್ನು ದೇಶದ ಹಣಕಾಸಿನ ಪರಿಸ್ಥಿತಿ ಅಷ್ಟೊಂದು ಹಿತಕರವಾಗಿಲ್ಲ. ಹಣಕಾಸಿನ ಉಳಿತಾಯದ ಬಗ್ಗೆ ಸಾಧ್ಯವಾದ ಎಲ್ಲಾ ವ್ಯವಸ್ಥೆಗಳನ್ನು ಮಾಡುವುದಕ್ಕೆ ಮತ್ತು ಹಣಕಾಸಿನ ವ್ಯವಸ್ಥೆಯನ್ನು ನಿರಪಡಿಸುವುದಕ್ಕೆ ಮಂತ್ರಿಮಂಡಲದವರು ಸೂಕ್ತವಾದ ಕ್ರಮವನ್ನು ತೆಗೆದು ಕೊಳ್ಳುತ್ತಾರೆಂಬ ಭರವಸೆ ನನಗಿದೆ. ಕಳೆದ ಎರಡು ದಿನಗಳಿಂದ ನುಭಾಸ್ ನಗರದ ಭೂಮಿಯ ಬಗ್ಗೆ ಚರ್ಚೆ ನಡೆದಿದೆ. ಈ ಜಾಗ 5 ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚು ಬೆಲೆ ಬಾಳುತ್ತದೆ. ಈ ಜಾಗವನ್ನು ಪರೀಪಾರಿ ಮಾಡುವ ಬಗ್ಗೆ ಈ ಸಭೆಯಲ್ಲಿ ಸಾಕಷ್ಟು ಚರ್ಚೆ ಮತ್ತು ಮಾತು ಕತೆಗಳು ನಡೆದಿವೆ. ಇದರ ಔಚಿತ್ಯದ ಬಗ್ಗೆ ನಾನು ಹೋಗುವುದಿಲ್ಲ. ನನ್ನ ಒಂದು ಸಲಹೆ ಎಂದರೆ ಬೆಂಗಳೂರು ನಗರಕ್ಕೆ ಹೊರಗಿನಿಂದ ಅನೇಕ ಪ್ರಯಾಣಿಕರು ವ್ಯಾಪಾರಕ್ಕಾಗಿ, ಕೋರ್ಟು ಕಛೇರಿಗಳ ಕೆಲಸಕ್ಕಾಗಿ ಬರುತ್ತಾರೆ. ಅನೇಕ ವಿದ್ಯಾರ್ಥಿಗಳು ಹೊರಗಡೆಯಿಂದ ಬೆಂಗಳೂರಿಗೆ ಬಂದರೆ ಇಳಿದುಕೊಳ್ಳುವುದಕ್ಕೆ ಸಾಕಷ್ಟು ಜಾಗವಿಲ್ಲ. ಆದ್ದರಿಂದ ಈ ಜಾಗದಲ್ಲಿ ಸರ್ಕಾರದ ಮುಖೇನ ವಸ್ತುಪ್ರದರ್ಶನವನ್ನು ಏರ್ಪಡಿಸಲು ಮಳಿಗೆಗಳನ್ನು ಕಟ್ಟಿಸಬೇಕು. ಈ ಮಳಿಗೆಗಳ ಮೇಲೆ

ರೂಮುಗಳನ್ನು ಕಟ್ಟಿಸಬೇಕು. ಈ ಜಾಗ ರೈಲ್ವೇಸ್ಟೇಷನ್‌ಮತ್ತು ಬಸ್‌ಸ್ಟ್ಯಾಂಡ್‌ಗೆ ಹತ್ತಿರ ವಿರುವುದರಿಂದ ಕ್ಯಾಂಟಿನ್ ಮತ್ತು ಮಾರ್ಕೆಟ್‌ನ್ನು ನಡೆಸುವುದಕ್ಕೆ ಏರ್ಪಾಡು ಮಾಡಬೇಕು. ಈ ರೀತಿ ಮಾಡಿಸಿದರೆ ಪ್ರಯಾಣಿಕರು ಬಾಂದು ಇಳಿದುಕೊಳ್ಳುವುದಕ್ಕೆ ಮತ್ತು ವಿದ್ಯಾರ್ಥಿಗಳು ಇಳಿದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಈ ರೀತಿ ಮಾಡಿಸಿದರೆ ಸರ್ಕಾರಕ್ಕೆ ವರ್ಷಕ್ಕೆ 10 ಲಕ್ಷ ರೂಪಾಯಿಗಳ ವರಮಾನ ಬರುತ್ತದೆಂದು ಹೇಳುತ್ತೇನೆ. ಆದ್ದರಿಂದ ಸರ್ಕಾರದವರು ಈ ಜಾಗವನ್ನು ತಮ್ಮ ಪಕ್ಷದವರಿಗೆ ಕೊಟ್ಟು ತಮ್ಮ ಪಕ್ಷವನ್ನು ಬಲಗೊಳಿಸಿಕೊಳ್ಳುವುದಕ್ಕೆ ಅವಕಾಶ ಕೊಡದೆ ದೇಶದ ಹಣಕಾಸಿನ ಪರಿಸ್ಥಿಯನ್ನು ಬಲಗೊಳಿಸಿಕೊಳ್ಳುವುದಕ್ಕೆ ಏರ್ಪಾಡು ಮಾಡಬೇಕು, ನನಗೆ ಈ ಬಗ್ಗೆ ತಿಳಿದಿರುವಂತೆ ಸರ್ಕಾರದವರು ಈ ಜಾಗದಲ್ಲಿ ಕಾಂಗ್ರೆಸ್ ಪಕ್ಷದ ಮೂಲಕ ವಸ್ತು ಪ್ರದರ್ಶನದ ಕಟ್ಟಡವನ್ನು ಕಟ್ಟಿಸಬೇಕೆಂಬ ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆಂದು ತಿಳಿದು ಬಂದಿದೆ. ಇದು ಸಾರ್ವಜನಿಕರ ಸ್ವತ್ತಾಗಿರಬೇಕೇ ಹೊರತು ಕಾಂಗ್ರೆಸ್ ಪಕ್ಷದ ಸ್ವತ್ತಾಗಿರಬಾರದು ಎಂದು ಹೇಳಿದರೆ ತಪ್ಪಾಗಲಾರದು ಎಂದು ನಾನು ತಿಳಿದುಕೊಂಡಿದ್ದೇನೆ.

ಇನ್ನು ಬೆಂಗಳೂರಿನಲ್ಲಿ ಸೋಷಿಯಲ್ ಕ್ಲಬ್‌ಗಳನ್ನು ನಡೆಸುವುದಕ್ಕೆ ಸರ್ಕಾರದವರು ಲೈಸೆನ್ಸ್ ಕೊಡುತ್ತಿದ್ದಾರೆ. ಇವು ಸೋಷಿಯಲ್ ಕ್ಲಬ್‌ಗಳು ಆಗದೆ ಜೂಜಿನ ಕಟ್ಟೆಗಳಾಗಿವೆ. ಇಂತಹ ಕ್ಲಬ್‌ಗಳು ಬೆಂಗಳೂರಿನಲ್ಲಿ 200ಕ್ಕೂ ಹೆಚ್ಚು ಇವೆ. ಒಂದೊಂದು ಕ್ಲಬ್‌ನಲ್ಲಿಯೂ ಸಾವಿರಾರು ರೂಪಾಯಿಗಳ ಜೂಜು ನಡೆಯುತ್ತಿರುತ್ತದೆ. ಇಂತಹ ಕ್ಲಬ್‌ಗಳ ಮೇಲೆ ಸೂಕ್ತ ಕ್ರಮ ಕೈಗೊಳ್ಳದಿದ್ದರೆ ಅನೇಕ ಮನೆಗಳು ಹಾಳಾಗುತ್ತವೆ. ಆದ್ದರಿಂದ ಸರ್ಕಾರದವರು ಇವುಗಳ ಬಗ್ಗೆ ಸೂಕ್ತ ಕ್ರಮ ಕೈಕೊಂಡು ಜೂಜಾಟವನ್ನು ನಿಲ್ಲಿಸುವುದಕ್ಕೆ ಪ್ರಯತ್ನ ಮಾಡಬೇಕು. ಇಲ್ಲದಿದ್ದರೆ ಸಂಪಾದನೆಯಾಗುವುದರಲ್ಲಿ ಮುಕ್ಕಾಲು ಭಾಗವನ್ನು ಸರ್ಕಾರದವರು ತೆಗೆದುಕೊಳ್ಳುವುದಕ್ಕೆ ಏರ್ಪಾಡು ಮಾಡಿದರೆ ಸುಮಾರು 10 ಲಕ್ಷ ರೂಪಾಯಿಗಳಷ್ಟು ವರಮಾನ ಸರ್ಕಾರಕ್ಕೆ ಬರುತ್ತದೆಂದು ಸಲಹೆ ಕೊಡುತ್ತೇನೆ. ಸರ್ಕಾರದ ಗಮನ ಈ ಕಡೆಗೆ ಏತಕ್ಕೆ ಹೋಗಿಲ್ಲ ಎಂಬ ಬಗ್ಗೆ ಆಶ್ಚರ್ಯಪಡಬೇಕಾಗಿದೆ. ಸೋಷಿಯಲ್ ವೆಲ್‌ಫೇರು ಇನ್ಸ್‌ಟಟ್ಯೂಷನ್‌ಗಳು ಎಂದು ಹೆಸರು ಇಟ್ಟುಕೊಂಡು ಇದರಲ್ಲಿ ಜೂಜಾಟ ನಡೆಯುತ್ತಿದೆ. ಟೋಕನ್ ಸಿಸ್ಟಂ ಎಂದು ಮಾಡಿಕೊಂಡು ಇದರಲ್ಲಿ ಸಾವಿರಾರು ರೂಪಾಯಿಗಳಷ್ಟು ಅವ್ಯವಹಾರಗಳು ನಡೆಯುತ್ತಿವೆ. ಇದನ್ನು ತಪ್ಪಿಸುವುದಕ್ಕೆ ಸೂಕ್ತವಾದ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕು ಮತ್ತು ಇದರಿಂದ ಸರಕಾರಕ್ಕೂ ಹೆಚ್ಚು ದುಡ್ಡು ಸಂಪಾದನೆ ಮಾಡುವುದಕ್ಕೆ ಒಂದು ದಾರಿ ಮಾಡಿಕೊಟ್ಟಂತಾಗುತ್ತದೆ ಎಂದು ಇಲ್ಲಿ ಹೇಳಲು ಇಷ್ಟಪಡುತ್ತೇನೆ.

ನಮ್ಮ ಬೆಂಗಳೂರು ನಗರದಲ್ಲಿ ಸುಮಾರು 15 ಲಕ್ಷ ಜನರಿದ್ದಾರೆ. ಇಲ್ಲ ಕಾರ್ಪೊರೇಷನ್ ಸ್ವಿಮಿಂಗ್ ಪೂಲು ಒಂದನ್ನು ಬಿಟ್ಟರೆ ಬೇರೆ ಯಾವ ಕಡೆಯಲ್ಲೂ ಒಂದು ಸ್ವಿಮಿಂಗು ಪೂಲು ಇಲ್ಲ ಮತ್ತು ಒಂದು ಸುವ್ಯವಸ್ಥಿತವಾದ ಸ್ವಿಮಿಂಗು ಪೂಲನ್ನು ಈ ನಗರದ ನಾನಾ ಭಾಗಗಳಲ್ಲಿ ಮಾಡಿದರೆ ಜನಕ್ಕೆ ಅನುಕೂಲವಾಗುತ್ತದೆ. ಅನೇಕ ದೊಡ್ಡ ಪಟ್ಟಣಗಳಲ್ಲಿ ಇಂತಹ ವ್ಯವಸ್ಥೆ ಇದೆ. ಆದುದುರಿಂದ ನಮ್ಮ ಬೆಂಗಳೂರು ನಗರದಲ್ಲೂ ಇಂತಹ ಒಂದು ಸುವ್ಯವಸ್ಥಿತವಾದ ಸ್ವಿಮಿಂಗು ಪೂಲನ್ನು ಮಾಡಲು ಸರಕಾರ ಸೂಕ್ತ ಗಮನ ಕೊಡಬೇಕು ಎಂದು ಇಲ್ಲಿ ಸಲಹೆ ಮಾಡುತ್ತೇನೆ

ನಮ್ಮ ಬೆಂಗಳೂರು ನಗರದಲ್ಲಿ ಯಾವುದೋ ಕಾಲದಲ್ಲಿ ರಸ್ತೆಗಳನ್ನು ನಿರ್ಮಾಣ ಮಾಡಿದರು. ಈಗ ಇಲ್ಲಿನ ಜನಸಂಖ್ಯೆ ಸುಮಾರು 15 ಲಕ್ಷಕ್ಕೂ ಮೀರಿ ಹೋಗಿದೆ. ಬೆಂಗಳೂರು ನಗರದಲ್ಲಿ ಕೇಂದ್ರದ ಕೈಗಾರಿಕೆಗಳು ಹೆಚ್ಚಾಗುತ್ತಿರುವುದರಿಂದ ಇಲ್ಲಿನ ಜನರ ನಿಬಿಡ ಹೆಚ್ಚಾಗುತ್ತಿದೆ. ಇದಕ್ಕಾಗಿ ಅಲ್ಲಲ್ಲಿ ಕಾರ್ಪೋರೇಷನ್ನಿನವರು ಅದಷ್ಟೂ ರಸ್ತೆಗಳನ್ನು ದೊಡ್ಡದು ಮಾಡಬೇಕೆಂದು ಅಲ್ಲಲ್ಲಿ ಮಾಡುತ್ತಿದ್ದಾರೆ. ಇದರಿಂದಲೂ ಜನರಿಗೆ ತೊಂದರೆಯಾಗುತ್ತಿದೆ. ಅದರಲ್ಲೂ ಜನರು ರಸ್ತೆಗಳಲ್ಲಿ ಸುಖವಾಗಿ ಪ್ರಯಾಣ ಮಾಡಲು ತಕ್ಕ ಸೌಕರ್ಯಗಳನ್ನು ಮಾಡಿಕೊಡುತ್ತಿಲ್ಲ. ಇದರಲ್ಲೂ ಬೆಂಗಳೂರು ನಗರದಲ್ಲಿ ಬಿ. ಟಿ. ಎಸ್. ಬಸ್ಸುಗಳ ಹಾವಳಿ ಹೇಳತೀರದು. ಒಂದು ಕಡೆ ಈ ಬಸ್ಸುಗಳು ಪುಟ್‌ಪಾತ್ ಮೇಲೆ ಹತ್ತಿ ಜನರ ಪ್ರಾಣಕ್ಕೆ ಹಾನಿ ಉಂಟುಮಾಡುತ್ತವೆ ಮತ್ತು ಇನ್ನೊಂದು ಕಡೆ ಬಸ್ಸು ರಸ್ತೆಯಲ್ಲಿ ಅಂಚಿನಲ್ಲಿರುವ ಕಾಂಪೌಂಡು ಒಳಕ್ಕೆ ನುಗ್ಗುತ್ತವೆ. ಇದರಿಂದ ಎಷ್ಟೋ ಅನಾಹುತಗಳಾಗುತ್ತವೆ ಅನೇಕರ ಪ್ರಾಣ ಹಾನಿಗಳೂ ಆಗುತ್ತವೆ. ಇಂತಹ ಪರಿಸ್ಥಿತಿಯಲ್ಲಿ ಜನರು ಓಡಾಡುವುದೇ ಕಷ್ಟವಾಗುತ್ತಿದೆ. ಇದರ ಬಗ್ಗೆ ತಕ್ಕ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ಇಲ್ಲಿ ಒತ್ತಿ ಹೇಳುತ್ತೇನೆ. ಇನ್ನೊಂದು ದಿನ ಬುರ್ ಟೆಂಪರ್ ರಸ್ತೆಯಲ್ಲಿ ನಾನು ಬಸವನಗುಡಿಯಲ್ಲಿ ಕಾರು ತೆಗೆದುಕೊಂಡು ಹೋಗುತ್ತಿದ್ದಾಗ ನನ್ನ ಪ್ರಾಣವೂ ಹೋಗುವುದರಲ್ಲಿತ್ತು. ಆದುದರಿಂದ ಇಂತಹ ಅಪಘಾತಗಳು ಬಿ. ಟಿ. ಎಸ್. ಬಸ್ಸುಗಳಿಂದಾಗುತ್ತಿರುವುದರ ಕಡೆಗೆ ಸೂಕ್ತವಾದ ಗಮನ ಕೊಡಬೇಕು.

(ಶ್ರೀ ಟಿ. ಆರ್. ಶಾಮಣ್ಣ)

ಮುಕ್ತ ಬೆಂಗಳೂರು ನಗರದಲ್ಲಿ ಈಗ್ಗೆ ಎರಡು ವರ್ಷಗಳ ಹಿಂದೆ ಕಾರ್ಪೊರೇಷನ್‌ನಲ್ಲಿ ಎಷ್ಟು ಸ್ಲಂಗಳು ಇದ್ದವೋ ಅಷ್ಟೇ ಈಗಲೂ ಇವೆ. ಇವನ್ನು ಕ್ಲೀಯರ್ ಮಾಡಲು ಇನ್ನೂ ಆಗಲಿಲ್ಲ. ಈ ಬೆಂಗಳೂರು ನಗರದಲ್ಲಿ ನುಮಾರು ನೂರೆಂಟು ಸ್ಲಂಗಳಿವೆ. ಇದರಿಂದ ಬೆಂಗಳೂರು ನಗರ ಸುಂದರ ನಗರವಾಗುವುದಕ್ಕೆ ಬದಲಾಗಿ ಸ್ಲಂಗಳ ನಗರವಾಗುತ್ತಿದೆ. ಇಂತಹ ಸ್ಲಂಗಳನ್ನು ಬೇಗನೆ ಕ್ಲೀಯರು ಮಾಡಲು ಸೂಕ್ತವಾದ ಕಾರ್ಯಕ್ರಮಗಳನ್ನು ಸರಕಾರದವರು ತೆಗೆದುಕೊಳ್ಳಬೇಕೆಂದು ನಾನು ಇಲ್ಲಿ ಹೇಳಲು ಇಷ್ಟಪಡುತ್ತೇನೆ.

ಸ್ಲಂಗಳು ಹೆಚ್ಚಾಗುತ್ತಿರುವುದರಿಂದ ಈ ನಗರದಲ್ಲಿ ಸೊಳ್ಳೆ ಕಾಟ ಬಹಳ ಜಾಸ್ತಿಯಾಗುತ್ತಿದೆ. ಸ್ಲಂಗಳನ್ನು ಕ್ಲೀಯರು ಮಾಡಿದ ಹೊರತು ಸೊಳ್ಳೆ ಕಾಟ ತಡೆಯಲು ಆಗುವುದಿಲ್ಲ. ಬೆಂಗಳೂರಿನಲ್ಲೇ ಈಚೆಗೆ ಸೊಳ್ಳೆ ಕಾಟ ಬಹಳ ಜಾಸ್ತಿಯಾಗಿದೆ. ನಾನು ಕಲವು ದಿನಗಳ ಹಿಂದೆ ಇಲ್ಲಿನ ದೊಡ್ಡ ಆಸ್ಪತ್ರೆಯೊಂದರಲ್ಲಿ 8–10 ದಿನಗಳು ಇರಬೇಕಾಗಿ ಬಂತು. ಆಗ ಅಲ್ಲಿದ್ದಂತಹ ಸೊಳ್ಳೆ ಕಾಟವನ್ನು ತಡೆಯಲು ನನಗೇ ಅಸಾಧ್ಯವಾಯಿತು. ಇಂತಹ ಸೊಳ್ಳೆ ಕಾಟವನ್ನು ತಡೆಯಲು ಇಲ್ಲಿರುವ ಆಸ್ಪತ್ರೆಗಳವರು ತಕ್ಕ ಕ್ರಮಗಳನ್ನು ತೆಗೆದುಕೊಳ್ಳುತ್ತಿಲ್ಲ. ಸೊಳ್ಳೆ ಕಾಟ ಎನ್ನುವುದು ಹಿಂದೆ ಮಂಡ್ಯದಲ್ಲಿತ್ತು. ಅಲ್ಲಿ ಕಡಿಮೆ ಮಾಡಿದರು, ಮಲೆನಾಡಿನಲ್ಲಿ ಸೊಳ್ಳೆ ಕಾಟ ಕಡಿಮೆ ಮಾಡಿದರು ಹಾಗೂ ಇನ್ನು ಇತರ ಕಡೆ ಕಡಿಮೆ ಮಾಡಿದರು. ಆದರೆ ಬೆಂಗಳೂರು ಹತ್ತಿರ ಮಾತ್ರ ಈ ಸೊಳ್ಳೆ ಕಾಟವನ್ನು ತಪ್ಪಿಸಲು ಈ ಸರಕಾರಕ್ಕೆ ಆಗಲಿಲ್ಲ. ಈ ಸೊಳ್ಳೆ ಕಾಟವನ್ನು ತಪ್ಪಿಸುವ ಜವಾಬ್ದಾರಿಯನ್ನು ಕಾರ್ಪೊರೇಷನ್ನಿನವರ ಮೇಲೆ ಬಿಟ್ಟರೆ ಅವರೇನೂ ಮಾಡುವುದಕ್ಕೆ ಆಗುವುದಿಲ್ಲ. ಆದುದರಿಂದ ಸರಕಾರದವರೇ ಸೊಳ್ಳೆಕಾಟವನ್ನು ತಪ್ಪಿಸುವುದಕ್ಕೆ ಇನ್ನೂ ಹೆಚ್ಚು ಅನಕ್ಕೆ ವಹಿಸಬೇಕೆಂದು ಇಲ್ಲಿ ಹೇಳಲು ಇಷ್ಟಪಡುತ್ತೇನೆ.

ಆಮೇರೆ ರಸ್ತೆಗಳು ಹಾಗೂ ದೀಪಗಳ ದೋಷಗಳು ಅಲ್ಲಲ್ಲಿ ಹೆಚ್ಚಾಗುತ್ತಿವೆ. ಆದರಲ್ಲೂ ಕಾರ್ಪೊರೇಷನ್ನಿಗೆ ಸೇರಿರುವ ಅನೇಕ ಭಾಗಗಳು ಬಹಳ ಹಿಂದುಳಿದ ಪ್ರದೇಶಗಳಾಗಿವೆ. ಇಲ್ಲಿಗೆ ಬೇಕಾದ ನೀರು ದೀಪಗಳ ಸೌಕರ್ಯವನ್ನು ಒದಗಿಸಿಕೊಡುತ್ತಿಲ್ಲ. ಇಂತಹ ಹಿಂದುಳಿದಿರುವ ಭಾಗಗಳಿಗೆ ಸರಕಾರ ಹಾಗೂ ಕಾರ್ಪೊರೇಷನ್ನಿನವರು ಅನಕ್ಕೆ ವಹಿಸದೇ ಇದ್ದರೆ ಮುಂದೆ ಇಲ್ಲಿರುವ ಜನರು ದಂಗೆ ಏಳಲು ಅವಕಾಶ ಮಾಡಿಕೊಟ್ಟಂತಾಗುತ್ತದೆ. ಇನ್ನು ರೆವಿನ್ಯೂ ಪಾಕೆಟ್ಸ್‌ನಲ್ಲಿದ್ದ 34 ಹಳ್ಳಿಗಳನ್ನು ಕಾರ್ಪೊರೇಷನ್ನಿಗೆ ಸೇರಿಸಿದರು ಆದರೆ ಇಲ್ಲಿಗೆ ನೀರು ದೀಪಗಳ ಸೌಕರ್ಯ ಸರಿಯಾಗಿ ಇನ್ನೂ ಕೊಟ್ಟಿಲ್ಲ. ಹಾಗೇ ತ್ಯಾಗರಾಜನಗರ ಮತ್ತು ಕಾರ್ಪೊರೇಷನ್ನಿಗೆ ಸೇರಿದ ಇನ್ನೂ ಅನೇಕ ಹಳ್ಳಿಗಳಿಗೆ ಕೂಡ ಸರಿಯಾದ ನೀರು ಹಾಗೂ ದೀಪಗಳ ವ್ಯವಸ್ಥೆ ಮಾಡಿಲ್ಲ. ಅಲ್ಲಿಗೆ ಕೂಡಲೇ ತಕ್ಕ ವ್ಯವಸ್ಥೆ ಮಾಡಬೇಕು ಎಂದು ಇಲ್ಲಿ ಹೇಳಲು ಇಷ್ಟಪಡುತ್ತೇನೆ.

ಬೆಂಗಳೂರು ನಗರದಲ್ಲಿ ಈಚೀಚೆಗೆ ಕಳ್ಳತನ ಎನ್ನುವುದು ದಿನೇ ದಿನೇ ಹೆಚ್ಚಾಗುತ್ತಿದೆ ಹಗಲಲ್ಲೇ ದರೋಡೆಗಳು ಆಗುತ್ತಿವೆ. ಯಾರಾದರೂ ಬನಶಂಕರಿಯಲ್ಲಿ ಸಂಜೆ ಹರಿಕಥೆ ಕೇಳಲು ಹೋದರೆ ಅವರು ವಾಪಸು ಬರುವುದರೊಳಗಾಗಿ ಅವರ ಮನೆಗಳಲ್ಲಿ ಕಳ್ಳತನವಾಗಿರುತ್ತದೆ. ಮನೆಗಳಲ್ಲಿ ಹೆಂಗಸರು ಒಬ್ಬರೇ ಇರುವಾಗ ಕಳ್ಳತನವಾಗುತ್ತದೆ ಹಾಗೂ ದರೋಡೆಗಳಾಗುತ್ತಿರುತ್ತವೆ. ಇದರ ಬಗ್ಗೆ ಕಟ್ಟುನಿಟ್ಟಾದ ಕ್ರಮ ತೆಗೆದುಕೊಂಡು ಇಂತಹ ಕಳ್ಳತನಗಳನ್ನು ತಪ್ಪಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಬೆಂಗಳೂರಿನಲ್ಲಿ ಕಬ್ಬನ್ ಪಾರ್ಕ್ ಮತ್ತು ಲಾಲ್‌ಬಾಗ್ ಇವನ್ನು ಇಂಪ್ರೂವ್ ಮಾಡುವುದಕ್ಕೆ ಸ್ವಲ್ಪ ಹಣ ಒದಗಿಸಿದ್ದೇವೆ ಎಂದು ಹೇಳಿದ್ದಾರೆ ಅದರಂತೆ ಬೇರೆ ಪಾರ್ಕ್‌ಗಳನ್ನಾಗಲಿ, ಗಾರ್ಡನ್ ಆಗಲಿ ಇಂಪ್ರೂವ್ ಮಾಡಿದ್ದಾರೆಯೇ? ಬೆಂಗಳೂರು ಒಂದು ದೊಡ್ಡ ನಗರ ಎಂದು ಹೇಳಿಕೊಳ್ಳುತ್ತಿದ್ದಾರೆ. ಇಲ್ಲಿ ಒಂದು ಪ್ರೋಗ್ರಾಂ ಇಟ್ಟುಕೊಂಡು ಕೆಲಸ ಮಾಡಬೇಕಾಗಿತ್ತು ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟ ಪಡುತ್ತೇನೆ.

ಇನ್ನು ವಿದ್ಯಾಭ್ಯಾಸಕ್ಕಾಗಿ ನುಮಾರು 46 ಕೋಟಿ ರೂಪಾಯಿಗಳನ್ನು ಈ ಬಡ್ಜೆಟ್ಟಿನಲ್ಲಿ ಒದಗಿಸಿದ್ದೇವೆ ಎಂದು ಹೇಳಿದ್ದಾರೆ. ಹೋದ ವರ್ಷ 36 ಕೋಟಿ ಇದ್ದುದು ಈ ವರ್ಷ 10 ಕೋಟಿ ರೂಪಾಯಿ ಜಾಸ್ತಿ ಒದಗಿಸಿದ್ದಾರೆ. ಇಷ್ಟು ದುಡ್ಡು ಹೆಚ್ಚು ಕೊಟ್ಟರೂ ತಂದೆತಾಯಿಗಳಿಗೆ ವಿದ್ಯಾಭ್ಯಾಸದ ಹೊರೆ ಏನೂ ಕಡಿಮೆಯಾಗದೇ ಇರುವುದು ತುಂಬಾ ಶೋಚನೀಯವಾದ ವಿಚಾರ. ಇದರಲ್ಲಿ ಏನಾಗಿದೆ ಎಂದರೆ ಸರ್ಕಾರದವರು ಸಾಕಾದಷ್ಟು ದುಡ್ಡು ಖರ್ಚು ಮಾಡಿದರೂ ಕೂಡ ವಿದ್ಯಾಭ್ಯಾಸದ ಸೌಲಭ್ಯ ನಿಜವಾಗಿಯೂ ಸಾಮಾನ್ಯವಾಗಿ ನಗರದಲ್ಲಿರತಕ್ಕಂಥವರಿಗೆ ಒದಗುತ್ತಾ

ಇಲ್ಲ. ಇಲ್ಲ ಏನಾಗಿದೆ ಎಂದರೆ ಸರ್ಕಾರಿ ಶಾಲೆಗಳು ದೊಡ್ಡ ಇರುವಹಾಗೆ ಇವೆ. ಆದುದರಿಂದ ಮಕ್ಕಳನ್ನು ವಿದ್ಯಾಭ್ಯಾಸಕ್ಕೆ ಖಾಸಗಿ ಶಾಲೆಗಳಿಗೆ ಕಳುಹಿಸಿಕೊಡುತ್ತಿದ್ದಾರೆ. ಖಾಸಗಿ ಶಾಲೆಗಳು ಯಾವ ರೀತಿ ಇವೆ ಎಂದರೆ ನನ್ನ ಮೊದಲನೆ ಹುಡುಗ ಒಬ್ಬ ಹೈಸ್ಕೂಲ್‌ನಲ್ಲಿ ಓದುತ್ತಿದ್ದಾನೆ. ಅವನು ಮೊದಲೇ ಸೇರುವಾಗ ಕಾಂಪ್ರಮೈಷನ್ ಫೀಸ್, ಎಜುಕೇಷನ್ ಫೀಸ್ ಎಂದು 76 ರೂಪಾಯಿಗಳನ್ನು ತೆಗೆದುಕೊಂಡರು. ಇನ್ನೊಬ್ಬ ಚಿಕ್ಕ ಹುಡುಗ ಪ್ರೈಮರಿ ಸ್ಕೂಲ್‌ಗೆ ಹೋಗುತ್ತಿದ್ದಾನೆ. ಅದು ರೆಗ್‌ಲೈಸ್ ಆಗಿದೆ. ಅವನಿಗೆ ತಿಂಗಳಿಗೆ 10 ರೂಪಾಯಿ ಫೀಸ್. 12 ತಿಂಗಳೂ ಫೀಸ್ ಕೊಡಬೇಕು, ಒಟ್ಟು 120 ರೂಪಾಯಿ ಇದರ ಜೊತೆಗೆ ಇನ್ನು ಬೇರೆ ಬೇರೆ ವಸೂಲ್ಮಾಡುತ್ತಾರೆ. ಈ ರೀತಿ ಹೆಸರಿಗೆ ಮಾತ್ರ ಉಚಿತ ವಿದ್ಯಾಭ್ಯಾಸವಾದರೆ ತಂದೆತಾಯಿಗಳಿಗೆ ಆಗಿರತಕ್ಕಂಥ ತೊಂದರೆ ಮಾತ್ರ ತಪ್ಪುವಂತಿಲ್ಲ, ಆದುದರಿಂದ ಇದನ್ನು ಗಮನಿಸದೇ ಹೋದರೆ ಸರ್ಕಾರ ವಿದ್ಯಾಭ್ಯಾಸಕ್ಕೆ ಖರ್ಚು ಮಾಡುವಂಥ ದುಡ್ಡು ನಿಜವಾಗಿಯೂ ಯಾರು ಉಪಯೋಗಿಸಬೇಕೋ ಅವರಿಗೆ ಉಪಯೋಗವಾಗುತ್ತಾ ಇಲ್ಲ ಎಂದು ಹೇಳಿದರೆ ತಪ್ಪಾಗಲಾರದು.

ಇನ್ನು ಪ್ರೈಮರಿ ಕ್ಲಾಸ್‌ಗೆ ಕಟ್ಟಡಗಳು ಇಲ್ಲ, ಬೆಂಚು, ಕುರ್ಚಿಗಳು ಇಲ್ಲ. ಇಂತಹ ಸಂದರ್ಭದಲ್ಲಿ ಉಪಾಧ್ಯಾಯರುಗಳು ಅವರಿಗೆ ಹೇಗೆ ಪಾಠ ಹೇಳಬೇಕು, 46 ಕೋಟಿ ರೂಪಾಯಿ ಖರ್ಚು ಮಾಡುವುದು ಮುಖ್ಯವಲ್ಲ. ನಿಜವಾಗಿಯೂ ಹೇಳುವುದಾದರೆ ಪ್ರೈಮರಿ ಸ್ಕೂಲ್‌ಗಳಲ್ಲೆಲ್ಲ ಪ್ರೈಮರಿಯಿಟ್ಟದಲ್ಲೇ ಗಮನವಿಟ್ಟು ಹುಡುಗರಿಗೆ ಕಾಗುಣಿತ, ಬರವಣಿಗೆ ಕಲಿಸಿದರೆ ಅದು ಒಂದು ಸರಿಯಾದ ಅಸ್ತಿವಾರ ಇದ್ದಹಾಗೆ ಆಗುತ್ತದೆ. ಇದರಲ್ಲಿ ಸಾಕಾದಷ್ಟು ಅನ್ಯಾಯ ನಡೆಯುತ್ತಾ ಇದೆ. ಆದುದರಿಂದ ವಿದ್ಯಾಭ್ಯಾಸದ ಕ್ರಮದಲ್ಲಿ ಕ್ವಾಂಟಿಟಿಗಿಂತ ಕ್ವಾಲಿಟಿ ಕಡೆ ಹೆಚ್ಚು ಗಮನ ಇಟ್ಟರೆ ಅನುಕೂಲವಾಗುತ್ತದೆ ಎಂದು ಹೇಳುತ್ತೇನೆ.

ಕೊನೆಯದಾಗಿ ಒಂದು ವಿಷಯ ಮಾತ್ರ ಹೇಳುತ್ತೇನೆ. ಸರ್ಕಾರದ ಸಾಲ ದಿನೇ ದಿನೇ ಹೆಚ್ಚಾಗುತ್ತಾ ಇದೆ. ಇದರ ಬಗ್ಗೆ ನಾವು ತೆಗೆದುಕೊಂಡ ಡುಡ್ಡಿಗೆ 20 ಕೋಟಿ ರೂಪಾಯಿಯಷ್ಟು ಬಡ್ಡಿಯನ್ನು ಕೊಡಬೇಕಾಗುತ್ತದೆ. ಸಾಲ ಮಾಡಬೇಡಿ ಎಂದು ಹೇಳುವುದಿಲ್ಲ. ಸಾಲಮಾಡಿ ಬಂದ ಹಣವನ್ನು ಸರಿಯಾಗಿ ಉಪಯೋಗಿಸಬೇಕು. ಸರಿಯಾದ ರೀತಿಯಲ್ಲಿ ವಿನಿಯೋಗಿಸಬೇಕು. ಅದಕ್ಕೆ ತಕ್ಕ ಕಾರ್ಯಕ್ರಮ ಹಾಕಿಕೊಳ್ಳಬೇಕು. ಬರೀ ಸಾಲ ಮಾಡಿ ಸಾಲಗಾರರ ಮಕ್ಕಳನ್ನಾಗಿ ಮಾಡುವುದು ಲಕ್ಷಣವಲ್ಲ ಎಂದು ಹೇಳುತ್ತೇನೆ.

3-30 P.M.

ಮಾನ್ಯ ಅರ್ಥ ಸಚಿವರು ನರ್ಕಾರಿ ನೌಕರರ ಬಗ್ಗೆ ಒಂದು ಕನಿಕರವನ್ನು ತೋರಿಸಿದ್ದಾರೆ. ಅವರಿಗೆ ಒಂದು ಎಚ್ಚರಿಕೆಯನ್ನೂ ಕೊಟ್ಟಿದ್ದಾರೆ. ನೌಕರರು ಅವರು ತೆಗೆದುಕೊಳ್ಳತಕ್ಕ ಸಂಬಳಕ್ಕೆ ಸರಿಯಾಗಿ ಕೆಲಸ ಮಾಡಬೇಕು ಎಂದು ಒಂದು ಎಚ್ಚರಿಕೆಯನ್ನೂ ಕೊಟ್ಟಿದ್ದಾರೆ. ನಾನೂ ಕೂಡ ಹೊಟ್ಟೆ ತುಂಬ ನಮ್ಮ ನರ್ಕಾರಿ ನೌಕರರಿಗೆ ಕೊಡಿ, ಹೊಟ್ಟೆ ತುಂಬ ಕೊಟ್ಟು ಸರಿಯಾದ ರೀತಿಯಲ್ಲಿ ಕೆಲಸವನ್ನೂ ತೆಗೆದುಕೊಳ್ಳಿ ಎಂದು ಈ ಸಂದರ್ಭದಲ್ಲಿ ಹೇಳಿ ಮೊನ್ನೆ ಮತ್ತು ಈವೊತ್ತು ಮಾತನಾಡಲು ನನಗೆ ಅವಕಾಶ ಕೊಟ್ಟದ್ದಕ್ಕೆ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† Sri M. SRINIVASA NAIK (Mangalore-I).—I rise to congratulate the Hon. Finance Minister for the very fine budget he has placed before this House. The figures he has furnished and his realistic approach to solve the problems are commendable. Ever since he took over the portfolio of Finance, he has been able to reduce the Central over-draft and brought it down to 15 crores from 50 crores. The sales tax has been increased from 12 to 14 crores to 28 to 30 crores. The receipt on the income side by tax and others has been increased. He has strived hard to increase the assets of the State. On the whole our State's financial postion is very stable and we are progressing in all directions. Particular emphasis has been laid on the development of agriculture. The Government have already taken such measures as are necessary to increase the agricultural production of this State which will ultimately improve the economic conditions of the people of the villages. I agree with the Finance

(SRI M. SRINIVASA NAYAK)

Minister that the taxation measures have already reached the saturation point. The State has realised that it is very necessary to form capital of its own so that it may not depend upon the Centre. I agree with the idea of taxing the Rural Sector which has been greatly benefifed by the measures taken for improving agriculture by way of providing cheap electricity, education, pumpsets, manure, etc. We should definitely expect something for all these measures taken for the benefit of the rural sector. In the year 1930 the price of rice was nearly Rs. 2-4-0 a mura. To-day, the price of rice has gone up to Rs. 50 a mura. The people in the rural sector are greatly benefited by the rise in prices. But the land revenue has not been increased and it is more or less constant and it is not in proportion to the increase in price of rice and other commodities. What I suggest is that the land revenue may be continued and we should get adequate return from the rural sector by way of agricultural income tax. The agriculturists will not grudge paying the tax. They know without paying the land revenue and any other tax that is leviable, the Government cannot run. They know these are necessary for the development of rural side. It is also necessary to increase the land revenue to make up for the revenue that is necessary to carry on our agricultural operations and other things.

I would like to mention in this connection that small savings schemes are better suited for the rural areas. Our people in the rural areas are very shy to go to the Bank and invest money. Therefore, it is very necessary that small savings scheme has to be carried to the very doors of the villagers. If we carry it to the doors of the villagers, the people will definitely come forward to invest money. What is going on now with regard to the savings scheme? A target has been fixed for the small Savings Department. The people will be induced and they will come forward just to please the officers, invest money and withdraw it after some time. The money that is being collected this way is meant for investment for the development of the State. Now the State is not getting much benefit out of this scheme, because most of the money will be withdrawn. Therefore, the habit of saving has to be inculcated at the stage of Primary School level. We will have ample business if we put earnest offorts to inculcate the habit of savings in the mind of children. They can begin with 25 paise and thereby multiply with any amount. The children should be given attractive Pass Book and when the Pass Book shows the credit of Rs. 5, the child should be given a certificate. If we inculcate the habit of saving in the mind of child in the primary level, later on, he develops that habit of saving something in the Bank. This scheme, I think, will go a long way to attract money.

This year Rs. 40.07 crores have been allotted for Education. As per the present set up in the country, the policy of the Government is to give free education up to the Secondary level. When that is the position, you may not be in a position to meet the entire requirements

with this amount of Rs. 40.07 crores. It is very necessary that we have to go into the question of giving education in a scientific manner. Now let us go into the question of collecting examination fees. The students have to pay the public examination fees for the 7th standard. Again they have to pay as examination fees for 10th and 11th standards also. When the Government has got the intention of giving free education, why should they charge public examination fees. ? This is a hardship inflicted on the parents of the children. This has to be looked into. There are several colleges in the State. There are several electives. The students are in the habit of selecting only P. C. M. and P. C. B. The other electives are not favoured by the students. It is very necessary that a Committee should go into this question and see that electives which are not favoured by the students, are removed, so that the expenditure could be minimised to the barest minimum. We can save so much because the salary of the concerned Professors and staff is saved. Another thing is about changing of Text Books every year. We are having a wing to look after these text books. This a very important thing. There are some complaints about text books. This work can only be done by an expert Committee. Results are poor in Schools and efficiency is going down. Everybody is keen on improving the results of the Schools. All efforts should be made to improve the standard of education and at the same time we must see that wastage that is occurring in every school should be minimised. All these things could be looked into by the Committee. If any schools are found in excess or if any school has got students who are not up to the required standard such schools have to be examined by this committee. Recently, the Hon. Minister for Education has enunciated a policy that the Government would not give grants to newly opened private schools for first five years. I think Sir, it would be much advisable for the Government, not to permit any school or college to be opened newly, till the Expert Committee gives its report. After receiving the report of the Expert Committee, the Government could examine the question of permitting the opening of fresh schools and colleges.

Sir, though the Budget Speech refers to both Rural Water Supply and Urban Water Supply and drainage, I think, the Government has not bestowed enough thought on providing water supply to all the towns and villages in the State. It is quite necessary that people should be given protective water supply, and if necessary, the Water Supply and Sewerage Boards could be constituted in four divisions of the State and those Boards my be permitted to rise funds by taking loans from District Banks, and provide water supply to all villages.

Government has given good treatment for development of fisheries. The present number of mechanised boats which is about 510 and another 120 boats that are going to be sanctioned during 1969-70 is not adequate for the development of fisheries on our Coasts. We have a coast line of nearly 250 miles and huge quantity of fish is available for catching on our coasts. The only handicap in this behalf is money.

(Sri M. Srinivasa Nayak)

Now the Government is giving 50 per cent of the subsidy on the purchase of boats by the fishermen. This scheme was introduced when the Government wanted to popularise mechanised boats. Formerly they thought the fishes will run away on hearing the sound of these mechanised boats. But later it has been found that the fish is a deaf animal and it does not run away. Further each of the mechanised boat costs about Rs. 50,000. Now these boats have become very popular and the fishermen are coming forward to purchase them, but Government are not able to meet the demand. When there is so much of demand for these mechanised boats, it is necessary for the Government to withdraw the subsidy and give a guarantee to the fishermen to borrow the required amount from the Scheduled Banks. I think this would help fishermen very much. As at present the fishermen have to meet 50 per cent of the amount, many of them are not able to have boats and many of them are dissatisfied with the present policy of Government. It would be necessary for the Government to consider this aspect.

As regards industries, I would like to say, that the finances of the State could be augmented not only from taxes and revenues, but also from the income of the industries. Sir, Mysore State is a pioneer in industries and the industries that exist in our State are very valuable ones. In regard to the suggestion put forward by Government as to whether the industries are to be handed over to the private agencies or to be continued to be run by the Government, as far as I am concerned, I would very much like that Government alone should continue to run these industries. The failure to get the required return from these industries is only due to the paucity of technical personnel that are placed in charge of these industries. The Government is posting, at present, the IAS officers to man the industries and they have no background of the management of industries. Therefore, it is very necessary to have a cadre of trained technical personnel created to handle industries in the State. Further the persons who are put in charge of various industries have not been given sufficient powers to act on their own initiative. They have to seek orders from the Director of Industries on each and every matter and they are placed only in the position of a mere clerk. It is necessary the Government applies its mind and tries to create a cadre of technically trained personnel to man these industries. In this connection, I would like to mention that the Mandya Paper Mills has made a huge profit within the course of five months. Therefore Sir, in order to improve the working of the industries and earn profits from these industries, it would be advisable for the Government, to consider the question of having a cadre of trained technical personnel and also to give them sufficient powers as are necessary to manage and run the industries in the State.

I conclude and thank the hon. Chair for the opportunity given to me to speak.

ಶ್ರೀ ಎಂ. ನಾಗಪ್ಪ (ರಾಯಚೂರು).—ಸನ್ಮಾನ್ಯ ಅಧ್ಯಕ್ಷರೇ, ನಾನು 1969-70ನೇ ಸಾಲಿನ ಆಯವ್ಯಯ ಪಟ್ಟಿಯನ್ನು ವಿರೋಧಿಸುತ್ತಾ, ಕೆಲವು ವಿಷಯಗಳನ್ನು ಮಾನ್ಯ ಸಭೆಯ ಗಮನಕ್ಕೆ ತರಬಯಸುತ್ತೇನೆ. ಈ ಆಯವ್ಯಯದ ಮೇಲೆ ಮಾತನಾಡುವುದಕ್ಕೆ ಮುಂಚೆ ಒಂದು ವಿಷಯವನ್ನು ಬಹಳ ಕೋಪದಿಂದ ಹೇಳಬೇಕಾಗಿದೆ. ಮಾನ್ಯ ಮುಂತ್ರಿಗಳು ತಮ್ಮ ಭಾಷಣದ 16ನೆಯ ಪ್ಯಾರಾದಲ್ಲಿ ಹೀಗೆ ತಿಳಿಸಿದ್ದಾರೆ. "1967 ರಿಂದ ಕೆಲಕೆಲವು ರಾಜ್ಯಗಳು ತಮಗೆ ಉಪಲಬ್ಧವಿರುವ ಆದಾಯ ಜನಾನುರಾಗವನ್ನು ಗಳಿಸಿಕೊಳ್ಳುವ ಹಂಬಲದಿಂದ ಅತಿ ವೆಚ್ಚದ ಏರ್ಪಾಡುಗಳನ್ನು ಕೈಕೊಂಡಿವೆ. ಇದರಿಂದ, ಈ ರಾಜ್ಯಗಳ ಆರ್ಥಿಕ ಸ್ಥಿತಿಯು ಹದಗೆಡುವುದಷ್ಟೇ ಅಲ್ಲದೆ, ಬೇರೆ ರಾಜ್ಯಗಳಲ್ಲೂ ಸಮಸ್ಯೆಗಳು ಹುಟ್ಟಿಕೊಳ್ಳುತ್ತವೆ" ಇದನ್ನು ಓದಿದಮೇಲೆ ಬಹಳ ಕೆಟ್ಟದು ಅನ್ನಿಸಿತು. ಮುಂತ್ರಿಗಳು ಇತರ ರಾಜ್ಯಗಳ ಆಯವ್ಯಯ ಪಟ್ಟಿಗಳ ಮೇಲೆ ನೇರವಾಗಿ ಟೀಕೆಮಾಡಿದ್ದಾರೆ ಎಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಇಂಥ ಒಂದು ಅಭಿಪ್ರಾಯವನ್ನು ಅವರು ಸೂಚಿಸಬಹುದೇ? ಅವರು ತಮ್ಮ ಆಯವ್ಯಯ ಎಷ್ಟು ಮಟ್ಟಿಗಿದೆ ಎಂದು ನೋಡಿಕೊಂಡು ಎರಡನೆಯವರು ಆಯವ್ಯಯ ಪಟ್ಟಿಯ ವಿಚಾರವನ್ನು ತುಲನಾತ್ಮಕ ದೃಷ್ಟಿಯಿಂದ ತಿಳಿಸಿದ್ದರೆ ಚೆನ್ನಾಗಿತ್ತು. ತಮ್ಮ ಪಕ್ಷದ ಟೀಪ್ ಪಾಪ್ಯುರಾರಿಟಿಗಾಗಿ ಇಂಥ ಉಲ್ಲೇಖನಗಳನ್ನು ಕೊಡಲಾಗಿದೆ ಎಂದು ನಾನು ಭಾವಿಸುತ್ತೇನೆ.

ಬಜೆಟ್ಟಿನ ಬಗ್ಗೆ ಕೆಲವು ವಿಷಯಗಳನ್ನು ಯೋಚನೆಮಾಡಬೇಕಾಗುತ್ತದೆ. ಬಜೆಟ್ ಅಂದರೇನು ಎಂಬುದನ್ನು Goldstone ಈ ರೀತಿ ಹೇಳಿದ್ದಾರೆ :

> " Budget is not merely affairs of arithmetic, but in thousand ways go to the root of the prosperity of individuals, relation s of class and strength of Kingdoms.....".

ವಾಸ್ತವಿಕವಾಗಿ ಇವತ್ತು ಹಿಂದಿನ ಆಯವ್ಯಯ ಪಟ್ಟಿಗಳಿಂದ ಪರಿಣಾಮವೇನಾಗಿದೆ, ಎಷ್ಟು ಮಟ್ಟಿಗೆ ನಿರುದ್ಯೋಗ ಬೆಳೆದಿದೆ, ಜನರಿಗೆಷ್ಟು ಅನುಕೂಲವಾಗಿದೆ ಎಂಬುದನ್ನು ತಿಳಿಯಲು ಅಂಕಿಅಂಶಗಳನ್ನು ನೋಡಬೇಕು.

ವಾಸ್ತವಿಕವಾಗಿ ಸನ್‌ಮಾನ್ಯ ಮುಂತ್ರಿಗಳು ಅವರ ರಾಜಕೀಯ ಮಟ್ಟವನ್ನು ಮತ್ತು ನಮ್ಮ ಜನತೆಯ ಜೀವನದ ಮಟ್ಟವನ್ನು, ಬೇರೆ ರಾಜ್ಯದ ನಿರುದ್ಯೋಗತನವನ್ನು, ನಮ್ಮ ರಾಜ್ಯದ ನಿರುದ್ಯೋಗತನವನ್ನು, ಈ ಎರಡನ್ನೂ ಈ ಮಾನ್ಯ ಸಭೆಯಲ್ಲಿ ಇಟ್ಟು ಅಂತಹ ಒಂದು ಹೇಳಿಕೆಯನ್ನು ಕೊಟ್ಟಿದ್ದರೆ ಅದನ್ನು ನಾವು ಬಹಳ ಶ್ಲಾಘನೀಯ ಎಂದು ತಿಳಿಯುತ್ತಾ ಯಿದ್ದೆವು. ಆ ವಿಷಯವನ್ನು ಅಲ್ಲಿಗೆ ಬಿಟ್ಟು ಒಂದು ವಿಷಯವನ್ನು ಮಾನ್ಯ ಮುಂತ್ರಿಗಳ ಗಮನಕ್ಕೆ ತಮ್ಮ ಮೂಲಕ ಸೂಚಿಸಬಯಸುತ್ತೇನೆ. ಈಪೊತ್ತು ವಾಸ್ತವಿಕಾಗಿ ಅದಂತಹ ಬಡ್ಜೆಟ್ಟು ಏನಿದೆ ಅದನ್ನು ನಾವು ಸ್ವಲ್ಪ ಕೂಲಂಕಷವಾಗಿ ನೋಡಿದರೆ ತಮಗೇ ಗೊತ್ತಾಗುತ್ತದೆ ಇದು ಅಂಕಿಅಂಶಗಳಿಂದ ಕೂಡಿದಂತಹ ಒಂದು ಹೇಳಿಕೆ ಅಂತ, ಒಂದು ಪಟ್ಟಿ ಅಂತ ಇದರಲ್ಲಿ ವಾಸ್ತವಿಕತೆ ಏನೂ ಇಲ್ಲ. ಅವರು ವಾಸ್ತವಿಕತೆ ಇರಬಾರದಂತಹ ಬಡ್ಜೆಟ್ಟೇ ಆಥವಾ ಉತ್ತಮವಾದ ನರಿಯಾದಂತಹ ಬಡ್ಜೆಟ್ಟು ಹೌದೇ ಅಲ್ಲವೇ ಎಂಬುದನ್ನು ನಿರ್ಧಾರ ಮಾಡಬೇಕಾದರೆ ಕೆಲವು ಶಾಸ್ತ್ರಜ್ಞರು ಕೆಲವು ನಿಯಮಗಳನ್ನು ಹಾಕಿದ್ದಾರೆ, ಒಂದು ನಿಯಮವನ್ನು ತಮ್ಮ ಗಮನಕ್ಕೆ ತರುತ್ತೇನೆ. ಆ ದೃಷ್ಟಿಯಿಂದ ಇದನ್ನು ಅಳತೆಗೋಲು ಹಾಕಿ ನೋಡೋಣ. ಅವರು ಕೊಟ್ಟಂಥ ಈ ಆಯವ್ಯಯಪತ್ರ ಎಷ್ಟು ಮಟ್ಟಿಗೆ ಉತ್ತಮವಾದದ್ದು ಎಂಬುದನ್ನು ಆ ಅಳತೆಗೋಲಿನಿಂದ ಅಳೆಯುವುದಾದರೆ :

> " To be a good budget, there should not be much deviations between the budget estimates and actuals. If the accounts disclose much deviations from budget, it is bad budget and shows the inability of executive to estimate correctly".

ಇನ್ನು ಕೆಲವು ಅಂಶಗಳನ್ನು ಕೊಡುತ್ತೇನೆ, ಅದು ಈ ರೀತಿಯಾಗಿದೆ:—67-68ರ ಅಂಕಿಅಂಶಗಳನ್ನು ನಾವು ತೆಗೆದುಕೊಂಡರೆ ಅಂದಾಜುಪತ್ರಿಕೆ ಮಾಡಿದ್ದು ಆದಾಯ 185.65 ಕೋಟಿ ರೂಪಾಯಿ, ಖರ್ಚು 177.01 ಕೋಟಿ ರೂಪಾಯಿ. 10.86 ಕೋಟಿ ರೂಪಾಯಿ ಸರ್ಪ್ಲಸ್ ಎಂದು ತೋರಿಸಿದ್ದಿರಿ. ಅವರು ಇವತ್ತು ಕೊಟ್ಟಿರತಕ್ಕ ಆಕ್ಚ್ಯುಯಲ್ ಆಕೌಂಟ್ಸ್ ಪ್ರಕಾರ 170.90 ಅನ್ನತಕ್ಕ ಕೆಲವು ಅಂಕಿಅಂಶಗಳನ್ನು ಇಲ್ಲಿ ಕೊಟ್ಟಿದ್ದಾರೆ. ಈ ರೀತಿ ವಾಸ್ತವಿಕವಾಗಿ ವ್ಯತ್ಯಾಸ ಇದ್ದಂಥ ಇನ್ನೂ ಕೆಲವು ಅಂಕಿಅಂಶಗಳನ್ನು ಕೊಟ್ಟಿದ್ದಾರೆ. ಇವತ್ತು ಬರತಕ್ಕ ಆದಾಯ ಎಷ್ಟು, ಖರ್ಚುಮಾಡಿರುವುದು ಎಷ್ಟು ಇದೆ ಅದರಲ್ಲಿ ಡೀವಿಯೇಷನ್ ಅನ್ನುವುದು ತತ್ವದ ಪ್ರಕಾರ 5 ಪರ್ಸೆಂಟಿಗಿಂತ ಹೆಚ್ಚಿರಬಾರದು ಎಂದು ಇದೆ. ಕಡಿಮೆ ಆಗಲಿ ಹೆಚ್ಚಾಗಲಿ 5 ಪರ್ಸೆಂಟ್ ಇರಬೇಕು ಅನ್ನುವುದು

(ಶ್ರೀ ಎಂ. ನಾಗಪ್ಪ)

ಒಂದು ತತ್ವ, ಅದೇ ರೀತಿ ಖರ್ಚೂಕೂಡ 5 ಪರ್ಸೆಂಟ್ ಹೆಚ್ಚು ಅಥವಾ ಕಡಿಮೆ ಇರುವುದು ಒಂದು ತತ್ವ, ಈ ಎರಡಕ್ಕು ತಪ್ಪಿ ನೀವು ಮಾಡಿದಂತಹ ಬಡ್ಜೆಟ್ಟು 20ಕೋಟಿ ರೂಪಾಯಿ ವ್ಯತ್ಯಾಸ ಬಂದರೆ ವಾಸ್ತವಿಕವಾಗಿ ಅದು ಸತ್ಯವಾದಂತಹ ಬಡ್ಜೆಟ್ಟೆ ಅಥವಾ ಅಂಕಿಅಂಶಗಳಿಂದ ಕೂಡಿದ ಬಡ್ಜೆಟ್ಟೇ ಅಂತ ಒಂದು ಸಂಶಯ ನಮ್ಮ ಮನಸ್ಸಿನಲ್ಲಿ ಬರುತ್ತದೆ. ಅದು ಅಲ್ಲದೆ ಇನ್ನೊಂದು ಅಂಶವನ್ನು ಹೇಳುತ್ತೇನೆ. Details of the programme have not been finally decided—intended to be worked after settling details—secondly there is some intention of doing work if money is available. ಇದೇ ರೀತಿ ಕೆಲವು ಪುಟಗಳನ್ನು ಓದಿದರೆ ಸ್ಪಷ್ಟವಾಗಿ ಇದರಲ್ಲಿ ಹೇಳಿದ್ದಾರೆ. ಭೂತಲಿಂಗಂ ಕಮಿಟಿಯವರು ಬಂದು, ಅವರ ಆಯೋಗದ ಒಂದು ವರದಿಯನ್ನು ಈ ಸಭೆಗೆ ಕೊಟ್ಟರೆ ಅನಂತರ ಇಂತಿಂಥ ಕೆಲಸಗಳನ್ನು ಮಾಡುವುದಕ್ಕೆ ನಮಗೆ ಯೋಗ್ಯತೆ ಬರುತ್ತದೆ ಎಂದು ಹೇಳಿ ಅಸ್ಪಷ್ಟವಾಗಿ ಹೇಳಿದ್ದಾರೆ. ಯಾವುದೂ ಕೂಡ ಸ್ಪಷ್ಟವಾಗಿ ಇಲ್ಲ. ಅಸ್ಪಷ್ಟವಾದ ನೀತಿಯನ್ನು ಈ ಹೇಳಿಕೆಯಲ್ಲಿ ಕೊಟ್ಟು ನಾವು ಇದನ್ನು ಪಾಸ್ ಮಾಡಬೇಕೆಂದು ಹೇಳಿರುವುದು ಸರಿಯಾದ್ದಲ್ಲ ಎಂಬುದನ್ನು ಈ ಸಭೆಯ ಗಮನಕ್ಕೆ ತರಬಯಸುತ್ತೇನೆ.

ವಾಸ್ತವಿಕವಾಗಿ ನಾವು ಈ ಬಡ್ಜೆಟ್ಟನ್ನು ಕೂಲಂಕಷವಾಗಿ ನೋಡಿದರೆ ಸಾಕಾದಷ್ಟು ವಿಷಯಗಳನ್ನು ಇದು ತೋರಿಸುತ್ತದೆ. ಈಗಾಗಲೇ ನಾನು ಹೇಳಿದೆ ನಾವು ಪಾಸ್ ಮಾಡಿರತಕ್ಕ ಅಂಕಿಅಂಶಗಳು ಮತ್ತು ಅವರು ಕೊಟ್ಟಿರತಕ್ಕ ಅಂಕಿಅಂಶಗಳಲ್ಲಿ ಬಹಳ ವ್ಯತ್ಯಾಸ ಇದೆ. 1968–69 ರಲ್ಲಿ 194 ಕೋಟಿ ಅಂತ ಹೇಳಿ ಅದನ್ನು ರಿವೈಸ್ಡ್ ಎಸ್ಟಿಮೇಟ್ ಅಂತ 215.36 ಕೋಟಿ ಎಂದು ಹೇಳಿದ್ದಾರೆ. ಒಂದೊಂದರಲ್ಲಿ ಒಂದೊಂದು ರೀತಿಯಾಗಿ ಕೊಡತಕ್ಕ ಈ ಅಂಕಿಅಂಶಗಳ ಈ ಪುಸ್ತಕ ಸರಿಯಾದಂತಹ ನಿಮ್ಮ ನೀತಿಯನ್ನು ತೋರಿಸುತ್ತಾ ಇಲ್ಲ ಎಂಬ ಮಾತನ್ನು ನಾನು ಈ ಸಭೆಯಲ್ಲಿ ಹೇಳಬಯಸುತ್ತೇನೆ.

ಈಗ ಹೆಚ್ಚಾಗಿ ವೇಸ್ಟ್ ಅಂದರೆ ಕೊಟ್ಟಂಥ ಹಣ ಸ್ವಲ್ಪವೇ ಆಗಿರಲಿ—ಆದಾಯ 213 ಕೋಟಿ ರೂಪಾಯಿ ಇದ್ದರೆ ಅದರಲ್ಲಿ ಎಷ್ಟು ಮುಟ್ಟಿಗೆ ಖರ್ಚು ಮಾಡಿ ಅದರ ಲಾಭಪಡೆಯಬೇಕೆನ್ನುವುದನ್ನು ನಾವು ಯೋಚನೆ ಮಾಡಿದರೆ ಈಗಿರತಕ್ಕ ಸರ್ಕಾರ ಅದಕ್ಕೆ ಸರಿಯಾದಂತಹ ಆದಳಿತೆಯನ್ನು ಇಟ್ಟು ಕೊಂಡಿಲ್ಲ ಮತ್ತು ಸರಿಯಾದಂತಹ ಹಣಕಾಸಿನ ಖರ್ಚಿನ ಪರಿಸ್ಥಿತಿಯನ್ನು ಇಟ್ಟುಕೊಂಡಿಲ್ಲ ಅಥವಾ ನೂರಕ್ಕೆ ಮೂವತ್ತರಷ್ಟಾದರೂ ಅಪವ್ಯಯವಾಗುತ್ತಿದೆ ಎಂಬ ಮಾತನ್ನು ನಾನು ನನ್ನ ಶಬ್ದಗಳಲ್ಲಿ ಅಲ್ಲ ಪಬ್ಲಿಕ್ ಅಕೌಂಟ್ಸ್ ಕಮಿಟಿಯವರು ಕೊಟ್ಟಂಥ ಅನೇಕ ವಿಷಯಗಳಿಂದ ಹೊರಪಡಿಸುತ್ತೇನೆ, ಅದನ್ನು ತಮ್ಮ ಮುಂದೆ ಇಡುತ್ತೇನೆ :

> "It is not clear to the Committee how two experts common to both committees could change their opinion from committee to committee. They have before them the opinions of the two committees. The executive committee has also erred in overlooking the inconsistency in the opinion of the two expert committees. This should have been got reconciled and reasons for preferring costlier sample should have been recorded by the S.P.C.
>
> In the opinion of the Committee the transaction is not free from doubt and the Committee desire that the Government may look into this matter and fix responsibility for the extra expenditure of Rs. 30,800 as pointed out by the audit."

ಇಂಥಾದ್ದು ಒಂದಲ್ಲ, ಅನೇಕ ವಿಷಯಗಳು ಇವೆ. ಇನ್ನೊಂದು ವಿಷಯವನ್ನು ತಮ್ಮ ಗಮನಕ್ಕೆ ತರುತ್ತೇನೆ. ಎರಡು ಲಕ್ಷ ಐದು ಸಾವಿರ ರೂಪಾಯಿ ಇದ್ದಂಥ ಮೊತ್ತವನ್ನು ಯಾವ ದೃಷ್ಟಿಯಿಂದ ಉಪಯೋಗಿಸಿದ್ದಾರೆ ಎಂಬುದನ್ನು ಈ ಪಬ್ಲಿಕ್ ಅಕೌಂಟ್ಸ್ ಕಮಿಟಿ ರಿಪೋರ್ಟ್‌ನಲ್ಲಿ ನೋಡಬಹುದು. ಅದು ಈ ರೀತಿ ಇದೆ :

> "The Committee have also reiterated the earlier observation that there was bad planning and want of seriousness on the

part of departmental officers and Government should fix responsibility for the expenditure of 55,000 infructuously incurred earlier cost more than 2.05 lakhs in the present case."

ಮೊದಲು 55 ಸಾವಿರ ರೂಪಾಯಿ ಆದ ಖರ್ಚೇ ವಾಸ್ತವವಾಗಿ ಆಗಿಲ್ಲ, ಮತ್ತೆ 2.05 ಲಕ್ಷ ರೂಪಾಯಿಗಳನ್ನು ಅವ್ಯವಸ್ಥಿತವಾಗಿ ಖರ್ಚುಮಾಡಿದೆ. ಈ ರೀತಿ ಕೋಟಿ ಗಟ್ಟಲೆ ರೂಪಾಯಿ ಅವ್ಯವಸ್ಥಿತವಾಗಿ ಖರ್ಚುಮಾಡಿದ್ದಾರೆ ಎಂಬುದು ಸ್ಪಷ್ಟವಾಗುತ್ತದೆ. ಅದಕ್ಕೇ ನೀವು ಕೊಟ್ಟಂಥ ಅಂಕಿಅಂಶಗಳಿಂದ ವಾಸ್ತವಿಕವಾಗಿ ಇರತಕ್ಕ ಸ್ಥಿತಿ ಬದಲಾಯಿಸುವುದಿಲ್ಲ. ವಾಸ್ತವಿಕವಾಗಿ ಕೊಟ್ಟಂಥ ಹಣದ ಉಪಯೋಗ ಎಷ್ಟುಮಟ್ಟಿಗೆ ಆಗುತ್ತಿದೆ ಎಂಬುದನ್ನು ಸ್ಪಷ್ಟಪಡಿಸುತ್ತೇನೆ. ಇವತ್ತು ನಮ್ಮ ದೇಶದಲ್ಲಿ ಕಾಂಗ್ರೆಸ್ ರಾಜಕೀಯ ಬಂದು ಸಾಧಾರಣ 22 ವರ್ಷವಾಯಿತು. 22 ವರ್ಷದಿಂದ ನತತವಾಗಿ ರಾಜಕೀಯವನ್ನು ಆಳುತ್ತಾ ಇದ್ದಾರೆ, ತಮ್ಮ ನೀತಿ ಏನು ? ತಮ್ಮದೇ ಆದಂಥ ಒಂದು ನೀತಿ ಎಂದರೆ ಸೋಷಿಯಲಿಸ್ಟಿಕ್ ಪ್ಯಾಟರನ್ ಆಫ್ ಸೊಸೈಟಿ ಮಾಡಬೇಕೆನ್ನುವುದು ತಮ್ಮ ಉದ್ದೇಶ. ಇವತ್ತು ಏನಾಗಿದೆ ಎಂದರೆ ಪಬ್ಲಿಕ್ ಸೆಕ್ಟರ್‌ನಲ್ಲಿ—ಹಿಂದೆ ಮೈಸೂರು ಮಹಾರಾಜರ ಕಾಲದಲ್ಲಿ ನಡೆದಿರತಕ್ಕ ಎಷ್ಟೋ ಸಂಘ ಸಂಸ್ಥೆಗಳು, ಫ್ಯಾಕ್ಟರಿಗಳು ಏನಿದ್ದವು ಅವಕ್ಕೆ ಇವತ್ತು ನಿಮಗೆ ನಡೆಸತಕ್ಕ ಯೋಗ್ಯತೆ ಇಲ್ಲ ಎಂಬ ಯಾವುದೋ ಒಂದು ನೆಪದಿಂದ ತಮಗೆ ಬೇಕಾದ ಅಧಿಕಾರಿಗಳನ್ನು ಅಲ್ಲಿ ನೇಮಕ ಮಾಡುವುದು ಮತ್ತು ಅಲ್ಲಿರತಕ್ಕ ಕೂಲಿಗಾರರು ಮತ್ತು ಅದನ್ನು ನಡೆಸತಕ್ಕ ಅಡ್ಮಿನಿಸ್ಟ್ರೇಟರುಗಳ ನಡುವೆ ಜಗಳ ಉಂಟುಮಾಡುವುದು, ಸರಿಯಾದಂತಹ ರೆಕ್ಕಪತ್ರ ಇಲ್ಲ, ತನಿಖೆಯಾಗುತ್ತಾ ಇದೆ, ಅದಕ್ಕೆ ಯಾರು ಜವಾಬ್ದಾರರು ಎಂಬ ಮಾತುಗಳನ್ನು ಆಡುತ್ತಾ ಇರುವುದನ್ನು ನೋಡಿದರೆ ಸರ್ಕಾರ ಇವತ್ತು ಪಬ್ಲಿಕ್ ಸೆಕ್ಟರ್‌ನಲ್ಲಿ ಅನುಸರಿಸುತ್ತಾ ಇರತಕ್ಕ ಮಾರ್ಗ ತಪ್ಪು. ಪ್ರೈವೇಟ್ ಸೆಕ್ಟರ್‌ಗೆ ಹೆಚ್ಚು ಪ್ರಾಧಾನ್ಯತೆಯನ್ನು ಕೊಡಬೇಕು ಎನ್ನತಕ್ಕ ತತ್ವವನ್ನು ಈ ಸಭೆಯಲ್ಲಿ ಅನೇಕ ಸಾರಿ ಮಾತನಾಡಿದ್ದೇನೆ.

4-00 P.M.

ಆದರೆ ಒಂದು ವಿಷಯವನ್ನು ಮಾತ್ರ ಬೆನ್ನೆತ್ತಿಸುತ್ತೇನೆ. ಒಂದು ಸಾರಿ ಹಿಂದೆ ರೆಮ್'ಕೊ ಕಂಪನಿ ಬಗ್ಗೆ ಪ್ರಶ್ನೆ ಬಂದಾಗ್ಗೆ ನಮಗೆ ಎಷ್ಟು ಕಷ್ಟ ಬಂದರೂ ಅದನ್ನು ನಡೆಸುತ್ತೇವೆಂದು ಮಾನ್ಯ ಹಣಕಾಸಿನ ಮಂತ್ರಿಗಳು ಆ ದಿವಸ ಹೇಳಿದರು. ಈಗ ಒಂದು ವರ್ಷದ ಮೇಲೆ ಇಷ್ಟು ವರ್ಷಗಳು ಇವರು ಹೇಳಿದೇ ಇದ್ದ ಮಾತನ್ನು ಈ ಸಭೆಯಲ್ಲಿ ಹೇಳಿದ್ದಾರೆ. ಪೊನ್ನೆ 24ನೇ ತಾರೀಖಿನಲ್ಲಿ ಇವರು ತಮ್ಮ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಅರ್ಬನ್ ಪಾಪ್ಯುಲೇಷನ್ನಿಗೆ ಟ್ಯಾಕ್ಸೇಷನ್ ಹಾಕುವ ನಂದರ್ಭದಲ್ಲಿ ನಮ್ಮ ಪರ್ ಕ್ಯಾಪಿಟಾ ಇನ್‌ಕಂ ನ್ಯಾಷನರ್ ಪರ್ ಕ್ಯಾಪಿಟಾ ಇನ್‌ಕಂಗಿಂತ ಕಡಿಮೆ ಇಲ್ಲವೆಂದು ಹೇಳಿದ್ದಾರೆ. ಅದನ್ನು ಯಾವ ಒಂದು ಆಧಾರದ ಮೇಲೆ ಹೇಳಿದ್ದಾರೋ ಗೊತ್ತಿಲ್ಲ. ಕೇಂದ್ರದ ಹಣಕಾಸಿನ ಮಂತ್ರಿಗಳು ದೆಹಲಿಯಲ್ಲಿ 24ನೇ ತಾರೀಖಿನಲ್ಲಿ ಒಂದು ಮಾತನ್ನು ಹೇಳಿದ್ದಾರೆ. ರಾಷ್ಟ್ರದ ಪರ್ ಕ್ಯಾಪಿಟಾ ಇನ್‌ಕಂಗಿಂತ ಕೆಲವು ರಾಜ್ಯಗಳ ಪರ್ ಕ್ಯಾಪಿಟಾ ಇನ್‌ಕಂ ಕಡಿಮೆಯಾಗಿ ಬಹಳ ಕೆಟ್ಟ ಪರಿಸ್ಥಿತಿಯಲ್ಲಿದೆ. ಐದಾರು ರಾಜ್ಯಗಳಲ್ಲಿ ಅದು ಹೆಚ್ಚಿದೆ ಯೆಂದು ಹೇಳಿದ್ದಾರೆ. ಅವರು ನ್ಯಾಷನರ್ ಪರ್ ಕ್ಯಾಪಿಟಾ ಇನ್‌ಕಂ 422 ಎಂದು ಕೊಟ್ಟಿದ್ದಾರೆ. Highest per capita income in the country is in Punjab, Maharashtra, Gujarat, Hariyana, West Bengal. Lowest in Bihor, U.P., Rajasthan, M. P., Jammu and Kashmir, Kerala, Orissa and Mysore. ಅಂದಮೇಲೆ ನಮ್ಮ ಮಂತ್ರಿಗಳು ಕೊಟ್ಟ ಅಂಕಿ ಅಂಶ ಸರಿಯೋ ಅಥವಾ ಕೇಂದ್ರ ಸರ್ಕಾರದವರು ಕೊಟ್ಟ ಅಂಕಿ ಅಂಶ ಸರಿಯೋ ಗೊತ್ತಿಲ್ಲ. ಇನ್ನು ಪ್ಲಾನಿಂಗ್ ಕಮಿಷನ್ ಬಂದಾಗ್ಗೆ ನಮ್ಮ ಸರ್ಕಾರದವರು ನಮ್ಮಲ್ಲಿ ರಿಸೋರ್ಸಸ್ ಬಹಳ ಇದೆ ಅಷ್ಟು ಹೆಚ್ಚಿನಬಹುದು, ಇಷ್ಟು ಹೆಚ್ಚಿನಬಹುದು ಎಂದು ಹೇಳುತ್ತಾರೆ. ಫೈನಾನ್ಸ್ ಕಮಿಷನ್ ಬಂದಾಗ ನಮಗೆ ಹೆಚ್ಚು ಅಲಾಟ್‌ಮೆಂಟ್ ಮಾಡಿ ಎಂಬುದಾಗಿ ಹೇಳುತ್ತಾರೆ. ಹೀಗೆ ಎರಡು ತತ್ವಗಳನ್ನು ಇಟ್ಟುಕೊಂಡು ಆಡಳಿತ ನಡೆಸುತ್ತಿದ್ದಾರೆ. ಒಂದು ಕಡೆ ಪರ್ ಕ್ಯಾಪಿಟಾ ಇನ್‌ಕಂ ಹೆಚ್ಚಿದೆ ಎಂದು ಹೇಳುತ್ತೀರಿ, ಇನ್ನೊಂದು ಕಡೆ ಅದು ಕಡಿಮೆ ಇದೆಯೆಂದು ಹೇಳುತ್ತೀರಿ ಹೀಗೆ ಒಂದಕ್ಕೊಂದು ವಿರುದ್ಧವಾಗಿ ಹೇಳಿದರೆ ನಿಮ್ಮ ಆರ್ಥಿಕ ನೀತಿ ಇನ್ನು ಯಾವ ಮಟ್ಟಕ್ಕೆ ಮುಟ್ಟುತ್ತದೋ ಗೊತ್ತಿಲ್ಲ. ಈ ಒಂದು ಹಣಕಾಸಿನ ನೀತಿಯನ್ನು ಸುಮಾರು 20 ವರ್ಷಗಳಿಂದಲೂ ನತತವಾಗಿ ನಾವು ಟೀಕಿಸಿದರೂ ಅದರ ಕಡೆ ನೀವು ಗಮನ ಕೊಟ್ಟಿಲ್ಲ. ಪ್ರಜಾನತಾತ್ಮಕವಾದ ರಾಜಕೀಯ ಮಾಡುತ್ತೇವೆಂದು ಹೇಳಿ ಇಷ್ಟುಮಟ್ಟಿಗೆ ದುಡ್ಡು ಹಾಳಾಗಿ ಹೋಗಿದೆ. ಇತ್ತೀಚೆಗೆ

(ಶ್ರೀ ಎಂ. ನಾಗಪ್ಪ)

ಬಂದಂಥ ನ್ಯಾಷನಲ್ sample ಸರ್ವೆ ರಿಪೋರ್ಟ್‌ನಲ್ಲಿ ಕೆಲವು ಮಾತುಗಳನ್ನು ಹೇಳಿದ್ದಾರೆ. ಅದರಲ್ಲಿ 1952ರಲ್ಲಿ ಈ ದೇಶದಲ್ಲಿ ಯಾವ ಪರಿಸ್ಥಿತಿ ಇತ್ತು ಎಷ್ಟು ಬಡತನವಿತ್ತು, ಈಗೊತ್ತು 1969 ರಲ್ಲಿ ನಮ್ಮ ಸ್ಥಿತಿ ಯಾವರೀತಿ ಇದೆ ಎಂದು ಹೇಳಿದ್ದಾರೆ. ಅದು ಈ ರೀತಿ ಇದೆ: A third of the Indian population live in absolute poverty spending Rs. 15 in rural areas and Rs. 25 in urban areas despite the substantial economic growth in the country during the last 20 years. ಅವರು ಮೈಸೂರು ರಾಜ್ಯದ ಹಣೆಯ ಬರಹವೇನೆಂಬುದನ್ನು ಬರೆದಿದ್ದಾರೆ. ಅದು ಈ ರೀತಿ ಇದೆ. The proportion of people with an expenditure of less than a rupee a day has remained almost the same at over 80 per cent since 1952. 1952ರಿಂದ ಇವೊತ್ತಿನವರೆಗೂ ನಮ್ಮ ಪರ್‌ಕ್ಯಾಪಿಟಾ ಇನಕಂ ಒಂದು ರೂಪಾಯಿ ಆಗಿಯೇ ಉಳಿದಿದೆ. ಏನೂ ಹೆಚ್ಚಾಗಿಲ್ಲ. The National Survey Report of 1963-64 showed that out of 467 million people, 162 million people are accounted for a per capita income of less than Rs. 15 in rural areas and Rs. 24 in urban areas. ಆಮೇರೆ ಯಾವ್ಯಾವ ರಾಜ್ಯದಲ್ಲಿ ಬಡತನ ಹೆಚ್ಚಾಗಿದೆ ಎಂಬ ಬಗ್ಗೆ ಅಂಕಅಂಶಗಳನ್ನು ಹೇಳಿದ್ದಾರೆ. ಅದರಲ್ಲಿ ಮೊದಲನೆಯ ರಾಜ್ಯ ಕೇರಳ, ಎರಡನೆಯ ರಾಜ್ಯ ಅಂದರೆ ಮೈಸೂರು ಎಂಬುದಾಗಿ ಹೇಳಿದ್ದಾರೆ. ಕೇರಳದಲ್ಲಿ ಸೇಕಡ 44.5ರಷ್ಟಿದೆ. ಮೈಸೂರಿನಲ್ಲಿ ಸೇಕಡ 44ರಷ್ಟು ಇದೆ. ಅಂದರೆ, ನಮ್ಮ ನೀತಿ ಬಹಳ ಉತ್ತಮವಾಗಿದೆಯೇ? ನಮಗಿಂತ ಸಾಕಷ್ಟು ಉತ್ತಮ ರಾಜ್ಯಗಳು ಇನ್ನೂ ಅನೇಕವಿವೆ. ಬೇರೆ ರಾಜ್ಯಗಳನ್ನು ಟೀಕಿಸುವುದು ಬೇಡ. ವಾಸ್ತವಿಕವಾಗಿ ನಿಮ್ಮ ಪರಿಸ್ಥಿತಿ ಏನಿದೆಯೆಂಬುದನ್ನು ತಾವು ನೋಡಬೇಕು. 20 ವರ್ಷಗಳಿಂದ ನತತವಾಗಿ ರಾಜ್ಯಾಡಳಿತವನ್ನು ಮಾಡಿ ನಮ್ಮ ಮುಟ್ಟವನ್ನು ಇಲ್ಲಿಗೆ ತಂದಿದ್ದೀರಿ. ಜನಜೀವನದಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲ ಇದಕ್ಕೆ ದುಡ್ಡಿನ ಅಪವ್ಯಯವೇ ಕಾರಣ. ಮಾನ್ಯ ಶ್ರೀ ಡಿ. ದೇವರಾಜ್ ಅರಸ್ ಅವರು ಇಂತಹ ತೆರಿಗೆಗಳನ್ನೇ ಹಾಕಿ ಎಂದು ಸದಸ್ಯರು ಏಕೆ ಹೇಳುವುದಿಲ್ಲ ಎಂದು ಕೇಳಿದರು. ನಾನು ವಾಸ್ತವಿಕವಾಗಿ ಅವರ ಮಾತನ್ನು ಸ್ವಲ್ಪಮಟ್ಟಿಗೆ ಒಪ್ಪಿದರೂ ಒಂದು ಮಾತನ್ನು ಅವರಿಗೆ ಹೇಳುತ್ತೇನೆ. ಇವತ್ತು ನೀವು ನಡೆಸತಕ್ಕ ಆಡಳಿತವನ್ನು ಸರಿಪಡಿಸಿ. ಆಗ ನಿಮ್ಮಲ್ಲಿ ಬರತಕ್ಕ ಹಣ ಸೋರಿಹೋಗುವುದಿಲ್ಲ. ಪ್ರಾಮಾಣಿಕತೆಯಿಂದ ಕೂಡಿದಂಥ ಸಿಬ್ಬಂದಿಯನ್ನು ನೇಮಕಮಾಡಿ. ಸರಿಯಾದ ರೀತಿಯಲ್ಲಿ ಖರ್ಚುಮಾಡತಕ್ಕ ವ್ಯವಸ್ಥೆಮಾಡಿ. ಇಲ್ಲದಿದ್ದರೆ ಬಲದಲ್ಲಿ ಹೆಗ್ಗಣಗಳು ಸೇರಿಕೊಂಡಂತೆ ಅವರು ಸೇರಿಕೊಂಡು ವಾಸ್ತವಿಕವಾಗಿ ಬೇಕಾದಷ್ಟು ದುಡ್ಡನ್ನು ಹಾಳುಮಾಡುತ್ತಾರೆಂದು ಹೇಳುತ್ತೇನೆ. ಇವತ್ತು ಯಾವ ತೆರಿಗೆಯನ್ನು ಹಾಕಬಹುದು ಎಂಬುದನ್ನು ಸರ್ಕಾರದ ವರು ದೀರ್ಘವಾಗಿ ಹಾಗೂ ಕೂಲಂಕಷವಾಗಿ ಯೋಚನೆಮಾಡಬೇಕು. ಸೇಕಡ 30ರಷ್ಟು ಹಣ ಇವರು ಲೂಟಿಮಾಡುತ್ತಿದ್ದಾರೆ. ಪಬ್ಲಿಕ್ ಅಕೌಂಟ್ಸ್ ಕಮಿಟಿಯವರ ವರದಿಯ ಆಧಾರದಮೇಲೆ ನಾನು ಹೇಳುತ್ತಿದ್ದೇನೆ. ನ್ಯಾಷನರ್ ಪರ್ ಕ್ಯಾಪಿಟ ಇನ್‌ಕಂ ನೋಡಿದರೆ ನಾವು ಬಡವರಾಗಿದ್ದೇವೆ. ಈ ದೇಶದಲ್ಲಿ ಮೂರನೆ ಒಂದು ಭಾಗದಷ್ಟು ಜನ ಆ ಬಡತನದಲ್ಲಿ ಸೇರಿದೆ.

ಇನ್ನು ತಾವು 36 ಇರ್ರಿಗೇಷನ್ ಪ್ರಾಜೆಕ್ಟ್‌ಗಳನ್ನು ತೆಗೆದುಕೊಂಡಿದ್ದೇವೆಂದು ಹೇಳಿದ್ದೀರಿ. ಬಹಳ ಸಂತೋಷ. ಆದರೆ ತಿರುಪತಿ ಕ್ಷೌರದಂತೆ, ಯಾರು ಬಂದರೆ ಅವನಿಗೆ ಕತ್ತಿ ಹಾಕುವುದು ಬೇಡ. ಎಲ್ಲೋ ಒಂದು ಕಲ್ಲು ಹಾಕುವುದು, ಜನ ಆ ಕಲ್ಲನ್ನೇ ನೋಡುತ್ತಿರುವುದು. ಇಂಥಾದ್ದು ಪ್ರಾಜೆಕ್ಟ್‌ಗಳು ಆಗುತ್ತಿವೆ. 36 ಪ್ರಾಜೆಕ್ಟ್‌ಗಳ ಪೈಕಿ, ಮೂರು ಪ್ರಾಜೆಕ್ಟ್‌ಗಳನ್ನಾದರೂ ಕಟ್ಟುವುದಕ್ಕೆ ಇವರಿಗೆ ಶಕ್ತಿ ಇದೆಯೇ? ಇವತ್ತು ಅಪ್ಪರ್‌ಕೃಷ್ಣಾ ಯೋಜನೆಯ ಮೊದಲನೆಯ ಹಂತಕ್ಕೆ 75 ಕೋಟಿ ರೂಪಾಯಿಗಳು ಬೇಕೆಂದು ಹೇಳಿದರು. ಅರಾಟ್‌ಮೆಂಟ್ 2 ಕೋಟಿ, ಅದರಲ್ಲಿಯೇ ಮುಗಿಸಿ ಅಂದರೆ ನಿಮ್ಮ ಯೋಜನೆ ಎಲ್ಲಿ ಹೋಗುತ್ತದೆ?

ಇನ್ನು ಇರ್ರಿಗೇಷನ್ನಿನಲ್ಲಿ ಬಹಳ ಮುಂದುವರಿದ್ದೇವೆಂದು ಹೇಳುತ್ತಾರೆ. ಅದು ನ್ಯಾಷನಲ್ ಪರ್ಸೆಂಟ್ ಎಷ್ಟು ಅಂದರೆ ಸೇಕಡ 20ರಿಂದ 30ಕ್ಕೆ ಮುಟ್ಟಿದೆ. ನಿಮ್ಮದು ಸೇಕಡ 9-10 ರಲ್ಲಿದೆ. ಇವರು ಖರ್ಚುಮಾಡಿದ್ದರಲ್ಲಿ ಎಷ್ಟು ಉತ್ಪತಿ ಬಂದಿದೆ ಎಂಬುದನ್ನು ನೋಡಿದರೆ ಗೊತ್ತಾಗುತ್ತದೆ ಎಷ್ಟು ಮಟ್ಟಿಗೆ ಆಗಿದೆ ಎಂದು. ಆದ್ದರಿಂದ ನೀವು ಸರಿಯಾದ ನೀತಿಯನ್ನು ಅನುಸರಿಸುತ್ತಿಲ್ಲ, ನೀವು ಪ್ರತಿಯೊಂದು ವಿಷಯದಲ್ಲೂ ರಾಜಕೀಯವನ್ನು ಮಾಡುತ್ತಿದ್ದೀರಿ. ಕೋಆಪರೇಟಿವ್ ಸೆಕ್ಟರ್‌ನಲ್ಲಿ 100ಕ್ಕೆ 55 ಸೊಸೈಟಿಗಳು ಇವೊತ್ತಿನ ದಿವಸ ಲಿಕ್ವಿಡೇಟ್ ಆಗುವ ಸ್ಥಿತಿಗೆ ಬಂದಿವೆ.

ಪ್ರಪಂಚದ ಎಲ್ಲಾ ಭಾಗಗಳಿಂದಲೂ ಸಾಲ ತಂದು ಕೊಡುತ್ತಿದ್ದಾರೆ. ರಿಲೀಫ್ ಕಾಮಗಾರಿಗಳ ಅಂಕಿ ಅಂಶಗಳನ್ನು ಮೊನ್ನೆ ಒದಗಿಸಿದ್ದೀರಿ. ಇವತ್ತು ಕೋಆಪರೇಟಿವ್ ಸಂಸ್ಥೆಗಳನ್ನು ಅಭಿವೃದ್ಧಿ ಪಡಿಸುವುದಕ್ಕೋಸ್ಕರ ಪೊಲಿಟಿಕರ್ ಪೆನ್‌ಷನರನ್ನು ನೇಮಿಸುತ್ತಿದ್ದೀರಿ. ಅಂಥ ಜನರಿಗೋಸ್ಕರ ನೀವು ಇಂಥ ಕೋಆಪರೇಟಿವ್ ಸೊಸೈಟಿಗಳನ್ನು ಮಾಡುತ್ತಿದ್ದೀರಿ ಎಂದು ಕಾಣುತ್ತದೆ. ಈಪೊತ್ತು ರ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್ ಮುಖಾಂತರ ಬಾವಿಗಳಿಗೋಸ್ಕರ ಎಷ್ಟೋ ಹಣವನ್ನು ಕೊಡುತ್ತಿದ್ದೀರಿ. ಈಗ 4-5 ವರ್ಷವಾದರೂ 40 ಬಾವಿಗಳೂ ಕೂಡ ಆಗುತ್ತಾ ಇಲ್ಲ. ಕೊಟ್ಟ ದುಡ್ಡಿನ ಕಾಲು ಭಾಗ ಕೂಡ ಕೆಲಸ ಆಗುತ್ತಿಲ್ಲ; ಆದರೆ 64 ಪ್ಯಾಮಿನ್ ಕೋಡಿನಲ್ಲಿ ಏನು ಕೊಟ್ಟಿದ್ದೀರಿ, ಅಲ್ಲಿ ನೂರಕ್ಕೆ 80 ಭಾಗದಷ್ಟು ಕೆಲಸ ಕೈಗೂಡಿದೆ. ಇವತ್ತು ರ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕಿನಿಂದ ಬಂದರೆ, ಏಕೆ ಅವನು ನದ್ದಿನಿಯೋಗ ಮಾಡುತ್ತಾ ಇಲ್ಲ. ಈ ಕೋಆಪರೇಟಿವ್ ತತ್ವ ಏನಿದೆ, ''ಎಲ್ಲರಿಗಾಗಿ ನಾನು'' ಎಂಬುದು, ಇವತ್ತು ''ನನಗಾಗಿ ಎಲ್ಲರೂ''iಎಂದು ಆಗಿದೆ. ಇವತ್ತಿನ ದಿವಸ ಕೋಆಪರೇಟಿವ್ ಹಣವನ್ನು ಸಾಲ ಕೊಟ್ಟು ಆದರಿಂದ ಪ್ರೈವೇಟ್ ಮನಿ ಲೆಂಡರ್ ಬಡ್ಡಿ ಸಂಪಾದನೆ ಮಾಡಿದ ಹಾಗೆ, ಬಡ್ಡಿ ಸಂಪಾದನೆ ಮಾಡುತ್ತಿರುವ ಜನರೇ ಬಹಳ ಜಾಸ್ತಿಯಾಗಿದ್ದಾರೆ. ಇದು ಸರ್ಕಾರದ ಗಮನಕ್ಕೆ ಬಂದಿದೆ. ಅಂದಮೇಲೆ ನಿಮ್ಮ ಕೋಆಪರೇಟಿವ್ ಸೆಕ್ಟರ್ ಎಲ್ಲಿದೆ, ನಿಮ್ಮ ಇರಿಗೇಷನ್ ಪ್ರೊಜೆಕ್ಟ್ ಎಲ್ಲಿದೆ ? ಇವೆಲ್ಲಾ ಕೂಲಂಕಷವಾಗಿ ನೋಡಿಕೊಂಡರೆ ನಮ್ಮ ದೇಶ ಇವತ್ತು ಯಾವ ಸ್ಥಿತಿಗೆ ಬಂದಿದೆ ಎಂದು ಗೊತ್ತಾಗುತ್ತದೆ. ಶ್ರೀಮಾನ್ ದೇವರಾಜ್ ಅರಸರು ಹೇಳುತ್ತಿದ್ದರು ನಮಗೆ ಪೋಲೀಸ್ ಇರದಿರುತ್ತಿದ್ದರೆ, ಮಹಾರಾಷ್ಟ್ರದಲ್ಲಿ ರಕ್ಷಣೆ ಸಿಗುತ್ತಾ ಇರಲಿಲ್ಲವೆಂದು. ನಾನು ಕೇಳುತ್ತೇನೆ, ಇವತ್ತು ನೀವು ಆಳತಕ್ಕ ರಾಮರಾಜ್ಯವು ರಾಕ್ಷಸ ರಾಜ್ಯವಾಗಿದೆ. ಇವತ್ತು ನೀವು ಅದರ ಬದಲು ಪೋಲೀಸ್ ರಾಜ್ಯವನ್ನು ಮಾಡುತ್ತಿದ್ದೀರಿ. ಇದನ್ನು ನಿಮಗೋಸ್ಕರ ಇಟ್ಟಿದ್ದೀರಿ. ಇವರೆಲ್ಲಾ ನಿಮ್ಮ ರಕ್ಷಣೆಯನ್ನು ಮಾಡಬೇಕು. ಇದಕ್ಕೆ ನೀವು 1947ರಿಂದ ಹಿಂದೆ ಇದ್ದಂತಹ ಡೇಟಾಸ್ ಕೊಡಿ, ಆಗ ಹಿಂದೆ ಇದ್ದಂತಹ ಪೋಲೀಸ್ ಆಡಳಿತವನ್ನೂ ಮತ್ತು ಈಗಿರತಕ್ಕ ಆಡಳಿತವನ್ನೂ ಹೋಲಿಸಿ ನೋಡಿ, ಆಗ ಗೊತ್ತಾಗುತ್ತದೆ. ಇವತ್ತೂ ಬೆಂಗಳೂರಿನಲ್ಲಿ ಮನೆ ಬೀಗ ಹಾಕಿ ಹೋಗುವುದೇ ಕಷ್ಟವಾಗಿದೆ. ವಾಪಾಸು ಬಂದಾಗ ಮನೆಯ ಸಾಮಾನು ಯಾವುದೂ ಇರುವುದಿಲ್ಲ. ಒಮ್ಮೆ ರೆವೆನ್ಯೂ ಅಪರೇಟ್ ಟ್ರಿಬ್ಯೂನಲ್ಲಿನ ಕ್ಲಾರ್ಕ್ Tourಗೆ ರಾಯಚೂರಿಗೆ ಬಂದಾಗ, ಅಲ್ಲಿ ಅವರಿಗೆ ಒಂದು ಟೆಲಗ್ರಾಮ್ ಬಂತು, ಏನೆಂದರೆ, ನಿಮ್ಮ ಮನೆಯಲ್ಲಿರುವ ಸಾಮಾನೆಲ್ಲಾ ಕಳವಾಗಿದೆ ಎಂದು. ಈ ರೀತಿ ಇದೆ ಪರಿಸ್ಥಿತಿ. ಇದರಿಂದ ನಿಮ್ಮ ಪೋಲೀಸರ ದಕ್ಷತೆ ಎಷ್ಟು ಇದೆ ಎಂದು ಗೊತ್ತಾಗುತ್ತದೆ. ಎಲ್ಲ Project ಗಳನ್ನು ಮಾಡುವುದಕ್ಕಾಗದಿದ್ದರೆ, ನೀವು ಪ್ರಿಫರೆನ್ಸ್ ಕೊಟ್ಟು ಕೆಲವನ್ನು ಮಾಡಿ. ಇವುಗಳನ್ನು ಒತ್ತಡಕ್ಕೆ ಬದ್ದು ಮಾಡಬೇಡಿ.

ಅಪ್ಪರ್ ಕೃಷ್ಣಾ ರೈಟ್ ಬ್ಯಾಂಕ್ ಕೆನಾಲ್ ತೆಗೆದುಕೊಳ್ಳುತ್ತೇವೆಂದು ಹೇಳಿಕೆ ಕೊಟ್ಟರು. ಇವತ್ತು ಅಡ್ವಾನ್ಸ್ ಕಾಂಟ್ರಿಬ್ಯೂಶನ್ ಕೊಡುತ್ತೇವೆಂದು ಜನರು ಹೇಳುತ್ತಿದ್ದಾರೆ. ಆದರೆ, ಇವರು ಮಾಡುತ್ತಿರುವುದು ಲೆಫ್ಟ್ ಬ್ಯಾಂಕ್ ಕೆನಾಲ್ ಲೆಫ್ಟ್ ಬ್ಯಾಂಕ್ ಕೆನಾಲನಲ್ಲಿ 75 ಪರ್‌ಸೆಂಟ್ ಬರತಕ್ಕದ್ದು ಕಪ್ಪು ಭೂಮಿ. ಆದರೆ ರೈಟ್ ಬ್ಯಾಂಕ್‌ನಲ್ಲಿ ಬರತಕ್ಕದ್ದು ಕೆಂಪು ಭೂಮಿ; ಮತ್ತು, ಅದರ ಫಲ ತೀವ್ರವಾಗಿ ಬರುತ್ತದೆ. ಅದಕ್ಕೆ ಬೇಕಾದರೆ ಒಂದು ಕಮಿಶನ್ ಮಾಡಿ ಪರಿಶೀಲನೆ ಮಾಡಿ, ಅವರು ಒಂದು ಸರಿಯಾದ ತೀರ್ಪು ಕೊಡಲಿ, ನಾನು ಒಪ್ಪಿಕೊಳ್ಳುತ್ತೇನೆ. ಬೇರೆ ಯಾವ ಕಾರಣಗಳನ್ನು ಹೇಳಬೇಡಿ. ಇವತ್ತು ಪಟ್ಟಣದಲ್ಲಿ ಈಗಾಗಲೇ ಟ್ಯಾಕ್ಸೇಶನ್ ಹೆಚ್ಚಾಗಿದೆ ಎಂದು ಹೇಳುತ್ತಾರೆ. ಮಾನ್ಯ ಮಂತ್ರಿಯವರಿಗೆ ಒಂದು ಮಾತು ಹೇಳುತ್ತೇನೆ. ಇವತ್ತಿನ ದಿವಸ ರ್ಯಾಂಡ್ ಸೀಲಿಂಗ್ ಮಾಡಿದ್ದಾರೆ. ಆದರೆ ಪಟ್ಟಣಗಳಲ್ಲಿ ಒಬ್ಬೊಬ್ಬರು 10-20 ಮನೆಗಳನ್ನು ಕಟ್ಟಿಕೊಂಡು ಹೋಗುತ್ತಿದ್ದಾರೆ. ಇವನ್ನೆಲ್ಲಾ ಬ್ಲಾಕ್ ಹಣದಲ್ಲಿ ಕಟ್ಟುತ್ತಿದ್ದಾರೆ. ಇದನ್ನು ಯಾರೂ ಕೇಳುವವನಿಲ್ಲದಾಗಿದೆ. ಆದ್ದರಿಂದ ಅದಕ್ಕೆ ಬೇಕಾದ ವ್ಯವಸ್ಥೆ ಮಾಡಿ, ಅಲ್ಲಿ ಹಣ ಪಡೆಯಲಿಕ್ಕೆ ಸಾಧ್ಯವಿದ್ದರೆ ನೋಡಬೇಕು. ಪಟ್ಟಣದಲ್ಲಿ ಇನ್ನೂ ಸಾಕಷ್ಟು ಟ್ಯಾಕ್ಸೇಶನ್ ಹಾಕಲಕ್ಕೆ ಬರುತ್ತದೆ. ಇವತ್ತು ದುಡ್ಡು ಖರ್ಚು ಮಾಡತಕ್ಕದ್ದು ಪಟ್ಟಣಗಳಲ್ಲಿ ಜಾಸ್ತಿ. ನಮ್ಮ ಹಣದಲ್ಲಿ 100ಕ್ಕೆ 70 ಭಾಗ ಪಟ್ಟಣಗಳಿಗೆ ಖರ್ಚಾಗುತ್ತಿದೆ, ಮತ್ತು ಕೇವಲ 30 ಭಾಗ ಮಾತ್ರ ಹಳ್ಳಿಗಳಿಗೆ ಖರ್ಚಾಗುತ್ತಿದೆ. ಹಳ್ಳಿಯ ಜನರಿಗೆ ಹೆಚ್ಚಿನ ಸೌಲಭ್ಯಗಳನ್ನು ಕೊಡದೆ, ಅವರ ಮೇಲೆ ಪುನಃ ಟ್ಯಾಕ್ಸ್ ಹಾಕತಕ್ಕದ್ದು ಸರಿಯಲ್ಲ. ಬೇಕಾದರೆ, 100 ಎಕರೆಗಿಂತ ಹೆಚ್ಚು ಇಟ್ಟುಕೊಂಡಿರುವವರಿಗೆ ಟ್ಯಾಕ್ಸ್ ಹೆಚ್ಚು ಹಾಕಿ, ನಮ್ಮ ಅಭ್ಯಂತರವಿಲ್ಲ. ಆದರೆ ಬಡ ರೈತನಿಗೆ, ಈ ತೆರಿಗೆ, ಆ ತೆರಿಗೆ ಎಂದು, ತೊಂದರೆ ಕೊಡುವುದು ಸರಿಯಲ್ಲ ಮತ್ತು ಅದನ್ನು ಮಾಡಬಾರದು ಎಂದು ಹೇಳಿ, ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ. ಎನ್. ವೀರಪ್ಪಗೌಡ (ಶೃಂಗೇರಿ).—ಮಾನ್ಯ ಅಧ್ಯಕ್ಷರೇ, ನಮ್ಮ ಹಣಕಾಸಿನ ಸಚಿವರು ಮಂಡಿಸಿರತಕ್ಕಂತಹ ಬಜೆಟನ್ನು ತುಂಬಾ ಆನಂದದಿಂದ ಸ್ವಾಗತಿಸಿ ಕೆಲವು ವಿಷಯಗಳನ್ನು ಪ್ರಸ್ತಾಪಿಸುತ್ತೇನೆ. 1967-68 ರಲ್ಲಿ 179 ಕೋಟಿ ಇರತಕ್ಕಂತದ್ದು ಇವತ್ತಿನದಿವಸ 226 ಕೋಟಿ ಉತ್ಪತ್ತಿ ಬರುತ್ತಪೆ ಎಂದರೆ, ನಾವು ಎಷ್ಟು ಅಭಿವೃದ್ಧಿ ಹೊಂದಿದ್ದೇವೆ ಎಂಬುದನ್ನು ಬಹಳ ಸಂತೋಷದಿಂದ ಹೇಳಬೇಕಾಗಿದೆ. 1968-69 ರ ಆಯವ್ಯಯ ಪತ್ರದಲ್ಲಿ 194.74 ಕೋಟಿ ರೂಪಾಯಿ ವರಮಾನಕ್ಕೂ, 182.76 ಕೋಟಿ ರೂಪಾಯಿ ರೆವಿನ್ಯೂ ವೆಚ್ಚಕ್ಕೂ ಏರ್ಪಾಡಾಗಿತ್ತು. ಆದರೆ ಕೊನೆಗೆ 215 ಕೋಟಿ ರೂಪಾಯಿ ಉತ್ಪತ್ತಿ ಬಂದಿದೆ ಎಂದರೆ ನುಮಾರು 20 ಕೋಟಿ 26 ಲಕ್ಷ ಜಾಸ್ತಿ ಉತ್ಪತ್ತಿ ಬಂದಿದೆ ಎಂಬುದು ಬಹಳ ಸಂತೋಷದಿಂದ ಹೇಳಬೇಕಾಗಿದೆ.

[SMT. K. LEELAVATHI RAI in the Chair]

ಯಾವಾಗಲೂ ಬಜೆಟ್ಟಿನಲ್ಲಿ ಜಾಸ್ತಿ ಉತ್ಪತ್ತಿಯನ್ನು ತೋರಿಸಿ ಕಡಿಮೆ ಬರತಕ್ಕದ್ದು ಇರಬಾರದು. ಖರ್ಚನ್ನೂ ಸಾಕಷ್ಟು ಕಡಿಮೆ ಮಾಡಿದ್ದಾರೆ. ಆಡಳಿತ ಚೆನ್ನಾಗಿ ನಡೆದಿಪೆ ಎನ್ನುವುದಕ್ಕೆ ಉತ್ಪತ್ತಿ ಜಾಸ್ತಿ ಬಂದಿದೆ ಎನ್ನುವುದೇ ಕಾರಣ. ಆಡಳಿತ ಸಾಕಷ್ಟು ಇಂಪ್ರೂವ್ ಆಗುತ್ತಿದೆ ಎನ್ನುವುದಕ್ಕೆ ಅನೇಕ ವಿಷಯದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಮಾನ್ಯ ಹಣಕಾಸಿನ ಮಂತ್ರಿಗಳು ಬಹಳ ಬುದ್ಧಿವಂತರು ಇದ್ದಾರೆ. ಅನೇಕ ಸಂದರ್ಭಗಳಲ್ಲಿ ಅವರು ಬಡ್ಜೆಟ್ಟಿನಲ್ಲಿ ಇಟ್ಟಿರತಕ್ಕ ಸಲಹೆಗಳನ್ನು ನೋಡಿದರೆ ತುಂಬಾ ಸಂತೋಷಕರವಾಗಿದೆ. ಈಗ ಹೇ ಕಮಿಷನ್ ರಿಪೋರ್ಟ್‌ನ್ನು ಹಾರಿಗೆ ಕೊಡತಕ್ಕ ಮಟ್ಟದಲ್ಲಿ ಕೆಲವು ಭಾಗಗಳನ್ನು ಸರ್ಕಾರದವರು ಒಪ್ಪಿಕೊಂಡಿದ್ದಾರೆ. ಇದು ತುಂಬಾ ಸಂತೋಷಕಾರವಾದ ವಿಷಯ. ಇದರಲ್ಲಿ ನಾಲ್ಕನೆಯ ದರ್ಜೆಯ ನೌಕರಿಗೆ ಸ್ವಲ್ಪ ಮಟ್ಟಿಗೆ ಡಿ.ಎ. ಕಡಿಮೆ ಬರುತ್ತದೆ ಎಂದು ನಾನು ಕೇಳಿದ್ದೇನೆ. ಅದನ್ನು ಸರಿಪಡಿಸುವುದಕ್ಕೆ ಪ್ರಯತ್ನ ಮಾಡುತ್ತಾರೆ ಎಂದು ನಾನು ನಂಬಿದ್ದೇನೆ.

ಶ್ರೀಮಾನ್ ದೇವರಾಜ್ ಅರಸ್ ಅವರು ಮಾತನಾಡುತ್ತಾ ನೇರವಾಗಿ ಯಾವುದಾದರೂ ಟ್ಯಾಕ್ಸ್ ಹಾಕುತ್ತೇವೆ ಎಂದು ಹೇಳಬಹುದಾಗಿತ್ತು ಎಂದು ಹೇಳಿದರು. ನನಗೆ ತಿಳಿದ ಹಾಗೆ ನಮ್ಮ ಆರ್ಥ ಸಚಿವರು ವಿಷಯಗಳನ್ನು ಸರಿಯಾಗಿ ತಿಳಿದುಕೊಂಡಿದ್ದಾರೆ. ನಮ್ಮ ರಾಜ್ಯದ ಹಣಕಾಸಿನ ಪರಿಸ್ಥಿತಿ ಅವರಿಗೆ ಚೆನ್ನಾಗಿ ಗೊತ್ತಿದೆ. ಯಾವ ಯಾವ ಬಾಬಿನಲ್ಲಿ ಜಾಸ್ತಿ ಬರುತ್ತದೆ ಎಂಬುದನ್ನು ಅವರು ಗಮನದಲ್ಲಿ ಇಟ್ಟುಕೊಂಡಿದ್ದಾರೆ. ಈಗಾಗಲೇ ಪಾನನಿರೋಧಕ್ಕೆ ಸಂಬಂಧಪಟ್ಟ ಕಾನೂನನ್ನು ಸಡಿಲಿಸಿ ಎಕ್ಸ್‌ಚೈಜ್‌ನಿಂದ ಹೆಚ್ಚು ಉತ್ಪತ್ತಿ ಬರುವ ಹಾಗೆ ಮಾಡಿಕೊಂಡಿದ್ದಾರೆ. ಹೋದ ಸಾರಿ ಎಕ್ಸ್‌ಚೈಜ್‌ನಿಂದ ಏನು ಆದಾಯ ಬರುತ್ತದೆ ಎಂದು ನಾವು ನಿರೀಕ್ಷಣೆ ಮಾಡಿದ್ದೆವೋ ಅದಕ್ಕಿಂತ ಜಾಸ್ತಿ ಆದಾಯ ಬಂದಿದೆ. ಮುಂದಿನ ಜೂನ್ ತಿಂಗಳಲ್ಲಿ ಎಕ್ಸ್‌ಚೈಜ್ ಕಂಟ್ರಾಕ್ಟನ್ನು ಹರಾಜು ಮಾಡುತ್ತಾರೆ. ಆಗ ಅದರಿಂದ ಒಂದಕ್ಕೆ 10 ರಷ್ಟು ಆದಾಯ ಬರುತ್ತದೆ ಎಂದು ಅನಿಸುತ್ತದೆ. ಕೆಲವು ಕಡೆ ಆಗಿರುವುದನ್ನು ಯೋಚನೆ ಮಾಡಿದರೆ, ಅರಸೀಕೆರೆಯಲ್ಲಿ ಶ್ರೀಮಂತರು 6 ಸಾವಿರ ರೂಪಾಯಿಗಳಿಗೆ ತೆಗೆದುಕೊಂಡಿದ್ದನ್ನು 65 ಸಾವಿರ ಚಿಲ್ಲರೆ ರೂಪಾಯಿಗಳಿಗೆ ಹಂಚಿದ್ದಾರೆ. ಆದ್ದರಿಂದ ಒಂದಕ್ಕೆ 10 ರಷ್ಟು ಲಾಭ ಬರುತ್ತದೆ. ಈ ದೃಷ್ಟಿಯಿಂದ ಮುಂದಿನ ಹರಾಜಿನಲ್ಲಿ ಇದರಲ್ಲಿ ಜಾಸ್ತಿ ಆದಾಯ ಬರುವುದಕ್ಕೆ ಅವಕಾಶವಿದೆ. ಈ ಬಗ್ಗೆ ಒಂದು ವಿಷಯವನ್ನು ಹೇಳುತ್ತೇನೆ. ಈ ಸಾರಿ ಗ್ರಾಮ ಗ್ರಾಮ ಮಟ್ಟದಲ್ಲಿ ಹರಾಜು ಮಾಡತಕ್ಕದ್ದನ್ನು, ಇಟ್ಟುಕೊಳ್ಳಬೇಕು. ಯಾವುದರಿಂದ ಹೆಚ್ಚು ಆದಾಯ ಬರುತ್ತದೆಯೋ ಅದನ್ನು ಮಾಡಬೇಕು. ಈಚೆಗೆ ಡಿಸ್ಟ್ರಿಕ್ಟ್‌ವೈಜ್ ಹರಾಜು ಮಾಡುವುದಿಲ್ಲ ಸರ್ಕಲ್ ವೈಜ್ ಹರಾಜು ಮಾಡುತ್ತೇವೆಂದು ಸರ್ಕಾರದವರು ನಿರ್ಧಾರ ಮಾಡಿಕೊಂಡಿದ್ದಾರೆಂದು ನಾನು ಕೇಳಿದ್ದೇನೆ. ತಾಲ್ಲೂಕು ಮತ್ತು ಜಿರ್ಲಾ ಮಟ್ಟದ ಹರಾಜು ಇದೆ ಎಂದರೆ ಗ್ರಾಮ ಮಟ್ಟದಲ್ಲಿ ಜಾಸ್ತಿ ಬಿಡ್ ಬರುವುದಿಲ್ಲ. ಆದರೆ ಸಣ್ಣ ಸಣ್ಣ ಅಂಗಡಿಗಳನ್ನು ಹೆಂಚಿಕೊಟ್ಟು ಹರಾಜು ಮಾಡುವುದಾದರೆ ಅದರಿಂದ ಉತ್ಪತ್ತಿ ಜಾಸ್ತಿ ಬರುತ್ತದೆ ಎಂದು ನಾನು ನಂಬಿದ್ದೇನೆ. ಆ ರೀತಿ ಮಾಡಬೇಕೆಂದು ನಾನು ತಮ್ಮನ್ನು ಒತ್ತಾಯ ಮಾಡುತ್ತೇನೆ. ಈ ಬಗ್ಗೆ ನಾನು ತಮಗೆ ಒಂದು ನಿದರ್ಶನವನ್ನು ಹೇಳುತ್ತೇನೆ. ಒಂದು ತಾಲ್ಲೂಕಿನ ಸಾರಾಯಿ ಕಂಟ್ರಾಕ್ಟರು ಒಬ್ಬರು ನನ್ನ ಸ್ನೇಹಿತರು. ಅವರು ಮೊದಲು ಪಿಲಿಟರಿ ಹೋಟಲಿನಲ್ಲಿ ಸರ್ವೀಸ್ ಮಾಡುತ್ತಿದ್ದರು. ಅವರು ಒಂದು ತಾಲ್ಲೂಕು ಸಾರಾಯಿ ಹರಾಜನ್ನು ತೆಗೆದುಕೊಂಡು ಅದನ್ನು ನಷ್ಟಮಾಡುತ್ತಿದ್ದಾರೆ. ಈಗ್ಗೆ ಸ್ವಲ್ಪ ದಿವಸಗಳ ಹಿಂದೆ ನಾನು ಅವರನ್ನು ಭೇಟಿ ಮಾಡಿ ಕೇಳಿದಾಗ ಅವರು ಹೇಳಿದರು ನಾನು 45 ಸಾವಿರ ರೂಪಾಯಿಗಳಿಗೆ ಮನೆಯನ್ನು ತೆಗೆದುಕೊಂಡಿದ್ದೇನೆ. ಎರಡು ಲಾರಿಯನ್ನು ಬುಕ್ ಮಾಡಿದ್ದೇನೆ. ಒಂದು ಅಂಬಾಸಿಡರ್ ಕಾರು ಬೇರೆ ಬರುತ್ತಿದೆ ಎಂದು ಇತ್ಯಾದಿಯಾಗಿ ಪಟ್ಟಿಯನ್ನು ಹೇಳುತ್ತಾ ಹೋಗುತ್ತಿದ್ದರು. ಹೀಗೆ ಎಕ್ಸ್‌ಚೈಜ್ ಬಾಬಿನಿಂದ ಎಷ್ಟರಮಟ್ಟಿಗೆ

ಆದಾಯ ಬರುತ್ತದೆ ಎಂಬುದನ್ನು ನಾವು ಅರ್ಥ ಮಾಡಿಕೊಳ್ಳಬಹುದು. ಆದ್ದರಿಂದ ಸರ್ಕಾರದವರು ಇದನ್ನು ಗಮನದಲ್ಲಿಟ್ಟುಕೊಂಡು ಎಕ್ಸೈಜ್ ಹರಾಜನ್ನು ಮಾಡಬೇಕು. ಗ್ರಾಮಗಳಿಂದ ಜಾಸ್ತಿ ಆದಾಯ ಎಕ್ಸೈಜಿನಿಂದ ಬರುತ್ತದೆ. ಹಳ್ಳಿಗರು ಈ ಹಣವನ್ನು ಕೊಡುತ್ತಾರೆ. ಇದನ್ನು ಸರ್ಕಾರದವರು ಸಂಪೂರ್ಣವಾಗಿ ಗಮನದಲ್ಲಿಟ್ಟುಕೊಳ್ಳಬೇಕು. ಈ ಮೂಲಕ ಸರ್ಕಾರದವರು ಹೆಚ್ಚಿನ ಹಣವನ್ನು ಗಳಿಸುವುದಕ್ಕೆ ಪ್ರಯತ್ನ ಮಾಡಬೇಕೆಂದು ನಾನು ಹೇಳುತ್ತೇನೆ.

ಗೃಹಚಾರವಶಾತ್ ಹಳ್ಳಿಯವರು ಬಹಳ ಚೆನ್ನಾಗಿದ್ದಾರೆ ಅವರ ಮೇಲೆ ಹೆಚ್ಚಿನ ತೆರಿಗೆಯನ್ನು ಹಾಕಿದರೆ ಅವರು ಕೊಡುವುದಕ್ಕೆ ಮುಂದೆ ಬರುತ್ತಿಲ್ಲ ಎನ್ನುವ ಪ್ರಶ್ನೆ ಆಗಿಂದಾಗ್ಗೆ ಬರುತ್ತಿದೆ. ನಿಜವಾಗಿಯೂ ಇದು ವಿಷಾದಕರವಾದ ವಿಷಯ. ಒಂದು ಎಕರೆ ಸಾಗು ಮಾಡತಕ್ಕ ಒಬ್ಬ ರೈತನಿಗೆ ಕಂಪಲ್ಸರಿಯಾಗಿ ಒಂದು ಕ್ವಿಂಟಾಲ್ ಬತ್ತ ಲೆವಿ ಕೊಡಲೇಬೇಕೆಂದು ಆರ್ಡರ್ ಮಾಡಿದ್ದಾರೆ. ಅವನಿಗೆ ಕನಿಷ್ಠಪಕ್ಷ 30 ರೂಪಾಯಿಗಳನ್ನು ತೆರಿಗೆ ಹಾಕಿದ ಹಾಗೆ ಆಯಿತು. ಅವನು ನೇರವಾಗಿ ಸರ್ಕಾರಕ್ಕೆ ಈ ರೂಪದಲ್ಲಿ ತೆರಿಗೆಯನ್ನು ಕೊಟ್ಟ ಹಾಗೆ ಆಯಿತು. ಈ ತರಹ ಅನೇಕ ಹಿನ್ನೆಲೆ ತೆರಿಗೆಗಳು ಅವನಿಗೆ ಬೀಳುತ್ತವೆ ಎಂಬುದನ್ನು ಸರ್ಕಾರದವರು ಗಮನದಲ್ಲಿಟ್ಟುಕೊಳ್ಳಬೇಕು. ಹಳ್ಳಿಗಾಡಿನಲ್ಲಿರತಕ್ಕ ರೈತ ಒಬ್ಬ ಡಾಕ್ಟರ ಹತ್ತಿರ ಹೋಗಬೇಕಾದರೆ ಟ್ಯಾಕ್ಸಿ ಬಾಡಿಗೆ ಎಷ್ಟು ಕೊಡಬೇಕು ಎಂಬುದು ಮರೆತು ಹೋಗುತ್ತದೆ. ಆದರೆ ಪಟ್ಟಣದಲ್ಲಿರತಕ್ಕವರು ಬಸ್ಸಿನಲ್ಲಿ ಆಸ್ಪತ್ರೆಗೆ ಹೋಗುತ್ತಾರೆ ಬರುತ್ತಾರೆ. ಅವರಿಗೆ ಆ ಒಂದು ಅನುಕೂಲತೆ ಇದೆ. ಈಗಾಗಲೇ ರೈತರಿಗೆ ಹಾಕಿರತಕ್ಕ ತೆರಿಗೆ ಸ್ವಲ್ಪ ಜಾಸ್ತಿಯಾಗಿದೆ. ಇನ್ನೂ ಹೆಚ್ಚಿಗೆ ತೆರಿಗೆಯನ್ನು ರೈತನಿಗೆ ಹಾಕುವುದಕ್ಕೆ ಅವಕಾಶವಿಲ್ಲ. ರೈತ ಎಲ್ಲರಿಗೂ ಅನ್ನವನ್ನು ದುಡಿದು ಕೊಡುತ್ತಿದ್ದಾನೆ. ಆದ್ದರಿಂದ ನೀವು ಅವನಿಗೆ ನ್ಯಾಯವಾಗಿ ತೆರಿಗೆಯನ್ನು ಕಡಿಮೆ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಎಕ್ಸೈಜ್‌ನಿಂದ ಹೆಚ್ಚು ಆದಾಯ ಬರುತ್ತದೆ ಎಂದು ನಿರೀಕ್ಷಣೆ ಮಾಡಿಕೊಂಡು, ಅದನ್ನು ಮನಸ್ಸಿನಲ್ಲಿಟ್ಟುಕೊಂಡು ಮಾನ್ಯ ಹಣಕಾಸಿನ ಮಂತ್ರಿಗಳು ತೆರಿಗೆ ಇಲ್ಲದ ಬಜೆಟ್ಟನ್ನು ಇಟ್ಟಿರುವುದಕ್ಕಾಗಿ ನಾವು ಸಂತೋಷ ಪಡಬೇಕಾಗಿದೆ. ಇದರಲ್ಲಿ ಸರ್ಕಾರದವರು ಸಾಕಷ್ಟು ಖರ್ಚನ್ನೂ ಉಳಿಸುವುದಕ್ಕೆ ಪ್ರಯತ್ನ ಮಾಡಬೇಕು. ಈಗ ಪೇ ಕಮಿಷನ್ನಿನಲ್ಲಿ ಶಿಫಾರಸ್ಸು ಮಾಡಿರುವುದನ್ನು ಒಂದೆರಡು ಶಿಫಾರಸ್ಸುಗಳನ್ನು ಜಾರಿಗೆ ಕೊಡುವುದಕ್ಕೆ ಸರ್ಕಾರದವರು ಒಪ್ಪಿಕೊಂಡಿದ್ದಾರೆ. ದೇಶದ ಜನಗಳು ಒಂದು ಉದ್ದೇಶದಲ್ಲಿ ಖರ್ಚು ಮಾಡಿ, ಒಂದು ಉದ್ದೇಶದಲ್ಲಿ ಉಳಿಸಿದರೆ ಸಂತೋಷ ವ್ಯಕ್ತಪಡಿಸುತ್ತಾರೆ. ಪೇ ಕಮಿಷನ್ ರಿಪೋರ್ಟ್‌ನಲ್ಲಿ ಡಿವಿಜನಲ್ ಮಟ್ಟದಲ್ಲಿರತಕ್ಕ ಅಧಿಕಾರಿಗಳು ಏನಿದ್ದಾರೆಯೋ ಅವರು ಬೇಕಾಗಿಲ್ಲ ಎಂದು ಹೇಳಿದ್ದಾರೆ. ಅವರನ್ನು ಸಂಪೂರ್ಣವಾಗಿ ತೆಗೆದುಹಾಕುವುದು ಒಳ್ಳೆಯದು ಎಂದು ಹೇಳಿದ್ದಾರೆ. ಈಗ ಬರುವ ಏಪ್ರಿಲ್ ಒಂದನೆ ತಾರೀಖಿನಿಂದ ಪೇ ಕಮಿಷನ್ ವರದಿಯ ಒಂದು ಭಾಗವನ್ನು ಜಾರಿಗೆ ತರುವುದಕ್ಕೆ ಸರ್ಕಾರದವರು ಅವಕಾಶ ಮಾಡಿಕೊಟ್ಟಿದ್ದಾರೆ. ಅದನ್ನು ನಾವು ಸ್ವಾಗತಿಸುತ್ತೇವೆ. ಆದರೆ ಈಗ ಇದರಲ್ಲಿ ಹೇಳತಕ್ಕಂಥಾದ್ದರಲ್ಲಿ ಮತ್ತು ಮಾಡತಕ್ಕಂಥಾದ್ದರಲ್ಲಿ ವ್ಯತ್ಯಾಸಗಳು ಇದ್ದರೆ ಅದರಿಂದ ಬಹಳ ಕಷ್ಟವಾಗುತ್ತದೆ. ಆ ರೀತಿ ಆಗುವುದಕ್ಕೆ ಅವಕಾಶ ಕೊಡದಂತೆ ಡಿವಿಜನಲ್ ಮಟ್ಟದ ಅಧಿಕಾರಿಗಳನ್ನು ವಜಾ ಮಾಡಬೇಕೆಂದು ಹೇಳಿರುವುದನ್ನು ಜಾರಿಗೆ ತರುವುದಕ್ಕೆ ಕಡ್ಡಾಯವಾಗಿ ಪ್ರಯತ್ನ ಮಾಡಬೇಕು. ಈಗ ಯಾವ ತರದ ಒಂದು ಜಾಡ್ಯ ಹುಟ್ಟಿಕೊಂಡಿದೆ ಎಂದರೆ ಯಾವ ಇಲಾಖೆಯಲ್ಲಿ ನೋಡಿದರೂ ಕೂಡ ಡಿವಿಜನಲ್ ಲೆವಲ್‌ನಲ್ಲಿ ಒಬ್ಬ ಡೆಪ್ಯುಟಿ ಡೈರೆಕ್ಟರು, ಜಾಯಿಂಟ್ ಡೈರೆಕ್ಟರ್ ಇರಬೇಕು ಎನ್ನುವುದು ಸರಿಯಲ್ಲ. ಪೇ ಕಮಿಷನ್‌ನವರು ಹೇಳಿರುವ ಹಾಗೆ ಅಧಿಕಾರ ವರ್ಗದವರನ್ನು ಕಡಿಮೆ ಮಾಡುವುದಕ್ಕೆ ಪ್ರಯತ್ನ ಮಾಡಲಿಲ್ಲ. ಈಗ ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕಿನವರು ಈ ಮಾರ್ಗ ಹಿಡಿದು ಡಿವಿಜನ್ ಲೆವಲ್, ಡಿಸ್ಟ್ರಿಕ್ಟ್ ಲೆವಲ್‌ನಲ್ಲಿ ಆಫೀಸು ಪ್ರಾರಂಭಿಸಿದ್ದಾರೆ. ಸೊಸೈಟಿಯಿಂದ ನೇರ ಬೆಂಗಳೂರಿಗೆ ಬಂದು ಹೋಗುವುದೇ ವರ್ಷಗಟ್ಟಲೇಯಾಗುತ್ತಿತ್ತು. ಈಗ ಸುತ್ತಿಕೊಂಡು ಬರುವಾಗ ಇನ್ನು ರೈತರಿಗೆ ತೊಂದರೆಯಾದಂತಾಯಿತು.

4-30 P.M.

ಸರ್ಕಾರದವರು ಸಬ್ಸಿಡಿ ಕೊಡುತ್ತಾರೆಂದು ತಿಳಿದುಕೊಂಡು ಈ ರೀತಿ ಸೊಸೈಟಿಗಳನ್ನು ಪ್ರಾರಂಭ ಮಾಡುತ್ತಿದ್ದಾರೆ. ಈ ರೀತಿ ಸಬ್ಸಿಡಿ ಲಾಭದಿಂದ ಆಲ್ ಇಂಡಿಯಾ ಟೂರ್ ಮಾಡುತ್ತಿದ್ದಾರೆ. ನಾನೂ ಸಹ ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕ್, ಅಪೆಕ್ಸ್ ಬ್ಯಾಂಕ್, ರೂರಲ್ ಇಂಡಸ್ಟ್ರಿಯಲ್ ಬ್ಯಾಂಕ್‌ನಲ್ಲಿ ಡೈರೆಕ್ಟರ್‌ಆಗಿ ಕೆಲಸ ಮಾಡಿದ್ದೇನೆ. ಸೆಂಟ್ರಲ್ ಬ್ಯಾಂಕ್‌ನಲ್ಲಿ ಡೈರೆಕ್ಟರ್ ಆಗಿ ಕೆಲಸ ಮಾಡಿದ್ದೇನೆ. ನನ್ನ ಒಂದು ಅನುಭವದಿಂದ ಈ ವಿಚಾರವನ್ನು ಹೇಳುತ್ತಿದ್ದೇನೆ. ನಾನೇನು ಅರ್ಬನ್ ಏರಿಯಾಗಳಲ್ಲಿ ಮಾತ್ರ ತೆರಿಗೆಯನ್ನು ಜಾಸ್ತಿ ಹಾಕಿ ಎಂದು ಹೇಳುವುದಿಲ್ಲ. ಈಗಿನ ಅಡಳಿತವನ್ನು ಬಿಗಿಗೊಳಿಸಿ ಸರಿಯಾದ ವ್ಯವಸ್ಥೆಯಲ್ಲಿ ಆಡಳಿತವನ್ನು

(ಶ್ರೀ ಕೆ. ಎನ್. ವೀರಪ್ಪಗೌಡ)

ನಡೆಸಿದರೆ ಹೊಸತೆರಿಗೆ ಹಾಕುವ ಪರಿಸ್ಥಿತಿಯೇ ಬರುವುದಿಲ್ಲ. ಪಟೇಲರು ಮತ್ತು ಶಾನುಭೋಗರ ಜಾಗಗಳಲ್ಲಿ ಪಂಚಾಯತ್ ಸೆಕ್ರೆಟರಿ ಮತ್ತು ಎಲೆೀಜ್ ಅಕೌಂಟೆಂಟರುಗಳನ್ನು ನೇಮಕ ಮಾಡ ಬೇಕೆಂದು ಸರ್ಕಾರದವರು ತೀರ್ಮಾನ ತೆಗೆದುಕೊಂಡು ಇವರುಗಳ ಜಾಗದಲ್ಲಿ ನುಮಾರು 8 ಸಾವಿರಕ್ಕೆ ಬದರಾಗಿ 16 ಸಾವಿರ ಜನರನ್ನು ನೇಮಕ ಮಾಡುವ ಯೋಚನೆಯನ್ನು ಸರ್ಕಾರದವರು ಮಾಡುತ್ತಿದ್ದಾರೆ. ಇವರಿಗೆ ಸಂಬಳವನ್ನು ಕಂದಾಯದಿಂದ ಬರುವ ಹಣದಲ್ಲಿ ಕೊಡಬೇಕು. ಒಂದೊಂದು ಪಂಚಾಯಿತಿಗಳಿಗೆ ಇಬ್ಬರನ್ನು ನೇಮಕ ಮಾಡುವ ಬದಲು ಒಬ್ಬರನ್ನೇ ಏತಕ್ಕೆ. ನೇಮಕ ಮಾಡಬಾರದು ಎಂದು ಮೊನ್ನೆ ಪ್ರಶ್ನೆ ಕೇಳಿದಾಗ ಸರ್ಕಾರದವರು ಅದಕ್ಕಾಗಿ ಒಂದು ಕಮಿಟಿಯನ್ನು ಮಾಡಿದ್ದೇವೆಂದು ಹೇಳಿದರು. ಇವತ್ತಿನವರೆಗೆ 500 ಜನ ಇರುವ ಕಡೆಯೂ ಒಂದೊಂದು ಪಂಚಾಯಿತಿ ಇದೆ. ಇಂತಹ ಕಡೆಗಳಲ್ಲಿ ಪಂಚಾಯತ್ ಸೆಕ್ರೆಟರಿ ಮತ್ತು ಎಲೆೀಜ್ ಅಕೌಂಟೆಂಟ್ ಇಬ್ಬರಿಗೂ ಏನು ಕೆಲಸವಿರುತ್ತದೆ! ಒಬ್ಬರೇ ಎರಡು ಕೆಲಸಗಳನ್ನು ಮಾಡುವು ದಕ್ಕಾಗುವುದಿಲ್ಲವೆ! ಒಂದೂವರೆ ಸಾವಿರ ಜನರಿಗೆ ಒಂದು ಪಂಚಾಯಿತಿ ಇರಬೇಕೆಂದು ನನ್ನ ಅಭಿಪ್ರಾಯ. ಈಗ ಒಂದೊಂದು ಪಂಚಾಯಿತಿಗಳಲ್ಲಿ 500ರಿಂದ 5,000ದ ವರೆಗೆ ಜನಸಂಖ್ಯೆ ಇರುವ ನಿದರ್ಶನಗಳು ಇವೆ. ತಂಕೋಳ್ ಆಯೋಗದವರು 15 ಸಾವಿರ ಉತ್ಪತ್ತಿಗೊಂದು ಪಂಚಾಯ್ತಿ ಎಂತ ಹೇಳಿದ್ದಾರೆ, 10ರಿಂದ 15 ಸಾವಿರ ರೂಪಾಯಿಗಳ ಆದಾಯ ಬರುವುದನ್ನು ನೋಡಿಕೊಂಡು ಅದರ ಆಧಾರದ ಮೇರೆ ಪಂಚಾಯಿತಿಗಳನ್ನು ರಚಿಸಬೇಕೆಂದು ಸಲಹೆ ಮಾಡಿದ್ದಾರೆ. ಮುಂದಿನ ಪಂಚಾಯತ್ ಚುನಾವಣೆಯ ಸಮಯದಲ್ಲಿಯಾದರೂ ಸಹ ಸರ್ಕಾರ ದವರು ಈ ಆಯೋಗದ ತೀರ್ಪನ್ನು ಒಪ್ಪಿಕೊಂಡು ಅದರಂತೆ ಅನುಷ್ಠಾನಕ್ಕೆ ತರಬೇಕು. ತುಕೋಳ್ ಆಯೋಗದ ಎರ್ಲಾ ಶಿಫಾರಸ್‌ಗಳನ್ನು ಸರ್ಕಾರದವರು ಒಂದೇ ಸಲಕ್ಕೆ ಒಪ್ಪಿ ಕೊಳ್ಳುವುದು ಕಷ್ಟವಾಗುವುದರಿಂದ ಹಂತಹಂತವಾಗಿಯಾದರೂ ಒಪ್ಪಿಕೊಂಡು ಪಂಚಾಯಿತಿಗಳ ಬಗ್ಗೆ ಹೇಳಿರುವುದನ್ನು ಅನುಷ್ಠಾನಕ್ಕೆ ತರಬೇಕು.

ಹೊಸದಾಗಿ ಯಾರನ್ನೂ ಕೆಲಸಕ್ಕೆ ತೆಗೆದುಕೊಳ್ಳಬಾರದೆಂದು ತೀರ್ಮಾನ ಮಾಡಿ ಸರ್ಕಾರ ದವರು ಒಂದು ಆರ್ಡರನ್ನು ಇತ್ತೀಚೆಗೆ ಹೊರಡಿಸಿದ್ದಾರೆ. ಆದರೂ ಸಹ ಪಬ್ಲಿಕ್ ಸರ್ವಿಸ್ ಕಮಿಷನ್ ಅವರು ಕಾರ್‌ಪಾರ್ ಮಾಡುತ್ತಲೇ ಇರುತ್ತಾರೆ. ಆ ರೀತಿ ಮಾಡಿದಾಗ ನಮ್ಮಂತಹವರಲ್ಲಿ ರೆಕಮೆಂಡ್ ಮಾಡಿ ಎಂದು ಬರುತ್ತಿರುತ್ತಾರೆ. ಒಂದು ಸಾರಿ ತೀರ್ಮಾನ ತೆಗೆದುಕೊಂಡಮೇಲೆ ಹೊಸದಾಗಿ ಅಪಾಯಿಂಟ್ ಮಾಡಿಕೊಳ್ಳುವುದನ್ನು ಸಂಪೂರ್ಣವಾಗಿ ನಿಲ್ಲಿಸಿಬಿಡಬೇಕು. 273ನೇ ಪ್ರಶ್ನೆಯಲ್ಲಿ ಮಿನಿಸ್ಟರ್ ಲೆವೆರ್‌ನಲ್ಲಿ ಎಷ್ಟು ಜನರನ್ನು ಯಾವ ಯಾವ ಪ್ರದೇಶಗಳಿಂದ ತೆಗೆದು ಕೊಂಡಿದ್ದೀರಿ ಎಂದು ಕೇಳಿದ ಪ್ರಶ್ನೆಗೆ ಸರ್ಕಾರದವರು 301 ಜನರನ್ನು ನೇಮಿಸಿಕೊಳ್ಳುವುದರಲ್ಲಿ ಇದ್ದೇವೆಂದು ಉತ್ತರ ಕೊಟ್ಟಿದ್ದಾರೆ. ಈ 301 ಜನರನ್ನು ಹೊಸದಾಗಿ ನೇಮಕ ಮಾಡಿಕೊಳ್ಳದೆ, ಯಾವ ಯಾವ ಇಲಾಖೆಗಳಲ್ಲಿ ನೌಕರರು ಹೆಚ್ಚಿನ ಸಂಖ್ಯೆಯಲ್ಲಿರುತ್ತಾರೋ ಅಂತಹ ಕಡೆಗಳಿಂದ ಕರೆಸಿಕೊಳ್ಳುತ್ತಾರೆಂದು ನಾನು ತಿಳಿದಿದ್ದೇನೆ. ಶ್ರೀ ದೇವರಾಜ ಅರಸ್ ಅವರು ಅವರವರ ಜಾತಿಯವರನ್ನು ನೇಮಕ ಮಾಡಿಕೊಳ್ಳುತ್ತಾರೆಂದು ಈ ವಿಚಾರದಲ್ಲಿ ಅವರ ಒಂದು ಅನುಭವವನ್ನು ಹೇಳಿದರು. ಹಣದ ಉಳಿತಾಯದ ದೃಷ್ಟಿಯಿಂದ ನೇಮಕಗಳನ್ನು ಕಡ್ಡಾಯವಾಗಿ ಕಡಿಮೆ ಮಾಡಬೇಕು. ಈಗಿನ ಸಂದರ್ಭದಲ್ಲಿ ಹೊಸ ನೇಮಕಗಳನ್ನು ಮಾಡಿಕೊಳ್ಳುವುದು ಸರಿಯಾದುದು ಅಲ್ಲ. ಈ ಮೂಲಕ ಹಣಕಾಸಿನ ಪರಿಸ್ಥಿತಿಯನ್ನು ಉತ್ತಮಪಡಿಸಿಕೊಳ್ಳಬೇಕೆಂದು ಸಲಹೆ ಮಾಡುತ್ತಿದ್ದೇನೆ.

ಪೆನ್‌ಷನ್ ವಿಚಾರದಲ್ಲಿ ಕೆಲವು ವಿಚಾರಗಳನ್ನು ಹೇಳುತ್ತೇನೆ. ಈ ವಿಚಾರದಲ್ಲಿ ನಾನು ಮಾತನಾಡುವುದು ಸ್ವಾಭಾವಿಕವಾಗಿದೆ. ಅನೇಕ ಸಲ ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದೇನೆ. ಸೋಷಿಯಲಿಸ್ಟಿಕ್ ಪ್ಯಾಟ್ರನ್ ಆಫ್ ಸೊಸೈಟಿಯನ್ನು ಕಾಂಗ್ರೆಸ್‌ನವರು ಒಪ್ಪಿಕೊಂಡಿದ್ದಾರೆ. ಮೊದಲು ಸಂಬಳವನ್ನು ಸಂಭಾವನೆ ಎಂದು ಕರೆಯುತ್ತಿದ್ದರು. ನನ್ನ ಮಗನೇ ಅಧಿಕಾರದಲ್ಲಿ ಇದ್ದು ರಿಟೈರ್ ಆದರೆ ಪೆನ್‌ಷನ್ ಕೊಡಬೇಕಾದಾಗ ಅವರ ಉತ್ಪತ್ತಿ ಬೇರೆ ಏನಿದೆ ಎಂದು ನೋಡಿ ಕೊಂಡು ಅದರ ಆಧಾರದ ಮೇಲೆ ಪೆನ್‌ಷನ್ ಕೊಡುವುದು ಒಳ್ಳೆಯದು. ಕೆಲವರಿಗೆ ಸಾವಿರಾರು ರೂಪಾಯಿಗಳ ಉತ್ಪತ್ತಿ ಬೇರೆ ಇರುತ್ತದೆ, ಜಮೀನು ಇರುತ್ತದೆ, ಬಾಡಿಗೆ ಬರುತ್ತಿರುತ್ತದೆ. ಇಂತಹವರಿಗೆ ಪೆನ್‌ಷನ್ ಕೊಡುವುದು ಸರಿಯಲ್ಲ. ಪೆನ್‌ಷನ್ ಕೊಡುವುದನ್ನು ಸಂಪೂರ್ಣವಾಗಿ ನಿಲ್ಲಿಸಿಬಿಡಬೇಕೆಂದು ನಾನು ಹೇಳುತ್ತಿಲ್ಲ. ಆದರೆ ಪೆನ್‌ಷನ್ ಕೊಡುವುದನ್ನು ತೀರ್ಮಾನ ಮಾಡುವಾಗ ಸಂಬಂಧಪಟ್ಟ ನೌಕರರ ತೊಂದರೆಗಳು ಏನೇನಿವೆ ಎಂಬುದನ್ನು ನೋಡಿಕೊಂಡು

ತೀರ್ಮಾನ ಮಾಡಬೇಕು. ಈ ವಿಧಾನ ಬಟ್ಟು ಸಂಬಳದ ಆಧಾರದ ಮೇಲೆ 200 ಕೊಡುವುದು, 300 ಕೊಡುವುದು ಸರಿಯಲ್ಲ. ಯಾವ ರೀತಿಯ ವರಮಾನವೂ ಇಲ್ಲದವರಿಗೆ ಹೆಚ್ಚಿನ ಪೆನ್‌ಷನ್ ಕೊಡಬೇಕೆಂದು ಸರ್ಕಾರಕ್ಕೆ ಒತ್ತಾಯ ಮಾಡುವುದಕ್ಕೆ ಇಷ್ಟಪಡುತ್ತೇನೆ.

ಥೇರ್‌ಮನ್ ಅವರು.—ತಮಗೆ ಕೊಟ್ಟ ಕಾಲ ಮುಗಿಯಿತು. ತಮ್ಮ ಭಾಷಣವನ್ನು ಮುಗಿಸಬೇಕು.

ಶ್ರೀ ಕೆ. ಎನ್. ವೀರಪ್ಪಗೌಡ —ಸಾಮಾನ್ಯವಾಗಿ ಉತ್ಪತ್ತಿಯನ್ನು ಜಾಸ್ತಿಮಾಡಿಕೊಳ್ಳುವ ಬಗ್ಗೆ, ಖರ್ಚನ್ನು ಸಾಕಷ್ಟು ಕಡಿಮೆ ಮಾಡಿಕೊಳ್ಳುವ ಬಗ್ಗೆ ಇನ್ನೂ ಅನೇಕ ಸಲಹೆಗಳನ್ನು ಕೊಡಬೇಕೆಂದಿದ್ದೆ. ಸಮಯವಿಲ್ಲದಿರುವುದರಿಂದ ಹೇಳುವುದಕ್ಕೆ ಅವಕಾಶವಾಗಲಿಲ್ಲ. ಮುಂದೆ ಸಮಯ ಸಿಕ್ಕಿದಾಗ ಸಲಹೆಗಳನ್ನು ಕೊಡುತ್ತೇನೆ. ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಪಿ. ಎ. ಐತಾಳ್ (ಸುರತ್ಕಲ್).—ಮಾನ್ಯ ಅಧ್ಯಕ್ಷರೇ, ಮೈಸೂರು ರಾಜ್ಯದ 1969-70ನೇ ಸಾಲಿನ ಆಯವ್ಯಯ ಪತ್ರವನ್ನು ವಿರೋಧಿಸುತ್ತಾ, ಒಂದೆರಡು ಮಾತುಗಳನ್ನು ಇಲ್ಲಿ ಆಡಬಯಸುತ್ತೇನೆ.

ಮಾನ್ಯ ಹಣಕಾಸಿನ ಸಚಿವರು 13 ಕೋಟಿ ರೂಪಾಯಿಗಳ ಒಂದು ಕೊರತೆ ಬಜೆಟ್ಟನ್ನು ತಯಾರಿಸಿ ನಮ್ಮ ಮುಂದಿಟ್ಟಿದ್ದಾರೆ. ಸರಕಾರಕ್ಕೆ ಇರುವ ಅಸೆಟ್ಸ್‌ಗಳನ್ನು ಲೀಸ್ ಮಾಡಿಯೋ ಇಲ್ಲವೇ ಕಟ್ಟಡಗಳನ್ನು ಮಾರಿಯೋ ಈಗ ಬಂದಿರುವ ಕೊರತೆಯನ್ನು ಭರ್ತಿ ಮಾಡಿಕೊಳ್ಳಬಹುದಾಗಿತ್ತು. ಇದೇ ನಭೆಯಲ್ಲಿ ಇಂದು ಬೆಳಿಗ್ಗೆ ಈ ಬೆಂಗಳೂರು ನಗರದಲ್ಲಿರುವ ಸುಭಾಷ್ ನಗರದ ಮೈದಾನವನ್ನು ಕಾಂಗ್ರೆಸ್ಸು ವಸ್ತುಪ್ರದರ್ಶನಕ್ಕಾಗಿ ಮಾರುತ್ತಾರೆ ಎನ್ನುವ ಬಗ್ಗೆ ಬಹಳ ಜೋರಾದ ಚರ್ಚೆಗಳು ಇಲ್ಲಿ ನಡೆದವು, ಆದರೆ ಇದರ ಬಗ್ಗೆ ಇನ್ನೂ ಏನೂ ಇತ್ಯರ್ಥ ಆಗಿಲ್ಲ ಎಂದೂ ಮಾನ್ಯ ಮುಖ್ಯ ಮಂತ್ರಿಗಳು ಹೇಳಿದರು. ಇದೇ ರೀತಿ ನಮ್ಮ ಸುರತ್ಕಲ್‌ನಲ್ಲಿ ಇರುವ ಶಾಲೆಗೆ ಸೇರಿದ ಸರಕಾರದ ಎರಡು ಎಕರೆಗಳಷ್ಟು ಇರುವ ಕ್ರೀಡಾ ಮೈದಾನವನ್ನು ಅಲ್ಲಿ ಹಿಂದೆ ಇದ್ದ ಮುಂಡಲ್ ಕಾಂಗ್ರೆಸ್ಸು ಅಧ್ಯಕ್ಷರಿಗೆ ಹಂಚಬೇಕೆಂದು ಮಂಗಳೂರಿನಲ್ಲಿ ಹಿಂದೆ ಇದ್ದ ಜಿಲ್ಲಾಧಿಕಾರಿಗಳು ಆಜ್ಞೆ ಮಾಡಿದ್ದಾರೆ, ಇಲ್ಲಿ ಸುಭಾಸ್ ನಗರದ ಮೈದಾನ ಸುಮಾರು ಹತ್ತು ಹನ್ನೆರಡು ಎಕರೆಗಳಿಷ್ಟಿರುವ ಭೂಮಿಯನ್ನು ಕಾಂಗ್ರೆಸ್ಸು ಪಕ್ಷದವರಿಗೆ ಮಾರಬೇಕೆಂದು ಯಾವ ಪ್ರಯತ್ನ ಮಾಡುತ್ತಿದ್ದಾರೋ ಅದೇ ರೀತಿ ನಮ್ಮ ಸುರತ್ಕಲ್‌ನಲ್ಲಿರುವ ಸುಮಾರು ಎರಡು ಎಕರೆಗಳಷ್ಟಿರುವ ಕ್ರೀಡಾ ಮೈದಾನವನ್ನು ಕಾಂಗ್ರೆಸ್ಸಿನ ಎಕ್ಸ್ ಮುಂಡಲ್ ಪ್ರೆಸಿಡೆಂಟರಿಗೆ ಕೊಡಬೇಕೆಂದು ಜಿಲ್ಲಾಧಿಕಾರಿಗಳು ಆಜ್ಞೆ ಮಾಡಿದ್ದಾರೆ. ಜಿಲ್ಲಾಧಿಕಾರಿಗಳಾಗಿ ಆಗ ಶ್ರೀ ನಾಗೇಗೌಡರಿದ್ದರು. ಇವರು ಮೂರು ವರ್ಷ ಒಂಬತ್ತು ತಿಂಗಳು ಕಾಲ ನಮ್ಮ ಜಿಲ್ಲೆಯಲ್ಲಿದ್ದರು. ಮೂರು ವರ್ಷಗಳ ಕಾಲ ಒಳ್ಳೆಯ ಕೆಲಸ ಮಾಡಿದರು, ಒಂಬತ್ತು ತಿಂಗಳ ಕಾಲ ಯಾರಿಗೂ ಬೇಡದ ಕೆಲಸಗಳನ್ನು ಮಾಡಿದರು. ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಾಗಿರುವವರು ಹಿಂದೆ ಆರೋಗ್ಯ ಮಂತ್ರಿಗಳಾಗಿದ್ದಾಗ ಅಲ್ಲಿನ ಜಿಲ್ಲಾಧಿಕಾರಿಗಳ ಮಗಳಿಗೆ ಮೆಡಿಕಲ್ ಕಾಲೇಜಿನಲ್ಲಿ ಒಂದು ಸೀಟನ್ನು ಕೊಡಿಸಿದರು ಎಂಬ ಒಂದು ಕಾರಣದಿಂದ ಅವರಿಂದ ಶಹಬಾಸ್‌ಗಿರಿ ಪಡೆಯಬೇಕು ಎಂದು ಇವರು ವರ್ಗವಾಗಿ ಹೋಗುವುದಕ್ಕೆ ಎರಡು ದಿನಗಳಿಗೆ ಮುಂಚೆ ಕೊನೆಯ ಘಳಿಗೆಯಲ್ಲಿ ಆ ಕ್ರೀಡಾ ಮೈದಾನವನ್ನು ಅಲ್ಲಿನ ಮುಂಡಲ್ ಕಾಂಗ್ರೆಸ್ಸು ಅಧ್ಯಕ್ಷರಿಗೆ ಮಂಜೂರು ಮಾಡುವ ಆಜ್ಞೆ ಮಾಡಿದರು. ಇದನ್ನು ಅಲ್ಲಿನ ಜನರು ವಿರೋಧಿಸುತ್ತಿದ್ದರೂ ಇದರ ಬಗ್ಗೆ ನಾನು ಅಲ್ಲಿನ ವಕೀಲನಾಗಿ ಕೇಸುಗಳನ್ನು ಹಾಕಿ ಒತ್ತಾಯ ಮಾಡುತ್ತಿದ್ದರೂ ಇವರು ನಮಗೆ ತಿಳಿಯದಂತೆ ಇಂತಹ ಕೆಲಸಗಳನ್ನು ಮಾಡಿದ್ದಾರೆ.

ಶ್ರೀ ರಾಮಕೃಷ್ಣ ಹೆಗಡೆ (ಹಣಕಾಸು, ಯೋಜನೆ ಮತ್ತು ಯುವಜನ ಶಾಖೆಗಳ ಮಂತ್ರಿಗಳು).—ತಮ್ಮ ಮುಂದೆ ಮೈಕ್ರೊಫೋನ್ ಒಂದು ಇದೆ ಎನ್ನುವುದನ್ನು ಇಲ್ಲ ತಮಗೆ ನೆನಪಿಗೆ ತರುತ್ತಿದ್ದೇನೆ.

ಶ್ರೀ ಪಿ. ಎ. ಐತಾಳ.—ನಮ್ಮ ಸರಕಾರದರ್ಜಾಗುತ್ತಿರುವ ಅನ್ಯಾಯಗಳನ್ನು ಹೇಳಲು ಇದಕ್ಕಿಂತ ಹತ್ತು ಪಟ್ಟು ಸ್ವರ ಕೊಡು ಅಂತ ದೇವರನ್ನು ಪ್ರಾರ್ಥಿಸುತ್ತೇನೆ. ನಾನು ಆಗಲೇ ಹೇಳಿದ ಹಾಗೆ ಇದರ ಕೇಸುಗಳು ಇನ್ನು ವಿಚಾರಣೆ ಮಾಡಬೇಕಾಗಿವೆ. This is a matter which has gone to the Vigilance Commission.

Sri RAMAKRISHNA HEGDE.—The Hon. Member is an experienced Lawyer. We are discussing about the Budget.

Sri P. V. AITHALA.—I am talking about Budget only. The Government is distributing Government properties among its *Chelas*. ಇದಕ್ಕಾಗಿಯೇ ನಾನು ಆಗಲೇ ಹೇಳಿದ್ದು ಮತ್ತು ಇಲ್ಲಿ ಮಾನ್ಯ ಮುಖ್ಯ ಮಂತ್ರಿಗಳಿಗೆ ಹೇಳುತ್ತಿರುವುದು, ನೀವು ಎಲ್ಲಿಯೂ ಒಬ್ಬ ಡೆಪ್ಯೂಟಿ ಕಮಿಷನರನ್ನು ಮೂರು ವರ್ಷಕ್ಕೆ ಮೇಲ್ಪಟ್ಟು ಒಂದು ಜಾಗದಲ್ಲಿರಲು ಅವಕಾಶ ಕೊಡಬೇಡಿ, ಮೂರು ವರ್ಷಗಳಾದ ಕೂಡಲೇ ಅವರನ್ನು ಬೇರೆ ಕಡೆಗೆ ವರ್ಗಾಯಿಸಿ ಎಂದು ; ಆದರೂ ನೀವು ಕೇಳುತ್ತಿಲ್ಲ. ಇಲ್ಲಿದ್ದ ಎಕ್ಸ್ ಡೆಪ್ಯೂಟಿ ಕಮಿಷನವರವರು ಮೂರು ವರ್ಷ ಮತ್ತು ಒಂಬತ್ತು ತಿಂಗಳ ಕಾಲ ಇದ್ದು ಮೂರು ವರ್ಷ ಚೆನ್ನಾಗಿ ಕೆಲಸ ಮಾಡಿದರು ಮತ್ತು ಉಳಿಕೆಯ ಒಂಬತ್ತು ತಿಂಗಳು ಕಾಲ ಜನತೆಗೆ ಬೇಡದ ಕೆಲಸ ಮಾಡಿದರು ಎನ್ನುವುದು ಅವರ ರಿಕಾರ್ಡುಗಳಿಂದಲೇ ಚೆನ್ನಾಗಿ ಗೊತ್ತಾಗುತ್ತದೆ. ಇದೇ ವಿಚಾರದ ಬಗ್ಗೆ ನಾನು ಈ ಜಿಲ್ಲಾಧಿಕಾರಿಗಳಿಗೆ 11-7-67ರಲ್ಲಿ ನಮ್ಮ ಜಿಲ್ಲೆಯ ಸುಮಾರು ಐವತ್ತು ಜನರ ಮನವಿಯನ್ನು ಕೊಟ್ಟು ಅದಕ್ಕೆ ವಕೀಲನಾಗಿ ಇಲ್ಲಿ ಕೇಸು ಹಾಕಿದ್ದರೂ ಇಂತಹ ವಿಚಾರವನ್ನು ಮೊದಲಿನಿಂದ ಸರಿಮಾಡುತ್ತೇನೆ ಎಂದು ಹೇಳುತ್ತಾ ಬಚ್ಚಿಟ್ಟು ಇವರ ಮಗಳಿಗೆ ಎಂ.ಪಿ.ಸಿ.ಸಿ. ಪ್ರೆಸಿಡೆಂಟರು ಹಿಂದೆ ಹೆರ್ತ್ ಮಿನಿಸ್ಟರಾಗಿದ್ದಾಗ ಮೆಡಿಕಲ್ ಕಾಲೇಜಿನಲ್ಲಿ ಸೀಟು ಕೊಟ್ಟರು ಎನ್ನುವ ಒಂದು ನೆಪ ಮಾಡಿಕೊಂಡು ಇವರು ಚಾರ್ಜು ಕೊಡುವುದಕ್ಕೆ ಮುನ್ನ ಎಂದರೆ 20-1-1969ರಲ್ಲಿ ಸರಕಾರಕ್ಕೆ ಈ ಕ್ರೀಡಾ ಮೈದಾನವನ್ನು ಇಲ್ಲಿ ಹಿಂದೆ ಇದ್ದ ಎಕ್ಸ್ ಮಂಡಲ್ ಕಾಂಗ್ರೆಸ್ಸು ಪ್ರೆಸಿಡೆಂಟರವರಿಗೆ ಕೊಡಬೇಕೆಂದು ಹುಕುಂ ಮಾಡಿ ಹೋಗಿದ್ದಾರೆ. ಇದು ಸರಿಯಲ್ಲ. ಇದರ ಬಗ್ಗೆ ವಿವರವಾಗಿ ತನಿಖೆ ಮಾಡಬೇಕು ಎಂದು ನಾನು ಮಾನ್ಯ ಕಂದಾಯ ಮಂತ್ರಿಗಳಿಗೂ ಪತ್ರ ಬರೆದುದಕ್ಕೆ ಅವರು ನನಗೆ ಉತ್ತರ ಕೊಟ್ಟಿದ್ದಾರೆ. The Hon'Minister has replied in his letter that he is examining my letter. ಇದರಲ್ಲಿ ಡಿ.ಸಿ. ಶಿಫಾರಸು ಮಾಡಿರುವುದು ತಪ್ಪು. ಇದರ ರಿಕಾರ್ಡುಗಳನ್ನು ಪೂರ್ತಿ ತರಿಸಿ ನೋಡಬೇಕು ಎಂದು ಮಾನ್ಯ ರೆವೆನ್ಯೂ ಮಂತ್ರಿಗಳಿಗೆ ಪತ್ರ ಬರೆದುದಕ್ಕೆ ಇದನ್ನು ಇನ್ನೂ ಪರಿಶೀಲನೆ ಮಾಡುತ್ತಿದ್ದೇನೆ ಎಂದು ಮೇಲೆ ಹೇಳಿದಂತೆ ನನಗೂ ಪತ್ರ ಬರೆದಿದ್ದಾರೆ. ನಾನು ಈ ಮಾನ್ಯ ಸಭೆಯಲ್ಲಿ ನನ್ನ ಕ್ಷೇತ್ರದ ಪ್ರತಿನಿಧಿಯಾಗಿ ರವೆನ್ಯೂ ಮಂತ್ರಿಗಳಿಗೆ ಬರೆದ ಪತ್ರದಲ್ಲಿ ಇಲ್ಲಿನ ಜಿಲ್ಲಾಧಿಕಾರಿಗಳು ಸುಂತ್ಕಲ್ ನಲ್ಲಿರುವ ಒಂದು ಕ್ರೀಡಾ ಮೈದಾನವನ್ನು ಇಲ್ಲಿನ ಎಕ್ಸ್ ಮಂಡಲ್ ಕಾಂಗ್ರೆಸ್ಸು ಪ್ರೆಸಿಡೆಂಟರವರಿಗೆ ಕೊಡಬಹುದು ಎಂದು ಶಿಫಾರಸನ್ನು ಕಳುಹಿಸುವುದಾದರೆ, ನಾಳೆ ನಿಮ್ಮ ಎಂ.ಪಿ.ಸಿ.ಸಿ. ಅಧ್ಯಕ್ಷರಿಗೆ ಕಟ್ಟಿನ್ ಪಾರ್ಕು ಬೇಕೆಂದು ಕೇಳುತ್ತಾರೆ ಆಗ ಅವರಿಗೆ ಅದನ್ನು ಕೊಟ್ಟುಬಿಡಿ ಎಂತಲೂ ಬರೆದಿದ್ದೇನೆ. ಹೀಗೆ ಹಿಪೊಕ್ರೆಟಿಕ್ ಆಗಿ ಇಲ್ಲದ್ದ ಹಿಂದಿನ ಜಿಲ್ಲಾಧಿಕಾರಿಗಳು ಸರಕಾರಕ್ಕೆ ಶಿಫಾರಸು ಮಾಡಿದರೆ ಇದರಿಂದೇನು ಪರಿಣಾಮ ಆಗುತ್ತದೆ ಎನ್ನುವುದನ್ನು ಗಮನಿಸಿರಲಿಕ್ಕಿಲ್ಲ. ಇದರ ಬಗ್ಗೆ ಸರಕಾರದಲ್ಲಿ ಮನವಿ ಸಲ್ಲಿಸಲು ಇಲ್ಲಿಂದ ಸುಮಾರು 400–500 ಜನರು ಬಂದಿದ್ದರು ಮತ್ತು ಇದರಲ್ಲಿ ಒಂದು ಇಂಚು ಜಾಗವನ್ನು ಯಾರಿಗೂ ಕೊಡಕೂಡದು ಎಂದು ಅವರು ಸರಕಾರಕ್ಕೆ ಒತ್ತಾಯ ಮಾಡುತ್ತಿದ್ದಾರೆ. ಇದರ ಬಗ್ಗೆ ಯಾವ ಕ್ರಮವನ್ನು ತೆಗೆದುಕೊಳ್ಳದಂತೆ ಸ್ಟೇ ಆರ್ಡರು ಕೊಡಬೇಕೆಂದು ರೆವೆನ್ಯೂ ಮಂತ್ರಿಗಳ ಕಡೆಗೆ ಕೇಳಿದರೆ ನಮ್ಮ ಸರಕಾರದಲ್ಲಿರುವ ಮಂತ್ರಿಗಳು ಅಲ್ಲಿರುವ ಎಕ್ಸ್ ಮಂಡಲ್ ಕಾಂಗ್ರೆಸ್ಸಿನ ಪ್ರೆಸಿಡೆಂಟರವರಿಗೆ ಹೆದರಿ ಬಿಟ್ಟರು ಎಂತ ಕಾಣುತ್ತದೆ. ಇಲ್ಲಿ ಸ್ಟೇ ಆರ್ಡರು ಕೊಡಲಿಲ್ಲ. ಇವೊತ್ತು ಜಿಲ್ಲಾಧಿಕಾರಿಗಳು ಸರಕಾರಕ್ಕೆ ಶಿಫಾರಸು ಮಾಡುವಾಗ ಇದೊಂದು ವ್ಯರ್ಥವಾದ ಭೂಮಿ ಎಂದು ಹೀಗೆ ಒಬ್ಬರು ಜವಾಬುದಾರಿ ಇರುವಂತಹ ಅಧಿಕಾರಿಗಳು ಹೇಳಿದ್ದಾರೆ. ಹಾಗೆ ಇವರು ಹೇಳಿರುವ ಜಾಗಕ್ಕೆ ಬೇಕಾದರೆ ನನಗೇ ಕೊಡಲಿ ನಾನೇ ಸರಕಾರಕ್ಕೆ ಇವೆರಡು ಎಕರೆಗಳಿಗೆ ಸುಮಾರು ಒಂದು ಲಕ್ಷದಷ್ಟು ಹಣ ಕೊಡುತ್ತೇನೆ ; ಮತ್ತು ಇದನ್ನು ನಾನು ತೆಗೆದುಕೊಳ್ಳುವುದಕ್ಕೂ ತಯಾರಾಗಿದ್ದೇನೆ. ಬೆಂಗಳೂರಿನಲ್ಲಿರುವವರಿಗೆ ಏನೂ ತಿಳಿಯುವುದಿಲ್ಲ ಎಂದು ಇಲ್ಲಿಂದ ಜಿಲ್ಲಾಧಿಕಾರಿಗಳು ಇದು ಯೂಸ್‌ಲೆಸ್ ಆಗಿದೆ ಬರೀ ಹೊಂಡದಂತಿರುವ ಜಾಗ ಇದರಿಂದೇನೂ ಉಪಯೋಗವಿಲ್ಲ ಎಂದು ಹೇಳಿದರೆ ಇದನ್ನು ನಾವು ಇಲ್ಲಿ ಹೇಗೆ ಹೇಳಬೇಕು ? ನಾನೇ ಒಂದು ಲಕ್ಷ ಸರಕಾರಕ್ಕೆ ಕೊಡುತ್ತೇನೆ ಎಂದೂ ನನ್ನ ಪತ್ರದಲ್ಲಿ ತಿಳಿಸಿದ್ದೇನೆ. ನಾಲ್ಕು ವರ್ಷಗಳಿಂದ ಇಲ್ಲಿರುವ ಜಿಲ್ಲಾಧಿಕಾರಿಗಳು ಇರುವುದರಿಂದ ಇಲ್ಲಿನ ಜನಕ್ಕೆ ಬಹಳ ಅನ್ಯಾಯಗಳಾಗಿವೆ. ಇವರನ್ನು ಇಲ್ಲಿಂದ ಟ್ರಾನ್ಸ್‌ಫರು ಮಾಡಬೇಕು ಎಂದು ಹೇಳಿದರೂ ಮಾಡಲಿಲ್ಲ. ಒಂದೇ ಕಡೆಯಲ್ಲೇ ಇಂತಹ ಅಧಿಕಾರಿಗಳನ್ನು ನಾಲ್ಕೈದು ವರ್ಷಗಳ ಕಾಲ ಇಟ್ಟರೆ ಜನರಿಗೆ ಇಲ್ಲದ ಅನ್ಯಾಯಗಳು, ತೊಂದರೆಗಳು ಆಗಲು ಅವಕಾಶ ವಾಗುತ್ತವೆ. ಸರಕಾರ ಹೀಗೆ ಇಲ್ಲದ ಸಲ್ಲದ ಬಾಬುಗಳಿಗೆ ಖರ್ಚು ಮಾಡುತ್ತಾ ಹೋದರೆ ಇದು

ಖೋತಾ ಬಜೆಟ್ಟಾಗದೇ ಇನ್ನೇನು ಆಗುತ್ತದೆ? ಇಲ್ಲದ ನಲ್ಲದ ನೇಮಕಗಳನ್ನು ಕೆಲವು ಇರಾಖೆಗಳಲ್ಲಿ ಮಾಡುವುದನ್ನು ತಪ್ಪಿಸಿದ್ದರೆ ಇಂತಹ ಖೋತಾ ಬಜೆಟ್ಟು ಬರುತ್ತಿರಲಿಲ್ಲ. ಇದಕ್ಕೆ ಬದಲು ಸರ್ಪ್ಲಸ್ ಬಜೆಟ್ಟು ಆಗುತ್ತಿತ್ತು ಎಂದು ಖಂಡಿತ ಹೇಳುತ್ತೇನೆ.

ಮೊನ್ನೆ ನಮ್ಮ ಆಹಾರ ಮಂತ್ರಿಗಳಾದ ಶ್ರೀಮಾನ್ ವಿಠಲದಾಸ ಶೆಟ್ಟರವರು ನಮ್ಮ ಊರಿಗೆ ಬಂದಿದ್ದರು. ಇವರು ಬಂದಾಗ ಇಲ್ಲಿಗೆ ಬಂದ ವಲಸೆ ಜನರು ಇವರನ್ನು ನೋಡಲು ಬಂದು ಮನವಿ ನಲ್ಲಿಸಿದರು. ಪಣಂಬೂರು ಕಡೆಯಿಂದ ಬಂದಿರುವ ಜನರೆಲ್ಲ ಕೋಣಗಳು ಎಂದು ಅವರನ್ನು ಯಾರಿಗೂ ಬೇಡವಾದ ಸ್ಮಶಾನ ಇರುವ ಜಾಗಕ್ಕೆ ಕಳಿಸಿದ್ದಾರೆ. ಇದಕ್ಕಾಗಿ ಈ ಜನ ನಮಗೆ ಸರಿಯಾಗಿ ನೀರು ಸಿಗುವುದಿಲ್ಲ ಮತ್ತು ವಾಸಕ್ಕೆ ಈ ಜಾಗ ಸರಿಯಲ್ಲ ಎಂದು ನುಮಾರು ಎರಡು ವರ್ಷಗಳಿಂದ ಹೇಳುತ್ತಿದ್ದಾರೆ. ಇವರು ಗದ್ದೆ ಬಯಲು ಇರುವ ಬೇರೆ ಕಡೆಗಳಲ್ಲಿ ಜಾಗ ಕೊಡ ಬೇಕೆಂದು ಕೇಳುತ್ತಿದ್ದಾರೆ. ಆದರೆ ಇವರನ್ನು ಇಲ್ಲಿನ ಅಧಿಕಾರಿಗಳು ಹೆದರಿಸುತ್ತಿದ್ದಾರೆ. ಇದಕ್ಕಾಗಿ ನಮ್ಮ ಊರಿನ ಕಡೆಗೆ ಈ ಆಹಾರ ಮಂತ್ರಿಗಳು ಬಂದಾಗ ಬಹಳ ದೊಡ್ಡದಾಗಿ ತಳಿರು ತೋರಣಗಳನ್ನು ಕಟ್ಟಿಸಿದರು, ಒಂದು ದೊಡ್ಡ ಚಪ್ಪರವನ್ನೂ ಹಾಕಿಸಿದ್ದರು. ಇವರು ಭರವಸೆ ಕೊಡುತ್ತಾರೆ ಎಂದು ನನಗೂ ಗೊತ್ತಿತ್ತು. ಆದರೆ ಇಲ್ಲಿ ಇಂತಹ ದೊಡ್ಡ ಸಮಾರಂಭವಾಗುವಾಗ ಈ ಕ್ಷೇತ್ರದ ಎಂ. ಎಲ್. ಎ. ಆಗಿದ್ದರೂ ನನಗೆ ಇಲ್ಲಿಗೆ ಬರಲು ಆಹ್ವಾನ ಇರಲಿಲ್ಲ. ಇಲ್ಲಿಗೆ ಬೇಕಾದ ಹಾಗೆ ಪೋಲೀಸರು ಬಂದಿದ್ದರು ಇತರ ಕಾಂಗ್ರೆಸ್ಸು ಸದಸ್ಯರುಗಳೂ ಬಂದಿದ್ದರು. ನಮ್ಮನ್ನೆಲ್ಲಾ ಪಣಂಬೂರು ವೆಂಕುಗಳು ಎಂದು ತಿಳಿದರು ಎಂತ ಕಾಣುತ್ತದೆ. ನಮ್ಮಲ್ಲಿ ಒಂದು ಗಾದೆ ಇದೆ : "ವೆಂಕುಗಳು ಪಣಂಬೂರಿಗೆ ಹೋದ ಹಾಗೆ". ಇದರಲ್ಲಿ ಒಂದು ಕಥೆ ಜ್ಞಾಪಕಕ್ಕೆ ಬರುತ್ತದೆ. ನಮ್ಮಲ್ಲಿ ಒಬ್ಬ ಶ್ಯಾನುಭೋಗರಿದ್ದರಂತೆ ಇವರು ರಾತ್ರಿ ನಿದ್ದೆ ಮಾಡುವಾಗ ನಾಳೆ ವೆಂಕುವನ್ನು ಊಗಾರ್ಣಕ್ಕೆ ಕಳುಹಿಸಬೇಕು ಎಂದು ಇತರರೊಡನೆ ಮಾತಾಡುತ್ತಾ ರಾತ್ರಿ ನಿದ್ದೆ ಮಾಡಿದರು. ಇದನ್ನು ವೆಂಕು ಎನ್ನುವವನು ಕೇಳಿಸಿಕೊಂಡು ಮುಂಜಾನೆಯಾಗುವುದಕ್ಕೆ ಮೊದಲೇ ಪಣಂಬೂರಿಗೆ ಹೋಗಿ ವಾಪಸು ಬಂದನಂತೆ. ಬೆಳಗ್ಗೆ ಎದ್ದ ಮೇಲೆ ಶ್ಯಾನುಭೋಗರು ಎಲ್ಲಿಗೆ ಹೋಗಿದ್ದಿರಿ ಎಂದು ವೆಂಕುವನ್ನು ಕೇಳಿದಾಗ ಅವನ ಪಣಂಬೂರಿಗೆ ಹೋಗಿಬಂದೆ ಎಂದನಂತೆ. ನಮ್ಮ ಆಹಾರ ಮಂತ್ರಿಗಳು ಪಣಂಬೂರಿಗೆ ವೆಂಕು ಹೋದಂತೆ ಇಲ್ಲಿಗೆ ಬಂದು ವಾಪಸು ಹೋದರು. ಇಲ್ಲಿನ ಜನ ಬಂದು ನಮ್ಮನ್ನು ಸ್ಮಶಾನ ಇರುವ ಜಾಗಕ್ಕೆ ಕಳುಹಿಸಬೇಡಿ ಇದಕ್ಕೆ ಬೇರೆ ಜಾಗ ಕೊಡಿ ಎಂದು ಕೇಳಿದಾಗ ಅವರು ಅಲ್ಲೇ ಇರಿ ಚೆನ್ನಾಗಿರುತ್ತದೆ ಎಂದು ಹೇಳಿದರಂತೆ. ಶವ ದರ್ಶನಂ ಶುಭ ದರ್ಶನಂ ಎನ್ನುವ ಹಾಗೆ ಮುಸಲ್ಮಾನರು ಅವರ ಮಸೀದಿಗಳೊಳಗೆ ಶವವನ್ನು ಗೋರಿ ಮಾಡುತ್ತಾರೆ. ಕ್ರಿಶ್ಚಿಯನ್ನರು ಅವರ ಚರ್ಚುಗಳಲ್ಲಿ ಗೋರಿ ಮಾಡುತ್ತಾರೆ. ಆದುದರಿಂದ ಇಲ್ಲಿರುವ ಸ್ಮಶಾನದಿಂದಲಾದರೂ ತೊಂದರೆ ಆಗುವುದಿಲ್ಲ ಎಂತ ಹೇಳಿದರಂತೆ. ಈ ಜನರನ್ನು ಭೂತಗಳು ಎಂದು ತಿಳಿದ ಹಾಗೆ ಇದೆ. ಇದ್ದೇನು ಇಲ್ಲಿರುವ ಜನ ಎಲ್ಲ ಪಿಶಾಚಿ ಸ್ವರೂಪದವರು ಎಂದು ಮಂತ್ರಿಗಳು ಅರ್ಥಮಾಡಿದ್ದಾರೋ ಏನೋ? ಓ ಮಂತ್ರಿಗಳೇ, ಸ್ಮಶಾನ ಇರುವ ಭೂಮಿ ಕೊಟ್ಟರೆ ನೀವು ಮನೆ ಕಟ್ಟಿಕೊಳ್ಳಲು ಹೋಗುತ್ತೀರಾ? ಒಳ್ಳೆಯ ವಸ್ತುಗಳನ್ನು ಕಂಡ ತಕ್ಷಣ ನನಗೆ ಬೇಕು ಎನ್ನುವ ಭೂತದಂತಾಗಿದೆ ಇಂದು ಇರುವ ಕಾಂಗ್ರೆಸ್ಸು ಸಂಸ್ಥೆ. ಇಲ್ಲಿ ಸ್ಮಶಾನದಲ್ಲಿರುವ ಜನ ಕಷ್ಟಪಡುತ್ತಿದ್ದೇವೆ ಎಂದು ನಮ್ಮಲ್ಲಿ ಅವರ ಕಷ್ಟಗಳನ್ನು ಹೇಳಿಕೊಂಡು ಅವರು ಬೇರೆ ಜಾಗ ಕೊಡಬೇಕೆಂದು ಕೇಳಿದರೂ ಅವರನ್ನು ಸ್ಮಶಾನಕ್ಕೆ ಹೋಗಿ ಇರಿ ಎಂದು ಹೇಳಿದರೆ ನೀವು ಸರಕಾರದ ದುಡ್ಡನ್ನ ಖರ್ಚು ಮಾಡುವುದು ಇದಕ್ಕಾಗಿಯೋ?

ಶ್ರೀ ಕೆ. ಪುಟ್ಟಸ್ವಾಮಿ (ನ್ಯಾಯ, ಕಾರ್ಮಿಕ ಮತ್ತು ಸಂಸದೀಯ ವ್ಯವಹಾರ ಶಾಖೆಗಳ ಮಂತ್ರಿಗಳು).—ನಮ್ಮಲ್ಲಿ ಯಾರಿಗೂ ಭೂತ ಹಿಡಿದಿಲ್ಲವಲ್ಲ.

ಶ್ರೀ ಪಿ. ಏ. ಖತಾಳ.—ಸ್ಮಶಾನದಲ್ಲಿರುವ ಜನರು ಭೂತಗಳು ಎಂದು ಇವರ ಅಭಿಪ್ರಾಯ ಇದ್ದ ಹಾಗೆ ಕಾಣುತ್ತದೆ. ಹೀಗೆ ಎಲ್ಲೆಲ್ಲಿ ಒಳ್ಳೊಳ್ಳೆಯ ಭೂಮಿ ಇದೆಯೋ ಅದು ಸರ್ಕಾರಕ್ಕೆ ಬೇಕು, ಯಾರಿಗೂ ಜೇಡವಾದುದ್ದು ಸ್ಮಶಾನ ಜಾಗ ಬಾಕಿಯವರಿಗೆ ಕೊಡುತ್ತಾರೆ. ಮೊನ್ನೆ ಬೈಂದೂರ್‌ನಲ್ಲಿ ಒಂದು ಕಥೆ ನಡೆಯಿತು. ಅಲ್ಲಿ ಒಂದು ಅದಿಭೂತ ಎಂದು ಇದೆ, ಅದಕ್ಕೆ ಹೋಗಿ ಪೂಜೆ ಮಾಡುತ್ತಾರೆ. ಅಲ್ಲಿ ಪೂಜೆಗೆ ಹೆಂಗಸರು, ಮಕ್ಕಳು ಹೋದರೆ ಅವರನ್ನು ಓಡಿಸಿಕೊಂಡು ಹೋಗುತ್ತದೆ. ಒಂದು ದಿವಸ ಅಲ್ಲಿ ಒಬ್ಬನನ್ನು ಹಿಡಿದುಕೊಂಡು ಹೋಯಿತು. ಆ ರೀತಿ ಒಳ್ಳೊಳ್ಳೆಯ ವಸ್ತುಗಳು ನೋಡಿದ ತಕ್ಷಣ 'ಕಾಹಾ" ಅದು ನನಗೆ ಬೇಕು ಎನ್ನುವ ಒಂದು ಭೂತದಂತಾಗಿದೆ ಈ ಕಾಂಗ್ರೆಸ್ ಸಂಸ್ಥೆ ನೂರತ್ಕರ್‌ನಲ್ಲಿ ಈರೀತಿ ಮಾಡಿದ್ದಾರೆ. ಇದರ ಬಗ್ಗೆ ಮಂಗಳೂರಿನ ಡೆಪ್ಯೂಟಿ ಕಮಿಷನರ

(ಶ್ರೀ ಪಿ. ಎ. ಐತಾಳ್)

ಶ್ರೀ ನಾಗೇಗೌಡರ 22-7-66 ರಲ್ಲಿ ಬರೆದ ಲೆಟರ್ ಪ್ರಕಾರ 11-7-66 ರಲ್ಲಿ ಫೀಲಿಂಗ್ ಕೂಡ ಆಯಿತು. ಇದರ ಬಗ್ಗೆ ನಾನು ಒಂದು ಕೊಶ್ಚನ್ ಸಹ ಕಳುಹಿಸಿದ್ದೇನೆ, ಇದರಲ್ಲಿ ನ್ಯಾಯ ಮಾಡಿ ಕೊಡಬೇಕು ಎಂದು. ಈ ಭೂತದ ಉಪದ್ರವನ್ನು ತೀವ್ರವಾಗಿ ಬಿಡಿಸಬೇಕು.

ಶ್ರೀ ಕೆ. ಪುಟ್ಟಸ್ವಾಮಿ.—ನಮ್ಮಲ್ಲಿ ಯಾರಿಗೂ ಭೂತ ಹಿಡಿದಿಲ್ಲವಲ್ಲ.

ಶ್ರೀ ಎನ್. ಎಂ. ಕೊಟ್ರಬಸಯ್ಯಸೋಗಿ (ವಿದ್ಯಾಶಾಖೆಯ ಉಪಮಂತ್ರಿಗಳು).—ನಿಮಗೆ ಹಿಡಿದುರುವುದು ಹೆಣ್ಣು ಭೂತವೊ, ಗಂಡೋ (ನಗು).

ಶ್ರೀ ಪಿ. ಎ. ಐತಾಳ.—ಆ ಭೂತಕ್ಕೆ ಕುರಿ, ಕೋಳಿ ಬಲ ನೀಡಬೇಕು. ಭೂತಕ್ಕೆ ಹೆದರುವಂತೆ ನಾವು ಮಂತ್ರಿಗಳಿಗೆ ಹೆದರುತ್ತೇವೆ. ಹೆಂಗಸರು, ಮಕ್ಕಳು ಮತ್ತು ದನಕರುಗಳಿಗೆ ಭೂತ ಯಾವ ರೀತಿ ಉಪದ್ರವ ಕೊಡುತ್ತದ್ದೋ ಅದೇ ರೀತಿ ನೀವು ಉಪದ್ರವ ಮಾಡಬೇಡಿ ಎಂದು ಹೇಳುತ್ತೇನೆ. ನಿಮ್ಮ ಕಬ್ಬನ್ ಪಾರ್ಕ್ ಜಾಗವನ್ನು ಬೇಕು ಎಂದು ಕೇಳಿದರೆ ಅವನ್ನೂ ಕೊಟ್ಟುಬಿಡಿ ಎಂದು ಹೇಳುತ್ತೇನೆ.

ಇನ್ನು ಫಿಷರೀಸ್ ವಿಷಯ. ದಕ್ಷಿಣ ಕನ್ನಡಜಿಲ್ಲೆಗೆ ಇದರ ಬಗ್ಗೆ ಕೋಟಿ ಕೋಟಿ ಗಟ್ಟಲೆ ಹಣ ಖರ್ಚಾಗುತ್ತದೆ. ಇದರಿಂದ ಯಾರಿಗೆ ಉಪಯೋಗವಾಗುತ್ತಿದೆ ಎನ್ನುವುದರ ಬಗ್ಗೆ ವಿಚಾರಣೆ ಆಗಬೇಕು. ಯಾರು ಮೀನುಗಾರರು ಅಲ್ಲವೋ ಅವರಿಗೆ, ಮೀನಿನ ಕನಬು ಇಲ್ಲದವರಿಗೆ ಹಣ ಕೊಡುತ್ತಿದ್ದಾರೆ. ಸ್ವಾಮಿ, ಫಿಷರೀಸ್ ಬೋರ್ಡ್ ಎಂದು ಮೊನ್ನೆ ಮಾಡಿದಿರಿ. ಕೋರಾರದ ಅನೇಕ ಎಂ. ಎಲ್. ಎ. ಗಳಿಗೆ ಫಿಷರೀಸ್ ಬೋರ್ಡ್‌ನಲ್ಲಿ ಪ್ರಾತಿನಿಧ್ಯ ಕೊಟ್ಟಿದ್ದೀರಿ. ಕರಾವಳಿ ಪ್ರದೇಶದಲ್ಲಿರುವ ಎಂ. ಎಲ್. ಎ. ಗಳನ್ನು ಬಿಟ್ಟು ಬೇರೆಯವರಿಗೆ ಪ್ರಾತಿನಿಧ್ಯ ಕೊಟ್ಟಿದ್ದೀರಿ. ಎಂ. ಪಿ. ಸಿ. ಸಿ.ಪ್ರೆಸಿಡೆಂಟರು ಇರಲಿಲ್ಲವೇ ? ಅವರನ್ನೂ ಬಿಟ್ಟು ಶ್ರೀಮತಿ ಲೀರಾವತಿ ರೈ ಅವರನ್ನು ಫಿಷರೀಸ್ ಬೋರ್ಡ್‌ಗೆ ಹಾಕಿದ್ದೀರಿ. ಇದರಂತಹ ನಾಚಿಕೆಗೇಡು ಎಲ್ಲೂ ಇಲ್ಲ. ಸಾಮಾನ್ಯವಾಗಿ ಆ ಏರಿಯಾದಲ್ಲಿ 8—10 ಜನ ಎಂ. ಎಲ್. ಎ. ಗಳು ಇದ್ದರೂ ಅವರುಗಳಿಗೆ ಪ್ರಾತಿನಿಧ್ಯ ಕೊಟ್ಟಿಲ್ಲ.

ಶ್ರೀ ಡಿ. ದೇವರಾಜ್ ಅರಸ್ (ಹುಣಸೂರು).—ನಮ್ಮುದ್ರದಲ್ಲಿಯೂ ಮೀನುಗಳು ಇವೆ. ಕೋರಾರದಲ್ಲಿರುವ ಕೆರೆಗಳಲ್ಲಿಯೂ ಮೀನು ಇವೆ. ಅವನ್ನು ಕೆರೆಗಳ ಪರವಾಗಿ ಹಾಕಿದ್ದಾರೆ.

ಶ್ರೀ ಪಿ. ಎ. ಐತಾಳ.—ಕೋರಾರ ಜಿಲ್ಲೆ ಮೊದಲಿನಿಂದಲೂ ಕ್ಷಾಮದ ಜಿಲ್ಲೆ. ಕುಡಿಯಲಿಕ್ಕೆ ನೀರೂ ಸಿಕ್ಕುವುದಿಲ್ಲ. ನಮ್ಮ ಸರ್ಕಾರದವರು ಅವರಿಗೆ ಬೇಕಾದಷ್ಟು ಪ್ರಾತಿನಿಧ್ಯ ಕೊಡುತ್ತಿದ್ದಾರೆ. ಅದು ಗ್ಲಾಸ್‌ನೊಳಗೆ ಇರುವಂಥ ಮೀನು ಹೊರತು ಸಮುದ್ರದಲ್ಲಿರುವಂಥ ಮೀನು ಅಲ್ಲ. ಈ ರೀತಿ ಅಡ್ಮಿನಿಸ್ಟ್ರೇಷನ್ ಮಾಡುತ್ತಾರೆಂದು ನಾನು ವಿರೋಧಪಕ್ಷದವನಾಗಿ ಹೇಳುತ್ತೇನೆ.

ಇನ್ನು ನೀರಾವರಿ ಯೋಜನೆ ವಿಷಯವಾಗಿ ಹೇಳುವುದಾದರೆ ಶ್ರೀ ರಾಮಕೃಷ್ಣ ಹೆಗಡೆ ಯವರು ದೊಡ್ಡ ಮನಸ್ಸು ಮಾಡಿದ್ದಾರೆ. ನಮ್ಮ ಜಿಲ್ಲೆಯಲ್ಲಿ ಒಂದೇ ಒಂದು ಪ್ರಾಜೆಕ್ಟಿಗೆ ಹಣ ಕೊಟ್ಟಿದ್ದಾರೆ, ಡಿಸ್ಟ್ರಿಕ್ಟ್ ಲೆವರ್ ಸೆಮಿನಾರ್ ನಡೆಯುತ್ತಿದ್ದಾಗ ಅನೇಕ ಕಡೆಯಲ್ಲಿ ನನ್ನನ್ನು ಮೈನರ್ ಇರ್ರಿಗೇಷನ್ ಕಮಿಟಿಯ ಛೇರ್ಮನ್ ಆಗಿ ಮಾಡಿದ್ದರು.

ಬಿಜ್ಜೂರು ಪ್ರಾಜೆಕ್ಟ್ ಎಂದು 131 ಲಕ್ಷ ರೂಪಾಯಿಗಳ ಅಂದಾಜಿನಲ್ಲಿ ಒಂದು ಯೋಜನೆಯನ್ನು ಸರ್ಕಾರದವರು ಮಂಜೂರು ಮಾಡಿದ್ದಾರೆ. ಅದರಲ್ಲಿ ಈ ಸಲ 80 ಸಾವಿರ ರೂಪಾಯಿ ಖರ್ಚು ಮಾಡುತ್ತಾರೆ. ಪಂಚವಾರ್ಷಿಕ ಯೋಜನೆಯಲ್ಲಿ ಇದಕ್ಕೆ ಖರ್ಚು ಮಾಡಲು ಒಪ್ಪಿ ಪ್ರಪೋಸ್ ಮಾಡಿದ ಹಣ 2 ಲಕ್ಷ ರೂಪಾಯಿ. 131 ಲಕ್ಷ ರೂಪಾಯಿ ಪ್ರಾಜೆಕ್ಟ್‌ನಲ್ಲಿ ನಾವು ವರ್ಷಕ್ಕೆ ಒಂದೆರಡು ಲಕ್ಷ ರೂಪಾಯಿ ಖರ್ಚು ಮಾಡಿದರೆ ಇದು ಯಾವ ಕಾಲಕ್ಕೆ ಆಗುತ್ತದೆ. ನಮ್ಮ ಮಕ್ಕಳ ಅಥವಾ ಮರಿಮಕ್ಕಳ ಕಾಲಕ್ಕೆ ಆಗಬಹುದು. ನಾನು ಇಂಜಿನಿಯರುಗಳ ಹತ್ತಿರ 131 ವರ್ಷಗಳಲ್ಲಿ ಆಗುವಂಥ ಪ್ರಾಜೆಕ್ಟ್‌ಗಳನ್ನು ಮಾಡುವದುಂಟೋ ಎಂದು ಕೇಳಿದಾಗ ಟೆಕ್ನಿಕಲ್ ಫೀಸಿಬಿಲ್ ಹೌದೋ ಅಲ್ಲವೋ ಎಂದು ಡೌಟ್‌ಫುಲ್ ಇದೆ ಎಂದು ಹೇಳಿದರು. ಹಾಗಾದರೆ ಏಕೆ ರೆಕಮೆಂಡೇಷನ್ ಮಾಡುತ್ತೀರಿ ಎಂದರೆ ನಿಮಗೆ ಏನಾದರೂ ಕೊಡಬೇಕೋ ಇಲ್ಲವೋ ? ಅದಕ್ಕೆ ಕೊಡುತ್ತೇವೆಂದು ಹೇಳಿದರು. ಪ್ರಾಜೆಕ್ಟ್‌ಗಳನ್ನು ಮಾಡಿ ಹಣವನ್ನು ವ್ಯರ್ಥ ಮಾಡುವುದಕ್ಕಿಂತ ಟೆಕ್ನಿಕಲ್ ಫೀಸಿಬಿಲ್ ಇದ್ದರೆ ಮಾತ್ರ ತೆಗೆದುಕೊಳ್ಳಬಹುದು ಎಂದು ಹೇಳುತ್ತೇನೆ.

5-00 P. M.

ವಿರೋಧ ಪಕ್ಷದ ಸದಸ್ಯರ ಕ್ಷೇತ್ರಗಳಿಗೆ ಹಣ ಸರಿಯಾಗಿ ಖರ್ಚು ಮಾಡುವುದಿಲ್ಲ. ಈ ಸಲ ನೆರೆ ಬಂದಾಗ ಇಬ್ಬರು ಹುಡುಗರು ಸತ್ತರು. ನಾನು ಇದರ ಬಗ್ಗೆ ಮಂತ್ರಿಗಳಿಗೆ ಬರೆದಿದ್ದೇನೆ. ಪಬ್ಲಿಕ್ ವರ್ಕ್ಸ್ ಇರಾಖೆಯ ಕಾರ್ಯದರ್ಶಿಯವರಿಗೂ ಬರೆದಿದ್ದೇನೆ. ಶ್ರೀ ನಾಗಪ್ಪ ಆಳ್ವ ಅವರ ಊರಿನ ಹತ್ತಿರ ಮೂರು ಗ್ರಾಮಗಳುಂಟು, ಉಳಾಯಿ, ಬೆಟ್ಟ ಮಲ್ಲೂರು ಮತ್ತು ಬಂಡೋಲ ಎಂಬ ಗ್ರಾಮಗಳಿವೆ. ಅವರು ಮನಸ್ಸು ಮಾಡಿದ್ದರೆ ಏನಾದರೂ ಆಗುತ್ತಿತ್ತು, ಅವರು ಮನಸ್ಸು ಮಾಡಲಿಲ್ಲ. ನಾನು ಎಧಾನ ಸಭೆಯ ಸದಸ್ಯನಾಗಿ ಬಂದ ಮೇಲೆ ಹತ್ತಿಪ್ಪತ್ತು ಕಾಗದ ಬರೆದೆ. ಈ ಗ್ರಾಮಗಳಿಂದ ಮಕ್ಕಳು ನದಿ ದಾಟಿ ಬರಬೇಕು. ಅಲ್ಲಿ ಒಂದು ಸೇತುವೆ ಕಟ್ಟಬೇಕಾದರೆ 60-70 ಸಾವಿರ ರೂಪಾಯಿ ಆಗಬಹುದು. ಮಾನ್ಯ ವೀರೇಂದ್ರ ಪಾಟೀಲರು ಪಬ್ಲಿಕ್ ವರ್ಕ್ಸ್ ಇರಾಖೆಯ ಮಂತ್ರಿಗಳಾಗಿದ್ದಾಗ ಅವರಿಗೆ ಕೂಡ ಬರೆದಿದ್ದೇನೆ. ಪರಿಶೀಲಿಸುತ್ತೇನೆ ಎಂದು ಹೇಳಿದ್ದರು. ಎರಡು ಮಕ್ಕಳು ಸತ್ತುಹೋದರು. ಅಲ್ಲಿ ಒಂದು ಸೇತುವೆ ಇದ್ದಿದ್ದರೆ ಅವರು ಸತ್ತು ಹೋಗುವುದಕ್ಕೆ ಅವ ಕಾಶವಿರುತ್ತಿರಲಿಲ್ಲ. ಹೀಗಿದ್ದರೂ ಕೂಡ ವಿರೋಧ ಪಕ್ಷದವರು ಹೇಳಿದರು ಎಂದು ಅದನ್ನು ಕೈ ಬಿಟ್ಟಿದ್ದಾರೆ ಎಂದು ಕಾಣುತ್ತದೆ. ಈ ವರ್ಷವೂ ಸಹ ಅದು ಆಯವ್ಯಯ ಪಟ್ಟಿಯಲ್ಲಿಲ್ಲ. ಈ ಮೂರು ಹಳ್ಳಿಗಳಿಂದ ಬರುವ ಮಕ್ಕಳು ನೆರೆ ಕಾಲದಲ್ಲಿ ದೋಣಿ ನಡೆಸುವವರಿಗೆ ಪ್ರತಿಯೊಬ್ಬರೂ 25 ರೂಪಾಯಿ ಕೊಡಬೇಕು. ಶ್ರೀಮತಿ ಲೀಲಾವತಿ ರೈ ಅವರ ಕ್ಷೇತ್ರಕ್ಕೆ ಹತ್ತಿರವಿರುವಂತ ಜಾಗ. ಶಾಲೆಗೆ ಮಕ್ಕಳು ಹೋಗಿ ಬರಲು ಒಂದು ಸೇತುವೆಯನ್ನು ಮಾಡಿ ಕೊಡದೆ ಇದ್ದರೆ ನಮಗೆ ಸ್ವಾತಂತ್ರ್ಯ ಬಂದು ಏನು ಪ್ರಯೋಜನ !

ಶ್ರೀ ರಾಮಕೃಷ್ಣ ಹೆಗಡೆ.—ಒಂದು ಲಕ್ಷಕ್ಕಿಂತ ಕಡಿಮೆ ಅಂದಾಜು ಇರುವ ಕೆಲಸಗಳು ಬಜೆಟ್ಟಿನಲ್ಲಿ ಬರವುದಿಲ್ಲ.

ಶ್ರೀ ಪಿ. ಎ. ಐತಾಳ.—ಏಜ್ಯೂರ್ ಪ್ಯಾಜೆಕ್ಟಿಗೆ 80 ಸಾವಿರ ರೂಪಾಯಿ ಬಜೆಟ್ಟಿನಲ್ಲಿ ತೋರಿಸ ರಾಗಿದೆಯಲ್ಲ ?

ಶ್ರೀ ರಾಮಕೃಷ್ಣ ಹೆಗಡೆ.—ಆ ಪ್ರಾಜೆಕ್ಟಿನ ಅಂದಾಜು ಮೊತ್ತ ಜಾಸ್ತಿ ಇದೆ.

ಶ್ರೀ ಪಿ. ಎ. ಐತಾಳ.—ಸುರತ್ಕಲ್ ಇಂಜಿನಿಯರಿಂಗ್ ಕಾಲೇಜಿಗೆ ಕೋಟಿಗಟ್ಟಲೆ ಹಣವನ್ನು ಕೇಂದ್ರ ಸರ್ಕಾರದವರು ಖರ್ಚು ಮಾಡಿದ್ದಾರೆ. ಅಲ್ಲಿ ಕುಡಿಯುವ ನೀರಿಲ್ಲ. ಅದೇ ಪ್ರಕಾರ ರೀಹ್ಯಾಬಿಲಿಟೇಷನ್‌ಗೋಸ್ಕರ ಸ್ಮಶಾನದ ಹತ್ತಿರ ಕಟ್ಟಿರುವ 1200 ಮನೆಗಳಿಗೂ ನೀರಿಲ್ಲ. ಬೋಳಾರಕಟ್ಟೆ, ಪಾವಂಜಿ ಇವುಗಳ ಒಂದೂವರೆ ಮೈಲಿಯೊಳಗೆ ಇಂಜಿನಿಯರಿಂಗ್ ಕಾಲೇಜಿದೆ. ಪೈಪ್ ಲೈನ್‌ನಲ್ಲಿ ಪ್ರೊಜೆಕ್ಟೆಡ್ ವಾಟರ್ ತರಬೇಕು. ಇದರ ಬಗ್ಗೆ ಅಸೆಂಬ್ಲಿಯಲ್ಲಿ ಒಂದು ಪ್ರಶ್ನೆ ಹಾಕಿದೆ. ಇಂಜಿನಿಯರಿಂಗ್ ಕಾಲೇಜಿನಿಂದ ಅನಾನಿಮಸ್ ಲೆಟರ್ಸ್ ಬರುತ್ತಿವೆ, ವಿದ್ಯಾರ್ಥಿಗಳಿಂದ ಅಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಇಲ್ಲ ಎಂದು ಪತ್ರಗಳು ಬರುತ್ತಿವೆ, ಕೋಟಿಗಟ್ಟಲೆ ಹಣವನ್ನು ಖರ್ಚು ಮಾಡಿರುವಾಗ ಅಲ್ಲಿ ಬೋರ್‌ವೆಲ್‌ಗಳನ್ನು ಹಾಕಿದ್ದರೂ ಕೂಡ ಒಂದೆರಡು ವರ್ಷದಲ್ಲಿ ಅದರಲ್ಲಿ ನೀರು ಬತ್ತಿ ಹೋಗುತ್ತದೆ. ಅದಕ್ಕಾಗಿ ಖಾಯಂ ವ್ಯವಸ್ಥೆಯನ್ನು ಮಾಡಬೇಕು ಎಂದು ಹುಡುಗರು ಹೇಳುತ್ತಾರೆ ಎಂದರೆ ಅದಕ್ಕೆ ಉತ್ತರ ಕೊಟ್ಟಿದ್ದು ಏನೆಂದರೆ ಡೇರ್ ಈಸ್ ನೊ ಷಾರ್ಟೇಜ್ ಆಫ್ ವಾಟರ್ ಅಟ್ ಆಲ್ ಎಂದು. ಈಗ ಅದೇ ಸ್ಕೀಮಿಗೆ ಮಂಜೂರಾತಿಯನ್ನು ಕೊಟ್ಟಿದ್ದಾರೆಂದು ತಿಳಿಯುತ್ತೇನೆ. ಇದನ್ನು ಮೊದಲು ವಿರೋಧ ಪಕ್ಷದವರು ಹೇಳಿದರು ಎಂದು ಮಾಡದೆ ಅಲ್ಲಿನ ಪ್ರಿನ್ಸಿಪಾಲರು ಬರೆದಿದ್ದಾರೆ ಎಂದು ಮಂಜೂರು ಮಾಡಿದ ಹಾಗೆ ಕಾಣುತ್ತದೆ.

ಪಣಂಬೂರಿಗೆ ತಂಬನೇರು ಎಂಬಲ್ಲಿಂದ ನೀರನ್ನು ತರುತ್ತಾರೆ. ಅಲ್ಲಿಂದ ನಾಲ್ಕು ಮೈಲಿ ದೂರದಲ್ಲಿ ಸುರತ್ಕಲ್ ಇಂಜಿನಿಯರಿಂಗ್ ಕಾಲೇಜಿದೆ, ಅಲ್ಲಿಗೂ ಆ ನೀರನ್ನು ತರಬೇಕು ಎಂದು ಹೇಳಿದ್ದಕ್ಕೆ ಅದನ್ನು ಅಪ್ರೂವ್ ಮಾಡಿದ್ದಾರೆಂದು ಗೊತ್ತಾಗುತ್ತದೆ. ವಿರೋಧ ಪಕ್ಷದವರು ಹೇಳುವುದು ಸರಿಯಲ್ಲ, ಕಾಂಗ್ರೆಸ್‌ನವರು ಹೇಳಿದರೆ ಒಳ್ಳೆಯದು ಎಂದು ಸರ್ಕಾರ ತಿಳಿದುಕೊಂಡಿದೆ. ಅವರು ಒಂದು ವಿಚಾರವನ್ನು ತಮ್ಮ ಗಮನದಲ್ಲಿಟ್ಟುಕೊಳ್ಳಬೇಕು, ಇನ್ನು ಮೂರು ವರ್ಷದಲ್ಲಿ ಅವರು ಈ ಕಡೆಗೆ ಬರಬೇಕಾಗುತ್ತದೆ. ಆವಾಗ ಅವರ ಸ್ಥಿತಿ ಹೇಗಾದೀತು, ಯಾವ ನಮೂನೆಯ ನೋವು ಆದೀತು ! ಹಾಗೆ ಒಂದು ದಿವಸ ಆಗಲೇ ಬೇಕು. ನ್ಯಾಯಾನ್ಯಾಯಗಳನ್ನು ಪರಿಶೀಲಿಸಿ ವಿರೋಧಪಕ್ಷದವರು ಹೇಳಿದಾಗ ಅದಲ್ಲಿ ನ್ಯಾಯವಿದೆಯೇ ಎಂದು ವಿಚಾರಿಸಿ, ಅದನ್ನು ತನಿಖೆ ಮಾಡಿ, ವಿರೋಧ ಪಕ್ಷದವರು ಹೇಳುವುದು ನ್ಯಾಯವಿದ್ದರೆ ಅದನ್ನು ಗಮನಿಸಿಕೊಂಡು ಅದಕ್ಕೆ ಬೇಕಾದ ಆದ್ಯತೆಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಡಿ. ಎಂ. ಸಿದ್ದಯ್ಯ (ಬಳಿಗೆರೆ).—ಮಾನ್ಯ ಸಭಾಪತಿಗಳೇ, ಹಣಕಾಸಿನ ಸಚಿವರಾದ ರಾಮಕೃಷ್ಣ ಹೆಗಡೆ ಅವರು ಮಂಡಿಸಿರುವ ಆಯವ್ಯಯ ಪಟ್ಟಿಗೆ ನನ್ನ ಸಂಪೂರ್ಣ ಬೆಂಬಲವನ್ನು ಕೊಡುತ್ತ ಕೆಲವು ಮಾತುಗಳನ್ನು ಹೇಳಲು ಬಯಸುತ್ತೇನೆ.

ಮಾನ್ಯ ಖತಾಳ್ ಅವರ ಭಾಷಣವನ್ನು ಕೇಳಿದ ಮೇಲೆ ಯಾರೂ ಸೀರಿಯಸ್ ಮೂಡ್‌ನಲ್ಲಿ ಇರುವುದು ಬಹಳ ಕಷ್ಟ. ನಾನು ಬಜೆಟ್ ಮೇಲೆ ಮಾತನಾಡುವುದಕ್ಕೆ ಮುಂಚೆ ಸರ್ಕಾರದವರು ಕ್ಷಾಮ ನಿವಾರಣೆಗೋಸ್ಕರ ಮಾಡಿರುವ ವಿಚಾರದಲ್ಲಿ ಒಂದೆರಡು ಮಾತುಗಳನ್ನು ಅರಿಕೆ ಮಾಡಿ ಆಮೇಲೆ ಬಜೆಟ್ ಮೇಲೆ ಮಾತನಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ನಮ್ಮ ರಾಜ್ಯದಲ್ಲಿ ಬಹಳ ಕಷ್ಟ ಬಂದು ಸಕಾಲದಲ್ಲಿ ಮಳೆಬೆಳೆಗಳಾಗದೆ ಜನತೆ ಬಹಳ ಕಷ್ಟದಲ್ಲಿದ್ದಾಗ ಸರ್ಕಾರದವರು ಮುಂದೆ ಬಂದು 8 ಕೋಟಿ ರೂಪಾಯಿಗಳಷ್ಟು ಹಣವನ್ನು ಇಡೀ ನಂಸ್ಥಾನಮಳೆ ಖರ್ಚು ಮಾಡಿ ಕಷ್ಟ ಕಾಲದಲ್ಲಿ ಜನಗಳಿಗೆ ನೆರವಾದುದಕ್ಕಾಗಿ ನಾನು ಸರ್ಕಾರವನ್ನು ಪುನಃಪೂರ್ವಕವಾಗಿ ಅಭಿವಂದಿಸುತ್ತೇನೆ. ನಿನ್ನೆ ರೆವೆನ್ಯೂ ಸಚಿವರು ಉತ್ತರ ಕೊಡುತ್ತಾ ಉಳಿದ ಕೆಲಸಗಳನ್ನು ಪೂರ್ತಿಮಾಡುವುದಕ್ಕೆ ನಾವು ಈಗಾಗಲೇ ಅಧಿಕಾರಿಗಳಿಗೆ ಆಜ್ಞೆ ಕೊಟ್ಟಿದ್ದೇವೆ, ಇನ್ನೂ 500 ಚಿಲ್ಲರೆ ಕೆಲಸಗಳಿವೆ, ಅವನ್ನೆಲ್ಲಾ ಪೂರ್ತಿಮಾಡುವುದಕ್ಕೆ ತಕ್ಕ ಕೆಲಸ ಮಾಡುತ್ತೇವೆ ಎಂದು ಆಶ್ವಾಸನೆಯನ್ನು ಕೊಟ್ಟಿರುವುದು ನಿಜವಾಗಿ ಸ್ವಾಗತಾರ್ಹ. ಈ ಸಂದರ್ಭದಲ್ಲಿ ನಾನು ಸರ್ಕಾರಕ್ಕೆ ನಲಹೆ ಮಾಡತಕ್ಕುದು, ಅವರು ಆಗಲೇ 20 ಕೋಟಿ ರೂಪಾಯಿಗಳ ಶಾಶ್ವತವಾದ ಯೋಜನೆಯನ್ನು ತಯಾರು ಮಾಡಿ ಕೇಂದ್ರ ಸರ್ಕಾರಕ್ಕೆ ಕಳಿಸಿದ್ದಾರೆ. ನಮ್ಮ ರಾಜ್ಯದಲ್ಲಿ ಯಾವತ್ತಿಗೂ ಕ್ಷಾಮ ತಲೆದೋರಬಾರದು. ಪದೇ ಪದೇ ಕ್ಷಾಮಕ್ಕೆ ಜನಗಳು ತುತ್ತಾಗಿ ಬಹಳ ಕಷ್ಟ ನಷ್ಟಗಳಿಗೆ ಗುರಿಯಾಗಿರತಕ್ಕದು ಎಲ್ಲರ ಗಮನಕ್ಕೂ ಬಂದಿರುವ ವಿಚಾರ. ಈ 20 ಕೋಟಿ ರೂಪಾಯಿಗಳ ಯೋಜನೆಯಲ್ಲಿ ಶಾಶ್ವತವಾದ ಪರಿಹಾರವನ್ನು ಸರ್ಕಾರದವರು ಮಾಡಬೇಕೆಂದು ಈ ಸಂದರ್ಭದಲ್ಲಿ ನಾನು ಕಳಕಳಿಯಿಂದ ಸರ್ಕಾರಕ್ಕೆ ವಿನ್ನವಿಸಿಕೊಳ್ಳುತ್ತೇನೆ.

ಈ ವರ್ಷದ ಆಯವ್ಯಯ ಪಟ್ಟಿಯಲ್ಲಿ ಖೋತ ಬಜೆಟ್ಟನ್ನು ಮಾನ್ಯ ರಾಮಕೃಷ್ಣ ಹೆಗಡೆ ಅವರು ಮಂಡಿಸಿದ್ದಾರೆ. ಇದರಲ್ಲಿ ಆಶ್ಚರ್ಯವಿಲ್ಲ. ಯಾವ ದೇಶವೇ ಆಗಲೀ ಅಭಿವೃದ್ಧಿ ಹೊಂದತಕ್ಕ ಕಾಲದಲ್ಲಿ ಖೋತ ಬಜೆಟ್ ಮಂಡಿಸತಕ್ಕುದು, ಸಾಲದ ಹೊರೆ ಹೆಚ್ಚಾಗತಕ್ಕುದು, ಸಾಲಕ್ಕೋಸ್ಕರವಾಗಿ ಬಡ್ಡಿ ತರುವುದು, ಸಾಲವನ್ನು ತೀರಿಸುವುದಕ್ಕಾಗಿ ಸಂಪನ್ಮೂಲಗಳನ್ನು ಹೊಂದಿಸಿಕೊಳ್ಳುವುದು ಸರ್ವೇ ಸಾಧಾರಣವಾದ ವಿಚಾರ. ಆದರೆ ಈ ಹೊತ್ತಿನ ದಿವಸ ನಮ್ಮ ನಾಲ್ಕನೆ ಯೋಜನೆ ಇನ್ನೂ ಪೂರ್ಣವಾಗಿ ಒಂದು ಸ್ಥಿತಿಗೆ ಬಂದಿಲ್ಲ. ನಮ್ಮದು 440 ಕೋಟಿ ರೂಪಾಯಿಗಳ ಯೋಜನೆಯಾದರೂ ಕೂಡ ಇನ್ನೂ ಕೇಂದ್ರ ಸರ್ಕಾರದ ನೆರವು ಎಷ್ಟು ನಮಗೆ ದೊರೆಯುತ್ತದೆ ಎನ್ನುವುದು ಸ್ಪಷ್ಟವಾಗಿಲ್ಲ. ನಮ್ಮ ಸಂಪನ್ಮೂಲಗಳಿಂದ 115 ಕೋಟಿ ರೂಪಾಯಿಗಳ ತನಕ ನಾವು ಹೊಂದಿಸಿಕೊಳ್ಳಬೇಕು ಎನ್ನುವ ಮಾತನ್ನು ಕೂಡ ಮಾನ್ಯ ಸಚಿವರು ಪ್ರಸ್ತಾವಿಸಿದ್ದಾರೆ. ಅವರ ಮಾತಿನಲ್ಲಿ ಹೇಳುವುದಾದರೆ,

> There is still uncertainty about the size of the Fourth Five-Year Plan. This is because the quantum of Central assistance has not been determined in realistic terms and the ability of States to raise resources remains unassessed. In our view, it is better to have one more annual Plan till the Fifth Finance Commission gives its award and these uncertainties are resolved."

ಈ ಮಾತನ್ನು ಬಿಚ್ಚುಮನಸ್ಸಿನಿಂದ ಹೇಳಿದ್ದಾರೆ, ಕೇಂದ್ರದ ಸಹಾಯ ನಮಗೆಷ್ಟು ದೊರೆಯುತ್ತದೆಂಬುದು ಸ್ಪಷ್ಟವಾಗಿ ಗೊತ್ತಾಗಿಲ್ಲ, ನಾವು ನಮ್ಮ ಸಂಪನ್ಮೂಲಗಳನ್ನು ಯಾವರೀತಿ ಸಂಗ್ರಹಿಸಬೇಕು ಎಂಬುದನ್ನು ಮುಖ್ಯವಾಗಿ ಗಮನಿಸಬೇಕಾಗಿದೆ ಎಂದು ಸೂಚಿಸಿದ್ದಾರೆ. ಬಹಳಮಟ್ಟಿಗೆ ಹಣಕಾಸಿನ ಸಚಿವರು ಫೈನಾನ್ಸ್ ಕಮಿಷನ್ನಿನಮೇಲೆ ಭರವಸೆ ಇಟ್ಟು ಈ ವರ್ಷದ ಆಯವ್ಯಯ ತಖ್ತೆಯನ್ನು ತಯಾರಿಸಿದ್ದಾರೆ ಎಂದು ಹೇಳಿದರೆ ತಪ್ಪಾಗಲಾರದು. ಶ್ರೀ ನಾಗಪ್ಪನವರು ಸರಕಾರವನ್ನು ಆಕ್ಷೇಪಿಸಿದರು, ನಮ್ಮ ಸಂಪನ್ಮೂಲಗಳನ್ನು ಹೆಚ್ಚಿಸಿಕೊಳ್ಳುವುದಕ್ಕೆ ಸಾಕಷ್ಟು ಪ್ರಯತ್ನ ಮಾಡದೆ ನಾವು ಬಹಳ ಕಷ್ಟದಲ್ಲಿದ್ದೇವೆ, ಹೆಚ್ಚು ಹಣ ಕೊಡಬೇಕು ಎಂದು ಫೈನಾನ್ಸ್ ಕಮಿಷನ್ನನ್ನು ಕೇಳುತ್ತಿದ್ದಾರೆ ಎಂದು ಹೇಳಿದರು. ಇದನ್ನು ಒಪ್ಪುತ್ತೇನೆ. ಹಾಗೆ ಹೇಳಿದರೂ ಕೂಡ ಕೇಂದ್ರ ಸರ್ಕಾರದಿಂದ ಕಳೆದ ಹತ್ತಾರು ವರ್ಷಗಳಿಂದ ನಮಗೆ ಸಾಕಷ್ಟು ನೆರವು ಸಿಕ್ಕಿಲ್ಲ. ಉದಾಹರಣೆಗೆ

ಪಬ್ಲಿಕ್ ಸೆಕ್ಟಾರ್ ನಡೆಸುವ ಕೈಗಾರಿಕೆಗಳಿಗೆ 1951 ರಿಂದ ಬೇರೆ ಬೇರೆ ರಾಜ್ಯಗಳಿಗೆ ಕೊಟ್ಟಿರುವಂತೆ ನಮಗೆ ಸಾಕಷ್ಟು ಸಹಾಯ ದೊರೆತಿಲ್ಲ. ಕೇವಲ 48 ಕೋಟಿ ರೂಪಾಯಿಗಳನ್ನು ಮಾತ್ರ ನಮಗೆ ಕೊಟ್ಟಿದ್ದಾರೆ. ಆದರೆ ಕೆಲವು ರಾಜ್ಯಗಳಿಗೆ 400 ಕೋಟಿ ಕೊಟ್ಟಿದ್ದಾರೆ, ಇನ್ನು ಕೆಲವಕ್ಕೆ 250 ಕೋಟಿ ಕೊಟ್ಟಿದ್ದಾರೆ. ನಮಗೆ ಮಾತ್ರ ಕೇವಲ 43 ಕೋಟಿ ಕೊಟ್ಟಿದ್ದಾರೆ. ಹೀಗೆ ಕೇಂದ್ರ ಸರಕಾರದಿಂದ ನಮಗೆ ಸಾಕಾದಷ್ಟು ನೆರವು ದೊರೆತಿಲ್ಲ. ಈ ದೃಷ್ಟಿಯಿಂದ ಆರ್ಥಿಕ ಸಚಿವರು ಫೈನಾನ್ಸ್ ಕಮಿಷನ್ ಮುಂದೆ ಸಂಪನ್ಮೂಲಗಳನ್ನು ರೂಢಿಸಿಕೊಳ್ಳುವ ವಿಚಾರವಲ್ಲಿ ಅಶ್ವಾಸನೆ ಕೊಟ್ಟು ನಮಗೆ ಹೆಚ್ಚು ನೆರವನ್ನು ಕೇಳಿರುವುದು ಗಮನಾರ್ಹವಾಗಿದೆ. ಇದಕ್ಕಾಗಿ ಮಾನ್ಯ ಸಚಿವರನ್ನು ಅಭಿನಂದಿಸಬೇಕು. ಫೈನಾನ್ಸ್ ಕಮಿಷನ್ ಮುಂದೆ ನಾವು ಕೈಕೊಂಡಿರುವ ಕೆಲಸ ಕಾರ್ಯಗಳನ್ನು ಪ್ರಸ್ತಾಪಿಸಿ ಹೆಚ್ಚು ನೆರವು ನಮಗೆ ಕೊಡಬೇಕೆಂದು ಪ್ರಾರ್ಥನೆಮಾಡಿದ್ದಾರೆ. ಮತ್ತು ಇದರ ಜೊತೆಗೆ ಈಗಾಗಲೇ ತುಕೋಳ್ ವರದಿಯು ಈ ಸಭೆಯಲ್ಲಿ ಚರ್ಚಿಸಲ್ಪಟ್ಟಿದೆ, ಅದರ ಶಿಫಾರ್ಸಿನಲ್ಲಿ ಒಂದು ಭಾಗವನ್ನು ಸರಕಾರ ಒಪ್ಪಿ ಜಾರಿಗೆ ತರಲು ಮನಸ್ಸು ಮಾಡಿದೆ. ಅದನ್ನು ಬಜೆಟ್ಟಿನಲ್ಲಿ ಸೇರಿಸಿದಿದ್ದರೂ ಕೂಡ ಈ 3 ಚಿಲ್ಲರೆ ಕೋಟಿಯನ್ನು ಫೈನಾನ್ಸ್ ಕಮಿಷನ್ ನೆರವಿನಿಂದ ತುಂಬಿಕೊಳ್ಳುವ ಆಸೆಯನ್ನು ಸಚಿವರು ಇಟ್ಟುಕೊಂಡಿದ್ದಾರೆ. ಈ ರಾಜ್ಯದ ಆಯವ್ಯಯವನ್ನು ಫೈನಾನ್ಸ್ ಕಮಿಷನ್ ಕೊಡುವ ಉದಾರ ನೆರವು, ಅದಕ್ಕಿಂತಲೂ ಹೆಚ್ಚಾಗಿ ನಮ್ಮ ಸಂಪನ್ಮೂಲಗಳಿಂದ ಸರಿದೂಗಿಸಲು ಬಹುಶಃ ಈ ಸಭೆಯ ಸದಸ್ಯರೆಲ್ಲರೂ ಕೂಡ ಸಹಕಾರ ನೀಡಬೇಕಾಗಿದೆ, ಇದರ ಬಗ್ಗೆ ಸರಕಾರದ ಜವಾಬ್ದಾರಿ ಬಹಳವಾಗಿದೆ. ನಾವು ವರ್ಷೇ ವರ್ಷೆ ಅಭಿವೃದ್ಧಿ ಹೊಂದುತ್ತಿರುವ ರಾಜ್ಯದಲ್ಲಿ ನಮ್ಮ ಆಸೆ ಮತ್ತು ಆಕಾಂಕ್ಷೆಗಳಿಗೆ ತಕ್ಕಂತೆ ಸರ್ವತೋಮುಖವಾಗಿ ಪ್ರಗತಿಯಾಗಬೇಕಾದರೆ ಅಭಿವೃದ್ಧಿ ಕಾರ್ಯಗಳಿಗೆ ಹೆಚ್ಚು ಹಣ ಖರ್ಚುಮಾಡಬೇಕು ಎಂದು ಹೇಳುವಾಗ ತೆರಿಗೆ ಹಾಕಬಾರದು, ಈಗಾಗಲೆ ಹೆಚ್ಚು ತೆರಿಗೆ ಹೇರಲ್ಪಟ್ಟಿದೆ ಎಂದು ಹೇಳುವುದುಂಟು. ಹಣ ಸಾಕಷ್ಟಿಲ್ಲದೆ ಕೆಲಸ ಹೇಗೆ ಮಾಡಬೇಕು ? ಇಂದು ನೀರಾವರಿ ಕೆಲಸ, ಕೈಗಾರಿಕಾಭಿವೃದ್ಧಿ, ಮುಂತಾದ್ದನ್ನು ಮಾಡಿ ದೇಶದ ಉತ್ಪತ್ತಿ ಹೆಚ್ಚಿಸಬೇಕಾಗಿದೆ. ವಿದ್ಯಾಭ್ಯಾಸದ ಒಂದು ಬಾಬಿಗೆ ಈ ವರ್ಷ 43 ಕೋಟಿ ಖರ್ಚುಮಾಡುತ್ತಿದ್ದೇವೆ, ಪಬ್ಲಿಕ್ ವರ್ಕ್ಸ್ ಇಲಾಖೆಗೆ 34 ಕೋಟಿ ಖರ್ಚಿದೆ ಹೀಗೆ ಅಭಿವೃದ್ಧಿ ಕಾರ್ಯಗಳಿಗೆ ಕೋಟಿಗಟ್ಟಲೆ ಖರ್ಚುಮಾಡುವಾಗ ನಮ್ಮ ಮೇಲೆ ಹೊರೆ ಹೇರಿದರೆ ಅದನ್ನು ಹೊರುವುದಕ್ಕೆ ಹಿಂಜರಿಯಬಾರದು, ಹಿಂಜರಿದರೆ ನಾವು ಕರ್ತವ್ಯ ರೋಪ ಮಾಡಿದಂತಾಗುತ್ತದೆ. ಮುಖ್ಯವಾಗಿ ಈ ತೆರಿಗೆಯೇನಿದೆ ಅದನ್ನು ಯಾರಿಗೆ ಹೊರುವುದಕ್ಕೆ ಶಕ್ತಿಯಿದೆ, ಅವರಿಗೆ ಸಾಕಷ್ಟು ಹಾಕಿ ಅವರಿಂದ ಅದನ್ನು ವಸೂಲು ಮಾಡಬೇಕಾದ್ದು ಅವಶ್ಯಕ. ಮಾರಾಟ ತೆರಿಗೆಯಾಗಲಿ, ವ್ಯವಸಾಯ ವರಮಾನ ತೆರಿಗೆಯಾಗಲಿ, ಯಾವುದೇ ಆಗಲಿ, ಅವನ್ನು ದಕ್ಷತೆಯಿಂದ ವಸೂಲು ಮಾಡಬೇಕು. ಈಗ ಲೀಕೇಜಸ್ ಇದೆ; ಸಾಧ್ಯವಾದಮಟ್ಟಿಗೆ ಸರಕಾರದಿಂದ ಸಹಾಯ ಪಡೆದರೂ ತೆರಿಗೆ ತಪ್ಪಿಸಿಕೊಳ್ಳಬೇಕೆಂಬ ಮನೋಭಾವನೆ ಅನೇಕರಲ್ಲಿದೆ. ಹೀಗೆ ತಪ್ಪಿಸಿಕೊಳ್ಳುವುದಕ್ಕೆ ಸಾಧ್ಯವಿದೆ, ತಪ್ಪಿಸಿಕೊಳ್ಳುತ್ತಿರುವ ನಿದರ್ಶನಗಳೂ ಇವೆ. ಇದಕ್ಕೆ ಅವಕಾಶವಿರಬಾರದು. ಈ ಸಂದರ್ಭದಲ್ಲಿ ಅರ್ಬನ್ ಪ್ರಾಪರ್ಟಿ ಟ್ಯಾಕ್ಸ್ ವಿಚಾರದಲ್ಲಿ ನನ್ನ ಸ್ಪಷ್ಟವಾದ ಅಭಿಪ್ರಾಯವನ್ನು ಸೂಚಿಸುತ್ತೇನೆ. ಈ ತೆರಿಗೆ ವಿಚಾರದಲ್ಲಿ ಸರಕಾರ ಯಾವ ರಿಯಾಯಿತಿಯನ್ನೂ ಕೊಡದೆ ನಿರ್ದಾಕ್ಷಿಣ್ಯವಾಗಿ ಇದನ್ನು ವಸೂಲು ಮಾಡಿ ತನ್ನ ಉತ್ಪತ್ತಿ ಹೆಚ್ಚಿಸಿಕೊಳ್ಳಬೇಕು. ಇಂದು ಹಳ್ಳಿಗಾಡಿನಲ್ಲಿರುವ ರೈತರು ಕೊಡಬೇಕಾದ ಕಂದಾಯ 2—3 ವರ್ಷಗಳಿಂದ ಬಾಕಿ ಇರುವುದನ್ನು ಜರೂರಾಗಿ ವಸೂಲು ಮಾಡಬೇಕು, ಅದಕ್ಕೆ ತಕ್ಕ ಕ್ರಮ ಕೈಕೊಳ್ಳಬೇಕು ಎಂದು ಸರಕಾರ ಅಧಿಕಾರಿಗಳಿಗೆ ಆಜ್ಞೆ ಮಾಡಿದೆ. ಜನರು ಒಂದೇ ಸಲ ಇರುವ ಬಾಕಿಯನ್ನು ಕೊಡುವುದಕ್ಕಾಗದೆ ಪರಿತಪಿಸುತ್ತಿದ್ದಾರೆ. ಆದರೆ ಕಂದಾಯ ಅವರಿಂದ ವಸೂಲುಮಾಡಬಾರದೆಂದು ನಾನು ಹೇಳುವುದಿಲ್ಲ. ಈ ವಿಚಾರದಲ್ಲಿ ರಿಯಾಯಿತಿ ತೋರಿ ಕಂತುಗಳ ಮೂಲಕ ಅದನ್ನು ವಸೂಲುಮಾಡಬೇಕೆಂದು ಸಲಹೆ ಮಾಡುತ್ತೇನೆ. ಹಾಗೆ ಮಾಡಿ ಸಂಪನ್ಮೂಲಗಳನ್ನು ಹೆಚ್ಚಿಸಿಕೊಳ್ಳಬಹುದು. ಇದರ ಜೊತೆಗೆ ವಾಟರ್ ರೇಟ್ ಮತ್ತು ಕಂಟ್ರಿಬ್ಯೂಷನ್ನನ್ನು ಕೆಲವು ಭಾಗಗಳಲ್ಲಿ ಸರಿಯಾಗಿ ವಸೂಲುಮಾಡುವದಿಲ್ಲ. ಇದನ್ನು ಸಚಿವರೇ ಹೇಳಿದ್ದಾರೆ. ಇದನ್ನು ನಿರ್ದಾಕ್ಷಿಣ್ಯವಾಗಿ ವಸೂಲು ಮಾಡಬೇಕು. ಮುಂದುವರೆದ ಎಲ್ಲ ರಾಷ್ಟ್ರಗಳಲ್ಲೂ ಪ್ರಜೆಗಳಿಗೆ ಎಷ್ಟು ಸೌಕರ್ಯ ಕೊಡಬೇಕೋ ಅದನ್ನು ಕೊಟ್ಟು ಆಷ್ಟೇ ಮಟ್ಟದಲ್ಲಿ ಅವರಿಂದ ತೆರಿಗೆ ರೂಪದಲ್ಲಿ ಹಣ ಪಡೆದು ಉತ್ಪತ್ತಿ ಹೆಚ್ಚಿಸಿಕೊಳ್ಳುತ್ತಿದ್ದಾರೆ. ಅಮೆರಿಕಾದಲ್ಲಿ, ಈಗ ಬಹಳ ಶ್ರೀಮಂತರಿರುವ ಆ ದೇಶದಲ್ಲಿ ಬರುವ ಉತ್ಪತ್ತಿ, ಕೊಡುವ ತೆರಿಗೆ ಹೋಲಿಕೆ ಮಾಡಿದರೆ ಬಹುಶಃ ಬರುವ ಆದಾಯದಲ್ಲಿ ಬಹು ಭಾಗ ತೆರಿಗೆ ರೂಪದಲ್ಲಿ ಸರಕಾರಕ್ಕೆ ಕೊಡುತ್ತಿದ್ದಾರೆ. ಈ ದೃಷ್ಟಿಯಿಂದ ಹಣಕಾಸಿನ ಸಚಿವರ ಮೇಲೆ ಹೆಚ್ಚು ವಿಶ್ವಾಸವಿಟ್ಟು ಜನರು ತೆರಿಗೆ ಕೊಡುತ್ತಾರೆಂದು ನಾನು ನಂಬುತ್ತೇನೆ. ಹಾಗೆ ಕೊಡದಿದ್ದರೆ ಬಹಳ ಕಷ್ಟವಾಗುತ್ತದೆ, ನಮ್ಮ ಅಭಿವೃದ್ಧಿ ಕಾರ್ಯಗಳು ಕುಂಠಿತವಾಗಿ ನಾವೇನು ಈ ವರ್ಷ ಸಾಧಿಸಬೇಕೆಂದಿದ್ದೇವೆ ಅದನ್ನು ಸಾಧನೆ ಮಾಡುವುದಕ್ಕೆ

(ಶ್ರೀ ಡಿ. ಎಂ. ಸಿದ್ದಯ್ಯ)

ಬಹಳ ಕಷ್ಟವಾಗುತ್ತದೆ. ಇದನ್ನು ಸ್ಪಷ್ಟವಾಗಿ ನಾನು ಹೇಳುತ್ತೇನೆ ಮತ್ತು ಹಣಕಾಸಿನ ಸಚಿವರು ಈ ತೆರಿಗೆಗಳನ್ನು ಯಾವ ರೀತಿ ವಸೂಲುಮಾಡಬೇಕು ಎಂಬುದನ್ನು ವಿಚಾರ ಮಾಡಲು ಒಂದು ಸಮಿತಿಯನ್ನು ರಚಿಸಿದ್ದಾರೆ, ಮಾನ್ಯ ಭೂತಲಿಂಗಂ ಅಧ್ಯಕ್ಷತೆಯಲ್ಲಿ ಅದು ಕೆಲಸ ಮಾಡುತ್ತಿದೆ. ಬಹುಶಃ ಆ ಸಮಿತಿಯು ಅಮೂಲ್ಯವಾದ ಸಲಹೆಗಳನ್ನು ಕೊಟ್ಟಮೇಲೆ ಯಾವ ರೀತಿ ತೆರಿಗೆ ಹಾಕಬೇಕು, ಯಾವ ರೀತಿ ವಸೂಲುಮಾಡಬೇಕು ಎಂಬುದನ್ನು ಸರಕಾರ ಗಮನಿಸಬಹುದು. ಈ ಬಜೆಟ್ಟಿನಲ್ಲಿ ತೆರಿಗೆ ಹಾಕುವುದನ್ನು ಯೋಚನೆ ಮಾಡುತ್ತಿದ್ದಾರೆ. ಬಹುಶಃ ಇನ್ನೂ ಸರಿಯಾದ ರೀತಿಯಲ್ಲಿ ಒಂದು ಚೆಕ್ನಿಕರ್ ಒಪೀನಿಯನ್ ಪಡೆದು ಸರಿಯಾದ ರೀತಿಯಲ್ಲಿ ಸಂಪನ್ಮೂಲಗಳನ್ನು ಹೆಚ್ಚಿಸಬೇಕೆಂದು ರೈತರ ಹಿತದೃಷ್ಟಿಯಿಂದ ಈ ರೀತಿ ಮಾಡಿದ್ದಾರೆ. ಭೂತಲಿಂಗಂ ಸಮಿತಿಯವರು ಸರಿಯಾದ ಸಲಹೆ ಕೊಟ್ಟು ಸರಕಾರಕ್ಕೆ ಹೆಚ್ಚು ಹಣ ಬರುವಹಾಗೆ ಸೂಕ್ತ ಸಲಹೆ ನೀಡುತ್ತಾರೆ ಎಂದು ನಾನು ನಂಬಿದ್ದೇನೆ. ಸರಕಾರದವರು ಅಭಿವೃದ್ಧಿ ಕಾರ್ಯಗಳಿಗೆ ಹಣ ಖರ್ಚು ಮಾಡುವುದಕ್ಕೆ ಪ್ರಯತ್ನ ಪಟ್ಟಿದ್ದಾರೆ, ಪ್ರಾಮುಖ್ಯವಾಗಿ ನೀರಾವರಿಗೆ ಸಂಬಂಧಪಟ್ಟಂತೆ ಸಾಕಷ್ಟು ಪ್ರಾಜೆಕ್ಟುಗಳನ್ನು ಮಾಡುವುದಕ್ಕೆ ಸರಕಾರದಲ್ಲಿ ಹಣವಿಲ್ಲ. ಅವರು ಎಲ್ಲಾ ಯೋಜನೆಗಳಿಗೂ ಹಣ ಒದಗಿಸುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಆದರೆ ಯಾವ ನೀರಾವರಿ ಯೋಜನೆಯೂ ಕೂಡ ಪೂರ್ಣ ಫಲ. ಕೊಡುವ ಸ್ಥಿತಿಯಲ್ಲಿಲ್ಲ, ಘಟಪ್ರಭ, ಮಲಪ್ರಭ ಬಿಟ್ಟು ಉಳಿದ ಪ್ರಾಜೆಕ್ಟುಗಳು ದೊಡ್ಡ ದೊಡ್ಡ ಯೋಜನೆಗಳು ಹಣದ ಅಭಾವದಿಂದ ಕಾರ್ಯರೂಪಕ್ಕೆ ಬಂದಿಲ್ಲ. ಈ ಸಾರಿ ಸರಕಾರ ರಾಜ್ಯದ ನೀರಾವರಿ ಕಾರ್ಯಗಳಿಗೆ 12 ಕೋಟಿ 83 ಲಕ್ಷ ಕೊಟ್ಟಿದೆ. ಅದರಲ್ಲಿ ಘಟಪ್ರಭ ಯೋಜನೆಗೆ 2 ಕೋಟಿ, ಮಲಪ್ರಭ ಯೋಜನೆಗೆ 2 ಕೋಟಿ 45 ಲಕ್ಷ ಅಷ್ಟರ್ ಕೃಷ್ಣಾ ಪ್ರಾಜೆಕ್ಟಿಗೆ 2 ಕೋಟಿ ಕೊಡಲಾಗಿದೆ. ಅದಾದಮೇಲೆ ಉಳಿಯುವುದು 7 ಕೋಟಿ. ಹೀಗಾದರೆ ಪ್ರಾಜೆಕ್ಟುಗಳು ಮುಗಿಯಲು ಬಹಳ ಕಾಲ ಬೇಕು. ಹಣವೆಲ್ಲಾ ಹರಿದು ಹಂಚಿಹೋಗಿದೆ. ಆದಕ್ಕೆ ನಾನು ಸಲಹೆಮಾಡುವುದು ಸ್ವಲ್ಪ ಹಣದಲ್ಲಿ ಇರುವ ನೀರಾವರಿ ಯೋಜನೆಗಳನ್ನು ಜಾಗ್ರತೆ ಪೂರ್ಣಮಾಡಲು ಸಾಧ್ಯವಿಲ್ಲದಿರುವುದರಿಂದ ಜನರು ತಾವಾಗಿಯೇ ಮುಂದೆ ಬಂದು ತಮ್ಮ ವಂತಿಗೆಯನ್ನು ಕೊಡುತ್ತಿದ್ದಾರೆ, ಕಾವೇರಿ ಬೇಸಿನ್‌ನಲ್ಲಿ ದೊಡ್ಡ ಪ್ರಾಜೆಕ್ಟುಗಳಿವೆ, ಕಪಿನಿ, ಹೇಮಾವತಿ, ಗುಂಡಲ ಪ್ರಾಜೆಕ್ಟುಗಳು ಮುಂತಾದವು ಇವೆ, ಅವೆಲ್ಲಾ 1974 ನೇ ಇಸವಿಯೊಳಗೆ ಮುಗಿಯಬೇಕು, ಇಲ್ಲದಿದ್ದರೆ ನಮ್ಮ ಹಕ್ಕು ಹೊರಟುಹೋಗುವುದು. ಆದರೆ ಸರಕಾರ ಆ ಕೆಲಸಗಳಿಗೆ 50 ಲಕ್ಷ ಕೊಟ್ಟರೆ ಇರುವ ಕಾಲಾವಧಿಯೊಳಗೆ ಪೂರ್ಣಮಾಡಲು ಸಾಧ್ಯವಾಗುವುದಿಲ್ಲ. ಈಗಾಗಲೆ ಹಾರಂಗಿ ಪ್ರಾಜೆಕ್ಟಿಗೆ ಸಂಬಂಧಪಟ್ಟ ಜನರು ಮುಂದೆ ಬಂದು ಅಡ್ವಾನ್ಸಾಗಿ ಹಣ ಕೊಡಲು ಸಿದ್ಧರಾಗಿದ್ದಾರೆ. ಕೃಷ್ಣ ಪ್ರಾಜೆಕ್ಟ್ ಬಲದಂಡೆ ರೈತರಿಂದ ಹಣ ಮುಂದಾಗಿ ಕೊಡಲು ಅಶ್ವಾಸನೆ ಬಂದಿದೆ. ಅದೇ ರೀತಿಯಲ್ಲಿ ಕಾವೇರಿ ಬೇಸಿನ್ ಹಾರಂಗಿ ಪ್ರದೇಶದ ರೈತರು ಒಂದು ಸಭೆ ಸೇರಿ ಅಡ್ವಾನ್ಸ್ ಕಾಂಟ್ರಿಬೂಷನ್ ಕೊಡುವುದಾಗಿ ಮನವಿ ಮಾಡಿದ್ದಾರೆ. ಹೇಮಾವತಿ, ಕಂಬದಕಡ ಇತ್ಯಾದಿ ದೊಡ್ಡ ದೊಡ್ಡ ಯೋಜನೆಗಳಿಂದ ಯಾರಿಗೆ ಸಹಾಯವಾಗುವುದೋ ಅವರು ಅಡ್ವಾನ್ಸ್ ಕಂಟ್ರಬ್ಯೂಷನ್ ಕೊಟ್ಟರೆ ಪ್ರಾಜೆಕ್ಟುಗಳ ಕೆಲಸವನ್ನು ತೆಗೆದುಕೊಳ್ಳಬಹುದು. ಹಾಗೆ ಮಾಡದಿದ್ದರೆ ಬಹುಶಃ 10-20 ವರ್ಷಗಳಾದರೂ ಯೋಜನೆಗಳ ಕೆಲಸವಾಗಿ ಜನರಿಗೆ ಸಹಾಯವಾಗುವುದಿಲ್ಲ ಎಂಬುದು ನನ್ನ ಅಭಿಪ್ರಾಯ. ಆದುದರಿಂದ ಈ ರೀತಿಯಾಗಿ ಅಲ್ಪ ಸ್ವಲ್ಪ ಹಂಚುವುದಕ್ಕೆ ಬದಲಾಗಿ 12 ಅಥವಾ 13 ಕೋಟಿಯಲ್ಲಿ ಕೃಷ್ಣ ಯೋಜನೆಗೆ 8 ಕೋಟಿಯನ್ನು ಕೊಟ್ಟು ಕಾವೇರಿ ಬೇಸಿನ್ ಪ್ರಾಜೆಕ್ಟುಗಳಿಗೆ ಉಳಿದುದನ್ನು ಕೊಟ್ಟರೆ ಅನುಕೂಲವಾಗುತ್ತದೆ ಎಂದು ನಾನು ಸಲಹೆ ಮಾಡುತ್ತೇನೆ. ಹೀಗೆ ಮಾಡಿದರೆ ಜಾಗ್ರತೆ ಕೆಲಸವೂ ಆಗುತ್ತದೆ, ಜನರಿಗೆ ಸರಿಯಾದ ಸಹಾಯವೂ ಆಗುತ್ತದೆ. ಈಗ 60 ಲಕ್ಷ ಕಪಿನಿ ಪ್ರಾಜೆಕ್ಟಿಗೆ ಕೊಟ್ಟಿದ್ದಾರೆ, ಅದಕ್ಕೆ 30 ಕೋಟಿ ಬೇಕಾಗಿರುವಾಗ ಇಷ್ಟು ಸ್ವಲ್ಪ ಕೊಡುತ್ತಾ ಬಂದರೆ ಆ ಯೋಜನೆ ಪೂರ್ಣಮಾಡಲು 60 ವರ್ಷ ಬೇಕು. ಇದರಿಂದ ಯಾವ ಬಗೆಯ ಪ್ರಯೋಜನವಾಗುವುದಿಲ್ಲ. ಕೇಂದ್ರ ಸರಕಾರವು ನಮಗೆ ಸಹಾಯ ಮಾಡುವಾಗ ಮಲತಾಯಿ ಧೋರಣೆ ತೋರಿಸುತ್ತಿದೆ, ಇದು ಎಲ್ಲರಿಗೂ ಗೊತ್ತಿದೆ.

ಶ್ರೀ ಡಿ. ದೇವರಾಜ ಅರಸ್.—ಯಾವುವಾದರೂ ಒಂದು ಪ್ರಾಜೆಕ್ಟ್‌ಗೆ ದುಡ್ಡು ಕೊಡಿ ಎಂದರೆ ದುಡ್ಡಿಲ್ಲ ಎಂದು ಹೇಳುತ್ತಾರೆ. ಅದಕ್ಕೇ ನಾನು ಒಂದು ಸಲಹೆ ಮಾಡಿದೆ. ಕಾವೇರಿ ಬೇಸನ್‌ನಲ್ಲಿ ಇರತಕ್ಕ ಕಷ್ಟ ಏನು ಎಂಬುದನ್ನು ಮಾನ್ಯ ಸದಸ್ಯರು ಗಮನದಲ್ಲಿಟ್ಟುಕೊಂಡು ಮಾತನಾಡಿದರೆ ಒಳ್ಳೆಯದು. ಕಾವೇರಿ ಬೇಸಿನ್‌ನಲ್ಲಿರತಕ್ಕ ಯಾವುದೇ ಪ್ರಾಜೆಕ್ಟ್ ಆಗಲಿ, 1974ರ ಅಗ್ರಿಮೆಂಟ್ ಮುಗಿಯುವುದರೊಳಗೆ ನಾವು ನಿರ್ಮಾಣ ಮಾಡಿಕೊಳ್ಳಬೇಕು. ಅದನ್ನು ಗಮನದಲ್ಲಿಟ್ಟುಕೊಂಡು ದಯವಿಟ್ಟು ಯೋಚನೆ ಮಾಡಿ.

ಶ್ರೀ ಡಿ. ಎಂ. ಸಿದ್ದಯ್ಯ.—ಆ ದೃಷ್ಟಿಯಿಂದಲೇ ನಾನು ಹೇಳಿದ್ದು, ಹಾರಂಗಿ ಆಗಲಿ, ಕೃಷ್ಣಾ ಪ್ರಾಜೆಕ್ಟ್ ಆಗಲಿ ಅದಕ್ಕೆ ಹಣ ಅಡ್ವಾನ್ಸ್ ಮಾಡುತ್ತೇವೆ ಅಂತ ಅನ್ನುವುದರಿಂದ ಏನು ಗೊತ್ತಾಗುತ್ತದೆ ? ಅವುಗಳನ್ನು ತೆಗೆದುಕೊಳ್ಳುವುದಕ್ಕೆ ಸಿದ್ಧವಾಗಿದ್ದೇವೆ ಎನ್ನುವುದು ಸ್ಪಷ್ಟವಾಗುತ್ತದೆ. ಈಗ 12 ಕೋಟಿ ರೂಪಾಯಿ ಇದೆ ಅದನ್ನು ಯಾವ ಪ್ರಾಜೆಕ್ಟಿಗೆ ಹಾಕಿ ಪೂರೈಸಬೇಕು ?

ಶ್ರೀ ಡಿ. ದೇವರಾಜಅರಸ್.—12 ಕೋಟಿ ರೂಪಾಯಿ ಇದೆ ಅನ್ನುವುದು ಗೊತ್ತಿದೆ. ಅದನ್ನು 24 ಕೋಟಿ ರೂಪಾಯಿ ಮಾಡುವುದು ಹೇಗೆ ಅನ್ನುವುದನ್ನು ನಾವು ನೀವು ಕೂಡಿ ಯೋಚನೆ ಮಾಡೋಣ. ಯಾವುದಕ್ಕೆ ಕೇಳಿದರೂ ದುಡ್ಡು ಕೊಡುವುದಿಲ್ಲ, ದುಡ್ಡಿಲ್ಲವೇ ಇಲ್ಲವೇನೋ ಎಂಬುದನ್ನು ಎಲ್ಲರೂ ಹೇಳುತ್ತಾರೆ, ನಿಮ್ಮ ಸಲಹೆ ಹೇಳಿ, ನಮ್ಮ ಸಲಹೆಯನ್ನು ಹೇಳುತ್ತೇನೆ. 12 ಕೋಟಿಗೆ ಬದಲಾಗಿ 24 ಕೋಟಿ ರೂಪಾಯಿಗಳನ್ನು ಒದಗಿಸಿಕೊಳ್ಳುವ ಸಾಧನ ಯೋಚನೆ ಮಾಡೋಣ.

ಶ್ರೀ ಡಿ. ಎಂ. ಸಿದ್ದಯ್ಯ.—ಸಂಪನ್ಮೂಲಗಳನ್ನು ಹೆಚ್ಚುಮಾಡಿಕೊಳ್ಳುವ ಕಮಿಟಿ ಇದೆ, ಹಣಕಾಸಿನ ಸಚಿವರು ಅದಕ್ಕೆ ಕನ್‌ವೀನರು ಆಗಿದ್ದಾರೆ. ಆ ಕಮಿಟಿಯಲ್ಲಿ ನಮ್ಮ ಸಲಹೆಗಳನ್ನು ಇಡೋಣ. ಈಗ ಬೃಹತ್ ಪ್ರಾಜೆಕ್ಟ್‌ಗಳನ್ನು ಕಟ್ಟಿ ಪೂರೈಸಬೇಕಾದರೆ ಕೇಂದ್ರ ಸರ್ಕಾರದವರು ಒಪ್ಪಬೇಕು. ಅಪ್ಪರ್ ಕೃಷ್ಣಾ ಪ್ರಾಜೆಕ್ಟ್‌ನ್ನು ರಾಷ್ಟ್ರೀಯ ಯೋಜನೆಯನ್ನಾಗಿ ಮಾಡಿ ಆಂಧ್ರದವರು ನಾಗಾರ್ಜುನ ಸಾಗರವನ್ನು ಕಟ್ಟುವುದಕ್ಕೆ ಹೇಗೆ ಸಲಹೆ ಮಾಡಿದರೋ ಹಾಗೆ ಸಲಹೆ ಮಾಡತಕ್ಕ ಕಾರ್ಯದಲ್ಲಿ ಯಶಸ್ವಿಯಾದರೆ ಉಳಿದ ಹಣದಿಂದ ಸಂಪನ್ಮೂಲಗಳನ್ನು ಹೊಂದಿಸಿಕೊಂಡು ಆ ಪ್ರಾಜೆಕ್ಟ್‌ನ್ನು 1974 ರೊಳಗೆ ಮುಗಿಸುವುದಕ್ಕೆ ಸಾಧ್ಯವಾಗಬಹುದು. ಅಂತಹ ಡಿಟ್ಟವಾವ ಕೆಲಸವನ್ನು ಸರ್ಕಾರದವರು ಮಾಡುವುದಕ್ಕೆ ಅವರು ಸಿದ್ಧರಾಗಬೇಕು. ಕೇಂದ್ರ ಸರ್ಕಾರದವರು ನಮ್ಮ ಸರ್ಕಾರದ ವಿಷಯದಲ್ಲಿ ಈಗ ಮಲತಾಯಿ ಧೋರಣೆಯನ್ನು ಹೊಂದಿದ್ದಾರೆ. ಮೈಸೂರು ರಾಜ್ಯದಲ್ಲಿ ಎರಡು ಕೋಟಿ ಜನರು ಪಾಸವಾಗಿಲ್ಲವೆ ? ಜನರಿಂದ ಚುನಾಯಿತರಾದ ಸರ್ಕಾರ ಇಲ್ಲವೇ ? ಕೇಂದ್ರದವರು ಮತ್ತೆ ಬೇರೆ ಸರ್ಕಾರದವರಿಗೆ ಕೊಡತಕ್ಕ ಮಾನ್ಯತೆಯನ್ನು ನಮ್ಮ ಜನಕ್ಕೆ ಕೊಡುವುದಿಲ್ಲ ಎಂಬ ವಿಷಯವನ್ನು ನಮ್ಮ ಸರ್ಕಾರದವರು ಇವತ್ತು ಕೇಂದ್ರ ಸರ್ಕಾರದ ಮುಂದೆ ಇಟ್ಟು ಈ ಒಂದು ದೊಡ್ಡ ಪ್ರಾಜೆಕ್ಟನ್ನಾದರು ಕಟ್ಟುವ ಕೆಲಸವನ್ನು ಮಾಡಿದರೆ ಒಳ್ಳೆಯದು. ಅದೇ ರೀತಿ ಕಾವೇರಿ ಬೇಸಿನ್‌ನಲ್ಲಿರತಕ್ಕ ಎರ್ಲಾ ಪ್ರಾಜೆಕ್ಟ್‌ಗಳನ್ನೂ ಕಟ್ಟಿ ಮುಗಿಸುವುದಕ್ಕೆ ನನ್ನ ಸಲಹೆ ಯಾದರೂ ಕೂಡ ಸಂಪನ್ಮೂಲಗಳನ್ನು ಹೊಂದಿಸಬಾರದು ಎಂದು ಅಲ್ಲ, ಅದನ್ನು ಹೊಂದಿಸುವುದರ ಜೊತೆಗೆ ಜನಗಳು ಮುಂದೆ ಬಂದು ಯಾರು ಅಡ್ವಾನ್ಸ್ ಕಾಂಟ್ರಿಬ್ಯೂಷನ್ ಕೊಡುತ್ತೇವೆ ಎಂದು ಹೇಳುತ್ತಾರೆ. ಅಂತಹ ಪ್ರಾಜೆಕ್ಟುಗಳಿಗೆ ಸರ್ಕಾರದವರು ನೇರವಾಗಿ ಬ್ಯಾಂಕುಗಳ ಮೂಲಕವಾಗಿ ಆಗಲಿ ಅಥವಾ ಕಾರ್ಪೊರೇಷನ್ ಮೂಲಕವಾಗಿಯಾಗಲಿ ಸಹಾಯ ಮಾಡಬೇಕು.

ಶ್ರೀ ಡಿ. ದೇವರಾಜಅರಸ್.—ಹಣ ಇಲ್ಲ ಅನ್ನುವುದು ಎಲ್ಲರಿಗೂ ಗೊತ್ತಿದೆ. ನಾಗಾರ್ಜುನ ಸಾಗರವನ್ನು ಕಟ್ಟಬೇಕಾದರೆ ಆಂಧ್ರ ಸರ್ಕಾರದವರು ಎಷ್ಟೋ ವರ್ಷಗಳ ಕಾಲ ಅವರ ದೇಶದಲ್ಲಿ ರಸ್ತೆಗಳಿಗೆ ಇಟ್ಟಿದ್ದಂತಹ ಹಣವನ್ನೆರ್ಲಾ ಅದಕ್ಕೇ ವಿನಿಯೋಗಿಸಿದರು. ಅದೇ ರೀತಿ ನಾವು ಕೆಲವು ಖರ್ಚು ಬಾಬನ್ನು ನಿಲ್ಲಿಸುವ ವಿಚಾರದಲ್ಲಿ ಸರ್ಕಾರದವರಿಗೆ ತಿಳಿವಳಿಕೆ ಹೇಳೋಣ ಅಥವಾ ಸಲಹೆ ಕೊಡೋಣ.

ಶ್ರೀ ಡಿ. ಎಂ. ಸಿದ್ದಯ್ಯ.—ಮಾನ್ಯ ಸ್ನೇಹಿತರಿಗೆ ಚರರುಣಿಯಾಗಿದ್ದೇನೆ; ಉದ್ದೇಶಪೂರ್ವಕವಾಗಿ 4–5 ವರ್ಷಗಳ ನನ್ನ ಬಡ್ಜೆಟ್ ಭಾಷಣದಲ್ಲಿ ಈ ವಿಷಯವನ್ನು ಹೇಳಿದ್ದೇನೆ. ಆಗಿನ ಪಿ.ಡಬ್ಲ್ಯು.ಡಿ. ಮಿನಿಸ್ಟರು ಮತ್ತು ಈಗಿನ ಮುಖ್ಯಮಂತ್ರಿಗಳು ನಾನು ಹೇಳಿದ್ದನ್ನು, ನಿಜ ಎಂದು ಪುಷ್ಟೀಕರಿಸಿ ರಸ್ತೆಗಳ ಕೆಲಸವನ್ನು ನಿಲ್ಲಿಸಬೇಕು, ಸೇತುವೆಗಳ ಕೆಲಸವನ್ನು ನಿಲ್ಲಿಸಬೇಕು ಆ ಹಣವನ್ನೆರ್ಲಾ ಇದಕ್ಕೆ ವಿನಿಯೋಗಿಸಬೇಕೆಂದು ಹೇಳಿದ್ದಾರೆ. ಆಗಬಹುದು ಎಂದು ಒಪ್ಪಿಕೊಂಡಿದ್ದಾರೆ. ಶ್ರೀಮಾನ್ ಅರಸ್‌ರವರು ಇದ್ದಂಥ ಆ ಮಂತ್ರಿಮಂಡಲ ಅದನ್ನು ಹಾರಿಗೆ ತರಲಿಲ್ಲ. ಆದ್ದರಿಂದ ಆ ವಿಷಯವನ್ನು ನಾನು ಈಗಲೂ ಕೂಡ ಬಹಳ ಅಗ್ರಹಪೂರ್ವಕವಾಗಿ ಸರ್ಕಾರದವರಿಗೆ ಸಲಹೆ ಮಾಡುತ್ತೇನೆ ರಸ್ತೆಗಳ ನಿರ್ಮಾಣವನ್ನು ನಿಲ್ಲಿಸಿ, ಸೇತುವೆಗಳ ನಿರ್ಮಾಣವನ್ನು ನಿಲ್ಲಿಸಿ ಮತ್ತು ಕಟ್ಟಡಗಳ ನಿರ್ಮಾಣವನ್ನು ನಿಲ್ಲಿಸಿ ಆ ಹಣವನ್ನೆರ್ಲಾ ವಿನಿಯೋಗಿಸಿ ಆಂಧ್ರದವರು ನಾಗಾರ್ಜುನ ಸಾಗರವನ್ನು ಯಾವ ರೀತಿ ಕಟ್ಟಿದರೋ ಆ ರೀತಿ ಈ ಪ್ರಾಜೆಕ್ಟುಗಳನ್ನು ಕಟ್ಟೋಣ. ಅದರ ಜೊತೆಗೆ ನಮ್ಮ ಸಂಪನ್ಮೂಲಗಳನ್ನು ಹೆಚ್ಚು ಮಾಡುವುದಕ್ಕೆ ಭೂತಲಂಗಂ ಕಮಿಟಿಯವರ ಸಲಹೆಯ ಪ್ರಕಾರ ತೆರಿಗೆಗಳನ್ನು ಅಲ್ಪಸ್ವಲ್ಪ ಜಾಸ್ತಿ ಮಾಡಿ ಈ ನೀರಾವರಿ ಬಗ್ಗೆ ಎಷ್ಟು ಕೆಲಸ ಮಾಡಬಹುದೋ ಅಷ್ಟನ್ನು ಮಾಡೋಣ. ಈ ವಿಷಯದಲ್ಲಿ ಈ ಮಾನ್ಯ ಸಭೆಯ ಸಂಪೂರ್ಣವಾದಂತಹ ಬೆಂಬಲ ಇದೆ.

(ಶ್ರೀ ಡಿ. ಎಂ. ಸಿದ್ದಯ್ಯ)

ನನ್ನ ಪರವಾಗಿ ನಾನು ಹೇಳುವುದಾದರೆ ನಾನು ಶಾಸಕನಾಗಿರುವ ನನ್ನ ಕಾನ್‌ಸ್ಟಿಟ್ಯೂಯನ್ಸಿಯಲ್ಲಿ ನಾವು ಯಾವ ರಸ್ತೆ, ಸೇತುವೆ, ಕಟ್ಟಡಗಳನ್ನೂ ಕೇಳುವುದಿಲ್ಲ ಎಂದು ನಾನು ಸ್ಪಷ್ಟವಾಗಿ ಸರ್ಕಾರದವರಿಗೆ ಹಾಗೂ ಶ್ರೀಮಾನ್ ಅರಸ್‌ರವರಿಗೆ ತಮ್ಮ ಮೂಲಕ ತಿಳಿಸುವುದಕ್ಕೆ ಇಚ್ಛೆ ಪಡುತ್ತೇನೆ.

ಇದು ಬಹಳ ಪ್ರಾಮುಖ್ಯವಾದಂಥ ವಿಚಾರ. ಅವರು ಹೇಳಿದ ವಿಚಾರ ಸಹಜವಾಗಿದೆ. ನಾವು ವಾರ್ ಫುಟಿಂಗ್‌ದಲ್ಲಿ ಈ ಕಾರ್ಯ ಮಾಡದಿದ್ದರೆ ಇಂತಹ ಮಹತ್ಕಾರ್ಯವನ್ನು ಮಾಡುವುದಕ್ಕಾಗುವುದಿಲ್ಲ. ನಾವು ನಾಗಾರ್ಜುನ ಸಾಗರವನ್ನು ನೋಡಿದಾಗ ಒಂದು ಕಡೆ ಸಂತೋಷವಾಗುತ್ತದೆ, ಇನ್ನೊಂದು ಕಡೆ ದುಃಖವಾಗುತ್ತದೆ. ಅವರು ಅದನ್ನು ಕಟ್ಟಿದ್ದಕ್ಕೆ ನಮಗೆ ಸಂತೋಷವಾಗುತ್ತದೆ. ಅದು ಮೇಲ್ದಂಡೆಯಲ್ಲಿರುವ ನಾವು ಕೃಷ್ಣಾ ಪ್ರಾಜೆಕ್ಟನ್ನು ಕಟ್ಟಲಿಲ್ಲವಲ್ಲಾ ಎಂದು ನಮಗೆ ದುಃಖವಾಗುತ್ತದೆ. ಅದರಲ್ಲಿ 30 ಲಕ್ಷ ಎಕರೆ ನೀರಾವರಿಯಾಗುತ್ತದೆ. ಈಗಾಗಲೇ 5 ಲಕ್ಷ ಎಕರೆಗೆ ನೀರು ಕೊಡುತ್ತಿದ್ದಾರೆ ಇದನ್ನು ಕಟ್ಟಲು 130 ಕೋಟಿ ರೂಪಾಯಿಗಳನ್ನು ಖರ್ಚುಮಾಡಿದ್ದಾರೆ. ಹೀಗೆ ಕೋಟ್ಯಾಂತರ ರೂಪಾಯಿಗಳನ್ನು ಸಾಲ ಪಡೆದು ; ಸರ್ಕಾರದಿಂದ ಇತರ ತೀರ್ತಿಯಲ್ಲಿ ಸಹಾಯಗಳನ್ನು ಪಡೆದು, ನಮ್ಮ ಸಂಪನ್ಮೂಲಗಳನ್ನು ಹೆಚ್ಚಿಸಿಕೊಂಡು ಎಲ್ಲಾ ರಿಸೋರ್ಸ್‌ನಿಂದ ಪೂಲಪ್ ಮಾಡಿ ಈ ಕೃಷ್ಣಾದಂತೆ ಕಟ್ಟಬೇಕಾಗಿದೆಯೇ ಹೊರತು ಕೇವಲ ಒಂದು, ಎರಡು ಮೂರು ಕೋಟಿ ರೂಪಾಯಿಗಳಲ್ಲಿ ಇದನ್ನು ಕಟ್ಟುತ್ತೇವೆಂದರೆ. ಈ ಕೆಲಸವಾಗುವುದಿಲ್ಲ. ಇದರ ಬಗ್ಗೆ ಬಹಳ ದಿಟ್ಟತನದಿಂದ, ಬಹಳ ಕಡ್ಡಾಯ ಮನಸ್ಸಿನಿಂದ ಒಂದು ತೀರ್ಮಾನವನ್ನು ತೆಗೆದುಕೊಳ್ಳಬೇಕು. ಮುಂಚನಬೆರೆ ಪ್ರಾಜೆಕ್ಟ್ ಕೆಲಸವನ್ನೂ ಸಹ ಮಾಡಬೇಕು. ರಸ್ತೆಗಳು, ಸೇತುವೆಗಳು ಮತ್ತು ಇತರ ಕಟ್ಟಡಗಳು ಇಲ್ಲದಿದ್ದರೆ ಜನ ಸಾಯುವುದಿಲ್ಲ. ಮುಂದಿನ ಪೀಳಿಗೆ ಇವತ್ತು ನಾವು ಆಹಾರ ಸಮಸ್ಯೆಯನ್ನು ಬಗೆಹರಿಸದಿದ್ದರೆ ಖಂಡಿತವಾಗಿ ನಮ್ಮನ್ನು ಶಪಿಸುತ್ತಾರೆ. ಇಂತಹ ಸಂದರ್ಭದಲ್ಲಿ ಸರ್ಕಾರದವರು ದಿಟ್ಟ ನಿಲುವನ್ನು ತೆಗೆದುಕೊಂಡು ಇದನ್ನು ಮಾಡಬೇಕು.

5-30. P.M.

ಇನ್ನು ಕೈಗಾರಿಕೆಗಳ ವಿಚಾರ. ಪಬ್ಲಿಕ್ ಸೆಕ್ಟರ್‌ನಲ್ಲಿ ಬಹಳ ಹಣ ರಾಕಪ್ ಮಾಡಿದ್ದಾರೆ. ಇದರಿಂದ ಬಹಳ ನಷ್ಟವಾಗುತ್ತದೆ. ಪ್ರೈವೇಟ್ ಸೆಕ್ಟರ್‌ಗೆ ಪ್ರೋತ್ಸಾಹ ಕೊಡುವಂತೆ ಹೇಳಿದ್ದಾರೆ.

ಶ್ರೀ ಅಜೀಜ್ ಸೇಟ್ (ನರಸಿಂಹರಾಜ).—ಪ್ರೈವೇಟ್ ಸೆಕ್ಟರ್‌ನಲ್ಲಿಯೂ ಲಾಭ ಬರುವುದು.

ಶ್ರೀ ಡಿ. ಎಂ. ಸಿದ್ದಯ್ಯ.—ಇವತ್ತು ಪಬ್ಲಿಕ್ ಸೆಕ್ಟರ್‌ನಲ್ಲಿ ನಷ್ಟ ಬರುವುದು ಇದ್ದರೂ ಇವತ್ತು ಅಲ್ಲಿ ಸರ್ಕಾರದ ಷೇರುಗಳು ಇರುತ್ತವೆ. ಖಾಸಗೀ ಮನುಷ್ಯರ ಹತೋಟಿ ಇರುತ್ತದೆ. ಪಬ್ಲಿಕ್ ಸೆಕ್ಟರ್‌ನಲ್ಲಿ ಅವರೇ ಇದ್ದಾರೆ. 10 ಜನಗಳು ಸೇರಿ ಮಾಡುವ ಕೆಲಸದಲ್ಲಿ ನಷ್ಟವಾಗುವುದು ಉಂಟು. ಆದರೆ ಇವತ್ತು ಪಬ್ಲಿಕ್ ಸೆಕ್ಟರನ್ನು ಕೈಬಿಟ್ಟರೆ ನಮ್ಮ ಮೂಲ ತತ್ವಕ್ಕೆ ಚ್ಯುತಿ ಉಂಟಾಗುತ್ತದೆ. ಕೈಗಾರಿಕೆ ನೀತಿಯಲ್ಲಿ ಈಗಾಗಲೇ ಕುಂಠಿತಮಾಡಿದ್ದೇವೆ. ಶ್ರೀಮಂತರು ಶ್ರೀಮಂತರಾಗಿಯೇ ಉಳಿಯುತ್ತಾರೆ ಆಗ ಸಮಾಜವಾದ ಕಟ್ಟುವುದಕ್ಕೆ ಧಕ್ಕೆಯುಂಟಾಗುತ್ತದೆ. ಆದ್ದರಿಂದ ಸರ್ಕಾರದವರು ಪಬ್ಲಿಕ್ ಸೆಕ್ಟರ್‌ನಲ್ಲಿ ಏನು ತೊಂದರೆ ಇದೆಯೆಂಬುದನ್ನು ಎಗ್ಸಾಮಿನ್ ಮಾಡಿ ಅದರಲ್ಲಿರುವಕ್ಕ ಲೋಪದೋಷಗಳನ್ನು ಕಂಡುಹಿಡಿದು ಪಬ್ಲಿಕ್ ಸೆಕ್ಟರ್‌ನಲ್ಲಿಯೇ ಹೆಚ್ಚು ಕೈಗಾರಿಕೆಗಳನ್ನು ಸ್ಥಾಪನೆಮಾಡುವುದು ನಮ್ಮ ನೀತಿಗೆ ಶ್ರೇಷ್ಠವಾದ ಕಾರಣ, ಪಬ್ಲಿಕ್ ಸೆಕ್ಟರ್‌ನಲ್ಲಿ ಕಷ್ಟವಾಗಬಹುದು. ನ್ಯಾಂಪರ್ಸಾಗಿ, ನಾವು ಯಾವುದಾದರೂ ಒಂದು ವಿಷಯದಲ್ಲಿ ಪ್ರೈವೇಟ್ ಸೆಕ್ಟರ್‌ನಿಂದ ಪಬ್ಲಿಕ್ ಸೆಕ್ಟರಿಗೂ, ಪಬ್ಲಿಕ್ ಸೆಕ್ಟರ್‌ನಿಂದ ಪ್ರೈವೇಟ್ ಸೆಕ್ಟರಿಗೂ ಹೆಚ್ಚು ಪ್ರೋತ್ಸಾಹ ಕೊಟ್ಟರೆ, ನಾವು ಪುನಃ ಬಂಡವಾಳಷಾಹಿಗಳ ಕೈಗೆ ಸಿಕ್ಕಿ ನಮ್ಮ ಸ್ವಾತಂತ್ರ್ಯಕ್ಕೆ ಧಕ್ಕೆ ಪಡೆದಂತಾಗುತ್ತದೆ.

ಕೊನೆಯದಾಗಿ, ನಾನು ಮೊದಲೇ ಹೇಳಿದ ಹಾಗೆ, ತುಕೊಳ್ ಕಮಿಷನ್ನಿನ ವರದಿಯನ್ನು ಅನುಷ್ಠಾನಕ್ಕೆ ತರುವ ಆಶೆಯನ್ನು ಫೈನಾನ್ಸ್ ಕಮಿಷನ್ ಆಧಾರದ ಮೇಲೆ ನಿಂತಿದ್ದಾರೆ. ಈ ವರ್ಷದ ಆಯವ್ಯಯದ ತಃಖ್ತೆಯಲ್ಲಿ ನಮ್ಮ ಅಭಿವೃದ್ಧಿ ಕಾರ್ಯಗಳಿಗೆ ನಮಗೇನು ಫೈನಾನ್ಸ್ ಕಮಿಷನ್ನಿನವರು ಸಹಾಯ ನೀಡುತ್ತಾರೋ ನಾವು ನಮ್ಮ ಸಂಪನ್ಮೂಲಗಳನ್ನು ಹೇಗೆ ಹೆಚ್ಚಿಸಿಕೊಳ್ಳುತ್ತೇವೋ ಆ ಎರಡು ತತ್ವಗಳ ಮೇಲೆ ಆದು ನಿಂತಿದೆ. ಫೈನಾನ್ಸ್ ಕಮಿಷನ್ ನಾವು

ಆಶೆಮಾಡಿದಂತೆ ಕೊಡಲಾರರು ಎಂಬ ಶಂಕೆಯನ್ನು ನಾನು ಇಟ್ಟುಕೊಂಡಿದ್ದೇನೆ. ನಮ್ಮ ರಾಜ್ಯದ ಸಂಪನ್ಮೂಲಗಳನ್ನು ನಾವು ನಿಷ್ಪೂರವಾಗಿ ಯಾವ ಪಕ್ಷ ಪ್ರತಿಪಕ್ಷ ಮನೋಭಾವವಿಲ್ಲದೆ ಜನತೆಯ ಹಿತದೃಷ್ಟಿಯಿಂದ ಯಾರು ತೆರಿಗೆ ಕೊಡುವುದಕ್ಕೆ ಶಕ್ಯರಿದ್ದಾರೋ ಅವರಿಂದ ವಸೂಲುಮಾಡಿ ಈವತ್ತು ಆ ಸಂಪನ್ಮೂಲಗಳನ್ನು ತಂದರೆ ಆಗ ಫೈನಾನ್ಸ್ ಕಮಿಷನ್ನಿನವರು ಸಾಕಷ್ಟು ಹಣವನ್ನು ನಮಗೆ ಪ್ರೊಪೋರ್ಷನೇಟಾಗಿ ಕೊಡುತ್ತಾರೆ. ಇಲ್ಲದಿದ್ದರೆ ಆ ಪ್ರೊಪೋರ್ಷನೇಟಿನಲ್ಲಿ ಕುಸಿದು ಬೀಳಬೇಕಾಗುತ್ತದೆ. ಅದನ್ನು ನಾವು ವ್ಯವಹಾರಿಕವಾಗಿ ನೋಡಿದರೆ, We have to tighten our belt and proceed with the developmental activity ಎಂದು ಹೇಳಬಹುದು. ಮಾನ್ಯ ಸಚಿವರು ಬಹಳ ಬುದ್ಧಿವಂತರಾಗಿರುವುದರಿಂದ ಈ ಆಯವ್ಯಯ ಶಾಖ್ತ್ಯೆಯನ್ನು ಬಹಳ ಸುಂದರವಾದ ಭಾಷಣದಲ್ಲಿ ಮಂಡಿಸಿದ್ದಾರೆ. ಆದರೆ ವಾಸ್ತವಾಂಶ ಇದು ಏನು ಆಶಾದಾಯಕವಾದ ಚಿತ್ರವಾಗಿದೆಯೋ ಅಷ್ಟು ಸುಗಮವಾಗಿ ಇಲ್ಲ. ಆದರೆ ನಾವೆಲ್ಲರೂ ಮನಸ್ಸು ಮಾಡಿದರೆ ಇವತ್ತು ಸರ್ಕಾರ ಎಲ್ಲಾ ಸಂಪನ್ಮೂಲಗಳನ್ನು ಹಾಸ್ತಿಮಾಡಿಕೊಂಡು, ಅವರಿಂದ ಬರುವ ಹಣವನ್ನು ಪಡೆದುಕೊಂಡರೆ, ಏನೇನು ಕಾರ್ಯಕ್ರಮಗಳನ್ನು ನಾವು ಹಾಕಿಕೊಂಡಿದ್ದೇವೋ ಅವೆಲ್ಲವನ್ನೂ ಚಾಚೂ ತಪ್ಪದೆ ಕೆಲಸಮಾಡಿದರೆ ಆಗ ಆ ಕೆಲಸಕಾರ್ಯಗಳೆಲ್ಲವೂ ಸುಗಮವಾಗಿ ಆಗುತ್ತವೆಂಬುದಾಗಿ ನಾನು ಈ ಸಂದರ್ಭದಲ್ಲಿ ಮನವಿ ಮಾಡಿಕೊಂಡು, ನನಗೆ ಈ ಮಾನ್ಯ ಸಭೆಯಲ್ಲಿ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† Sri V. N. PATIL (Humnabad).—Hon'ble Sir, the Budget that is presented by the Finance Minister has got several revealing things.

ಶ್ರೀಮತಿ ನಾಗಮ್ಮ (ಕಲಮಲ).—ಮಾನ್ಯ ಸದಸ್ಯರು ಕನ್ನಡದಲ್ಲಿ ಮಾತನಾಡಬೇಕು.

ಶ್ರೀಮತಿ ಕೆ. ಲೀಲಾವತಿ ರೈ.—ಮಾನ್ಯ ಸದಸ್ಯರು ಕನ್ನಡದಲ್ಲಿ ಮಾತನಾಡುತ್ತಾರೆ. ಆದ್ದರಿಂದ ಕನ್ನಡದಲ್ಲಿ ಮಾತನಾಡಲಿ.

ಶ್ರೀ ವಿ. ಎನ್. ಪಾಟೀಲ್.—ನನಗೆ ಕನ್ನಡ ಅಷ್ಟು ಚೆನ್ನಾಗಿ ಮಾತನಾಡುವುದಕ್ಕೆ ಬರುವುದಿಲ್ಲ. ಎಷ್ಟು ಬರುತ್ತದೋ ಅಷ್ಟರಮಟ್ಟಿಗೆ ಮಾತನಾಡುತ್ತೇನೆ.

ಮಾನ್ಯ ಅಧ್ಯಕ್ಷರೇ, ಮಾನ್ಯ ಹಣಕಾಸಿನ ಸಚಿವರು ಬಡ್ಜೆಟ್ ಭಾಷಣವನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಯಾವ ಆಧಾರದ ಮೇಲೆ ಈ ಸರ್ಕಾರ ಮುಂದೆ ಈ ದೋಣಿಯನ್ನು ಸಾಗಿಸಿಕೊಂಡು ಹೋಗುತ್ತದೆಂಬುದನ್ನು ನೋಡುತ್ತಾ ಹೋದರೆ, ಈ ದೋಣಿ ಎಲ್ಲಿ ನಡುನೀರಿನಲ್ಲಿ ಮುಳುಗುತ್ತದೋ ಎಂಬ ಸಂಶಯ ನನಗೆ ಬರುತ್ತಾ ಇದೆ. ಇದು ಆಶಾದಾಯಕವಾದ ಬಡ್ಜೆಟ್ ಅಲ್ಲ. ಬರೀ ನಿರಾಶಾದಾಯಕ ಬಡ್ಜೆಟ್ ಎಂದು ಹೇಳಬಹುದು. ಅದಕ್ಕೆ ಕೆಲವು ಕಾರಣಗಳನ್ನು ಕೊಡಬೇಕಾಗಿದೆ. ಪಬ್ಲಿಕ್ ಸೆಕ್ಟರ್‌ನಲ್ಲಿ ನಷ್ಟವಾಗುತ್ತಿದೆ, ಅದ್ದರಿಂದ ಅದನ್ನು ನಮ್ಮಿಂದ ಉಳಿಸಿಕೊಳ್ಳುವುದಕ್ಕಾಗುವುದಿಲ್ಲ. ಅದಕ್ಕಾಗಿ ಪ್ರೈವೇಟ್ ಸೆಕ್ಟರಿಗೆ ಕೊಡತೆತ್ತೇವೆಂದು ಹೇಳಿದ್ದಾರೆ. ಈ ವಿಚಾರದಲ್ಲಿ ಸರ್ಕಾರದವರು ಬಹಳವಾಗಿ ಯೋಚನೆ ಮಾಡಬೇಕು. ಈ ದೇಶದಲ್ಲಿ ಆಡಳಿತದೊಳಗೆ ಇರತಕ್ಕ ಲೋಪದೋಷಗಳನ್ನು ಸರ್ಕಾರದವರು ಮೊದಲು ಹೋಗರಾಡಿಸಬೇಕು. ಇದರಲ್ಲರುವ ವಾಸ್ತವಾಂಶವನ್ನು ನೋಡಿದರೆ, ಇದನ್ನು ಆತ್ಮಹತ್ಯಮಾಡಿಕೊಳ್ಳುವಂಥ ವಿಶ್ವಾಸಘಾತುಕಕ್ಕಾಗಿ ಮಾಡಿದರೋ ಅಥವಾ ಜನತೆಯ ಹಿತರಕ್ಷಣೆಗಾಗಿ ಮಾಡಿದರೋ ಎಂಬುದು ಗೊತ್ತಾಗಲಲ್ಲ. ಈಗ ಪಬ್ಲಿಕ್ ಸೆಕ್ಟರ್ ಅಂಡರ್‌ಟೇಕಿಂಗ್ಸ್ ಏಏಪೆ ಅವನ್ನು ಹೆಚ್ಚುಹೆಚ್ಚಾಗಿ ಬೆಳೆಸುತ್ತೇವೆಂದು ಹೆಚ್ಚು ಹೆಚ್ಚು ಹಣವನ್ನು ಇದರಲ್ಲಿ ತೆಗೆದುಕೊಂಡಿದ್ದಾರೆ. ಕೆಲವು ಕಡೆಗಳಲ್ಲಿ ಐ.ಎ.ಎಸ್. ಅಧಿಕಾರಿಗಳನ್ನು ನೇಮಕಮಾಡಿ ಪಬ್ಲಿಕ್ ಸೆಕ್ಟರ್‌ನಲ್ಲಿ ಯಶಸ್ವಿಯಾಗದೇ ಇರುವಂಥ ನಿದರ್ಶನಗಳೂ ಇವೆ. ಕೆಲವು ಕಡೆಗಳಲ್ಲಿ ಪ್ರೈವೇಟ್ ಸೆಕ್ಟರ್‌ನಿಂದ ಅವರಿಗೆ ಬೇಕಾದ ಎರಡು ಕಾಲಿನ ಹೆಗ್ಗಣಗಳನ್ನು ತಂದು ಅಲ್ಲಿ ಹಾಕುತ್ತಾರೆ. ಇದರಿಂದ ಪಬ್ಲಿಕ್ ಸೆಕ್ಟರಿನಲ್ಲಿ ನಷ್ಟ ಹೆಚ್ಚಾಗುತ್ತದೆ. ಪ್ರೈವೇಟ್ ಸೆಕ್ಟರ್ ಅವರಿಗೆ ಆಮಂತ್ರಣ ಮಾಡುವುದಕ್ಕೆ ಮೊದರೇ ಒಳಸಂಚು ಮಾಡಿ, ಪ್ರೈವೇಟ್ ಸೆಕ್ಟರ್ ಅವರಿಗೆ ಪ್ರೋತ್ಸಾಹ ಕೊಡಬೇಕೆಂಬ ಮನೋವೃತ್ತಿ ಇಟ್ಟುಕೊಂಡಹಾಗೆ ಕಾಣುತ್ತದೆ. ಪಬ್ಲಿಕ್ ಸೆಕ್ಟರ್ ಹೇಗೋ ಹಾಳಾಗಿ ಹೋಗುತ್ತಿದೆಯೆಂದು, ಪ್ರೈವೆಟ್ ಸೆಕ್ಟರ್ ಅವರಿಗೆ ಮನಸ್ಸು ಬಂದ ಹಾಗೆ ಓಪನ್ ಇನ್‌ವಿಟೇಷನ್ ಕೊಡುತ್ತಿದ್ದಾರೆ. ಇದರಿಂದ ಸರ್ಕಾರದ್ದು ದ್ರೋಹ ನೀತಿ ಇದೆ. ಜನರ ಆಶಾಕಾಂಕ್ಷೆಗಳನ್ನು ಈಡೇರಿಸುವುದಕ್ಕಾಗುವುದಿಲ್ಲ. ಪಬ್ಲಿಕ್ ಸೆಕ್ಟರ್‌ಗೆ ಹಾಕತಕ್ಕ ದುಡ್ಡು ನಮ್ಮ ದೇಶದ ಜನತೆ ಬೆವರಿನ ರಕ್ತ ಮಿಶ್ರಣ ದುಡ್ಡು. ಇದನ್ನು ಯಶಸ್ವಿಯಾಗಿ ನಡೆಸುವುದು ನಮ್ಮ ಕರ್ತವ್ಯ. ಅಂಥಾದ್ದು ಫೇಲ್ಯೂರ್ ಆಗದಂತೆ ನೋಡಿಕೊಳ್ಳಬೇಕು. ಪ್ರೈವೆಟ್ ಸೆಕ್ಟರ್ ಅವರಿಗೆ ಕೊಡುತ್ತಿರುವ ನಮ್ಮ ಮನೋವೃತ್ತಿ ಸರಿಯಾಗಿಲ್ಲ. ಬ್ಯಾಂಕ್ರಪ್ಸಿ ಪಾಲಸಿ ನಿಮ್ಮದು.

(ಶ್ರೀ ಎ. ಎನ್. ಪಾಟೀಲ್)

ಪಾರ್ಟಿ ಆಫ್ ಫಿರಾನಫಿ ಏನಿದೆಯೋ ಆ ಒಂದು ಫಿಲಾನಫಿ ಅಪ್ರೋಚ್ ನಹ ನಿಮ್ಮಲ್ಲಿಲ್ಲವೆಂದು ಹೇಳ ಬಹುದು. ಇವತ್ತು ಬೆಂಗಳೂರು ಡೈರಿಯನ್ನು ತೆಗೆದು ನೋಡಿದರೆ, ಅಲ್ಲಿ ಎಷ್ಟೋ ಲಕ್ಷ ರೂಪಾಯಿ ಗಳ ಬೆಣ್ಣೆಯನ್ನು ನುಟ್ಟು ಹಾಕಿದ್ದಾರೆ. ಇವತ್ತು ಎಲ್ಲಾ ಕಡೆಯಲ್ಲೂ ಸರ್ಕಾರ ಎಲ್ಲಿ ಕೈ ಹಾಕಿದೆ, ಅಲ್ಲಿ ನಷ್ಟವಾಗುತ್ತಿದೆ. ಇವತ್ತು ಒಬ್ಬ ಪ್ರೈವೇಟ್ ಫರ್ಮಿನಯಿಜಮಾನ ಯಾವ ರೀತಿಯಲ್ಲಿ ಒಳ್ಳೆಯ ಆಡಳಿತವನ್ನು ನಡೆಸಿಕೊಂಡು ತನ್ನ ವ್ಯಾಪಾರ ಅಥವಾ ಕಾರ್ಖಾನೆಯಲ್ಲಿ ಲಾಭ ಸಂಪಾದನೆ ಮಾಡುತ್ತಿದ್ದಾನೆ! ಇವತ್ತು ಅವನು 50 ಪರ್‌ಸೆಂಟ್ ಲಾಭ ಗಳಿಸುತ್ತಿದ್ದಾನೆ. ಇವತ್ತು ಸರ್ಕಾರದವರು ಪಬ್ಲಿಕ್ ಸೆಕ್ಟರಿನಲ್ಲಿ ಲಾಭ ಬರುವುದಿಲ್ಲ, ನಷ್ಟವಾಗುತ್ತದೆಂದು, ಪ್ರೈವೇಟ್‌ಗೆ ವಹಿಸಿಕೊಡಬೇಕೆಂದು ಹೇಳುತ್ತಿದ್ದಾರೆ. ಇದು ಯಾವ ಕಾರಣದಿಂದ ಹೀಗೆ ಆಗುತ್ತಿದೆ. ಇವರಿಗೆ ಸರಿಯಾಗಿ, ಯೋಗ್ಯ ರೀತಿಯಿಂದ ನಡೆಸಲು ಸಾಧ್ಯವಾಗದೆ ತಾನೆ! ಇನ್ನು ಗ್ರೀನ್ ರೆವೊಲ್ಯೂಶನ್ ಮಾಡುತ್ತೇವೆ ಎಂದು, "ಗ್ರೀನ್" ಎಂಬ ಪದವನ್ನು ಉಪಯೋಗಿಸಿ ದ್ದಾರೆ. ಇವತ್ತು ನೀವು ಮಾಡಬೇಕಾದ ಕರ್ತವ್ಯ, ಕಾರ್ಯಗಳಿಗೆ ಲಕ್ಷ್ಯ ಕೊಟ್ಟಿಲ್ಲ. ನಮ್ಮ ರಾಜ್ಯದಲ್ಲಿ 20-30 ವರ್ಷದಿಂದ ಯಾರು ರ್ಯಾಂಡ್‌ಲೆಸ್ಸ್ ಜನರು ಇದ್ದಾರೆ, ಅವರಿಗೆ ನೀವು ಏನು ಮಾಡಿದ್ದೀರಿ! ಅವರಿಗೆ ಜಮೀನು ಏಕೆ ಕೊಟ್ಟಿಲ್ಲ! ಎಷ್ಟೋ ಎಕರೆ ಜಮೀನುಗಳು ಇವತ್ತು ಬಂಜರುಭೂಮಿಯಾಗಿ ಬಿದ್ದಿವೆ. ಇವತ್ತು ಜಮೀನನ್ನು ಯಾರ್ಯಾರು ಅಧಿಕಾರದಲ್ಲಿದ್ದಾರೆ, ಅವರಿಗೆ, ಮತ್ತು ಅವರಿಗೆ ಬೇಕಾದವರಿಗೆ ಕೊಡುತ್ತಿದ್ದಾರಲ್ಲದೆ, ಇಂಥ ಬಡ ಜನರಿಗೆ ಕೊಡುತ್ತಿಲ್ಲ. ಇವತ್ತು ನೀವು ಸ್ಯೆಂಟಿಫಿಕ್ ಅಪ್ರೋಚ ಎಂದು ಹೇಳಿ, ಸಣ್ಣ ರೈತರಿಂದ ತೆರಿಗೆವಸೂಲು ಮಾಡು ತ್ತಿದ್ದೀರಿ. ಆದರೆ 50 ಎಕರೆ, 100 ಎಕರೆ ನೀರಾವರಿ ಮಾಡತಕ್ಕವರಿಂದ ಏನನ್ನೂ ವಸೂಲು ಮಾಡುತ್ತಾ ಇಲ್ಲ.

ಇನ್ನು ಈ ದೇವಸ್ಥಾನಗಳ ಜಮೀನಿನ ವಿಚಾರ. ಇವತ್ತು ಲಿಂಗಾಯಿತರ, ಬ್ರಾಹ್ಮಣರ ಎಂದು ಸಾವಿರಾರು ದೇವರು ಇದ್ದಾರೆ. ಇವತ್ತು ಇಂಥ ದೇವರುಗಳ ಹೆಸರಿನಲ್ಲಿ ಎಷ್ಟೋ ಲಕ್ಷ ಎಕರೆ ಜಮೀನು ಇವೆ. ಇವುಗಳನ್ನು ಎಲ್ಲಾ ಯಾರು ಅನುಭವಿಸುತ್ತಿದ್ದಾರೆ! ದೇವರಿಗೆ ಇದರಿಂದ ಒಂದು ಕಾಸು ಬರುತ್ತಾ ಇಲ್ಲ. ಉದಾಹರಣೆಗೆ ಧರ್ಮಸ್ಥಳದಲ್ಲಿ ಶ್ರೀ ಮಂಜುನಾಥ ದೇವರು ಇದ್ದಾರೆ. ಅಲ್ಲಿಗೆ ಭಕ್ತಿಯಿಂದ ಸಾವಿರಾರು ಜನರು ಹೋಗುತ್ತಿದ್ದಾರೆ. ಅಲ್ಲಿಯ ಉತ್ಪತ್ತಿ ಎಲ್ಲಾ ದೇವರಿಗೆ ಹೋಗುತ್ತಿಲ್ಲ. ಅದರ ಆಡಳಿತಗಾರನಿಗೆ ಮನಿ ಆರ್ಡರ್ ಕೂಡ ಹೋಗುತ್ತದೆ. ಅಂದರೆ, ಇವರಿಂದ ದೇವರಿಗೆ ಲಾಭವಾಗುತ್ತದೆಯೇ? ದೇವರ ಹೆಸರು ಹೇಳಿ ಯಾವ ವ್ಯಕ್ತಿಗೆ ಲಾಭ ವಾಗುತ್ತದೆ! ಇವತ್ತಿನ ದಿವಸ ಯಾವ ಜಮೀನಿನಲ್ಲಿ ಒಬ್ಬ ಎರಡು ಮೂರು ತಲೆಮಾರುಗಳಿಂದ ದುಡಿದುಕೊಂಡು ಬರುತ್ತಿದ್ದಾನೋ, ಅಂಥವನಿಗೆ ಜಮೀನು ಇಲ್ಲವಾಗಿದೆ. ಅವನ ತಂದೆಯೂ ಅದರಲ್ಲಿ ದುಡಿದಿದ್ದಾನೆ, ಅವನ ತಾತನೂ ಅದರಲ್ಲಿ ದುಡಿದಿದ್ದಾನೆ. ಅವನಿಗೆಯೇ ಅದನ್ನು ಕೊಟ್ಟುಬಿಟ್ಟರೆ ಅವನಿಗೆ ಅದರಲ್ಲಿ ಪ್ರೀತಿ ಬರುತ್ತದೆ, ಹೆಚ್ಚು ಬೆಳೆಯನ್ನು ಬೆಳೆಸುವುದಕ್ಕೆ ಉಮೇದ ಬರುತ್ತದೆ. ದೇವರ ಹೆಸರಿನಲ್ಲಿ ರೈತರಿಗೆ ಕೊಟ್ಟರೆ ಎಷ್ಟೋ ಒಳ್ಳೆಯದಾಗುತ್ತದೆ. ಅದಲ್ಲದೆ, ಒಬ್ಬೊಬ್ಬ ಚೆನೆಂಟಿಗೆ ಒಂದೊಂದು ವರ್ಷಕ್ಕೆ ಕೊಟ್ಟರೆ ಇದರಿಂದ ಏನು ಪ್ರಯೋಜನ? ಈ ರೀತಿ ದೇವಸ್ಥಾನಗಳ ಭೂಮಿ ನಷ್ಟವಾಗುತ್ತಿದೆ. ಇದರಿಂದ ನಮ್ಮ ಆಹಾರ ಸಮಸ್ಯೆಯಾದರೂ ಹೇಗೆ ಸುಧಾರಿಸಬೇಕು?

ಇನ್ನು ಟ್ಯಾಕ್ಸ್ ವಿಚಾರ. ಇವತ್ತು ಡೈರೆಕ್ಟ್ ಟ್ಯಾಕ್ಸೇಶನ್ ಹಾಕಿದರೆ, ಯಾರು ಬೇಡ ಎನ್ನುವುದಿಲ್ಲ, ಆದರೆ ಇನ್‌ಡೈರೆಕ್ಟ್ ಟ್ಯಾಕ್ಸೇಶನ್ ಹಾಕಿ ಸಣ್ಣ ರೈತನ ಕುತ್ತಿಗೆ ಕೊಯ್ಯುವಂತೆ ಮಾಡುತ್ತಿದ್ದೀರಿ. ಆದ್ದರಿಂದ ಈ ನಿಮ್ಮ ಇನ್‌ಡೈರೆಕ್ಟ್ ಟ್ಯಾಕ್ಸೇಶನ್ ಏನಿದೆ, ಅದು ಬಹಳ ಮೋಸ ಎಂದು ಹೇಳುತ್ತೇನೆ. ಯಾರ ಹತ್ತಿರ ತೆಗೆದುಕೊಳ್ಳಬೇಕೋ ಅವರಿಂದ ತೆಗೆದುಕೊಳ್ಳುವುದಿಲ್ಲ. ಆದರೆ ಈ ಬಡವರಿಂದ ಅವರಿಗೆ ಗೊತ್ತಾಗದಂತೆ ತೆಗೆದುಕೊಳ್ಳುತ್ತಿದ್ದೀರಿ. ಇದಕ್ಕೆ ಮುಖ್ಯವಾಗಿ ಬಂಡವಾಳದಾರರ ಒಳಸಂಚು ಆಗಿದೆ. ಇವತ್ತು ಸರ್ಕಾರ ದೊಡ್ಡ ದೊಡ್ಡ ಬಂಡವಾಳದಾರರ ಚರ್ಮ ಕೂಡ ಮುಟ್ಟುವುದಕ್ಕೆ ಧೈರ್ಯವಿಲ್ಲ. ಇವರು ತಯಾರಾಗಿಲ್ಲ; ಆದರೆ ಬಡವನ ರಕ್ತದ ಹನಿಯನ್ನು ಮಾತ್ರ ಇವರು ಬಿಡುವುದಿಲ್ಲ. ರ್ಯಾಂಡ್‌ಲೆಸ್ ಪೆಸೆಂಟ್ರಿಯನ್ನು ಇವರು ಒಂದು ಬಿಸಿನೆಸ್ಸ್ ಆಗಿ ಕ್ರಶ್ ಮಾಡುತ್ತಿದ್ದಾರೆ. ಇದು ನಿಮ್ಮ ಪಾಲಿಸಿ, ಇದು ನಿಮ್ಮ ಧೋರಣೆ.

ಇವತ್ತು ತಕರಾವಿ ಸಾಲ ಕೊಡುತ್ತಿದ್ದಾರೆ. 10-15 ವರ್ಷಗಳವರೆಗೂ ಅದನ್ನು ಕೊಡದವರೂ ಇದ್ದಾರೆ ಆದರೆ, ಬಡವರು ಎಲ್ಲಿಯಾದರೂ ಕೊಡುವಿದ್ದರೆ, ಅವನ ಜಮೀನನ್ನು ಹರಾಜು ಮಾಡಿ ಬಿಡುತ್ತಾರೆ. ಬಾವಿಗಳಿಗೆ ಎರಡು ಮೂರು ಸಾವಿರ ತೆಗೆದುಕೊಂಡರೆ, ಅವರ ಬಾವಿಯು ಕೂಡ ಪೂರ್ತಿಯಾಗಿರುವುದಿಲ್ಲ. ಯಾರು ಬಾವಿಯ ಹೆಸರಿನಲ್ಲಿ ತೆಗೆದುಕೊಂಡಿದ್ದಾರೋ, ಅವು ಕೊಟ್ಟಿಲ್ಲ

ವೆಂದು ಅವರ ಬಾವಿಯ ಹೆಸರಿನಲ್ಲಿ 10 ಎಕರೆ ಜಮೀನನ್ನು ಮಾರಿ ಬಿಡುತ್ತಾರೆ. ಯಾವ ರೈತರಿಗೆ ಎರಡು ಸಾವಿರ ಕೊಟ್ಟಿದ್ದಾರೆ ಅದಕ್ಕಾಗಿ ಅವರ 25 ಸಾವಿರ ಬೆಲೆ ಬಾಳುವ ಹೊಲವನ್ನು ಶ್ರೀಮಂತರಿಗೆ ಮಾರುತ್ತಿದ್ದಾರೆ; ಅವನ ಸ್ಟಾಂಡಿಂಗ್ ಕ್ರಾಪ್ ಹರಾಜು ಮಾಡುತ್ತಿದ್ದಾರೆ. ಒಂದು ವರ್ಷ ಕ್ಷಾಮ ಬಂದರೆ ರಿಲೀಫ್ ಕಾಮಗಾರಿಗಳನ್ನು ಮಾಡುತ್ತೇವೆಂದು ಹೇಳುತ್ತಾರೆ. ಮರುದಿನ ರೆವೆನ್ಯೂ ಇನ್ಸ್‌ಪೆಕ್ಟರ್ ಬಂದು ನಿಮ್ಮ ಹೊಲ ಹರಾಜು ಮಾಡುತ್ತೇವೆಂದು ಹೇಳುತ್ತಾರೆ. ಎರಡು ವರ್ಷದ ಹಿಂದೆ ಬಾವಿಗೆ ಸಾಲ ತೆಗೆದುಕೊಂಡಿದ್ದೀರಿ, ಅದಕ್ಕೋಸ್ಕರ ಹರಾಜು ಮಾಡುತ್ತೇವೆ ಎಂದು ಹೇಳುತ್ತಿದ್ದಾರೆ ಸರ್ಕಾರ ಇರುವುದು ಯಾರಿಗಾಗಿ? ಯಾರ ಸೇವೆ ಮಾಡುವುದಕ್ಕಾಗಿ? ಬಡವರ ರಕ್ತ ಹರಿಯುವಾಗ ಸರ್ಕಾರವೆಂದು ಕರೆಯೋಣವೇ? ಇವತ್ತು ನಿಮ್ಮ ಅಧಿಕಾರಿಗಳು ಏನು ಮಾಡುತ್ತಿದ್ದಾರೆ? 10–8 ಎಕರೆಗಳಲ್ಲಿ ಕಬ್ಬಿನ ಬೆಳೆ ಇರುವಾಗ ಪಂಪ್‌ಸೆಟ್‌ನ ಇಂಜಿನುಗಳನ್ನೇ ನಿಲ್ಲಿಸಿಬಿಡುತ್ತಾರೆ. ಕಬ್ಬು ಸುಟ್ಟು ಹೋಗುತ್ತದೆ. ಇದರಿಂದ ಏನು ಮಾಡಿದಂತಾಗುತ್ತದೆ? ನಿಮ್ಮ ಪಾಲಿಸಿ ಏನು? ನಿಮ್ಮಲ್ಲಿ ಏನು ಪಾಲಿಸಿ ಇದೆ ಎಂದು ಹೇಳುವುದಕ್ಕೆ ನಿಮಗೆ ಧೈರ್ಯ ಎಲ್ಲಿ. ನೀವು ಶೋಷಣೆ ಮಾಡುತ್ತಿದ್ದೀರಿ. ಬ್ರಿಟಿಷರು ಬಿಟ್ಟು ಹೋದ ಮೇಲೆ ಇದನ್ನು ನೀವು ಮಾಡುತ್ತೀರಿ. ನಿಮಗೆ ಸರ್ಕಾರ ನಡೆಸುವುದಕ್ಕಾಗುವುದಿಲ್ಲ. ಮಂತ್ರಿಗಳು ಊರಿನಲ್ಲಿ ಬಂದಾಗ ಮನವಿಗಳನ್ನು ಸಲ್ಲಿಸುತ್ತಾರೆ. ಅದಕ್ಕೆ ಅಲ್ಲಿ ಅವರನ್ನು ಹೆರಾಸ್‌ಮೆಂಟ್ ಮಾಡಬೇಡಿ ಎಂದು ಹೇಳುತ್ತೀರಿ. ಆದರೆ ಜಿಲ್ಲಾಧಿಕಾರಿಗಳನ್ನು ಕರೆದು ಇನ್ ಕೆಮೆರಾ ಮಿಟಿಂಗ್ ಮಾಡಿ ಎಲ್ಲಾ ವಸೂಲು ಮಾಡಿಬಿಡಿ, ವಸೂಲು ಮಾಡದಿದ್ದರೆ, ಸರ್ಕಾರ ನಡೆಸುವುದಕ್ಕೆ ಸಾಧ್ಯವಿಲ್ಲವೆಂದು ಹೇಳುತ್ತಿದ್ದೀರಿ. ವಸೂಲು ಮಾಡದಿದ್ದರೆ, ಅವರನ್ನು ಗದರಿಸುತ್ತಿದ್ದೀರಿ. ಯಾರು ಶ್ರೀಮಂತರಿದ್ದಾರೆ, ಅವರು 10 ವರ್ಷದಿಂದಲೂ ಸಾಲ ತೆಗೆದುಕೊಂಡಿದ್ದರೂ, ಅವರಿಗೆ ರಕ್ಷಣೆಯನ್ನು ಕೊಡುತ್ತಿದ್ದಾರೆ. ಅಂಥವರ ಮನೆ ಹರಾಜು ಮಾಡಿದರೆ, ನಮ್ಮ ಕಣ್ಣಲ್ಲಿ ನೀರು ಬರುತ್ತಾ ಇಲ್ಲ. ಆದರೆ ಇವತ್ತು ಹೆಸೆಂಟ್ರ ಜನ ಯಾರು ಇದ್ದಾರೆ, ಅವರಿಗೆ ಏಕೆ ಅನ್ಯಾಯ ಮಾಡುತ್ತಿದ್ದೀರಿ? ತೊಂದರೆ ಕೊಡುತ್ತಿದ್ದೀರಿ? ಎರಡು ಸಾವಿರ ರೂಪಾಯಿಗೆ ಅವನ 25 ಸಾವಿರ ರೂಪಾಯಿಯ ಜಮೀನನ್ನ ಶ್ರೀಮಂತರಿಗೆ 5 ಸಾವಿರಕ್ಕೆ ತೆಗೆದುಕೊಳ್ಳುವಂತೆ ಮಾಡುತ್ತೀರಿ. ಇದು ಬಹಳ ಅನ್ಯಾಯ, ಈ ರೀತಿ ಮಾಡಬಾರದು ಎಂದು ಹೇಳಬೇಕಾಗಿದೆ.

ಇನ್ನೊಂದು ಪ್ರಶ್ನೆ. ನಾನು ಹೈದರಬಾದ್ ಕರ್ನಾಟಕದಿಂದ ಬಂದಿದ್ದೇನೆ ಎಂದು ಹೇಳುತ್ತಿಲ್ಲ. ಇದು ಹ್ಯೂಮನ್ ಪ್ರಾಬ್ಲಮ್. ಈಗ ರಿವಿಜನ್ ಆಫ್ ಅಸೆಸ್‌ಮೆಂಟ್ ಏನು ಮಾಡಿದ್ದಾರೆ ಇದು ಆಗಿನ ಕಾಲದ ಜಹಗೀರ್‌ದಾರರಾದುವೆ ಆದರೆ 25 ಪರ್ಸೆಂಟ್ ರ್ಯಾಂಡ್ ಇನ್‌ಕ್ರೀಜ್ ಮಾಡುತ್ತಿದ್ದ ಹಾಗೆ ಇದೆ. 1947 ನೇ ಇಸವಿಯಲ್ಲಿ ಹೈದರಾದ್ ಕರ್ನಾಟಕದಲ್ಲಿ ನೈಜಾಮು ಸಾಹೇಬರ ಸರ್ಕಾರ ಇದ್ದಾಗ್ಗೆ 20 ಟೈಮ್ಸ್ ರಾಂಡ್ ರೆವಿನ್ಯೂ ಹಾಕಿ ಅದನ್ನು ಅವರು ತಮ್ಮ ಸ್ವಂತ ಖರ್ಚಿಗೆ ಉಪಯೋಗಿಸುತ್ತಿದ್ದರು. ಈಗ ಚಿಂಚೋಳಿಯಲ್ಲಿ, ಹುಮ್ನಾಬಾದಿನಲ್ಲಿ 25 ಪರ್ಸೆಂಟ್ ರ್ಯಾಂಡ್ ರೆವಿನ್ಯೂ ಇದೆ. ಜಹಗೀರ್‌ದಾರರಾಗಿರತಕ್ಕವರು ಇಂದಿನ ಕ್ಯಾಬಿನೆಟ್‌ನಲ್ಲಿಯೂ ಸಹ ಇದ್ದಾರೆ. ಅಗ್ರಿಕಲ್ಚರ್ ಬಗ್ಗೆ ಸ್ಪೆಸಿಫಿಕ್ ಅಪ್ರೋಚ್ ನೀವು ಇಟ್ಟಿದ್ದೀರಾ? ರ್ಯಾಂಡ್ ರೆವಿನ್ಯೂ ನಲ್ಲಿ ನೀವು ಏಕರೂಪತೆಯನ್ನು ಸಾಧನೆ ಮಾಡಿಲ್ಲ. ಬೀದರ್ ಮತ್ತು ಗುಲ್ಬರ್ಗ ಡಿಸ್ಟ್ರಿಕ್ಟ್‌ಗಳಲ್ಲಿ ಹೆರ್ತ್ ಸೆಸ್ ತೆಗೆದುಕೊಂಡು ಹೆರ್ತ್ ಕೊಡುತ್ತಿಲ್ಲ. ಎಜುಕೇಷನ್ ಸೆಸ್ಸು ತೆಗೆದುಕೊಂಡು ಎಜುಕೇಷನ್ ಕೊಡುತ್ತಿಲ್ಲ. 400ಜನ ವಿದ್ಯಾರ್ಥಿಗಳು ಇರುವ ಒಂದು ಮಿಡ್ಲ್ ಸ್ಕೂಲ್‌ನಲ್ಲಿ 27 ಮಂದಿ ಉಪಾಧ್ಯಾಯರು ಇದ್ದಾರೆ. ಆ ಸ್ಕೂಲಿನಲ್ಲಿ 3 ಕುರ್ಚಿಗಳು ಇವೆ. ಆ ಉಪಾಧ್ಯಾಯರುಗಳು ಸ್ಕೂಲಿಗೆ ಬಂದಮೇಲೆ ನಿಂತುಕೊಂಡು ವಿದ್ಯಾರ್ಥಿಗಳಿಗೆ ಪಾಠವನ್ನು ಹೇಳಿಕೊಟ್ಟು ಹೋಗಬೇಕಾದಂತಹ ಸಿಚುಯೇಷನ್ ಬಂದಮೇಲೆ, ಚಾಕ್ ಪೀಸ್ ಮತ್ತು ಬ್ಲಾಕ್ ಬೋರ್ಡಿಗೆ ದುಡ್ಡು ಇಲ್ಲದ್ದಿದ್ದರೆ ಎಂತಹ ಒಳ್ಳೆಯ ಶಿಕ್ಷಣವನ್ನು ಉಪಾಧ್ಯಾಯರು ಮಕ್ಕಳಿಗೆ ಕೊಡಬಹುದು? ಎಂತಹ ಒಳ್ಳೆಯ ನಾಗರಿಕರನ್ನು ತಯಾರು ಮಾಡುತ್ತಾರೆ ಎಂಬುದನ್ನು ನೋಡಬೇಕಾಗಿದೆ. ಸರ್ಕಾರ ತನ್ನ ಕರ್ತವ್ಯದಲ್ಲಿ ಫೈಲ್ಯೂರ್ ಆದಮೇಲೆ ಈ ಸರ್ಕಾರ ಉಳಿಯಲಿಕ್ಕೆ ಶಕ್ಯ ಇಲ್ಲ. ಜನತೆಯ ಮನಸ್ಸನ್ನು ಒಲಿಸಿಕೊಂಡು ಜನತಾ ಸೇವೆಯನ್ನು ಮಾಡುವ ಸರ್ಕಾರ ಇದೆಯೇ? ಜನತಾ ಕರ್ತವ್ಯವನ್ನು ಮರೆಯುವ ಸರ್ಕಾರವನ್ನು ಕೇಳುವ ಅಧಿಕಾರ ಜನತೆಗೆ ಇಲ್ಲವೇ? ಪಂಡಿತ್ ನೆಹರು ಅವರು ಹೇಳಿದ ಹಾಗೆಯಲ್ಲ ನೀವು ಹೋಗುತ್ತಿದ್ದೀರಾ? ನಮ್ಮಲ್ಲರುವ ಜನತೆ ಏನಿದೆ ಅದು ಅನ್ಯಾಯ ಮಾಡಲಾರದಂತಹ ಜನ. ಅವರನ್ನು ಯಾವರೀತಿ ಉಳಿಸಬೇಕು ಎನ್ನುವ ಫೀಲಿಂಗ್ಸ್ ನಿಮ್ಮಲ್ಲ ಬಂದಿದೆಯೇ! ಬೀದರ್ ಡಿಸ್ಟ್ರಿಕ್ಟ್ ಪೈಸೂರು ರಾಜ್ಯದಲ್ಲೇ ಮೋಸ್ಟ್ ಬ್ಯಾಕ್‌ವರ್ಡ್ ಡಿಸ್ಟ್ರಿಕ್ಟ್ ಎನ್ನುವುದನ್ನು ಸೆಂಟ್ರಲ್ ಗೌರ್ಮೆಂಟಿನವರು ಒಪ್ಪುತ್ತಾರೆಂದು ಮಾನ್ಯ ಮುಖ್ಯ ಮಂತ್ರಿಗಳು ಎಷ್ಟೋ ಸಾರಿ ಹೇಳಿದ್ದಾರೆ. ಬಡ್ಜೆಟ್ಟಿನಲ್ಲಿ ಮೋಸ್ಟ್ ಬ್ಯಾಕ್‌ವರ್ಡ್ ಡಿಸ್ಟ್ರಿಕ್ಟ್‌ಗೆ ಏನೇನು ಪ್ರೊವಿಜನ್ ಇಟ್ಟಿದ್ದೀರಿ? ಏನು ಪ್ರೊವಿಜನ್ ಇಟ್ಟಿದ್ದೀರಿ ಎಂದು ಕೇಳಿದರೆ ಏನೂ ಇಲ್ಲ. ಮಾಡರ್ ಎಗ್ಯಾಂಪರ್

(ಶ್ರೀ ವಿ. ಎನ್. ಪಾಟೀಲ್)

ಮೈಸೂರು ಸ್ಟೇಟಿನಲ್ಲಿ ಯಾವ ತರಹ ಫಂಕ್ಷನ್ ಮಾಡುತ್ತಿದ್ದೀರಿ ಎಂಬುದು ಇದರಿಂದಲೇ ಗೊತ್ತಾಗುತ್ತದೆ. ಹೈದರಬಾದ್ ಕರ್ನಾಟಕ ಏರಿಯಾದವರಿಗೆ ಮುಖ್ಯ ಮಂತ್ರಿಗಳ ಷಿಪ್ ಕೊಟ್ಟಿದ್ದೀವೆ ಎನ್ನುವದು ಮುಖ್ಯ ಪ್ರಶ್ನೆ ಅಲ್ಲ. ಅದು ನಮಗೆ ಬೇಕಾಗಿಲ್ಲ. ಅದನ್ನು ಬೇಕಾದರೆ ಹಳೆಯ ಮೈಸೂರಿನವರೇ ತೆಗೆದುಕೊಳ್ಳಿ. ಹೈದರಾಬಾದ್ ಕರ್ನಾಟಕದವರಿಗೆ ಈಗ 12 ವರ್ಷಗಳಿಂದ ಸೆಕ್ರೆಟೇರಿಯಟ್‌ನಲ್ಲಿ ಎಷ್ಟು ಜನಗಳಿಗೆ ಅಪಾಯಿಂಟ್‌ಮೆಂಟ್ ಕೊಟ್ಟಿದ್ದೀರಿ ? ನನ್ನ ಪ್ರಶ್ನೆ 411ಕ್ಕೆ ಉತ್ತರ ಕೊಡುತ್ತಾ 1959 ನೇ ಇಸವಿಯಿಂದ ಎಂದರೆ ರಾಜ್ಯಗಳ ಪುನರ್‌ಎಂಗಡಣೆಯಾದಮೇಲೆ ಸೆಕ್ರೆಟೇರಿಯಟ್ಟಿಗೆ ನೇಮಕ ಮಾಡಿಕೊಂಡ 720 ಹುದ್ದೆಗಳ ಪೈಕಿ 7 ಜನಗಳನ್ನು ಹೈದರಾಬಾದ್ ಕರ್ನಾಟಕದಿಂದ ಆಯ್ಕೆ ಮಾಡಿಕೊಂಡಿದ್ದೀರಿ, ಇದರಲ್ಲಿ ಈಕ್ವಿಟಿ ರಾಷ್‌ನಾಲಟಿ ಬಾಲೆಂಜ್ ಮಾಡುತ್ತೀರಾ ? 9 ಪರ್ಸೆಂಟ್ ಅಪಾಯಿಂಟ್‌ಮೆಂಟ್ ಸೆಕ್ರೆಟೇರಿಯಟ್‌ನಲ್ಲಿ ಹೈದರಾಬಾದ್ ಕರ್ನಾಟಕಕ್ಕೆ ಕೊಟ್ಟರೆ ಸಾಕೇ ! ಯಾರಿಗಾದರೂ ಚೀಫ್ ಮಿನಿಸ್ಟರ್ ಮಾಡಿ ಹಿಂದುಳಿದ ಏರಿಯಾದ ಜನಗಳನ್ನು ಎಕ್ಸ್‌ಪ್ಲಾಯಿಟ್ ಮಾಡುತ್ತೀರಾ ? ಇಂಥಾ ಅನ್ಯಾಯವನ್ನು ನಾವು ಸಹಿಸುವುದಕ್ಕಾಗುವುದಿಲ್ಲ ಎಂದು ನಾನು ಹೇಳಬೇಕಾಗುತ್ತದೆ. ನಮ್ಮ ಹೈದರಾಬಾದ್ ಕರ್ನಾಟಕಕ್ಕೆ ಈ ಚೀಫ್ ಮಿನಿಸ್ಟರ್ ಷಿಪ್ ಬೇಕಾಗಿಲ್ಲ. ಬೇಕಾದರೆ ಅವರನ್ನು ತೆಗೆಯಿರಿ, ಮತ್ತೊಬ್ಬರನ್ನು ಇಟ್ಟುಕೊಳ್ಳಿ. ಕಾಂಗ್ರೆಸ್ ಪಾರ್ಟಿಯವರು ಹೈದರಬಾದ್ ಕರ್ನಾಟಕಕ್ಕೆ 9 ಪರ್ಸೆಂಟ್ ಅಪಾಯಿಂಟ್‌ಮೆಂಟುಗಳನ್ನು ಸೆಕ್ರೆಟೇರಿಯಟ ನಲ್ಲಿ ಕೊಟ್ಟಿದ್ದಾರೆ. ನಿಜವಾಗಿಯೂ ನೀವು ಹೈದರಾಬಾದ್ ಕರ್ನಾಟಕಕ್ಕೆ ನ್ಯಾಯವನ್ನು ದೂರಕಿಸಿಕೊಟ್ಟಿದ್ದೀರಾ? ನಿಮ್ಮಲ್ಲ ಸಾಕಷ್ಟು ಸ್ಪಾರ್ಥಇದೆ, ನಿಮ್ಮಲ್ಲ ಸಾಕಷ್ಟು ಕ್ಯಾನ್ಸ್ ಮತ್ತು ಕ್ರೀಡ್ ಕೂಡ ಇದೆ. ನಿಮ್ಮ ನಿಮ್ಮ ವರಿಗೆ ಹಂಚಿಕೊಳ್ಳಿ, ನಾನು ಬೇಡ ಎಂದು ಹೇಳುವುದಿಲ್ಲ. ಈ ಕಾಂಗ್ರೆಸ್ ವನ್ಸುಪ್ರದರ್ಶನಕ್ಕೆ ಜಾಗವನ್ನು ನುಭಾಷ್ ನಗರದಲ್ಲಿ ಏನು ಕೊಟ್ಟಿದ್ದೀರಿ ಅದನ್ನು 99 ವರ್ಷ ಲೀಜಿಗೆ ಕೊಟ್ಟಿದ್ದೀರಿ. ಅದನ್ನು 100 ವರ್ಷಕ್ಕೋ ಅಥವಾ 101 ವರ್ಷಕ್ಕೋ ಮುಂದುವರಿಸಿ ಬಿಡಿ. ಪಾಪ 99 ವರ್ಷ ಏತಕ್ಕೆ ಮಾಡಿದ್ದೀರಿ. ಹೈದರಾಬಾದ್ ಕರ್ನಾಟಕದಲ್ಲಿ ಬೀದರ್ ಡಿಸ್ಟ್ರಿಕ್ಟ್ ತುಂಬಾ ಬ್ಯಾಕ್ ವರ್ಡ್ ಏರಿಯಾ ಎಂದು ಕೇಂದ್ರ ಸರ್ಕಾರದವರು ಕೂಡ ಹೇಳಿದ್ದಾರೆಂದು ಹೇಳುತ್ತೀರಿ. ಆದರೆ ಆದರ ಬಗ್ಗೆ ನೀವು ಏನು ಮಾಡಿದ್ದೀರಿ ? ಕೃಷ್ಣಾ ಗೋದಾವರಿ ನೀರಿನ ಬಗ್ಗೆ ಕೇಂದ್ರ ಸರ್ಕಾರದವರು ಮಲತಾಯಿ ಧೋರಣೆಯನ್ನು ತೋರಿಸುತ್ತಿದ್ದಾರೆ. ನೀವು ಎಂದರೆ ರಾಜ್ಯ ಸರ್ಕಾರದವರೂ ಸಹ ಮಲತಾಯಿ ಧೋರಣೆಯನ್ನು ತೋರಿಸುತ್ತಿದ್ದೀರಿ. ಕಾವೇರಿ ಬೇಸಿನ್ನಿನ ಯೋಜನೆಯನ್ನು ತೆಗೆದುಕೊಳ್ಳುವುದರಲ್ಲಿ ನನ್ನ ಸಮ್ಮತಿ ಇದೆ. ನಮ್ಮ ಕಡೆ ಜನತಾ ಪ್ರಾಜೆಕ್ಟಗೋಸ್ಕರ ಸ್ಯಾಕ್ರಿಫೈಸ್ ಮಾಡುವುದಕ್ಕೆ ನಾವು ತಯಾರು ಇದ್ದೇವೆ. ಈಗಾಗಲೇ ಆಂಧ್ರ ಸರ್ಕಾರದವರು ನಾಗಾರ್ಜುನ ಸಾಗರದ ಅಣೆಕಟ್ಟಿಗೆ ಕ್ರೆಸ್ಟ್ ಗೇಟ್ ಕಟ್ಟುವವರಿದ್ದಾರೆ. ಅಪ್ಪರ್ ಕೃಷ್ಣಾ ಪ್ರಾಜೆಕ್ಟಿಗೆ ಈ ವರ್ಷ ಬಡ್ಜೆಟ್ಟಿನಲ್ಲಿ ಎರಡು ಕೋಟಿ ರೂಪಾಯಿಗಳನ್ನು ಮಾತ್ರ ಇಟ್ಟಿದೆ. ಇದು ಏನೇನೂ ಸಾಕಾಗುವುದಿಲ್ಲ. ಇದರಲ್ಲಿ ಅಲ್ಲಿರತಕ್ಕ ಸಿಬ್ಬಂದಿಗೋಸ್ಕರವಾಗಿಯೇ ಎಷ್ಟೋ ಹಣ ಖರ್ಚಾಗುತ್ತದೆ. ಹಿಂದುಳಿದ ಜಿಲ್ಲೆಯಾದ ಬೀದರ ಜಿಲ್ಲೆಯ ಅಭಿವೃದ್ಧಿಗಾಗಿ ಒಂದು ಕೋಟಿ ರೂಪಾಯಿಗಳ ಪ್ರಾವಿಜನ್ ಇಟ್ಟಿಲ್ಲ. ಈ ಸರ್ಕಾರವನ್ನು ವೋಸ್ಟ್ ಇರೆಸ್ಪಾನ್ಸಿಬರ್ ಗವರ್ನಮೆಂಟ್ ಎಂದು ಕರೆಯೋಣವೇ ? ಇಂಥಾ ಸಿಚ್ಯುಯೇಷನ್ ಇದ್ದಾಗ ನಿಮಗೆ ಒಂದು ಮಾರರ್ ಇದೆಯೇ ಎಂದು ನಾನು ಕೇಳುತ್ತೇನೆ. ನೀವು ಗೋದಾವರಿ ಬೇಸಿನ್ನಿನ ಪ್ರಾಜೆಕ್ಟ್ ಅನ್ನು ಕನ್‌ಸ್ಟ್ರಕ್ಟ್ ಮಾಡಿದ್ದೀರಾ ? ಗೋದಾವರಿ ಬೇಸಿನ್ ಇರಿಗೇಷನ್‌ಗೆ ಸಂಬಂಧಪಟ್ಟ ಹಾಗೆ ಯಾವ ಯೋಜನೆಯೂ ಇಲ್ಲ. ಮೈನರ್ ಇರಿಗೇಷನ್ ಬಗ್ಗೆಯೂ ಯಾವ ಯೋಜನೆಯೂ ಇಲ್ಲದೇ ಇದ್ದಾಗ ಅದರ ಕಡೆ ಲಕ್ಷ್ಯ ಕೊಡರಾರದೆ ಇರುವುದು ಬೇಜವಾಬ್ದಾರಿಯ ಮಾತಾಗಿದೆ. ಈ ಬಡ್ಜೆಟ್ಟಿನಲ್ಲಿ ಮಾಡರ್ ಎಗ್ರಾಂಪರ್ ಇಲ್ಲ. ನಾನು ಬಡ್ಜೆಟ್ಟನ್ನು ನೋಡಿದ್ದೇನೆ. ಇದರಲ್ಲಿ ಬಡವರಿಗೆ, ರೈತರಿಗೆ ಅನುಕೂಲವಾದಂತಹ ವಿಷಯಗಳಾಗಲೀ ಅವರಿಗೆ ಮನೆಕೊಡುವುದು ಯಾವುದೂ ಇಲ್ಲ. ವಿಧಾನ ಸೌಧದಂತಹ ದೊಡ್ಡ ದೊಡ್ಡ ಮನೆಗಳನ್ನು ಕಟ್ಟಿಸಿಕೊಂಡು ಕುಳಿತುಕೊಂಡಿರುತ್ತೀರಿ. ಹೊಸ ಟ್ಯಾಕ್ಸ್ ಹಾಕರಾರದಂತಹ ಬಡ್ಜೆಟ್ಟನ್ನು ತಂದಿರುವುದು ಏನಿದೆ ಇದರಲ್ಲಿ ರಿಸೋರ್ಸಸ್ ಇದೆಯೆಂದು ಹೇಳುವುದಕ್ಕೆ ತಯಾರು ಇಲ್ಲ. ನಾಲ್ಕನೆಯ ಪಂಚವಾರ್ಷಿಕ ಯೋಜನೆಯನ್ನು ಕಾರ್ಯಗತ ಮಾಡದೆ ವೆಸ್ಟೆಡ್ ಇಂಟರೆಸ್ಟಿನಿಂದ 3 ವರ್ಷಗಳಿಂದ ಹೊತು ಬಿಟ್ಟಿದ್ದೀರಿ. ನಾಲ್ಕನೆಯ ಪಂಚವಾರ್ಷಿಕ ಯೋಜನೆ ಎಂದು ಬರುತ್ತದೆಯೋ ನೋಡೋಣ. ಡಿಫಂಕ್ಟ್ ಪಾಲಸಿ, ಪಾವರ್ಟ ಫಿಲಾಸಫಿ ಹೇಳಿಕೊಂಡು ಪೊಲಿಟಿಕರ್ ಪಾರ್ಟಿ ಚೇರ್ ಮಾತ್ರ ಬಿಟ್ಟು ಹೋಗಬಾರದು, ಎಂದು ಅಲ್ಲಯೇ ಕುಳಿತು ಕೊಂಡಿರುವ ಪಾಲಸಿ ಇದೆ. ಈ ಪಾಲಸಿಯಿಂದ ಜನತೆಯನ್ನು ಸ್ಯಾಟಿಸ್‌ಫೈ ಮಾಡುವುದಕ್ಕಾಗುವುದಿಲ್ಲ. ಏನೋ ಒಂದು ದೊಡ್ಡ ಸಂಶೋಧನೆ ಮಾಡು

ವುದಕ್ಕೆ ಭೂತಲಿಂಗಂ ಕಮಿಟಿಯನ್ನು ನೇಮಕ ಮಾಡಿದ್ದಾರೆ. ರಿಸೋರ್ಸಸ್ ನಲುವಾಗಿ ಭೂತಲಿಂಗಂ ಅವರ ಚೇರ್ಮನ್ ಷಿಪ್‌ನಲ್ಲಿ ಒಂದು ಕಮಿಟಿಯನ್ನು ನೇಮಕ ಮಾಡಿದ್ದಾರೆ. I remember that this gentleman Mr. Boothalingam did the work of a *Bootha* in the Steel Ministry and he was therefore black-listed.

ಇಂಥವರ ಸಲಹೆಗಳನ್ನು ತೆಗೆದುಕೊಂಡು ಮೈಸೂರು ಸ್ಟೇಟಿನಲ್ಲಿ ರಿಸೋರ್ಸಸ್ ಕಮಿಟಿಯಿಂದ ಒಂದು ಒಳ್ಳೆಯ ವರದಿ ಬರುವುದಕ್ಕೆ ಸಾಧ್ಯವಿಲ್ಲ. ತಾವೇನೋ ಭೂತಲಿಂಗಂ ಕಮಿಟಿಯನ್ನು ನೇಮಕ ಮಾಡಿದ್ದೇವೆ ಎಂದು ಸಂತೋಷ ಪಡಬಹುದು. ಆದರೆ ಈ ಕಮಿಟಿಯ ರಿಪೋರ್ಟ್ ಬರುವುದು ಈಗ ತಾವು ಯಾವ ರಿಸೋರ್ಸಸ್ ಅನ್ನು ಟ್ಯಾಪ್ ಮಾಡಬೇಕೆಂದು ಮನಸ್ಸಿನಲ್ಲಿ ಇಟ್ಟುಕೊಂಡಿದ್ದೀರೋ ಅದೇ ರಿಸೋರ್ಸಸ್ ಬಗ್ಗೆ ಬರುತ್ತದೆ. ಮೈಸೂರು ಸ್ಟೇಟಿನಲ್ಲಿ ಇಂಟರೆಸ್ಟ್ ಇರುವವರು ಆ ಕಮಿಟಿಯಲ್ಲಿ ಸೇರಿದರೆ ಸರಿ ಹೋಗಬಹುದು. ಈಗ ಇರತಕ್ಕಂಥ ಭೂತಲಿಂಗಂ ಅವರ ರಿಸೋರ್ಸಸ್ ಕಮಿಟಿಯ ನಿರ್ಣಯ ರಾಕ್ಷಸನ ನಿರ್ಣಯವಾಗುತ್ತದೆ ಎಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

6-00 P.M.

†ಶ್ರೀಮತಿ ಚಂಪಾಬಾಯಿ ಭೋಗರೆ (ಕಾಗ್‌ವಾಡ್).—ಮಾನ್ಯ ಅಧ್ಯಕ್ಷರೇ, 1969-70ನೇ ಇಸವಿಯ ಬಡ್ಜೆಟನ್ನು ಅನುಮೋದಿಸುತ್ತಾ ಕೆಲವು ಸಲಹೆಗಳನ್ನು ಹೇಳುವುದಕ್ಕೆ ಇಚ್ಛಿಸುತ್ತೇನೆ. ಈ ರಾಜ್ಯವನ್ನು ಕಟ್ಟುವಾಗ ಕೆಲವು ಲೋಪದೋಷಗಳಾಗುತ್ತವೆ. ಅದನ್ನು ಸರಿಪಡಿಸುವುದು ಸರ್ಕಾರದವರ ಮತ್ತು ಜನಗಳ ಕರ್ತವ್ಯ. ಸರ್ಕಾರದವರು ಪ್ರತಿಯೊಂದು ಕೆಲಸಗಳನ್ನು ಮನಸ್ಸು ಹಚ್ಚಿ ದುಡಿಯುವಾಗ ಕೆಲವೊಂದು ಲೋಪದೋಷಗಳು ಬರುತ್ತವೆ. ಅದು ಜನರ ಕಣ್ಣಿಗೆ ಬೀಳುತ್ತದೆ. ಅಂತಹ ಸಮಯದಲ್ಲಿ ಆ ಲೋಪದೋಷಗಳನ್ನು ಸರಿಪಡಿಸಿಕೊಳ್ಳುವುದು ಸರ್ಕಾರದ ಮತ್ತು ಜನರ ಕರ್ತವ್ಯವಾಗಿರುತ್ತದೆ. ಈ ಲೋಪದೋಷಗಳ ಬಗೆಗೆ ಕೆಲವೊಂದು ವಿಚಾರಗಳನ್ನು ಹೇಳುತ್ತೇನೆ. ಬಡ್ಜೆಟ್ ಮಾಡಬೇಕಾದರೆ ಮಂತ್ರಿಗಳು ಪ್ರವಾಸ ಮಾಡುವುದನ್ನು ಕಡಿಮೆ ಮಾಡಬೇಕಾಗುತ್ತದೆ. ಒಂದೊಂದು ಸಾರಿಗೆ ಒಂದೊಂದು ಜಿಲ್ಲೆಗಳಿಗೆ 5—6 ಜನ ಮಂತ್ರಿಗಳು ಮತ್ತು ಅವರ ಸಿಬ್ಬಂದಿಗಳು ಪ್ರವಾಸ ಹೋಗುತ್ತಾರೆ. ಇದರಿಂದ ಸರ್ಕಾರಕ್ಕೆ ಬಹಳ ಖರ್ಚು ಬರುತ್ತದೆ. ಇನ್ನು ಮುಂದೆ ಮಂತ್ರಿಗಳು ಹಚ್ಚಿನ ಪ್ರವಾಸ ಮಾಡುವುದನ್ನು ನಿಲ್ಲಿಸಿ ಜನರ ಕಲ್ಯಾಣಕ್ಕಾಗಿ ದುಡಿಯಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಶ್ರೀ ವಿ. ಎನ್. ಪಾಟೀರ್.—ಅದು ಸತ್ಯವಾದ ಮಾತು.

ಶ್ರೀಮತಿ ಚಂಪಾಬಾಯಿ ಭೋಗರೆ.—ನಾನು ಮಾತನಾಡುವಾಗ ತಾವು ನುಮ್ಮನೆ ಕುಳಿತು ಕೊಳ್ಳಬೇಕು. ನಾವು ಇರುವ ತಪ್ಪನ್ನು ಒಪ್ಪಿಕೊಳ್ಳುತ್ತೇವೆ. ಮತ್ತು ಸರಿಪಡಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ. ರಾಜ್ಯದ ಪ್ರತಿಯೊಂದು ಭಾಗಗಳಲ್ಲಿಯೂ ಅಭಿವೃದ್ಧಿ ಕಾರ್ಯಗಳನ್ನು ಸರಕಾರದವರು ಮಾಡಿಸುವಾಗ ಎಲ್ಲಿ ಕೆಲಸವಾಗಿದೆ ಎಲ್ಲಿ ಸಾಕಷ್ಟು ಕೆಲಸಗಳು ಆಗಿಲ್ಲ ಎಂಬ ಬಗ್ಗೆ ನರ್ವೆ ಮಾಡಿಸಬೇಕು. ಈಗ ಮಂತ್ರಿಗಳು ತಮ್ಮ ತಮ್ಮ ಕ್ಷೇತ್ರಗಳಲ್ಲಿ ಮಾತ್ರ ಅಭಿವೃದ್ಧಿ ಕೆಲಸಗಳನ್ನು ಮಾಡಿಸುತ್ತಿದ್ದಾರೆ. ಇದು ಸರಿಯಲ್ಲ. ಸ್ವರಾಜ್ಯ ಬಂದು 20 ವರ್ಷಗಳಾದರೂ ಸಹ ನಮ್ಮ ಭಾಗದಲ್ಲಿ ಸಾಕಷ್ಟು ಕೆಲಸವಾಗಿದೆಯೋ ಇಲ್ಲವೋ ಎಂಬುದನ್ನು ಸರ್ಕಾರದವರು ಗಮನಿಸಿ ನಮ್ಮ ಭಾಗಕ್ಕೆ ಸ್ವಲ್ಪ ಹೆಚ್ಚು ಹಣವನ್ನು ಖರ್ಚು ಮಾಡಬೇಕು. ಇದು ಬಿಟ್ಟು ಮಂತ್ರಿಗಳು ತಮ್ಮ ಕ್ಷೇತ್ರ, ತಮ್ಮ ಬಳಗದವರ ಕ್ಷೇತ್ರ ಎಂದು ಕೆಲವು ಭಾಗಗಳಲ್ಲಿ ಮಾತ್ರ ಅಭಿವೃದ್ಧಿ ಕೆಲಸಗಳನ್ನು ಮಾಡಿಸಿಕೊಳ್ಳುವುದು ಸರಿಯಲ್ಲ. ಕಾಂಗ್ರೆಸ್ ಸರ್ಕಾರವೇ ತಪ್ಪು ಮಾಡುತ್ತಿರುವುದರಿಂದ ನಾನು ಹೇಳುತ್ತಿದ್ದೇನೆ. ಈ ರೀತಿ ಮಾಡುವುದರಿಂದ ಮುಂದೆ ಕಾಂಗ್ರೆಸ್ ಸಂಸ್ಥೆಗೆ ಕೆಟ್ಟ ಹೆಸರು ಬರುತ್ತದೆ. ಈ ರೀತಿ ಮಾಡುವುದನ್ನು ತಿದ್ದಿಕೊಳ್ಳುವುದಕ್ಕೆ ಇನ್ನು ಮುಂದೆಯಾದರೂ ಪ್ರಯತ್ನ ಮಾಡಬೇಕು. ಇವತ್ತಿನ ದಿವಸ ಸರ್ಕಾರಿ ಕಛೇರಿಗಳಲ್ಲಿ ಕೆಲಸ ಮಾಡುತ್ತಿರುವ ಕೆಲವು ಅಧಿಕಾರಿಗಳು ಸಿ.ಐ.ಡಿ.ಗಳಾಗಿದ್ದಾರೆ. ಇವರು ಸರ್ಕಾರದ ರಹಸ್ಯದ ವಿಚಾರಗಳನ್ನು ಹೊರಗಿನವರಿಗೆ ತಿಳಿಸುತ್ತಿದ್ದಾರೆ. ಈ ಕಾರಣದಿಂದ ಕೆಲವೊಂದು ವಿಚಾರಗಳು ಇಷ್ಟೊಂದು ವಿಕೋಪಕ್ಕೆ ಹೋಗುವುದಕ್ಕೆ ಕಾರಣವಾಗಿದೆ. ಸರ್ಕಾರೀ ಕಛೇರಿಗಳ ಗೋಡೆಗಳು ಕಿವಿಗಳಾಗಿವೆ. ಅಧಿಕಾರಿಗಳು ತಮ್ಮ ಕರ್ತವ್ಯ ಮಾತದೆ ಸಿ.ಐ.ಡಿ. ಕೆಲಸ ಮಾಡುತ್ತಿದ್ದಾರೆ. ಇಂತಹವರ ಬಗ್ಗೆ ಸರ್ಕಾರ ಎಚ್ಚರಿಕೆಯಿಂದ ಇರಬೇಕೆಂದು ಘಂಟಾ ಘೋಷವಾಗಿ ಹೇಳುತ್ತಿದ್ದೇನೆ. ನಾವೇನಾದರೂ

(ಶ್ರೀಮತಿ ಜಂಪಾಬಾಯಿ ಭೋಗಲೆ)

ಪ್ರಶ್ನೆಗಳನ್ನು ಕೇಳಿದರೆ ಈ ಅಧಿಕಾರಿಗಳು ಸರಿಯಾದ ಉತ್ತರ ಕಳಿಸದಿರುವುದರಿಂದ ಮತ್ತೆ ನಾವುಗಳು 5—6 ಪ್ರಶ್ನೆಗಳನ್ನು ಕೇಳಬೇಕಾಗುತ್ತದೆ. ಇನ್ನು ಮುಂದೆ ಸರಿಯಾದ ಉತ್ತರವನ್ನು ಅಧಿಕಾರಿಗಳು ಒದಗಿಸುವಂತೆ ಸರ್ಕಾರ ನೋಡಿಕೊಳ್ಳಬೇಕು. ನಾನು ಈ ಸಭೆಗೆ ಬಂದು 12 ವರ್ಷಗಳಾಯಿತು. ಸರ್ಕಾರಕ್ಕೆ ನನ್ನ ಕ್ಷೇತ್ರದಲ್ಲಿ ಆಗಬೇಕಾಗಿರುವ ಅಭಿವೃದ್ಧಿ ಕಾರ್ಯಗಳ ಬಗ್ಗೆ ಹೇಳುತ್ತಲೇ ಇದ್ದೇನೆ. ಆದರೆ ಯಾವ ಕೆಲಸಗಳನ್ನು ಮಾಡಿಲ್ಲ. ನನ್ನ ಕ್ಷೇತ್ರ ಈ ಸಂಸ್ಥಾನದ ಮೂಲೆಯಲ್ಲಿದೆ. ನನ್ನ ಕ್ಷೇತ್ರದಲ್ಲಿ 46 ಹಳ್ಳಿಗಳು ಇವೆ. ನಮ್ಮ ಕ್ಷೇತ್ರದ ಮಧ್ಯೆ ಕೃಷ್ಣಾನದಿ ಹರಿಯುತ್ತಿದೆ. ಮಾನ್ಯ ಮಂತ್ರಿಗಳಾದ ಶ್ರೀ ಪವಾರ ಅವರ ಕ್ಷೇತ್ರವೂ ಸಹ ಹಳ್ಳಿಗಳಿಂದ ಕೂಡಿದೆ. ನನ್ನ ಕ್ಷೇತ್ರದಲ್ಲಿ ಒಂದು ಒಳ್ಳೆಯ ರಸ್ತೆ ಇಲ್ಲ. ಹೋದವರ್ಷ ನಾನು ಆರ್ಥಿಕ ಮಂತ್ರಿಗಳಾದ ಶ್ರೀ ರಾಮಕೃಷ್ಣ ಹೆಗಡೆಯವರನ್ನು ಮತ್ತು ಹಿಂದಿನ ರೋಕೋಪಯೋಗಿ ಇಲಾಖೆಯ ಮಂತ್ರಿಗಳಾದ ವೀರೇಂದ್ರ ಪಾಟೀಲರನ್ನು ಒಂದು ರಸ್ತೆಯನ್ನು ನನ್ನ ಕ್ಷೇತ್ರದಲ್ಲಿ ಮಾಡಿಸಿಕೊಡ ಬೇಕೆಂದು ಕೇಳಿದಾಗ 3 ಲಕ್ಷ 50 ಸಾವಿರ ರೂಪಾಯಿಗಳ ವೆಚ್ಚದ ಸಿರಗುಪ್ಪ ಮತ್ತು ಗಂಗಾವತಿ ರಸ್ತೆಯನ್ನು ಮಾಡಿಸಿಕೊಡಲು ಒಪ್ಪಿದರು. ಮತ್ತು ಸರ್ಕಾರದ ಭಾಗವಾದ 2 ಲಕ್ಷ 20 ಸಾವಿರ ರೂಪಾಯಿಗಳನ್ನು ಮಂಜೂರು ಮಾಡಿದರು. ಉಳಿದ ಹಣವಾದ ಒಂದು ಲಕ್ಷದ 30 ಸಾವಿರ ರೂಪಾಯಿಗಳನ್ನು ಅಲ್ಲಿಯ ಸಕ್ಕರೆ ಕಂಪನಿಯವರು ಕೊಡಬೇಕಾಗಿತ್ತು. ಅವರು ತಮ್ಮ ಭಾಗದ ಹಣವನ್ನು ಸರ್ಕಾರಕ್ಕೆ ತುಂಬಲಿಲ್ಲ, ರಸ್ತೆ ಆಗಲಿಲ್ಲ. ಆ ಸಕ್ಕರೆ ಕಂಪನಿಯವರು ಹಣ ಮಾಡಿ ಕೊಳ್ಳುತ್ತಿದ್ದಾರೆಯೇ ವಿನಃ ಈ ರಸ್ತೆಗೆ ಕೊಡಬೇಕಾದ 1 ಲಕ್ಷದ 30 ಸಾವಿರ ರೂಪಾಯಿಗಳನ್ನು ಕೊಡುವುದಕ್ಕೆ ತಯಾರಾಗಿಲ್ಲ. ಇಂತಹ ಒಂದು ಪರಿಸ್ಥಿತಿಯಲ್ಲಿ ಹೆಣ್ಣುಮಗಳ ಕ್ಷೇತ್ರವಾದ ಅಲ್ಲಿ ಜನರು ಓಡಾಡುವುದಕ್ಕೆ ಒಂದು ಒಳ್ಳೆಯ ರಸ್ತೆ ಇಲ್ಲವಾಗಿದೆ. ಅಲ್ಲಿ ಕೃಷ್ಣಾನದಿ ಹರಿಯುತ್ತಿರುವುದರಿಂದ ಜನರು ಓಡಾಡುವುದಕ್ಕೆ ಒಳ್ಳೆಯ ರಸ್ತೆ ಇಲ್ಲದೆ ಬಹಳ ತೊಂದರೆಯಾಗಿದೆ. ನನ್ನಂತಹ ಹೆಣ್ಣುಮಕ್ಕಳಿಗೆ ಜೀವದಾನ ಮಾಡುವ ಶಕ್ತಿ ಇದೆಯೇ ಹೊರತು ಹಣ ಕೊಡುವ ಶಕ್ತಿ ಇಲ್ಲ. ನನ್ನ ಕ್ಷೇತ್ರದ 6 ಮೈಲಿ ಸುತ್ತಳತೆಯಲ್ಲಿ 17 ಹಳ್ಳಿಗಳಿವೆ. ಈ ಹಳ್ಳಿಯ ಜನರು ಓಡಾಡುವುದಕ್ಕೆ ಈ 6 ಮೈಲಿ ಸುತ್ತಳತೆಯಲ್ಲಿ ಒಂದು ಒಳ್ಳೆಯ ರಸ್ತೆ ಇಲ್ಲ. ಸಿರಗುಂದ್‌ಗೆ ಹೋಗಲು ಯಾವ ಕಡೆಯಿಂದಲೂ ಒಂದು ಅಪ್ರೋಚ್ ರೋಡ್ ಇಲ್ಲ. ಇದೇ ಕಾರಣಕ್ಕಾಗಿ ನನ್ನ ಕ್ಷೇತ್ರದ ಕೆಲವು ಹಳ್ಳಿಯ ಜನರು ಚುನಾವಣೆಯಲ್ಲಿ ಓಟು ಕೊಡದೆ ಬರೀ ಪೆಟ್ಟಿಗೆಯನ್ನು ಕಳಿಸಿದ್ದಾರೆ. ಕಾಂಗ್ರೆಸ್ ಪಕ್ಷ ನನಗೆ ಓಟು ಕೊಡಲು ಅವರು ತಯಾರಿಲ್ಲದ ಮೇಲೆ ನಾನು ಅವರ ಪ್ರತಿನಿಧಿಯಾಗಿದ್ದು ಏನು ಪ್ರಯೋಜನ. ಅಲ್ಲಿಯ ಜನರು ನನ್ನ ವಿಚಾರದಲ್ಲಿ ತಪ್ಪು ತಿಳಿದಿದ್ದಾರೆ. ಕಾರಣ ಸರ್ಕಾರದವರು ಅಲ್ಲಿ ಯಾವ ಕೆಲಸಗಳನ್ನು ಸಹ ಮಾಡಿಸದಿರುವುದು. ಈ ವಿಚಾರದಲ್ಲಿ ಮುಖ್ಯಮಂತ್ರಿಗಳಿಗೆ ಒಂದು ಕಾಗದವನ್ನು ಸಹ ಬರೆದಿದ್ದೇನೆ. ಅವರು ನೂಕ್ಕ ಕ್ರಮ ತೆಗೆದುಕೊಂಡು ನನ್ನ ಕ್ಷೇತ್ರದಲ್ಲಿ ಅಭಿವೃದ್ಧಿ ಕೆಲಸಗಳನ್ನು ಮಾಡಿಸುತ್ತಾರೆಂದು ನಂಬಿದ್ದೇನೆ. ನಾನೇನು ಇಲ್ಲಿಗೆ ಅಧಿಕಾರಿಗಳನ್ನು ಒಂದು ಕಡೆಯಿಂದ ಇನ್ನೊಂದು ಕಡೆಗೆ ವರ್ಗಾ ಮಾಡಿಸಿ ಎಂದು ಹೇಳುವುದಕ್ಕೆ ಬಂದಿಲ್ಲ. ನಾನು ಸರ್ಕಾರಕ್ಕೆ ಬೆಂಬಲ ಕೊಡುವುದಕ್ಕೆ ಬಂದಿದ್ದೇನೆ. ಈ ಪರಿಸ್ಥಿತಿಯೊಳಗೆ ಇಲ್ಲಿ ಆಗುತ್ತಿರುವ ಅನ್ಯಾಯಗಳನ್ನು ಸರಿಪಡಿಸಬೇಕೆಂದು ಕೇಳಿಕೊಳ್ಳುತ್ತೇನೆ. ಟೂರುಗಳನ್ನು ಕಡಿಮೆ ಮಾಡಿ ಇದಕ್ಕೆ ಆಗುವ ಖರ್ಚನ್ನು ನಮ್ಮ ಕಡೆ ಇರುವ ಮಹತ್ವವಾದ ಕೆಲಸಗಳಿಗಾದರೂ ವೆಚ್ಚ ಮಾಡಿದರೆ ಅದರಿಂದ ಜನಕ್ಕೆ ಅನುಕೂಲವಾಗುತ್ತದೆ. ನಮ್ಮ ಕಡೆ ಸರಿಯಾದ ರಸ್ತೆಗಳಿಲ್ಲ. ಬರಗಾಲಕ್ಕೆ ಸಿಕ್ಕಿದ ಭಾಗಗಳೇ ಹೆಚ್ಚಾಗಿವೆ. ಅಲ್ಲಲ್ಲಿ ಒಡ್ಡುಗಳನ್ನು ಹಾಕಿದರೆ ರಸ್ತೆಗಳು ಸೇರುವಂತೆ ಆಗಲು ಅನುಕೂಲವಾಗುತ್ತದೆ. ನಮ್ಮ ಕಡೆ ಸರ್ವೆ ಮಾಡಿಸಿದರೆ ಏನೇನು ಕೆಲಸ ಮಾಡಬೇಕು ಎನ್ನುವುದು ಗೊತ್ತಾಗುತ್ತದೆ ಎಂದು ನುಮಾರು ಎರಡು ವರ್ಷದಿಂದಲೂ ಹೇಳುತ್ತಿದ್ದರೂ ಸರಕಾರ ಇದರ ಕಡೆಗೇ ಗಮನ ಕೊಡುತ್ತಿಲ್ಲ. ಕೆಲವು ಕಡೆ ಎಸ್ಟಿಮೇಟು ಪ್ಲಾನುಗಳು ಆಗಿದ್ದರೂ ಇನ್ನೂ ಕೆಲಸಗಳನ್ನು ತೆಗೆದುಕೊಂಡು ಪೂರ್ತಿ ಮಾಡಲಿಲ್ಲ. ಇನ್ನು ನಮ್ಮಲ್ಲಿ ಸರಿಯಾದ ದವಾಖಾನೆಗಳೇ ಇಲ್ಲ. ದವಾಖಾನೆ ಬೇಕಾದರೆ ಜನ ಆರು ಮೈಲಿಗಳ ದೂರ ಹೋಗಬೇಕಾಗಿದೆ. ಇದರ ಕಡೆಗೆ ಸರ್ಕಾರ ಲಕ್ಷ ಕೊಟ್ಟು ಹೆಚ್ಚು ದವಾಖಾನೆಗಳು ಆಗುವಂತೆ ಏರ್ಪಾಡು ಮಾಡಬೇಕು. ಹಿಂದೆ ಇಲ್ಲಿ ಚುನಾವಣೆ ನಡೆದಾಗ ವೋಟು ಕೊಡಬೇಕೆಂದು ನಮ್ಮ ಜನ ಹೋಗಲು ಸರಿಯಾದ ರಸ್ತೆಗಳೇ ಇರಲಿಲ್ಲ. ಹೇಗೋ ಇಲ್ಲ ಕಾಂಗ್ರೆಸ್ಸು ಸದಸ್ಯಳಾಗಿ ನನ್ನ ಕ್ಷೇತ್ರದಿಂದ ಬಂದಿದ್ದರೂ ನಮ್ಮ ಕಡೆಯಲ್ಲಿರುವ ಜನರು ನಾನು ಸರಕಾರದಲ್ಲಿ ಹೋಗಿ ಏನೂ ಹೇಳುತ್ತಿಲ್ಲ. ಇದರಿಂದ ಸರಕಾರದವರೂ ಯಾವ ಕೆಲಸಗಳನ್ನೂ ಮಾಡುತ್ತಿಲ್ಲ ಎಂದು ಹೇಳುತ್ತಾರೆ. ನಮ್ಮ ಏರಿಯಾ ತುಂಬಾ ಹಿಂದುಳಿದಿದೆ ಇದಕ್ಕಾಗಿ ಇದನ್ನು ಒಂದು ಸ್ಪೆಷರ್ ಏರಿಯಾ ಎಂದು ಗಮನಕ್ಕೆ ತೆಗೆದುಕೊಂಡು ಇಲ್ಲಿ ಹೆಚ್ಚು

ಕೆಲಸಗಳಾಗುವಂತೆ ಸರಕಾರ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ. ನಮ್ಮ ಕಡೆ ಮೊದಲು ರೋಡುಗಳನ್ನು ಮಾಡಿಕೊಡಿ. ಪಂಪುಸೆಟ್ಟುಗಳನ್ನು ಕೊಡಿ ಹಾಗೂ ಇನ್ನಿತರ ಸೌಕರ್ಯಗಳನ್ನೂ ನಮ್ಮ ಜನಕ್ಕೆ ಮಾಡಿಕೊಡಿ. ರೈತರಿಗೆ ಅದಷ್ಟು ಕೆಲಸಗಳು ಸಿಗುವಂತೆ ಏರ್ಪಾಡು ಮಾಡಿ. ಇದಕ್ಕಾಗಿ ನಮ್ಮ ಭಾಗಕ್ಕೆ ಹೆಚ್ಚು ದುಡ್ಡು ಕೊಟ್ಟು ಇವೆರ್ಲಾ ಕೆಲಸಗಳು ಬೇಗನೆ ಆಗುವಂತೆ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಈಗ ಗಾಂಧಿ ಶತಾಬ್ದಿ ಮಾಡಬೇಕೆಂದು ಬಹಳ ದೊಡ್ಡದಾಗಿ ಸರಕಾರ ಎಲ್ಲಲ್ಲಿ ಬೇಕಾವಷ್ಟು ಕೆಲಸಗಳನ್ನು ಮಾಡಬೇಕೆಂದು ಇದ್ದಾರೆ. ಮಹಾತ್ಮ ಗಾಂಧಿಯವರು ಸತ್ತು ನೂರಾರು ಇಪ್ಪತ್ತು ವರ್ಷಗಳಾದವು. ಅವರು ಹೇಳುತ್ತಿದ್ದ ಅಸ್ಪೃಶ್ಯತಾ ನಿವಾರಣೆ ಕೆಲಸ ಇನ್ನೂ ಏನೂ ಆಗಲಿಲ್ಲ. ಬರೀ ಬಾಯಲ್ಲಿ ಅಸ್ಪೃಶ್ಯತಾ ನಿವಾರಣೆಯಾಗುತ್ತಿದೆ ಎಂದು ಮಾತ್ರ ಹೇಳುತ್ತಿದ್ದಾರೆ. ಈ ದೇಶದ ಜನತೆಯ ಕಲ್ಯಾಣ ಮಾಡಬೇಕಾದರೆ ಮಹಾತ್ಮ ಗಾಂಧಿಯವರು ಹೇಳುತ್ತಿದ್ದ ಅಸ್ಪೃಶ್ಯತಾ ನಿವಾರಣೆಯ ಕಾರ್ಯಕ್ರಮಗಳು ಸಫಲಗೊಳ್ಳುವಂತೆ ಮಾಡಿದರೆ ಆಗ ನಮ್ಮ ಸರಕಾರಕ್ಕೆ ಒಳ್ಳೆಯ ಹೆಸರು ಬರುತ್ತದೆ. ಇದರ ಕಡೆಗೆ ಒಂದು ಸರಿಯಾದ ಸ್ಕೀಂ ಹಾಕಿಕೊಂಡು ಸೂಕ್ತವಾದ ಕೆಲಸಗಳನ್ನು ಮಾಡಲು ಏರ್ಪಾಡು ಮಾಡುವುದು ಅವಶ್ಯಕ. ವರ್ಷೇ ವರ್ಷೇ ಜನರಲ್ ಅಡ್ಮಿನಿಸ್ಟ್ರೇಷನ್‌ನಲ್ಲಿ ಹೆಡ್ಡಾಗಿ ಎನ್.ಇ.ಎಸ್. ಬಾಬಿಗೆ ಖರ್ಚಾಗುತ್ತಿದೆ. ಅವರಿಂದ ಯಾವ ರೀತಿಯಾದ ಹೆಚ್ಚು ಕೆಲಸಗಳೂ ಇಲ್ಲಿ ಆಗುತ್ತಿಲ್ಲ. ಆದುದರಿಂದ ಗಾಂಧಿ ಶತಾಬ್ದಿ ಮಾಡಬೇಕು ಎಂದು ಇರುವ ಈ ಕಾಲವನ್ನು ಇದಕ್ಕಾಗಿ ಪ್ರತ್ಯೇಕವಾದ ಒಂದು ಸ್ಪೆಷಲ್ ಸ್ಕೀಂ ಹಾಕಿಕೊಂಡು ಸುಧಾರಣೆ ಮಾಡಬೇಕು ಮತ್ತು ದೇಶದಲ್ಲಿ ಅಸ್ಪೃಶ್ಯತಾ ನಿವಾರಣೆ ಮಾಡಬೇಕು. ನಾನಾಗಲೇ ಹೇಳಿದ ಕೆಲವು ಸಲಹೆಗಳನ್ನು ಸರಕಾರದವರು ಕಾರ್ಯರೂಪಕ್ಕೆ ತರಬೇಕು ಎಂದು ಆಶಿಸಿ ನನಗೆ ಇಷ್ಟು ಮಾತಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ನನ್ನ ವಂದನೆಗಳನ್ನು ಅರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಬೋಳಾ ರಘುರಾಮ ಶೆಟ್ಟಿ (ಕಾರ್ಕಳ).—ಮಾನ್ಯ ಅಧ್ಯಕ್ಷರೇ, ಆರ್ಥಿಕ ಮಂತ್ರಿಗಳು 1969-70 ನೇ ಸಾಲಿನ ಆಯವ್ಯಯಪತ್ರವನ್ನು ಈ ಸಭೆಯ ಮುಂದಿಟ್ಟಿದ್ದಾರೆ. ಸಾಮಾನ್ಯವಾಗಿ ಆರ್ಥಿಕ ಮಂತ್ರಿಗಳು ನಮ್ಮ ದೇಶದ ಪರಿಸ್ಥಿತಿಗಳನ್ನು ಸರಿಯಾಗಿ ಅನಲೈಸು ಮಾಡಿಕೊಂಡು ಅವರ ಅಭಿಪ್ರಾಯಗಳನ್ನು ಈ ಸಭೆಯಮುಂದೆ ಇಟ್ಟಿದ್ದಾರೆ. ಇದರ ಬಗ್ಗೆ ಚರ್ಚೆ ಮಾಡುತ್ತಾ, ಕೆಲವಾರು ವಿಚಾರಗಳನ್ನು ಇಲ್ಲಿ ಹೇಳಬಯಸುತ್ತೇನೆ. ಕೈಗಾರಿಕೆ ಬಗ್ಗೆ ನಮ್ಮ ಆರ್ಥಿಕ ಧೋರಣೆ ಯಾವ ರೀತಿ ಇದೆ ಎನ್ನುವುದನ್ನು ಈ ಬಜೆಟ್ಟಿನಲ್ಲಿ ಏನೋ ಹೇಳಿರುವಂತೆ ಕಾಣುವುದಿಲ್ಲ. ಇದಕ್ಕೆ ಅವರ ಭಾಷಣದಲ್ಲಿ ಇವನ್ನೆಲ್ಲಾ ಎನ್‌ಕ್ವೈರುಮಾಡಲು ಶ್ರೀ ಭೂತಲಿಂಗಂ ಎನ್ನುವವರ ನೇತೃತ್ವದಲ್ಲಿ ಒಂದು ಕಮಿಷನ್ ಮಾಡಿದ್ದೇವೆ, ಅವರು ಎಲ್ಲಾ ವಿಚಾರಗಳನ್ನು ಪರಿಶೀಲಿಸಿ ಮುಂದೆ ತಿಳಿಸುತ್ತಾರೆ ಎಂದು ಹೇಳಿದ್ದಾರೆ. ಇಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಅವರ ಜವಾಬುದಾರಿಯನ್ನು ಸರಿಯಾಗಿ ನಿರ್ವಹಿಸಲಿಲ್ಲ ಎಂದು ನಾನು ಹೇಳಬಯಸುತ್ತೇನೆ. ಮುಖ್ಯವಾಗಿ ಸರಕಾರದವರು ಮಾತುತ್ತಿರುವ ಸಾಲಗಳು ನಮ್ಮ ಜನತೆಯನ್ನು ಹೆಚ್ಚು ಬಾಧಿಸುತ್ತಿದೆ. ಈಗಿನ ಕಾಲದಲ್ಲಿ ಇಷ್ಟು ಹೆಚ್ಚು ಬಡ್ಡಿ ದರದಲ್ಲಿ ಸಾಲವನ್ನು ಮರುಪಾವತಿ ಮಾಡುವುದಕ್ಕಾಗುತ್ತದೆಯೇ? ಸಾಲಗಳೇನೇ ಇರಲಿ ಈಗಿನ ಕಾಲದಲ್ಲಿ ಬಡ್ಡಿ ಕೊಡುವುದೇ ಕಷ್ಟವಾಗುತ್ತಿದೆ. ಇದರ ಮೇಲೆ ಅಸಲನ್ನು ಕೊಡಬೇಕಾದರೆ ಅದಕ್ಕೆ ಎಷ್ಟೋ ಸಮಯ ಬೇಕಾಗುತ್ತದೆ. ಇದರ ಬಗ್ಗೆ ಯಾವ ಧೋರಣೆ ಇವೆ ಎನ್ನುವುದರ ವಿಚಾರದಲ್ಲಿ ಯಾವುದನ್ನು ಇಲ್ಲಿ ಹೇಳಲಿಲ್ಲ ಮತ್ತು ನಮ್ಮ ಸರಕಾರ ಸಾಲ ಮಾಡುತ್ತಿರುವುದು ಬಹಳ ಹೆಚ್ಚಾಗುತ್ತಿದೆ. ಇದನ್ನು ತೀರಿಸುವುದರ ಕಡೆಗೆ ತಕ್ಕ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು. ಸಾಲದ ರೂಪದಲ್ಲಿ ತೆಗೆದುಕೊಂಡ ಹಣವನ್ನು ಉತ್ತಮವಾದ ವ್ಯವಹಾರಗಳಿಗಾಗಿ ಖರ್ಚು ಮಾಡಬೇಕು. ಈಗ ನಾವು ಸರಿಯಾಗಿ ಯೋಜನೆಗಳಿಗೆ ಖರ್ಚು ಮಾಡುತ್ತಿಲ್ಲ ಎಂದು ಪಶ್ಚಾತ್ತಾಪ ಪಡುತ್ತಿದ್ದರೆ ನಮ್ಮ ಜವಾಬುದಾರಿ ಅಲ್ಲಿಗೇ ನಿಲ್ಲುವುದಿಲ್ಲ. ಮುಖ್ಯವಾಗಿ ಸರಕಾರದವರು ಸರಕಾರಿ ಉದ್ಯಮಗಳಲ್ಲಿ ಹೇರಳವಾದ ಸಂಪತ್ತನ್ನು ಬಂಡವಾಳವಾಗಿ ಹಾಕಿದ್ದಾರೆ. ಇಂತಹ ಉದ್ಯಮಗಳನ್ನು ಫಲದಾಯಕವಾಗಿ ನಡೆಸುವುದಕ್ಕೆ ಸಾಧ್ಯವೇ ಎಂದು ನಮ್ಮ ಅನುಭವದಲ್ಲಿ ನೋಡಿದರೆ ಇದು ಸರಿಯಾಗಿ ನಡೆಯುತ್ತಿಲ್ಲ ಎನ್ನುವುದು ಗೊತ್ತಾಗುತ್ತದೆ. ಇದರ ಬಗ್ಗೆ ವಿಚಾರ ಮಾಡುವುದು ಅಗತ್ಯವಾಗಿದೆ. ಸರಕಾರದ ಉದ್ಯಮಗಳಲ್ಲಿ ತಯಾರಾಗುವ ಪದಾರ್ಥಗಳಿಗೆ ಮಾರ್ಕೆಟ್ಟಿನಲ್ಲಿ ಇನ್ನೂ ಕಡಿಮೆ ಬೆಲೆ ಇರುವುದರಿಂದ ಇಂತಹ ಕೈಗಾರಿಕೆಗಳಿಂದ ಉತ್ಪತ್ತಿಯಾದ ಪದಾರ್ಥಗಳನ್ನು ಸರಕಾರಕ್ಕೆ ರಾಯಧ ಬರುವಂತೆ ಹೇಗೆ ಮಾರಿ ಇದನ್ನು ಮುಂದುವರಿಸಬೇಕು ಎನ್ನುವುದು ಇದರಲ್ಲಿ ಒಂದು ಮುಖ್ಯ ಪ್ರಶ್ನೆಯಾಗಿದೆ.

(ಶ್ರೀ ಬೋಳಾ ರಘುರಾಮ ಶೆಟ್ಟಿ)

ಈ ರೀತಿ ನಮ್ಮ ಸಾರ್ವಜನಿಕರ ಹಣ ಹಾಳಾಗುತ್ತಿದೆ. ಅದನ್ನು ಅವರೂ ಕೂಡ ಸರಿಯಾಗಿ ಅರ್ಥ ಮಾಡಿಕೊಂಡಿದ್ದಾರೆ ಎಂದು ಹೇಳಿದ್ದಾರೆ. ನಮ್ಮ ದೇಶದ ಹಿತದೃಷ್ಟಿಯಿಂದ ಇಂತಹ ಸರಕಾರಿ ಉದ್ದಿಮೆಗಳಿಗೆ ಖಾನಗಿ ಬೇಡಿಕೆ ಬಂದರೆ, ಯೋಗ್ಯರಿಗೆ ಕೊಟ್ಟರೆ ಒಳ್ಳೆಯದು ಎಂದು ಹೇಳಿದ್ದಾರೆ. ಅದಲ್ಲದೆ ಈ ಉದ್ದಿಮೆಗಳ ರೋಪಪೋಷಣೆಗಳನ್ನು ಸರಿಪಡಿಸಲು ಮತ್ತು ದಕ್ಷತೆಯನ್ನು ಹೆಚ್ಚುಮಾಡಲು ವಿಧಾನಮಂಡಲದ ಪ್ರತ್ಯೇಕ ಸಮಿತಿಯೊಂದನ್ನು ಮಾಡಬೇಕೆಂದು ಹೇಳಿದ್ದಾರೆ. ಅಂಥ ಒಂದು ಸಮಿತಿಗೆ ಸರಿಯಾದವರನ್ನು ನೇಮಿಸಬೇಕು. ಈ ವಿಧಾನ ಮಂಡಲದ ಒಂದು ಸಮಿತಿ ಮಾಡಿದರೂ ಕೂಡ ಅದರಿಂದ ಸರಿಯಾದ ಒಂದು ನಿರ್ಣಯ ಮಾಡುವುದಕ್ಕೆ ಬರುವುದಿಲ್ಲ. ಉದ್ದಿಮೆಗಳನ್ನು ನಡೆಸುವಂಥಾವರು, ಎಕನಾಮಿಸ್ಟ್ಸ್ ಆದಂಥವರು, ಜವಾಬ್ದಾರಿ ಉಳ್ಳಂಥವರ ಒಂದು ಸಮಿತಿ ಮಾಡಿದರೆ ಸರಿಯಾದ ನಿರ್ಣಯ ಬರಬಹುದು ಎಂದು ಹೇಳುತ್ತೇನೆ.

ಇನ್ನು ಶಿಕ್ಷಣ ಕ್ಷೇತ್ರದಲ್ಲಿ 65-66 ರಲ್ಲಿ 24 ಕೋಟಿ ಇದ್ದುದು 1969-70 ರಲ್ಲಿ 46 ಕೋಟಿ ರೂಪಾಯಿ ಖರ್ಚು ಮಾಡಲು ಈ ಬಜೆಟ್ಟಿನಲ್ಲಿ ತೋರಿಸಿದ್ದಾರೆ. ಅದರೆ ಅದರಲ್ಲಿ ಮುಖ್ಯವಾಗಿ ವಿಮರ್ಶೆ ಮಾಡುವ ವಿಷಯ ನಾವು ಶಿಕ್ಷಣದಲ್ಲಿ ಏನು ಖರ್ಚು ಮಾಡುತ್ತೇವೋ ಆ ಒಂದು ಮೌಲ್ಯ ಅಷ್ಟು ನ್ಯಾಯವಾದ ರೀತಿಯಲ್ಲಿ ಖರ್ಚು ಮಾಡುತ್ತೇವೆಯೇ ಎಂದು ಶಿಕ್ಷಣ ಇಲಾಖೆಯಲ್ಲಿ ನಲಹೆಗಾರರು ಬಂದಾಗಲೆಲ್ಲಾ ತಮಗೆ ಅನುಕೂಲವಾದ ಹಾಗೆ ನಲಹೆಗಳನ್ನು ಬದಲಾಯಿಸುತ್ತಾರೆ, ಎಕ್ಸ್‌ಪೆರಿಮೆಂಟ್ ಮಾಡುತ್ತಾರೆ ಎಂದು ಹೇಳುತ್ತಾರೆ. ಅವು ತಮ್ಮ ತಪ್ಪನ್ನು ಹಾರಿಸಿಕೊಳ್ಳುವಂಥ ನೀತಿಯನ್ನು ಈ ವಿದ್ಯಾಕ್ಷೇತ್ರದಲ್ಲಿ ಮಾಡಬಾರದು. ಈ ರೀತಿ ಮಾಡಿದರೆ ಅನ್ಯಾಯವಾಗುತ್ತದೆ. ಇದರ ಗುಣ ಯಾವರೀತಿಯಲ್ಲಿ ಉಂಟು ಎನ್ನುವುದನ್ನು ನೋಡಿದರೆ ಪರೀಕ್ಷೆಯಲ್ಲಿ ಬರತಕ್ಕಂಥ ಒಂದು ರಿಸಲ್ಟ್ ನೋಡಿದರೆ ಗೊತ್ತಾಗುತ್ತದೆ. ಈವೊತ್ತಿನ ದಿವಸ ಅದರ ಬಗ್ಗೆ ನಾನು ಹೇಳುವುದಾದರೆ ಪ್ರಾಥಮಿಕ ವಿದ್ಯಾಭ್ಯಾಸದಲ್ಲಿ ಈವೊತ್ತಿನವರೆಗೂ ಏಕರೂಪತೆ ಬರಲಿಲ್ಲ. ಅದನ್ನು ಅಗತ್ಯವಾಗಿ ಮಾಡಬೇಕು.

ಎರಡನೆಯದಾಗಿ ತಾಲ್ಲೂಕು ಮಟ್ಟದಲ್ಲಿರುವ ಶಾಲೆಗಳನ್ನು ತಾಲ್ಲೂಕು ಬೋರ್ಡ್ ಮ್ಯಾನೇಜ್‌ಮೆಂಟಿಗೆ ಬಿಟ್ಟಿದ್ದಾರೆ. ಅದು ಸರಿಯಲ್ಲ. ಅಲ್ಲಿ ಅನೇಕ ಉಪಾಧ್ಯಾಯರುಗಳು ಅಲ್ಲಿ ಯಾವ ರೀತಿಯ ಪ್ರಮೋಷನ್ ಆಗಲಿ, ಟ್ರಾನ್ಸ್‌ಫರ್ ಆಗಲಿ ಇಲ್ಲ ಎಂದು ಹೇಳುತ್ತಾರೆ. ಬೇರೆ ಬೇರೆ ತಾಲ್ಲೂಕು ಮಟ್ಟದಲ್ಲಿ ಅವರ ಅನುಭವ ಯೋಗ್ಯತೆ ನೋಡಿಕೊಂಡು ಕೆಲಸ ನಡೆಯುತ್ತದೆ. ಅಂಥಾದ್ದನ್ನೆಲ್ಲಾ ನೋಡಿ ಸರಿಪಡಿಸಬೇಕು. ಅದಕ್ಕೋಸ್ಕರ ಜಿಲ್ಲಾ ಮಟ್ಟದಲ್ಲಿ ಒಂದು ಬೋರ್ಡ್ ಮಾಡುತ್ತೇವೆ ಎಂದು ಹೇಳಿದ್ದಾರೆ. ಅದನ್ನು ಇಷ್ಟರವರೆಗೂ ಮಾಡಲಿಲ್ಲ. ಮೊದಲೇ ಮಾಡಬೇಕಾಗಿತ್ತು. ಪ್ರಾಥಮಿಕ ವಿದ್ಯಾಭ್ಯಾಸದಲ್ಲಿ ಏಕರೂಪತೆ ತರಬೇಕು ಮತ್ತು ಜಿಲ್ಲಾ ಮಟ್ಟದಲ್ಲಿರುವ ಆಡಳಿತವನ್ನು ಮತ್ತು ಬೇರೆ ಬೇರೆ ವಿಷಯಗಳನ್ನು ನೋಡಿಕೊಳ್ಳಲಿಕ್ಕೂ ಜಿಲ್ಲಾ ಬೋರ್ಡ್‌ಗಳನ್ನು ರಚಿಸಬೇಕು.

ಇನ್ನು ಶಿಕ್ಷಣ ವಿಷಯ ಹೇಳುವುದಾದರೆ ಈ ಶಿಕ್ಷಣ ಮಕ್ಕಳಿಗೆ ಅಲ್ಲದೆ ಉಪಾಧ್ಯಾಯರುಗಳಿಗೂ ಇರಬೇಕು ಎಂದು ಹೇಳುತ್ತೇನೆ. ಮೊನ್ನೆ ಒಬ್ಬ ಉಪಾಧ್ಯಾಯರು ಬೆಂಗಳೂರಿಗೆ ಬಂದಿದ್ದರು. ಅವರ ಊರಿನಲ್ಲಿ ಹೈಸ್ಕೂಲ್ ಮಾಸ್ಟರುಗಳು ಬೆಳಗ್ಗೆ 4 ಗಂಟೆ, ಸಾಯಂಕಾಲ 4 ಗಂಟೆ ಟ್ಯೂಷನ್ ಕೊಟ್ಟು ಅವರು ಕ್ಲಾಸ್‌ನಲ್ಲಿ ಆರಾಮ ಪಡೆಯುತ್ತಾರೆ ಇದನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿದ್ದೇವೆ ಎಂದು ಹೇಳುತ್ತಾರೆ. ಈ ವಿಷಯ ಅವರು ಊರಿನಲ್ಲಿ ಮಾತ್ರವಲ್ಲ ಇಡೀ ಮೈಸೂರು ರಾಜ್ಯದಲ್ಲಿ ಇದೆ. ಮಕ್ಕಳುಗಳು ಪರೀಕ್ಷೆಯಲ್ಲಿ ತೇರ್ಗಡೆ ಆಗುವುದನ್ನು ನೋಡಿದರೆ ಗೊತ್ತಾಗುತ್ತದೆ. ಈ ವಿಷಯವನ್ನು ಸರ್ಕಾರ ಗಮನದಲ್ಲಿಡಬೇಕು. ಮತ್ತು ಈ ರೀತಿ ಮಾಡಿದಂಥವರ ಮೇಲೆ ಸರ್ಕಾರ ಶೀಘ್ರವಾಗಿ ಕಾರ್ಯಕ್ರಮ ತೆಗೆದುಕೊಳ್ಳಬೇಕು.

ಇನ್ನು ಮಾನ್ಯ ಮಂತ್ರಿಗಳು ನಮ್ಮ ರಾಜ್ಯದಲ್ಲಿರತಕ್ಕಂಥ ನಿರುದ್ಯೋಗಿಗಳ ವಿಷಯಗಳನ್ನು ಪ್ರಸ್ತಾಪ ಮಾಡಬೇಕಾಗಿತ್ತು. ಪ್ರಸ್ತಾಪ ಮಾಡಲಿಲ್ಲ. ಅವಷ್ಟು ಮಟ್ಟಿಗೆ ಇದರ ಬಗ್ಗೆ ಸರಿಯಾದ ವ್ಯವಸ್ಥೆ ಮಾಡಬೇಕು. ವಿದ್ಯಾವಂತರನ್ನು ನಿರುದ್ಯೋಗಿಯನ್ನಾಗಿ ಮಾಡಿದರೆ ಬಹುಶಃ ನಮ್ಮ ಪ್ರಜಾಪ್ರಭುತ್ವಕ್ಕೆ ಖಂಡನೀಯವಾದುದು ಎಂದು ನಾನು ಭಾವಿಸುತ್ತೇನೆ. ಕಾರ್ಪೊರೇಜಿನಲ್ಲೂ ಈ ತರಹ ಕಂಡೀಷನ್ ಇರುವುದರಿಂದ ಅವರ ನಿವಾರಣೆ ಬಗ್ಗೆಯೂ ಗಮನ ಕೊಡಬೇಕು ಎಂದು ಹೇಳುತ್ತೇನೆ.

ಇನ್ನು 1966-67 ನೇ ಇಸವಿಯಲ್ಲಿ ನಮ್ಮ ಕೃಷಿಕರ ಉತ್ಪತ್ತಿ ಕೃಷಿಕರ ಸಮಸ್ಯೆ ಬಹಳ ತೀವ್ರಮಟ್ಟದಲ್ಲದೆಯೆಂದು ಹೇಳಿದ್ದಾರೆ. ಮತ್ತು ಕೃಷಿಕರಿಗೆ ಬಹಳ ನೆರವನ್ನು

ನೀಡಿದ್ದೇವೆ, ದೊಡ್ಡ ದೊಡ್ಡ ನೀರಾವರಿ ಯೋಜನೆಯನ್ನು ಮಾಡಿದ್ದೇವೆ. ಇನ್ನೂ ಅನೇಕ ಸುಧಾರಣೆಗಳನ್ನು ಮಾಡಿದ್ದೇವೆ ಮತ್ತು ಕೃಷಿಕರಲ್ಲಿ ಒಂದು ವರ್ಗ ಬಹಳ ಸಂಪತ್ತುಳ್ಳವ ರಾಗಿದ್ದಾರೆ ಎಂದು ಹೇಳಿದ್ದಾರೆ. 1967ನೇ ಇಸವಿಯಲ್ಲಿ ನಮ್ಮ ರಾಜ್ಯದ ಅನೇಕ ಜಿಲ್ಲೆಗಳಲ್ಲಿ ಮಳೆ ಅಭಾವ ಪರಿಸ್ಥಿತಿ ಇದ್ದಾಗ ನೀರು ಇಲ್ಲದೇ ಫ್ಯಾಮಿನ್ ರಿಲೀಫ್‌ನಲ್ಲಿ ಕೆಲಸ ಮಾಡಿಸಿದರೂ ಕೂಡ ಈ ಪರಿಸ್ಥಿತಿಯನ್ನು ಎದುರಿಸಲಿಕ್ಕೆ ಸಾಧ್ಯವಾಗಲಿಲ್ಲ. ಕೇಂದ್ರ ಸರ್ಕಾರದಿಂದ 10 ಕೋಟಿ ರೂಪಾಯಿ ನೆರವನ್ನು ಪಡೆದಿದ್ದರೂ ಸಹ ಜನರನ್ನು ಸಂರಕ್ಷಣೆ ಮಾಡಲು ತಕ್ಕ ಕಾಯಕ್ರಮ ತೆಗೆದುಕೊಳ್ಳಲಿಲ್ಲ ಮತ್ತು ಉತ್ಪತ್ತಿಯ ಕಾರ್ಯಕ್ರಮವನ್ನು ಸರಿಯಾಗಿ ಮಾಡಲಿಲ್ಲ. ಈ ದಿವಸ ಈ ಸಭೆಯಲ್ಲಿ ಅನೇಕ ಮಾನ್ಯ ಸದಸ್ಯರು ಇದರ ಬಗ್ಗೆ ತಿರುಪತಿಯಲ್ಲಿ ಕ್ಷೌರ ಮಾಡಿದಹಾಗೆ ಆಯಿತು ಎನ್ನುವ ಮಾತನ್ನು ಹೇಳಿದ್ದಾರೆ. ನೀರಾವರಿ ಯೋಜನೆಗೆ ಹಣ ಹಾಕಿದ್ದರೂ ಕೂಡ ಸಂಪೂರ್ಣವಾಗಿ ಅದರ ಕಾರ್ಯವನ್ನು ಮುಗಿಸಲಿಲ್ಲ. ಮತ್ತು ಈಗ ಇರುವ ಪರಿಸ್ಥಿತಿ ನೋಡಿದರೆ ಅದನ್ನು ಮುಗಿಸುವಂತೆಯೂ ಇಲ್ಲ. ಅದೂ ಅಲ್ಲದೆ ಕೃಷಿಕರಿಗೆ ಬೇಕಾದ ಪಂಪುಸೆಟ್ಟುಗಳಾಗಲಿ ವಿದ್ಯುಚ್ಛಕ್ತಿ ಪೂರೈಕೆಯಾಗಲಿ ಅಥವಾ ಗೊಬ್ಬರದ ಪೂರೈಕೆಯಾಗಲಿ ಅಥವಾ ಟ್ರಾಕ್ಟರ್ ಪೂರೈಕೆಯಾಗಲಿ ಯಾವುದನ್ನೂ ಕೂಡ ಸರ್ಕಾರ ಪೂರೈಸಿಲ್ಲ. ಬೇಡಿಕೆಗಳು ಸಾವಿರಾರು ಇದ್ದರೂ $\frac{1}{4}$ ಅಂಶ ದಷ್ಟು ಒದಗಿಸುವ ಯೋಗ್ಯತೆಯೂ ಇಲ್ಲ. ಸರ್ಕಾರದಲ್ಲಿ ಹೀಗಿರುವಾಗ ನಮ್ಮ ರೈತರಲ್ಲಿ ಒಂದು ವರ್ಗ ಬಹಳ ಶ್ರೀಮಂತರಾಗಿದ್ದಾರೆ ಅಂದರೆ ಅವರು ಟ್ಯಾಕ್ಸ್ ಕೊಡುವುದನ್ನು ತಪ್ಪಿಸಿಕೊಂಡಿದ್ದಾರೆಯೇ ? ಅವರ ಮೇಲೆ ಟ್ಯಾಕ್ಸ್ ಹಾಕುವುದನ್ನು ತಪ್ಪಿಸುವ ಹಾಗೆ ಇದ್ದರೆ ಅವರು ಕ್ರಮ ತೆಗೆದು ಕೊಳ್ಳಬಹುದು. ಅವರು ಒಂದು ವರ್ಗ ಶ್ರೀಮಂತರಾಗಿದ್ದಾರೆ ಎಂದು ಹೇಳಿದ್ದಾರೆಯೇ ಹೊರತು ಅದು ಯಾವ ವರ್ಗ ಎಂದು ಹೇಳಲಿಲ್ಲ. ಹೇಳಲೂ ತಯಾರಾಗಿಲ್ಲ. ಯಾವ ವರ್ಗ ಎಂದು ಹೇಳಿದರೆ ನಾವು ಸುಲಭವಾಗಿ ತಿಳಿದುಕೊಳ್ಳಬಹುದಾಗಿತು.. ಆದರೆ ನಾವು ಒಂದು ವಿಚಾರ ಅರಿತುಕೊಳ್ಳಬೇಕು. ಅದೇನೆಂದರೆ ರೈತರ ಸ್ಥಿತಿ ಸುಧಾರಿಸಿದರೆ, ಅದರಿಂದ ನಿಜವಾಗಿಯೂ ನಮ್ಮ ರಾಜ್ಯಕ್ಕೂ ಒಳ್ಳೆಯದು, ದೇಶಕ್ಕೂ ಒಳ್ಳೆಯದು. ನಮ್ಮ ದೇಶದಲ್ಲಿ ಒಟ್ಟು ಔದ್ಯೋಗೀಕರಣದ ಪ್ರತಿಫಲವನ್ನು ಪಟ್ಟಣದವರೇ ಪಡೆಯುತ್ತಿದ್ದಾರೆ. ಶೇಕಡ 80 ಪರ್ಸೆಂಟು ಜನ ಹಳ್ಳಿಯಲ್ಲಿ ಇರುವುದರಿಂದ ಅವರಿಗೆ ಇದರ ರಾಭ ಪಡೆಯುವುದಕ್ಕೆ ಆಗಲಿಲ್ಲ. ಒಂದೆರಡು ವರ್ಷಗಳಿಂದ ಗ್ರೀನ್ ರೆವಲ್ಯೂಷನ್‌ನಿಂದ ಅವರು ರಾಭ ಪಡೆಯುವುದಕ್ಕೆ ಅವಕಾಶ ಉಂಟು. 20 ವರ್ಷದಿಂದಲೂ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರ ರೈತರ ಮೇಲೆ ಒಂದು ನಿರ್ಲಕ್ಷ್ಯ ಮನೋಭಾವನೆಯನ್ನು ತೋರಿಸಿದ್ದಾರೆ. ಈ ರೀತಿ ಆದರೆ ಈ ಔದ್ಯೋಗೀಕರಣಕ್ಕೆ ಪುಷ್ಟಿ ಶಕ್ತಿ ಇಲ್ಲದೇ ಒಂದೆರಡು ವರ್ಷದಲ್ಲೇ ನಮ್ಮ ಕಾರ್ಖಾನೆಗಳ ಪರಿಸ್ಥಿತಿ ಹೇಗಾಗುತ್ತದೆ ಎನ್ನುವುದು ತಿಳಿಯುತ್ತದೆ. ಆದುದರಿಂದ ಈ ಒಂದು ಧೋರಣೆಯನ್ನು ಬದಲಾವಣೆ ಮಾಡಬೇಕು. ಮತ್ತು ಇದಕ್ಕೆ ಹೆಚ್ಚು ಪ್ರೋತ್ಸಾಹ ಕೊಡಬೇಕು. ಈಗಲೇ ಒಂದು ಧಿಟ್ಟ ತೀರ್ಮಾನಕ್ಕೆ ಬರುವುದು ಸರಿಯೆಂದು ನಾನು ಆರ್ಥಿಕ ಮಂತ್ರಿಗಳಿಗೆ ಹೇಳ ಬಯಸುತ್ತೇನೆ. ಅವರೂ ಕೂಡ ರೈತರ ಮನೆಯಲ್ಲಿ ಹುಟ್ಟಿದವರು. ಆದರೆ ಅನೇಕ ತರಹದ ನಗರದ ಜೀವನದಿಂದ ಸ್ವಲ್ಪ ಮರೆಯುವ ಸಂದರ್ಭ ಉಂಟು. ಈ ರೀತಿ ಮಾಡಬಾರದೆಂದು ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ನಮಗೆ ಕೇಂದ್ರ ಸರ್ಕಾರದಿಂದ ಬರತಕ್ಕಂಥ ಸಹಾಯ ಕಡಿಮೆಯಾಗಿದೆ ಮತ್ತು ನೆರೆಯ ರಾಜ್ಯದವರಿಗೆ ಎಷ್ಟು ಸಹಾಯ ಸಿಕ್ಕುತ್ತದೆಯೋ ಅಷ್ಟು ಸಿಕ್ಕಲಿಲ್ಲ ಎಂದು ಹೇಳಿದ್ದಾರೆ.

6-30 P.M.

ಐದನೇ ಫೈನಾನ್ಸ್ ಕಮಿಷನ್ ಮಾಡಿದ್ದಾರೆ. ಆದರಿಂದ ನಮಗೆ ಸಹಾಯ ಬರುತ್ತದೆ ಎಂದು ಮಾನ್ಯ ಅರ್ಥ ಮಂತ್ರಿಗಳು ಕೂಡ ಆಸೆ ಇಟ್ಟುಕೊಂಡಿದ್ದಾರೆ. ಸಹಾಯ ಬರಬಹುದು ಎನ್ನುವ ಆಸೆಯನ್ನು ಇಟ್ಟುಕೊಂಡಿದ್ದಾರೆ. ಗಡಿ ಸಮಸ್ಯೆ, ಕೃಷ್ಣ ಗೋದಾವರಿ ನೀರಿನ ವಿಷಯ, ಕಾವೇರಿ ನೀರಿನ ವಿಷಯ ಎಲ್ಲವೂ ನ್ಯಾಯವಾದ ರೀತಿಯಲ್ಲಿ ಬಗೆ ಹರಿಯುತ್ತವೆ ಎನ್ನುವ ಆಸೆಯನ್ನು ಇಟ್ಟುಕೊಂಡಿದ್ದೇವೆ. ನಮಗೆ ಅನ್ಯಾಯವಾಗುವುದಾದರೆ ನಾವು ಹೋರಾಟ ಮಾಡಬೇಕು ; ಮುಖ್ಯವಾಗಿ ನಮ್ಮ ಆರ್ಥಿಕ ಮಂತ್ರಿಗಳ ಮೂಲಕ ಮಾಡಬೇಕು. ಕೇಂದ್ರ ಸರ್ಕಾರದವರು ಕೊಡುವಂಥ ಹಣ ರಾಜ್ಯ ಸರ್ಕಾರಗಳೇ ತೆಗೆದುಕೊಂಡು ಕೆಲಸಗಳನ್ನು ಮಾಡಿಸಬೇಕು. ಕೇಂದ್ರ ಸರ್ಕಾರದ ಹಣದಿಂದ ಬಹಳ ಕೆಲಸವಾಗಬೇಕಾದರೆ ಅವರು ಆ ಕೆಲಸ ಗಳನ್ನು ರಾಜ್ಯ ಸರ್ಕಾರಗಳ ಮೂಲಕವೇ ಮಾಡಬೇಕಾಗುತ್ತದೆ. ರಾಜ್ಯ ಸರ್ಕಾರದವರು ಜನರ ಸಂಪರ್ಕವನ್ನು ಇಟ್ಟುಕೊಂಡಿರುವುದರಿಂದ ಅವರು ಮಾಡುವಂಥ ಕೆಲಸ ಸರಿಯಾಗಿದೆಯೋ ಇಲ್ಲವೋ ಹಾಳಾಗಿ ಹೋಗಿದೆಯೋ ಎನ್ನುವ ನಿರ್ಣಯ ಕೊಡುವವರು ಜನರು. ಆ ನಿರ್ಣಯವನ್ನು ತೆಗೆದು

(ಶ್ರೀ ಬೋಳಾ ರಘುರಾಮ ಶೆಟ್ಟಿ)

ಕೊಂಡು ರಾಜ್ಯ ಸರ್ಕಾರದವರು ಅವರ ವಿಷಯದಲ್ಲಿ ಹೆಚ್ಚು ಗಮನಕೊಟ್ಟು ಸಮರ್ಥವಾಗಿ ಯೋಜನಾಬದ್ಧವಾಗಿ ಸರಿಯಾದ ರೀತಿಯಲ್ಲಿ ಕೆಲಸಕಾರ್ಯ ಮಾಡುವುದಕ್ಕೆ ಸಾಧ್ಯವುಂಟು. ಆ ಪ್ರಕಾರ ಮಾಡಬೇಕೆಂದು ಕೇಳಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಂ. ಬಸವರಾಜು (ಕೃಷ್ಣರಾಜನಗರ).—ಸನ್ಮಾನ್ಯ ಸಭಾಪತಿಗಳೇ, 1969 70ನೇ ಸಾಲಿಗೆ ರಾಜ್ಯದ ಅರ್ಥ ಮಂತ್ರಿಗಳು ಈ ಸಭೆಯಲ್ಲಿ ಮಂಡಿಸಿರತಕ್ಕ ಮುಂಗಡ ಪತ್ರವನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ಹಾಗೆ ಸ್ವಾಗತಿಸಿ ಅರ್ಥ ಮಂತ್ರಿಗಳಿಗೂ ಹಾಗೂ ರಾಜ್ಯದ ಮುಖ್ಯ ಮಂತ್ರಿಗಳಿಗೂ ಎರಡು ಮಾತು ಹೇಳಲು ಇಷ್ಟಪಡುತ್ತೇನೆ.

ಒಂದನೆಯದು ಈ ಬಜೆಟ್ಟನ್ನು ನೋಡಿದಾಗ ಅದು ಖೋತಾ ಬಜೆಟ್ ಎಂದು ಕಂಡು ಬಂದರೂ ಸಹ ಯಾವುದೇ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರವಾಗಲೀ ಖೋತಾ ಬಜೆಟ್ಟನ್ನು ಮಾಡುವುದು ಅನಿವಾರ್ಯವೆಂದು ಕಾಣಿಸುತ್ತದೆ. ಅರ್ಥ ತಜ್ಞರು ಕೂಡ ಇದೇ ಮಾತನ್ನು ಹೇಳಿದ್ದಾರೆ. ನಮ್ಮ ದೇಶದ ಪರಿಸ್ಥಿತಿಯನ್ನು ನೋಡಿದರೂ ಅಂಥ ಆಟ್ಯಾಕ್ ಮಾಡಬೇಕಾದ, ಉಗ್ರವಾಗಿ ಟೀಕೆ ಮಾಡಬೇಕಾದ ಅವಶ್ಯಕತೆ ಇಲ್ಲಿ ಕಂಡುಬರುತ್ತಿಲ್ಲ. ಆ ದೃಷ್ಟಿಯಿಂದ ಈ ಮುಂಗಡ ಪತ್ರವನ್ನು ನಾನು ಸ್ವಾಗತ ಮಾಡುತ್ತೇನೆ. ಈ ಸಾರಿಯ ಬಜೆಟ್ಟಿನಲ್ಲಿ ಒಂದು ಸಂತೋಷಕರವಾದ ವಿಷಯವೇನೆಂದರೆ ಸಾಮಾನ್ಯ ಜನತೆಯ ಮೇಲೆ ಬೇಳತಕ್ಕ ಯಾವ ಹೊರೆಯೂ, ತೆರಿಗೆಗಳೂ ಇಲ್ಲವೆ ಇರುವುದು. ಇಂಥ ಮುಂಗಡ ಪತ್ರವನ್ನು ಮಂಡಿಸಿರುವುದಕ್ಕಾಗಿ ನಾನು ಅರ್ಥ ಮಂತ್ರಿಗಳನ್ನು ಅಭಿನಂದಿಸುತ್ತೇನೆ.

ಮೈಸೂರಿನ ಮುಖ್ಯ ಮಂತ್ರಿಗಳಿಗೆ ಒಂದು ವಿನಂತಿ ಏನೆಂದರೆ ಕಳೆದ ಒಂದು ವರ್ಷದಿಂದ ಅರ್ಥ ಮಂತ್ರಿಗಳು ಹಾಗೂ ಮುಖ್ಯ ಮಂತ್ರಿಗಳು ಕೇಂದ್ರ ಸರ್ಕಾರದ ಧೋರಣೆ ನಮ್ಮ ಮೈಸೂರು ರಾಜ್ಯದ ಬಗ್ಗೆ ಏನಿದೆ ಅದನ್ನು ಹಲವು ಬಾರಿ ಖಂಡಿಸಿ ಮಾತನಾಡಿದ್ದಾರೆ. ಮಹಾತ್ಮ ಗಾಂಧಿಯವರು ಒಂದೇ ಒಂದು ಮಾತನ್ನು ಹೇಳಿದ್ದಾರೆ :

"Strength does not come from physical capacity.
It comes from indomitable will."

ಕಳೆದ ಏಳೆಂಟು ತಿಂಗಳಿನಿಂದ ನಮ್ಮ ರಾಜ್ಯಕ್ಕೆ ಹೊಸ ನಾಯಕತ್ವ ಬಂದ ಮೇಲೆ ಕೇಂದ್ರ ಸರ್ಕಾರದ ನೀತಿಯನ್ನು ನಿರ್ದಾಕ್ಷಿಣ್ಯವಾಗಿ ಟೀಕಿಸಿ ಕೇಂದ್ರ, ಸರ್ಕಾರದ ಮೇಲೆ ಒತ್ತಡವನ್ನು ತರುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಮೈಸೂರು ರಾಜ್ಯದ ವಿಚಾರದಲ್ಲಿ ಒಂದು ತಾತ್ಸಾರ ಭಾವನೆ ಕೇಂದ್ರಕ್ಕೆ ಇತ್ತು. ಇತ್ತೀಚೆಗೆ ಕೇಂದ್ರ ಸರ್ಕಾರದ ನೀತಿಯನ್ನು ನೋಡಿದರೆ ತಾತ್ಸಾರ ಮಾಡುವ ಮಟ್ಟದಲ್ಲಿ ಮೈಸೂರು ರಾಜ್ಯದಲ್ಲಿ ನಾಯಕತ್ವ ಇಲ್ಲ, ಅವರನ್ನು ಸ್ನಬ್ ಮಾಡಬಹುದು ಎನ್ನುವ ಮಟ್ಟದಲ್ಲಿ ಇಲ್ಲ ಎಂದು ಹೇಳುವಂಥ ಧೋರಣೆಯನ್ನು ಈವಾಗ ಮೈಸೂರು ಸರ್ಕಾರದ ಬಗ್ಗೆ ತಾಳುತ್ತಿದ್ದಾರೆ. ಮೈಸೂರು ಸರ್ಕಾರದವರು ಹಾಗೂ ಮೈಸೂರು ರಾಜ್ಯದ ಮುಖ್ಯ ಮಂತ್ರಿಗಳು ಮತ್ತು ಅರ್ಥ ಮಂತ್ರಿಗಳು ಕೆಲವು ಸಂದರ್ಭಗಳಲ್ಲಿ ಇನ್ನೂ ಹೆಚ್ಚು ಒತ್ತಡವನ್ನು ಕೇಂದ್ರ ಸರ್ಕಾರದ ಮೇಲೆ ತರಬೇಕೆಂದು ಹೇಳುತ್ತೇನೆ.

ಆಯವ್ಯಯ ಪಟ್ಟಿಯ ವಿಷಯವಾಗಿ ಹೇಳುವುದಾದರೆ 1969–70ನೇ ಇಸವಿಯಲ್ಲಿ ವಿದ್ಯಾಭ್ಯಾಸಕ್ಕಾಗಿ 46 ಕೋಟಿ ರೂಪಾಯಿಗಳನ್ನು ಇಟ್ಟಿದ್ದಾರೆ. ಇದು ತುಂಬ ಸ್ವಾಗತಾರ್ಹವಾದ ವಿಷಯ. ಕ್ವಾಂಟಿಟೇಟಿವ್ ಆಗಿ ಯೋಜನೆ ಮಾಡುವುದಾದರೆ ಪೂರ್ಣವಾಗಿ ಸ್ವಾಗತ ಮಾಡತಕ್ಕ ವಿಷಯ. ಕ್ವಾಲಿಟಿ ಬಗ್ಗೆ ಯೋಚನೆ ಮಾಡುವುದಾದರೆ ತುಂಬ ನಿರಾಶಾದಾಯಕವಾದ ಸ್ಥಿತಿ ನಮ್ಮ ವಿದ್ಯಾಭ್ಯಾಸ ಕ್ಷೇತ್ರದಲ್ಲಿದೆ. ಸ್ವಾತಂತ್ರ್ಯ ಪೂರ್ವದಲ್ಲಿ ಯಾವರೀತಿಯಲ್ಲಿತ್ತು, ಅದೇ ರೀತಿಯಲ್ಲಿ ವಿದ್ಯಾಭ್ಯಾಸ ಮುಂದುವರಿಯುತ್ತಿದೆ ಎಂದು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇತ್ತೀಚೆಗೆ ಹಲವಾರು ವಿಷಯಗಳನ್ನು ನಾವು ನೋಡುತ್ತಿರುತ್ತೇವೆ. ಇದೇ ಬೆಂಗಳೂರು ನಗರದಲ್ಲಿ ಸ್ವಾಮಿ ವಿವೇಕಾನಂದರ ಬಗ್ಗೆ ಒಂದು ವಾರ್ಷಿಕೋತ್ಸವ ನಡೆದ ಸಂದರ್ಭದಲ್ಲಿ ಅದೇ ಆಶ್ರಮಕ್ಕೆ ಸಂಬಂಧಪಟ್ಟ ಒಬ್ಬ ಗುರುಗಳು ಅಧ್ಯಕ್ಷತೆಯನ್ನು ವಹಿಸಿದ್ದರು. ಅಲ್ಲಿ ಭಾಷಣಕಾರರಾಗಿ ಒಬ್ಬರು ಸಾಮಾಜಿಕ ಕಾರ್ಯಕರ್ತರು ಬಂದಿದ್ದರು. ಅವರು ಮಾತನಾಡುತ್ತ ಮನುಷ್ಯಮಾತ್ರನಾದವನು ತನ್ನ ಸಾಧನೆಯಿಂದ ಜೀವನದ ಉನ್ನತ ಶಿಖರವನ್ನು ಏರಬಲ್ಲ, ಸ್ವಾಮಿ ವಿವೇಕಾನಂದರಂತೆ ಬದುಕಬಲ್ಲ ಎಂದು ಹೇಳಿದರು. ಅಧ್ಯಕ್ಷತೆಯನ್ನು ವಹಿಸಿದ್ದ ಸನ್ಯಾಸಿಗಳು ಮಾತನಾಡುತ್ತಾ ಸ್ವಾಮೀಜಿಯನ್ನು ನಿಮ್ಮಂತೆ ಓರ್ವ ಮನುಷ್ಯ ಎಂದು ಪರಿಗಣಿಸಬಾರದು,

ಆತನು ದೇವತೆಯ ಅವತಾರ ಎಂದು ಹೇಳಿದರು. ಈ ರೀತಿಯಾಗಿ ಹೇಳುತ್ತಾ ಬಂದರೆ ನಮ್ಮ ಮುಂದಿನ ಪೀಳಿಗೆಯ ಮೇಲೆ ಏನು ಪರಿಣಾಮವಾಗುತ್ತದೆ! ನಮ್ಮ ವಿದ್ಯಾಭ್ಯಾಸದ ಕ್ರಮದಲ್ಲಿ ಬದಲಾವಣೆಯಾಗಬೇಕು ಎಂದು ನಾನು ಈ ಸಮಯದಲ್ಲಿ ಹೇಳುವುದಕ್ಕೆ ಪ್ರಯತ್ನ ಮಾಡುತ್ತೇನೆ. ಮೈಸೂರು ದೇಶದಲ್ಲಿ ಎಲ್ಲಿ ಹೋದರೂ ಕೂಡ ಜಾತಿಗೆ ಸಂಬಂಧಪಟ್ಟಂಥ ಬೋರ್ಡ್‌ಗಳನ್ನು ಕಾಣುತ್ತೇವೆ. ಇದರಿಂದ ನಮ್ಮಲ್ಲಿ ದುಷ್ಪರಿಣಾಮವಾಗುತ್ತಿದೆ. ನಾವು ವಿದ್ಯಾಭ್ಯಾಸಕ್ಕೆ ದುಡ್ಡು ಖರ್ಚು ಮಾಡುವುದು ಮಾತ್ರವಲ್ಲ, ವಿದ್ಯಾಭ್ಯಾಸದ ಕ್ವಾಲಿಟಿ ಬದಲಾವಣೆಯಾಗುವುದಕ್ಕೆ, ಅದು ಉತ್ತಮವಾಗುವುದಕ್ಕೆ ಸೂಕ್ತವಾದ ಕ್ರಮ ತೆಗೆದುಕೊಳ್ಳಬೇಕು. ರಾಜ್ಯ ಮಟ್ಟದಲ್ಲಿ ಅಥವಾ ಜಿಲ್ಲಾ ಮಟ್ಟದಲ್ಲಿ ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟಂತೆ ಕಮಿಟಿಗಳನ್ನು ಮಾಡತಕ್ಕ ಕಾಲದಲ್ಲಿ ಕ್ಲಾಸ್ ರೆಸ್ ಸೊಸೈಟಿ ಎಂದು ಏನು ಹೇಳುತ್ತೇವೆ ಅದಕ್ಕೆ ಅನುಗುಣವಾಗಿ ಅವುಗಳನ್ನು ಮಾಡಬೇಕು ಎನ್ನುವ ದೂರದೃಷ್ಟಿಯನ್ನು ಇಟ್ಟುಕೊಳ್ಳಬೇಕು. ವಿದ್ಯಾಭ್ಯಾಸ ಸಂಬಂಧದಲ್ಲಿ ಗ್ರಾಂಟ್ ಕೊಡುವ ಪದ್ಧತಿ ಇರುವುದರಿಂದ ಕೆಲವು ಪಕ್ಷಗಳವರು, ಜಾತಿಗಳವರು ಸಂಸ್ಥೆಗಳನ್ನು ಪ್ರಾರಂಭ ಮಾಡುತ್ತಾರೆ. ಅದರಿಂದ ಭಾವೈಕ್ಯತೆ ಬರುವುದಿಲ್ಲ ಅದ್ದರಿಂದ ಈ ವಿಷಯವನ್ನು ಸೂಕ್ಷ್ಮವಾಗಿ ಆಳವಾಗಿ ಪರಿಶೀಲನೆ ಮಾಡಬೇಕು. ನನ್ನ ದೃಷ್ಟಿಯಿಂದ ಹೇಳುವುದಾದರೆ ವಿದ್ಯಾಭ್ಯಾಸವನ್ನು ಸರ್ಕಾರದವರೇ ಪೂರ್ತಿಯಾಗಿ ನಡೆಸುವಂಥ ವ್ಯವಸ್ಥೆ ಮಾಡಿದರೆ ನಮ್ಮ ಸಮಾಜದಲ್ಲಿನ ಅವ್ಯವಹಾರದ ತೀಕ್ಷ್ಣೆ ನಿವಾರಣೆಗೆ ಅನುಕೂಲವಾಗುತ್ತದೆ ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಅಪೇಕ್ಷೆಪಡುತ್ತೇನೆ. ಇದೇ ರೀತಿಯ ಅಭಿಪ್ರಾಯವನ್ನು ನಮ್ಮ ರಾಜ್ಯದ ಮೇಧಾವಿಗಳು ಹಾಗೂ ತಜ್ಞರು ಕೂಡ ಹೇಳಿದ್ದಾರೆ. ಪ್ರೊಫೆಸರ್ ಪೊಯೆಟ್ ಗೋಪ್ಪುರಿನ್ ರವರು ವಿದ್ಯಾ ತಜ್ಞರು. ಅವರು ಒಂದು ಕಡೆ ಹೀಗೆ ಹೇಳಿದ್ದಾರೆ:

> "Our young men seem to have lost the capacity to form correct intelligible answers. Every year we are producing hundreds and thousands of not employed young men but unemployable young men. The problem is not men without jobs but jobs without men."

ಐದಾರು ತಿಂಗಳ ಹಿಂದೆ ಮೈಸೂರಿನವರು ಕೆಲವರು ಫಸ್ಟ್‌ಕ್ಲಾಸಿನಲ್ಲಿ ಪಾಸಾದವರು ಅಪ್ಲಿಕೇಷನ್‌ಗಳನ್ನು ಒಂದು ಸಂದರ್ಭದಲ್ಲಿ ಕರೆದಾಗ ಹೋಗಿದ್ದರು, ಅವರಿಗೆ ಬಾಯಲ್ಲಿ ಉತ್ತರ ಹೇಳುವುದಕ್ಕೆ ಬರುತ್ತಿರಲಿಲ್ಲ. ಇಂಥ ಪರಿಸ್ಥಿತಿ ಇದೆ. ಹೇಗೋ ಪಾಸುಮಾಡಿಬಿಡುತ್ತಾರೆ. ಆದರೆ ಅವರಿಗೆ ಏನಾದರೂ ಕೇಳಿದರೆ ಹೇಳುವುದಕ್ಕೆ ಶಕ್ತಿಯಿರುವುದಿಲ್ಲ, ಭಯಪಡುತ್ತಾರೆ.

ಇನ್ನು ಅನಿಮರ್ ಹಸ್ಬೆಂಡ್ರಿ ವಿಷಯದಲ್ಲಿ ಒಂದೆರಡು ಮಾತನ್ನು ಹೇಳುತ್ತೇನೆ. ಮೈಸೂರು ರಾಜ್ಯದಲ್ಲಿ ಸುಮಾರು ಮೂರೂಮುಕ್ಕಾಲು ಕೋಟಿ ಜಾನುವಾರಿದೆ; 2 ಕೋಟಿ 65 ಲಕ್ಷ ಜನರಿದ್ದಾರೆ, ಪ್ರತಿ ವರ್ಷ 30-40 ಎ. ಎನ್. ಪಿ. ಪ್ರೊಗ್ರಾಂ ಹಾಕುತ್ತಾರೆ. ಏಕೆ? ನಮ್ಮ ದೇಶದ ಜನರು ಬಡತನದಲ್ಲಿರುವುದರಿಂದ ಅವರಿಗೆ ಪುಷ್ಟಿಕರವಾದ ಆಹಾರ ತೆಗೆದುಕೊಳ್ಳುವುದಕ್ಕೆ ಅವಕಾಶವಿಲ್ಲದೆ, ಕ್ಷಯ ಮುಂತಾದ ರೋಗಗಳಿಗೆ ತುತ್ತಾಗುತ್ತಲಿದ್ದಾರೆ, ಮುಂದೆ ಅದರಿಂದ ಮಕ್ಕಳೂ ದುರ್ಬಲರಾಗುತ್ತಾರೆ ಎಂದು ಅದಕ್ಕೆ ಒಂದು ಪ್ರೊಗ್ರಾಂ ಹಾಕಿದ್ದಾರೆ. ಪುಷ್ಟಿಯಾದ ಆಹಾರ ದೊರೆಯುವಂತೆ ಮಾಡಲು, ಅದರ ಕೊರತೆಯನ್ನು ನಿವಾರಣೆ ಮಾಡಲು ಪುಷ್ಟಿಕರವಾದ ಆಹಾರವನ್ನು ದೊರಕಿಸಬೇಕಾದ್ದು ಅಗತ್ಯವಾಗಿದೆ. ಎ ಸೌಂಡ್ ಮೈಂಡ್ ಇನ್ ಎ ಸೌಂಡ್ ಬಾಡಿ ಎಂದು ಹೇಳುತ್ತಾರೆ. ಅದಕ್ಕಾಗಿ ಒಳ್ಳೆಯ ಹಾಲನ್ನು ಕುಡಿಯಬೇಕೆಂದು ಹೇಳುತ್ತಾರೆ. ಹಾಗೆ ಹೇಳುವ ಸರಕಾರ ಪೆಚ್ಚು ಹಾಲನ್ನು ದೊರಕಿಸಲು ಅದಕ್ಕೆ ತಕ್ಕಷ್ಟು ಹಣ ಒದಗಿಸಿಲ್ಲ; ಮೂರೂವರೆ ಕೋಟಿ ಜಾನುವಾರಿಗೆ ಕೇವಲ 195 ಲಕ್ಷ ರೂಪಾಯಿಗಳನ್ನು ಒದಗಿಸಿದ್ದಾರೆ, ಇದರಲ್ಲಿ ಸೇಕಡ 30 ರಷ್ಟು ಸಿಬ್ಬಂದಿ ಖರ್ಚಿಗೆ ಹೋಗುವುದು, ಅಂದರೆ ಆರನೆಯ ಒಂದು ಭಾಗ ಸಿಬ್ಬಂದಿಗೆ ಖರ್ಚಾಗುವುದು. ಇನ್ನು ಉಳಿಯುವುದು ಕೇವಲ ಕಡಿಮೆ ಹಣವಾದುದರಿಂದ ಅದರಿಂದ ಜಾನುವಾರುಗಳ ಅಭಿವೃದ್ಧಿ ಸಾಕಷ್ಟು ಆಗಲು ಸಾಧ್ಯವಿಲ್ಲ. ಈಗ ಈ ಬಾಬಿಗೆ ಕೊಟ್ಟಿರುವುದು ಕೇವಲ ಕಡಿಮೆ, ಡೆವಲಪ್‌ಮೆಂಟಿಗೆ ಹಣವಿಲ್ಲ, ಹೆಚ್ಚು ಪುಷ್ಟೀಕರವಾದ ಆಹಾರ ತೆಗೆದುಕೊಳ್ಳಬೇಕೆಂದು ಹೇಳುವಾಗ ಆ ಆಹಾರವನ್ನು ಹೆಚ್ಚಾಗಿ ಉತ್ಪತ್ತಿಮಾಡಲು ನೆರವು ಸಾಕಾದಷ್ಟು ಕೊಟ್ಟಿಲ್ಲ. ಖಂಡಿತ 1 ಕೋಟಿ 95 ಲಕ್ಷ ಕೊಟ್ಟಿರುವುದು ಬಹಳ ಕಡಮೆ. ಅದರ ಎರಡು ಮೂರರಷ್ಟಾದರೂ ಕೊಡಬೇಕು. ಇತರ ಕೆಲವು ಬಾಬುಗಳಿಂದಲಾದರೂ ಹಣ ತೆಗೆದು ಈ ಬಾಬಿಗೆ ಕೊಟ್ಟು ಪ್ರೋತ್ಸಾಹ ನೀಡಬೇಕೆಂದು ಒತ್ತಾಯಮಾಡುತ್ತೇನೆ.

(ಶ್ರೀ ಎಂ. ಬಸವರಾಜು)

ಹಾರಂಗಿ ವಿಷಯ ಬಹಳ ಪ್ರಾಮುಖ್ಯವಾದುದು, ಇದು ಸಾವು ಬದುಕಿನ ಪ್ರಶ್ನೆ, ಕಳೆದ ಎರಡು ಸಾಲುಗಳಲ್ಲೂ ಈ ವಿಚಾರದಲ್ಲಿ ಈ ಸಭೆಯಲ್ಲಿ ಪ್ರಶ್ನೆಗಳನ್ನು ಕೇಳಿದ್ದಾರೆ. ಕೃಷ್ಣರಾಜನಗರ, ಅರಕಲಗೂಡು ಮುಂತಾದ ಭಾಗದವರು ಅಡ್ವಾನ್ಸ್ ಕಾಂಟ್ರಿಬ್ಯೂಷನ್ ಕೊಡಲು ತಯಾರಿದ್ದಾರೆಂದು ಹೇಳಿದ್ದಾರೆ. ಹಣವಿಲ್ಲವೆಂದು ಕೆಲಸಗಳನ್ನು ತೆಗೆದುಕೊಳ್ಳುವುದು ನಿಧಾನವಾಡಿದರೆ ತೊಂದರೆಯಾಗುವುದು. ಶ್ರೀ ನಾಗಪ್ಪನವರು ಹೇಳಿದಂತೆ ಬೇಗ ಯೋಜನೆಗಳ ಕೆಲಸ ಪೂರ್ಣವಾಗಬೇಕು, ಹೆಚ್ಚು ಕೆಲಸಗಳನ್ನು ತೆಗೆದುಕೊಂಡು ಎಲ್ಲವನ್ನೂ ಅರ್ಧಂಬರ್ಧ ಮಾಡುವುದಕ್ಕಿಂತ ಒಂದೊಂದಾಗಿ ಪೂರ್ಣಮಾಡುವುದು ಒಳ್ಳೆಯದು. ಮೈಸೂರು ದೇಶದಲ್ಲಿ ಬತ್ತದ ಬೆಳೆ ಉತ್ಪತ್ತಿ ಹೆಚ್ಚಾಗಬೇಕಾದರೆ ಯಾವ ಕಡೆ ಭೂಮಿ ಚೆನ್ನಾಗಿದೆ, ಎಲ್ಲಿ ಹೆಚ್ಚು ಬೆಳೆಯಲು ಸಾಧ್ಯ ಎಂಬುದನ್ನು ಗಮನಿಸಬೇಕು. ಅರಕಲಗೂಡು ಮತ್ತು ಕೃಷ್ಣರಾಜನಗರ ತಾಲ್ಲೂಕುಗಳಲ್ಲಿ ಒಳ್ಳೆಯ ಫಲವತ್ತಾದ ಭೂಮಿ ಇದೆ, ಉತ್ಪತ್ತಿ ಹೆಚ್ಚಿಸಲು ಅವಕಾಶವಿದೆ ಎಂದು ತಜ್ಞರು ಹೇಳುತ್ತಿದ್ದಾರೆ, ಅವರೊಂದಿಗೆ ಚರ್ಚೆಮಾಡಿದಾಗ ಇಡೀ ದೇಶದಲ್ಲಿ ಉತ್ತಮವಾದ ಫಸಲು ಬರುವುದಕ್ಕೆ ಕೃಷ್ಣರಾಜನಗರ ಮತ್ತು ಅರಕಲಗೂಡು ತಾಲ್ಲೂಕುಗಳಲ್ಲಿ ಅವಕಾಶವಿದೆ ಎಂದು ತಿಳಿಸಿದ್ದಾರೆ. ಹಳೇ ಮೈಸೂರಿನಲ್ಲಿ ಬಹಳ ಉತ್ತಮವಾದ ಅಕ್ಕಿಯನ್ನು ಕೃಷ್ಣರಾಜನಗರದಿಂದ ಅರಮನೆಗೆ ತರಿಸುತ್ತಾ ಇದ್ದರು, ಆ ಪ್ರದೇಶದ ಜನರು ಅಂತಹ ಉತ್ತಮವಾದ ವ್ಯವಸಾಯಗಾರರಾಗಿದ್ದಾರೆ. ತುಂಗಭದ್ರಾ ಪ್ರಾಜೆಕ್ಟ್‌ನಲ್ಲಿ ಕೋಟ್ಯಾಂತರ ರೂಪಾಯಿ ಹಾಕಿ ಉತ್ತಮವಾದ ಭತ್ತ ಬೆಳೆಯಿರಿ ಎಂದರೆ ಅದಕ್ಕೆ ಜನ ತಯಾರಾಗಿಲ್ಲ. ಬೆಳೆ ಬೆಳೆಯಲು ಉತ್ತಾಹದಿಂದ ಇರತಕ್ಕವರು ದೇಶದ ಸೇವೆಗೆ ಅಳಿಲು ಸೇವೆ ನಲ್ಲಿನ ಬೇಕೆಂದು ಇವುವರೆಗೆ ಕೇವಲ 3 ಲಕ್ಷ ರೂಪಾಯಿ ಕೊಟ್ಟಿರುವುದು ಬಹಳ ದುಃಖದ ಸಂಗತಿ. ಹಾರಂಗಿ ಉತ್ತಮವಾದ ಪ್ರಾಜಕ್ಟು ಅದಕ್ಕೆ ಬೇಕಾಗುವಷ್ಟು ಹಣವನ್ನಾದರೂ ಒದಗಿಸಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ಉತ್ತಮವಾದ ಭತ್ತವನ್ನು ಬೆಳೆದರೆ ಆಹಾರ ಪದಾರ್ಥಕ್ಕೆ ಒಳ್ಳೆಯ ಧಾರಣೆ ಬರುತ್ತದೆ ಮತ್ತು ಅವರಿಗೆ ಹೆಚ್ಚಿನ ಸೌಲಭ್ಯ ಸಿಕ್ಕುತ್ತದೆ.

ಲೋನ್ಸ್ ಟು ಗವರ್ನಮೆಂಟ್ ಆಫೀಸರ್ಸ್ ಅಂತ ಹೇಳಿ 155 ಲಕ್ಷ ರೂಪಾಯಿ ಇಟ್ಟಿದ್ದೀರಿ, ಒಂದು ಸೈಕಲ್ ಇಲ್ಲದೇ ಇದ್ದರೂ ಕೂಡ ನಡೆಯುತ್ತದೆ, ಬೆಂಗಳೂರು ಸಿಟಿಯಲ್ಲಿ ವಾಹನ ಸೌಕರ್ಯ ಬೇಕಾದಷ್ಟು ಇರುತ್ತದೆ. ಎರಡು ಲಕ್ಷ ಜನಗಳಿಗೆ 155 ಲಕ್ಷ ರೂಪಾಯಿಗಳನ್ನು ಇಟ್ಟಿರುವಾಗ ಎರಡೂವರೆ ಕೋಟಿ ಜನಕ್ಕೆ 3 ಲಕ್ಷ ರೂಪಾಯಿ ಇಟ್ಟಿರುವುದು ತುಂಬಾ ಅನ್ಯಾಯ ಎಂದು ಕಾಣುತ್ತದೆ. ಸುಮಾರು 55 ಲಕ್ಷ ರೂಪಾಯಿಗಳನ್ನು ಅವರಿಗೆ ಕೊಟ್ಟು ಇನ್ನುಳಿದ ಹಣವನ್ನು ಹಾರಂಗಿ ಪ್ರಾಜಕ್ಟಿಗೆ ಕೊಡಬೇಕೆಂದು ಹೇಳಬಯಸುತ್ತೇನೆ.

ಲೋನ್ಸ್ ಫಾರ್ ವಾಟರ್ ಸಪ್ಲೈ 632 ಲಕ್ಷ ರೂಪಾಯಿ ಇದೆ ಅದರಲ್ಲೂ ಕೂಡ ಸುಮಾರು 200 ಲಕ್ಷ ರೂಪಾಯಿಗಳನ್ನಾದರೂ ಕೂಡ ಹಾರಂಗಿ ಪ್ರಾಜಕ್ಟಿಗೆ ಕೊಡಬೇಕೆಂದು ತಿಳಿಸಲು ಇಚ್ಛಿಸುತ್ತೇನೆ.

ಲೋನ್ಸ್ ಫಾರ್ ಡ್ರೈನೇಜ್, 217 ಲಕ್ಷ ರೂಪಾಯಿ ಇದೆ, ಈ ಮೂರು ಐಟಂಗಳಲ್ಲದೆ ಅಡ್ವಾನ್ಸ್ ಟು ಕಲ್ಟಿವೇಟರ್ಸ್ ಅಂತ 1750 ಲಕ್ಷ ರೂಪಾಯಿ ಇಟ್ಟಿದ್ದೀರಿ, ಇದರಲ್ಲಿ ಅರ್ಧಭಾಗವನ್ನು ಅವರಿಗೆ ಕೊಟ್ಟು ಇನ್ನರ್ಧ ಭಾಗವನ್ನು ಹಾರಂಗಿ ಪ್ರಾಜಕ್ಟಿಗೆ ಒದಗಿಸಿದರೆ ನಮ್ಮ ದೇಶದ ಪ್ರಗತಿಯಾಗುತ್ತದೆ, ಮತ್ತು ತಮಗೂ ಒಂದು ಕೀರ್ತಿ ಸಂಪಾದನೆ ಮಾಡಿಕೊಂಡ ಹಾಗಾಗುತ್ತದೆ. ಆ ರೀತಿ ಮಾಡಿ ಮೈಸೂರು ರಾಜ್ಯದ ಆಹಾರ ಸಮಸ್ಯೆ, ಮತ್ತು ಜನರ ನಿರುದ್ಯೋಗ ನಿವಾರಣೆಗೆ ಅನುಕೂಲ ಮಾಡಿಕೊಡಲು ಮನಸ್ಸು ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳಿ ಇಷ್ಟು ಮಾತನಾಡಲು ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಜಿ. ದುಗ್ಗಪ್ಪ (ಭರಮಸಾಗರ).—ಸ್ವಾಮಿ, ಈ ಸಭೆಯ ಮುಂದೆ ಬಹಳವಾಗಿ ಮನನ್ನು ಇಲ್ಲದ ಮನಸ್ಸಿನಿಂದ—ಏನೋ ಅನುಮಾನ ಇದ್ದಂತಹ ಹೋರಾಯಮಾನ ಪರಿಸ್ಥಿತಿಯಲ್ಲಿ ಮಂಡಿಸಿರತಕ್ಕ ಈ ಆಯವ್ಯಯ ಪಟ್ಟಿಯನ್ನು ನಾನು ವಿರೋಧಿಸುತ್ತೇನೆ. ಇದಕ್ಕೆ ಹೆಚ್ಚು ಕಾರಣ ಕೊಡಬೇಕಾಗಿಲ್ಲ, ಏಕೆಂದರೆ ಯಾವುದೊಂದೂ ನಿರ್ದಿಷ್ಟ ಇಲ್ಲ, ನೀವು ನಿಮ್ಮ ಭಾಷಣದಲ್ಲಿ ಹೇಳಿದ ಹಾಗೆ ಯಾವುದೊಂದೂ ಖಚಿತ ಇಲ್ಲ. ನಿಮ್ಮ ವ್ಯವಹಾರಗಳು ಖಚಿತ ಇಲ್ಲ. ನಿಮ್ಮ ಅಂದಾಜು ಪ್ರಕಾರ ನೀವು ಖಚಿತವಾಗಿ ಖರ್ಚು ಮಾಡತಕ್ಕ ಧೈರ್ಯ ನಿಮಗೆ ಇಲ್ಲ ಎಂದು ನಿಮ್ಮ ಭಾಷಣದಿಂದಲೇ ವ್ಯಕ್ತವಾಗುತ್ತಾ ಇದೆ. ಅಂಥಾದ್ದರಲ್ಲಿ 1970ನೇ ಇಸವಿ ಮಾರ್ಚ್ 31ರ ವರೆಗೂ ಖಚಿತವಾಗುತ್ತದೆಯೋ ಇಲ್ಲವೋ ದೇವರೇ ಬಲ್ಲ. ಏಕೆಂದರೆ ನಿಮ್ಮ ಭಾಷಣವನ್ನು ನೋಡಿದರೆ

ಅಷ್ಟು ಅನಿಶ್ಚಿತ ಪರಿಸ್ಥಿತಿಯಲ್ಲಿ ನೀವು ಇದ್ದೀರಿ. ಶ್ರೀಮಾನ್ ಪಾಟೀಲ್‌ರವರು ನಿಮ್ಮ ದೋಣಿ ಸಾಗಲಿ ಎಂದು ಹೇಳಿದರು. ಸರ್ಕಾರದ ದೋಣಿ ಬಹಳ ದುಸ್ಥಿತಿಯಲ್ಲಿ ಇದೆ, ಈ ದೋಣಿ ಸಾಗಲಿ ಎಂಬುದೇ ನನ್ನ ಆಸೆ. ಈ ಸರ್ಕಾರ, ಈ ಮಂತ್ರಿಮಂಡಲ ಯುವಕರಿಂದ ಕೂಡಿದೆ, ನನಗೆ ಸ್ವಲ್ಪ ಆಶಾಭಾವನೆ ಇದೆ, ಚೆನ್ನಾಗಿ ಕೆಲಸ ಮಾಡಲಿ, ಅವರನ್ನು ಬರೀ ಟೀಕೆ ಮಾಡುವುದೇ ನಮ್ಮ ಉದ್ದೇಶವಲ್ಲ. ಒಳ್ಳೆಯ ಕೆಲಸ ಮಾಡಿದರೆ ಸ್ವಲ್ಪ ಬೆಂಬಲ ಕೊಡೋಣ ಎಂಬ ಅಭಿಪ್ರಾಯವೂ ಕೂಡ ಇತ್ತು. ಆದರೆ ಈ ಮಂತ್ರಿಮಂಡಲದ ಚಲನವಲನಗಳನ್ನೆಲ್ಲಾ ನೋಡಿದರೆ ನಮ್ಮ ಅಭಿಪ್ರಾಯವನ್ನು ಸ್ವಲ್ಪ ಬದಲಾವಣೆ ಮಾಡಬೇಕಾಗುತ್ತದೆ. ಮಾಡಬೇಕಾಗಿದೆ, ಏಕೆಂದರೆ ಈ ಮಗುವಿಗೆ ಹುಟ್ಟುತ್ತಲೇ ಬಾಲಗ್ರಹ ಹಿಡಿದು ಬಿಟ್ಟಿತು. ಹುಟ್ಟಿದ ನಕ್ಷತ್ರ ನೋಡಿದರೆ ಪರಿಸ್ಥಿತಿ ಬಹಳ ಚೆನ್ನಾಗಿರಲಿಲ್ಲ. ಸಪ್ತದೋಷದಿಂದ ಕೂಡಿರತಕ್ಕ, ಬಾಲಗ್ರಹ ಪೀಡಿತ ಶಿಶು ಈ ಮಂತ್ರಿಮಂಡಲ. ಈ ಮಂತ್ರಿಮಂಡಲದ ಪರವಾಗಿ ಯಾವ ಒಂದು ವಿಚಾರವನ್ನೂ ಖಚಿತವಾಗಿ ತಮಗೆ ಹೇಳುವುದಕ್ಕೆ ಸಾಧ್ಯವಿಲ್ಲ. ಪಾಪ; ಅಂತಹ ಒಂದು ಕಷ್ಟ ಪರಿಸ್ಥಿತಿಯಲ್ಲಿ ಈ ಒಂದು ಮುಂಗಡ ಪತ್ರವನ್ನು ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಬಹಳ ಯುವಕರು, ಏನಾದರೂ ಧೈರ್ಯ ಮಾಡಿದರೆ, ಮನಸ್ಸು ಮಾಡಿದರೆ ಆ ಕಾರ್ಯವನ್ನು ಮಾಡಿಬಿಡುತ್ತಾರೆ. ಅಂತಹ ರಾಮಕೃಷ್ಣ ಹೆಗಡೆಯವರು ಇಡಬೇಕಾಗಿ ಬಂದುದು ಅವರ ದೌರ್ಭಾಗ್ಯ, ಇದು ಅವರ ಪಾಲಿಗೆ ನಿಜವಾಗಿಯೂ ದುರ್ದೈವ.

ಶ್ರೀ ಕೆ. ಎಚ್. ಶ್ರೀನಿವಾಸ್ (ಸಾಗರ).—ಅದು ನಿಮ್ಮ ಅಭಿಪ್ರಾಯ ಇರಬಹುದು.

ಶ್ರೀ ಜಿ. ದುಗ್ಗಪ್ಪ.—ಸಪ್ತ ದೋಷಗಳು ಯಾವುವು ಎಂಬುದನ್ನು ಶ್ರೀಮಾನ್ ಶ್ರೀನಿವಾಸ್ ರವರೇ ಕೇಳಿ. ತಾವು ತತ್ವರಹಿತವಾದ ರಾಜಕೀಯವನ್ನು ನಡೆಸುತ್ತಾ ಇದ್ದೀರಿ ಇದು ಮೊದಲನೆಯದು ದೋಷ, ಎರಡನೆಯದು ನೀತಿ ವಿಹೀನ ವಾಣಿಜ್ಯ, ಮೂರನೆಯದು ಶೀಲವಿಲ್ಲದ ಶಿಕ್ಷಣ, ನಾಲ್ಕನೆಯದು ದುಡಿಮೆ ಇಲ್ಲದ ಸಂಪತ್ತು ನಿಮಗೆ ಬೇಕು, ಅದನ್ನು ಅನುಸರಿಸುತ್ತಾ ಇದ್ದೀರಿ, ಐದನೆಯದು ವಿವೇಕವಿಲ್ಲದ ಆಡಳಿತ, ಆರನೆಯದು ಸ್ವಜನ ಪಕ್ಷಪಾತ, ಏಳನೆಯದು, ಇದು ಬಹಳ ಗುರುತರವಾದದ್ದು, ನಿಮ್ಮ ಸಮಾಜ ಕಲ್ಯಾಣದ ಕಪಟ ನೀತಿ. ಈ ಸಪ್ತ ದೋಷಗಳಿಂದ ಕೂಡಿ ಪ್ರಾರಂಭದಲ್ಲೇ ಬಾಲಗ್ರಹದಿಂದ ಪೀಡಿತವಾದ ಈ ಶಿಶು ಹೇಗೆ ಮುಂದುವರಿಯಬೇಕು? ನಿಮ್ಮ ರಾಜಕಾರಣ ಹೊಲಸಾಗಿದೆ, ನಿಮ್ಮ ಆಡಳಿತ ಹವಗೆಟ್ಟು ಹೋಗಿಬಿಟ್ಟಿದೆ. ಇಂಥಹ ಪರಿಸ್ಥಿತಿಯಲ್ಲಿ ಪ್ರಜಾಪ್ರಭುತ್ವ ಕುಸಿದು ಬಿದ್ದು ಹೋಗುತ್ತದೆ. ಪ್ರಜಾಪ್ರಭುತ್ವ ಕುಸಿದು ಬಿದ್ದು ಹೋಗುತ್ತದೆ ಅನ್ನುವುದಕ್ಕೆ ಒಂದು ದೃಷ್ಟಾಂತ—ನೀವು ದೇಶದ ಹಿತದೃಷ್ಟಿಯನ್ನು ಮರೆತು—ಬೆಂಗಳೂರು ನಾಗರೀಕರ ಹಿತದೃಷ್ಟಿಯನ್ನು ಮರೆತು, ಪಕ್ಷದ ಹಿತವನ್ನೇ ಗಮನದಲ್ಲಿಟ್ಟುಕೊಂಡು ಸುಭಾಷನಗರ ಪ್ರದೇಶವನ್ನು—ಧರ್ಮಾಂಬುಧಿ ಕೆರೆ ಅಂತ ಮುಂಚೆ ಕರೆಯುತ್ತಿದ್ದರು—ಕಾಂಗ್ರೆಸ್ ವಸ್ತು ಪ್ರದರ್ಶನಕ್ಕೆ ಕೊಡುತ್ತಾ ಇದ್ದೀರಲಾ ಅದರ ಚಿಹ್ನೆ ಏನು ತೋರಿಸುತ್ತದೆ? ಇದು ನಿಮ್ಮ ತತ್ವ ರಹಿತ ರಾಜಕೀಯ ಎಂದು ನಾನು ಹೇಳುತ್ತೇನೆ. ದಯವಿಟ್ಟು ಕೇಳಬೇಕು, ಈ ಮಗು ಹುಟ್ಟಿದ್ದು ಎಂತಹ ಪರಿಸ್ಥಿತಿಯಲ್ಲಿ? ಶಾಶ್ವತ ಕರ್ಮಕಾಂಡ, ಪಿ ಡಬ್ಲ್ಯೂ ಡಿ ಆಫೀಸನ್ನು ಮತ್ತು ಕಂಟ್ರಾಕ್ಟ್ ದಾರರ ಅವಾಂತರ ಅದರ ಮೇಲೆ ಶ್ರೀಮಾನ್ ನಿಜಲಿಂಗಪ್ಪನವರ ಕಾಂಗ್ರೆಸ್ ಅದು ಎ. ಐ. ಸಿ. ಸಿ. ಅಲ್ಲ ಎನ್. ಐ. ಸಿ. ಸಿ. ಇಂತಹ ನಕ್ಷತ್ರದಲ್ಲಿ ಉದ್ಭವಿಸಿದ ಶಿಶು ಏನಾಗಿದೆ? ನಿಮಗೆ ಹೇಳುತ್ತೇನೆ.

ಶ್ರೀ ಎಸ್. ಎ. ಅಗ್ನಿಹೋತ್ರಿ (ಧಾರವಾಡ ಗ್ರಾಮಾಂತರ).—ಭಾಗ್ಯವಾನ್ ಶಿಶು.

ಶ್ರೀ ಜಿ. ದುಗ್ಗಪ್ಪ.—ನಿಮ್ಮ ಭಾಗ್ಯ ಎಷ್ಟಿದೆ ಎಂಬುದನ್ನು ಹೇಳುತ್ತೇನೆ. ಮಹಾಜನ್ ವರದಿ ಏನಾಯಿತು ಎಂಬುದನ್ನು ನೋಡಿದರೆ ನಿಮ್ಮ ಭಾಗ್ಯಕ್ಕೆ ಎಣೆಯೇ ಇಲ್ಲ. ಇಷ್ಟಾದ ಮೇಲೆ ನೀವು ರಾಜಕೀಯ ಮಾಡಬೇಕು. ಹೇಳಿಕೇಳಿ ರಾಜಕೀಯದಿಂದಲೇ ನೀವು ಅಧಿಕಾರಕ್ಕೆ ಬಂದಿದ್ದೀರಿ ಆದರೆ ಈ ರಾಜಕೀಯ ನಿಚ್ಚಳವಾಗಿರಬೇಕು. ಬಳ್ಳಾರಿಯಲ್ಲಿ ಸಿರಿಗೆರೆ ಸ್ವಾಮಿಗಳು ಬನವೇಶ್ವರದ 8ನೇ ಶತಮಾನೋತ್ಸವವನ್ನು ನೆರವೇರಿಸಲಕ್ಕೆ ಹೋದರು, ಅಲ್ಲಿಯ ಮಹಾಜನರು ಸೇರಿ ಅಲ್ಲಿ ಸಾರ್ವಜನಿಕ ವಿದ್ಯಾರ್ಥಿನಿಲಯ ಇಲ್ಲ ಒಂದೊಂದು ಕೋಮಿಗೆ ಒಂದೊಂದು ವಿದ್ಯಾರ್ಥಿನಿಲಯ ಇದೆ. ಎಲ್ಲಾ ಕೋಮಿನ ವಿದ್ಯಾರ್ಥಿಗಳು ಸೇರಿ ಅಭ್ಯಾಸಮಾಡತಕ್ಕ ಒಂದು ಸಾರ್ವಜನಿಕ ವಿದ್ಯಾರ್ಥಿನಿಲಯವನ್ನು ತಾವು ಸ್ಥಾಪನೆ ಮಾಡಬೇಕು, ಅದೇ ರೀತಿ ಎಲ್ಲಾ ಕೋಮಿನವರೂ ಸೇರಿ ಮದುವೆ ಕಾರ್ಯಗಳನ್ನು ನೆರವೇರಿಸಲು ಒಂದು ಕಲ್ಯಾಣ ಮಂದಿರವನ್ನು ಕಟ್ಟಬೇಕು ಎಂದು ಕೇಳಿ ಕೊಂಡರು.

ಶ್ರೀ ಕೆ. ಎಚ್. ಶ್ರೀನಿವಾಸ್.—ಇಂಟರಕ್ಯಾಸ್ಟ್ ಮ್ಯಾರೇಜ್ ಕಲ್ಯಾಣ ಮಂದಿರವೇ?

ಶ್ರೀ ಜಿ. ದುಗ್ಗಪ್ಪ.—ಆ ಕೆಲಸ ಕೂಡ ಆಗಿದೆ. ಶೈಲಜ್ ಅನ್ನತಕ್ಕ ಜರ್ಮನ್ ಹುಡುಗಿಯನ್ನು ಪ್ರೊಫೆಸರ್ ಹೀರೇಮಲ್ಲೂರ ಈಶ್ವರನ್ ಅನ್ನುವವರು ಮದುವೆ ಆಗಿದ್ದಾರೆ, ಅದು ತಮಗೆ ಗೊತ್ತಿರಬಹುದು. ಅಂತಹ ಸ್ತುತ್ಯವಾದ ಕಾರ್ಯಕ್ಕೆ ಒಂದು ಸರ್ಕಾರದ ಜಪಾನನ್ನು ಕೊಡಬೇಕು ಎಂದು ಡೆಪ್ಯೂಟಿ ಕಮಿಷನರನ್ನು ಕೇಳಿದರೆ ತಮ್ಮ ರಾಜಕೀಯ ಬೆಂಬಲಿಗರು ಸಿರಿಗೆರೆ ಸ್ವಾಮಿಗಳಿಗೆ ಸರ್ವಥಾ ಜಪಾನು ಕೊಡಕೂಡದು ಎಂದು ರಿಪೋರ್ಟ್ ಬರೆಸಿ ಇವತ್ತಿನವರೆಗೂ ಕೂಡ ರೆವಿನ್ಯೂ ಮಂತ್ರಿಗಳ ಹತ್ತಿರ ಆ ಫೈಲು ಇದ್ದುದು ಈಗ ಮತ್ತೆ ಬಳ್ಳಾರಿಗೆ ಹೋಗಿದೆ. ಇಂತಹ ರಾಜಕಾರಣ ಮಾಡಬೇಡಿ, ಇದು ಮೊದಲನೆಯ ದೋಷ ತಿದ್ದಿಕೊಳ್ಳಬೇಕು. ನಾನು ಹೇಳುವುದು ಇಷ್ಟೆ ಯಾರಾದರೂ ಆಗಲಿ ಒಳ್ಳೆಯ ಕೆಲಸ ಮಾಡಿದರೆ ಮಾಡಲಿ, ಬೆಂಬಲ ಕೊಡಿ. ರಾಜಕಾರಣ ಮಾಡುವಾಗ ನ್ಯಾಯ ಮಾಡಬೇಕೆನ್ನುವುದು ಒಂದು ಅಂಶ. ಎರಡನೆಯದು ನೀತಿ ವಿಹೀನ ವಾಣಿಜ್ಯ. ಈಗ ವಾಣಿಜ್ಯ ಇರಾಖೆಯು ಮಂತ್ರಿಗಳು ಮೈಸೂರಿನವರು. ಹಿಂದೆ ಸರ್. ಎಂ. ವಿಶ್ವೇಶ್ವರಯ್ಯನವರು ಸ್ಥಾಪಿಸಿದ ಭದ್ರಾವತಿಯಲ್ಲಿರತಕ್ಕ ಕಬ್ಬಿಣದ ಕಾರ್ಖಾನೆ ಮತ್ತು ಇನ್ನೂ ಇತರ ಅನೇಕ ಕಾರ್ಖಾನೆಗಳನ್ನು ಎಷ್ಟೇ ಲುಕ್ಸಾನಾಗಲಿ ಬಿಳೇ ಆನೆ ಸಾಕಿದ ಹಾಗೆ ಸಾಕುತ್ತೇವೆ ಬಿಟ್ಟುಕೊಡುವುದಕ್ಕಾಗುವುದಿಲ್ಲ ಎಂದು ಹೇಳಿದರು. ಇವತ್ತು ಪ್ರೋರ್ಸಲೀನ್ ಫ್ಯಾಕ್ಟರಿ ಇದೆ ಅದನ್ನು ಬಿಳಿ ಆನೆ ಸಾಕಿದ ಹಾಗೆ ಸಾಕಬೇಕಾಗಿದೆ. ಈ ಕೈಗಾರಿಕಾ ಪ್ರಪಂಚದಲ್ಲಿ ಇಂಡಿಯಾ ದೇಶದಲ್ಲಿ ಮೈಸೂರಿಗೆ ಇರತಕ್ಕ ಸ್ಥಾನ ಇವತ್ತು, ಅಧೋಗತಿಗೆ ಹೋಗುತ್ತಾ ಇದೆ. ನೀವು ಇದರ ಬಗ್ಗೆ ನಿಷ್ಕಳವಾದ ನಿರ್ದಿಷ್ಟವಾದ ನೀತಿಯನ್ನು ಅನುಸರಿಸಿ, ಯಾವುದನ್ನೂ ಕೈ ಬಿಡಬೇಡಿರಿ.

7-00 P. M.

ಮೂರನೆಯದು ಶೀಲವಲ್ಲದ ಶಿಕ್ಷಣ. ಯಾವುದಾದರೂ ಒಂದು ಸಾಹಿತ್ಯದ ಪುಸ್ತಕ ಪ್ರಕಟಣೆ ಯಾದರೆ, ಅದು ಈ ದೇಶದ ಮಟ್ಟವನ್ನು ಎತ್ತಿ ತೋರಿಸುತ್ತದೆ. ನಮ್ಮ ದೇಶದಲ್ಲಿ ಪ್ರಕಟವಾಗತಕ್ಕ ಪುಸ್ತಕಗಳ ದರ್ಜೆಯ ಮಟ್ಟ ಯಾವ ರೀತಿಯಲ್ಲಿದೆಯೆಂದರೆ, ಸರ್ಕಾರಕ್ಕೆ ಯಾರು ಬೆಂಬಲ ಕೊಡುತ್ತಾರೋ, ಸರ್ಕಾರದ ಬೆಂಬಲ ಯಾರಿಗೆ ಇದೆಯೋ ಅವರ ಒಂದು ಬೆಂಬಲದಿಂದ ಪುಸ್ತಕಗಳು ಪ್ರಕಟಣೆಯಾಗಿವೆ. ಅಂತಹ ಪುಸ್ತಕಗಳನ್ನು ಓದಿದರೆ, ನಾವು ಯಾವ ಮಟ್ಟದಲ್ಲಿದ್ದೇವೆ ಎಂಬುದು ಗೊತ್ತಾಗುತ್ತದೆ. ಇಂಗ್ಲೆಂಡಿನಲ್ಲಿ ಹ್ಯಾಮಲೆಟ್ ಡ್ರಾಮಾ ಪುಸ್ತಕ ಪ್ರಕಟಣೆಯಾದಾಗ ಅಲ್ಲಿನ ಸಂಸ್ಕೃತಿ ಯಾವರೀತಿ ಇತ್ತೆಂಬುದನ್ನು ಗಮನಿಸಬೇಕು. ಮೈಸೂರು ದೇಶದಲ್ಲಿ ಸರ್ಕಾರದ ಬೆಂಬಲ ಇರತಕ್ಕವರು ಯಾವರೀತಿಯಾದಂಥ ಪುಸ್ತಕಗಳನ್ನು ಪ್ರಕಟಣೆಮಾಡುತ್ತಾರೆಂಬುದನ್ನು ನೋಡಿದರೆ ಸಾಕು ನಿಮ್ಮ ಸಾಹಿತ್ಯ ಮತ್ತು ರಾಜಕೀಯ ಮಟ್ಟ ಹೇಗಿದೆಯೆಂಬುದಕ್ಕೆ ನಿಮ್ಮ ಬೆಂಬಲ ಪಡೆದವರಿಂದ ಪ್ರಕಟಿತವಾದ "ಶೂನ್ಯಪೀಠಪ್ರಭಾವ" ಎಂಬ ಪುಸ್ತಕವೇ ಸಾಕ್ಷಿಯಾಗಿದೆ. ಆದ್ದರಿಂದ ಸಾಹಿತ್ಯಮಟ್ಟವನ್ನು ಹೆಚ್ಚಿಸಬೇಕು ಮತ್ತು ಶ್ರೀಲದಿಂದಕೂಡಿದ ಶಿಕ್ಷಣವಿರಬೇಕು.

ನಾಲ್ಕನೆಯದು, ದುಡಿಮೆ ಇಲ್ಲದ ಸಂಪತ್ತು. ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಮಾನ್ಯ ಶ್ರೀ ಸಂಜೀವರೆಡ್ಡಿಯವರೆ ಇದನ್ನು ಹೇಳಿ ಹೆಸರಾಗಿದ್ದಾರೆ.

ಐದನೆಯದು, ವಿಚಕ್ಷಣೆಯಿಲ್ಲದ ಆಡಳಿತ. ಇದಕ್ಕೆ ಒಂದು ಉದಾಹರಣೆ, ಪಿ. ಡಬ್ಲ್ಯು. ಡಿ. ಇರಾಖೆಯಲ್ಲಿ ಎಷ್ಟು ಜನ ಇಂಜನಿಯರ್ಸ್ ಬೇಕು, ಒಬ್ಬ ಇಂಜನಿಯರಿಗೆ ಕಣ್ಣು ಇಲ್ಲ, ಒಬ್ಬರಿಗೆ ತಲೆ ಇಲ್ಲ, ಒಬ್ಬ ಇಂಜನಿಯರ್ ಆರ್‌ಮೋಸ್ಟ್ ಸಿನಿಕ್. ಇನ್ನೊಬ್ಬ ಇಂಜಿನಿಯರ್, he walks on his head and not on his legs; ಇನ್ನೊಬ್ಬ ಚೀಫ್ ಇಂಜನಿಯರ್ ಹಿ ಈಸ್ ಎ ಥರೋ ಜಂಟರ್‌ಮನ್, ಬಟ್ ಹಿ ಹ್ಯಾಸ್‌ನೋ ಪವರ್ಸ್. ಮಾನ್ಯ ಶ್ರೀ ರಾಮಕೃಷ್ಣ ಹೆಗಡೆಯವರ ಒಂದು ಸಾರಿ ಒಂದು ಮಾತನ್ನು ಹೇಳಿದ್ದಾರೆ, ಸರ್ಕಾರದ ನೌಕರರು ಒಂದು ದಿವಸಕ್ಕೆ 3 ಘಂಟೆ ಕೆಲಸ ಮಾತ್ರ ಕೆಲಸ ಮಾಡುತ್ತಾರೆ, ಅದು ಅವರ ಗಮನಕ್ಕೆ ಬಂದಿದೆಯೆಂದು ಹೇಳಿದ್ದಾರೆ. ಅವರು ಆ ಮಾತನ್ನು ಹೇಳಿದ್ದು ನನಗೆ ಬಹಳ ಸಂತೋಷವಾಗುತ್ತದೆ. ಈ ದಿವಸ ಕೆಲಸಗಾರರ ಬಗ್ಗೆ ಆಡಳಿತವನ್ನು ಸರ್ಕಾರದವರು ಬಿಗಿಮಾಡುತ್ತಾರೆಂಬುದಾಗಿ ಮಾನ್ಯ ಶ್ರೀ ಅರಸ್ ಅವರು ಹೇಳಿದರು. ಅದಕ್ಕೆ ನಾನು ಸಂಪೂರ್ಣವಾಗಿ ಬೆಂಬಲವನ್ನು ಕೊಡುತ್ತಿದ್ದೇನೆ. ಕೋ ಆಪರೇಟಿವ್ ಇರಾಖೆಯಲ್ಲರ ಸಕ್ಕ ಇಲಗಳನ್ನು ಮತ್ತು ಹೆಗ್ಗಣಗಳನ್ನು ಓಡಿಸಿ ಬಿಗಿಯಾಗಿ ಆಡಳಿತ ಮಾಡಿ. ಒಟ್ಟಿನಲ್ಲಿ ವಿಚಕ್ಷಣೆ ಇಲ್ಲದ ಆಡಳಿತವನ್ನು ಖಂಡಿತವಾಗಿ ಮಾಡಬೇಡಿ.

ಆರನೆಯದು, ಸ್ವಜನ ಪಕ್ಷಪಾತ. ಇದು ಒಂದು ದೊಡ್ಡ ಕಾಯಿಲೆ. ಚಿತ್ರದುರ್ಗ ಜಿಲ್ಲೆಯಲ್ಲಿ ಕಾಂಗ್ರೆಸ್ಸಿಗೆ ಯಾರ್ಯಾರದು ಬೆಂಬಲವಿಲ್ಲವೋ ಅಂತಹವರ ಬಗ್ಗೆ ಎಲೆಕ್ಷನ್ ಇನ್ನೇನು ಆಗ

ಬೇಕು ಎನ್ನುವಾಗ ಬಹಳ ವಿಚಿತ್ರ ನಡೆದಿದೆ. ಚಿತ್ರದುರ್ಗ ಮುನಿಸಿಪಾಲಿಟಿ ಚುನಾವಣೆಗೆ ಕ್ಯಾಲೆಂಡರ್ ಆಫ್ ಇವೆಂಟ್ಸ್ ಹಾಕಿದಾಗ ನಡೆದ ವಿಷಯ. ಅದು 24 ಜನರು ಇರತಕ್ಕ ಕೌನ್ಸಿಲ್. 12 ಜನ ಸದಸ್ಯರು ಬಂದು, ಏನಿದು, ಇಷ್ಟು ಅನ್ಯಾಯವಾಗುತ್ತಿದೆ, ಮುನಿಸಿಪಾಲಿಟಿಯವರು ವೋಟಿಂಗ್ ಕರೆಯಲಿಲ್ಲ, ನೀವು ವಿಚಾರಮಾಡಬೇಡವೇ ಎಂದು ಕೇಳಿದಾಗ, ಒಬ್ಬ ಡೆಪ್ಯುಟಿ ಕಮಿಷನರ್ ದರ್ಜೆಯಲ್ಲಿರತಕ್ಕ ಅಧಿಕಾರಿಯನ್ನು ಕಳುಹಿಸಿ ಅದನ್ನು ವಿಚಾರಮಾಡಿ ಎಂಬುದಾಗಿ ಹೇಳಿದರು. ಇದರ ಬಗ್ಗೆ 24 ಜನರ ಸದಸ್ಯರ ಪೈಕಿ 12 ಜನರು ಸರ್ಕಾರಕ್ಕೆ ಅರ್ಜಿ ಕೊಟ್ಟರು. ನಾನೂ ಸಹ ಒಂದು ಅರ್ಜಿಯನ್ನು ಈ ಸಭೆಯಲ್ಲಿಯೇ ಕೊಟ್ಟಿದ್ದೇನೆ. 28ನೇ ಡಿಸೆಂಬರ್‌ನಲ್ಲಿ ಡೆಲಿಗೇಷನ್ ಸಹ ಬಂದಿದ್ದರು. ಆದರೆ 31ನೇ ತಾರೀಖಿನಲ್ಲಿ ಒಂದು ಜಿ. ಓ. ಆಗಿ ಆ ಕೌನ್ಸಿಲನ್ನು 6 ತಿಂಗಳು ಗಳ ಕಾಲ ಮುಂದುವರಿಸಿದ್ದೇವೆಂದು ಹೇಳಿದರು. ಅಂದಮೇಲೆ ಕಾನೂನು ಎಲ್ಲಿ ಗಾಳಿಗೆ ಹೋಯಿತೋ ಗೊತ್ತಾಗಲಿಲ್ಲ.

ಶ್ರೀ ಎಸ್. ಶಿವಪ್ಪ.—ಇದು ಕಾಂಗ್ರೆಸ್ ಡೆಮೊಕ್ರಸಿ.

ಶ್ರೀ ಬಿ. ಎಂ. ಪಾಟೀಲ್ (ನಗರಾಡಳಿತ ಮಂತ್ರಿಯವರು).—ಹೈಕೋರ್ಟಿನಿಂದ ಆರ್ಡರ್ ಬಂದಿದೆ. ಸರ್ಕಾರ ಆರ್ಡರ್ ಮಾಡಿದೆ.

ಶ್ರೀ ಎಸ್. ಶಿವಪ್ಪ.—ಅದಕ್ಕೆ ಆಕ್ಟ್‌ನಲ್ಲಿ ಪ್ರಾವಿಷನ್ ಇದೆಯೋ ಇಲ್ಲವೋ?

ಶ್ರೀ ಬಿ. ಎಂ. ಪಾಟೀಲ್.—ಆಕ್ಟ್‌ನಲ್ಲಿ ಅವಕಾಶವಿದೆ.

ಶ್ರೀ ಜಿ. ದುಗ್ಗಪ್ಪ.—ಆ ಅವಕಾಶವನ್ನು ಇವರು ದುರುಪಯೋಗಮಾಡಿಕೊಂಡು ಅವರಿಗೆ ಬೇಕಾದವರಿಗೆ ಅನುಕೂಲವಾಗಲೆಂದು ಸ್ವಜನ ಪಕ್ಷಪಾತ ದೃಷ್ಟಿಯಿಂದ ಇದನ್ನು ಮಾಡಿದ್ದಾರೆ.

ಇನ್ನು ರೆಗ್ಯುಲೇಟೆಡ್ ಮಾರ್ಕೆಟ್ ಕಮಿಟಿಯ ಬಗ್ಗೆ ಒಂದು ಆಕ್ಟನ್ನು ಪಾಸ್‌ಮಾಡಿದ್ದಾರೆ. ಮೊನ್ನೆತಾನೇ ಹೈಕೋರ್ಟಿನಲ್ಲಿ ಒಂದು ಇಂಟರ್‌ಪ್ರಿಟೇಷನ್ ಕೊಟ್ಟಿದ್ದಾರೆ. ಅದರ ಪ್ರಕಾರ ಪ್ರತಿಯೊಂದು ಕಮಿಟಿಯನ್ನು ಸರ್ಕಾರದವರು ನಾಮಿನೇಟ್ ಮಾಡಬೇಕೆಂದು ವ್ಯಾಖ್ಯಾನಮಾಡಿದ್ದಾರೆ. ನ್ಯಾಯವಾಗಿ ಸರ್ಕಾರ ಆಡಳಿತ ನಡೆಸುವ ಬಗ್ಗೆ ಶಾಸಕರ ಅಭಿಪ್ರಾಯವೇನೆಂಬುದನ್ನು ತಿಳಿದು ಕೊಳ್ಳಬೇಕು. ಅಕಸ್ಮಾತ್ ನ್ಯೂನತೆ ಕಂಡಲ್ಲಿ ಅದಕ್ಕೆ ಸರಿಯಾಗಿ ತಿದ್ದುಪಡಿ ತರಬೇಕು. ಸರ್ಕಾರದವರು ಇದನ್ನೆಲ್ಲಾ ಬಿಟ್ಟು ಹೆನ್ನಾಗಿ ಇದೆ ಎಂದು ಹೇಳಿ ಪ್ರತಿಯೊಂದು ರೆಗ್ಯುಲೇಟೆಡ್ ಮಾರ್ಕೆಟ್ ಕಮಿಟಿಗಳಿಗೆ ಸರ್ಕಾರದವರು ನಾಮಿನೇಟ್ ಮಾಡಲು ಹೊರಟರು. ಹೈಕೋರ್ಟು ಡಿಸಿಷನ್ ಬಂದರೆ ಏನು ತಪ್ಪು? ಶಾಸಕರ ಅಭಿಪ್ರಾಯಕ್ಕೆ ತಾವು ಮನ್ನಣೆ ಕೊಡಬೇಕು. ಆಕ್ಟು ತಪ್ಪು ಇದ್ದರೆ ಸರಿಯಾದ ತಿದ್ದುಪಡಿ ತರಬೇಕು. ನಿಮಗೆ ಬೇಕಾಗಿರತಕ್ಕದ್ದನ್ನು ಜಾರಿಗೆ ತರುವುದು ನಿಮಗೆ ಹಿತವಿಲ್ಲದಿದ್ದರೆ ಜಾರಿಗೆ ತಾರದೆ ಇರುವುದು ಸರಿಯಲ್ಲ.

ಶ್ರೀ ಬಿ. ಎಂ. ಪಾಟೀಲ್.—ಹೊಸ ಆಕ್ಟು ಬಂದಮೇಲೆ ಅಲ್ಲಿ ಚುನಾವಣೆಯಾಗಬೇಕಾಗಿತ್ತು. ಅದಕ್ಕೆ ವಿರೋಧವಾಗಿ ಕೆಲವರು ಹೈಕೋರ್ಟಿಗೆ ಹೋದರು. ಹೈಕೋರ್ಟಿಗೆ ಹೋದಾಗ್ಗೆ, ನಾವು ತೀರ್ಮಾನಮಾಡಿದ್ದರೆ, ಅದು ಹೈಕೋರ್ಟಿಗೆ ವಿರೋಧವಾಗಿ ಮಾಡಬೇಕಾಗಿ ಬರುತ್ತಿತ್ತು.

ಶ್ರೀ ಜಿ. ದುಗ್ಗಪ್ಪ.—ಆ ರೀತಿಯಾಗಿ ನಾನು ಹೇಳುವುದಿಲ್ಲ. ನಿಮ್ಮ ಸ್ನೇಹಿತರು ಹೇಳಿದ ಹಾಗೆ ನಾನು ಅಡ್ವೈಜ್ ಮಾಡುವುದಿಲ್ಲ. ಅದರ ಬಗ್ಗೆ ಈ ಮಾನ್ಯ ಸಭೆಯ ಅಭಿಪ್ರಾಯವೇನಿತ್ತು, ಯಾವ ಹಿನ್ನೆಲೆಯಲ್ಲಿ ಈ ಆಕ್ಟನ್ನು ಪಾಸ್ ಮಾಡಿದ್ದಾರೆ ಮತ್ತು ಹೈಕೋರ್ಟಿನ ಅಭಿಪ್ರಾಯವನ್ನು ನೋಡಿಕೊಂಡು ತೀರ್ಮಾನ ಮಾಡಬೇಕು. ಹಾಗಿದ್ದರೆ ಮಾತ್ರ ನ್ಯಾಯವಾಗಿ ಆಡಳಿತ ಮಾಡುವುದಕ್ಕೆ ಸಾಧ್ಯವಿದೆಯೇ ವಿನಹ ಇಲ್ಲದಿದ್ದರೆ ತಪ್ಪು ಆಡಳಿತವಾಗುತ್ತದೆ.

ಏಳನೆಯದು, ಕೊನೆಯದಾಗಿ ಕಪಟ ಸಮಾಜ ಕಲ್ಯಾಣನೀತಿ. ಯಾರಿಗೋಸ್ಕರ ಕಲ್ಯಾಣ! ಈ ಇರಾಖೆಗೆ ಉಪಮಂತ್ರಿಯಾಗಿ ಮಕ್ಕಳ ತಾಯಂದಿರು ಇದ್ದಾರೆ. ನಿಜವಾಗಿ ಯಾರು ಸಮಾಜದಲ್ಲಿ ನತದೃಷ್ಟರು ಇದ್ದಾರೋ, ಮತ್ತು ಅತ್ಯಂತ ಕೆಳಮಟ್ಟದಲ್ಲಿರತಕ್ಕ ಜನರು ಇದ್ದಾರೋ ಅಂತ ಹವರ ಕಲ್ಯಾಣವಾಗಬೇಕು. ಸರ್ಕಾರದವರು ಏನು ಹಿಂದುಳಿದವರನ್ನು ಮುಂದಕ್ಕೆ ತರಬೇಕೆಂಬ ನೀತಿಯನ್ನು ಇಟ್ಟುಕೊಂಡಿದ್ದಾರೋ ಅದರಲ್ಲಿ ಒಂದು ಪಕ್ಷದವರನ್ನೇ ಎತ್ತಿಕಟ್ಟಿ ನಾಟಕವಾಡಿಸುತ್ತಿದ್ದಾರೆ. ಇನ್ನೂ ಸ್ಪಷ್ಟವಾಗಿ ಹೇಳಬೇಕಾದರೆ, ಯಾರನ್ನು ಷೆಡ್ಯೂಲ್ ಕ್ಯಾಸ್ಟ್ ಲಿಸ್ಟಿಗೆ ಸೇರಿಸಬೇಕೆಂಬ ಅಭಿಪ್ರಾಯವನ್ನು ಕೇಳಿದಾಗ, ಸರ್ಕಾರದವರು ಏನು ಮಾಡಿದರೆಂದರೆ, ಯಾರು ಅಸ್ಪೃಶ್ಯರು ಇದ್ದಾರೋ ಆ ಒಂದು ಅರ್ಹತೆಯೆ ಮೇರೆ ಅವರನ್ನು ಮಾತ್ರ ಆ ಪಟ್ಟಿಯಲ್ಲಿ ಅಂದರೆ

(ಶ್ರೀ ಜಿ. ದುಗ್ಗಪ್ಪ)

ಪರಿಶಿಷ್ಟದ ವರ್ಗಪಟ್ಟಿಗೆ ಸೇರಿಸಬೇಕೆಂದು ಪ್ರಸ್ತಾಪಿಸಿದರು. ಮತ್ತೆ ಪುನಃ ಈ ವರ್ಗದಲ್ಲಿ ಭಿನ್ನಾಭಿಪ್ರಾಯ ತರುವುದಕ್ಕೆ ಬೋಯಿಗಳನ್ನು ಆ ವರ್ಗದಲ್ಲಿ ಸೇರಿಸಬೇಕೆನ್ನುವ ಅಭಿಪ್ರಾಯವನ್ನು ಇಟ್ಟುಕೊಂಡು ಆ ವರ್ಗದ ಮಾನ್ಯ ಸದಸ್ಯರಾಗಿರುವ ಪ್ರತಿನಿಧಿಗಳನ್ನು ಕೇಳದೆ ಕೇಂದ್ರ ಸರ್ಕಾರಕ್ಕೆ ಬರೆದಿದ್ದಾರೆ. ಇದು ತಪ್ಪು. ಈ ವರ್ಗದ ನತದೃಷ್ಟ ಜನರನ್ನು ಪ್ರತಿನಿಧಿಸತಕ್ಕ ನಮ್ಮ ಪ್ರತಿನಿಧಿಗಳದೇ ತಪ್ಪು. ಆ ತಪ್ಪು ನಮ್ಮ ಮೇಲೆ ಇರುವಾಗ ಇತರ ಕಡೆ ಬೆಟ್ಟು ತೋರಿಸುವುದಕ್ಕೆ ಸಾಧ್ಯವಿಲ್ಲ. ಇವತ್ತಾದರೂ ಕಿವಿ ಕೊಡಲಿ. ಇಡೀ ಇಂಡಿಯಾದೇಶದಲ್ಲಿರತಕ್ಕ ಪ್ರತಿಯೊಂದು ಸಂಸ್ಥಾನದಲ್ಲಿ ಯಾವ ಒಂದು ಆಧಾರದ ಮೇಲೆ ಹಿಂದುಳಿದ ಪಟ್ಟಿಯನ್ನು ಮಾಡಿದ್ದಾರೋ ಆದೇ ರೀತಿ ಅದು ಮೈಸೂರಿಗೆ ಅಗುವಾಗಬೇಕೇ ವಿನಹ ಮೈಸೂರಿಗೆ ಬೇರೆ ಆಗಕೂಡದು. ಇವತ್ತು ನಾನು ಅಸ್ಪೃಶ್ಯ ಎಂದು ಹೇಳುವುದಕ್ಕೆ ನಿಜವಾಗಿ ನನಗೆ ಸಂತೋಷವಾಗುತ್ತದೆ. ನನ್ನ ಮಗನನ್ನು ಕೇಳಿದರೆ ಅತನು ಆ ರೀತಿ ಹೇಳುವುದಕ್ಕೆ ತಯಾರು ಇಲ್ಲ. ಆದರೆ ಇದು 2 ಸಾವಿರ ವರ್ಷಗಳಿಂದ ಬಂದಿದೆ. ನಾನು ಒಂದು ವಿಷಯವನ್ನು ಹೇಳುತ್ತೇನೆ. ನಾನು ಇಲ್ಲಿ ಅಸೆಂಬ್ಲಿ ಮೆಂಬರ್ ಆಗುವುದಕ್ಕೆ ಸಾಧ್ಯವಿರಲಿಲ್ಲ. ನಮ್ಮ ಜನಾಂಗದವರ ಹಿತರಕ್ಷಣೆಯನ್ನು ಸಹ ಕಾಪಾಡುವ ನಲುವಾಗಿ ನಾನು ಅವರ ಪ್ರತಿನಿಧಿಯಾಗಿ ಇಲ್ಲಿದ್ದೇನೆ. ನೀವು ಈ ಒಂದು ರಾಜಕೀಯ ಕಾರಣಕ್ಕಾಗಿ, ನಿಮ್ಮ ಸ್ಥಾನವನ್ನು ಭದ್ರಮಾಡಿಕೊಳ್ಳುವುದಕ್ಕಾಗಿ ಈ ಪರಿಶಿಷ್ಟವರ್ಗದವರಲ್ಲಿ ಭಿನ್ನಾಭಿಪ್ರಾಯ ತಂದು ಅವರವರಿಗೆ ಹೊಡೆದಾಟ ಹಚ್ಚಿ ನಾಟಕಮಾಡುತ್ತಿದ್ದೀರಿ. ಒಟ್ಟಿನಲ್ಲಿ ಮಾನ್ಯ ಶ್ರೀಮತಿ ಬನವರಾಜೇಶ್ವರಿಯವರಿಗೆ ಸಮಾಜಕಲ್ಯಾಣ ಮಾಡಬೇಕೆಂಬ ಆಸಕ್ತಿ ಇದೆ. ಈ ಇರಾಖೆಯಲ್ಲಿರತಕ್ಕ ದೋಷಗಳನ್ನು ನಿವಾರಿಸಿಕೊಂಡರೆ ನಿಮಗೂ ಒಳ್ಳೆಯದು, ದೇಶಕ್ಕೂ ಒಳ್ಳೆಯದು. ಆ ರೀತಿ ಮಾಡದಿದ್ದರೆ ಅದು ಬಾಲಗ್ರಹದ ಹಾಗೆ ಇರುತ್ತದೆ. ಇದರಿಂದ ಪ್ರಜಾಪ್ರಭುತ್ವ ಕುಸಿದುಬೀಳುತ್ತದೆ. ಇದಕ್ಕೆ ಅವಕಾಶ ಕೊಡಬೇಡಿ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

Mr. DEPUTY SPEAKER.—We shall now adjourn and meet at 1 P. M. on Monday.

The House adjourned at Five Minutes past Seven of the Clock to meet again at One of the Clock, on Monday, the 3rd March 1969.

WD 12496—GPB—600—19-6-1969

ಮೈಸೂರು ವಿಧಾನಸಭೆ

MYSORE LEGISLATIVE ASSEMBLY

Monday, 3rd March 1969.

The House met in the Assembly Chamber, Vidhana Soudha, Bangalore at One of the Clock.

MR. SPEAKER (SRI S. D. KOTHAVALE) in the Chair.

STARRED QUESTIONS

(to which oral answers were given)

Water Supply to Fertiliser Factory

156. Sri H. N. NANJE GOWDA (Arkalgud).—

Will the Minister for Public Works be pleased to state :—

(*a*) whether the work of providing water supply to the Fertiliser Factory at Mangalore is entrusted to any contractors;

(*b*) if so, the concessions extended to them in relaxation of the Codal rules;

(*c*) whether tenders were called for in respect of the said work and whether any tenders were received without earnest money deposit;

(*d*) whether any amount is given to the said contractors as advance; if so, the amount so advanced;

(*e*) whether the Chief Engineer concerned had recommended to Government to ratify some of his action taken by him in relaxation of Codal rules; if so, what they are and whether Government have ratified them;

(*f*) whether the funds made available for the said work are met by the Central Government or by the State Government;

(*g*) whether the funds for this purpose are provided by the said Governments, within the Plan Ceiling or outside the ceiling limit;

(*h*) whether these funds are channelised through the Mysore State Industrial and Investment Development Corporation;

(*i*) whether the Central Government issued any notice to the State Government regarding cancellation of the licence to run the said factory?

Sri K. LAKKAPPA (Minister for Public Works).—

(*a*) Yes.

(*b*) *Concessions Extended :—*

A. Messrs Engineering Construction Corporation :—

(i) Payment of extra cost due to escalation of price of cement by the Department.

If there be reduction in prices, they should pay rebate to that extent to the Department.

(ii) Payment of cash advances of Rs. 4 lakhs (Rupees four lakhs) with interest at 8 per cent to be recovered at the rate of 10 per cent of the advance together with the accrued interest in the monthly running bills. In any case the entire advance together with the accrued interest should be recovered before the end of March 1969.

(iii) Recovery of F. S. D. at 2½ per cent instead of 5 per cent as per Codal rules in the form of Bank Guarantee to be current beyond 12 months of the contractual period or the date of completion of work whichever is later.

(iv) Payment of 90 per cent secured advance against materials brought to site as against 75 per cent as per para 1928 of Mysore P.W. Account Code.

B. Messrs Indian Hume Pipe Company Ltd.—

(i) Payment of cash advance of Rs. 15 lakhs (Rupees fifteen lakhs) against Bank Guarantee with interest at 8 per cent which should be recovered at the rate of 10 per cent of advance together with accrued interest in the monthly running bills. In any case the entire advance together with the accrued interest should be recovered before the end of March 1969.

(ii) Recovery of F. S. D. of 5 per cent by way of Bank Guarantee to be current for a period of 12 months beyond the contractual period or the date of completion whichever is later.

(iii) Payment of extra cost due to escalation in prices in case of the following materials :—

(a) Mild steel plates.

(b) Cement.

(c) Electrodes.

(d) M. S. Rods and Wire.

(iv) Payment of 90 per cent secured advance against materials brought to site as against 75 per cent as per para 228 of Mysore Public Works Account Code.

(v) Payment of penalty by the contractor at the rates notified in the tender subject to a maximum of 7½ per cent of the total value of work entrusted to them.

(vi) Payment for compensation for the cost of idle labour during such period of suspension, such expenses being reduced to the minimum necessary by the firm if the suspension is due to the Department as per Clause 15 (ii) of regular agreement form P.W.G. 65 (*a*) and if such period is more than one month.

(*c*) Yes. No earnest money deposit was prescribed.

(*d*) Yes, (i) Rs. 4 lakhs to M/s. Engineering Construction Corporation Limited, Madras. (ii) Rs. 15 lakhs to M/s. Indian Hume Pipe Company, Bombay.

(*e*) Yes. The following action taken by the Chief Engineer (General) is also ratified : —

(i) Issuing of tender papers only to the selected firms who have got experience and technical know-how in respect of water supply scheme of bigger magnitude in relaxation of the Codal rules.

(ii) For having conducted negotiations with the lowest firm who had quoted for the Turn-Key job for making combinations of Groups III, IV and V in relaxation of rules of negotiations.

(iii) For having received the tenders without obtaining earnest money deposit from any of the firms in relaxation of codal rules, subject to the condition that earnest money deposit will be deposited by them before the works are entrusted to them.

(*f*) Funds are met by the State Government.

(*g*) Provided by the State Government within the Plan Ceiling.

(*h*) No.

(*i*) Yes.

Sri H. N. NANJE GOWDA.—With reference to answer (i), I would like to know what compelled the Government to give these tenders in gross violation of the P. W. D. Code and advance Rs. 19 lakhs ?

Sri K. LAKKAPPA.—This cancellation notice is issued only after the tenders have been called for and accepted and not before that.

Sri H. N. NANJE GOWDA.—Even without securing the licence, what were the compelling reasons for the Government to decide to accept these tenders even without earnest deposit ?

Sri K. LAKKAPPA.—The hon. Member seems to be mistaken. One concern by name Malabar Chemicals and Fertilisers applied for licence and permission from the Government of India and accordingly the Government of India permitted them. It is only after the Government of India permitted them to start this industry, our State Government has taken steps and when our State Government was approached to see that water supply is expedited so that the factory may be finished within a stipulated period, the State Government took steps to call for tenders and make water supply possible. It is only then we called for tenders.

Sri H. N. NANJE GOWDA.—During last March 1968 that is on 21st the Minister for Public Works told this House thus:

"ಮಂಗಳೂರಿನಲ್ಲಿ ಫರ್ಟಿಲೈಸರ್ ಫ್ಯಾಕ್ಟರಿ ಪ್ರಾರಂಭ ಮಾಡುವುದಕ್ಕೆ ಕೇಂದ್ರ ಸರಕಾರದವರು ಮುಂದೆ ಬಂದಿದ್ದಾರೆ. 1969 ನೇ ಏಪ್ರಿಲ್ ತಿಂಗಳಿನಲ್ಲಿ ಈ ಫ್ಯಾಕ್ಟರಿ ಕೆಲಸ ಪ್ರಾರಂಭವಾಗಬೇಕಾಗಿದೆ. ಆದುದರಿಂದ 1968ನೇ ಡಿಸಂಬರು ತಿಂಗಳ ಕೊನೆಯ ಒಳಗಾಗಿ ವಾಟರು ಸಪ್ಲೈ ಕೊಡಬೇಕು."

I whould like to draw the attention of the Government to the fact that the Minister for Petroleum Hon. Shri Raghuramiah has told the Rajya Sabha that the Government of Mysore must make its own arrangement. We are not bothered about fertiliser factory. Why did the Minister then tell this House that the Union Government have come forward to finance and help this factory?

Sri K. LAKKAPPA.—Probably the hon. Member is under the mistaken notion in the initial stage probably the Government of India itself wanted to start it. Subsequently they might have given it up. Then the Malabar Chemicals and Fertilisers Co. came to the front. Then all these things had taken place after the cancellation. At persent it appears some other people have come forward to take it up.

ಶ್ರೀ. ಎಂ. ಹೆಚ್. ಜಯಪ್ರಕಾಶ ನಾರಾಯಣ್.—ಸ್ವಾಮಿ, ಕಂಟ್ರಾಕ್ಟರುಗಳಿಗೆ ಪಿ. ಡಬ್ಲ್ಯೂ. ಡಿ. ನಿಯಮಗಳಿಗೆ ವಿರುದ್ಧವಾಗಿ ಯಾವ ವಿಶೇಷವಾದ ಸಂದರ್ಭಗಳಿಗಾಗಿ ಇಷ್ಟೊಂದು ಅಡ್ವಾನ್ಸ್ ಕೊಟ್ಟಿದ್ದೀರಾ?

ಶ್ರೀ ಕೆ. ಲಕ್ಕಪ್ಪ.—ಈ ಪ್ರಾಜೆಕ್ಟಿನ ಒಟ್ಟು ಮೊತ್ತ ನುಮಾರು ಮೊದಲನೇ ಸ್ಟೇಜಿಗೆ 210 ಲಕ್ಷ ರೂಪಾಯಿ ಆಗುತ್ತದೆ. ಎರಡನೇ ಸ್ಟೇಜಿಗೆ 30 ಲಕ್ಷ ರೂಪಾಯಿ ಆಗುತ್ತದೆ. ಒಟ್ಟು 240 ಲಕ್ಷ ರೂಪಾಯಿಗಳು ಆಗುತ್ತದೆ. ಇದು ಬಹಳ ದೊಡ್ಡ ಸ್ಕೀಮು. ಇಂತಹ ಸ್ಕೀಮಿಗೆ ಟೆಂಡರ್ಸ್ ಹಾಕಬೇಕಾದರೂ, ಕಂಟ್ರಾಕ್ಟರ್ಸ್ ಬರಬೇಕಾದರೂ ಬಹಳ ಅನುಭವಸ್ಥರಾದ ಜನ ವಾಟರ್ ಸಪ್ಲೈ ಮಾಡತಕ್ಕಂಥ ಕಾರ್ಯದಲ್ಲಿ ಹಿಂದೆ ಆಗಲೇ ಹೆಚ್ಚು ಅನುಭವ ಪಡೆದಿರತಕ್ಕಂಥವರು, ನೊ-ಹೌ ಗೊತ್ತಿರುವವರು ಸಾಕಾದಷ್ಟು ಮೆಷಿನರಿ ಇಟ್ಟುಕೊಂಡಿರುವವರು ಇಂತಹ ಜನರು ಟೆಂಡರ್ ಹಾಕಬೇಕಾಗುತ್ತದೆ, ಇಲ್ಲವಿದ್ದರೆ ಸಾಧ್ಯವಿಲ್ಲ. ಜೊತೆಗೆ ಟ್ಯೂಂ ಫ್ಯಾಕ್ಟರ್ ಕೂಡ ಬಹಳ ಕಡಿಮೆ. 1 ವರ್ಷ 3 ತಿಂಗಳ ಅವಧಿಯಲ್ಲಿ ಕೆಲಸ ಮುಗಿಸಬೇಕಾದ ಪರಿಸ್ಥಿತಿ ಇತ್ತು. ಈ ಕಾರಣದಿಂದ ಅರ್ನೆಸ್ಟ್ ಮನಿ ಡಿಪಾಸಿಟ್ ಹಾಕಿ ಟೆಂಡರ್ ಕಾರ್‌ಫಾರ್ ಮಾಡಬೇಕು ಎಂದರೆ ಅನೇಕ ಜನ ಕಂಟ್ರಾಕ್ಟರ್ಸ್ ಮುಂದೆ ಬರುವುದಿಲ್ಲ. ಈ ದೃಷ್ಟಿಯಿಂದ ಅರ್‌ನೆಸ್ಟ್ ಮನಿ ಡಿಪಾಸಿಟ್ ಕೇಳ ಬಾರದು ಎಂದು ಸರ್ಕಾರ ತೀರ್ಮಾನ ಮಾಡಿ ಅನಂತರ ಟೆಂಡರ್ ಕಾರ್‌ಫಾರ್ ಮಾಡಿದರು. ಟೆಂಡರ್ಸ್ ಕಾರ್‌ಫಾರ್ ಮಾಡಿದಮೇಲೆ ಇದು ದೊಡ್ಡ ಮೊತ್ತದ ಪ್ರಶ್ನೆ ಎನ್ನುವ ಕಾರಣದಿಂದ ಅನೇಕ ಕನ್‌ಸೆಷನ್ ಕೇಳಿದರು. ಯಾರು ಕಡಿಮೆ ಕೋಟ್ ಮಾಡಿದರು ಅಂಥಹವರ ಹತ್ತಿರ ಕನ್ಸೆಷನ್ ತೋರಿಸಿ, ನಗೋಷಿಯೇಷನ್ ಮಾಡಿ ಅನಂತರ ಟೆಂಡರ್ ಅಕ್ಸೆಪ್ಟ್ ಮಾಡಿದೆವು.

ಶ್ರೀ ಸಿದ್ದಯ್ಯ ಕಾಶೀಪುರ್.—ಅರ್ನೆಸ್ಟ್ ಮುನಿ ಡಿಪಾಸಿಟ್ ಇಲ್ಲದೆ ಟೆಂಡರ್ ಕರೆಯಲು ಬರುತ್ತದೆಯೇ?

ಶ್ರೀ ಕೆ. ಲಕ್ಕಪ್ಪ.—ಮಾಡಬಹುದು. ಎಲ್ಲಾ ಸಂದರ್ಭದಲ್ಲೂ ಹಾಗೆ ಮಾಡಬೇಕು ಎಂಬ ನಿಯಮವಿಲ್ಲ.

ಶ್ರೀ ಹೆಚ್. ಬಿ. ಜ್ವಾಲನಯ್ಯ.—ಫ್ಯಾಕ್ಟರಿ ಸ್ಟಾರ್ಟ್ ಮಾಡುವುದಕ್ಕೆ ಲೈಸನ್ಸ್ ಕೊಡುವುದ ಕ್ಕಾಗುವುದಿಲ್ಲ ಎಂದು ಸೆಂಟ್ರಲ್ ಗೌರ್ನಮೆಂಟ್‌ನವರು ತಮಗೆ ತಿಳಿಸಿರುವಂಥ ಸಂದರ್ಭದಲ್ಲಿ ಲೈಸನ್ಸ್ ಬರುವವರೆಗೆ ಕಾಯದೆ ಇಷ್ಟು ದೊಡ್ಡ ಆಡ್ವಾನ್ಸ್‌ನ್ನು ಕಂಟ್ರಾಕ್ಟರಿಗೆ ಕೊಡುವುದಕ್ಕೆ ಕಾರಣ ಏನು?

ಶ್ರೀ ಕೆ. ಲಕ್ಕಪ್ಪ.—ಕೆಮಿಕರ್ ಫರ್ಟಿಲೈಸರ್ ಕಂಪೆನಿಗೆ ಈ ಫ್ಯಾಕ್ಟರಿಯನ್ನು ಪಾರಂಭ ಮಾಡಲು ಪರವಾನಿಗೆ ಕೊಟ್ಟ ಸಂದರ್ಭದಲ್ಲಿ, ಇದು ನಡೆದಿದೆ.

ಶ್ರೀ ಬಿ. ಭಾನ್ಮರ ಶೆಟ್ಟಿ.—ಮಂಗಳೂರು ಗೊಬ್ಬರ ಕಾರ್ಖಾನೆಯನ್ನು ಬ್ರಿಟಿಷ್ ಮತ್ತು ಡಚ್ ಸಂಸ್ಥೆಗಳ ಸಹಕಾರದೊಂದಿಗೆ ಮೈಸೂರು ಸರ್ಕಾರದವರು ಸ್ಥಾಪನೆ ಮಾಡುತ್ತಾರೆ ಎನ್ನುವ ಸುದ್ದಿ ನಿಜವೇ?

ಶ್ರೀ ವೀರೇಂದ್ರ ಪಾಟೀಲ್ (ಮುಖ್ಯ ಮಂತ್ರಿಗಳು).—ಫರ್ಟಿಲೈಸರ್ ಫ್ಯಾಕ್ಟರಿ, ಮಲಬಾರ್ ಕೆಮಿಕಲ್ಸ್‌ಗೆ ಕೇಂದ್ರ ಸರ್ಕಾರದವರು ಮೊದಲು ಅನುಮತಿ ನೀಡಿದರು. ಮಧ್ಯದಲ್ಲಿ ಅವರು ಅಮೇರಿಕನ್ ಫರ್ಮ್ ಕೊರಾಬರೇಷನ್ ತೆಗೆದುಕೊಂಡಿದ್ದರು. ಆದರೆ ಈ ಕೊರಾಬರೇಷನ್ ಅನೇಕ ಕಾರಣಗಳಿಂದ ಮೆಟೀರಿಯಲೈಸ್ ಆಗಲಿಲ್ಲ. ಅದಾದಮೇಲೆ ಕೇಂದ್ರ ಸರ್ಕಾರದ ಸಲಹೆ ಮೇರೆಗೆ ಟೋಯೊ ಮೇನಕ ಇಂಜಿನಿಯರಿಂಗ್ ಅವರ ಜೊತೆಗೆ ಕೊರಾಬರೇಷನ್ ಮಾಡಿಕೊಳ್ಳ ಬೇಕು ಎಂದು ಹೇಳಿದ ಪ್ರಕಾರ ಅವರ ಜೊತೆಗೆ ಮಲಬಾರ್ ಕೆಮಿಕಲ್ಸ್‌ನವರ ಒಂದು ಅಂಡರ್ ಸ್ಟಾಂಡಿಂಗ್ ಬಂದು ಟೋಯೊ ಇಂಜಿನಿಯರಿಂಗ್ ಕಂಪನಿಗೆ ಅನುಮತಿ ಕೊಟ್ಟಿದ್ದಾರೆ. ಅದರಲ್ಲಿ ಕೆಲವು ತೊಂದರೆಗಳು ಉಂಟಾದವು. ಸಪ್ಲೈಸ್ ಕ್ರೆಡಿಟ್ ಕೊಡುವುದಕ್ಕಾಗುವುದಿಲ್ಲ ಎಂದು ಸರ್ಕಾರದವರು ಹೇಳುತ್ತಿದ್ದರು. ಮಧ್ಯದಲ್ಲಿ ಏನೂ ಆಗುತ್ತಾ ಇಲ್ಲ, ಏನೂ ಮಾಡುತ್ತಾ ಇಲ್ಲ ಎಂದು ನೋಟೀಸ್ ಕೊಟ್ಟಿದ್ದೇವೆ. ಟೋಯೋ ಇಂಜಿನಿಯರಿಂಗ್ ಕಂಪನಿಯು ಕೊರಾಬರೇಷನ್ ಬಿಟ್ಟು ಮಾನ್ಯ ಸದಸ್ಯರು ಹೇಳಿದ ಹಾಗೆ ಗ್ಲಾಸ್ಕೊ, ಎನ್ನುವ ಬ್ರಿಟಿಷ್ ಅಥವಾ ಡಚ್ ಕಂಪನಿ ಜೊತೆಯಲ್ಲಿ ಕೊರಾಬರೇಷನ್ ಅಗ್ರಿಮೆಂಟ್ ಮಾಡಿಕೊಂಡಿದ್ದಾರೆ. ಬಹಳ ಅಡ್ವಾನ್ಸ್‌ಡ್ ಸ್ಟೇಜ್‌ನಲ್ಲಿದೆ. ಲೈಸನ್ಸ್ ಕ್ಯಾನ್ಸಲ್ ಮಾಡಬೇಕು ಎನ್ನುವ ಪ್ರಶ್ನೆ ಇಲ್ಲ. ಸದ್ಯದಲ್ಲಿ ಕಾರ್ಯಗತ ವಾಗಬಹುದು ಎಂದು ನಂಬಿದ್ದೇನೆ.

ಶ್ರೀ ಎಸ್. ಶಿವಪ್ಪ.—ಮಾನ್ಯ ಮುಖ್ಯ ಮಂತ್ರಿಗಳು ಹೇಳುವಂತೆ ಕಾರ್ಖಾನೆ ಮಾಡುವಂಥ ಪ್ರಶ್ನೆ ಇನ್ನೂ ತೀರ್ಮಾನವಾಗದೆ ಇರುವ ಸಂದರ್ಭದಲ್ಲಿ ಅತುರಾತುರವಾಗಿ ಕಾರ್ಖಾನೆಯ ನೀರು ನರಬರಾಜು ಕಾರ್ಯವನ್ನು ಅರ್ನೆಸ್ಟ್ ಮುನಿ ಇಲ್ಲದೆ, ಸರ್ಕಾರದಿಂದಲೇ ಅಡ್ವಾನ್ಸ್ ಕೊಡುತ್ತೇವೆ ಎಂದು ಟೆಂಡರ್ ಕರೆಯುವುದರ ಬಗ್ಗೆ ಸರ್ಕಾರ ಯಾವಾಗ ತೀರ್ಮಾನ ಕೈಗೊಂಡಿತು? ದೊಡ್ಡ ದೊಡ್ಡ ಕಾಮಗಾರಿಗಳು, ಕೋಟ್ಯಾಂತರ ರೂಪಾಯಿ ಬಾಳತಕ್ಕ ಕಾಮಗಾರಿಗಳನ್ನು ಈ ರೀತಿ ಮಾಡಬೇಕೆಂದು ಯಾವಾಗ ಸರ್ಕಾರ ತೀರ್ಮಾನ ತೆಗೆದುಕೊಂಡಿದೆ?

ಶ್ರೀ ವೀರೇಂದ್ರ ಪಾಟೀಲ್.—ಈ ರೀತಿ ತೀರ್ಮಾನ ತೆಗೆದುಕೊಂಡಿಲ್ಲ. ಇದನ್ನು ಮಾಡು ವುದಕ್ಕೆ ಜರೂರು ಪರಿಸ್ಥಿತಿ ಇದ್ದು, ಕೇಂದ್ರ ಸರ್ಕಾರದವರು ನಮಗೆ ಒಂದು ಕಾಗದವನ್ನು ಬರೆದರು. ಅದರಲ್ಲಿ ಮಲಬಾರ್ ಕೆಮಿಕಲ್ಸ್‌ನವರು ಗೊಬ್ಬರದ ಕಾರ್ಖಾನೆಯು ಮೊದಲನೇ ಹಂತದ ಕೆಲಸ ಬಂದರು ಕೆಲಸ ಆಗದೇ ಇದ್ದರೂ ಮಾಡಬೇಕು ಎಂದು ಹೇಳುತ್ತಿದ್ದಾರೆ. ಅದಾಗ ಬೇಕಾಗಿದ್ದರೆ ಅಲ್ಲಿ ನೀರಿನ ವ್ಯವಸ್ಥೆ ಆಗಬೇಕು. ಆದ್ದರಿಂದ ಇಷ್ಟು ದಿವಸದಲ್ಲಿ ನೀರಿನ ವ್ಯವಸ್ಥೆ ಆಗಬೇಕು ಎನ್ನುವ ವಿಚಾರವನ್ನು ಕೇಂದ್ರ ಸರ್ಕಾರದವರು ತಿಳಿಸಿದರು. ಅಷ್ಟು ದಿವಸಗಳಲ್ಲಿ ಮಾಡುವುದು ಫಿಸಿಕಲ್ ಪಾಸಿಬಲ್ ಆಗುವ ಹಾಗೆ ಇಲ್ಲ ಎಂದು ಅವರಿಗೆ ತಿಳಿಸಿದ ಮೇಲೆ ಕೇಂದ್ರ ಸರ್ಕಾರದ ಪೆಟ್ರೋಲಿಯಂ ವಿಭಾಗದ ಕಾರ್ಯದರ್ಶಿಯವರು ಬಂದು ಏನಾದರೂ ಮಾಡಿ ನೀರು ನರಬರಾಜು ವ್ಯವಸ್ಥೆ ಆಗುವ ಹಾಗೆ ಮಾಡದೆ ಇದ್ದರೆ ಪ್ರಾಜೆಕ್ಟ್ ನಿಂತು ಹೋಗುತ್ತದೆ. ಪ್ರಾಜೆಕ್ಟ್ ನಿಂತುಹೋದರೆ ಬಹಳ ಕಷ್ಟವಾಗುತ್ತದೆ. ಅದಕ್ಕೆ ಏನಾದರೂ ಪ್ರಯತ್ನ ಮಾಡಿ, ಎಲ್ಲ ರೆಪ್ಯೂಟೆಡ್ ಫರ್ಮ್ಸ್ ಕರೆದು ಅವರ ಅಭಿಪ್ರಾಯವನ್ನು ತೆಗೆದುಕೊಳ್ಳಿ. ಇಷ್ಟು ದಿವಸಗಳಲ್ಲಿ ಆಗುವುದು ಕಷ್ಟ ಎಂದು ಅವರು ಹೇಳಿದರೆ ಮುಂದೆ ನೋಡೋಣ ಎಂದು ಅವರು ಹೇಳಿದರು. ಅವರ ಸಲಹೆಯ ಪ್ರಕಾರ ಎಲ್ಲ ರೆಪ್ಯೂಟೆಡ್ ಫರ್ಮ್‌ನವರನ್ನೂ ಕರೆಸಿ ಅವರ ಸಂಗಡ ವಿಚಾರ

(ಶ್ರೀ ವೀರೇಂದ್ರ ಪಾಟೀಲ್)

ಮಾಡಿ ಚರ್ಚೆ ಮಾಡಿದೆವು. ಅವರ ಅಭಿಪ್ರಾಯವನ್ನು ತೆಗೆದುಕೊಂಡು ಕೊಟೇಷನ್‌ಗಳನ್ನು ಕರೆದಾಗ 13 ಕೊಟೇಷನ್‌ಗಳು ಬಂದವು. ಅದರಲ್ಲಿ ರೇಟುಗಳ ವಿಚಾರದಲ್ಲಿ ನೆಗೋಷಿಯೇಟ್ ಮಾಡಿ ನಾವು ಕೊಟ್ಟಿದ್ದೇವೆ.

ಶ್ರೀ ಎಂ. ನಾಗಪ್ಪ.—ಏನು ರಿಯಾಯಿತಿಗಳನ್ನು ತೋರಿಸಿದ್ದೀರಿ ಇದನ್ನು ಕೊಡುವುದಕ್ಕಿಂತ ಮುಂಚಿತವಾಗಿ ಇಂಥ ರಿಯಾಯಿತಿಗಳನ್ನು ಕೊಡಬಾಗುತ್ತದೆ ಎಂದು ನೋಟಿಫಿಕೇಷನ್ ತೋರಿಸಿದ್ದೀರಾ ? ಇಲ್ಲವೆ ಇದ್ದರೆ ಕಂಟ್ರಾಕ್ಟ್ ಕೊಟ್ಟನಂತರ ರಿಯಾಯಿತಿಗಳನ್ನು ಕೊಡಲಕ್ಕೆ ಕಾರಣವೇನು?

ಶ್ರೀ ವೀರೇಂದ್ರ ಪಾಟೀರ್.—ಇದರಲ್ಲಿ ಟೆಂಡರ್ ಕರೆದೇ ಇಲ್ಲ. ಈ ಕೆಲಸವನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆಯೋ ಇಲ್ಲವೋ ಎನ್ನುವುದಕ್ಕೆ ಇಡೀ ಹಿಂದೂಸ್ಥಾನದಲ್ಲಿ ಇರುವ ರೆಪ್ಯುಟೆಡ್ ಫರ್ಮ್‌ನವರನ್ನು ಪ್ರತಿಯೊಬ್ಬರನ್ನೂ ಬರಮಾಡಿಕೊಂಡು, ಅವರ ಜೊತೆಯಲ್ಲಿ ಚರ್ಚೆ ಮಾಡಿ, ಕೆಲಸವನ್ನು ಮಾಡುವುದಕ್ಕೆ ಆಗುತ್ತದೆ ಎನ್ನುವ ಅಭಿಪ್ರಾಯ ಕೊಟ್ಟ ನಂತರ ಕೊಟೇಷನ್‌ಗಳನ್ನು ಕರೆದಿದ್ದೇವೆ. ಟೆಂಡರ್ ಕರೆದಿಲ್ಲ, ನೋಟಿಫೀಕೇಷನ್ ಆಗಿಲ್ಲ. ಕಂಡೀಷನ್ ಮುಂತಾದುವನ್ನು ಹಾಕುವಂಥ ನಾರ್ಮಲ್ ಪ್ರೊಸೀಜರ್ ಪ್ರಕಾರ ಮಾಡಿಲ್ಲ ಎಂದು ನನ್ನ ಸಹಮಂತ್ರಿಯವರಾದ ಲಕ್ಕಪ್ಪನವರು ಹೇಳಿದ್ದಾರೆ.

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಈಗ ಹೊಸದಾಗಿ ಮುಂದೆ ಬಂದಿರತಕ್ಕ ಡಚ್ ಕಂಪನಿಗೆ ಲೈಸೆನ್ಸ್ ಸಿಕ್ಕುತ್ತದೆ ಎನ್ನುವ ನಿರ್ದಿಷ್ಟವಾದ ವಿಷಯ ತಮಗೆ ಗೊತ್ತಿದೆಯೇ ? ಒಂದು ಪಕ್ಷ ಅವರಿಗೆ ಲೈಸೆನ್ಸ್ ಕೊಟ್ಟರೆ ಅವರು ಸ್ಥಳವನ್ನು ನೋಡಿ ಅದೇ ಸ್ಥಳ ಸರಿಯಾಗಿದೆ ಅದಕ್ಕೆ ಏನೇನು ಅನುಕೂಲಗಳು ಬೇಕು ಎನ್ನುವ ವಿಷಯದಲ್ಲಿ ಅವರು ಏನಾದರೂ ಒಪ್ಪಿಗೆಯನ್ನು ಕೊಟ್ಟಿದ್ದಾರೆಯೇ ಎಂಬುದನ್ನು ತಿಳಿಸುತ್ತಾರೆಯೇ ?

ಶ್ರೀ ವೀರೇಂದ್ರ ಪಾಟೀರ್.—ಮಲಬಾರ್ ಕೆಮಿಕರ್ಸ್‌ನವರು ಕೆಲಸ ಮಾಡುತ್ತಾರೆ. ಕೊರಾಬೊರೇಟರ್ಸ್ ಬದರಾಗಿದ್ದಾರೆ. ಮಲಬಾರ್ ಕೆಮಿಕರ್ಸ್‌ನವರ ಅಪ್ಲಿಕೇಷನ್ ಈಗಲೂ ಕೇಂದ್ರ ಸರ್ಕಾರದ ಮುಂದೆ ಇದೆ. ಟೋಯೋ ಇಂಜನಿಯರಿಂಗ್ ಕಂಪೆನಿಯವರು ಕೊರಾಬೊರೇಷನ್ ಮಾಡುತ್ತೇವೆಂದು ಹೇಳಿದ್ದರು. ಜಪಾನ್ ಸರ್ಕಾರ ಮತ್ತು ಹಣಕಾಸು ಸಚಿವರು ಒಪ್ಪಲಿಲ್ಲ ಎಂದು ಹೇಳಿದ್ದರಿಂದ ಅದು ಮುರಿದು ಬಿತ್ತು. ಈಗ ಹಂಫ್ರಿ ಮತ್ತು ಗ್ಲಾಸ್ಕೊ ಅವರು ಕೊರಾಬೊರೇಟ್ ಮಾಡುತ್ತೇವೆಂದು ಮುಂದೆ ಬಂದಿದ್ದಾರೆ. ಯಾರು ಕೊರಾಬೊರೇಷನ್ ಕೊಟ್ಟರೂ ಕೂಡ ಮಲಬಾರ್ ಕೆಮಿಕರ್ಸ್‌ನವರು ಕೆಲಸ ಪ್ರಾರಂಭ ಮಾಡುವುದಾಗಿ ಕೇಂದ್ರ ಸರ್ಕಾರಕ್ಕೆ ನನಗೆ ಗೊತ್ತಿದ್ದ ಹಾಗೆ ತಿಳಿಸಿದ್ದಾರೆ.

Sri D. B. KALMANKAR.—In answer to (h) it is stated 'No'. What was the reason for not having channellised it through the Investment Development Corporation ?

ಶ್ರೀ ವೀರೇಂದ್ರ ಪಾಟೀರ್.—ಅದರ ಅವಶ್ಯಕತೆ ಇಲ್ಲ, ಪಿ.ಡಬ್ಲ್ಯು.ಡಿ. ಕೆಲಸವಿದೆ, ಆದ್ದರಿಂದ ರಿಯಾಯಿತಿ ಕೊಡುವ ಅವಶ್ಯಕತೆಯಿಲ್ಲ. ಅನೇಕ ಕೆಲಸಗಳನ್ನು ಪಿ.ಡಬ್ಲ್ಯು.ಡಿ. ನವರು ಡೈರೆಕ್ಟಾಗಿ ಮಾಡುತ್ತಿದ್ದಾರೆ. ಮಾನ್ಯ ಸದಸ್ಯರು ಕೇಳುತ್ತಿರುವುದು ಪ್ರೈವೇಟ್ ಏಜೆನ್ಸಿ ಇರಬೇಕು.

ಶ್ರೀ ಬಿ. ಪಿ. ಗಂಗಾಧರ್.—ಕೊಟೇಷನ್ ಕಾಲ್ ಫಾರ್ ಮಾಡಿ ಕೆಲವು ರಿಯಾಯಿತಿ ತೋರಿಸಿರುವುದಾಗಿ ಹೇಳಿದೆ. 13 ಜನ ಕೊಟೇಷನ್ ಕೊಟ್ಟಮೇಲೆ ಅಡ್ವಾನ್ಸ್, ಅರ್ನೆಸ್ಟ್‌ಮನಿ ಮುಂತಾದುವುಗಳ ಬಗ್ಗೆ ರಿಯಾಯಿತಿ ತೋರಿಸಲಾಗಿದೆ. ಹಾಗೆ ರಿಯಾಯಿತಿ ತೋರಿಸಿದಮೇಲೆ ರೀಕನ್‌ಸಿಡರ್ ಮಾಡಿ ಕಡಮೆ ಖರ್ಚಿನಲ್ಲಿ ಯಾರು ಕೆಲಸ ಮಾಡುತ್ತಾರೆ ಎಂದು ಕೇಳಿದ್ದೀರಾ ? ಮೊದಲು ಕೊಟೇಷನ್ ಕೊಡುವಾಗ ರಿಯಾಯಿತಿ ಕೊಡುವ ವಿಚಾರ ಗೊತ್ತಿರಲಿಲ್ಲ. ರಿಯಾಯಿತಿ ತೋರಿಸಿದ ಮೇಲೆ ಕೆಲವರು ಕಡಮೆ ಖರ್ಚಿನಲ್ಲಿ ಮಾಡಲು ಮುಂದೆ ಬರುತ್ತಿದ್ದರೆಂದು ಊಹಿಸಲು ಅವಕಾಶವಿರುವುದರಿಂದ ಮತ್ತೇ ಈ ವಿಚಾರದಲ್ಲಿ ಪ್ರಸ್ತಾಪಮಾಡಿದಿರಾ ?

ಶ್ರೀ ವೀರೇಂದ್ರ ಪಾಟೀರ್.—ಕೊಟೇಷನ್ ಕರೆದಮೇಲೆ ಕೆಲವರು ಬರೀ ಪೈಪ್ ನರಬರಾಯಿ ಮಾಡುತ್ತೇವೆ, ಫಿಕ್ಸ್ ಮಾಡುವುದು ವಗೈರೆ ಎಲ್ಲಾ ನಿಮ್ಮ ಜವಾಬ್ದಾರಿ ಎಂದು ಹೇಳಿದರು. ಈ ರೀತಿ ಪೀಸ್‌ಮೀಲ್ ಆಗಿ ಕೆಲಸ ಮಾಡುವುದಾಗಿ ಟರ್ನ್ ಕೀ ಪ್ರಪೊಸಲ್ ಕೊಟ್ಟರು. ಕೊಟೇಷನ್ ಕೊಟ್ಟವರ ಪೈಕಿ ಇಬ್ಬರು ಮಾತ್ರ ಒಳ್ಳೆಯ ಪ್ರಖ್ಯಾತಿ ಪಡೆದವರಾದ್ದರಿಂದ ಅವರದು ಒಳ್ಳೆಯ ಆರ್ಗನೈಜೇಷನ್ ಆದ್ದರಿಂದ ಅವರಿಗೆ ಕೊಡುವುದು ಅನುಕೂಲವೆಂದು ಭಾವಿಸಿ ಕೊಡಲಾಗಿದೆ.

ಶ್ರೀ ಎಚ್. ಎನ್. ನಂಜೇಗೌಡ.—ಈ ರಿಯಾಯಿತಿಯಮ್ನು ಎರಡು ಕಂಪೆನಿಗಳಿಗೆ ಕೊಟ್ಟ ಮೇರೆ ಎಸ್ಟಿಮೇಟ್ ಬದಲಾಯಿಸಿಲ್ಲವೇ ?

ಶ್ರೀ ವೀರೇಂದ್ರ ಪಾಟೀಲ್.—ಬಹುಶಃ ಇಲ್ಲವೆಂದು ಕಾಣುತ್ತದೆ. ಇನ್ನೂ ಕೆಲಸ ಮುಗಿದಿಲ್ಲ. ಬೇಕಾದರೆ ವಿಚಾರ ಮಾಡಿ ಹೇಳಬೇಕು.

Sri K. H. PATIL.—In answer to (*c*) it is stated 'Yes'. Now the Chief Minister says tenders have not been called for. May I know which of the two is correct.

ಶ್ರೀ ವೀರೇಂದ್ರ ಪಾಟೀಲ್.—ಯೆಸ್ ಎಂದು ಹೇಳಲಾಗಿದೆ. ಈಗ ಟೆಂಡರ್ ಇಲ್ಲ, ಕೊಟೇಷನ್ ಕರೆದಿದೆ ಎಂದು ಕ್ಲಾರಿಫೈ ಮಾಡಿದ್ದೇನೆ.

ಅಧ್ಯಕ್ಷರು.—ಪ್ರಶ್ನೆ 322—ನದನ್ಯರು ಹಾಜರಿಲ್ಲ.

ಶ್ರೀ ಎಂ ಎಚ್. ಜಯಪ್ರಕಾಶ್ ನಾರಾಯಣ್.—ಅವಕಾಶ ಸಿಕ್ಕಿದರೆ ಕೊನೆಯಲ್ಲಿ ಈ ಪ್ರಶ್ನೆಯನ್ನು ತೆಗೆದುಕೊಳ್ಳಬೇಕು.

ಅಧ್ಯಕ್ಷರು.—ನೋಡೋಣ.

Famine Relief Works

325. Sri N. HUTCHMASTY GOWDA (Huliyurdurga).—

Will the Minister for Revenne be pleased to state:—

(*a*) the amount spent during 1968 up to 1st December 1968 in Mysore State towards famine relief works (Districtwise and talukwise information may please be furnished);

(*b*) the items to which the said amount has been spent together with the amo_t spent for each item ?

Sri H. V. KOUJALGI (Minister for Revenue).—

(*a*) Amount spent—6.96 Crores of rupees. The details regarding the amount spent in respect of "64 Famine Relief" works and contour bunds is given in the list appended. Taluk-war details have not been collected. More time is required for the same.

(*b*)

	(In crores of rupees)
(1) Famine Relief works	2.71
(2) Contour bund works	1.14
(3) Minor Irrigation	2.18
(4) Implementing emergency foodgrains supply programme in the famine stricken areas, for children under 14 years and women under antenatal and postnatal period.	0.50
(5) Free supply of red Jowar	0.20
(6) To purchase air compressor and explosive equipments.	0.23
Total ...	6.96

(SRI H. V. KOUJALGI)

STATEMENT

	District		Famine Relief Works	Contour bund Works
1	2		3	4
			Rs.	Rs.
1	Bangalore	...	16,03,815	2,77,000
2	Kolar	..	22,54,625	4,08,000
3	Tumkur	...	22,33,778	27,40,000
4	Chitradurga	...	17,74,486	24,06,000
5	Shimoga	...	2,78,816	...
6	Mandya	...	12,57,758	6,47,000
7	Mysore	...	16,78,906	1,99,000
8	Hassan	...	11,03,345	2,37,000
9	Chickmagalur	...	13,91,875	2,44,000
10	Coorg	...	82,959	...
11	Belgaum	...	29,24,135	9,54,000
12	Dharwar	...	21,69,574	9,70,000
13	Bijapur	...	43,65,215	5,40,000
14	Gulbarga	...	5,68,511	7,21,000
15	Raichur	...	17,34,588	7,52,000
16	Bidar	...	8,03,284	98,000
17	Bellary	...	8,87,156	2,28,000
		Total ...	2,71,12,826	1,14,21,000

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈ ಪ್ರಶ್ನೆ ಕೇಳಿದ ಮೂಲ ಉದ್ದೇಶ ತಾಲ್ಲೂಕುವಾರು ಅಂಕಅಂಶ ಬೇಕೆಂಬುದು. ಅದನ್ನು ಕೊಟ್ಟಿಲ್ಲ. ಕಳೆದ ಅಧಿವೇಶನದಲ್ಲಿ 2—3 ಜಿಲ್ಲೆಗಳ ಬಗ್ಗೆ ಕೊಡಲಾಗಿದೆ. ಈ ಅಧಿವೇಶನದಲ್ಲಿ ಇನ್ನೊಂದು ದಿನ ಈ ವಿವರವನ್ನು ಕೊಡುತ್ತೀರಾ ?

†Sri H. V. KOUJALGI.—The statement has been prepared in the form of Booklet and it has been distibuted to the members. If the hon. Member wants still more information, I will try to give.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಪ್ರಶ್ನೆಯಲ್ಲಿ ಕೇಳಿರುವ ಬಾಬುಗಳಿಗೆ ತಾಲ್ಲೂಕುವಾರು ತಪಶೀಲು ಕೊಟ್ಟಿಲ್ಲ. ಕ್ಷಾಮ ಪರಿಹಾರ ಕಾರ್ಯ ಮಾಡಿದಾಗ 6 ಐಟಂಗಳಿಗೆ ಖರ್ಚುಮಾಡಿದ್ದಾರೆ. ಅದಕ್ಕೆ ತಾಲ್ಲೂಕುವಾರು ಅಂಕಅಂಶ ಕೊಟ್ಟು ಈ ಪ್ರಶ್ನೆಯನ್ನು ಈ ಅಧಿವೇಶನದಲ್ಲಿ ಇನ್ನೊಂದು ದಿನ ತೆಗೆದುಕೊಳ್ಳಬೇಕು.

Sri H. V. KOUJALGI.—It is a laborious work, Sir. However, so far as his taluk is concerned, I will supply.

† Indicates that the speeches or remarks have not been revised by the member concerned

Sri N. HUTCHMASTY GOWDA.—I am not particular of my taluk. ಅನೇಕ ತಾಲ್ಲೂಕುಗಳಿಗೆ ಅವರು ತೋರಿಸಿದ್ದಾರಲ್ಲ ತಾರತಮ್ಯ ಇದೆ ಎಂಬ ಉದ್ದೇಶದಿಂದ ಪ್ರಶ್ನೆ ಕೇಳುತ್ತಾ ಇದ್ದೇನೆ. ಆ ಮೂಲ ಉದ್ದೇಶಕ್ಕೇ ಧಕ್ಕೆ ಬರುವುದಾದರೆ ಅವರು ತಮ್ಮ ಇಚ್ಛೆ ಬಂದ ಹಾಗೆ ಮಾಡಬಹುದು, ಇದು ನನ್ನದೇ ಒಂದು ತಾಲ್ಲೂಕಿಗೆ ಕೇಳುವ ಪ್ರಶ್ನೆ ಅಲ್ಲ.

Mr. SPEAKER.—Is it not possible for the Hon. Minister to place a statement on the Table of the House ?

Sri H. V. KOUJALGI.—I will see, Sir.

ಶ್ರೀ ಸಿ. ಆರ್. ರಂಗೇಗೌಡ.—1—12—68ರಲ್ಲಿ ಬೆಂಗಳೂರು ಜಿಲ್ಲೆಗೆ 18 ಲಕ್ಷ 80 ಸಾವಿರ ರೂಪಾಯಿ ಖರ್ಚು ಮಾಡಿದೆ ಎಂದು ಹೇಳಿದ್ದೀರಿ. ಮಾಗಡಿ ಮತ್ತು ರಾಮನಗರ ತಾಲ್ಲೂಕಿನಲ್ಲಿ ಸುಮಾರು 50—60 ಜನ ರಿಲೀಫ್ ಕಾಮಗಾರಿಗಳನ್ನು ಕೈಕೊಂಡವರಿಗೆ ಇದುವರೆಗೂ ಹಣ ಪಾವತಿ ಮಾಡಿಲ್ಲ. ಅವನ್ನು ಅತಿ ಜರೂರಾಗಿ ಕೊಡಿಸುತ್ತೀರಾ ? ಹಣ ಮುಗಿದಿದೆಯೇ ? ಹಣ ಇದ್ದರೆ ಏಕೆ ಇದುವರೆಗೂ ಕೊಡಲಿಲ್ಲ ?

ಶ್ರೀ ಎಚ್. ವಿ. ಕೌಜಲಗಿ.—ಈಗ 8 ದಿವಸದ ಕೆಳಗೆ ಹಣ ಒದಗಿಸಿಕೊಟ್ಟಿದೆ. ಡಿವಿಜನರ್ ಕಮಿಷನರು ಇಷ್ಟರಲ್ಲಿ ಆ ಹಣ ಕೊಟ್ಟಿರಬಹುದು.

ಶ್ರೀ ಎನ್. ತಿಮ್ಮಪ್ಪ.—ತಾವು ಅಭಾವ ಪರಿಸ್ಥಿಯ ಪರಿಹಾರ ಕಾಮಗಾರಿಗಳಿಗೆ ಸುಮಾರು 8 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿರುವುದು ನವೆಂಬರ್ 67ರ ಕೊನೆಯವರೆಗೂ ಬಹಳ ಭರಾಟೆಯಿಂದ ನಡೆದು ತಾಲ್ಲೂಕು ಬೋರ್ಡ್ ಚುನಾವಣೆಗಳು ಮುಗಿದ ತಕ್ಷಣವೇ ಎಲ್ಲಾ ಕಡೆಯಲ್ಲೂ ನಿಲ್ಲಿಸಿದರಲ್ಲಾ ಇದರ ಅರ್ಥವೇನು ?

ಶ್ರೀ ಎಚ್. ವಿ. ಕೌಜಲಗಿ.—ತಾಲ್ಲೂಕು ಬೋರ್ಡ್ ಎಲೆಕ್ಷನ್ ಆದಕೂಡಲೇ ನಿಂದರಿಸಿಲ್ಲ. ಎಲೆಕ್ಷನ್ ಕಾಲಕ್ಕೆ ಆಫೀಸರ್ರು ಎಲೆಕ್ಷನ್ ಕಡೆಗೆ ಲಕ್ಷ್ಯ ಕೊಡಬೇಕಾಗುತ್ತದೆ ಅದಕ್ಕೆ ನಿಲ್ಲಿಸಬೇಕಾಯಿತು, ಅನಂತರ ಸಹಿತ ಅವನ್ನು ಸೇಫ್ ಸ್ಪೇಜ್‌ಗೆ ತರಲು ಆದೇಶ ಕೊಟ್ಟಿದ್ದೇವು. ಈಗಾಗಲೇ ಷುರು ಮಾಡಿದ್ದಾರೆ.

ಶ್ರೀ ಕೆ. ಎಚ್ ರಂಗನಾಥ್.—ಉತ್ತರದಲ್ಲಿ ಹಣ ಖರ್ಚುಮಾಡಿರುವುದು 6.96 ಕೋಟಿ ಎಂದು ಹೇಳಿದ್ದೀರಿ, ನೀವು ಕೊಟ್ಟಿರುವ ಎಸ್ಟಿಮೇಟ್‌ನಲ್ಲಿ 8.10 ಕೋಟಿ ಎಂದು ಹೇಳಿದ್ದೀರಲ್ಲಾ ಇದರಲ್ಲಿ ಯಾವುದು ನರಿ ಯಾವುದು ತಪ್ಪು ?

ಶ್ರೀ ಎಚ್. ವಿ. ಕೌಜಲಗಿ.—ಅವರು ಕೇಳಿದ ಪ್ರಶ್ನೆ ಡಿಸೆಂಬರ್ 68ರ ವರೆಗೂ ಖರ್ಚು ಮಾಡಿದ ಹಣ ಎಷ್ಟು ಅಂತ ಆ ಅವಧಿಯಲ್ಲಿ ಖರ್ಚಾಗಿರುವ ಹಣ ತೋರಿಸಲಾಗಿದೆ.

ಶ್ರೀ ಕೆ. ಎಚ್. ರಂಗನಾಥ್.—ತಾವು ತೋರಿಸಿರತಕ್ಕ ಎಲ್ಲಾ ಖರ್ಚಿಂಗ್ಸ್ ಕೂಡ ಸೇರಿಸಿದರೆ 8.10 ಕೋಟಿ ರೂಪಾಯಿ ಆಗುತ್ತದೆ. ಹಾಗಾದರೆ ಡಿಸೆಂಬರ್ ಒಂದು ತಿಂಗಳಿನಲ್ಲಿ ಎರಡು ಕೋಟಿ ರೂಪಾಯಿ ಖರ್ಚು ಮಾಡಿದ್ದೀರಾ ?

Sri H. V. KOUJALGI.—I have not got that book with me. So far I can remember, that includes some amount spent at the end of 1967.

ಶ್ರೀ ಎಸ್. ಎಸ್. ಅತಕೇರಿ.—ವಿಜಾಪುರ ಜಿಲ್ಲೆಗೆ 21 ಲಕ್ಷದ 69 ಸಾವಿರದ 574 ರೂಪಾಯಿ ಡಿಸೆಂಬರ್ ಕೊನೆಯವರೆಗೂ ಖರ್ಚು ಮಾಡಿದ್ದೀವೆ ಎಂದು ಹೇಳಿದ್ದೀರಿ. ಅಷ್ಟೂ ಹಣ ಖರ್ಚಾಗಿದೆಯೇ ? ಖರ್ಚಾಗಿಲ್ಲದೆ ಇದ್ದರೆ ಎಷ್ಟು ಹಣ ಉಳಿತಾಯವಾಗಿದೆ ?

Sri H. V. KOUJALGI.—All this information has been given in the booklet supplied to the Members.

ಶ್ರೀ ಎನ್. ಎ. ಚನ್ನೇಗೌಡ.—ಕ್ಷಾಮಪರಿಹಾರದ ಅಂಗವಾಗಿ ಹುಲ್ಲು ಸಾಗಾಣಿಕೆ ಮತ್ತು ಹುಲ್ಲಿಗೆ ಎಷ್ಟು ಖರ್ಚು ಮಾಡಿದ್ದೀರಿ. ಈಗ ಅಭಾವವಿರತಕ್ಕ ಪ್ರದೇಶಗಳಲ್ಲಿ ಹುಲ್ಲನ್ನು ಸಾಗಿಸುವುದಕ್ಕೆ ಪಿ.ಡಬ್ಲ್ಯೂ.ಡಿ. ರಾತಿಯನ್ನು ಕೇಳಿದರೆ ಕೊಡುತ್ತಿಲ್ಲ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ವಿ. ಕೌಜಲಗಿ.—ನನಗೆ ತಿಳಿದ ಪ್ರಕಾರ ಹುಲ್ಲು ಸಾಗಿಸಲಕ್ಕೆ ಏನೂ ಹಣವನ್ನು ಕೊಟ್ಟಿಲ್ಲ ಮತ್ತು ಆ ಬಗ್ಗೆ ನಾವು ಹಣ ಖರ್ಚು ಮಾಡಿಲ್ಲ.

ಶ್ರೀ ಪಿ. ವೆಂಕಟಗಿರಿಗೌಡ.—ಕ್ಷಾಮ ಪರಿಹಾರ ನಿಧಿಯ ಹಣವನ್ನು ಖರ್ಚುಮಾಡಿರತಕ್ಕ ಬಗ್ಗೆ ಏನಾದರೂ ಒಂದು ಪ್ರೊಸೀಜರನ್ನು ಅನುಸರಿಸರಾಗಿದೆಯೇ ಅಥವಾ ಅದರ ಬಗ್ಗೆ ಏನಾದರೂ ಕಮಿಟಿಗಳನ್ನು ಮಾಡರಾಗಿತ್ತೇ ?

ಶ್ರೀ ಎಚ್. ವಿ. ಕೌಜಲಗಿ.—ಪ್ರತಿಯೊಂದು ತಾಲ್ಲೂಕ್ ಲೆವಿಲ್ಲಿನಲ್ಲೂ ಒಂದೊಂದು ಕ್ಷಾಮ ಪರಿಹಾರ ಕಮಿಟಿಯನ್ನು ರಚನೆ ಮಾಡರಾಗಿತ್ತು. ಅದರ ಶಿಫಾರ್ಸಿನ ಮೇರೆ ಕೆಲಸಗಳನ್ನು ಮಾಡರಾಗಿದೆ.

ಶ್ರೀ ಎಚ್. ಬಿ. ಜ್ವಾಲನಯ್ಯ.—ಈಗತಾನೆ ಮಾನ್ಯ ಸಚಿವರು ಅಪ್ಪಣೆ ಕೊಡಿಸಿದಂತೆ ಈ ಕ್ಷಾಮಪರಿಹಾರ ಕಾರ್ಯಗಳನ್ನು ತಾಲ್ಲೂಕ್ ಮಟ್ಟದಲ್ಲಿ ರಚಿಸರಾಗಿದ್ದ ಅಡ್ವೈಜರಿ ಕಮಿಟಿಗಳ ಓಪ್ಪಿಗೆಯನ್ನು ಪಡೆದು ಕೆಲಸಗಳನ್ನು ಕಂಟ್ರಾಕ್ಟ್ ಕೊಟ್ಟಿದ್ದರೂ ಆ ಕಂಟ್ರಾಕ್ಟರುಗಳು ಅವರ ಸ್ವಂತ ಕೆಲಸಗಳನ್ನು ಮಾತ್ರ ಆ ಹಣದಿಂದ ಮಾಡಿಕೊಂಡು ಸಾರ್ವಜನಿಕರ ಕೆಲಸಗಳನ್ನೇನನ್ನೂ ಮಾಡಿಲ್ಲ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ವಿ. ಕೌಜಲಗಿ.—ಆ ವಿಚಾರ ನನ್ನ ಗಮನಕ್ಕೆ ಬಂದಿಲ್ಲ.

ಶ್ರೀ ಬಿ. ಪಿ. ಗಂಗಾಧರ್.—ತುಮಕೂರು ಜಿಲ್ಲೆ ಯಾವತ್ತೂ ಕ್ಷಾಮಕ್ಕೆ ಹೆಸರಾದ ಜಿಲ್ಲೆ. ಆ ಜಿಲ್ಲೆಯಲ್ಲಿರತಕ್ಕ ಪಾವಗಡ, ಮಧುಗಿರಿ, ಕೊರಟಗೆರೆ ಮತ್ತು ತುಮಕೂರು ತಾಲ್ಲೂಕಿನ ಕೆಲವು ಭಾಗ ಮತ್ತು ಶಿರಾ ತಾಲ್ಲೂಕುಗಳಲ್ಲಿ ಯಾವತ್ತೂ ಕ್ಷಾಮ ಇದ್ದುದೇ. ಆದ್ದರಿಂದ ಅಲ್ಲಿ ಇನ್ನು ಅನೇಕ ಕೆಲಸಗಳು ಅರ್ಧಂಬರ್ಧ ಆಗಿರುತ್ತವೆ. ಅಂಥ ಕೆಲಸಕಾರ್ಯಗಳನ್ನು ಕೈಗೊಂಡು ಅವುಗಳನ್ನು ಮುಗಿಸುವುದಕ್ಕೆ ಪ್ರಯತ್ನ ಮಾಡುವರೇ ?

ಶ್ರೀ ಎಚ್. ವಿ. ಕೌಜಲಗಿ.—ಹಾಲಿ ಮುಗಿಯದೆ ಹಾಗೆ ನಿಂತಿರತಕ್ಕ ಕೆಲಸಗಳನ್ನು ಮುಂದುವರಿಸಲು ಸೂಚನೆಯನ್ನು ಕೊಡರಾಗಿದೆ. ಇನ್ನೂ ಹೆಚ್ಚಿನ ಕೆಲಸಗಳನ್ನು ಈ ಬಾಬಿನಲ್ಲಿ ಕೈಗೊಳ್ಳಲು ಅದನ್ನು ವಿಚಾರ ಮಾಡಿ ಕೈಗೊಳ್ಳಬೇಕಾಗುತ್ತದೆ.

ಶ್ರೀ ಎಸ್. ಗೋಪಾಲಗೌಡ.—ಶ್ರೀಮಾನ್ ವೆಂಕಟಗಿರಿಯಪ್ಪನವರ ಪ್ರಶ್ನೆಗೆ ಉತ್ತರ ಕೊಡುತ್ತ ಮಾನ್ಯ ಸಚಿವರು ಕ್ಷಾಮಪರಿಹಾರ ಕಾರ್ಯಗಳನ್ನು ಕೈಗೊಳ್ಳಲು ಒಂದು ಸಮಿತಿಯನ್ನು ತಾಲ್ಲೂಕ್ ಮಟ್ಟದಲ್ಲಿ ನೇಮಕ ಮಾಡರಾಗಿತ್ತು, ಎಂದು ಹೇಳಿದರು. ಅಲ್ಲದೆ ನನಗೆ ಗೊತ್ತಿದ್ದ ಹಾಗೆ ಪ್ರತಿಯೊಂದು ಜಿಲ್ಲೆಗೂ ಒಬ್ಬೊಬ್ಬ ಮಂತ್ರಿಗಳನ್ನು ಅಂದರೆ ಆಯಾಯ ಜಿಲ್ಲೆಯ ಮಂತ್ರಿಗಳನ್ನು ಆಯಾಯ ಜಿಲ್ಲೆಗಳಿಗೆ ಈ ಹಣವನ್ನು ವಿತರಣೆ ಮಾಡತಕ್ಕ ಬಗ್ಗೆ ನೇಮಕ ಮಾಡರಾಗಿತ್ತು. ಆದರೆ ಈ ಕಾರ್ಯಗಳೆಲ್ಲಾ ಆ ತಾಲ್ಲೂಕಿನ ಮಟ್ಟದಲ್ಲಿ ನೇಮಕ ಮಾಡರಾಗಿದ್ದ ಸಮಿತಿಯ ಶಿಫಾರ್ಸಿನ ಮೇರೆ ನಡೆಯಬೆ ಮಂತ್ರಿಗಳು ಹೇಳಿದಂತೆ ಇಂಥವರಿಗೆ ಜೋಳವನ್ನು ಮುಫತ್ತಾಗಿ ಕೊಡು, ಇಂಥವರಿಗೆ ಮುಫತ್ತಾಗಿ ಹಾಲನ್ನು ಕೊಡು ಇಂಥವರಿಗೇ ಈ ಕೆಲಸದ ಕಾಂಟ್ರಕ್ಟನ್ನು ಕೊಡು. ಆ ಕೆಲಸಗಳನ್ನು ಕೊಡತಕ್ಕ ಬಗ್ಗೆ ಜಿಲ್ಲಾಧಿಕಾರಿಗಳು ಒಪ್ಪಲಿ, ಒಪ್ಪದಿರಲಿ ಅದನ್ನು ಮನಸ್ಸಿಗೇ ಹಾಕಿಕೊಳ್ಳದೆ, ಮಂತ್ರಿಗಳು ತಮ್ಮ ಮನಸ್ಸೋ ಇಚ್ಛೆ ಕೆಲಸಮಾಡಿವ್ವಾರೆಂಬುದು ನಿಜವೇ ! ಹಾಗಿದ್ದರೆ ಸರ್ಕಾರದವರು ನಿಮ್ಮ ಅಧಿಕಾರಿಗಳನ್ನೇ ನೇಮಕ ಮಾಡಿ ಇದನ್ನು ಪರ್ಯಾಲೋಚನೆ ಮಾಡಿ ಒಂದು ವರದಿಯನ್ನು ಈ ಸಭೆಗೆ ಒಪ್ಪಿಸುವರೇ ?

ಶ್ರೀ ಎಚ್. ವಿ. ಕೌಜಲಗಿ.—ಇಂಥವರಿಗೆ ಕಂಟ್ರಾಕ್ಟ್ ಕೊಡಿ, ಇಂಥವರಿಗೇ ಕೂಲಿ ಕೊಡಿ ಇಂಥವರಿಗೇ ಜೋಳ ಕೊಡಿ, ಇಂಥವರಿಗೇ ಹಾಲನ್ನು ಕೊಡಿ ಎಂದು ಹೇಳಿರತಕ್ಕ ದೂರುಗಳೇನೂ ನಮಗೆ ಬಂದಿಲ್ಲ. ಆದರೆ ಒಂದೆರಡು ಕಡೆ ಇಂಥವರಿಗೇ ಕೂಲಿ ಕೆಲಸ ಕೊಡಿ ಎಂದು ಹೇಳಿದ ನಿದರ್ಶನಗಳು ನಮ್ಮ ಜನರಿಗೆ ಬಂದಿದ್ದವು. ಅಂಥ ಸಂದರ್ಭದಲ್ಲಿ ನಾವು ಚೌಕಾಸಿ ಮಾಡಿದ್ದೇವೆ, ಅಂಥವರಿಗಿನ್ನೂ ದುಡ್ಡನ್ನು ಸರ್ಕಾರ ಕೊಟ್ಟಿಲ್ಲ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಕ್ಷಾಮಪರಿಹಾರ ಕಾರ್ಯಕ್ಕಾಗಿ ಖರ್ಚಾಗಿರತಕ್ಕದ್ದು 4 ಕೋಟಿ 38 ಲಕ್ಷ 63 ಸಾವಿರ ಎಂದು ಒಂದರಲ್ಲಿದೆ, ಇನ್ನೊಂದರಲ್ಲಿ 3 ಕೋಟಿ 14 ಲಕ್ಷ ಎಂದು ಇದೆ. ಆದ್ದರಿಂದ ಖಚಿತವಾದ ಅಂಕಿ ಅಂಶಗಳನ್ನು ಓದಿಸುವುದಕ್ಕೆ ಸಾಧ್ಯವಿಲ್ಲವೇ ?

Sri H. V. KOUJALGI.—I will verify and say afterwards, Sir !

ಶ್ರೀ ಎನ್. ಹುಚ್ಚಮಾಸ್ತಿಗೌಡ.—ನಿರ್ದಿಷ್ಟವಾದ ಅಂಕಿಅಂಶಗಳಿಲ್ಲ ಎಂದು ಮಾನ್ಯ ಸಚಿವರು ಅಪ್ಪಣೆ ಕೊಡಿಸುತ್ತಿರುವುದರಿಂದ ಈ ಪ್ರಶ್ನೆಯನ್ನು ತಡೆಹಿಡಿದು ಇದೇ ಅಧಿವೇಶನದ ಕಡೆಯ ದಿನ ಇದನ್ನು ಮತ್ತೆ ತೆಗೆದುಕೊಳ್ಳುವಂತೆ ಅಧ್ಯಕ್ಷರು ಮಂತ್ರಿಗಳಿಂದ ಭರವಸೆಯನ್ನು ಪಡೆದುಕೊಳ್ಳುವುದಕ್ಕೆ ಸಾಧ್ಯವೇ ?

ಶ್ರೀ ಎಚ್. ವಿ. ಕೌಜಲಗಿ.—ಇದರಲ್ಲಿ ಸರ್ಕಾರದವರು ಯಾವುದನ್ನೂ ಮುಚ್ಚುಮರೆ ಮಾಡಿಟ್ಟಿಲ್ಲ. ಅವರಿಗೆ ಇಂಥ ಹೆಚ್ಚಿನ ಮಾಹಿತಿ ಬೇಕಾದರೆ ಅದನ್ನು ಒದಗಿಸುತ್ತೇನೆ.

1-30 P.M.

ಶ್ರೀ ಎಸ್. ಶಿವಪ್ಪ.—ಜಿಲ್ಲಾವಾರು ಕ್ಷಾಮ ಸರಿಹಾರ ಕೆಲಸ ನಡೆದಿರುವುದು ಹೇಗಿದೆ ಎಂದರೆ, ಆಯಾ ಮಂತ್ರಿಗಳ ಜಿಲ್ಲೆಯೊಳಗೆ ಹೆಚ್ಚು ಮೊಬಲಗನ್ನು ಕೊಟ್ಟಿದ್ದಾರೆ. ಒಂದೊಂದು ಜಿಲ್ಲೆಗೆ ೪ಲಕ್ಷ, ನಮ್ಮ ಜಿಲ್ಲೆಗೆ 11 ಲಕ್ಷ ಧಾರವಾಡ ಜಿಲ್ಲೆಗೆ 43 ಲಕ್ಷ ಹೀಗೆ ಕೊಟ್ಟಿರುವುದಕ್ಕೆ ಕಾರಣವೇನು ?

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಮುಖ್ಯ ಮಂತ್ರಿಗಳ ಜಿಲ್ಲೆಗೆ ಎಷ್ಟು ಕೊಟ್ಟಿದ್ದಾರೆಂಬುದನ್ನು ತಾವು ನೋಡಿ.

ಶ್ರೀ ಎಚ್. ವಿ. ಕೌಜಲಗಿ.— ಮಾನ್ಯ ಶ್ರೀ ಶಿವಪ್ಪನವರ ಜಿಲ್ಲೆಯಲ್ಲಿ ಕೇವಲ ಎರಡು ಮೂರು ತಾಲ್ಲೂಕುಗಳಿಗೆ ಕ್ಷಾಮ ಎಫೆಕ್ಟ್ ಆಗಿದೆ. ಆದ್ದರಿಂದ ಅವರ ಜಿಲ್ಲೆಗೆ ಹೆಚ್ಚು ಖರ್ಚಾಗಿದೆಯೆಂದು ನಾನು ಸಿದ್ಧಮಾಡಿಕೊಡುತ್ತೇನೆ.

Development of Air Strip

360. **Sri M. NAGAPPA** (Raichur).—

Will the Minister for Public Works be pleased to state :—

whether there is any scheme before Government to recommend to the Government of India to develop the Air Strip at Yermaras Village, Raichur Taluk as an Aerodrome in view of the fact that the Raichur District is declared as Intensive Agriculture District ?

Sri B. V. MAGAVI (Deputy Minister for Public Works).—

No.

ಶ್ರೀ ಎಂ. ನಾಗಪ್ಪ.—ಉತ್ತರದಲ್ಲಿ ಇಲ್ಲವೆಂದು ಹೇಳಿದ್ದೀರಿ. ಇದರಿಂದ ಇದನ್ನು ಮಾಡುವುದಕ್ಕೆ ರಾಜ್ಯ ಸರ್ಕಾರಕ್ಕೆ ಮನಸ್ಸು ಇಲ್ಲವೋ ಅಥವಾ ಇದನ್ನು ಶಿಫಾರಸು ಮಾಡಿದರೆ ಕೇಂದ್ರ ಸರ್ಕಾರದವರು ಇವನ್ನು ಪರ್ಯಾಲೋಚಿಸುವುದಿಲ್ಲವೆಂಬ ಭಾವನೆಯೇ ?

† ಶ್ರೀ ಬಿ. ವಿ. ಮಾಗಾವಿ.—ಇದರ ಬಗ್ಗೆ ಡೈರೆಕ್ಟರ್ ಜನರಲ್ ಆಫ್ ಸಿವಿಲ್ ಏವಿಯೇಷನ್ ಅವರು ಪ್ಲಾನ್ ಮತ್ತು ಎಸ್ಟಿಮೇಟ್ ಮಾಡಿದ್ದಾರೆ. ಅದು 6 ಲಕ್ಷ 87 ಸಾವಿರ ರೂಪಾಯಿಗಳಾಗುತ್ತದೆಂದು ತಿಳಿಸಿದ್ದಾರೆ. ಆದರೆ ಸಾಕಷ್ಟು ಟ್ರಾಫಿಕ್ ಪೊಟೆನ್‌ಷಿಯರ್ ಆಗುವುದಿಲ್ಲವೆಂದು ಅವರು ಅದನ್ನು ತಟಸ್ಥಮಾಡುತ್ತಿದ್ದಾರೆ.

ಶ್ರೀ ಎಂ. ನಾಗಪ್ಪ.—ತಮ್ಮ ಅವಗಾಹನೆಗೆ ಈ ಒಂದು ವಿಷಯ ಬಂದಿದೆಯೋ ಇಲ್ಲವೋ ಗೊತ್ತಿಲ್ಲ. ಒಂದು ವೇಳೆ ಅವರು ಸಾಕಷ್ಟು ಟ್ರಾಫಿಕ್ ಪೊಟೆನ್‌ಷಿಯರ್ ಇಲ್ಲವೆಂದು ಅದನ್ನು ಅಭಿವೃದ್ಧಿಮಾಡದಿದ್ದರೆ, ಡೈಲ ಹಿಂದೂ ಅವರು ಅವರ ಪತ್ರಿಕೆಗಳನ್ನು ಬೆಂಗಳೂರಿನಿಂದ ರಾಯಚೂರು, ಹೈದರಾಬಾದ್‌ನಿಂದ ರಾಯಚೂರು ಬೆಂಗಳೂರು ರನ್‌ಮಾಡುವುದಕ್ಕೆ ಸಾಧ್ಯವಿಲ್ಲವೆಂದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಆದಕಾರಣ ಅದನ್ನು ಏರೋಡ್ರೊಂ ಆಗಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಬಿ. ವಿ. ಮಾಗಾವಿ.—ಆ ಒಂದು ಪತ್ರಿಕೆ ಸರ್ವಿಸ್‌ಗೋಸ್ಕರ ಅದನ್ನು ಮಾಡಬೇಕೆಂದರೆ ಆ ರೀತಿ ಮಾಡುವುದಕ್ಕಾಗುವುದಿಲ್ಲ. ಸಾಕಷ್ಟು ಪ್ಯಾಸೆಂಜರ್ಸ್ ಪೊಟೆನ್‌ಷಿಯರ್ ಇರಬೇಕಾಗಿದೆ. ಐ. ಎ. ಸಿ. ಯವರು ರೆಗ್ಯುಲರ್ ಸರ್ವಿಸ್ ಇಟ್ಟಿದ್ದರೆ ಅದನ್ನು ಒಪ್ಪಿಕೊಳ್ಳುತ್ತೇವೆ.

ಶ್ರೀ ಬಾಪೂಗೌಡ.— ರಾಯಚೂರು ಜಿಲ್ಲೆಯಲ್ಲಿ ಒಂದು ಏರ್‌ಸ್ಟ್ರಿಪ್ ಮಾಡುವುದರಿಂದ ಬಿದರ್ ಮತ್ತು ಗುಲ್ಬರ್ಗ ಜಿಲ್ಲೆಯವರಿಗೆ ಅನುಕೂಲವಾಗುತ್ತದಲ್ಲವೇ ?

ಶ್ರೀ ಬಿ. ವಿ. ಮಾಗಾವಿ.— ಅದು ಮಾನ್ಯ ಸದಸ್ಯರ ನಲಹೆ.

ಶ್ರೀ ವಿ. ಎನ್. ಪಾಟೀಲ್.—ರಾಯಚೂರ್ ಜಿಲ್ಲೆಯಲ್ಲಿ ಜಿನ್ನಿಂಗ್ ಫ್ಯಾಕ್ಟರಿ ಇದೆ. ಗಂಗಾವತಿ ಮತ್ತು ಸಿಂಧನೂರ್ ಬೆಲ್ಟ್ ಏರಿಯಾ ಇದೆ. ಅಮೆರಿಕಾ ಪೀಸ್ ಕೋರ್ ಸೇಕಡ 70ರಷ್ಟು ಇದ್ದಾರೆ. ಹಟ್ಟಿ ಗೋಲ್ಡ್ ಮೈನ್ಸ್ ಇದೆ. ಇವೆಲ್ಲವನ್ನೂ ಅಭಿವೃದ್ಧಿ ಮಾಡಬೇಕಾದರೆ ಅಲ್ಲಿ ಒಂದು ಏರ್ ಸ್ಟ್ರಿಪ್ ಮಾಡಬೇಕಲ್ಲವೇ ?

ಶ್ರೀ ಬಿ. ವಿ. ಮಾಗಾವಿ.—ಮಂಗಳೂರು—ಬೆಳಗಾಂನಲ್ಲಿರತಕ್ಕ ಏರ್ ಸ್ಟ್ರಿಪ್ ಕೂಡ ಅಷ್ಟಾಗಿ ಸಾಕಷ್ಟು ಫಲದಾಯಕವಾಗಿಲ್ಲ. ಆಂದಮೇಲೆ ಹೊಸದಾಗಿ ಏರ್‌ಸ್ಟ್ರಿಪ್‌ಗಳನ್ನು ಮಾಡುವುದಕ್ಕೆ ಅವರ ಒಪ್ಪಿಗೆ ಇಲ್ಲವೆಂದು ಹೇಳುತ್ತೇನೆ.

ಶ್ರೀ ಕೆ. ಸಂಗನಗೌಡ.—ಇವತ್ತು ಸಂಯುಕ್ತ ಕರ್ನಾಟಕದಲ್ಲಿ ಹಾಸನ ಜಿಲ್ಲೆಯಲ್ಲಿ ಒಂದು ಏರ್‌ಸ್ಟ್ರಿಪ್ ಮಾಡುವ ವಿಚಾರ ಬಂದಿದೆ. ಅಂದಮೇಲೆ ರಾಯಚೂರು ಜಿಲ್ಲೆಯಲ್ಲಿ ಬೇಕಾದಷ್ಟು ಅನುಕೂಲತೆಗಳು ಇರುವುದರಿಂದ ಅಲ್ಲಿ ಒಂದು ಏರೋಡ್ರೋಂ ಮಾಡುವುದಕ್ಕೆ ಇರುವ ಆಂತವೇನು ?

ಶ್ರೀ ಬಿ. ವಿ. ಮಾಗಾವಿ.—ಸದಸ್ಯರ ಇಚ್ಛೆಯನ್ನು ಕೇಂದ್ರಸರ್ಕಾರದ ಗಮನಕ್ಕೆ ತರಬಹುದು. ಕೊನೆಯದಾಗಿ ಅದನ್ನು ಒಪ್ಪಿಕೊಳ್ಳುವುದು, ಬಿಡುವುದು ಕೇಂದ್ರಸರ್ಕಾರಕ್ಕೆ ಸಂಬಂಧಪಟ್ಟ ವಿಚಾರ.

ಶ್ರೀ ಎಸ್. ಸದಾಶಿವಪ್ಪ ಪಾಟೀಲ್.—ಇಲ್ಲಿ ಭಾರತ ಸರ್ಕಾರದವರಿಗೆ ಶಿಫಾರಸು ಮಾಡಲು ಸರ್ಕಾರದವರಲ್ಲಿ ಯೋಜನೆ ಏನಾದರೂ ಇದೆಯೇ ಎಂದು ಕೇಳಿದ್ದಕ್ಕೆ ಇಲ್ಲ ಎಂದು ಉತ್ತರ ಕೊಟ್ಟಿದ್ದೀರಿ. ಇದಕ್ಕೆ ಹೆಚ್ಚಿನ ಮಹತ್ವ ಕೊಡಬೇಕಾಗಿದೆ ಏಕೆಂದರೆ, ಹಿಂದೆ ದಿವಂಗತ ನೆಹರೂರವರು ಒಮ್ಮೆ ದೆಹಲಗೆ ಹೋಗುವಾಗ ವಿಮಾನಕ್ಕೆ ಬೆಂಕಿ ಹತ್ತಿದಾಗ ಅದೇ ವಿಮಾನ ನಿರ್ಮಾಣ ಅದನ್ನು ಉಳಿಸಿದ್ದು ಎಂದು ಹೇಳಬಹುದು. ಆದಕಾರಣದಿಂದ ಇದನ್ನು ಏನಾದರೂ ಯೋಚನೆ ಮಾಡುತ್ತೀರಾ?

ಶ್ರೀ ಬಿ. ವಿ. ಮಾಗಾವಿ.— ಜವಹರ್‌ಲಾಲ್ ನೆಹರೂ ಇಳಿದ ಬಗ್ಗೆ ರಿಕಾರ್ಡ್ ಮೇರೆ ಯಾವುದೂ ಮಾಹಿತಿ ಇಲ್ಲ. ನಾನೂ ಕೇಳಿದ್ದೇನೆ. ಅಂದ ಮಾತ್ರಕ್ಕೆ ಅದನ್ನು ಮಾಡಬೇಕೆಂದು ಹೇಳಿದರೆ ಕಷ್ಟವಾಗುತ್ತದೆ.

Sri THIRUMALADEVARAYA.— May I know whether any survey was conducted at Ginigere for an air strip ?

ಶ್ರೀ ಬಿ. ವಿ. ಮಾಗಾವಿ.—ಅನೇಕ ಕಡೆಗಳಲ್ಲಿ ಅವುಗಳನ್ನು ಇನ್‌ವೆಸ್ಟಿಗೇಟ್ ಮಾಡಿ ಎಸ್ಟಿಮೇಟ್ ಕೂಡ ಮಾಡಿದ್ದಾರೆ. ಇದಕ್ಕೆ ಕೇಂದ್ರ ಸರ್ಕಾರದ ಒಪ್ಪಿಗೆ ಸಿಕ್ಕದ ಕಾರಣ ತೆಗೆದು ಕೊಳ್ಳುವುದಕ್ಕೆ ಸಾಧ್ಯವಾಗಲಿಲ್ಲ.

Mr. SPEAKER:—Sri C. M. Churchihal Math may put Q. No. 373 on behalf of Sri S. R. Bommai.

Acquisition proceedings Pending in Kundgol Taluk

373. Sri C. M. CHURCHIHAL MATH (Mundargi) [On behal of SRI S. R. BOMMAI (Kundgol)].—

Will the Minister for Revenue be pleased to state :—

(*a*) the number of acquisition proceedings for providing village sites pending in Kundgol Taluk (villagewise information may be furnished) ;

Statement showing the particulars of L.A. cases in Kundgol Taluk in respect of Village sites extension, District Dharwar.

Sl. No.	Name of the village	Purpose of acquisition	Year and date of inception	Present stage of the case — With whom pending
1	2	3	4	5
1	Mattigatti	Village Extension in S. Nos. 84 and 98 of Mattigatti.	29-11-1961	The matter is under consideration of Government.
2	Hirenarti	Village Extension in S. No. 7/44, 7/4B, 7/4C of Hirenarti.	19-2-1963	Notification under Section 4 (1) of the L.A. Act has been issued of 31st January 1969.
3	Pashupatihal	Village extension in S. No. 84, 85 and 86 of Pashupatihal.	14-6-1957	Draft award has been received by D.C. and it is under his examination.
4	Hanchinal	Village Extension in S. No. 28, 30, 34, 35 and 36 of Hanchinal.	5-8-1961	Do
5	Yaribudihal	Village Extension in S. Mo. 266 and 267 of Yeribudihal.	4-9-1961	The matter is under consideration of Government.
6	Pur	Village extension in S. No. 237 of Pur.	27-4-1955	Draft award has been approved by the Deputy Commissioner, Dharwar. Publication of award is held up for sanction of refund amount of

				Rs. 2,919 credited to T.F. I. N. T. in 1957. Proposals for refund returned to Assistant Commissioner, Savanur by D. C. on 10th January 1969 for further report.
7	Gudenkatti	Village Extension	25-6-1968	Notification under Section 4(1) of the L. A. Act has been issued on 17th January 1969.
8	Pur	Village extension in S. No. 320 of Pur.	19-11-1955	Award has been declared by the Assistant Commissioner, Savanur. But possession of the lands has not been handed over as the same is stayed by the Court. A civil suit is pending in Civil Court at Hubli.
9	Shirur	Village extension in S. No. 365 and 366 of Shirur.	19-11-1953	The Assistant Commissioner has declared the award on 16th February 1961 and the possession of the land has been taken over on 22nd April 1961. A reference has been made to the court on 7th August 1962 by D. C. The case is not yet decided in the court.

ಶ್ರೀ ಸಿ. ಎಂ. ಚುರ್ಚಿಹಾರ್‌ಮಠ್.—ಕೊಚ್ಚಿರತಕ್ಕ ಪರಿಶಿಷ್ಟದಲ್ಲಿ, ನಂ. 1 ರಲ್ಲಿ ಮುಟ್ಟಿಗಟ್ಟಿ ಎಂಬ ಗ್ರಾಮವು 1961 ನೇ ಇಸವಿಯಲ್ಲಿ ವಾರ್ಸಾರಂಭವಾಗಿದ್ದರೂ ಕೂಡ ದಿ ಮ್ಯಾಟರ್ ಈಸ್ ಅಂಡರ್ ಕನ್ಸಿಡರೇಶನ್ ಎಂದು ಉತ್ತರದಲ್ಲಿದೆ. ಇದಕ್ಕೆ ಇನ್ನೂ ಎಷ್ಟು ವರ್ಷ ಆಗಬೇಕು ?

†ಶ್ರೀ ಎಚ್. ವಿ. ಕೌಜಲಗಿ.—ನಂಬರ್ 1 ಮತ್ತು 5 ರಲ್ಲಿ ಅದನ್ನು ಪರಿಶೀಲನೆ ಮಾಡಬೇಕಾಗುತ್ತದೆ. I will verify the answers. I doubt whether they are correct.

Mr. SPEAKER.—Does the Hon. Minister want that this question should be held over ?

Sri H. V. KOUJALGI.—Yes.

Mr. SPEAKER.—The question is held over.

Sri B. Bhasker Shetty may put question No. 457 on behalf of Sri Aithala.

South Kanara Fish Marketing Federation

457. Sri B. BHASKER SHETTY (Kaup) [on behalf of Sri P. V. Aithal (Surathkal)].—

Will the Minister for Fisheries and Ports be pleased to state :—

(*a*) whether the Government have received representation from the opposition M.L.As. of the South Kanara District for nomination of the M.L.As. from coastal areas of the District to the Executive Committee of the South Kanara Fish Marketing Federation ;

(*b*) if so, the action taken on the said representation ;

(*c*) whether there is any proposal to amend the bye-law so as to increase the number of Government nominated members in order to provide for representation by the coastal M.L.As. ?

Sri H. C. LINGA REDDY (Minister for Fisheries and Ports).—

(*a*) Yes.

(*b*) No action has been taken.

(*c*) No.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಉತ್ತರದಲ್ಲಿ, ಬಂದಿದೆ, ಯಾವ ಕ್ರಮವನ್ನೂ ತೆಗೆದುಕೊಂಡಿರುವುದಿಲ್ಲ ಎಂದು ಹೇಳಿದ್ದೀರಿ. ಏತಕ್ಕೋಸ್ಕರ ತೆಗೆದುಕೊಂಡಿಲ್ಲ, ಮತ್ತು ಇದರಲ್ಲಿರುವ ತೊಂದರೆ ಏನು ? ಎಂ. ಎಲ್. ಎ. ಬೇಡವೆಂದು ತೀರ್ಮಾನ ಮಾಡಿದ್ದೀರಾ ?

†ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಇದು ಕೋ-ಆಪರೇಟಿವ್ ಇನ್‌ಸ್ಟಿಟ್ಯೂಶನ್ ಬೈರಾಸಿಗೆ ಸಂಬಂಧಪಟ್ಟದ್ದಾಗಿದೆ. ಈ ಅಮೆಂಡ್‌ಮೆಂಟನ್ನು ಕೋ-ಆಪರೇಟಿವ್ ಫೆಡರೇಶನ್ ಜನರಲ್ ಬಾಡಿ ಮೀಟಿಂಗ್‌ನಲ್ಲಿ ಮಾಡಬೇಕೇ ವಿನಹ ಸರ್ಕಾರದವರು ಮಾಡುವುದಕ್ಕಾಗುವುದಿಲ್ಲ. ಏಕೆಂದರೆ, ಅದು ಡೆಮೋಕ್ರಾಟಿಕ್ ಬಾಡಿ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಈ ಹಿಂದೆ ಒಬ್ಬ ಕಾಂಗ್ರೆಸ್ಸಿನ ಮುಖಂಡರಾದ ಜನಾಬ್ ಮಹಮ್ಮದ್ ಕಮಾಲ್ ಎಂಬವರನ್ನು ಈ ಸಂಸ್ಥೆಗೆ ಡೈರೆಕ್ಟರಾಗಿ ಸರ್ಕಾರದವರು ನಾಮಿನೇಟ್ ಮಾಡಿದ್ದಾರೆ, ಇದು ಸರಿಯೇ ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಅದನ್ನು ಡಿಪಾರ್ಟ್‌ಮೆಂಟಿನವರು ಮಾಡಿಲ್ಲ. ಬೇರೆ ಡಿಪಾರ್ಟ್‌ಮೆಂಟ್ ಮಾಡಿದ್ದು ಎಂದು ಗೊತ್ತಾದಾಗ, ಆಮೇಲೇ ರಾಜಿನಾಮೆ ಕೊಟ್ಟು ಬೇರೆಯವರ ನಾಮಿನೇಶನ್ ಆಗಿದೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಮಾನು ಮಾರಾಟ ನಂಸ್ಥೆಗೆ ಕೇವಲ ಕಾಂಗ್ರೆಸ್ಸಿನವರನ್ನೇ ಸೇರಿಸತಕ್ಕಂತಹ ನೀತಿ ಇವರಲ್ಲಿ ಇದೆ. ಪ್ರಜಾಪ್ರಭುತ್ವದ ನೀತಿಯಂತೆ ಇದರಲ್ಲಿ ವಿರೋಧ ಪಕ್ಷದವರಿಗೂ ಒಂದು ಅವಕಾಶವನ್ನು ಕೊಡುತ್ತೀರಾ ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಇದು ಸಹಕಾರಿ ನಂಸ್ಥೆ, ಯಾರು ಬೇಕಾದರೂ ಶೇರ್ ತೆಗೆದುಕೊಳ್ಳಬಹುದು, ಯಾರು ಬೇಕಾದರೂ ಎಲೆಕ್ಷನಿಗೆ ನಿಂತು ಎಕ್ಸ್‌ಕ್ಯೂಟಿವ್ ಕಮಿಟಿಗೆ ಬರ ಬಹುದು.

ಶ್ರೀ ಬಿ. ಭಾನ್ಕರ್ ಶೆಟ್ಟಿ.—ಈವಾಗಲೇ ತಾವು ಹೇಳಿದ್ದೀರಿ, ನಾವು ಮಾಡಲಿಲ್ಲ, ಬೇರೆ ಇರಾಖಿಯವರು ನಾಮಿನೇಶನ್ ಮಾಡಿದ್ದಾರೆಂದು. ಇನ್ನೊಂದು ಪ್ರಶ್ನೆಗೆ ಉತ್ತರದಲ್ಲಿ ಜನರರ್ ಬಾಡಿಯಲ್ಲಿ ಅಮೆಂಡ್‌ಮೆಂಟ್ ಮಾಡಬಹುದು ಎಂದು. ಹಾಗಾದರೆ ಅಮೆಂಡ್‌ಮೆಂಟ್ ಮಾಡತಕ್ಕ ಅಧಿಕಾರ ನಿಮಗೆ ಇದೆ. ಆದ್ದರಿಂದ ಮಾನುಗಾರಿಕೆಯ ಫೆಡೆರೇಶನಿನಲ್ಲಿ ಹೆಚ್ಚಾಗಿ ವಿಧಾನಸಭಾ ನದಸ್ಯರು ಆಸಕ್ತಿ ವಹಿಸುವುದರಿಂದ, ಮಾತ್ರವಲ್ಲದೆ ನರ್ಕಾರದ ಹಣ ಅಲ್ಲದೆ ಅಗ್ರಿಕಲ್ಚರರ್ ರಿಹ್ಯಾನಾನ್ಸ್ ಕಾರ್ಪೋರೇಶನಿಂದ ಇದಕ್ಕೆ 1.25 ಕೋಟಿ ರೂಪಾಯಿ ನಹಾಯಧನ ದೊರಕಿರು ವುದರಿಂದ, ಇದರ ವ್ಯವಹಾರಗಳನ್ನು ನರಿಯಾಗಿ ನೋಡಿಕೊಂಡು ಹೋಗುವಂತೆ ಕರಾವಳಿ ಪ್ರದೇಶದ ಎಂ. ಎರ್. ಎ ಗಳನ್ನು ನಾಮಿನೇಶನ್ ಮಾಡುವುದಕ್ಕೆ ನೋಡುತ್ತೀರಾ ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಕೋ-ಆಪರೇಟಿವ್ ಫೆಡರೇಪನ್‌ನಲ್ಲಿ ಇರಪಂಥಾದ್ದು 17 ಜನ ಡೈರೆಕ್ಟರುಗಳು. ಅವರ ಪೈಕಿ 3 ಜನರನ್ನು ನಾಮಿನೇಟ್ ಮಾಡುವುದಕ್ಕೆ ಅಧಿಕಾರ ಇದೆ. 3 ಜನ ಗಳ ಪೈಕಿ ಡೆಪ್ಯುಟಿ ಡೈರೆಕ್ಟರ್ ಆಫ್ ಫಿಪರೀಸ್ ಒಬ್ಬರು, ಡೆಪ್ಯುಟಿ ಡೈರೆಕ್ಟರ್ ಆಫ್ ಕೋ-ಆಪರೇಷನ್ ಒಬ್ಬರು, ಇನ್ನೊಬ್ಬರು ಅಲ್ಲಿರುವ ಜಿಲ್ಲಾಧಿಕಾರಿಗಳ ಹೆಡ್‌ಕ್ವಾರ್ಟರ್ಸ್ ಅಸಿಸ್ಟೆಂಟ್ ಈ ಮೂರು ಜನಗಳನ್ನು ಟೆಕ್ನಿಕಲ್ ಗೈಡೆನ್ಸ್ ಕೊಡುವುದಕ್ಕೋಸ್ಕರ ನಾಮಿನೇಟ್ ಮಾಡುವುದಕ್ಕೆ ಅವಕಾಶ ಇದೆ. ಬೇರೆ ಯಾರನ್ನೂ ನಾಮಿನೇಟ್ ಮಾಡುವುದಕ್ಕೆ ಅವಕಾಶವಿಲ್ಲ.

ಶ್ರೀ ಕೆ. ಎಚ್. ಪಾಟೀರ್.—ಈ ತರಹ ನಹಕಾರಿ ನಂಘಗಳಿಗೆ ನರ್ಕಾರಿ ಅಧಿಕಾರಿಗಳನ್ನು ನಾಮಕರಣ ಮಾಡುವುದರಿಂದ ಅಲ್ಲಿ ನರಿಯಾಗಿ ಕೆಲನ ಆಗದೆ ನಿಷ್ಪಲವಾಗಿರುತ್ತದೆ. ಆದ್ದರಿಂದ ಇಂತಹ ನಹಕಾರಿ ನಂಘಗಳಲ್ಲಿ ಎಂ. ಎರ್. ಎ. ಗಳನ್ನು ನೇಮಕ ಮಾಡಿ ಅಲ್ಲಿ ದುಡ್ಡು ನರಿಯಾಗಿ ವಿನಿಯೋಗವಾಗುವ ಹಾಗೆ ಮಾಡುವುದಕ್ಕೆ ಏನು ಆತಂಕ ಇದೆ ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಮಾನ್ಯ ನದಸ್ಯರ ಅಪಾದನೆಯನ್ನು ನಾನು ಒಪ್ಪುವುದಿಲ್ಲ. ನರ್ಕಾರದ ಅಧಿಕಾರಿಗಳು ನೇಮಕವಾಗಿರತಕ್ಕ ನಮಿತಿಗಳ ನಭೆಗೆ ಅಧಿಕಾರಿಗಳು ಹೋಗದೆ ಇರತಕ್ಕ ನಂದರ್ಭಗಳಲ್ಲಿ ಬೇರೆ ಅಧಿಕಾರಿಗಳನ್ನು ಕಳುಹಿಸುತ್ತಾರೆ. ಆದ್ದರಿಂದ ಟೆಕ್ನಿಕಲ್ ಗೈಡೆನ್ಸ್ ಕೊಡುವುದಕ್ಕೋಸ್ಕರ ಕೆಲವು ಸ್ಥಾನಗಳನ್ನು ಇಟ್ಟುಕೊಂಡಿದೆ.

Regularisation of Services of Local Candidates

472. Sri P. VENKATAGIRIYAPPA (Kolar).—

Will the Chief Minister be pleased to state :—

(*a*) the steps taken by the Government to regularise the service of local candidates who were appointed after 1st January 1965 ;

(*b*) whether it has come to the notice of Government that Public Service Commission selects candidates for the vacancies against which the present local candidates are working ;

(SRI P. VENKATAGIRIYAPPA)

(*c*) if services of these local candidates are not regularised will they not suffer on account of their crossing age bar and unemployment, etc.;

(*d*) the remedy proposed to be provided by Government to avoid the above trouble to the present local candidates;

(*e*) whether Government has extended the same benefits granted to the local candidates appointed prior to 1st January 1960 and 1st January 1965 to those appointed thereafter?

Sri VEERENDRA PATIL (Chief Minister).—

(*a*) The matter is under consideration.

(*b*) Yes.

(*c*) No. They are entitled to age exemption to the extent of the years of service put in as local candidates, when they apply for regular recruitment.

(*d*) Instructions have been issued through the Heads of Departments that local candidates should be encouraged to apply for absorption against regular vacancies when regular recruitment takes place.

(*e*) In view of reply to clause (*a*), this does not arise.

† ಶ್ರೀ ಪಿ. ವೆಂಕಟಗಿರಿಯಪ್ಪ. - ಈಗ ಕೆಲಸ ಮಾಡುತ್ತಿರುವ ಸ್ಥಳೀಯ ಅಭ್ಯರ್ಥಿಗಳ ಹುದ್ದೆಗಳಿಗೆ ರೋಕಸೇವಾ ಆಯೋಗದವರು ಅಭ್ಯರ್ಥಿಗಳನ್ನು ಆರಿಸುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದಕ್ಕೆ, ಅದು ಸರ್ಕಾರದ ಗಮನಕ್ಕೆ ಬಂದಿದೆಯೆಂದು ಹೇಳಿದ್ದೀರಿ, ಈಗ 3-4 ವರ್ಷಗಳಿಂದ ಕೆಲಸ ಮಾಡುತ್ತಿರುವ ಸ್ಥಳೀಯ ಅಭ್ಯರ್ಥಿಗಳನ್ನು ಬಿಟ್ಟು ಹೊಸದಾಗಿ ಎಸ್. ಎಸ್. ಎಲ್.ಸಿ. ಪಾಸು ಮಾಡಿರತಕ್ಕವರನ್ನು ರೋಕ ಸೇವಾ ಆಯೋಗದವರು ನೇಮಕ ಮಾಡಿ ಸ್ಥಳೀಯ ಅಭ್ಯರ್ಥಿಗಳಿಗೆ ಅನ್ಯಾಯ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಆ ಅನ್ಯಾಯವನ್ನು ಸರಿಪಡಿಸುವುದಕ್ಕೆ ಸರ್ಕಾರದವರು ಏನಾದರೂ ಕ್ರಮ ತೆಗೆದುಕೊಳ್ಳುವುದಕ್ಕೆ ಯೋಚನೆ ಮಾಡಿದ್ದೀರಾ?

†ಶ್ರೀ ವೀರೇಂದ್ರ ಪಾಟೀರ್.—ಏನೂ ಅನ್ಯಾಯ ಆಗಿಲ್ಲ ಸರಿಪಡಿಸುವುದಕ್ಕೆ.

Sri BAPU GOWDA.—Is it not a fact that when the appointments of the local candidates are not regularised, they will become ineligible for Government Service on account of age bar?

Sri VEERENDRA PATIL.—No, Sir. In my reply I have already stated that they are entitled to age exemption to the extent of the years of service put in as local candidates, when they apply for regular recruitment.

ಶ್ರೀ ಎಸ್. ಗೋಪಾಲಗೌಡ.—ಹಿಂದೆ ಕೂಡ ಒಂದು ಸಂದರ್ಭದಲ್ಲಿ ಮಾನ್ಯ ಶ್ರೀ ನಿಜಲಿಂಗಪ್ಪನವರು ಮುಖ್ಯ ಮಂತ್ರಿಗಳಾಗಿದ್ದಾಗ ಈ ಒಂದು ಸಮಸ್ಯೆಯ ಬಗ್ಗೆ ಪರಿಹಾರವನ್ನು ಸೂಚನೆ ಮಾಡಿದ್ದರು. ಏಜ್ ಎಗ್ಸಂಪ್ಷನ್ ಕೊಡುವುದು ಬ್ರಿಟೀಷರ ಕಾಲದಿಂದಲೂ ಬರುತ್ತಿದೆ. ನೀವು ಏತಕ್ಕೆ ಎಲ್ಲಾ ಇಲಾಖೆಗಳಿಗೂ ಸ್ಥಳೀಯವಾಗಿ ಜನರನ್ನು ನೇಮಕ ಮಾಡಿಕೊಳ್ಳುವಂತಹ ಅಧಿಕಾರವನ್ನು ಮುಂದುವರಿಸಿಕೊಂಡು ಬರುತ್ತಿದ್ದೀರಿ? ಸ್ಥಳೀಯವಾಗಿ ನೇಮಕ ಮಾಡಿಕೊಂಡ

ಮೇರೆ ಅವರ ಹುದ್ದೆಗಳನ್ನು ಏತಕ್ಕೆ ನಕಾಲದಲ್ಲಿ ಕ್ರಮಗೊಳಿಸುವುದಿಲ್ಲ ? ಲೋಕ ಸೇವಾ ಆಯೋಗ ದವರು ಜೀವಂತರಾಗಿದ್ದಾರೆಯೋ ಇಲ್ಲವೋ ? ಈ ಹಿಂದೆಯೇ ಅವರು ಅರ್ಜಿಗಳನ್ನು ಕರೆದು ಏತಕ್ಕೆ ನೇಮಕ ಮಾಡಲಿಲ್ಲ? ಈಗ ಸೆಕೆಂಡ್ ಡಿವಿಜನ್ ಕ್ಲಾರ್ಕ್‌ಗಳ ಹುದ್ದೆಗಳಿಗೆ ಏನು ಅರ್ಜಿಯನ್ನು ಕರೆದಿದ್ದರು ಅದಕ್ಕೆ 25 ಸಾವಿರ ಜನಗಳು ಅರ್ಜಿಯನ್ನು ಹಾಕಿದ್ದಾರೆ. ಈ ರೀತಿ ಏತಕ್ಕೆ ಮಾಡ ಬೇಕು, ಈ ಪ್ರಶ್ನೆಗೆ ಅವರು ಕೊಟ್ಟಿರುವ ಉತ್ತರದಲ್ಲಿ ಕ್ರಮವಾದ ಹುದ್ದೆಗಳಿಗೆ ಕ್ರಮವಾದ ನೇಮಕ ನಡೆದಿದೆ ಎಂದು ಹೇಳಿದ್ದಾರೆ. ಇದು ಸರಿಯೇ ? ಸರ್ಕಾರದವರು ಆ ರೀತಿ ಸೂಚನೆ ಯನ್ನು ಕೊಡಬಹುದೇ ? ಮತ್ತು, ಈಗ ಸ್ಥಳೀಯವಾಗಿ ಕೆಲಸ ಮಾಡಿರತಕ್ಕಂಥ ಒಂದು ವರ್ಷ ಕ್ಕಿಂತ ಹೆಚ್ಚು ಸೇವೆ ಸಲ್ಲಿಸಿರತಕ್ಕ ಎರ್ಲಾ ಅರ್ಹತೆಯನ್ನು ಪಡೆದಿರುವ 4-5 ಸಾವಿರ ಜನಗಳನ್ನು ಖಾಯಂಗೊಳಿಸುವುದಕ್ಕೆ ಉಳಿದಿರುವಾಗ ಆ ಹುದ್ದೆಗಳಿಗೆ ಲೋಕ ಸೇವಾ ಆಯೋಗದವರು ಏತಕ್ಕೆ ಆಯ್ಕೆ ಮಾಡಬೇಕು ? ಈ ಅನ್ಯಾಯವನ್ನು ತಾವು ನೋಡಿದ್ದೀರಾ ?

ಶ್ರೀ ವೀರೇಂದ್ರ ಪಾಟೀಲ್.—ಸ್ಥಳೀಯ ಅಭ್ಯರ್ಥಿಗಳು ಎಷ್ಟು ಜನ ಇದ್ದಾರೆ ಎಂಬ ಬಗ್ಗೆ ಪತ್ತೆ ಹಚ್ಚುವುದು ಕಷ್ಟವಾಗಿದೆ. ಯಾವ ಯಾವ ಇರಾಖೆಗಳಲ್ಲಿ ಎಷ್ಟು ಜನ ಇದ್ದಾರೆ ಎಂಬ ಬಗ್ಗೆ ಪತ್ತೆ ಹಚ್ಚಬೇಕಾದರೆ ಇನ್ನೂ ಸಾಕಷ್ಟು ಸಮಯ ಬೇಕಾಗುತ್ತದೆ. ಈ ಬಗ್ಗೆ ಸರ್ಕಾರದ ಅಭಿ ಪ್ರಾಯವನ್ನು, ನೀತಿಯನ್ನು ಸ್ಪಷ್ಟಪಡಿಸಿದ್ದೇವೆ. ಪಿ.ಎಸ್.ಸಿ. ಅವರು ಕಾರ್ಫಾರ್ ಮಾಡಿ ದಾಗ ಆಯಾ ಇರಾಖೆಯಲ್ಲಿರುವ ಸ್ಥಳೀಯ ಅಭ್ಯರ್ಥಿಗಳು ಸಹ ಅರ್ಜಿ ಹಾಕಿಕೊಳ್ಳುವಂತೆ ಪ್ರೊತ್ಸಾ ಹಿಸಬೇಕೆಂದು ಇರಾಖಾ ಮುಖ್ಯಾಧಿಕಾರಿಗಳಿಗೆ ಸರ್ಕುಲರ್ ಮೂಲಕ ಸ್ಪಷ್ಟಪಡಿಸಿದ್ದೇವೆ. ಆಯಾ ಇರಾಖೆಯವರು ತಮಗೆ ಬೇಕಾದವರನ್ನು ಸ್ಥಳೀಯ ಅಭ್ಯರ್ಥಿಗಳಾಗಿ ನೇಮಕ ಮಾಡಿ ಕೊಂಡಿರುತ್ತಾರೆ. ಇಂತಹವರನ್ನೆರ್ಲಾ ಕಾಯಂ ಮಾಡುವುದಾದರೆ ಪಿ.ಎಸ್.ಸಿ.ಯ ಅವಶ್ಯಕತೆಯೇ ಇರುವುದಿಲ್ಲ. ಮತ್ತು ಹರಿಜನ ಮತ್ತು ಗಿರಿಜನರಿಗೆ ಎಷ್ಟು ಪರ್‌ಸೆಂಟ್ ಕೊಡಬೇಕೆಂದು ನಿಯಮ ಇದೆಯೋ ಅದನ್ನು ಕಾರ್ಯರೂಪದಲ್ಲಿ ತರುವ ಬಗ್ಗೆ ಗ್ಯಾರಂಟಿ ಕೊಡುವುದಕ್ಕಾಗುವುದಿಲ್ಲ. ಈಗ ಒಂದು ಹಂತದಲ್ಲಿ ರೆಗ್ಯುಲರೈಸ್ ಮಾಡಿ ಇನ್ನು ಮುಂದೆ ಆ ರೀತಿ ಮಾಡದಾರದೆಂಬ ಧೋರಣೆ ನಮ್ಮ ಮನಸ್ಸಿನಲ್ಲಿದೆ.

ಶ್ರೀ ಎಸ್. ಎಂ. ಗುರೆಡ್ಡಿ.—ಈಗ ಕೆಲಸದಲ್ಲಿರುವ ಕೆಲವು ಅಭ್ಯರ್ಥಿಗಳು ಇರಾಖಾ ಟೆಸ್ಟಿಂಗ್ ಮಾಡಿಕೊಂಡಿದ್ದಾರೆ. ಇಂತಹವರನ್ನು ಹೊರಗೆ ಕಳಿಸಿ ಹೊಸಬರನ್ನು ನೇಮಕ ಮಾಡಿಕೊಂಡರೆ ಸರ್ಕಾರದ ಕೆಲಸ ನಿಧಾನವಾಗುವುದಿಲ್ಲವೇ ಮತ್ತು ಎಫಿಷಿಯನ್ಸಿ ಕಡಿಮೆ ಯಾಗುವುದಿಲ್ಲವೇ !

ಶ್ರೀ ವೀರೇಂದ್ರ ಪಾಟೀಲ್.—ಸ್ಥಳೀಯ ಅಭ್ಯರ್ಥಿಗಳನ್ನು ಹೊರಗೆ ಕಳಿಸಬೇಕೆಂಬುದು ಸರ್ಕಾರದ ಉದ್ದೇಶವಲ್ಲ. ಅದಕ್ಕಾಗಿ ವೇಕೆನ್ಸಿ ಬಿದ್ದಾಗ ಪಿ. ಎಸ್. ಸಿ. ಅವರು ಅಪ್ಲಿಕೇಷನ್ ಕಾರ್ಫರ್ ಮಾಡಿದಾಗ ಇರಾಖಾ ಮುಖ್ಯಾಧಿಕಾರಿಗಳಿಗೆ ಸರ್ಕುಲರ್ ಕಳಿಸಿ ತಮ್ಮಲ್ಲಿರುವ ಸ್ಥಳೀಯ ಅಭ್ಯರ್ಥಿಗಳು ಅರ್ಜಿ ಹಾಕಿಕೊಳ್ಳುವಂತೆ ಪ್ರೊತ್ಸಾಹಿಸಬೇಕೆಂದು ಹೇಳಿದ್ದೇವೆ. ಮತ್ತು ಅವರು ಅರ್ಜಿ ಹಾಕಿಕೊಂಡಾಗ ಸ್ಥಳೀಯ ಅಭ್ಯರ್ಥಿಗಳಾಗಿ ಅವರು ಸೇವೆ ಸಲ್ಲಿಸಿರುವಷ್ಟು ಅವಧಿ ಯನ್ನು ಅವರ ವಯಸ್ಸಿನಲ್ಲಿ ವಿನಾಯಿತಿಯನ್ನು ಪಡೆದುಕೊಳ್ಳಲು ಅವರು ಅರ್ಹರಾಗಿರುತ್ತಾರೆಂದು ಹೇಳಲಾಗಿದೆ. ಆದ್ದರಿಂದ ಇರಾಖೆಯ ಮುಖ್ಯಾಧಿಕಾರಿಗಳು ಪಿ. ಎಸ್. ಸಿ.ಯ ಪರೀಕ್ಷೆಗೆ ಕೂರು ವಂತೆ ಒತ್ತಾಯ ಪಡಿಸಬೇಕು. ಈಗಾಗಲೇ ಎಷ್ಟೋ ಜನ ಪರೀಕ್ಷೆಗೆ ಕೂತಿದ್ದಾರೆ. ಮತ್ತು ಪ್ರತಿಯೊಂದು ಇರಾಖೆಯವರು ತಮ್ಮಲ್ಲಿ ಎಷ್ಟು ಜನ ಸ್ಥಳೀಯ ಅಭ್ಯರ್ಥಿಗಳು ಇದ್ದಾರೆ ಎಂಬ ಬಗ್ಗೆ ಮಾಹಿತಿಯನ್ನು ಸರ್ಕಾರಕ್ಕೆ ಇಪ್ಪರಲ್ಲಯೇ ಕಳಿಸುವುದರಲ್ಲಿ ಇದ್ದಾರೆ.

ಶ್ರೀ ಬಿ. ದೊಡ್ಡಬೋರೇಗೌಡ.—ಲೋಕ ಸೇವಾ ಆಯೋಗದವರು ಅಸಿಸ್ಟೆಂಟ್ ಇಂಜನಿಯರ್ ಗಳನ್ನು ತಹಶೀಲ್‌ದಾರರನ್ನು, ಬಿ.ಡಿ.ಓ.ಗಳನ್ನು ಮತ್ತು ಇನ್ನಿತರ ಮುಖ್ಯ ಹುದ್ದೆಗಳಿಗೆ ಅಭ್ಯರ್ಥಿ ಗಳನ್ನು ನೇಮಕ ಮಾಡುವಾಗ ಪ್ರತಿಯೊಂದು ಸ್ಥಾನಕ್ಕೆ ಇಷ್ಟು ಎಂದು ನಿಗದಿ ಮಾಡಿ ತೆಗೆದು ಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಮತ್ತು ಈ ರೀತಿ ನಡೆಯುತ್ತಿರುವುದರಿಂದ ಕೆಲಸ ಸಿಗುತ್ತದೆಂದು ಹಿರಿಕೆ ಹೊತ್ತು ಕುಳಿತಿರುವ ಸಾಮಾನ್ಯ ಜನರಿಗೆ ಅನ್ಯಾಯವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರು ಏನು ಪ್ರಶ್ನೆ ಕೇಳಿದರು ಎಂಬುದು ನನಗೆ ಅರ್ಥವಾಗಲಿಲ್ಲ. ಪ್ರತಿಯೊಂದು ಪೋಸ್ಟ್‌ಗೂ ಇಂತಿಷ್ಟು ಹಣ ತೆಗೆದುಕೊಳ್ಳುತ್ತಿದ್ದಾರೆಂದು ಅವರು ಹೇಳುತ್ತಿರಬಹುದು. ಒಂದು ವೇಳೆ ಮಾನ್ಯ ಸದಸ್ಯರು ದುಡ್ಡು ಇಲ್ಲದೆ, ಬ್ಯಾಕರಿ ಇಲ್ಲದೆ, ರೆಕಮೆಂಡ್ ಇಲ್ಲವೆ ಕೆಲಸ ಸಿಗುವಂತಿಲ್ಲ ಎಂದು ಹೇಳುವುದಾದರೆ ಅದು ಬಹಳ ಅನ್‌ಫೇರ್ ಎಂದು

(ಶ್ರೀ ವೀರೇಂದ್ರ ಪಾಟೀಲ್)

ಕಾಣುತ್ತದೆ. ಇಲ್ಲಿ ಪಿ.ಎಸ್.ಸಿ. ಸದಸ್ಯರು ಯಾರೂ ಇಲ್ಲ. ಮತ್ತು ಅವರ ಹಿತರಕ್ಷಣೆ ಮಾಡಿಕೊಳ್ಳುವ ಪರಿಸ್ಥಿತಿಯಲ್ಲಿ ಇಲ್ಲ. ನನಗೆ ಗೊತ್ತಿರುವಂತೆ ನಾನು ಮುಖ್ಯಮಂತ್ರಿಯಾದ ಮೇಲೆ ಇಲ್ಲಿಯವರೆಗೂ ಪಿ.ಎಸ್.ಸಿ.ಯ ಯಾವ ಮೆಂಬರ್ ಮೇಲೂ ಯಾವ ತರಹವಾದ ದೂರೂ ಬಂದಿಲ್ಲ. ಈ ಮನೆಯ ಸದಸ್ಯರಿಂದಲೂ ಕೂಡ ಬಂದಿಲ್ಲ. ಆದ್ದರಿಂದ ವಿನಾಕಾರಣ ದೋಷಾರೋಪಣೆ ಮಾಡುವುದು ಸರಿಯಿಲ್ಲವೆಂದು ಕಾಣುತ್ತದೆ.

ಶ್ರೀಮತಿ ಕೆ. ಲೀಲಾವತಿ ರೈ.—ಲೋಕಲ್ ಕ್ಯಾಂಡಿಡೇಟ್‌ಗಳನ್ನು ಬೇರೆ ಬೇರೆ ಕಡೆಗಳಲ್ಲಿ ಕೆಲಸ ಮಾಡುತ್ತಿರುವಾಗ ಅವರು ಪಬ್ಲಿಕ್ ಸರ್ವಿಸ್ ಕಮಿಷನ್ ಮುಂದೆ ಬಂದ ಮೇಲೆ ಅವರು ಪಟ್ಟಿಗಳನ್ನು ಕಳುಹಿಸುವಾಗ ಕೆಲವರಿಗೆ ಸೀನಿಯಾರಿಟಿ ವಿಷಯದಲ್ಲಿ ಅನ್ಯಾಯಗಳಾಗುತ್ತಿವೆ ಎಂದು ಕೇಳಿ ಬರುತ್ತಿವೆ. ಇದನ್ನು ಸರಿಪಡಿಸುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಲೋಕಲ್ ಕ್ಯಾಂಡಿಡೇಟುಗಳು ಪಬ್ಲಿಕ್ ಸರ್ವಿಸ್ ಕಮಿಷನ್ ಮುಂದೆ ಬಂದಾಗ ಅವರು ಒಂದು ಷಟ್ಟಿಯನ್ನು ಮಾಡಿ ಸರ್ಕಾರಕ್ಕೆ ಕಳುಹಿಸುತ್ತಾರೆ. ಆ ಪಟ್ಟಿಯನ್ನು ಸರಕಾರದವರು ಒಪ್ಪಿಕೊಳ್ಳುತ್ತಾರೆ. ಪಟ್ಟಿ ಬಂದ ಮೇಲೆ ಅವರು ಯಾವ ರೀತಿ ಆರ್ಡರು ಕೊಟ್ಟಿದ್ದಾರೋ ಅದರಂತೆ ಸೀನಿಯಾರಿಟಿ ಬರುತ್ತದೆ.

Sri G. CHANDRAKANTH.—Is it not a fact that the then Chief Minister Sri Nijalingappa had assured in the Upper House on 11th April 1966 that no local candidate would be thrown out of employment and that their services would be regularised and may I know whether that assurance has been carried out ?

Sri VEERENDRA PATIL.—I do not know what assurance was held out by my predecessor. If the hon'ble member brings it to my notice, I shall look into it.

ಶ್ರೀ ಎಸ್. ವಿ. ಅಗ್ನಿಹೋತ್ರಿ.—ನಾಲ್ಕೈದು ವರ್ಷಗಳ ಕಾಲ ಲೋಕಲ್ ಕ್ಯಾಂಡಿಡೇಟುಗಳಾಗಿ ಕೆಲಸ ಮಾಡಿದ ಮೇಲೆ ಇವರನ್ನು ಪಬ್ಲಿಕ್ ಸರ್ವಿಸ್ ಎಕ್ಸಾಮಿನೇಷನ್‌ಗೆ ಕುಳಿತುಕೊಂಡು ಪಾಸು ಮಾಡಬೇಕೆಂದು ಹೇಳುತ್ತಾ ಇದ್ದೀರಿ. ಆದರೆ ಇವರು ಸಂಸಾರ ತಾಪತ್ರಯಗಳಲ್ಲಿ ಸರಿಯಾಗಿ ಓದದೆ ಪರೀಕ್ಷೆಗಳಲ್ಲಿ ಕೆಲವರು ಫೇಲ್ ಆಗುತ್ತಾರೆ. ಇಂತಹವರ ಗತಿ ಏನು ಎನ್ನುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಈ ವಿಚಾರ ನನಗೆ ಅರ್ಥವಾಗಲೊಲ್ಲದು. ಲೋಕಲ್ ಕ್ಯಾಂಡಿಡೇಟ್ ಮೊದಲು ಪಬ್ಲಿಕ್ ಸರ್ವಿಸ್ ಎಕ್ಸಾಮಿನೇಷನ್ಸ್‌ಗೆ ಹೋಗುವುದಿಲ್ಲ. ಅವರು ಎಸ್. ಎಸ್. ಎಲ್. ಸಿ. ಪಾಸು ಮಾಡಿಕೊಂಡು ಮೂರು ನಾಲ್ಕು ವರ್ಷಗಳ ಕಾಲ ಕೆಲಸದಲ್ಲಿದ್ದು ಟ್ರೇನಿಂಗು ಪಡೆದು ಅನಂತರ ಪರೀಕ್ಷೆಗೆ ಹೋಗುತ್ತಾರೆ. ಆದರೆ ಕೆಲವು ಎಸ್. ಎಸ್. ಎಲ್. ಸಿ. ಆದವರು ಪಬ್ಲಿಕ್ ಸರ್ವಿಸ್ ಎಕ್ಸಾಮಿನೇಷನ್‌ಗೆ ಮೊದಲೇ ಬರುತ್ತಾರೆ. ಆದರೆ ಕೆಲಸದಲ್ಲಿದ್ದು ಮೊದಲೇ ಟ್ರೇನಿಂಗು ಪಡೆದವರಿಗೆ ಈ ಪರೀಕ್ಷೆಗಳು ಅಷ್ಟು ಕಷ್ಟವಾಗಲಿಕ್ಕಿಲ್ಲ.

ಶ್ರೀ ಎಂ. ಹೆಚ್. ಜಯಪ್ರಕಾಶ ನಾರಾಯಣ್.—ಮುಖ್ಯ ಮಂತ್ರಿಗಳು ಪಿ. ಎಸ್. ಸಿ. ಮೂಲಕ ಸ್ಥಳೀಯ ಅಭ್ಯರ್ಥಿಗಳನ್ನೆರ್ಪಾಡು ಕ್ರಮಗೊಳಿಸುತ್ತೇವೆ ಎಂದು ಹೇಳಿದರು. ಆದರೆ ಡೈರೆಕ್ಟ್ ರೆಕ್ರೂಟುಮೆಂಟು ರೂಲ್ಸಿನಲ್ಲಿ ಶೇಕಡ 30 ರಷ್ಟು ಫಾರ್ವರ್ಡ್ ಕ್ಲಾಸು ಶೇಕಡ 18 ರಷ್ಟು ಷೆಡ್ಯೂಲು ಕ್ಯಾಸ್ಟ್ ಹಾಗೂ ಷೆಡ್ಯೂಲು ಟ್ರೈಬ್ಸ್‌ನವರಿಗೆ ಮತ್ತು ಶೇಕಡಾ 52 ರಷ್ಟು ಓಪನ್ ಮಾರ್ಕೆಟ್ಟಿನಲ್ಲಿ ಎಂದು ನಿಯಮಗಳನ್ನು ಅನುಸರಿಸಿ ಮಾಡುತ್ತಿದ್ದರೂ ಇದನ್ನು ಕ್ರಮಗೊಳಿಸುವಾಗ ಷೆಡ್ಯೂಲು ಕ್ಯಾಸ್ಟು ಹಾಗೂ ಷೆಡ್ಯೂಲು ಟ್ರೈಬ್ಸ್‌ನವರು ಕಡಿಮೆ ಸಂಖ್ಯೆಯಲ್ಲಿದ್ದರೆ ಆ ಸಂಖ್ಯೆಯನ್ನು ಪೂರ್ತಿ ಕೋಟಾವರೆಗೆ ಭರ್ತಿ ಮಾಡಲು ಯಾವ ಕ್ರಮ ತೆಗೆದುಕೊಳ್ಳುತ್ತೀರಿ?

ಶ್ರೀ ವೀರೇಂದ್ರ ಪಾಟೀಲ್.—ಇದನ್ನು ನಾನು ಏಕೆ ಹೇಳಲಿಲ್ಲ ಎಂದರೆ ಪಬ್ಲಿಕ್ ಸರ್ವಿಸ್ ಕಮಿಷನ್ ಮೂಲಕ ಬರುವ ಪಟ್ಟಿಗೆ ಗ್ಯಾರಂಟಿ ಇರುತ್ತದೆ. ಇದರಲ್ಲಿ ಬ್ಯಾಕ್‌ವರ್ಡ್ ಕ್ಲಾಸಿನವರಿಗೆ ಹಾಗೂ ಫಾರ್ವರ್ಡ್ ಕ್ಲಾಸಿನವರಿಗೆ ಇಷ್ಟು ಎಂದು ಇರುತ್ತದೆ. ಅದನ್ನು ನೋಡಿಕೊಂಡೇ ಅವರು ಚುನಾಯಿಸಿ ಪಟ್ಟಿ ಮಾಡಿ ಕಳುಹಿಸಿದ ಮೇಲೆ ಇವರನ್ನು ರೆಗ್ಯೂಲರೈಸೇಷನ್ ಮಾಡಬೇಕಾಗುತ್ತದೆ.

ಶ್ರೀ ಎಸ್. ಶಿವಪ್ಪ.—ಕನಿಷ್ಟ ಪಕ್ಷ ಯಾರು ಆರು ತಿಂಗಳ ಕಾಲ ರೋಕರ್ ಕ್ಯಾಂಡಿಡೇಟ್ ಆಗಿ ಕೆಲಸ ಮಾಡುತ್ತಿರುತ್ತಾರೋ ಅಂತಹವರನ್ನು ರೆಗ್ಯುಲರೈಸು ಮಾಡುವಾಗ ಪ್ರಾಶಸ್ತ್ಯ ಕೊಡುತ್ತೇವೆ ಎಂದು ಹೇಳಿರುವುದರಿಂದ ಪಿ. ಎಸ್. ಸಿ. ನವರೂ ಕೂಡ ಇದೇ ನೀತಿ ಅನುಸರಿಸುವುದರಲ್ಲಿ ಇರುವ ತೊಂದರೆಯೇನು ?

ಶ್ರೀ ವೀರೇಂದ್ರ ಪಾಟೀಲ್.—ಆ ರೀತಿ ಪ್ರಾಶಸ್ತ್ಯ ಕೊಟ್ಟರೆ, ಈಗತಾನೆ ಮಾನ್ಯ ಸದಸ್ಯರಾದ ಶ್ರೀಮಾನ್ ಜಯಪ್ರಕಾಶ ನಾರಾಯಣ್‌ರವರು ಹೇಳಿದ ಹಾಗೆ ಯಾವ ಗ್ಯಾರಂಟೀಯನ್ನು ಕೊಡುವುದಕ್ಕೆ ಆಗುವುದಿಲ್ಲ. ಆರು ತಿಂಗಳ ಮೇಲೆ ಎಂದು ನೋಡುವುದಕ್ಕಿಂತ ಪಬ್ಲಿಕ್ ಸರ್ವಿಸ್ ಎಕ್ಸಾಮಿನೇಷನ್ಸ್‌ಗೆ ಹೋದಾಗ ಅವರು ಎಲ್ಲಾ ನಿಯಮದಂತೆ ರಿಸರ್ವೇಷನ್‌ಗೆ ಧಕ್ಕೆ ಬಾರದಂತೆ ಪಟ್ಟಿ ತಯಾರು ಮಾಡಿ ಸರಕಾರಕ್ಕೆ ಕಳುಹಿಸುತ್ತಾರೆ.

ಶ್ರೀ ಎಸ್. ಗೋಪಾಲಗೌಡ.—ಮಾನ್ಯ ಮುಖ್ಯ ಮಂತ್ರಿಗಳು ಇಲ್ಲಿ ಉತ್ತರ ಕೊಡುವಾಗ ಹಿಂದೆ ಇಲ್ಲಿ ಮುಖ್ಯ ಮಂತ್ರಿಗಳಾಗಿದ್ದ ಶ್ರೀಮಾನ್ ನಿಜಲಿಂಗಪ್ಪನವರು ಏನು ಆಶ್ವಾಸನೆ ಕೊಟ್ಟಿದ್ದಾರೋ ಅದು ನನಗೆ ಗೊತ್ತಿಲ್ಲ ಎಂದು ಹೇಳಿದರು. ಅದು ಸರಕಾರದ ಮುಂದೆಯೇ ಇದೆ. ಮತ್ತು ಇವರು ಕೊಟ್ಟಿರುವ ಉತ್ತರದಲ್ಲೇ ಇದೆ. 11-1-60 ಮತ್ತು 1-1-68ಕ್ಕೆ ಮುಂಚಿತವಾಗಿ ನೇಮಕವಾದವರಿಗೆ ಇದೇ ಸೌಲಭ್ಯಗಳನ್ನು ಕೊಡುತ್ತೀರಾ ಎಂದು ಕೇಳಿರುವುದಕ್ಕೆ ಅದು ಇನ್ನೂ ಪರಿಶೀಲನೆಯಲ್ಲಿದೆ ಎಂದು ಹೇಳುತ್ತಾರೆ. ಸ್ಥಳೀಯ ಅಭ್ಯರ್ಥಿಗಳನ್ನೆಲ್ಲಾ ರೆಗ್ಯುಲರೈಸು ಮಾಡುವುದಕ್ಕೆ ಪ್ರಾಶಸ್ತ್ಯ ಕೊಡುತ್ತೇವೆ ಎಂದು ಆವರೇ ಹೇಳುತ್ತಾರೆ. ಇದು ಒಂದಕ್ಕೊಂದು ವಿರುದ್ಧವಾದ ಅಭಿಪ್ರಾಯಕ್ಕೆ ಎಡೆ ಕೊಡುತ್ತದೆ. ಈಗಾಗಲೇ ಪೆಡ್ಯೂಲು ಕ್ಯಾಸ್ಟ್ ಮತ್ತು ಪೆಡ್ಯೂಲ್ ಟ್ರೈಬ್ಸ್‌ನವರನ್ನು ನೇಮಕ ಮಾಡುವಾಗ ಅನೇಕ ಅನ್ಯಾಯಗಳಾಗಿವೆ ಅದರ ಬಗ್ಗೆ ಏನು ಮಾಡಬೇಕು ಎಂದು ಕೇಳಿದರೆ ಅದರ ಬಗ್ಗೆ ಏನೂ ಹೇಳದೆ ಇರುವುದು ಅಷ್ಟು ಸಮಂಜಸವಾಗುವುದಿಲ್ಲ. ನನಗೆ ಲೋಕಸೇವಾ ಆಯೋಗದವರನ್ನು ದೂರಬೇಕು ಎನ್ನುವ ಅಭಿಪ್ರಾಯ ನನಗೆ ಇಲ್ಲ. ಸರ್ಕಾರದವರು ಇಂತಹ ಇಲಾಖೆಗೆ ಇಷ್ಟು ಜನ ಬೇಕು, ಕ್ವಾಲಿಫಿಕೇಷನ್ ಹೀಗೆ ಇರಬೇಕು ಇಷ್ಟು ವರ್ಷದಲ್ಲಿ ನೇಮಕಮಾಡಿಕೊಳ್ಳಬೇಕು ಎನ್ನುವ ಆದೇಶ ಕೊಡದೆ ಇದ್ದರೆ ಪಿ. ಎಸ್. ಸಿ. ನವರು ಏನೂ ಮಾಡುವುದಕ್ಕಾಗುವುದಿಲ್ಲ. ಈ ಜವಾಬ್ದಾರಿಯನ್ನು ಏಕೆ ನಿರ್ವಹಿಸಿಲ್ಲ ! ಇದಕ್ಕೆ ಏನೇನು ತೊಂದರೆಗಳು ಇವೆ ? ಅದುದರಿಂದ ಸರ್ಕಾರದವರು ಮತ್ತು ಲೋಕ ಸೇವಾ ಆಯೋಗದವರು ಇಬ್ಬರೂ ತಪ್ಪು ಮಾಡಿರುವುದರಿಂದ ಇದುವರೆಗೆ 4—5—6 ವರ್ಷ ಸೇವೆ ಮಾಡಿದ ಸ್ಥಳೀಯ ಅಭ್ಯರ್ಥಿಗಳು ಏನು ಕೆಲಸ ಮಾಡಿದ್ದಾರೆ ಅವರನ್ನು ಮೊದಲು ರೆಗ್ಯುಲರೈಸ್ ಮಾಡಿ ನಂತರ ಏನು ಸುಧಾರಣೆಗಳನ್ನು ತರಬೇಕೋ ಅದನ್ನು ಜಾರಿಗೆ ತರುವುದನ್ನು ಪರಿಶೀಲನೆ ಮಾಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ನಾನು ಹೇಳಬೇಕಾಗಿದ್ದರೆ ನನ್ನ ಪೂರ್ವದಲ್ಲಿ ಇದ್ದಂಥ ಶ್ರೀಮಾನ್ ನಿಜಲಿಂಗಪ್ಪನವರು ಏನು ಹೇಳಿದ್ದರೋ ಅವನ್ನು ಏನು ಎಂದು ಅವರು ಇಲ್ಲದೇ ಇರುವಾಗ ನಾನು ಹೇಳುವುದಕ್ಕೆ ಸಾಧ್ಯವಿಲ್ಲ. ನನಗೆ ಗೊತ್ತಿದ್ದ ಮಟ್ಟಿಗೆ ರೆಗ್ಯುಲರೈಸ್ ಬಗ್ಗೆ ಏನಾದರೂ ಆಶ್ವಾಸನೆ ಕೊಟ್ಟಿದ್ದರೆ ಅವರು ನಡೆಸಿಕೊಂಡು ಬಂದಿದ್ದಾರೆ. 1965ನೇ ಇಸವಿಗಿಂತ ಮುಂಚಿತವಾಗಿ ಇದ್ದ ಕ್ಯಾಂಡಿಡೇಟ್ಸ್ ಎಲ್ಲಾ ರೆಗ್ಯುಲರೈಸ್ ಆಗಿದೆ. ಅದಾದ ಮೇಲೆ ಅಪಾಯಿಂಟ್ ಆಗಿರುವ ರೋಕರ್ ಕ್ಯಾಂಡಿಡೇಟ್ಸ್‌ನ್ನು ರೆಗ್ಯುಲರೈಜ್ ಮಾಡಬಾರದು ಎನ್ನುವ ವಿಚಾರ ಪಬ್ಲಿಕ್ ಸರ್ವಿಸ್ ಕಮೀಷನ್‌ನವರು ತಿಳಿಸಿದ ಮೇಲೆ, ಪಬ್ಲಿಕ್ ಸರ್ವಿಸ್ ಕಮಿಷನ್‌ನವರು ಒಂದು ಕಾಂಪಿಟಿಟೀವ್ ಎಕ್ಸಾಮಿನೇಷನ್ ನಡೆಸಿದ್ದಾರೆ. ಇಷ್ಟರಲ್ಲೇ ಆ ಒಂದು ಪಟ್ಟಿ ನಮ್ಮ ಹತ್ತಿರ ಬರುವುದು ಇದೆ.

ಇನ್ನೊಂದು ವಿಷಯ ಏನೆಂದರೆ ಪಬ್ಲಿಕ್ ಸರ್ವಿಸ್‌ನವರಿಗೆ ಇಷ್ಟೇ ಸಮಯದಲ್ಲಿ ಮಾಡಬೇಕೆಂದು ಆದೇಶ ಕೊಡುವುದಕ್ಕೆ ತಯಾರಿಲ್ಲ. ಏಕೆಂದರೆ, ಅವರು ಸೆಟ್‌ನಲ್ಲಿ ನೋಟಿಫೈ ಮಾಡಬೇಕು, ಅಪ್ಲಿಕೇಷನ್ ಕಾಲ್‌ಫಾರ್ ಮಾಡಬೇಕು, ಸರ್ಕುಲರ್ ಹೊರಡಿಸಬೇಕು, ಅಪ್ಲಿಕೇಷನ್ಸನ್ನೂ ಮಾಡಿದ್ದಾರೆ. ಇದನ್ನೆಲ್ಲಾ ಮಾಡುವುದಕ್ಕೆ ಹೆಚ್ಚು ಸಮಯ ಬೇಕಾಗುತ್ತದೆ. ಪೋಸ್ಟ್‌ಗಳು 100—200 ಇದ್ದರೆ, ಹೆಚ್ಚು ಸಂಖ್ಯೆಯಲ್ಲಿ 10 ಸಾವಿರ 20 ಸಾವಿರ ಅಪ್ಲಿಕೇಷನ್ಸ್ ಬರುತ್ತದೆ. ಇದನ್ನೆಲ್ಲಾ ಕ್ರಮಪಡಿಸಿ ಎಕ್ಸಾಮಿನೇಷನ್ ಕಂಡಕ್ಟ್ ಮಾಡಿ ಒಂದು ಪಟ್ಟಿ ತಯಾರು ಮಾಡಿ ಕಳುಹಿಸಬೇಕಾಗಿದ್ದರೆ ಅವಕ್ಕೆಲ್ಲಾ ಸಮಯ ಬೇಕಾಗುತ್ತದೆ. ನನ್ನ ಮನಸ್ಸಿನಲ್ಲಿರುವ ವಿಚಾರ ಹೇಳಿದ್ದೇನೆ. 1965ರಿಂದ ಈಚೆಗೆ ಇರುವಂಥ ರೋಕರ್ ಕ್ಯಾಂಡಿಡೇಟ್ಸ್‌ನ್ನು ರೆಗ್ಯುಲರೈಸ್ ಮಾಡಬೇಕು ಎನ್ನುವ ದೃಷ್ಟಿ ಇಟ್ಟುಕೊಂಡಿಲ್ಲ.

ಶ್ರೀ ಕೆ. ಎಸ್. ವೀರಪ್ಪ ಗೌಡ.—ಈಗಾಗಲೇ ಸರ್ಕಾರದವರು ಹೇಳಿದ ಹಾಗೆ ಹೊಸದಾಗಿ ನೇಮಕಗಳನ್ನು ಮಾಡಬೇಕಾದರೆ ಪೇಪರ್‌ನಲ್ಲಿ ಕಾಲ್‌ಫಾರ್ ಮಾಡುತ್ತಾರೆ, ಗೆಜೆಟ್ ನೋಟಿಫಿಕೇಷನ್ ಮಾಡುತ್ತಾರೆ, ಸಾವಿರಾರು ಅಪ್ಲಿಕೇಷನ್ಸ್ ಬರುತ್ತವೆ, ಅದರಲ್ಲಿ ಕಾಂಪಿಟಿಟೀವ್ ಎಕ್ಸಾಮಿನೇಷನ್ ಇಟ್ಟುಕೊಂಡು ಅದರಲ್ಲಿ ಪಾಸ್ ಆದವರನ್ನು ಅಪಾಯಿಂಟ್ ಮಾಡಿಕೊಳ್ಳುತ್ತಾರೆ ಎನ್ನುವ ಮಾತು ಹೇಳಿದರು. ಅದು ನಿಜ. ಆದರೆ ಹಿಂದೆ ಲೋಕರ್ ಅಪಾಯಿಂಟ್‌ಮೆಂಟ್ ಆದವರಿಗೆ ಪಿ. ಎಸ್. ಸಿ. ಯವರು ಪ್ರಾಶಸ್ತ್ಯ ಕೊಡಬೇಕು ಎಂದು ಸರ್ಕಾರದವರು ಹೇಳಿಲ್ಲವೆ ? ಇದರ ಬಗ್ಗೆ ಅವರಿಗೆ ಸಹಾಯ ಮಾಡುವ ದೃಷ್ಟಿಯಿಂದ ಇದನ್ನು ಮಾಡುವುದಕ್ಕಾಗುವುದಿಲ್ಲವೇ ?

ಶ್ರೀ ವೀರೇಂದ್ರ ಪಾಟೀಲ್.—ಪಿ. ಎಸ್. ಸಿ. ಅವರೇ ಪೋಸ್ಟ್‌ಗಳಿಗೆ ಕಾಲ್‌ಫಾರ್ ಮಾಡಿ, ಅಡ್ವರ್ಟೈಜ್ ಮಾಡಿ ಕಾಂಪಿಟಿಟೀವ್ ಪರೀಕ್ಷೆ ನಡೆಸುತ್ತಾರೆ. ಅದರಲ್ಲಿ ಮೆರಿಟ್ ಇದ್ದರೆ ಆರಿಸಿ ಬರುತ್ತಾರೆ, ಇಲ್ಲದಿದ್ದರೆ ಇಲ್ಲ.

2-00 P.M.

Water supply for Deodurg Town

481. Sri SADASHIVAPPA PATIL (Deodurg).—

Will the Minister of State for Municipal Administration be pleased to state :—

(*a*) when the Government intend to take up the water supply work for the Deodurg Town ;

(*b*) whether they are aware that in the months of April and May the availability of drinking water to the people of Deodurg proper is very inadequate ?

Sri B. M. PATIL (Minister of State for Municipal Administration).—

(*a*) As early as possible.

(*b*) Yes.

ಶ್ರೀ ಸದಾಶಿವಪ್ಪ ಪಾಟೀಲ್.—ಅದಷ್ಟು ಜಾಗ್ರತೆ ಎಂದರೆ ಸುಮಾರು ಎಷ್ಟು ಶತಕಗಳು ಬೇಕು ? ಅದು ಈಗ ಯಾವ ಹಂತದಲ್ಲಿದೆ ?

† ಶ್ರೀ ಬಿ. ಎಂ. ಪಾಟೀಲ್.—ಇದರಲ್ಲಿ ಶತಕಗಳ ಪ್ರಶ್ನೆ ಇಲ್ಲ. ಈಗಾಗಲೇ ಪ್ಲಾನ್ ಮತ್ತು ಎಸ್ಟಿಮೇಟ್‌ಗಳನ್ನು ಎಕ್ಸಿಕ್ಯೂಟಿವ್ ಇಂಜಿನಿಯರು ತಯಾರು ಮಾಡಿ ಸೂಪರಿಂಟೆಂಡಿಂಗ್ ಇಂಜಿನಿಯರ್ ಕಡೆ ಕಳಿಸಿದ್ದರು. ಅದರಲ್ಲಿ ಕೆಲವು ಟೆಕ್ನಿಕಲ್ ಬದಲಾವಣೆಗಳನ್ನು ಮಾಡಬೇಕಾಗಿದ್ದು ಅದನ್ನು ಸೂಪರಿಂಟೆಂಡಿಂಗ್ ಇಂಜಿನಿಯರು ಚೀಫ್ ಇಂಜಿನಿಯರಿಗೆ ಕಳಿಸಿಕೊಟ್ಟ ನಂತರ ಸರ್ಕಾರ ಪರಿಶೀಲನೆ ಮಾಡುತ್ತದೆ.

ಶ್ರೀ ಸದಾಶಿವಪ್ಪ ಪಾಟೀಲ್.—ನುಮಾರು ಎರಡು ವರ್ಷದಿಂದ ಅದಷ್ಟು ಜಾಗ್ರತೆ ಎಂದು ಹೇಳುವುದಕ್ಕೆ ಹತ್ತಿದ್ದಾರೆ. ಕುಡಿಯುವ ನೀರಿನ ಪ್ರಶ್ನೆಗೇ ಪರಿಶೀಲನೆ ಮಾಡುತ್ತಿದ್ದೇವೆ ಜಾಗ್ರತೆ ಮಾಡುತ್ತೇವೆಂದು ಹೇಳಿದರೆ ಇತರ ಕೆಲಸಗಳನ್ನು ಹೇಗೆ ಮಾಡಲಾಗುತ್ತದೆ ? ನಳಗಳನ್ನು ಹಾಕುವಾಗ ಬಾವಿಯಿಂದ ನೀರು ತರುತ್ತೀರೋ ಹೇಗೆ ಎನ್ನುವುದನ್ನೂ ದಯವಿಟ್ಟು ತಿಳಿಸಬೇಕಾಗುತ್ತದೆ.

ಶ್ರೀ ಬಿ. ಎಂ. ಪಾಟೀಲ್.—ಪ್ಲಾನ್ ಮತ್ತು ಎಸ್ಟಿಮೇಟ್ ಸರ್ಕಾರಕ್ಕೆ ಬಂದಿಲ್ಲ. ಅದು ಬಂದ ನಂತರ ಅದಷ್ಟು ತೀವ್ರವಾಗಿ ಸರ್ಕಾರ ಇತ್ಯರ್ಥ ಮಾಡುತ್ತದೆ. ಈಗಿನ ಯೋಜನೆಯ ಪ್ರಕಾರ ನಾಲ್ಕು ಬಾವಿಗಳಿಂದ ನೀರು ತರುವ ಯೋಜನೆ ಇದೆ.

ಶ್ರೀ ನದಾಶಿವಪ್ಪ ಪಾಟೀಲ್.—ಬಾವಿಯಲ್ಲಿ ನೀರೇ ಇಲ್ಲ. ಮೂರು ಮೈಲಿ ದೂರದಲ್ಲಿ ಕೃಷ್ಣಾ ನದಿ ಇದೆ. ಬಾವಿಯಿಂದ ನೀರು ಕೊಡುತ್ತೇವೆಂದು ಹೇಳುವುದು ನೋಡಿದರೆ ಆಶ್ಚರ್ಯವಾಗುತ್ತದೆ.

ಶ್ರೀ ಬಿ. ಎಂ. ಪಾಟೀಲ್.—ಯೋಜನೆಯನ್ನು ಕಾರ್ಯಗತ ಮಾಡುವಾಗ ನೀರು ಬಾವಿಗಳಲ್ಲಿ ಸಿಕ್ಕುತ್ತದೆಯೋ ಇಲ್ಲವೇ ಎನ್ನುವುದನ್ನು ನೋಡಿ ಕಾರ್ಯಗತ ಮಾಡಬೇಕಾಗುತ್ತದೆ.

Mr. SPEAKER.—Question time is over.

Sri M. H. JAYAPRAKASH NARAYAN.—I request that Question No. 484 may be taken up.

Mr. SPEAKER.—If this is not going to be a precedent, I shall extend the Question time by five minutes and permit Sri Jayaprakash Narayan to put Question No. 484.

Murder of V. P. Member

484. Sri M. H. JAYAPRAKASH NARAYAN (Sirsi).—

Will the Chief Minister be pleased to state :—

(*a*) whether Sri Halappa Harijan V. P. Member of Kyasinakere village, Honnali taluk, Shimoga District had filed a petiton dated 6th September 1968 to the Minister for Home to give him protection as he anticipated danger to his life ;

(*b*) if so, the action taken by Government to protect his life ;

(*c*) whether it has come to the notice of the Government that Sri Halappa, V. P. Member of Kyasinakere village has been murdered on 29th October 1968 at Kyasinakere ;

(*d*) whether they have received any report pertaining to the stage of investigation by the Police in the matter ;

(*e*) the reason for inordinate delay in investigation in such a serious matter ?

Sri VEERENDRA PATIL (Chief Minister). —

(*a*) Yes. The petition is addressed to the Prime Minister of India and to the Union Minister for Food and Agriculture by Sri Halappa and others.

(*b*) On receipt of the said petition the Superintendent of Police, the Deputy Superintendent of Police, Deputy Inspector General of Police, Central Range and the Deputy Superintendant of Police, C.I.D. visited Kyasanakere village, made enquiries and advised the parties to sink their differences and to live in peace. In fact both the parties gave an undertaking to do so on 16th September 1968. In addition, regular daily patrolling by the police was arranged and a party of 1 H.C. and 2 P.Cs was posted in the village to maintain law and order.

(SRI VEERENDRA PATIL)

(c) Sri Halappa is reported to have been murdered on 28th September 1968.

(d) A case in Cr. No. 95/68 u/s. 302 IPC of Nyamathi Police Station has been registered in this connection and the case is under investigation.

(e) There has been no inordinate delay in the investigation of the case. In fact 3 accused persons are reported to have been arrested.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಸ್ವಾಮಿ, ಬಹಳ ದುಃಖದಿಂದ ನಾನು 484ನೇ ಪ್ರಶ್ನೆಯನ್ನು ಕೇಳುತ್ತೇನೆ.

† ಶ್ರೀ ವೀರೇಂದ್ರ ಪಾಟೀಲ್.—(d) ಭಾಗಕ್ಕೆ ಉತ್ತರವಾಗಿ ಮೊಕದ್ದಮೆಯ ಬಗ್ಗೆ ತನಿಖೆ ನಡೆಸಲಾಗುತ್ತಿದೆ ಎಂದು ಹೇಳಿದೆ. ಈಚೆಗೆ ಬಂದಿರುವ ಮಾಹಿತಿಯ ಪ್ರಕಾರ ತನಿಖೆ ಪೂರ್ತಿಯಾಗಿ 13ನೇ ಫೆಬ್ರುವರಿ 1969ಕ್ಕೆ ಚಾರ್ಜ್ ಷೀಟ್ ಹಾಕಿದ್ದಾರೆ. ಕೇಸ್ ಸಬ್‌ಜುಡಿಸ್.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಕೊಲೆಯಾದ ದಿನದಿಂದ 13ನೇ ಫೆಬ್ರುವರಿ 1969ರ ವರೆಗೂ ಇನ್‌ವೆಸ್ಟಿಗೇಷನ್ ಮಾಡುವುದಕ್ಕೆ ತಡ ಮಾಡಿದ್ದಾರೆ. ಶಿವಮೊಗ್ಗ ಟೌನ್‌ಗೆ ಸೇರಿದ ಒಬ್ಬ ಅಧಿಕಾರಿಯನ್ನು ಅದೇ ಜನಾಂಗಕ್ಕೆ ಸೇರಿದ ಒಬ್ಬರನ್ನು ನೇಮಕ ಮಾಡಿದ್ದು ತಡವಾಗಲು ಕಾರಣವಲ್ಲವೇ, ಸ್ವಾಮಿ ?

ಶ್ರೀ ವೀರೇಂದ್ರ ಪಾಟೀಲ್.—ಕೇಸ್ ಕಾಂಪ್ಲಿಕೇಟೆಡ್ ಇದೆ ಎಂದು ತಿಳಿದುಕೊಂಡು ಬೆಂಗಳೂರಿನಿಂದ ಸ್ಪೆಷಲ್ ಸಿ ಐ. ಡಿ. ಒಬ್ಬರನ್ನು ಇನ್‌ವೆಸ್ಟಿಗೇಟ್ ಮಾಡಲು ಕಳಿಸಿ ಕೇಸ್ ಡಿಟೆಕ್ಟ್ ಆದ ಮೇಲೆ ಚಾರ್ಜ್‌ಷೀಟ್ ಹಾಕಿದ್ದಾರೆ.

ಶ್ರೀ ಕೆ. ಎಚ್. ರಂಗನಾಥ್.—ಈಗ ಇಬ್ಬರು ಪೋಲೀಸ್ ಕಾನ್‌ಸ್ಟೇಬಲ್ಲುಗಳನ್ನು ಮತ್ತು ಒಬ್ಬ ಹೆಡ್ ಕಾನ್‌ಸ್ಟೇಬಲ್ಲನ್ನು ಅಲ್ಲಿ ಹಾಕಿದ್ದೀರಿ. 28ನೇ ಸೆಪ್ಟೆಂಬರ್ 1968 ರಲ್ಲಿ ಕೊಲೆಯಾಗಿದೆ. ಆ ದಿವಸ ನೀವು ನಾನು ಹೇಳಿದಂತೆ ಹಾಕಿರುವ 3 ಜನರು ಅಲ್ಲಿ ಕೆಲಸಮಾಡುತ್ತಿದ್ದರೇ ಇಲ್ಲವೇ ? 6ನೆಯ ತಾರೀಖು ರಕ್ಷಣೆ ಕೇಳಿದ್ದಾರೆ. ಅದಕ್ಕೆ ಪತ್ರ ಬರೆದಿದ್ದಾರೆ. ಕಾನ್‌ಸ್ಟೇಬಲ್ಲುಗಳು ಇಬ್ಬರು ಮತ್ತು ಹೆಡ್ ಕಾನ್‌ಸ್ಟೇಬಲ್ ಒಬ್ಬರು ಆ ದಿವಸ ಅಲ್ಲಿ ಕೆಲಸ ಮಾಡುತ್ತಿದ್ದರೆ ಕೊಲೆ ಹೇಗೆ ಆಯಿತು ?

ಶ್ರೀ ವೀರೇಂದ್ರ ಪಾಟೀಲ್.—ಉತ್ತರದಲ್ಲೇ ಹೇಳಿರುವ ಹಾಗೆ ಅಲ್ಲಿ ಎರಡು ಪಾರ್ಟಿ ಇವೆ. ಎಸ್ ಪಿ. ಡಿ. ಮೈ. ಎಸ್. ಪಿ. ಸರ್ಕಲ್ ಇನ್‌ಸ್ಪೆಕ್ಟರ್ ಅಲ್ಲಿಗೆ ಹೋಗಿ ಎನ್‌ಕ್ವೈರಿ ಮಾಡಿ ತಕ್ಕ ಕ್ರಮ ತೆಗೆದುಕೊಂಡಿದ್ದಾರೆ. ಸೆಂಟ್ರಲ್ ರೇಂಜ್ ಆಫೀಸರೂ ಅಲ್ಲಿಗೆ ಹೋಗಿದ್ದಾರೆ. ಇಷ್ಟೆಲ್ಲಾ ಮಾಡಿದ್ದರೂ ಯಾವಾಗ ಏನು ಬೇಕಾದರೂ ಆಗಬಹುದು. ಪೂರ್ಣ ವರದಿ ನನ್ನ ಬಳಿ ಇಲ್ಲದಿರುವುದರಿಂದ ಇನ್ನೇನೂ ಹೇಳುವುದಕ್ಕಾಗುವುದಿಲ್ಲ.

ಶ್ರೀ ಎಸ್. ಗೋಪಾಲಗೌಡ.—ಈ ಗ್ರಾಮ ಪಂಚಾಯಿತಿ ಚುನಾವಣೆ ನಡೆದ ತಕ್ಷಣವೇ ದಿವಂಗತ ಹಾಲಪ್ಪನವರು 6 ನೇ ಸೆಪ್ಟೆಂಬರ್ 1968 ರಲ್ಲಿ ಅರ್ಜಿಕೊಟ್ಟರು. ಅದನ್ನು ಒಳಾಡಳಿತ ಸಚಿವರಿಗೆ ಪ್ರಧಾನಮಂತ್ರಿಗಳಿಗೆ ಕಳಿಸಿ ನನಗೂ ಒಂದು ಕಾಪಿ ಕೊಟ್ಟಿದ್ದರು. ನಾನೂ ಪೋಲೀಸಿಗೆ ಹೇಳಿದ್ದೆ. ಬಹಳ ಎಚ್ಚರಿಗೆ ವಹಿಸಬೇಕೆಂದು ಟೆಲಿಫೋನ್ ಸಹ ಮಾಡಿದ್ದೆ. ಇಷ್ಟೆಲ್ಲಾ ಆಗಿದ್ದರೂ ಕೂಡ ಕೊಲೆಯಾಗುವುದನ್ನು ತಪ್ಪಿಸುವುದಕ್ಕೆ ಸರಕಾರಕ್ಕೇಕೆ ಸಾಧ್ಯವಾಗಿಲ್ಲ ? ಪೋಲೀಸು ಒಂದೋಬಸ್ತು ಮತ್ತು ಉನ್ನುಪಾರಿ ಸರಿಯಾಗಿಟ್ಟು ತಪ್ಪಿಸಬಹುದಾಗಿತ್ತಲ್ಲವೇ ?

ಶ್ರೀ ವೀರೇಂದ್ರ ಪಾಟೀಲ್.—ಅರ್ಜಿ ಬಂದಿಲ್ಲ ಎಂದು ಹೇಳಿಲ್ಲ ಅಲ್ಲಿ ಪಾರ್ಟಿ ಇದೆ ಎಂಬುದನ್ನು ಒಪ್ಪಿದ್ದೇವೆ. ಅಲ್ಲಿ ಗೊಂದಲವಾಗಬಹುದು, ಅಶಾಂತಿಯಾಗಬಹುದು ಎಂಬ ದೃಷ್ಟಿಯಿಂದ ಅಲ್ಲಿಗೆ ಇಬ್ಬರು ಕಾನ್‌ಸ್ಟೇಬಲ್ಲುಗಳನ್ನು ಮತ್ತು ಒಬ್ಬರು ಹೆಡ್ ಕಾನ್‌ಸ್ಟೇಬಲ್ಲನ್ನು ಹಾಕಿದೆವು. ಆದರೆ ಯಾವಾಗಲೂ ಎಲ್ಲವನ್ನೂ ಕಾದು ಕೂಡುವುದಕ್ಕಾಗುವುದಿಲ್ಲ. ಅಶಾಂತಿಯಾಗದಹಾಗೆ ನೋಡಿಕೊಳ್ಳಲು ಪ್ರಯತ್ನಮಾಡಿದ್ದೇವೆ. ಎರಡು ಪಾರ್ಟಿ ಇವೆ. ಮರ್ಡರ್ ಯಾವಾಗ ಹೇಗೆ ಆಗಿದೆ, ಏನಾಗಿದೆ ಎಂಬುದು ಸಬ್‌ಜುಡಿಸ್ ಇರುವುದರಿಂದ ನಾನು ಆ ವಿಚಾರದಲ್ಲೇನೂ ಹೇಳುವುದಕ್ಕೆ ಇಷ್ಟಪಡುವುದಿಲ್ಲ.

ಶ್ರೀ ಎಸ್. ಎಸ್. ಅರಕೇರಿ.—ಹಾಲಪ್ಪನವರು ರೆಪ್ರಸೆಂಟೇಷನ್ ಕಳಿಸಿದಮೇಲೆ ಆರು ಜನರಲ್ಲಿ ಯಾರನ್ನಾದರೂ ಅರೆಸ್ಟ್ ಮಾಡಿದ್ದೀರಾ ? ಮಾಡಿಲ್ಲದಿದ್ದರೆ ಕಾರಣವೇನು ? ಶಿವಮೊಗ್ಗ ಜಿಲ್ಲೆಯಲ್ಲಿ ಈ ಕೊಲೆ ಜನರಲ್ಲಿ ಬಹಳ ಭೀತಿಯನ್ನುಂಟುಮಾಡಿದೆ.

ಶ್ರೀ ವೀರೇಂದ್ರ ಪಾಟೀಲ್.—ಈಗಾಗಲೆ ವಿಚಾರ ಹೇಳಿದ್ದೇನೆ. ಯಾರನ್ನು ಅರೆಸ್ಟ್ ಮಾಡಿದ್ದಾರೆಂಬ ಪ್ರಶ್ನೆಯಿಲ್ಲ ಕೇಸು ಡಿಜೆಕ್ಟ್ ಆಗಿದೆ, 4 ಜನರಮೇಲೆ ಕೇಸಿದೆ, 3 ಜನರನ್ನು ಅರೆಸ್ಟ್ ಮಾಡಿದೆ. ಈ ವಿಚಾರ ಸಬ್‌ಜುಡಿಸ್ ಆಗಿರುವುದರಿಂದ ಇದಕ್ಕಿಂತ ಹೆಚ್ಚು ಹೇಳುವುದ ಕ್ಕಾಗುವುದಿಲ್ಲ.

ಶ್ರೀ ಕೆ. ಎಚ್. ರಂಗನಾಥ್.—2 ಕಾನ್‌ಸ್ಟೆಬಲ್ಲುಗಳು ಮತ್ತು ಒಬ್ಬ ಹೆಡ್ ಕಾನ್‌ಸ್ಟೇಬರ್ ಅಲ್ಲಿಗೆ ಹಾಕಿರುವವರು ಕೆಲಸವಾಡುತ್ತಿದ್ದಾರೇ, ಇಲ್ಲವೇ ಎಂದು ವರದಿ ತರಿಸಿ ಈ ಸಭೆಗೆತಿಳಿಸಬೇಕು ಎಂದು ಮಂತ್ರಿಗಳಿಗೆ ಅಧ್ಯಕ್ಷರು ಹೇಳಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ವೀರೇಂದ್ರ ಪಾಟೀರ್.—28ನೇ ಸೆಪ್ಟೆಂಬರ್ 1968 ರಲ್ಲಿ ಎಲ್ಲರೂ ಕೆಲಸಮಾಡು ತ್ತಿದ್ದರು.

ಶ್ರೀ ಕೆ. ಎಚ್. ರಂಗನಾಥ್.—ಬರೆದು ತಕ್ಷಣ ವರದಿ ತರಿಸಿ ಉತ್ತರ ಕೊಡುವಾಗುವುದೇ ?

ಶ್ರೀ ವೀರೇಂದ್ರ ಪಾಟೀರ್.—ಅದನ್ನು ಈ ಸಭೆಯಲ್ಲಿ ಹೇಳುವುದು ಸರಿಯಲ್ಲ.

Mr. SPEAKER.—Question Hour is over.

QUESTIONS FOR ANSWERS ON THE DAY

(but not taken up)

Kavals in Holalkere Taluk

2. **Sri B. PARAMESWARAPPA** (Holalkere).—

Will the Minister for Revenue be pleased to state :—

(*a*) the number of Kavals that were present and that are present in Holalkere Taluk (Kavalwise information may please be furnished) ;

(*b*) the extent of land released for cultivation in each Kaval each year ;

(*c*) out of the land so released the extent of land released to Scheduled Caste, Scheduled Tribes, political sufferers, Scheduled Caste and Scheduled Tribes hostels together with the survey numbers in which lands have been released (Kavalwise information may please be furnished) ;

(*d*) the survey numbers of the above Kavals where lands are still remaining and whether any representations have been received from the villages in this behalf (Kavalwise information may please be given) ;

(*e*) whether any lands have been released in 1967 ; and if so, the method that will be followed for distributing the said lands together with the names of persons to whom arrangements have been made for distributing the said lands ?

Sri H. V. KOUJALGI (Minister for Revenue).—

(*a*) The Kavals in Holalkere Taluk are as follows.—

(1) Gunderi Kaval
(2) Arehalli Kaval
(3) Rangayyanadurga Kaval
(4) Ramagiri Kaval
(5) N. Mallapurada Kaval
(6) Nikka Emmiganuru Kaval
(7) Harogitti Kaval
(8) Kadur Kaval
(9) Talekatte Kaval
(10) Chikkajajuru Kaval
(11) Vamalapura Kaval
(12) Vanikemaradi Kaval

The following Amruthamahal Kavals are under the control of the said department.

Name of the Kaval	*Area Acres Guntas*
(1) Chikka Emmiganuru Kaval	1,070–00
(2) Kadur Kaval	906–00
(3) Gunderi Kaval	830–00
(4) Ramagiri Kaval	2,576–21
(5) Harogitti Kaval	1,035–00
(6) Arehalli Kaval	262–00
(7) Rangayyanadurga Kaval	1,968–00
	8,647–21

(*b*) Information obtained for the period from 1958 is furnished below :

	A	G	
(1) Rangayyanadurga Kaval	320—00	AH	G. O. No. AF 8295—300 7-5-63 Dt. 24-10-56.
Do	1000-00	A M K	G. O. No. AFD 4 67 Dt. 15-10-1958.
(2) Ramgiri Kaval	586-00	AME	G. O. No. AFD 4 57 Dt. 13-10-1958.
(3) Harogitti Kaval	357-00	do	do
(4) Gunderi Kaval	400-00	VLS	G.O. No. DFD 23 59 Dt. 8-11-1960.

(c)—

Name of the Kaval	Extent of land released A	G	To Scheduled Castes A	G	To S. C. Castes Hostel A	G	Political Sufferers A	G	S. C. Tribes A	G	S. C. Tribe Hostel A	G
Ramgiri Kaval ...	586	00	35	00	...		20	00	...		...	
Harogitti Kaval ...	357	02	...		30	00	130	14	...		...	

(d) Details regarding the Kavals wherein lands are still available are as follows :

	A.	G.
Ramgiri Kaval	289	00
Harogitti Kaval	13	00
Rangayyanadurga Kaval	566	00
	868	00

Applications have been received from the ryots. But as the said Kavals are stony areas they can't be cultivated.

(e) The following Kavals have been released for the purpose of agriculture as per G. O. No. AF 60 VLS 67, dated 27th November 1967.

	A—G
(1) Rangayyanadurga Kaval	1,868-00
(2) Harogitti Kaval	1,010-00
(3) Arehalli Kaval	260-00
	3,138-00

Stay order for not distributing the released land has been issued in G. O. No. RD 72 LGC 67, dated 10th July 1968. Hence the question of distribution does not arise for the present.

Payment of Bill of the Well Work completed

70. Sri GANGA BOVI (Gulur).—

Will the Minister for Social Welfare be pleassed to state:—

(*a*) the reason for not giving the amount of the final bill to the Contractor even though the well work of the backward class of Madaganahalli, Urudagere Hobli, Tumkur taluk was completed ten years ago;

(*b*) whether they would pay the amount adding interest to the amount which is in arrears since ten years;

(*c*) whether any action will be taken against the concerned officer if he is responsible for the delay;

(*d*) when the said balance will be paid?

Sri V. L. PATIL (Minister for Social Welfare).—

(*a*) The Contractor did not complete the work in the prescribed time as per the condition laid down in the bond.

(*b*) This question does not arise since the contractor had not completed the work in the prescribed time as per the condition laid down in the bond.

(*c*) Does not arise.

(*d*) Final bill has been prepared and arrangement is being made to pay the amount early.

Collection of Land Revenue

322. Sri G. DUGGAPPA (Bharamasagar).—

Will the Minister for Revenue be pleased to state:—

(*a*) whether Government have given assurance on the floor of the House and elsewhere that they would change or abolish the present system of Land Revenue Collection;

(*b*) the action taken by Government in this behalf;

(*c*) whether they are going to implement their decision?

Sri H. V. KOUJALGI (Minister for Revenue).—

(*a*) No.

(*b*) and (*c*) Do not arise in view of reply to clause (*a*) above.

Strength of Ministry of the State

455. Sri M. G. BANAKAR (Byadgi).—

Will the Chief Minister be pleased to state :—

(*a*) whether the Administrative Reforms Commission has made a suggestion that there must be only so many Ministers and Deputy Ministers for the State ;

(*b*) if so, whether they have implemented the same ;

(*c*) if not, the reason for the same ?

Sri VEERENDRA PATIL (Chief Minister).—

(*a*) No such suggestion has been received from the Administrative Reforms Commission.

(*b*) Does not arise.

(*c*) Does not arise.

Game Sanctuaries in the State

498. Sri L. SRIKANTAIAH (Nanjangud).—

Will the Minister of State for Forests be pleased to state :—

(*a*) the number of Game Sanctuaries in the State of Mysore ;

(*b*) the number of following animals below and above the age of five in the said sanctuaries :—

(i) Tigers
(ii) Panthers
(iii) Cheetah
(iv) Elephants
(v) Bears
(vi) Bisons
(vii) Wild dogs
(viii) Deers (including spotted)
(ix) Hyena
(x) Wolves

(*c*) the number and kind of animals in the reserved forest of the State of Mysore ;

(*d*) whether the Government have tried to breed girnar lions, rhinoceros ; hippos ; Jaugar ; Giraffe ; Zibra in the State forests of Mysore ?

Sri ALUR HANUMANTHAPPA (Minister of State for Forests).—

(*a*) Four.

(*b*) Not available,

(*c*) Number of animals not available. However, the following are the kinds of animals in the State reserved forests :—

Elephants ; Bison : Tigers : Panthers ; Sambhars ; Spotted Deer ; Wild Pigs ; Wild Dogs ; Jackals ; Bears ; Wolves ; Hyenas ; Barking Deer ; Mouse Deer ; Civet Cats ; Wild Cats ; Hares ; Malbar Squirrels ; Black Bucks: Crocodiles ; Mangooses ; Monkeys.

(*d*) No.

Creation of Zilla Parishad

499. Sri L. SRIKANTAIAH (Nanjangud).—

Will the Minister for Development be pleased to state :—

(*a*) whether Government is bringing any legislation for the creation of Zilla Parishads ;

(*b*) if so, when ;

(*c*) whether the Government is thinking of abolishing the Taluk Boards or Panchayats when these Zilla Parishads are created ?

Sri P. M. NADGOUDA (Minister for Development).—

(*a*) Yes.

(*b*) As early as possible.

(*c*) No.

Flood Control Irrigation Scheme

520. Sri TIRUMALA DEVARAYA (Gangavati).—

Will the Chief Minister be pleased to state :—

the total amount by way of grants and loans drawn from the Centre for the Centrally sponsored flood control irrigation scheme during the years 1966-67, 1967-68 ?

Sri VEERENDRA PATIL (Chief Minister).—

Nil.

Price Preference Scheme

537. Sri H. B. JWALANAIAH (Hassan).—

Will the Minister for Industries, Information and Publicity be pleased to state :—

whether Price preference scheme is strictly being followed by the Stores Purchase Department ?

Sri M. RAJASEKHARA MURTHY (Minister for Industries, Information and Publicity).—

Yes.

Allotment of Scooter

550. Sri R. M. HEGDE (Kumta).—

Will the Minister for Transport refer to the replies furnished in * Qn. No. 219 on 21-1-1969 and state :—

the reasons for my name not finding a place in the list of members who have applied though I had applied for an allotment of a Scooter in October 1967 ?

Sri MOHAMED ALI (Minister for Transport).—

The application of Sri R. M. Hegde, M. L. A. was by an oversight included in the applications of State Government Employees. The name of the Member has now been included in the list of applications from the Members of Legislature.

Merger of Belgaum in Goa

559. Sri D. B. KALMANKAR (Aland).—

Will the Chief Minister be pleased to state :—

(*a*) whether Belgaum is proposed to be merged in Goa under a new formula ;

(*b*) if so, the action the Government has taken to prevent it ?

Sri VEERENDRA PATIL (Chief Minister).—

(*a*) The State Government is not aware of any such proposal or the formula.

(*b*) Does not arise.

Request for a site by proprietor, 'Hindu' Paper

595. Sri C. K. RAJAIAH SHETTY (Chikkanayakanahalli).—

Will the Minister for Public Works be pleased to state :—

(*a*) whether the Proprietor of the Hindu Newspaper has requested the Government to allot a site for their office ;

(*b*) if so, whether any site has been allotted and if so, at what price and the area of the site so allotted ?

Sri K. LAKKAPPA (Minister for Public Works).—

(*a*) Yes.

(*b*) This is under consideration of Government.

Munsiff Magistrate Court at Shahapur

686. Sri BAPU GOWDA (Shahapur).—

Will the Miniser for Law, Labour and Parliamentary Affairs be pleased to state:—

(*a*) whether there is any representation for the establishment of Munsiff Magistrate Court at Shahapur (District Gulbarga) ;

(*b*) whether it has come to the notice of Government that the percentage of litigation of Shabapur Taluk is higher than of Shorapur Taluk ;

(*c*) the statistics of litigation (Civil and Criminal) of Shahapur Taluk and Shorapur Taluk since 1966 to 1968 ?

Sri K. PUTTASWAMY (Minister for Law, Labour and Parliamentary Affairs).—

(*a*) Yes.

(*b*) The High Court is of the opinion that the volume of Litigation in Shahapur Taluk is not sufficient for keeping a Munsiff Magistrate fully engaged.

(*c*) The High Court has been addressed in the matter and the information will be laid on the Table after its receipt.

Notice of Adjournment Motion *re*: alleged murder of an Agarabati Worker in Bangalore.

ಶ್ರೀ ವಾಟಾಳ್ ನಾಗರಾಜ್ (ಚಿಕ್ಕಪೇಟೆ)—ಈ ಬೆಂಗಳೂರು ನಗರದಲ್ಲಿ ಕಾಂಗ್ರೆಸ್ ವನ್ನು ಪ್ರದರ್ಶನ ನಡೆಯುತ್ತಾ ಇರುವುದಕ್ಕೆ ಸರ್ಕಾರದ ಸ್ಟಾರ್‌ಗಳನ್ನು ಕೊಟ್ಟು, ಲಕ್ಷಾಂತರ ರೂಪಾಯಿ

ಗಳನ್ನು ಕೊಡಬೇಕೆಂದಿರತಕ್ಕ ಒಂದು ವ್ಯವಹಾರ ಏನಿದೆ ಅದನ್ನು ನಿಲ್ಲಿಸುವ ಬಗ್ಗೆ ಚರ್ಚೆ ನಡೆಸ ಬೇಕೆನ್ನುವುದು ಒಂದು ವಿಷಯ. ಎರಡನೆಯದು ಸಿದ್ದಾಪುರ ಗುಡ್ಡದ ಪಾಳ್ಯ ಪ್ರದೇಶದಲ್ಲಿ ಪೋಲೀಸನವರು ಈಗ ಮೂರು ದಿವಸದ ಕೆಳಗೆ ಒಬ್ಬ ಮನುಷ್ಯನನ್ನು ಹಿಡಿದು ಅವಮಾನುಷವಾದ ರೀತಿಯಲ್ಲಿ ಕೊಂದು ಹಾಕಿದ್ದಾರೆ, ಆ ವಿಷಯದ ಬಗ್ಗೆ ಚರ್ಚೆಗೆ ಅವಕಾಶ ಕೊಡಬೇಕೆಂದು ನಾನು ಈಗಾಗಲೇ ಬರೆದು ಕಳುಹಿಸಿದ್ದೇನೆ ಅದಕ್ಕೆ ಅವಕಾಶ ಕೊಡಬೇಕು.

Mr. SPEAKER.—With respect to the adjournment motion referred to by hon. Member Sri Vatal Nagaraj, I have to say that he has moved only a resolution recommending certain action to be taken by the Government and has not referred to any incident either of past or present. Therefore I have disallowed it. If the hon. Member wants to say anything, he could make observation in the course of the general discussion on the Budget. I have disallowed it.

As regards the second matter referred to by hon. Member Sri Nagaraj, I have requested him to furnish certain details, so that I can consider whether the matter could be admitted.

ಶ್ರೀ ಎಸ್. ಶಿವಪ್ಪ (ಶ್ರವಣಬೆಳಗೊಳ).—ಶ್ರೀವಾನ್ ವಾಟಾಳ್ ನಾಗರಾಜ್‌ರವರು ಹೇಳಿರ ತಕ್ಕ ಎರಡನೆಯ ವಿಚಾರ ಬೆಂಗಳೂರು ನಗರದಲ್ಲಿ ಅಮೀರ್ ಅನ್ನುವವರನ್ನು ಕೊರೆ ಮಾಡಿರತಕ್ಕ ವಿಚಾರ. ಇದರಲ್ಲಿ ಪೋಲೀಸ್‌ನವರು ಪಾತ್ರವಹಿಸಿದ್ದು ಪತ್ರಿಕೆಗಳಲ್ಲಿ ಬಂದಿದೆ, ನಗರದಲ್ಲಿ ಇದು ಎಲ್ಲರಿಗೂ ತಿಳಿದಿರತಕ್ಕ ವಿಚಾರ, ಈ ವಿಚಾರದಲ್ಲಿ ಇನ್ನೂ ಹೆಚ್ಚು ವಿವರಣೆ ಕೊಡಬೇಕೆನ್ನುವುದರಲ್ಲಿ ಅರ್ಥವಿಲ್ಲ. ಆದ್ದರಿಂದ ಸಭಾಪತಿಯವರು ಇವತ್ತೇ ಇದಕ್ಕೆ ವಿಶೇಷ ಅನುಮತಿಯನ್ನು ಕೊಟ್ಟು, ಇದು ಅವಸರದ ವಿಷಯ ಎಂದು ಪರಿಗಣಿಸಿ ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ಹೇಳುತ್ತೇನೆ ಮತ್ತು ಸರ್ಕಾರದವರು ಈ ಸಭೆಗೆ ಉತ್ತರ ಕೊಡುವುದು ಒಳ್ಳೆಯದು ಎಂದು ಭಾವಿಸುತ್ತೇನೆ.

Sri VEERENDRA PATIL (Chief Minister).—Sir, I am told that a calling attention notice has been tabled on the subject. So far as I am concerned, I am prepared to make a statement even to-day.

Mr. SPEAKER.—There is already a call attention notice admitted on this subject. It will come up to-day or tomorrow.

ಶ್ರೀ ವಾಟಾಳ್ ನಾಗರಾಜ್.—ಅಧ್ಯಕ್ಷರೇ, ಇದು ನಾಳೆ ಬರತಕ್ಕ ಪ್ರಶ್ನೆ ಅಲ್ಲ ಇದು. ಅತಿ ಮುಖ್ಯವಾದುದು ಇಡೀ ರಾಜ್ಯದ ಜನ ನೋಡುತ್ತಾ ಇರುವುದು, ಪೋಲೀಸನವರು ಯಾವ ಮಟ್ಟಕ್ಕೆ ಹೋಗಿದ್ದಾರೆ ಎಂದರೆ ಅವರ ಧಾಳಿಗೆ ಸಿಕ್ಕಿದ ಮನುಷ್ಯರನ್ನು ಇಲಿಗಳಂತೆ ಕೊಲ್ಲುತ್ತಾ ಇದ್ದಾರೆ. ಅವರಿಗೆ ರಕ್ಷಣೆಯನ್ನು ಕೊಟ್ಟರೆ ಬಹಳ ಅನ್ಯಾಯವಾಗುತ್ತದೆ ಆದ್ದರಿಂದ ಈ ವಿಷಯವನ್ನು ಚರ್ಚೆ ಮಾಡಲು ಈಗಲೇ ಅವಕಾಶ ಕೊಡಬೇಕು ಮತ್ತು ಮುಖ್ಯಮಂತ್ರಿಗಳು ಉತ್ತರ ಕೊಡಬೇಕು ಎಂದು ಮನವಿಮಾಡಿಕೊಳ್ಳುತ್ತಾ ಇದ್ದೇನೆ.

So far as Mysore is concerned, the budget mentions the Fourth Plan quantum as Rs. 440 crores. Various district plans have also been drawn up in our State. I would straightaway say that it would be a misnomer to call these things a plan; whether it is Rs. 440 crores for the State or the District plans, it is a misnomer to call them a plan because they have no reference to the available resources. They are expression of our needs and they are not directly related to resources in sight. As a matter of fact, I do not think I would be divulging any secret if I said that the demands of various Departments in Mysore State total to something like Rs. 550 crores. This is what they would like to have. Rs. 440 crores is a sort of plan that Mysore ought to have if the present tempo of development is to be maintained. But I want to make it clear that it is need-based and not based upon actual resources. Therefore, when I took part in the Debate on the Governor's address, I pointed out that on the basis of existing resources, the plan for Mysore State can be of the order of Rs. 250 crores. Even this Rs. 250 crores assumes Central assistance of Rs. 225 crores. In case something happens to this assumption of Rs. 225 crores from the Centre, then to that extent this figure of Rs. 250 crores for the State would naturally be affected

Now in para 11 of the Budget speech, the Finance Minister has stated:

> "The State Government can take a final view only after decisions are taken on certain important questions like the size of the Central Plan, rescheduling of loans, our ability to hold the price line, State's share of additional taxation by Government of India and other matters."

Sir, in this context, I would like to say that what is really needed is not just isolated effort in individual States but a national policy to ensure that revenue resources in the country as a whole keep pace with our expenditure on social services, routine administration and interest. There is imbalance in the whole country. So the National Development Council must evolve some policy to ensure that our revenue resources keep pace with our expenditure on social services, administration and interest or putting it the other way, our expenditure on social services, administration and interest should be within our revenue resources. Secondly loan finance, should be used for projects which yield adequate return, which I said so often, and I would like to emphasise again. There is very little chance of major irrigation projects coming up either in Mysore or in any other part of the country unless we can show that these projects can be made to give or yield an adequate return.

I think the expression deficit financing is being used very loosely. There can be no such thing as deficit financing so far as a State is concerned. It is a misnomer for anybody to talk of deficit financing at the State level because there can be no deficit financing at the State level. It is printing of notes and increasing the quantity of money which only the Central Government or the Reserve Bank can do. All that we can do is for the State to run overdrafts and the Central Government be indulgent towards these things. That is not deficit financing. There is no meaning to that expression at the State level. The thing which comes nearest to deficit financing at State level is illegal printing of notes by certain individuals who do not have any very great respect for law.

Now, Sir, I would like to spend a few minutes on this idea of what the agriculture sector is expected to do. It has been stated that a section of the agriculturists who are benefited could contribute more. This is the major impression in the country. Now, this needs to be clarified. I myself do not understand why there should be such wild divergence in the water rate from State to State. The divergence is of the order of Rs. 30 to Rs. 300. This is a thing which nobody will be able to satisfactorily explain. This is a legitimate area where common policy evolved by these four States is likely to benefit everybody. Now, so far as taxation is concerned, there are practical difficulties in separating the affluent farmer from the rest of the agriculturists. Take for instance the Thungabhadra project. We all think of Thungabhadra as irrigated area. Not many people know that a large number of ayacatdars do not get water and it is only when the water is utilised that taxable capacity goes up. It has been estimated that if one makes a capital investment of Rs. 500 per acre, it is possible to level all the land and bring water to every field. Rs. 500 per acre investment is not a big thing. If this is done the taxable capacity will be increased. Taxing is not a simple thing. There are so many complicated administrative problems. But the Administration should find feasible methods of increasing the income. I would say while taxing the agriculturists, one has to be very cautious. I cannot

(SRI M. Y. GHORPADE)

resist the temptation of commenting on the tax on fertilizer imposed by the Central Government It is extremely shortsighted and wrong and detrimental to farmers. I cannot understand the principle of the Centre in taxing fertilizer. It is well known that the price of fertiliser is several times higher than in many other countries. That being the case and also taking into account that we in India use only 1/90 of nutrients per acre as compared to Japan, I do not know how the Government of India thought of taxing fertilizer. Strictly speaking I should not comment on this because it is in the Central Budget. But agriculture is a State subject and it affects the Farmers. Therefore I am within my powers to comment on that Suffice it to say that any taxations direct or indirect, apart from the constitutional implications should be done in consultation with the States and nothing can be implemented without their co-operation. One has to be cautious while separating the affluent farmers and trying to increase the tax on them from out of their increased earnings one has to be very cautious about general taxation on agriculture.

In para 21 of the speech of the Finance Minister, he has said that steps have been taken to evolve a practical price policy in regard to maize. I am glad he has taken a very right step in regard to this commodity. The main reason for steep fall in the price of maize was, import of maize from other countries. Steps have been taken to stop this so that there will be stability in the price of this commodity. I take this opportunity to emphasise that unless the Central Government with the co-operation of the State Governments fixes the floor price for agricultural commodities, this kind of thing is bound to happen. Last year, there was no machinery to lift the surplus wheat in Punjab to other parts of the country. Such things could be avoided if precautionary measures are taken. Therefore fixing a remunerative floor price is a very important thing, otherwise the green revolution will fail.

Then I come to digging of wells for irrigation purposes. It is stated that about 20 thousand wells have been taken up. But the people want more wells. However this is a step in the right direction. It is stated that there is surplus power. It is likely to be temporary phase. I would emphasise that before the phase is over, something should be done about rural electrification in the Mysore State. We should take full advantage of the power.

In para 29, the Finance Minister has dealt with drinking water wells. I would congratulate the Government for having made provision to complete all the drinking wells and to provide wells to all the villages.

In para 46, the Finance Minister has asked whether Government should go on supporting public Sector Undertakings indefinitely even at the cost of other Sectors of the Economy. He has posed that question. I would like to put a different question. Why the public

Sector Undertakings should not make profit? The Finance Minister has stated that " Huge sums of money have been locked up in public sector undertakings. Out of a total investment of about Rs. 2,41 crores at the end of 1966-67, nearly 40 per cent was attributed to Steel Industry. Why not these make profit is the question. Private people could not have invested so much money in the steel industry. Why these public sector industries are not making profit is to be examined. Even the Private Sector industries depend largely on finance from Centre. The difference is only in management and investment Planning. Even the Bhadravathi Iron and Steel works is not making as much profit as it ought to. The Estimates Committee of this Legislature is examining this question.

Regarding Mineral development, I want to say one or two words. The Central Government has planned to exploit mineral wealth. There is mineral wealth in Donimalai, Ramadurga and Kudremukh. The National Mineral Development Corporation charges an outlay of about Rs. 200 to 250 Crores on these three projects. It is equal to our State IV plan. It is clearly a Central responsibility. Our Government should press the Central Government to take up these projects expeditiously.

In para 66, the Finance Minister has stated that " concerted action is also necessary against those who are responsible for heavy overdues in certain areas which has come in the way of further inflow of credit and has done a positive harm to the growth of economy." I ask why don't you do it, because there is no difference of opinion on this. We expect the Government to give out what specific measures it is going to take in regard to a matter which has been so clearly and forcefully stated in para 66.

Then the Finance Minister has also said that all steps will be taken to avoid extravagance. I feel that this word extravagance has lost much of its meaning in the absence of clear-cut priorities of financing development on the basis of scientific norms. For this, I have already said enough as to what should be done and I hope that the NDC will take necessary corrective steps in this regard.

Before concluding, I wish to say that the problem of financial planning must be viewed in its totality and not in isolation. This is a thing which no State Government can solve by itself. This country is politically divided for administrative purposes. But so far as planning is concerned, if planning is to survive in this country, the whole country must be treated as one economic unit. There are no short-cut solutions to it. I do hope that the political leadership in the different States will rise to the occasion to protect planning and prosperity in our land.

I probably would not be going outside my field if I mentioned certain sad political activities that are taking place in the different States. Parochial disruptionist and fascist elements like SHIV SENA are masquerading in almost all the States in varying degrees and in varying forms—These are elements which are obviously disruptionist,

(SRI M. Y. GHORPADE)

parochial, narrow minded and fascist, and should not receive any quarter from the public or popular Governments in our country. I say this because, it is only when we have a happy climate that rational decisions can be taken and correct rational decisions are the secret of the success of planning, and the very survival of planning in our country. Thank you.

† ಶ್ರೀ ಕೆ. ಪಿ. ನಾಡಗೌಡ (ಮುಧೋಳ್).—ಸಭಾಧ್ಯಕ್ಷಣಿಯವರೇ, ಸಾಮಾನ್ಯವಾಗಿ ಬಜೆಟ್ಟಿನ ಮೇಲೆ ಮಾತನಾಡುವಾಗ ಬಜೆಟ್ಟಿನಲ್ಲಿ ಯಾವ ಯಾವ ಶಾಖೆಗೆ ಹಣವನ್ನು ಯಾವ ಯಾವ ರೀತಿಯಲ್ಲಿ ಹಂಚಿದ್ದಾರೆ, ಅದರಲ್ಲಿ ನ್ಯಾಯ ದೊರಕಿದೆಯೇ, ಇಲ್ಲವೇ, ಎಂಬ ಮಾತನ್ನು ಅರ್ಥ ಮಂತ್ರಿಗಳು ಮಂಡಿಸಿದ ಬಜೆಟ್ಟಿನಲ್ಲಿ ಕಂಡುಬರುತ್ತದೆ, ದೋಷವನ್ನು ಎತ್ತಿ ಸ್ಪಷ್ಟವಾಗಿ ತೋರಿಸ ಬಹುದು. ಆದರೆ ಈ ಬಜೆಟ್ಟನ್ನು ವಿರೋಧಿಸಿ ಮಾತನಾಡುವುದಕ್ಕಿಂತ ಅನಿವಾರ್ಯವಾಗಿ ನಾನು ಸ್ವಾಗತಿಸಿ ಮಾತನಾಡುತ್ತಿದ್ದೇನೆ. ಏಕೆಂದರೆ ವಿರೋಧಿಸಿ ಮಾತನಾಡಿದರೆ ಗೋರ್ಕಲ್ಲು ಮೇಲೆ ಮಳೆ ಸುರಿದಂತೆ ಆಗುವುದು. ಅಷ್ಟು ವಿನಾ ಇನ್ನೇನೂ ಇಲ್ಲ. ಈ ಬಜೆಟ್ಟಿನಲ್ಲಿ, ಬಜೆಟ್ ಭಾಷಣ ದಲ್ಲಿರುವ ಸ್ವಾಗತಾರ್ಹವಾದ ಅಂಶವೆಂದರೆ ಕಾಂಗ್ರೆಸ್ ಸರ್ಕಾರ ತಪ್ಪುಮಾಡಿದ್ದನ್ನು ಈವರೆಗೆ ಒಪ್ಪಿಕೊಂಡಿರಲಿಲ್ಲ, ಸ್ವಲ್ಪಮಟ್ಟಿಗೆ ಅರ್ಥ ಮಂತ್ರಿಗಳು ಈಗ ಒಪ್ಪಿಕೊಂಡಿದ್ದಾರೆ, ಪಬ್ಲಿಕ್ ಸೆಕ್ಟಾರಿನಲ್ಲಿ ಹಾನಿಯಾಗುತ್ತಿದೆ ಎಂದು ಒಪ್ಪಿದ್ದಾರೆ. ಶಿಕ್ಷಣದ ಬಗ್ಗೆ ಹೇಳುತ್ತಾ ಗುಣಮಟ್ಟದಲ್ಲಿ ಅದು ಕೆಳಗಿಳಿದಿದೆ ಎಂದು ಒಪ್ಪಿಕೊಂಡಿದ್ದಾರೆ. ಪ್ರಗತಿಯನ್ನು ಸಾಧಿಸಲು ತಪ್ಪನ್ನು ಒಪ್ಪಿಕೊಂಡಿರುವುದು ಬಜೆಟ್ಟಿನ ಭಾಷಣದಲ್ಲಿ ಕಂಡುಬರುತ್ತದೆ ಇದು ಆನಂದದ ಸಂಗತಿ.

ಇನ್ನು ಶಿಕ್ಷಣ ಶಾಖೆಯಮೇಲೆ ಮಾತನಾಡಬೇಕಾದರೆ, ಈ ಸಲ 325 ಗ್ರಾಜುಯೇಟ್ ಟೀಚರ್ಸನ್ನು ಪ್ರೌಮರಿ ಶಾಲೆಗಳಿಗೆ ಹೆಡ್‌ಮಾಸ್ಟರುಗಳಾಗಿ ನೇಮಕಮಾಡುವುದಾಗಿ ಹೇಳಿದ್ದಾರೆ. ಇದನ್ನು ಬಹಳ ಯೋಗ್ಯ ರೀತಿಯಿಂದ ಹೇಳಿ ಮಂತ್ರಿಗಳು ಮಾಡಿತೋರಿಸುತ್ತಿದ್ದಾರೆ. ಮುಧೋಳ್ ತಾಲ್ಲೂಕಿನಲ್ಲಿ ಮಾಲಂಗಪುರ, ಮುಧೋಳ್ ಮತ್ತು ಲೋಕಾಪುರ ಎಂಬ 3 ದೊಡ್ಡ ಪಟ್ಟಣಗಳಿವೆ. ಲೋಕಾಪುರ ಮತ್ತು ಮಾಲಂಗಪುರ ಪ್ರೌಮರಿ ಶಾಲೆಗಳಲ್ಲಿ ಗ್ರಾಜುಯೇಟ್ ಉಪಾಧ್ಯಾಯರನ್ನು ನೇಮಕಮಾಡಿದ್ದಾರೆ. ಆದರೆ ತಾಲ್ಲೂಕು ಹೆಡ್‌ಕ್ವಾರ್ಟರಾಗಿರುವ ಮುಧೋಳ್‌ನಲ್ಲಿ ನೇಮಕ ಮಾಡಿಲ್ಲ. ಮಹಾಕವಿಚಕ್ರವರ್ತಿ ರನ್ನನಿಗೆ ಜನ್ಮ ಕೊಟ್ಟಿರುವ ಅಂಥ ಪಟ್ಟಣದಲ್ಲಿ ಪ್ರೌಮರಿ ಶಾಲೆಗೆ ಒಬ್ಬ ಪದವೀಧರ ಹೆಡ್‌ಮಾಸ್ಟರನ್ನು ನೇಮಕಮಾಡಿಲ್ಲ ಯಾರನ್ನೂ ನೇಮಕಮಾಡಿದ್ದಾರೆ, ಅಲ್ಲಿ ಹೊಸ ಥೋರಣ್ ಪ್ರಕಾರ ಸರಿಯಾದವರನ್ನು ನೇಮಕಮಾಡಿಲ್ಲ. ಏಕೆಂದರೆ ಈ ಮಂತ್ರಿ ಮಂಡಲದಲ್ಲಿ ನಮ್ಮ ಜಿಲ್ಲೆ ವಿಷಯದಲ್ಲಿ, ಉತ್ತರ ಕರ್ನಾಟಕ ಜಿಲ್ಲೆ ವಿಷಯದಲ್ಲಿ ಸಲಹೆ ಕೊಡುವ ಮಂತ್ರಿಗಳಿದ್ದಾರೆ, ಅವರು ಶಕುನಿಯಂತೆ ಕೆಲಸಮಾಡುತ್ತಿದ್ದಾರೆ. ಅವರು ಯಾರೆಂದರೆ ಸಹಕಾರ ಮಂತ್ರಿಗಳಾದ ನಾಡಗೌಡರು. ಬಾಗಲುಕೋಟೆ ತಾಲ್ಲೂಕಿನಲ್ಲಿ ಚುನಾವಣೆಯಾದಾಗ ಮತಗಳ ಎಣಿಕೆ ಆಗುವಾಗ ಅವರನ್ನು ಹೊರಗೆ ಕೂಡಿರಿ ಎಂದು ಸಂಬಂಧಪಟ್ಟ ಅಧೀನರು ಹೇಳಿದರಂತೆ. ಅವರು ಇನ್ನೊಂದು ಖಾತೆಯ ಮಂತ್ರಿಗಳಾದ ಕೌಜಲಗಿ ವಿಚಾರದಲ್ಲಿ ಪ್ರವೇಶಿಸಿ ಅವರ ಫೈಲನ್ನು ಡೀರ್ ಮಾಡಬಹುದೇ ? ತಮಗೆ ತೊಂದರೆ ಮಾಡಿದವರಿಗೆ ವರ್ಗಮಾಡಲು ಅವರು ಪ್ರಯತ್ನಮಾಡ ಬಹುದೇ ಎಂಬುದನ್ನು ವಿಚಾರಮಾಡಬೇಕು. ಶಿಕ್ಷಣ ಮಟ್ಟವನ್ನು ಸುಧಾರಣೆ ಮಾಡಬೇಕು ಎಂದು ಹೇಳುವಾಗ ಮಂತ್ರಿಗಳು ನಿಜವಾಗಿಯೂ ಕೂಡ ಆದಳತದಲ್ಲಿ ಕೈಹಾಕಬಾರದು. ಒಬ್ಬರ ಶಾಖೆಯಲ್ಲಿ ಇನ್ನೊಬ್ಬ ಮಂತ್ರಿಗಳು ಕೈಹಾಕಬಾರದು. ಮಂತ್ರಿಗಳು ತಮ್ಮ ಹೆಸರನ್ನು ಉಳಿಸಿ ಕೊಳ್ಳುವುದಕ್ಕಾಗಿ ಮಾಡಬಾರದ ಕೆಲಸ ಮಾಡಬಾರದು.

ಇನ್ನು ದೊಡ್ಡ ನೀರಾವರಿ ಸಲುವಾಗಿ ಸುಮಾರು 13 ಕೋಟಿ ರೂಪಾಯಿಗಳನ್ನು ಅಂದಾಜು ಪತ್ರದಲ್ಲಿ ಕೊಟ್ಟಿದ್ದಾರೆ. ಆದರಲ್ಲಿ ಘಟಪ್ರಭ ನದಿಗೆ ಒಡ್ಡುಹಾಕುವುದಕ್ಕೆ 3 ಕೋಟಿ, ಮಲಪ್ರಭ ಯೋಜನೆಗೆ ಎರಡೂವರೆ ಕೋಟಿ, ಆಪ್ಪರ್ ಕೃಷ್ಣ ಯೋಜನೆಗೆ 2 ಕೋಟಿ ಹೀಗೆ ಸುಮಾರು 8 ಕೋಟಿ ರೂಪಾಯಿಗಳ ಅಂದಾಜಿದೆ, 5 ಕೋಟಿ ರೂಪಾಯಿಗಳು ಬೇರೆಬೇರೆ ಸ್ಥಳಗಳಲ್ಲಿ ಬೇರೆಬೇರೆ ನೀರಾವರಿ ಯೋಜನೆಗಳಿಗೆ ಎಂದು ಗೊತ್ತುಮಾಡಿದ್ದಾರೆ.

ಈ ಸಂದರ್ಭದಲ್ಲಿ ಸರ್ಕಾರದವರಿಗೆ ಒಂದು ಸಲಹೆಯನ್ನು ಕೊಡಬಯಸುತ್ತಾ ಇದ್ದೇನೆ. 5 ಕೋಟಿ ರೂಪಾಯಿ ಎಂದರೆ ಬಹಳ ಸಣ್ಣ ಮೊತ್ತ ಎಂದು ತಿಳಿದುಕೊಳ್ಳಬಾರದು, ಈ 5 ಲಕ್ಷ ರೂಪಾಯಿಗಳಿಂದ ಎಲ್ಲೆಲ್ಲಿ ಏನೇನು ಮಾಡಿತು ಅನ್ನುವುದರ ಬದಲಾಗಿ ಇದೇ ಹಣವನ್ನು ಖರ್ಚು

ಮಾಡಿದ್ದೇ ಆದರೆ ಮಲಪ್ರಭಾ ಮತ್ತು ಘಟಪ್ರಭಾ ಈ ಎರಡು ಯೋಜನೆಗಳೂ ಕೂಡ ಮುಗಿದು ಹೋಗಬಹುದು, ಈ ಅಣೆಕಟ್ಟು ಮುಗಿಯುವುದರೊಳಗಾಗಿ ಬಲದಂಡೆ ಮತ್ತು ಎಡದಂಡೆ ಕಾಲುವೆಗಳನ್ನು ಅಗೆಯುವುದಕ್ಕೆ ಈಗಿನಿಂದಲೇ ಪ್ರಾರಂಭ ಮಾಡಿದರೆ ಅಲ್ಲಿನ ರೈತರಿಗೆ ಒಮ್ಮೆಲೆ ನೀರಾವರಿ ಸೌಲಭ್ಯ ಸಿಕ್ಕುತ್ತದೆ ಮತ್ತು ಪಕ್ಕಲಿಗರ ಅಭಿವೃದ್ಧಿಯಾಗುತ್ತದೆ, ದೊಡ್ಡ ಲಾಭವಾಗುತ್ತದೆ ಎಂಬ ಅಂಶವನ್ನು ಸರ್ಕಾರದವರ ಗಮನಕ್ಕೆ ತರುತ್ತಾ ಇದ್ದೇನೆ.

ಇನ್ನು ಆಡಳಿತೆಯಲ್ಲಿ ದೋಷ ಕಂಡುಬಂದಿರುವುದು. ಮಂತ್ರಿಗಳ ಕೈವಾಡ ಬಹಳ ಇದೆ. ಎಲ್ಲಿ ತಮಗೆ ಬೇಕಾದವರು ಇದ್ದಾರೋ ಅವರು ಎಲ್ಲಿ ಇಷ್ಟಪಡುತ್ತಾರೋ ಅಲ್ಲಿ ಇರುವುದಕ್ಕೆ ಅವಕಾಶ ಇದೆ. ಆಯಾ ತಾಲ್ಲೂಕಿನಲ್ಲಿಹಿವರು ಉತ್ತಮವಾಗಿ ಕೆಲಸ ಮಾಡುವುದಿಲ್ಲ ಎಂದು ಹೇಳಿ ಆ ತಾಲ್ಲೂಕಿನ ಪ್ರತಿನಿಧಿಗಳು ಬಂದು ಹೇಳಿದಾಗ ವಿರೋಧ ಪಕ್ಷದವರು ಹೇಳುತ್ತಾರೆ ಅಂತ ತಿಳಿದು ಕೊಂಡು ಅವರನ್ನು ಅಲ್ಲಿಯೇ ಇಡುವುದು, ಉತ್ತಮವಾಗಿ ಕೆಲಸಮಾಡುವವರನ್ನು ಬೇರೆ ಕಡೆಗೆ ವರ್ಗಾಯಿಸುವುದು ಕಂಡುಬರುತ್ತಾ ಇದೆ. ಅವಕ್ಕಾಗಿ ಮಾನ್ಯ ಮುಖ್ಯಮಂತ್ರಿಗಳವರ ಗಮನಕ್ಕೆ ಒಂದು ವಿಚಾರವನ್ನು ತರಬಯಸುತ್ತಾ ಇದ್ದೇನೆ. ಶುದ್ಧವಾದ ಆಡಳಿತೆಯನ್ನು ರಾಜ್ಯದಲ್ಲಿ ಇಟ್ಟುಕೊಂಡು ಹೋಗಬೇಕೆನ್ನುವ ಇಚ್ಛೆ ಅವರಿಗೆ ಇದ್ದದ್ದೇ ಆದರೆ ಅವರು ತಮಗೆ ಇರತಕ್ಕ ಶಾಖೆಗಳ ಪೈಕಿ ಕೆಲವನ್ನು ಬೇರೊಬ್ಬ ಮಂತ್ರಿಗಳಿಗೆ ಒಪ್ಪಿಸಿಕೊಟ್ಟು ಆಡಳಿತ ಸುಧಾರಣಾ ಸಮಿತಿಯವರು ಏನು ಶಿಫಾರಸು ಮಾಡಿದ್ದಾರೆಯೋ ಆ ಪ್ರಕಾರ ಕೆಲಸ ಮಾಡಬೇಕು. ಏಕೆಂದರೆ ಅವರು ಈ ಮಂತ್ರಿಮಂಡಲವನ್ನು ರಚನೆ ಮಾಡುವಾಗ ತಮಗೆ ಎಷ್ಟು ಎಷ್ಟು ಜನ ಎಂ. ಎಲ್. ಎ. ಗಳು ಸಹಾಯ ಮಾಡುತ್ತಾರೆ ಎಂಬುದನ್ನು ಗಮನದಲ್ಲಿಟ್ಟುಕೊಂಡು ಇಷ್ಟು ಮಂತ್ರಿಗಳ ಸ್ಥಾನವನ್ನು ಭರ್ತಿ ಮಾಡಿಕೊಂಡಿದ್ದಾರೆ. ಒಂದು ಉದಾಹರಣೆ ಹೇಳುವುದಾದರೆ, ಸಹಕಾರ ಮಂತ್ರಿಗಳ ಮನೆಗೆ ತಾವು ಸಹ ಹೋಗಿ, ಕನ್ನಡ ಶಾಲೆಯ ಮಾಸ್ತರು ಅಲ್ಲ. ಸೊಸೈಟಿ ಸೆಕ್ರೆಟರಿಗಳು ಅಲ್ಲ, ಆಫೀಸರ್ರು ತಮ್ಮ ಕಾರನ್ನು ಕ್ಯೂ ಹಚ್ಚಿಕೊಂಡು ಅವರ ಬಂಗಲೆಯಲ್ಲಿ ಅವರಿಗಾಗಿ ಕಾಯುತ್ತಾ ಇರುವುದನ್ನು ಕಾಣಬಹುದು. ಹೀಗಾದರೆ ಆಡಳಿತ ಎಷ್ಟು ಹದಗೆಟ್ಟಿದೆ ಎಂಬುದನ್ನು ತಾವೇ ವಿಚಾರ ಮಾಡಿಕೊಳ್ಳಿ. ಇದಕ್ಕೆ ಕಾರಣವೇನೆಂದರೆ ಅವರು ಏನಿದ್ದರೂ ಮಾಡಿಕೊಡುತ್ತಾರೆ, ಅಯೋಗ್ಯವಾದದ್ದೂ ಇದ್ದರೂ ಸುದಾ ಮಾಡಿಕೊಡುತ್ತಾರೆ. ಒಬ್ಬ ಆಫೀಸರನ್ನು ಒಂದು ಜಿಲ್ಲೆಯಿಂದ ಕಿತ್ತಿ ಇನ್ನೊಂದು ಜಿಲ್ಲೆಗೆ ಹಾಕುವಾಗ ತಮಗೆ ಬೇಡವಾದವರನ್ನು ರೀಪ್ಲೇಸ್ ಮಾಡಲು ಪ್ರಯತ್ನ ಮಾಡಿದರೆ ಅದರಿಂದಾಗತಕ್ಕ ಅನಾನುಕೂಲತೆಯನ್ನು ಗಮನದಲ್ಲಿಟ್ಟುಕೊಳ್ಳಬೇಕು. ಹಾಗೆ ಮಾಡಿದರೆ ಇವರು ತಮ್ಮವರು ತಮಗೆ ಬೇಕಾದಂತೆ ಸಹಾಯ ಮಾಡಬೇಕು ಎಂಬ ಮನೋವೃತ್ತಿಯನ್ನು ಇಟ್ಟುಕೊಂಡರೆ ನಿಜವಾಗಿಯೂ ಕಲ್ಯಾಣ ರಾಜ್ಯವನ್ನು ಕಟ್ಟಬೇಕೆಂದು ನಮ್ಮ ಸರ್ಕಾರದವರು, ಕೇಂದ್ರ ಸರ್ಕಾರದವರು ಮತ್ತು ನಮ್ಮ ರಾಷ್ಟ್ರದ ನಾಯಕರು ಏನು ಉದ್ದೇಶ ಇಟ್ಟುಕೊಂಡಿದ್ದಾರೆ ಅದು ಸಾಧ್ಯವಾಗದ ಮಾತಾಗುತ್ತದೆ. ತಮ್ಮನ್ನೇ ತಾವು ತಿಳಿದುಕೊಳ್ಳದೇ ಇರತಕ್ಕ ಜನರಿಂದ ಕಲ್ಯಾಣ ರಾಜ್ಯವಾಗುವುದಿಲ್ಲ. ಮಂತ್ರಿಗಳ ಸ್ಥಾನಕ್ಕೆ ಅರ್ಹತೆ ಇದ್ದ ಜನ ಬೇಕು ಅನ್ನುವಂತಹ ಮಾತಿಗೆ ಮಹಾಭಾರತದಲ್ಲಿ ಒಂದು ಪದ್ಯ ಬರುತ್ತದೆ ಅದನ್ನು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ. ಅದು ಈ ರೀತಿ ಇದೆ :—

ಗುರು ದೀಕ್ಷಾವಿಧಿಗಳ್ಗೆ ಮಂತ್ರಿ ಹಿತಕಾರ್ಯಾಲೋಚನಕ್ಕಾಳ್ದನು।
ರ್ವರೆಯಂ ಕಾವಗುಣಕ್ಕೆ ನರ್ಮಸಚಿವಂ ಕ್ರೀಡಾರಸಕ್ಕಾನೆಯಾಳ್।।

ಗುರುಭಾರರ್ತ್ರಿವಾಳ್ ರಣಕ್ಕೆ ತುಳಿವಾಳ್ ಕಚ್ಚಾಯದೋಳ್ ಮೇಳದಾಳ್।
ಪರಿಹಾಸಕ್ಕೆನಿರ್ದನೆಂತು ಮರೆವಂ ದುರ್ಯೋಧನಂ ಕರ್ಣನಂ।।

ಗುರು ದೀಕ್ಷಾ ವಿಧಿಗಳನ್ನು ಕೊಡಬೇಕಾಗಿದ್ದರೆ ಅತ ಗುರುವಾಗಿರಬೇಕು. ಅದೇ ರೀತಿ ಮಂತ್ರಿಗಳು ಯಾವುದಾದರು ಉದ್ಘಾಟನೆ ಮಾಡಬೇಕಾಗಿದ್ದರೆ, ಫೌಂಡೇಷನ್ ಹಾಕುವಾಗ ಹೋಗಿ ಆ ಸ್ಥಾನವನ್ನು ಪರೀಕ್ಷೆ ಮಾಡಿ ನಂತರ ಮುಂದಿನ ಕೆಲಸಕಾರ್ಯಗಳನ್ನು ಮಾಡಬೇಕು. ಮಂತ್ರಿಗಳು ಬಂದಿದ್ದಾರೆ ಎಂದು ಎಫ್ಲೋಜನ ಸಾರ್ವಜನಿಕರು ಆ ಸಮಾರಂಭಗಳಿಗೆ ಬರುತ್ತಾರೆ ಅಲ್ಲಿ ದೋಷ ಏನೇ ಇದ್ದರೂ ಅದನ್ನು ಗಮನಿಸುವುದಿಲ್ಲ, ಸರಿಯಾಗಿ ನೆಲ ಅಗಿದಿರುವುದಿಲ್ಲ ಅಲ್ಲಿಯೇ ಎಲ್ಲೊ ಒಂದು ಕಡೆ ಕಲ್ಲನ್ನು ಇಟ್ಟು ಮಾನ್ಯ ಮಂತ್ರಿಗಳು ಬರುತ್ತಾರೆ, ಇದು ಸರ್ವಥಾ ಸರಿಯಾದ್ದಲ್ಲ. ಅಲ್ಲಿ ಕಟ್ಟಡ ಕಟ್ಟಿದರೆ ಬಾಳಬಹುದೇ ಎಂಬುದನ್ನು ನೋಡಿಕೊಂಡು ಫೌಂಡೇಷನ್ ಹಾಕಿ. ಈ ರೀತಿ ಮಾಡದೇ ಹೋದರೆ ನಿಮ್ಮ ಹೆಸರಿಗೆ ಒಳ್ಳೆಯ ಕೀರ್ತಿ ಬರುವುದಿಲ್ಲ. ಮಾನ್ಯ ಮಂತ್ರಿಗಳು ಯಾವ ರೀತಿ ಇರಬೇಕೆನ್ನುವುದನ್ನು ತಿಳಿದುಕೊಳ್ಳಬೇಕು.

(ಶ್ರೀ ಕೆ. ಪಿ. ನಾಡಗೌಡ)

ಬೆಳಗಾಂ ಶಹರದ ಮುನಿಸಿಪಾಲಿಟಿಯವರು ಒಂದು ಠರಾವನ್ನು ಮಾಡಿಕೊಂಡಿದ್ದಾರೆ, ಶಿವಸೇನೆ ಮಾಡಿದ ಕೃತ್ಯ ಯೋಗ್ಯ ಅನ್ನುವಂತಹ ರೀತಿಯಲ್ಲಿ ಠರಾವು ಮಾಡಿದ್ದಾರೆ, ಅಂತಹ ಕಡೆ ಇಂಡಸ್ಟ್ರೀಸನ್ನು ಬೆಳೆಸಬೇಕೆಂದು ಅನ್ನುತ್ತೀರಿ, ಮಹಾರಾಷ್ಟ್ರದಿಂದ ಇಂಡಸ್ಟ್ರಿಯಲಿಸ್ಟ್ಸನ್ನು ತಂದು ಬೆಳಗಾಂದಂತಹ ಊರಿನಲ್ಲಿ ಅವರಿಗೆ ಅನುಕೂಲ ಮಾಡಿಕೊಟ್ಟದ್ದೇ ಆದರೆ ಮಹಾರಾಷ್ಟ್ರಿಗರ ಸಂಖ್ಯೆ ಅಲ್ಲಿ ಮತ್ತಷ್ಟು ಬೆಳೆದು ಬೆಳಗಾಂ ನಮ್ಮ ಕೈ ಬಿಡುವ ಸಂಭವ ಬರುತ್ತದೆ. ಮೈಸೂರಿನವರು ಯಾರಾದರೂ ಇಂಡಸ್ಟ್ರಿಯಲಿಸ್ಟ್ಸು ಇದ್ದರೆ ಅವರಿಗೆ ಸರ್ಕಾರದವರು ಸಾಕಾದಷ್ಟು ಮದತ್ತು ಮಾಡಿ ಬೆಳಗಾಂನಲ್ಲಿ ಇಂಡಸ್ಟ್ರೀಗಳನ್ನು ತೆರೆಯಿರಿ. ನಿಮಗೆ ಬೇಕಾದಷ್ಟು ಸೌಲಭ್ಯಗಳನ್ನು ಕೊಡುತ್ತೇವೆ ಎಂದು ಹೇಳಿರಿ. ಕನ್ನಡ ಜನತೆ ಅಲ್ಲಿ ಹೆಚ್ಚು ಪ್ರಮಾಣದಲ್ಲಿ ಬೆಳೆಯುವಂತೆ ಮಾಡಿರಿ ಅಂದರೆ ಬೆಳಗಾಂ ನಿಮ್ಮ ಕೈ ಬಡುವುದಿಲ್ಲ ಎಂದು ಹೇಳಿ ಸ್ವಲ್ಪ ಸಮಯ ಹೆಚ್ಚು ಕೊಟ್ಟಿದ್ದಕ್ಕಾಗಿ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎ. ಆರ್. ಬಸವರೀನಾರಾಯಣ್ (ಶಿವಮೊಗ್ಗ).—ಮಾನ್ಯ ಸಭಾಪತಿಗಳೇ, ಆರ್ಥಿಕ ಮಂತ್ರಿಗಳು ಈ ಸಭೆಯ ಮುಂದೆ ಮಂಡಿಸಿರತಕ್ಕ ಆಯವ್ಯಯ ಪಟ್ಟಿಯನ್ನು ಅನುಮೋದಿಸುತ್ತಾ ನಾಲ್ಕು ಮಾತುಗಳನ್ನು ಹೇಳಬೇಕೆಂದು ನಿಂತಿದ್ದೇನೆ. ಮಾನ್ಯ ಆರ್ಥಿಕ ಮಂತ್ರಿಗಳು ಬಹಳ ಸಮಂಜಸವಾಗಿ, ಬಹಳವಾಗಿ ಯೋಚನೆ ಮಾಡಿ ಈ ಒಂದು ಪಟ್ಟಿಯನ್ನು ಈ ಸಭೆಯ ಮುಂದೆ ಇಟ್ಟಿದ್ದಾರೆ. ಒಂದು ರಾಜ್ಯದ ಒಂದು ದೇಶದ ಆಯವ್ಯಯ ಪಟ್ಟಿಯನ್ನು ತಯಾರು ಮಾಡ ಬೇಕಾಗಿದ್ದರೆ ಅದರಲ್ಲಿರತಕ್ಕ ತೊಡಕುಗಳು ಎಷ್ಟೂ ಇವೆ, ಅದನ್ನು ಹೇಗೆ ನಿವಾರಣೆ ಮಾಡ ಬೇಕೆನ್ನುವುದನ್ನು ಆರ್ಥಿಕ ಮಂತ್ರಿಗಳು ಬಹಳವಾಗಿ ತುಲನೆ ಮಾಡಿ ಅದನ್ನು ತೀರ್ಮಾನ ಮಾಡ ಬೇಕಾಗುತ್ತದೆ. ಈಗ ನಮ್ಮ ಈ ಸುಖೀ ರಾಜ್ಯದಲ್ಲಿ ಜನಗಳು ಏನು ಆಶೋತ್ತರಗಳನ್ನು ಇಟ್ಟು ಕೊಂಡಿದ್ದಾರೆ ಅವೆಲ್ಲವನ್ನೂ ಅದಷ್ಟು ಬೇಗ ಸಫಲಗೊಳಿಸಬೇಕೆನ್ನುವಾಗ ನಮ್ಮ ಮುಂದೆ ಇರತಕ್ಕ ಖರ್ಚಿನ ಪಟ್ಟಿಯ ಪ್ರಕಾರ ಸುಮಾರು 220 ಕೋಟಿ ರೂಪಾಯಿಗಳ ಖರ್ಚು ಇವೆ. ವಿದ್ಯಾಭ್ಯಾಸ ಮುಂದುವರಿಯಬೇಕು, ಕೈಗಾರಿಕೆಗಳು ಮುಂದುವರಿಯಬೇಕು, ಆರೋಗ್ಯ ಸಹಾಯ ಹೆಚ್ಚ ಬೇಕು ಹೀಗೆ ಸುಖೀ ರಾಜ್ಯದಲ್ಲಿ ಬೇಕಾದಂತಹ ಅನೇಕಾನೇಕ ಕೆಲಸಗಳನ್ನು ಮಾಡಬೇಕಾಗಿದೆ. ಅದಕ್ಕೆ ಹಣವನ್ನು ಎಲ್ಲಿಂದ ತರುವುದು ? ಹೇಗೆ ತರುವುದು ? ಇದನ್ನು ಮಾನ್ಯ ಆರ್ಥಿಕ ಮಂತ್ರಿಗಳು ಪರೀಕ್ಷೆ ಮಾಡಿ ಜನಗಳಿಗೆ ಹೆಚ್ಚು ಹೊರೆ ಇಲ್ಲದಂತೆ, ಜನಗಳಿಂದ ಹೆಚ್ಚು ಅಪೇಕ್ಷಣೆ ಬರದಂತೆ ಅದರ ಕಡೆಗೆ ಗಮನ ಕೊಟ್ಟು ಈ ಆಯವ್ಯಯ ಪಟ್ಟಿಯನ್ನು ತಯಾರು ಮಾಡಿದ್ದಾರೆ. ತೆರಿಗೆಗಳಿಂದ ರಾಜ್ಯವನ್ನು ನಡೆಸಬೇಕು, ಸಾಲತಂದು ರಾಜ್ಯವನ್ನು ನಡೆಸಬೇಕು ಅಥವಾ ಕೇಂದ್ರದಿಂದ ಗ್ರಾಂಟುಗಳನ್ನು ಪಡೆದು ರಾಜ್ಯವನ್ನು ನಡೆಸಬೇಕು. ಹೀಗೆ ಗಹನವಾದ ಅನೇಕ ಪ್ರಾಬ್ಲಂಗಳಿವೆ. ಜನರು ನಿರೀಕ್ಷಣೆ ಮಾಡುವ ಪುಟ್ಟದಲ್ಲಿ ಅವರಿಗೆ ಪರಿಹಾರಗಳನ್ನು ಒದಗಿಸಬೇಕಾಗಿದ್ದರೆ ಅಷ್ಟಕ್ಕೆಲ್ಲ ಸರ್ಕಾರ ಹಣವನ್ನು ಎಲ್ಲಿಂದ ತರಬೇಕೆಂಬುದನ್ನು ನಾವೆಲ್ಲರೂ ಆಲೋಚನೆ ಮಾಡಬೇಕಾದಂಥ ವಿಚಾರ ಇದು. ರಾಜ್ಯದ ಆಡಳಿತವನ್ನು ನಡೆಸತಕ್ಕವರು ಕಾಂಗ್ರೆಸ್ ಪಕ್ಷದವರಾಗಲಿ ಅಥವಾ ಬೇರೆ ಇನ್ನಾವ ಪಕ್ಷದವರೇ ಆಗಲಿ ಅವರಿಗೆ ಈ ದೇಶಾಭ್ಯುದಯ ಕೆಲಸಕಾರ್ಯಗಳಿಗೆ ಹಣವನ್ನು ಎಲ್ಲಿಂದ ಹೇಗೆ ಒದಗಿಸಬೇಕು ಎಂಬುದು ಒಂದು ಬಹಳ ದೊಡ್ಡ ಸಮಸ್ಯೆ. ಅದಕ್ಕೆ ಯಾವ ರೀತಿಯ ಪರಿಹಾರೋಪಾಯಗಳನ್ನು ಸೂಚಿಸಬೇಕು ಎಂಬುದನ್ನು ಕುರಿತು ನಾವೆಲ್ಲರೂ ಇಂದು ಸರ್ಕಾರಕ್ಕೆ ರಚನಾತ್ಮಕವಾದ ಸಲಹೆಗಳನ್ನು ನೀಡ ಬೇಕಾಗಿದೆ. ಯಾವ ಹೊಸ ತೆರಿಗೆಗಳನ್ನೂ ಹಾಕಬಾರದು, ಹಾಲಿ ಇರತಕ್ಕ ತೆರಿಗೆ ದರಗಳನ್ನು ಹೆಚ್ಚಿಸಲೂಬಾರದು ; ಸರ್ಕಾರ ಹೆಚ್ಚಿಗೆ ಸಾಲವನ್ನೂ ಮಾಡಬಾರದು, ಕಚ್ಚು ತೆರಿಗೆಯನ್ನು ಕೊಡುವುದಕ್ಕೆ ಜನರಲ್ಲಿ ಶಕ್ತಿ ಇಲ್ಲದಿರುವಾಗ ಹೊಸ ತೆರಿಗೆಗಳನ್ನು ಹಾಕುವಂತಿಲ್ಲ—ಆದಾಗ್ಯೂ ಜನತೆಗೆ ಅತ್ಯಗತ್ಯವಾಗಿ ಬೇಕಾದ ನೀರಾವರಿ ಸೌಲಭ್ಯಗಳನ್ನು ಇತರೇ ಸೌಲಭ್ಯಗಳನ್ನು ಮಾತ್ರ ತಪ್ಪದೆ ಒದಗಿಸಬೇಕು. ಕೆರೆಕಟ್ಟೆಗಳಾಗಬೇಕು, ಬಾವಿಗಳಾಗಬೇಕು ಅಂದರೆ ಅದು ಹೇಗೆ ಸಾಧ್ಯ ? ಅವಕ್ಕೆಲ್ಲಾ ಹಣ ಎಲ್ಲಿಂದ ಬರಬೇಕು ? ಈ ಕೆಲಸಕಾರ್ಯಗಳಿಗೆಲ್ಲಾ ಅರ್ಥಮಂತ್ರಿಗಳಿಗೆ ಹಣ ಬೇಕೆಂದು ಅವರೇನಾದರೂ ತೆರಿಗೆಗಳನ್ನು ಹಾಕಿದರೆ, ಈ ಮಂತ್ರಿಗಳು ಕಾಲಧರ್ಮಕ್ಕೆ ಗಮನ ಕೊಡುತ್ತಿಲ್ಲ—ಹಿಂದಿನ ಕಂದಾಚಾರ ಪದ್ಧತಿಗಳನ್ನೇ ಈಗಲೂ ಮುಂದುವರಿಸಿಕೊಂಡು ಬರುತ್ತಿದ್ದಾರೆ, ಇವರು ತಮ್ಮ ಸರ್ಕಾರದ ಸಂಪನ್ಮೂಲಗಳನ್ನು ಹೆಚ್ಚಿಸಿಕೊಳ್ಳಲು ಯಾವ ಅಂಥ ಒಂದು ಹೊಸ ಪ್ರಯೋಗವನ್ನೂ ಮಾಡಲಿಲ್ಲ ಎಂದು ಜನರು ಟೀಕೆಗಳನ್ನು ಮಾಡಬಹುದು – ಮಾಡಿಯೂ ಮಾಡುತ್ತಾರೆ. ಹಾಗೆ ಒಂದು ಕಡೆ ಟೀಕೆಗಳನ್ನು ಮಾಡತಕ್ಕವರೂ ನಾವೇ—ಇತ್ತ ಇನ್ನೊಂದು ಕಡೆ ದೇಶದಲ್ಲಿ ಪಿದ್ಯಾಭಿವೃದ್ಧಿ ನಡೆಯುತ್ತಿಲ್ಲ, ಕೈಗಾರಿಕಾಭಿವೃದ್ಧಿ ಆಗುತ್ತಿಲ್ಲ ಎಂದು ಟೀಕೆಗಳನ್ನು

ಮಾಡತಕ್ಕವರೂ ನಾವೇ. ಅಂದಾಗ ಇದನ್ನು ಬಿಡಿಸತಕ್ಕವರು ಯಾರು? ಇದನ್ನು ಹೇಗೆ ಬಿಡಿಸ ಬೇಕೆಂಬುದನ್ನು ಟೀಕೆ ಮಾಡತಕ್ಕ ನಾವೇ ಆಲೋಚನಬೇಕಾದಂಥ ವಿಷಯ ಇದು. ಯಾವ ಮಾರ್ಗವನ್ನು ನಾವು ಹಿಡಿದರೆ ಜನರ ಆಶೋತ್ತರಗಳನ್ನು ಸುಲಭವಾಗಿ ಈಡೇರಿಸಬಹುದು ನಮಗೆ ಇರತಕ್ಕ ವರಮಾನದ ಬಾಬುಗಳಲ್ಲಿ ಎಲ್ಲಿ ಯಾವುದನ್ನು ಹೇಗೆ ಮಾರ್ಪಾಡು ಮಾಡಿಕೊಳ್ಳಬೇಕು ಎಂಬುದನ್ನೆಲ್ಲಾ ಪರಿಶೀಲನೆ ಮಾಡಿ ನಾವು ಸರ್ಕಾರಕ್ಕೆ ರಚನಾತ್ಮಕ ಸಲಹೆಗಳನ್ನು ಕೊಟ್ಟರೆ ಸರ್ಕಾರದ ಪರವಾಗಿ ಅರ್ಥಮಂತ್ರಿಗಳು ಅದನ್ನು ಪರಿಗ್ರಹಿಸಬಹುದು. ಇದಕ್ಕೆಲ್ಲಾ ಬುದ್ಧಿಯನ್ನು ಖರ್ಚುಮಾಡಿ ಆಲೋಚನೆ ಮಾಡಬೇಕು. ದೇಶದ ಆಡಳಿತವನ್ನು ನಡೆಸುವುದು ಎಷ್ಟು ಕಷ್ಟಕರವಾದದ್ದು ಎಷ್ಟು ಜಠಿಲವಾದದ್ದು ಅನ್ನುವುದು ಜನರಿಗೆ ಈ ಮಟ್ಟಕ್ಕೆ ಬಂದಾಗ ಅರಿವಾಗ ಬಹುದು. ನಮ್ಮ ರಾಜ್ಯ ಸರ್ಕಾರದವರು ನನಗೆ ಅನಿಸುತ್ತಿದೆ ಆ ಹಿಂದಿನ ಯಾವತ್ತೂ ಅನುಸರಿಸುತ್ತಿದ್ದ ಆ ಹಳೆಯ ಮಾರ್ಗಗಳನ್ನೇ ತಮ್ಮ ವರಮಾನಕ್ಕಾಗಿ ಈಗಲೂ ಅನುಸರಿಸುತ್ತಿದ್ದಾರೆಂದು ಅನಿಸುತ್ತಿದೆ. ಆ ಲ್ಯಾಂಡ್ ರೆವಿನ್ಯೂ, ಆದಾಯ ತೆರಿಗೆ, ಮಾರಾಟ ತೆರಿಗೆ, ಸೆಂಟ್ರಲ್ ಎಕ್ಸೈಸ್ ಮತ್ತು ಕೇಂದ್ರದಿಂದ ನಮ್ಮ ರಾಜ್ಯಕ್ಕೆ ಬರಬೇಕಾದ ಆದಾಯದ ಪಾಲು ಇತ್ಯಾದಿಗಳೇ ನಮ್ಮ ಬಲವಾದ ಮಾರ್ಗಗಳಾಗಿದ್ದಂತೆ ಭಾಸವಾಗುತ್ತಿದೆ. ಇದು ಸರಿಯಾದದ್ದಲ್ಲ. ನಾವು ಇಲ್ಲಿಯ ತನಕ ಈ ನಾನ್ ಟ್ಯಾಕ್ಸ್ ಬಾಬುಗಳಿಗೆ ಅಷ್ಟು ಹೆಚ್ಚಿನ ಗಮನವನ್ನು ಹರಿಸಿಲ್ಲ. ನಮ್ಮ ಅರ್ಥ ಸಚಿವರು ಒದಗಿಸಿರತಕ್ಕ ಈ ಕೈಪಿಡಿಯಲ್ಲಿ ನೆಟ್ ರೆವಿನ್ಯೂ ಫ್ರಂ ಇಂಡಸ್ಟ್ರಿಯಲ್ ಕನ್ಸರ್ನ್ಸ್ ಎಂದು ಹೇಳಿ ಪ್ರತಿ ವರ್ಷವೂ 62 ಲಕ್ಷಗಳಿಂದ ಮೊದಲುಗೊಂಡು 122–149 ಲಕ್ಷದವರೆಗೂ ಲುಕ್ಸಾನಾಗುತ್ತಿದೆ. ಆದರೆ ಈ ವರ್ಷ ಪಬ್ಲಿಕ್ ಅಂಡರ್‌ಟೇಕಿಂಗ್ಸ್‌ಗಳಿಂದ ಸರ್ಕಾರಕ್ಕೆ 14.09 ಲಕ್ಷ ವರಮಾನ ಬರಬಹುದೆಂದು ಹೇಳಿದ್ದಾರೆ. ಅದೇ ರೀತಿ ಅರಣ್ಯ ಬಾಬಿನಿಂದ ಬರತಕ್ಕ ವರಮಾನ 4 ಕೋಟಿ 80 ಲಕ್ಷ ಎಂದು ಹೇಳಿದೆ. ಆದರೆ ಅರಣ್ಯದಿಂದ ಬರತಕ್ಕ ಉತ್ಪನ್ನವನ್ನು ವಾರ್ಷಿಕ ಉತ್ಪನ್ನವೆಂದು ಹೇಗೆ ಹೇಳುತ್ತಾರೆ? ಅರಣ್ಯ ನೂರಾರು ವರ್ಷಗಳಿಂದ ಬೆಳೆದುಕೊಂಡು ಬಂದಿದೆ. ಹಾಗಿರುವಾಗ ಇದನ್ನು ವಾರ್ಷಿಕ ಆದಾಯ ಎಂದು ಹೇಗೆ ಕರೆಯುತ್ತಾರೆ! ಇತ್ತೀಚೆಗೆ ನಮ್ಮ ಮಲೆನಾಡಿನಲ್ಲಿ ಅರಣ್ಯ ಸಂಪತ್ತು ಹಾಳಾಗುತ್ತಿದೆ. ಎಲ್ಲೆಲ್ಲ ಹೊಸ ಪ್ಲಾಂಟೇಷನ್‌ಗಳನ್ನು ಬೆಳೆಸುವುದಕ್ಕೆ ಸಾಧ್ಯವಿತ್ತೋ ಅಲ್ಲ ಬೆಳೆಸದೆ ಇದ್ದ ಅರಣ್ಯವನ್ನು ಹಾಳುಮಾಡಿ ಅಲ್ಲಿ ಹೊಸದಾಗಿ ಅರಣ್ಯ ಬೆಳೆಸತಕ್ಕದ್ದು ಅಷ್ಟು ಸಾಧುವಾದುದಲ್ಲ. ಹೀಗೆ ಅರಣ್ಯ ಶಿಥಿಲವಾಗುತ್ತಿರುವಾಗ ಇದರಿಂದ ಅಷ್ಟು ವರಮಾನ ಹೇಗೆ ಬರುತ್ತದೆಯೋ ನನಗೆ ಗೊತ್ತಾಗುತ್ತಿಲ್ಲ.

ಇನ್ನು ಇರಿಗೇಷನ್ ಬಾಬಿನಿಂದ 62.40 ಲಕ್ಷ ರೂಪಾಯಿ ಬರುತ್ತೆ ಎಂದು ಹೇಳಿದ್ದಾರೆ. ನೆರೆ ರಾಜ್ಯಗಳಿಗೆ ಪವರನ್ನು ಒದಗಿಸುತ್ತಿರುವುದರಿಂದಲೂ ಆದಾಯ ಬರುತ್ತಿದೆಯೆಂದು ಹೇಳಿದೆ. ಆದರೆ ನೆರೆ ರಾಜ್ಯಗಳಿಗೆ ಯಾವ ದರದಲ್ಲಿ ಪವರನ್ನು ಒದಗಿಸಲಾಗುತ್ತಿದೆಯೋ ಅದೇ ದರದಲ್ಲಿ ರಾಜ್ಯದಲ್ಲಿರತಕ್ಕ ಜನಕ್ಕೂ ಒದಗಿಸಿ ಆಗ ಇದರಿಂದ ಎಷ್ಟು ಆದಾಯ ಬರುತ್ತೆಂಬುದನ್ನು ನೋಡ ಬೇಕು.

ಹಾಗೆ ಇರತಕ್ಕ ಕೆಲವು ತೆರಿಗೆಗಳ ಬಾಬಿನಲ್ಲಿ ಲೀಕೇಜ್ ಹೆಚ್ಚಾಗಿದೆ. ಯಾರು ಸರ್ಕಾರಕ್ಕೆ ತೆರಿಗೆಯನ್ನು ಕೊಡಬೇಕೋ ಅವರು ನ್ಯಾಯುವಾದ ತೆರಿಗೆಯನ್ನು ಕೊಡುತ್ತಿಲ್ಲ. ತೆರಿಗೆಯನ್ನು ಯಾರು ಕೊಡಬೇಕಾಗಿಲ್ಲವೋ ಅಂಥವರಿಗೆ ಹೆಚ್ಚಿನ ಕಿರುಕುಳವಾಗುತ್ತಿದೆ: ಸರ್ಕಾರಕ್ಕೆ ಬರಬೇಕಾದ ನ್ಯಾಯವಾದ ತೆರಿಗೆ ಹಣವನ್ನು ವಸೂಲ್ಮಾಡುವಂಥ ನಿಷ್ಠೆ ಮತ್ತು ನಿಸ್ಪೃಹರಾದಂಥ ಅಧಿಕಾರಿಗಳು ನಮ್ಮಲ್ಲಿದ್ದಾರೆ.

4–30 P.M.

ಒಳ್ಳೊಳ್ಳೆಯ ಅಧಿಕಾರಿಗಳು ಇದ್ದಾರೆ. ಎಲ್ಲಿ ಹೆಚ್ಚಿನ ವರಮಾನ ಬರುತ್ತದೋ ಅಂತಹ ಇಲಾಖೆಗಳಿಗೆ ನಿಸ್ಪೃಹವಾದ ಅಧಿಕಾರಿಗಳನ್ನು ಹಾಕಿದರೆ, ಅಲ್ಲಿ ಕೆಲಸಕಾರ್ಯಗಳು ಬಹಳ ಯಶಸ್ವಿಯಾಗಿ ನಡೆದು ಇಂದು ಸೋರಿಹೋಗುವ ಹಣವನ್ನು ಉಳಿಸತಕ್ಕ ಒಂದು ಪ್ರಯತ್ನವನ್ನು ಮಾಡಬಹುದು. ಉದಾಹರಣೆಗೆ ಹೇಳುವುದಾದರೆ, ಬೆಂಗಳೂರು ಕಾರ್ಪೊರೇಷನ್ನನ್ನು ತೆಗೆದುಕೊಳ್ಳೋಣ. ಏನೋ ಕಾರಣಾಂತರದಿಂದ ಕಾರ್ಪೊರೇಷನ್ ಎರೆಕ್ಷನ್ ಆಗಲಿಲ್ಲ. ಅಡ್ಮಿನಿಸ್ಟ್ರೇಟರ್ ಅವರ ಅಧೀನಕ್ಕೆ ಈ ಬೆಂಗಳೂರು ಕಾರ್ಪೊರೇಷನ್ನನ್ನು ಕೊಟ್ಟಿದ್ದಾರೆ. ಅಲ್ಲಿ ಅಡ್ಮಿನಿಸ್ಟ್ರೇಟರ್ ಆಗಿರುವವರು ಬಹಳ ನಿಸ್ಪೃಹರಾಗಿ, ಯೋಗ್ಯರಾಗಿ, ದಕ್ಷರಾಗಿರುವುದರಿಂದ ಇವತ್ತು ಬೆಂಗಳೂರು ನಗರವನ್ನು ನೋಡಿದರೆ, ಇಲ್ಲಿರತಕ್ಕ ರಸ್ತೆಗಳನ್ನು ನೋಡಿದರೆ ಸುಮಾರು 3–4 ವರ್ಷಗಳ ಕೆಳಗೆ ಯಾವ ರೀತಿ ಇತ್ತೋ ಅದಕ್ಕಿಂತಲೂ ಚೆನ್ನಾಗಿದೆಯೆಂದು ಯಾರಾದರೂ ಕೂಡ ಮೆಚ್ಚತಕ್ಕ ವಿಚಾರವೇ ಆಗಿದೆ. ಒಂದು ದೃಷ್ಟಿಯಿಂದ ಹೇಳುವುದಾದರೆ ಒಳ್ಳೆಯ ನಿಸ್ಪೃಹರಾದ ಅಧಿಕಾರಿಗಳು ಈಗ ಬೇಕಾದಷ್ಟು ಜನರು

(ಶ್ರೀ ಎ. ಆರ್. ಬದರೀನಾರಾಯಣ್)

ಇದ್ದಾರೆ. ಎಲ್ಲಿ ಹೆಚ್ಚಿಗೆ ತೆರಿಗೆಗಳು ವಸೂಲಿಯಾಗುತ್ತದೋ ಅಂತಹ ಕಡೆಗಳಲ್ಲಿ ಅಂತಹ ಒಳ್ಳೆಯ ಅಧಿಕಾರಿಗಳನ್ನು ಹಾಕಿ ಆ ರೀತಿ ಆದಾಯವನ್ನು ಹೆಚ್ಚಿಗೆ ಮಾಡಬಹುದೆಂದು ಆರ್ಥಿಕ ಮಂತ್ರಿಗಳು ಹೇಳಿದ್ದಾರೆ. ಯಾವ ರೀತಿಯಲ್ಲಿ ನಮ್ಮ ವರಮಾನವನ್ನು ಹೆಚ್ಚಿಸುವುದಕ್ಕೆ ಪ್ರಯತ್ನ ಮಾಡಬಹುದು, ಯಾವ ರೀತಿಯಲ್ಲಿ ಮಾಡಿದರೆ ಅದನ್ನು ಹೆಚ್ಚುಮಾಡಬಹುದು ಎನ್ನುವ ದೃಷ್ಟಿಯಿಂದ ಒಳ್ಳೆಯ ಮೇಧಾವಿ ಗಳಾದಂಥ ಮಾನ್ಯ ಶ್ರೀ ಭೂತಲಿಂಗಂ ಅವರನ್ನು ಒಂದು ಕಮಿಟಿಯ ಚೇರ್‌ಮನ್ನರಾಗಿ ನೇಮಿಸಿ ಅವರ ಜವಾಬ್ದಾರಿಗೆ ಇದನ್ನು ವಹಿಸಿ, ಏನೊಂದು ಕ್ರಮವನ್ನು ಹಾಕಿಕೊಂಡರೆ ಹೆಚ್ಚಿನ ತೆರಿಗೆಗಳು ಬರಬಹುದು; ವರಮಾನ ಬರಬಹುದು ಎನ್ನುವುದನ್ನು ವಿಮರ್ಶೆಮಾಡಿ ನಲಹೆಗಳನ್ನು ಕೊಡುವ ಸಮಿತಿಯಾಗಿ ಮಾಡಿರುವುದು ಬಹಳ ಮುಖ್ಯವಾದಂಥ ವಿಚಾರ. ಮಾನ್ಯ ಮುಖ್ಯಮಂತ್ರಿಗಳು ಒಂದು ಪ್ರಶ್ನೆಗೆ ಉತ್ತರ ಕೊಡುತ್ತಾ ಒಂದು ಮಾತನ್ನು ಹೇಳಿದರು. ಈಗ ಬೇಕಾದಷ್ಟು ನೀರಾವರಿ ಯೋಜನೆಗಳು ನಮ್ಮ ದೇಶದಲ್ಲಿ ಆಗಬೇಕಾಗಿವೆ. ನಮಗೆ ಹಣದ ಕೊರತೆಯಿಂದ ಎಷ್ಟು ಯೋಜನೆಗಳನ್ನು ತೆಗೆದುಕೊಳ್ಳಬೇಕೋ ಅಷ್ಟು ತೆಗೆದುಕೊಳ್ಳುವುದಕ್ಕೆ ಆಗುತ್ತಾ ಇಲ್ಲ. ನಮ್ಮಲ್ಲಿ ಏನು ರೈತರು ಇದ್ದಾರೆ, ಅವರು ವ್ಯವಸಾಯ ಮಾಡತಕ್ಕವರು ಆಗಿದ್ದಾರೆ. ಅವರು ಹಣವನ್ನು ಅಡ್ವಾನ್ಸಾಗಿ ಕೊಟ್ಟರೆ, ಇಂತಹ ಪ್ರಾಜೆಕ್ಟ್ ತೆಗೆದುಕೊಳ್ಳುತ್ತೇವೆ ಎಂದು ಹೇಳಿದರೆ, ರೈತರೇ ಮುಂದೆ ಬರುತ್ತಾರೆಂಬ ಮಾತನ್ನು ಹೇಳಿದರು. ಇದನ್ನು ಎಷ್ಟರಮಟ್ಟಿಗೆ ಮಾಡಬಹುದು ಎನ್ನುವುದನ್ನು ಸರ್ಕಾರದವರು ಯೋಚನೆಮಾಡುತ್ತಿದ್ದಾರೆ. ಇಂತಹ ಒಂದು ದೃಷ್ಟಿಕೋನದಲ್ಲಿ ಹೆಚ್ಚು ಯೋಚನೆ ಮಾಡುವುದು ಬಹಳ ಮುಖ್ಯ. ನಾನು ಪಾಶ್ಚಿಮಾತ್ಯ ದೇಶಕ್ಕೆ ಹಾಗೂ ಅಮೇರಿಕಾವೇಶಕ್ಕೆ ಹೋಗಿದ್ದಾಗ ಅಲ್ಲಿನ ನನ್ನ ಅನುಭವ ಹೇಳುವುದಾದರೆ, ಅಲ್ಲಿ ನೂರಾರು ಮೈಲಿಗಳ ರಸ್ತೆಗಳನ್ನು ಸಿಮೆಂಟ್ ಕಾನ್‌ಕ್ರೀಟ್ ರಸ್ತೆಗಳ ನ್ನಾಗಿ ಬಹಳ ಜಾಗ್ರತೆಯಾಗಿ ಮಾಡಿದ್ದಾರೆ. ಸುಮಾರು 6-7-8 ಮೈಲಿಗಳು ರಸ್ತೆ ಯನ್ನು ಒಬ್ಬೊಬ್ಬ ವ್ಯಕ್ತಿಯೇ ಮಾಡಿದ್ದಾನೆ. ಹಾಗೂ ಕಾರ್ಪರೇಷನ್ನಿನವರೂ ಒಳ್ಳೆಯ ರಸ್ತೆಗಳನ್ನು ನಿರ್ಮಾಣ ಮಾಡಿದ್ದಾರೆ. ಆ ರೀತಿ ನಿರ್ಮಾಣಮಾಡಿ ಅವರು ಏನು ಅಧಿಕೃತತೆರಿಗೆ ಅಲ್ಲಿ ಜನರಿಂದ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತಿದ್ದಾರೆ. ಇಲ್ಲಿ ರಸ್ತೆಗಳ ಬಗ್ಗೆ ಸರ್ಕಾರದವರ ಜವಾಬ್ದಾರಿ ಎಷ್ಟರಮಟ್ಟಿಗೆ ಇದೆಯೋ ಅದನ್ನು ಕಡಿಮೆಮಾಡು ವುದಕ್ಕೆ ಪ್ರಯತ್ನಮಾಡುತ್ತಿದ್ದಾರೆಂದು ನಾನು ಕೇಳುತ್ತಿದ್ದೇನೆ. ಅನೇಕ ಜನ ಬಸ್ ಆಪರೇಟರ್ಸ್ ನಾವು ರಸ್ತೆಗಳನ್ನು ಸರಿಪಡಿಸುತ್ತೇವೆಂದು ಹೇಳುತ್ತಿದ್ದಾರೆ. ಆದ್ದರಿಂದ ಹಳೆಯ ಸಂಪ್ರದಾಯ ಗಳನ್ನು ಬಿಟ್ಟು ಹೊಸ ದೃಷ್ಟಿಕೋನವನ್ನು ಇಟ್ಟುಕೊಂಡು ನಾವು ಯಾವ ರೀತಿಯಲ್ಲಿ ವರಮಾನ ಹೆಚ್ಚು ಮಾಡಬೇಕೆಂಬ ದೃಷ್ಟಿಯಿಂದ ಯೋಜನೆಮಾಡಬೇಕು. ಜನರ ಕೂಗು ಈಗಾಗಲೇ ಜಾಸ್ತಿಯಾಗು ತ್ತಿದೆ. ಜನ ಹೆಚ್ಚು ತೆರಿಗೆಯ ಹೊರೆಯನ್ನು ಹೊರಲು ಸಾಧ್ಯವಾಗುವುದಿಲ್ಲ. ಸರ್ಕಾರದವರು ಈ ಕಡೆಗೆ ದೃಷ್ಟಿ ಇಡಬೇಕೆಂದು ನಾನು ಹೇಳುತ್ತೇನೆ.

ಇನ್ನು ಪಬ್ಲಿಕ್ ಸೆಕ್ಟರ್ ವಿಷಯದಲ್ಲಿ ಕಮ್ಯೂನಿಸ್ಟ್ ಪ್ರತಿನಿಧಿಗಳಾದ ಮಾನ್ಯ ಶ್ರೀ ಎಂ. ಎಸ್. ಕೃಷ್ಣನ್ ಅವರು ಮಾತನಾಡುತ್ತಾ ಪಬ್ಲಿಕ್ ಸೆಕ್ಟರ್ ಜಾಸ್ತಿಯಾಗಬೇಕು, ಪ್ರೈವೇಟ್ ಸೆಕ್ಟರ್ ಅದಷ್ಟು ಕಡಿಮೆಯಾಗಬೇಕು ಎಂಬುದಾಗಿ ಹೇಳಿದರು. ತೆರಿಗೆಗಳನ್ನು ಕೊಡಲು ಯಾರು ಶಕ್ತರೋ ಅವರು ಕೊಡಬೇಕೆಂದು ಹೇಳಿದರು. ಅದನ್ನು ನಾನು ಒಪ್ಪುತ್ತೇನೆ. ಪಬ್ಲಿಕ್ ಸೆಕ್ಟರ್‌ನಿಂದ ರಾಜ್ಯಕ್ಕೆ ಹೆಚ್ಚು ವರಮಾನ ಬಂದರೆ ಅದನ್ನು ಮುಂದುವರಿಸೋಣ.

Sri K. H. RANGANATH (Mudigere).—The A. I. C. C. have passed a resolution at Jaipur Session that democratic socialism is Congress goal. What is the opinion of the hon. Member on that? ತಮ್ಮ ಕಾಂಗ್ರೆಸ್ಸಿನವರ ನಿಲುವು ಏನು ಇದೆಯೆಂಬುದನ್ನು ಹೇಳಬೇಕು. ಪಬ್ಲಿಕ್ ಸೆಕ್ಟಾರ್ ಬೇಡವೋ ಅಥವಾ ಪ್ರೈವೇಟ್ ಸೆಕ್ಟರ್ ಬೇಕೋ ಎಂಬುದನ್ನು ಹೇಳಬೇಕು. ಅಲ್ಲೊಂದು ನಿಲುವನ್ನು ತೆಗೆದುಕೊಂಡು ಇಲ್ಲಿ ಒಂದು ಹೇಳುವುದು ಸರಿಯಾಗಿಲ್ಲ.

Sri A. R. BADARINARAYAN.—Public Sector not at all costs, ಇದರಲ್ಲಿ ಲಾಕ್ಸಾನು ಮಾಡಿಕೊಂಡಿದ್ದರೂ ಪಬ್ಲಿಕ್ ಸೆಕ್ಟರ್ ಎಂಬ ಸೆಂಟಿಮೆಂಟಿಗೋಸ್ಕರ ಅದು ಜಾಸ್ತಿ ಮಾಡಬೇಕು ಎಂದು ಹೇಳುವುದು ಸರಿಯಲ್ಲ.

Sri B. P. GANGADHAR.—Public Sector enterprises alone must be encouraged.

Sri A. R. BADARINARAYAN.—We must be painfully aware of the results as the figures themselves speak volumes as to how the public sector is performing. Let it not be misunderstood thereby that I am pleading for a capitalistic society. I am saying that we are creating another set of vested interests in the name of Public Sector. We are creating a set of people—call them officers, administrators or anybody else—to replace those who are running the enterprises now. ಪಬ್ಲಿಕ್ ಸೆಕ್ಟರ್‌ನಲ್ಲಿ ಪ್ರೊಡಕ್ಷನ್ ಜಾಸ್ತಿಯಾಗಬೇಕು. ದೇಶದಲ್ಲಿ ಉತ್ಪನ್ನ ಜಾಸ್ತಿಯಾಗ ಬೇಕು ಎಂಬುದಾಗಿ ಹೇಳುವಾಗ ದುಡಿಯುವ ಮನುಷ್ಯನನ್ನು ಏತಕ್ಕೆ ಹಿಂಸೆಮಾಡಬೇಕು ? ಏನೋ ಪಬ್ಲಿಕ್‌ಸೆಕ್ಟರ್ ಎಂದು ಸೆಂಟ್‌ಪೆಂಟಿಗೆ ಮಾರು ಹೋಗಿ ಅದನ್ನು ಇಟ್ಟುಕೊಳ್ಳಬೇಕೆಂದರೆ ನಾವು ಅದನ್ನು ಒಪ್ಪುವುದಕ್ಕಾಗುವುದಿಲ್ಲ. ನಾವು ಹೇಳುವುದೂ ರಾಜ್ಯದ ಹಿತದೃಷ್ಟಿಯಿಂದ, ಅವರು ಹೇಳುವುದೂ ರಾಜ್ಯದ ಹಿತದೃಷ್ಟಿಯಿಂದ ಜನರಿಗೆ ಉತ್ಪನ್ನ ಜಾಸ್ತಿಯಾಗಬೇಕು ಎಂಬುದು. ದೇಶಕ್ಕೆ ವರಮಾನ ಬರಬೇಕು ಮತ್ತು ನ್ಯಾಷನಲ್ ಇನ್‌ಕಂ ಸಹ ಜಾಸ್ತಿಯಾಗಬೇಕೆಂಬ ದೃಷ್ಟಿ ಎಲ್ಲರಿಗೂ ಇರಬೇಕಾಗಿದೆ. ಒಟ್ಟಿನಲ್ಲಿ ಇದರಲ್ಲಿರತಕ್ಕ ದೋಷಗಳನ್ನು ಸರಿಮಾಡಿ. ಜಾಸ್ತಿಯಾಗಿ ವರಮಾನ ಬರುವ ಹಾಗೆ ಮಾಡಿ. Whether it is the Congress Government or the Communist Government or any other Government, there is this difficulty. After all, it is run by I. A. S. Officers and salaried servants. Do you mean to say that they are more patriotic than the private people who are running them ? This requires lot of re-thinking. What is the result you have produced ? There is inherent defect in the system itself. ನಾವು ವರಮಾನವನ್ನು ಹೆಚ್ಚಿಸಬೇಕೇ ಹೊರತು, ರೂರರ್ ಪ್ರದೇಶದಲ್ಲಿರತಕ್ಕ ರೈತನಿಗೆ ತಲೆಯ ಮೇಲೆ ಹಾಕತಕ್ಕದ್ದು ಸರಿಯಲ್ಲ. ಇರತಕ್ಕಂತಹ ನಿನ್ನಪೇಶದಲ್ಲಿ, ಇರತಕ್ಕಂತಹ ಒಂದು ಲಿಮಿಟಿನಲ್ಲಿ ನಮ್ಮ ಆರ್ಥಿಕ ಮಂತ್ರಿಗಳು, ಈ ಕೊಂದರೆಯ ಪರಸ್ಥಿತಿಯಲ್ಲೂ ಚೆನ್ನಾಗಿ ಮಾಡಿದ್ದಾರೆ. ಆದ ಕ್ಕೋಸ್ಕರ ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತಾ, ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಬಿ. ಎರ್. ನಾರಾಯಣ ಸ್ವಾಮಿ (ಶ್ರೀನಿವಾಸಪುರ).—ಮಾನ್ಯ ಅಧ್ಯಕ್ಷಣಿಯರೇ, ಪೂಜ್ಯ ಮಹಾತ್ಮ ಗಾಂಧೀಜಿಯವರ ಶತಮಾನೋತ್ಸವದ ವರ್ಷದಲ್ಲಿ ಮಂಡಿಸಿದಂತಹ ಆಯವ್ಯಯ ಪಟ್ಟಿಯು ಬಹಳ ನಿರಾಶದಾಯಕವಾಗಿದೆ. ಈ ಬಗ್ಗೆ ಹೇಳತಕ್ಕ ವಿಚಾರಗಳು ಬಹಳವಾಗಿವೆ. ಅವುಗಳನ್ನು ಮುಂದೆ ಅವಕಾಶ ದೊರೆತಾಗ ಹೇಳೋಣ. ತತ್ಕಾಲಕ್ಕೆ ಸರ್ಕಾರದವರು ಮಾಡಿರತಕ್ಕ ಒಳ್ಳೆಯ ಕೆಲಸಕ್ಕೆ ನನ್ನ ಸಂತೋಷವನ್ನು ವ್ಯಕ್ತಪಡಿಸುತ್ತೇನೆ. ಅದೇನೆಂದರೆ, ಸರ್ಕಾರಿ ನೌಕರರಿಗೆ ಅವರ ಜೀವನ ಪೆಚ್ಚವು ಹೆಚ್ಚುತ್ತಿರುವಾಗ, ನಮ್ಮ ಆರ್ಥಿಕ ಪರಸ್ಥಿತಿಯಲ್ಲಿ ಮುಗ್ಗಟ್ಟಿದ್ದರೂ ಒಂದು ವರ್ಷದಲ್ಲಿ ಎರಡು ಸಾರಿ ತುಟ್ಟಿಭತ್ಯವನ್ನು ಕೊಟ್ಟು, ಇದರಿಂದ 10 ಕೋಟಿ ರೂಪಾಯಿಯ ಭಾರವನ್ನು ಸರ್ಕಾರದವರು ವಹಿಸುದುದಕ್ಕಾಗಿ ನಿಜವಾಗಿಯೂ ನಾನು ಸರ್ಕಾರವನ್ನು ವಂದಿಸ ಬೇಕಾಗಿದೆ. ಆದರೆ ಇದರಲ್ಲಿ 90 ರಿಂದ 110 ರೂಪಾಯಿಯವರೆಗೆ ಸಂಬಳ ಪಡೆಯತಕ್ಕವರಿಗೆ, ಇನ್ನೂ ಕಡಿಮೆಯಾಗುತ್ತದೆ. ಇದನ್ನು ಸರ್ಕಾರದವರು ಗಮನಿಸಿ, ಈ ಕೊರತೆಯನ್ನು ನಿವಾರಣೆ ಮಾಡಬೇಕು. ಸರ್ಕಾರಿ ನೌಕರರು ಪ್ರಜಾ ಸಂಖ್ಯೆಯಲ್ಲಿ ಶೇಕಡಾ ಒಂದು ಭಾಗ ಮಾತ್ರ ಇದ್ದಾರೆ. ಇದಲ್ಲದೆ, ಸರ್ಕಾರಿ ನೌಕರರಲ್ಲದಿರತಕ್ಕ ಶೇಕಡಾ 20 ರಷ್ಟು ಇರುವ ವ್ಯವಸಾಯ ಕಾರ್ಮಿಕರು ಮತ್ತು ನಣ್ಣ ಹಿಡುವಳಿದಾರರ ಬಗ್ಗೆ ಏನೊಂದೂ ಯೋಚನೆ ಸರ್ಕಾರ ಮಾಡದಿರುವುದು ಬಹಳ ಶೋಚನೀಯವಾದ ವಿಚಾರವಾಗಿದೆ. ಸ್ವರಾಜ್ಯ ಬಂದನಂತರ, ಪೂಜ್ಯ ಮಹಾತ್ಮ ಗಾಂಧೀಜಿಯವರು ಮತ್ತು ಎಲ್ಲಾ ಶ್ರೇಷ್ಠ ನಾಯಕರು ಹೇಳಿದ್ದಾರೆ, ಇದು ಸುಖೀ ರಾಜ್ಯವಾಗಬೇಕಾದರೆ, ಪ್ರಜಾ ಪ್ರಭುತ್ವ ಯಶಸ್ವಿಯಾಗಬೇಕಾದರೆ, ನೀವು ಎಲ್ಲಾ ಏನೊಂದು ಕಾರ್ಯಕ್ರಮ ಕೈಗೊಂಡರೂ ಸಹ, ಅದು ಎಲ್ಲಾ ವರ್ಗದವರಿಗೂ ಅನ್ವಯವಾಗುವಂತೆ ಆಗಿ, ದೀನದಲಿತರಿಗೆ ಹೆಚ್ಚು ಗಮನ ಕೊಡಬೇಕೆಂದು ಹೇಳಿದ್ದಾರೆ. ಹಾಗೇ ನಮ್ಮ ಶಾಸನಾಂಗವನ್ನೂ ಕೂಡ ಮಾಡಿದ್ದೇವೆ. ಪ್ರಜಾಪ್ರಭುತ್ವ ಬಂದು 21 ವರ್ಷವಾದರೂ ಕೂಡ ದೀನದಲಿತರ ಬಗ್ಗೆ ಸರ್ಕಾರದವರು ಏನೊಂದೂ ಕಾರ್ಯಕ್ರಮ ಕೈಗೊಂ ಡಿಲ್ಲವೆಂದು ಬಹಳ ವಿಷಾದದಿಂದ ಹೇಳಬೇಕಾಗಿದೆ. ಇದನ್ನು ಸರ್ಕಾರದವರ ಗಮನಕ್ಕೆ ತರುವುದು ಇದು ಕೇವಲ ಪೊದಲನೆಯಸಲವಲ್ಲ. ಅನೇಕ ಸಂದರ್ಭಗಳಲ್ಲಿ ಈ ವಿಷಯವನ್ನು ಸರ್ಕಾರದ ಗಮನಕ್ಕೆ ತರುತ್ತಿದ್ದೇವೆ. ಆದರೆ ಸರ್ಕಾರಕ್ಕೆ ಇದು ಕಾಣುತ್ತಾ ಇಲ್ಲವೋ, ಆಥವಾ ಕಿವಿಗೆ ಕೇಳುತ್ತಾ ಇಲ್ಲವೋ, ಅಥವಾ ಎರಡೂ ಇದ್ದು ಮನಸ್ಸು ಇಲ್ಲವೋ, ಎಂದು ಕೇಳಬೇಕಾಗಿದೆ.

(ಶ್ರೀ ಬಿ. ಎಲ್. ನಾರಾಯಣ ಸ್ವಾಮಿ)

ಇದು ಸರ್ಕಾರದ ಒಂದು ರೀತಿಯ ಮೊಂಡುತನವೆಂದು ಹೇಳಬೇಕಾಗಿದೆ. ಸರ್ಕಾರದವರು ತನ್ನ ಕರ್ತವ್ಯದಲ್ಲಿ ವಿಫಲವಾಗಿದೆಯೆಂದು ಹೇಳಬೇಕಾಗಿದೆ. ಸರ್ಕಾರದವರ ಲೆಕ್ಕದ ಪ್ರಕಾರ ಗ್ರಾಮಾಂತರ ಕೂಲಿಗಳಿಗೆ ಕೇವಲ ಒಂದು ರೂಪಾಯಿ ಮಾತ್ರ ಆದಾಯವಿರುತ್ತದೆ. ಇದು ವ್ಯವಸಾಯ, ನಡೆಯುತ್ತಿದ್ದಾಗ, ಮಳೆ ಬೆಳೆ ಚೆನ್ನಾಗಿ ಇದ್ದರೆ, ಇವರಿಗೆ ಈ ಕೂಲಿ ಸಿಗುತ್ತದೆ ಅಲ್ಲದೆ ಬೇರೆ ಕಾಲದಲ್ಲಿ ಅವರಿಗೆ ಕೂಲಿ ಸಿಗುತ್ತಾ ಇಲ್ಲ. ಅದರಲ್ಲೂ ಬಡ ಜನರಿಗೆ ಕ್ಷಾಮದ ಪರಿಸ್ಥಿತಿಯಲ್ಲಿ ಹೇಗೆ ಜೀವನ ಮಾಡುವುದಕ್ಕಾಗುತ್ತದೆ ? ಇವರ ಗತಿ ಏನು ? ಇವರಿಗೆ ನಿಮ್ಮ ಕರ್ತವ್ಯ ಏನು ? ಸರ್ಕಾರದವರಿಗೆ ಪದೇ ಪದೇ ಎಚ್ಚರಿಕೆಯನ್ನು ಕೊಡುತ್ತಿದ್ದೇವೆ, ಹಸಿದಂತವನನ್ನು ದೀರ್ಘಕಾಲದವರೆಗೆ ಪರೀಕ್ಷೆ ಮಾಡತಕ್ಕದ್ದು ನಿಜವಾಗಿಯೂ ಸರ್ಕಾರಕ್ಕೆ ಒಳ್ಳೆಯದಲ್ಲ. ಇದು ನಿಮ್ಮ ಲೋಪ. ಇದರಿಂದ ನಾವು ಯಾವುದೋ ಒಂದು ಅಹಿತವಾದ ದುಷ್ಕೃತ್ಯಕ್ಕೆ, ಒಂದು ಕ್ರಾಂತಿಕಾರಿಕ ದುಷ್ಕೃತ್ಯಕ್ಕೆ ಅವಕಾಶ ಮಾಡಿಕೊಟ್ಟಂತಾಗುತ್ತದೆ. ಕಾಲ ಮಿರುವ ಮುನ್ನ ಪ್ರಜೆಗಳ ಕಷ್ಟವನ್ನು ಪರಿಹರಿಸಲು ಏನಾದರೂ ಒಂದು ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕು. ನಮ್ಮ ಮಂತ್ರಿಯವರು ಹಳ್ಳಿಗಾಡಿನ ಜನರ ಕಷ್ಟಗಳು ವ್ಯವಸಾಯಗಾರರ, ಹಾಗೂ ನೆಣ್ಣೆ ಹಿಡುವಳಿದಾರರ ತೊಂದರೆಗಳನ್ನು ಚೆನ್ನಾಗಿ ಅರಿತಿದ್ದಾರೆ. ಇದಕ್ಕೆ ಒಂದು ಉತ್ತಮವಾದ ರೀತಿಯ ಕಾರ್ಯಕ್ರಮವನ್ನು ಕೈಗೊಳ್ಳುತ್ತಾರೆಂದು ನಾನು ತಿಳಿದುಕೊಂಡಿದ್ದೆ. ಆದರೆ ಈ ದಿಕ್ಕೆಯಲ್ಲಿ ಏನೂ ಕೈಗೊಂಡಿಲ್ಲ. ಅದಕ್ಕೆ ಬಡವರು ಅನುಭವಿಸತಕ್ಕ ಕಷ್ಟವನ್ನು ಚೆನ್ನಾಗಿ ತಿಳಿದಿರತಕ್ಕ, ಬಡವರನ್ನು ಚೆನ್ನಾಗಿ ಬಲ್ಲವರಾದ ಒಬ್ಬ ಮಂತ್ರಿಗೆ ಈ ಖಾತೆಯನ್ನು ಕೊಟ್ಟರೆ, ಅವರಾದರೂ ಬಂದು ಬಡವರ ಅಶೋತ್ತರಗಳನ್ನು ನೆರವೇರಿಸಲು ಸಾಧ್ಯವಾಗುತ್ತದೆ. ಏಕೆಂದರೆ, ಇವತ್ತು ಇರತಕ್ಕ ಮಂತ್ರಿಗಳು ಎಲ್ಲಾ ಭಾಗ್ಯವಂತರ ಪ್ರತಿನಿಧಿಗಳಾಗಿದ್ದಾರೆ. ಬಡವರ ಪ್ರತಿನಿಧಿಗೆ, ಒಬ್ಬರಿಗೆ ಈ ಒಂದು ಖಾತೆಯನ್ನು ಕೊಟ್ಟು ಬಿಟ್ಟರೆ, ಅವರು ಈ ಬಗ್ಗೆ ಒಂದು ಕಾರ್ಯಕ್ರಮವನ್ನು ಕೈಗೊಳ್ಳಬಹುದು. ಈಗಾಗಲೇ ಮಂತ್ರಿಮಂಡಲ ದೊಡ್ಡದಾಗಿದೆ ಎಂದು ಹೇಳುತ್ತಿದ್ದಾರೆ, ಆದರಿಂದ ಯಾರಾದರೂ ನಾನು ಈ ರೀತಿ ಹೇಳುವುದಕ್ಕೆ ಅಕ್ಷೇಪಣೆ ಮಾಡಬಹುದು. ಇದು ನನ್ನ ಒಂದು ಸೂಚನೆ ಅಷ್ಟೆ. ಆದ್ದರಿಂದ ಮಾನ್ಯ ಮುಖ್ಯ ಮಂತ್ರಿಯವರು ಈ ಅಧಿವೇಶನ ಮುಗಿಯುವುದರೊಳಗೆ ಈ ಒಂದು ಬಡಜನರ ಉದ್ಧಾರಕ್ಕಾಗಿ ಒಂದು ಸಲಹಾ ಸಮಿತಿಯನ್ನು ಏರ್ಪಡಿಸಿ. ಆ ಸಮಿತಿಯ ತೀರ್ಮಾನದಂತೆ ಮುಂದಿನ ಕಾರ್ಯಕ್ರಮ ಕೈಗೊಳ್ಳುವಂತಾಗಬೇಕು. ಮತ್ತು ಅದರ ಮೂಲಕ ಬಡ ಜನರಿಗೆ ಸಹಾಯ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಕೋಲಾರ ಜಿಲ್ಲೆಯಲ್ಲಿ ಪದೇ ಪದೇ ಕ್ಷಾಮ ಬರುತ್ತಿದೆ. ಕ್ಷಾಮ ಪರಿಸ್ಥಿತಿಯಲ್ಲಿ ಬಡವರ ಕಷ್ಟ ಹೇಳತೀರದು. ಹಿಂದೆ 1965ರಿಂದ ಈ ವರೆಗೂ ಅದು ಕ್ಷಾಮದ ದವಡೆಯಲ್ಲಿ ಬಳಲುತ್ತಿದೆ. ಸರ್ಕಾರದವರು ಲಕ್ಷಾಂತರ ರೂಪಾಯಿ ಪರಿಹಾರ ಕಾರ್ಯಗಳನ್ನು ಮಾಡುತ್ತಿದ್ದಾರೆ. ಈ ಸಲ ಕೂಡ ಮಾಡುವವರಿದ್ದಾರೆ. ಆದರೆ ರಿಲೀಫ್ ಕಾಮಗಾರಿಗಳಿಗೆ ಎಷ್ಟು ಕೊಟ್ಟರೂ ಕೂಡ ಅದು ಕಾರ್ಯರೂಪದಲ್ಲಿ ಬರುವಾಗ ಮೂರರಲ್ಲಿ ಒಂದು ಭಾಗ ಮಾತ್ರ ಬರುತ್ತದೆ, ಬಾಕಿ ಎರಡು ಭಾಗ ಮಾಯವಾಗಿ ಹೋಗುತ್ತದೆ. ಇದನ್ನು ನಾನು ನಿಮ್ಮನ್ನೆ ಹೇಳುತ್ತಾ ಇಲ್ಲ, ಬೇಕಾದರೆ, ರುಜು ಪಾತು ಮಾಡಬಲ್ಲೆ. ಈ ವಿಚಾರದಲ್ಲಿ ಮಾನ್ಯ ಮಂತ್ರಿಯವರಲ್ಲಿ ಅರಿಕೆ ಮಾಡಿಕೊಂಡಿದ್ದೇನೆ. ಸಂಬಂಧಪಟ್ಟ ಅಧಿಕಾರಿಗಳಲ್ಲಿ ಅರಿಕೆ ಮಾಡಿಕೊಂಡಿದ್ದೇನೆ. ಕಾನೂನನ್ನು ಸರಿಪಡಿಸಬೇಕು ಇದನ್ನು ಪರಿಶೀಲಿಸಿ ಉಗ್ರವಾದ ಕ್ರಮವನ್ನು ತೆಗೆದುಕೊಳ್ಳಬೇಕು. ಇದನ್ನು ನಿನ್ನು ಮುಂದಾದರೂ, ಗಮನದಲ್ಲಿಟ್ಟುಕೊಂಡು ಮಾಡಬೇಕು. ಪರಿಸ್ಥಿತಿ ಈಗಾಗಲೇ ಹದಗೆಟ್ಟು ಹೋಗಿದೆ. ಇದು ನಮ್ಮ ನಿತ್ಯದ ಇತಿಹಾಸವಾಗಿದೆ. ಏನು ಅಭಾವ ಬಂತು, ಪರಿಹಾರ ಕೊಡಿ ಎಂದು ಹೇಳುತ್ತಿದ್ದೇವೆ. ಒಂದು ವಿಷಾದಕರವಾದ ಸಂಗತಿ ಏನೆಂದರೆ, ಭಾರತ ದೇಶದಲ್ಲಿ ಇರುವ ಜನರೆಲ್ಲಾ ಆತ್ಮ ಗೌರವ ಇದ್ದವರಾಗಿದ್ದಾರೆ ಯಾವಾಗಲೂ ಒಬ್ಬನನ್ನು ಆಶ್ರಯಿಸಿ ಗಂಜಿ ಕೊಡಿ, ಕೂಲಿ ಕೊಡಿ ಎಂದು ಕೇಳುವುದು ಸರಿಯಲ್ಲ. ಜನರು ಸಂಕಟ ಪಡುತ್ತಿದ್ದಾರೆ. ಇದನ್ನು ತಪ್ಪಿಸಿ ಒಂದು ಶಾಶ್ವತವಾದ ಪರಿಹಾರವನ್ನು ಹುಡುಕಬೇಕು. ಹಿಂದೆ ಮಾನ್ಯ ನಿಜಲಿಂಗಪ್ಪನವರು ಮುಖ್ಯ ಮಂತ್ರಿಯಾಗಿದ್ದಾಗ, ದಕ್ಷಿಣವಲಯ ಮಂತ್ರಿಗಳ ಸಭೆ ಒಂದು ತಿರುಪತಿಯಲ್ಲಿ ನಡೆಯಿತು. ಆಗ 100 ಕೋಟಿ ರೂಪಾಯಿಯ ಒಂದು ಯೋಜನೆ ಮಾಡಿ ಕೇಂದ್ರ ಸರ್ಕಾರದವರಿಗೆ ಕಳಿಸುತ್ತೇವೆ, ಇನ್ನೂ ಮಾಡುತ್ತೇವೆ ಮಾಡುತ್ತೇವೆ ಎಂದು ಅವರು ಇರುವತನಕ ಹೇಳಿ ಹೇಳಿ, ಮುಂದೆ ಕಾಂಗ್ರೆಸ್ ಅಧ್ಯಕ್ಷರಾಗಿ ಹೋಗಿದ್ದಾರೆ. ಮೊನ್ನೆ ಒಂದು ಪ್ರಶ್ನೆಗೆ ಮಾನ್ಯ ಮುಖ್ಯ ಮಂತ್ರಿಯವರು ಉತ್ತರ ಕೊಡುತ್ತಾ, 20 ಕೋಟಿ ರೂಪಾಯಿಯ ಒಂದು ಯೋಜನೆ ಕೇಂದ್ರ ಸರ್ಕಾರಕ್ಕೆ ಕಳಿಸಿದ್ದೇವೆ, ಎಂದು ಹೇಳಿದ್ದಾರೆ. ಈ ಯೋಜನೆಯ ರೂಪರೇಷೆಗಳು ಈಗಾಗಲೇ ಸರ್ಕಾರದವರು ಹೊರಪಡಿಸಿದ್ದಾರೆ. ಇದು ಪ್ರತಿವರ್ಷ ಮಾಡತಕ್ಕ ಪರಿಹಾರ ಕಾಮಗಾರಿಗಳ ಪಟ್ಟಿಯಲ್ಲದೆ ಇನ್ನೇನಲ್ಲ. ಕೆರೆ,

ಕೊಳ ಮುಂತಾದುಗಳಿವೆ. ಆದರೆ, ನಮ್ಮಲ್ಲಿ ಪ್ರಕೃತಿಯು ವಿಕೋಪಕ್ಕೆ ಒಳಗಾಗತಕ್ಕ ಪ್ರದೇಶಗಳಲ್ಲಿ ಒಂದು ಶಾಶ್ವತವಾದ ಪರಿಹಾರವನ್ನು ಮಾಡಬೇಕು.

ಇವೊತ್ತು ಕೆರಗಳನ್ನು ಮಾಡಿವ್ವಾರೆ. ಬಾವಿ ಮಾಡಿವ್ವಾರೆ. ಸಂತೋಷ. ಮಳೆಬಾರದ. ಪಕ್ಷದಲ್ಲಿ ಅದರಿಂದ ಏನು ಉಪಯೋಗವಾಗುತ್ತದೆ? ನೀವು ಮಾಡಿರತಕ್ಕದ್ದೇನೋ ಒಳ್ಳೆಯದು. ಮಳೆ ಬಾರದೆ ಇದ್ದ ಪಕ್ಷದಲ್ಲಿ ಸರ್ಕಾರದ ಮೇಲೆ ಹೊರೆ ಆಗದಂತೆ ನಮ್ಮ ಗೌರವ ಕಾಪಾಡಿಕೊಂಡು ನಾವು ಎಂದರೆ ಜನಗಳು ಅರ್ಧ ಹೊಟ್ಟೆಯನ್ನಾದರೂ ತಿನ್ನುವಹಾಗೆ ಮಾಡಿಕೊಡಬೇಕು. ಈ ದಿಶೆಯಲ್ಲಿ ಸರ್ಕಾರ ಏನು ಕಾರ್ಯಕ್ರಮಕ್ಕೆಗೊಂಡಿದೆ? ಸರ್ಕಾರ ಏನೂ ಮಾಡಿಲ್ಲ. ಕ್ಷಾಮ ಪರಿಹಾರದ ಬಗ್ಗೆ ಒಂದು ಶಾಶ್ವತವಾದ ಯೋಜನೆಯನ್ನು ಕೈಗೊಳ್ಳಲು ಕೇಂದ್ರ ಸರ್ಕಾರಕ್ಕೆ ಒಂದು ಯೋಜನೆಯನ್ನು ನಮ್ಮ ಸರ್ಕಾರದವರು ಕಳುಹಿಸಿದ್ದಾರೆಂದು ಹೇಳಿದ್ದಾರೆ. ಅದರ ರೂಪರೇಷೆಗಳು ಏನು? ಅದರ ಚಿದಂಬರ ರಹಸ್ಯ ಏನು? ಕೇಂದ್ರ ಸರ್ಕಾರಕ್ಕೆ ಕಳುಹಿಸಿರುವುದೇನು ಶುದ್ಧ ಪೋಸ. ದಯವಿಟ್ಟು ಈಗಲಾದರೂ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ ಕಳೆದ 3 ವರ್ಷಗಳಿಂದ ಕ್ಷಾಮದಿಂದ ಜನ ಪರಿತಪಿಸುತ್ತಿದ್ದಾರೆ ಅವರ ಭವಿಷ್ಯವೇನು? ಆದ್ದರಿಂದ ಮೊದಲು ಈ ಅಧಿವೇಶನ ಮುಗಿಯುವುದರೊಳಗಾಗಿ ಅಧಿಕಾರಿಗಳು ಮತ್ತು ಖಾಸಗಿಯವರಿಂದ ಕೂಡಿದ ಒಂದು ವಿಶೇಷ ಸಮಿತಿಯನ್ನು ರಚಿಸಿ ಅವರಿಗೆ ಒಂದು ಯೋಜನೆಯನ್ನು ತಯಾರುಮಾಡಿ ಅವರ ಬಗ್ಗೆ ಒಂದು ಕಾರ್ಯಕ್ರಮ ಕೈಗೊಳ್ಳಬೇಕು. ಎಲ್ಲಕ್ಕಿಂತ ಹೆಚ್ಚಾಗಿ ವಿಷಾದಕರವಾದ ಸಂಗತಿ ಎಂದರೆ ಕ್ಷಾಮ ಪರಿಸ್ಥಿತಿಇದ್ದರೂ ಕೂಡ 1965ನೇ ಇಸವಿಯ ಲಾಗಾಯ್ತಿನ ಕೋರಾರ ಜಿಲ್ಲೆಯಲ್ಲಿ ಶ್ರೀನಿವಾಸಪುರ ತಾಲ್ಲೂಕಿನಲ್ಲಿ ಬೆಳೆಯಿಲ್ಲದಿದ್ದರೂ ಕೂಡ ಸರ್ಕಾರದವರು ಅವರಿಗೆ ಯಾವ ಸಹಾಯವನ್ನೂ ಮಾಡಿಲ್ಲ ಅಲ್ಲಿನ ರೈತರು ಸರ್ಕಾರಕ್ಕೆ ಅನೇಕ ಬೇಳೆ ಮನವಿ ಮಾಡಿಕೊಂಡು ಕಂದಾಯವನ್ನು ರಿಮಿಷನ್ ಮಾಡುತ್ತೇವೆ, ಪರಿಹಾರ ಕಾಮಗಾರಿಗಳನ್ನು ಕೈಗೊಳ್ಳುತ್ತೇವೆ ಎಂದು ಭರವಸೆ ಕೊಟ್ಟಿದ್ದಾರೆ. ಅದರಂತೆ ಇರತಕ್ಕ ಲ್ಯಾಂಡ್‌ರೆವಿನ್ಯೂ ರೂಲ್ಸನ್ನೂ ತಿದ್ದುಪಡಿ ಮಾಡಿದರು. ಯಾವ ಉದ್ದೇಶದಿಂದ ಅದನ್ನು ತಿದ್ದುಪಡಿ ಮಾಡಿದರು ಎಂದರೆ 1965ನೇ ಇಸವಿಯಿಂದ ಶೇಕಡಾ 25ಕ್ಕಿಂತ ಕಡಿಮೆ ಬೆಳೆ ಇರುವ ಎಲ್ಲಾ ಪ್ರದೇಶಗಳಿಗೂ ಕಂದಾಯವನ್ನು ರಿಮಿಷನ್ ಕೊಡಬೇಕು ಎನ್ನುವ ಉದ್ದೇಶದಿಂದ 1965ನೇ ಇಸವಿಯ ಲಾಗಾಯ್ತು ರೆಟ್ರಾಸ್ಪೆಕ್ಟೀವ್ ಕೊಡಬೇಕು ಎನ್ನುವ ಉದ್ದೇಶದಿಂದ ಆ ಕಾನೂನನ್ನ ತಿದ್ದುಪಡಿ ಮಾಡಿದರು ಆದರೆ ಈಗ ಆಗಿರತಕ್ಕದ್ದು ಏನು ಎಂದರೆ 3 ವರ್ಷಗಳ ಕಂದಾಯವನ್ನೂ ಒಟ್ಟಿಗೆ ಸೇರಿಸಿ ರೈತರಿಂದ ವಸೂಲು ಮಾಡುವುದಕ್ಕೆ ಹತ್ತಿದ್ದಾರೆ. ಈ ರೀತಿ ಶ್ರೀನಿವಾಸಪುರ ತಾಲ್ಲೂಕು ಕ್ಷಾಮದಿಂದ ಕಂಗೆಟ್ಟಿದ್ದರೂ ಸರ್ಕಾರದವರು ಕಂದಾಯವನ್ನು ವಸೂಲು ಮಾಡುವುದು ಅಮಾನುಷವಲ್ಲವೇ? ಅಲ್ಲಿನ ಜನಗಳು ಅರೆಹೊಟ್ಟೆಯಿಂದ ಜೀವನ ಮಾಡುತ್ತಿದ್ದಾರೆ ರಿಲೀಫ್ ಕಾಮಗಾರಿಗಳಿಂದ ಜೀವನ ಮಾಡುತ್ತಿದ್ದಾರೆ ಎಂದು ಸರ್ಕಾರಕ್ಕೆ ಗೊತ್ತಿದೆ. ಅಲ್ಲಿನ ರೈತರಿಗೆ ಉಪಕಾರ ಮಾಡಬೇಕು ಎಂದು ಕಾನೂನನ್ನು ಮಾಡಿ, ಇಷ್ಟೆಲ್ಲಾ ಮಾಡಿ ಅದನ್ನು ಬದಿಗೆ ಇಟ್ಟು ಸರ್ಕಾರದವರು ಕಂದಾಯವನ್ನು ವಸೂಲು ಮಾಡುತ್ತಿದ್ದಾರೆ. ಇದು ಅಮಾನುಷವಲ್ಲವೇ? ಮುಖ್ಯ ಮಂತ್ರಿಗಳು ಆ ಬಗ್ಗೆ ಸರ್ಕಾರದ ಆಜ್ಞೆ ಆಗಿದೆ ಎಂದು ಹೇಳಿದ್ದಾರೆ. ಅದರಲ್ಲಿ ಏನು ವ್ಯತ್ಯಾಸ ಇದೆಯೋ ಗೊತ್ತಿಲ್ಲ. ಈಗ ಇರತಕ್ಕದ್ದನ್ನು ಮುಖ್ಯ ಮುಂತ್ರಿಗಳ ಗಮನಕ್ಕೆ ಅಧಿಕಾರಿಗಳು ತಂದಿದ್ದಾರೆಯೋ ಇಲ್ಲವೋ ಪರಮೇಶ್ವರನೇ ಬಲ್ಲ. ಸರ್ಕಾರದ ಬೊಕ್ಕಸಕ್ಕೆ ಹಣಬೇಕು. ನ್ಯಾಯವಾಗಿ ಕೊಡಬೇಕಾದ್ದನ್ನು ಕೊಡಬೇಕು. ನಾನ್ಯಾಣಿಗಿಂತ ಕಡಿಮೆ ಬೆಳೆ ಆಗಿರತಕ್ಕ ಕಡೆ ಕಂದಾಯವನ್ನು ರಿಮಿಷನ್ ಮಾಡಿ ಎಂದು ನಾವು ಕೇಳುತ್ತೇವೆ. ಬೆಳೆ ಪೂರ್ತಿಯಾಗಿ ಬೆಳೆದಿರತಕ್ಕವರು ಕೊಡಬಾರದು ಎಂದು ನಾನು ಹೇಳುವುದಿಲ್ಲ. ಟ್ರಾಕ್ಟರ್ ಸಾಲ, ಬಾವಿ ಸಾಲ, ಪಂಪು ಸೆಟ್ಟುಗಳ ಸಾಲ ಇವುಗಳು ರೈತರಿಗೆ ಯಾರು ಅರ್ಹರಾಗಿರುತ್ತಾರೆಯೋ ಅವರಿಗೆ ನರಿಯಾಗಿ ಸಿಕ್ಕುತ್ತಿಲ್ಲ. ಈ ಬಗ್ಗೆ ಸರ್ಕಾರದವರು ನಿಗಾ ವಹಿಸಬೇಕು. ಕಂದಾಯವನ್ನು ಅಮಾನುಷ ರೀತಿಯಲ್ಲಿ ವಸೂಲು ಮಾಡುವುದನ್ನು ತಕ್ಷಣ ನಿಲ್ಲಿಸಬೇಕು. ಈಗ ಕಂದಾಯವನ್ನು ವಸೂಲು ಮಾಡಿರುವುದರಲ್ಲಿ ಯಾರು ಯಾರಿಗೆ ರಿಯಾಯಿತಿ ಸಲ್ಲಬೇಕೋ ಅವರಿಗೆ ಜಮಾಮಾಡಿಸಬೇಕು. ಈ ವಿಚಾರದಲ್ಲಿ ಕೋರಾರ ಜಿಲ್ಲೆ ಅತ್ಯಂತ ಕಳೆದ ತಿಂಗಳು 24ನೇ ತಾರೀಖಿನ ದಿವಸ ಪ್ರತಿ ತಾಲ್ಲೂಕಿನ ಸಾವಿರಾರು ಜನ ರೈತರು ತಹಶೀಲ್ದಾರರು ಮತ್ತು ಅಸಿಸ್ಟೆಂಟ್ ಕಮೀಷನರುಗಳನ್ನು ಕಂಡು ತಮ್ಮ ಕಷ್ಟಗಳನ್ನು ಹೇಳಿದ್ದಾರೆ. ಜನತೆ ಸೌಮ್ಯ ಸ್ವಭಾವದವರು ಮತ್ತು ಒಳ್ಳೆಯವರು. ಅವರನ್ನು ಪರೀಕ್ಷೆಮಾಡುತ್ತಾ ಹೋದರೆ ಎಷ್ಟು ದಿವಸ ಅವರು ಸುಮ್ಮನೆ ಇರುತ್ತಾರೆ. ಸರ್ಕಾರದವರು ತಾವು ಮಾಡಿರತಕ್ಕ ರೂಲ್ಸ ಮತ್ತು ಕಾನೂನು ಏನಿದೆ ಅದಕ್ಕೆ ಮರ್ಯಾದೆ ಕೊಟ್ಟು ರೈತರಿಗೆ ಏನು ರಿಯಾಯ್ತಿ ಕೊಡಬೇಕೋ ಅದನ್ನು ಕೊಡಬೇಕು. ಉಪೇಕ್ಷೆ ಮಾಡಬಾರದು. ಆ ರೀತಿ ಮಾಡುವುದಾದರೆ ಅದರಿಂದ ಹಾನಿಕರವಾಗುತ್ತದೆ ಮತ್ತು ನಾನಾ ವಿಧವಾದ ಎಡರು ತೊಡರುಗಳಿಗೆ ಅವಕಾಶವಾಗುತ್ತದೆ ಎಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

(ಶ್ರೀ ಜಿ. ಎಲ್. ನಾರಾಯಣ ಸ್ವಾಮಿ)

ರೋಡ್ ಟ್ರಾನ್ಸ್‌ಪೋರ್ಟ್ ವಿಷಯ. ಕೋಲಾರ ಜಿಲ್ಲೆಯಲ್ಲಿ ಬಸ್ ಮಾರ್ಗಗಳನ್ನು ರಾಷ್ಟ್ರೀಕರಣ ಮಾಡಿದರು. ಸಂತೋಷ. ಇದರ ಉದ್ದೇಶ ಏನಾಗಿತ್ತು ಎಂದರೆ ಬಸ್ ರಾಷ್ಟ್ರೀಕರಣ ಮಾಡಿದರೆ ಪ್ರಜೆಗಳಿಗೆ ಇರತಕ್ಕ ಕಷ್ಟಗಳು ತಪ್ಪಿ ಅವರಿಗೆ ಸೌಕರ್ಯ ಉಂಟಾಗಿ ಸರ್ಕಾರದ ಬೊಕ್ಕಸಕ್ಕೆ ಹಣ ಬರುತ್ತದೆ ಎಂದು ನಾವು ಯೋಚನೆಮಾಡಿದ್ದೆವು. ಆದರೆ ಆಗಿರತಕ್ಕದ್ದು ಏನು. ಅನುಕೂಲಕ್ಕಿಂತ ಪ್ರತಿಕೂಲ ಜಾಸ್ತಿಯಾಗಿದೆ. 60 ಮೈಲಿಗೆ ಖಾಸಗೀಯವರು 2 ರೂಪಾಯಿಗಳನ್ನು ಚಾರ್ಜ್‌ಮಾಡುತ್ತಿದ್ದಾರೆ. ಸರ್ಕಾರದವರು ಉಪಕಾರ ಮಾಡತಕ್ಕವರು ಸರ್ಕಾರಿಬಸ್ಸಿನಲ್ಲಿ ಅದೇ 60 ಮೈಲಿಗೆ 3 ರೂಪಾಯಿ 20 ಪೈಸೆ ಚಾರ್ಜ್ ತೆಗೆದುಕೊಳ್ಳುತ್ತಿದ್ದಾರೆ. ಒಂದಕ್ಕೆ 1½ಯಷ್ಟು ಜಾಸ್ತಿ ಮಾಡಿದ್ದಾರೆ. ಪ್ರಯಾಣ ಮಾಡುವ ಪ್ರಜೆಗಳಿಗೆ ಖಾಸಗೀ ಬಸ್ಸಿನಲ್ಲಿ ಲಗೇಜನ್ನು ಬಸ್ಸಿನವರೇ ಮಾರ್ಯಾದೆಯಿಂದ ತೆಗೆದುಕೊಂಡು ಹೋಗಿ ಬಸ್ಸಿನ ಟಾಪ್‌ಮೇಲೆ ಹಾಕುತ್ತಾರೆ. ಆದರೆ ರೋಡ್ ಟ್ರಾನ್ಸ್‌ಪೋರ್ಟ್ ಬಸ್ಸಿನಲ್ಲಿ ಲಗೇಜಿಗೂ ನಮಗೂ ಯಾವ ಸಂಬಂಧವೂ ಇಲ್ಲ ಎಂದು ಹೇಳುತ್ತಾರೆ. ಈ ರೀತಿ ಮಾಡಿದರೆ ಗೌರವ ಬರುತ್ತದೆಯೇ ? ಖಾಸಗಿ ಬಸ್ ಮಾಲೀಕರು 60 ಮೈಲಿಗೆ 3 ರೂಪಾಯಿ ಚಾರ್ಜ್ ತೆಗೆದುಕೊಂಡು ಸಹಸ್ರಾರು ರೂಪಾಯಿಗಳನ್ನು ಸಂಪಾದನೆಮಾಡಬೇಕಾಗಿದ್ದರೆ ಸರ್ಕಾರದವರು ಬಸ್ ರೂಟನ್ನು ರಾಷ್ಟ್ರೀಕರಣ ಮಾಡಿ ಚಾರ್ಜನ್ನೂ ಜಾಸ್ತಿ ಮಾಡಿ ಲಾಭ ಇರುವುದಿಲ್ಲ ಎಂದರೆ ಇಂಥಾ ಉದ್ಯಮಿಗಳಿಗೆ ಸರ್ಕಾರದವರು ಏತಕ್ಕೆ ಕೈ ಹಾಕುತ್ತಾರೆ ? ಅದನ್ನು ಖಾಸಗೀಯವರಿಗೇ ಬಿಟ್ಟು ಬಿಡಿ ? ಬಸ್ ರೂಟನ್ನು ರಾಷ್ಟ್ರೀಕರಣ ಮಾಡಿಕೊಂಡು ಪ್ರಜೆಗಳ ಮೇಲೆ ಹೊರೆಯನ್ನು ಹೇರುವುದು ನ್ಯಾಯಧರ್ಮಗಳಿಗೆ ವಿರುದ್ಧವಾಗಿದೆ. ಇದನ್ನು ಸರ್ಕಾರದವರು ಗಮನಿಸಬೇಕು. ಈಗ ಮದ್ರಾಸ್ ಪ್ರಾಂತ್ಯದಲ್ಲಿ ಕೆಲವು ಬಸ್ ರೂಟುಗಳನ್ನು ನ್ಯಾಷನಲೈಜ್ ಮಾಡಿದ್ದಾರೆ. ಆ ಬಸ್ಸುಗಳಲ್ಲಿ ಖಾಸಗೀ ಬಸ್ ಮಾಲೀಕರು ಏನು ಚಾರ್ಜ್ ಮಾಡುತ್ತಿದ್ದರೋ ಅದಕ್ಕಿಂತ ಕಡಿಮೆ ಚಾರ್ಜ್ ತೆಗೆದುಕೊಳ್ಳುತ್ತಿದ್ದಾರೆ. ರಿಯಾಯ್ತಿ ದರದಲ್ಲಿ ಪ್ರಯಾಣಿಕರಿಗೆ ಅನುಕೂಲ ಮಾಡಿಕೊಟ್ಟಿದ್ದಾರೆ. ನಮ್ಮ ಸಂಸ್ಥಾನದಲ್ಲಿ 1ಕ್ಕೆ 1½ಯಷ್ಟು ಚಾರ್ಜ್‌ಮಾಡಿರುವುದು ತುಂಬಾ ಅನ್ಯಾಯ. ಈ ಬಗ್ಗೆ ಸರ್ಕಾರದವರು ತಮ್ಮ ಗಮನವನ್ನು ಹರಿಸಿ ಅದರಲ್ಲಿರತಕ್ಕ ಲೋಪದೋಷಗಳನ್ನು ಸರಿಪಡಿಸಬೇಕು. ಇಲ್ಲದೆ ಹೋದರೆ ನಮ್ಮ ಮಿತ್ರರಾದ ಶ್ರೀ ಬದರೀನಾರಾಯಣ್ ಅವರು ಹೇಳಿದಹಾಗೆ ಈ ಬಸ್ ಲೈನುಗಳನ್ನು ಖಾಸಗೀಯವರಿಗೆ ಬಿಟ್ಟು ಕೊಡುವುದು ಸೂಕ್ತ ಎಂದು ಹೇಳಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

[MR. DEPUTY SPEAKER in the Chair]

†ಶ್ರೀ ನಾಗಪ್ಪ (ಮಂಡ್ಯ).— ಮಾನ್ಯ ಅಧ್ಯಕ್ಷರೇ, ಈಗ ಈ ಸಭೆಯ ಮುಂದೆ ಮಾನ್ಯ ಹಣಕಾಸಿನ ನಚಿವರು ಇಟ್ಟಿರುವ 1969–70ನೇ ಸಾಲಿನ ಆಯವ್ಯಯ ಪಟ್ಟಿಯನ್ನು ಅನುಮೋದಿಸುತ್ತಾ ನಾನು ಸರ್ಕಾರಕ್ಕೆ ಒಂದೆರಡು ಸಲಹೆಗಳನ್ನು ಕೊಡಲು ಇಚ್ಛಿಸುತ್ತೇನೆ.

ಮೊದಲನೆಯದಾಗಿ ನಮ್ಮ ಮಂತ್ರಿಗಳು ಪ್ರವಾಸ ಹೋದಂತಹ ಸಂದರ್ಭಗಳಲ್ಲಿ ಅವರು ಜವಾಬ್ದಾರಿಯಿಂದ ವರ್ತಿಸಬೇಕೆಂದು ನಾನು ಹೇಳುವುದಕ್ಕೆ ಇಚ್ಛಿಸುತ್ತೇನೆ. ಸರ್ಕಾರದಿಂದ ಆಗಬೇಕಾದ ಕೆಲಸಕಾರ್ಯಗಳ ಬಗ್ಗೆ ಮಾನ್ಯ ಮಂತ್ರಿಗಳು ಪ್ರವಾಸ ಮಾಡುವುದಕ್ಕೆ ನನ್ನ ವಿರೋಧವಿಲ್ಲ. ಆದರೆ ಕೆಲವರು ಖಾಸಗಿಯವರು ಮಂತ್ರಿಗಳನ್ನು ಒಂದು ಸಮಾರಂಭಕ್ಕೆ ಆಹ್ವಾನ ಮಾಡಿದಾಗ ಅವರ ಸ್ಥಾನಮಾನ ಏನು ಯಾವ ಸಂದರ್ಭದಲ್ಲಿ ಅವರು ಕರೆಯುತ್ತಿದ್ದಾರೆ ಎನ್ನುವುದನ್ನು ಯೋಚನೆ ಮಾಡದೆ ಪ್ರವಾಸ ಮಾಡುವುದನ್ನು ಕೆಲವು ಮಂತ್ರಿಗಳು ಬಿಡಬೇಕು ಎಂದು ನಾನು ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇಂತಹ ಪ್ರವಾಸದ ಬಗ್ಗೆ ಒಂದೆರಡು ಸಂದರ್ಭಗಳಲ್ಲಿ ನನಗೆ ಅನುಭವವಾಗಿದೆ. ಏತಕ್ಕೆಂದರೆ ಅಂಥಾ ಮಂತ್ರಿಗಳ ಪ್ರವಾಸಗಳು ಆ ತಾಲ್ಲೂಕಿನ ಅಭಿವೃದ್ಧಿ ಮಂಡಳಿಗಳ ಅಧ್ಯಕ್ಷರು ಮತ್ತು ಉಪಾಧ್ಯಕ್ಷರುಗಳಿಗಾಗಲಿ, ಆ ಕ್ಷೇತ್ರದ ಶಾಸನ ಸಭಾ ಸದಸ್ಯರಿಗಾಗಲೀ ಗೊತ್ತಿರುವುದಿಲ್ಲ. ಮಂತ್ರಿಗಳ ಪ್ರವಾಸದ ಬಗ್ಗೆ ಟೂರ್ ಪ್ರೋಗ್ರಾಮ್ ಅನ್ನೇನೋ ಮಾಡುತ್ತಾರೆ. ಅದು ಎಲ್ಲಿ ಹೋಗುತ್ತದೆಯೋ ಏನೋ ಅದು ನಮ್ಮ ಕೈಗೆ ಸೇರುವುದೇ ಇಲ್ಲ. ನಮ್ಮ ಕ್ಷೇತ್ರದಲ್ಲಿ ಮಂತ್ರಿಗಳು ಪ್ರವಾಸ ಮಾಡುವಾಗ ಆ ಕ್ಷೇತ್ರದ ಜನಗಳಿಂದ ಚುನಾಯಿತರಾಗಿರುವ ಸದಸ್ಯರು ಅವರ ಜೊತೆಯಲ್ಲಿ ಇಲ್ಲದಿದ್ದರೆ ಜನಗಳಿಗೆ ಏನು ಭಾವನೆ ಬರುತ್ತದೆ ಎಂಬುದನ್ನು ಯೋಚನೆ ಮಾಡಬೇಕು. ಆದ್ದರಿಂದ ಮಾನ್ಯ ಮಂತ್ರಿಗಳು ಅದನ್ನು ಬಿಡಬೇಕು. ಇಂತಹ ಸಂದರ್ಭದಲ್ಲಿ ಏನಾಗುತ್ತದೆ ಎಂದರೆ ಇಂತಹ ಸಮಾರಂಭಗಳಲ್ಲಿ ಸಂಬಂಧಪಟ್ಟ ಸದಸ್ಯರೇ ಇಲ್ಲವಲ್ಲ ಎಂದು ಜನರು ತಪ್ಪು ತಿಳಿದುಕೊಳ್ಳುತ್ತಾರೆ. ಈ ವಿಚಾರದಲ್ಲಿ ಒಂದು ಉದಾ

ಹರಣ್ ಹೇಳಬೇಕೆಂದರೆ, ಮದುವೆಯಾದಾಗ ಗಂಡ ಹೆಂಡತಿಗೆ ತಾಳಿ ಕಟ್ಟಿದ ಶಾಸ್ತ್ರವಾದ ಮೇಲೆ ದಾನ ಕೊಡುವ ಪದ್ಧತಿ ನಡೆಯುತ್ತದೆ. ದಾನ ತೆಗೆದುಕೊಳ್ಳುವುದಕ್ಕೆ ಯೋಗ್ಯರಾದ ಜನರು ಇರುತ್ತಾರೆ. ಆದರೆ ಇಂತಹ ಸಮಯದಲ್ಲಿ ಕಿರಾಡಿಯಾದಂಥವರು ಎಲ್ಲರೂ ಪಂಕ್ತಿಯಲ್ಲಿ ಕುಳಿತುಕೊಳ್ಳಿ, ದಾನ ಕೊಡುತ್ತಾರೆ ಎಂದು ಹೇಳಿಕೊಂಡು ಓಡಾಡುತ್ತಿರುತ್ತಾರೆ. ದಾನ ಕೊಡುವವರಿಗೆ, ಕಿರಾಡಿಯಾಗಿ ಓಡಾಡುತ್ತಿರುವವರು ಜಾಗ್ರತೆ ಕಣ್ಣಿಗೆ ಬಿದ್ದು ದಾನ, ದಕ್ಷಿಣೆ ಹೆಚ್ಚಾಗಿ ಅವರಿಗೇ ಕೊಟ್ಟು ಬಿಡುತ್ತಾರೆ. ಯಾರಿಗೆ ನಿಜವಾಗಿ ಸಿಗಬೇಕಾಗುತ್ತದೋ ಅಂತಹವರಿಗೆ ಸಿಗದಂತಾಗುತ್ತದೆ. ಮಂತ್ರಿಗಳ ಪ್ರವಾಸವೂ ಸಹ ಈ ರೀತಿ ನಡೆಯುತ್ತಿದೆ.

5-00 P.M.

ಶ್ರೀ ಎಚ್. ಎನ್. ನಂಜೇಗೌಡ.—ಯಾವ ಮಂತ್ರಿಗಳು ಎಂಬುದನ್ನು ಹೇಳಿಬಿಡಿ.

ಶ್ರೀ ನಾಗಪ್ಪ.—ಅಧ್ಯಕ್ಷರು ಅನುಮತಿ ಕೊಟ್ಟರೆ ಹೇಳುತ್ತೇನೆ.

ಶ್ರೀ ಎಚ್. ಎನ್. ನಂಜೇಗೌಡ.—ಅವರು ಅನುಮತಿ ಕೊಟ್ಟಿದ್ದಾರೆ. ಹೇಳಿ.

ಶ್ರೀ ನಾಗಪ್ಪ.—ಅಧ್ಯಕ್ಷರು ಅನುಮತಿ ಕೊಟ್ಟರೆ ನಿರ್ದಾಕ್ಷಿಣ್ಯವಾಗಿ ಹೇಳುತ್ತೇನೆ. ಇಂತಹ ವಿಚಾರಗಳಲ್ಲಿ ತಮ್ಮಂಥ ಮಾನ್ಯ ಸದಸ್ಯರುಗಳು ಮಾತನಾಡುವ ದಾಟಿ ಬೇರೆ, ನಾನು ಮಾತನಾಡುವ ದಾಟಿ ಬೇರೆ. ನನ್ನ ಸಮಯವನ್ನು ಹಾಳುಮಾಡಬೇಡಿ. ನನಗೆ ಮಾತನಾಡುವುದಕ್ಕೆ ಅವಕಾಶ ಕೊಡಿ. ಮೊನ್ನೆ ಪ್ರಧಾನಮಂತ್ರಿಗಳು ಖಾತೆಗಳ ಬದಲಾವಣೆ ಮಾಡಿದರು. ಅದೇ ರೀತಿ ನಮ್ಮ ಮುಖ್ಯಮಂತ್ರಿಗಳೂ ಮಾಡುವುದು ಒಳ್ಳೆಯದು. ಯಾವ ಮಂತ್ರಿಗಳು ಸರ್ಕಾರೀ ಫೈಲ್‌ಗಳನ್ನು ಓದದೆ ಚೆನ್ನಾಗಿ ಕೆಲಸ ಮಾಡುತ್ತಿಲ್ಲವೋ ಅಂತಹವರನ್ನು ಮಂತ್ರಿಪದವಿಯಿಂದ ತೆಗೆಯುತ್ತಾರೆಂದು ತಿಳಿದುಕೊಂಡಿದ್ದೇನೆ.

ಇನ್ನು ನೀರಾವರಿಯ ಬಗ್ಗೆ ಹೇಳುವುದಾದರೆ ದೊಡ್ಡ ದೊಡ್ಡ ನೀರಾವರಿ ಯೋಜನೆಗಳ ಜೊತೆಗೆ ಸಣ್ಣ ಸಣ್ಣ ನೀರಾವರಿ ಯೋಜನೆಗಳನ್ನು ಹೆಚ್ಚು ಹೆಚ್ಚು ಕೈಗೊಳ್ಳಬೇಕು. ಮುಖ್ಯವಾಗಿ ಕಮ್ಯೂನಿಟಿ ಇರಿಗೇಷನ್‌ಗೆ ಹೆಚ್ಚಿನ ಪ್ರಾತಿನಿಧ್ಯ ಕೊಟ್ಟರೆ ಬಹಳ ಅನುಕೂಲವಾಗುತ್ತದೆಂದು ನಾನು ಭಾವಿಸಿದ್ದೇನೆ. "64 ಫ್ಯಾಮಿನ್ ರಿಲೀಫ್ ವರ್ಕ್" ಕೆಳಗೆ ಏನು ಒಂದು ಹಣವನ್ನು ಖರ್ಚು ಮಾಡಬೇಕೆಂದಿದ್ದೇವೆ, ಆ ಹಣದ ಒಂದು ಭಾಗವನ್ನು ಈ ಕಮ್ಯೂನಿಟಿ ಇರಿಗೇಷನ್‌ಗೆ ಉಪಯೋಗಿಸಿದರೆ ಬಹಳ ಪ್ರಯೋಜನವಾಗುತ್ತದೆಂದು ನಾನು ನಂಬಿದ್ದೇನೆ.

ಇನ್ನು ಆರೋಗ್ಯ ಇರಾಖೆಯ ಬಗ್ಗೆ ಹೇಳಬೇಕಾದರೆ ಜಿಲ್ಲಾ ಕೇಂದ್ರಗಳಲ್ಲಿರುವ ಆಸ್ಪತ್ರೆಗಳನ್ನು ಉತ್ತಮಪಡಿಸುವುದಕ್ಕೆ ನಮ್ಮ ಸಚಿವರು ಗಮನ ಕೊಡಬೇಕು.

ಇನ್ನು ಕೃಷ್ಣರಾಜಸಾಗರದ ರೈಟ್ ಬ್ಯಾಂಕ್ ಚಾನಲ್‌ನ ವರುಣಾ ನಾಲೆಯ ಬಗ್ಗೆ ವೃತ್ತಪತ್ರಿಕೆಗಳಲ್ಲಿ ವರದಿಗಳು ಬರುತ್ತಲೇ ಇವೆ. ಈ ಬಗ್ಗೆ ಸರ್ಕಾರದವರು ಒಂದು ತಜ್ಞರ ಕಮಿಟಿಯನ್ನು ನೇಮಕ ಮಾಡಿದ್ದರು. ಅವರು ಕೊಟ್ಟಿರುವ ವರದಿಯ ಪ್ರಕಾರ 1,70,268 ಎಕರೆಗೆ ಮಾತ್ರ ನೀರಾವರಿಯಾಗುತ್ತದೆಂದು ಗೊತ್ತಾಗಿದೆ. ಇಷ್ಟು ಎಕರೆಗೆ 53 ಸಾವಿರ ಟಿ.ಎಂ.ಸಿ.ಎಫ್.ಟಿ. ನೀರು ಬೇಕಾಗುತ್ತದೆಂದು ಹೇಳಿದ್ದಾರೆ. ಅವರ ಅಭಿಪ್ರಾಯ ಈ ರೀತಿ ಇದ್ದರೂ ಕೂಡ, ಕಳೆದ 25 ವರ್ಷಗಳಿಂದ ಕೃಷ್ಣರಾಜಸಾಗರದಿಂದ ನೀರಾವರಿಯಾಗುವ ಪ್ರದೇಶಕ್ಕೆ ಎಷ್ಟು ನೀರನ್ನು ಬಿಡುತ್ತಿದ್ದಾರೆ ಎಂಬುದನ್ನು ನೋಡುವುದಾದರೆ, ವಿಶ್ವೇಶ್ವರಯ್ಯ ಲೋ ಲೆವರ್ ಚಾನಲ್‌ನಿಂದ ಬೇಸಿಗೆಯಲ್ಲಿ 10 ಸಾವಿರ, ಮಳೆಗಾಲದಲ್ಲಿ 30 ಸಾವಿರ, ಲೀನ್ ಪೀರಿಯಡ್‌ನಲ್ಲಿ 2 ಸಾವಿರ ಟಿ.ಎಂ.ಸಿ.ಎಫ್.ಟಿ. ನೀರನ್ನು ಬಿಡುತ್ತಿದ್ದಾರೆ. ಎವಾಪರೇಷನ್ ಆಗುತ್ತಿರುವುದು 7 ಸಾವಿರ ಟಿ.ಎಂ.ಸಿ.ಎಫ್.ಟಿ. ಎಂದು ತಜ್ಞರು ಹೇಳಿದ್ದಾರೆ. ಆದರೆ ರೆಕಾರ್ಡಿನಲ್ಲಿ ಇರುವ ಹಾಗೆ, ಅದು 6,000 ಮಾತ್ರ. ಪವರ್ ಸ್ಟೇಷನ್‌ಗೆ ದಿನಕ್ಕೆ 90 ಕ್ಯೂಸೆಕ್ಸ್‌ನಷ್ಟು ನೀರನ್ನು ಬಿಡುತ್ತಿದ್ದಾರೆ. ಈ ನೀರು ತಲಕಾಡಿನಲ್ಲಿ ಕಬಿನಿ ನದಿಯಿಂದ ಬರುತ್ತಾ ಇದೆ. ಆದರೆ ಮಳೆ ಇಲ್ಲದೆ, ಕೆರೆಕಟ್ಟೆಗಳು ಬತ್ತಿದಾಗ, ಅಭಾವ ಬಂದಾಗ 4000 ಟಿ.ಎಂ.ಸಿ.ಎಫ್.ಟಿ ಗಿಂತ ಜಾಸ್ತಿ ಯಾವತ್ತೂ ಬಿಟ್ಟಿಲ್ಲ. ಈಗಿರುವ ಅಚ್ಚುಕಟ್ಟಿಗೇ ಈ ನೀರು ಸಾಲದಾಗಿದೆ. ಮತ್ತೆ ಈಗ ಮತ್ತೊಂದು ನಾಲೆಯನ್ನು ತೆಗೆಯಬೇಕೆಂದಿದ್ದಾರೆ. ಕೆ.ಆರ್.ಎಸ್. ಕನ್ಸರ್ವೇಟೀವ್ ಕಮಿಟಿ ಎಂದು ಇದೆ. ಅವರು ನೀರಿನ ಅಭಾವ ಇದ್ದಾಗೆಲ್ಲ ಬೆಳೆಗಳ ಪರಿಸ್ಥಿತಿ ನೋಡಿಕೊಂಡು 10 ದಿವಸಕ್ಕೆ ಒಂದೊಂದು ಸಾರಿ ಬಿಡುತ್ತಾರೆ. ಇರುವ ಬೆಳೆಯನ್ನು ಉಳಿಸಿಕೊಳ್ಳುವ ಪ್ರಯತ್ನ ಈಗ ನಡೆಯುತ್ತಿದೆ. ಆದರೆ ತಜ್ಞರು ಮಾಡರ್ನ್ ಮೆಥೆಡ್ ಇರಿಗೇಷನ್ ಅಂದರೆ ಸ್ಪ್ರಿಂಕ್ಲಿಂಗ್ ಮೆಥೆಡ್ ಪದ್ಧತಿಯನ್ನು ಜಾರಿಗೆ ತಂದರೆ ಇನ್ನೂ ಹೆಚ್ಚಿನ ಭಾಗಕ್ಕೆ ನೀರನ್ನು ಒದಗಿಸುವುದಕ್ಕೆ ಸಾಧ್ಯವಿದೆ ಎಂದು ಹೇಳಿದ್ದಾರೆ. ಆದರೆ ಈ ಪದ್ಧತಿಯಿಂದ

(ಶ್ರೀ ಎಂ. ನಾಗಪ್ಪ)

ತಕರಾರಿ ತೋಟಗಳನ್ನು ಮಾಡುವುದಕ್ಕೆ ಸಾಧ್ಯವೇ ಹೊರತು ಕಬ್ಬು ಮತ್ತು ಬತ್ತ ಬೆಳೆಯುವುದಕ್ಕೆ ಸಾಧ್ಯವಾಗುವುದಿಲ್ಲ. ಈ ಒಂದು ಪದ್ಧತಿಯಿಂದ ಇನ್ನೂ, 5500 ಎಕರೆಗಳಿಗೆ ನೀರನ್ನು ಒದಗಿಸುವುದಕ್ಕೆ ಸಾಧ್ಯವಿದೆ ಎಂದು ಹೇಳಿದ್ದಾರೆ. ಈಗ ಬೆಳೆಯುತ್ತಿರುವ ಕಬ್ಬು ಮತ್ತು ಬತ್ತದ ಗದ್ದೆಗಳಿಗೆ ಸಾಕಷ್ಟು ನೀರು ಒದಗಿಸುತ್ತಾ ಇಲ್ಲದಿರುವುದರಿಂದ ಸ್ಪ್ರಿಂಕ್ಲಿಂಗ್ ಪದ್ಧತಿಯನ್ನು ಜಾರಿಗೆ ತರುವುದು ಸೂಕ್ತವಲ್ಲವೆಂದು ನನ್ನ ಭಾವನೆ. ಐ.ಎ.ಡಿ.ಪಿ. ಪ್ರೋಗ್ರಾಂ ಜಾರಿಗೆ ಬಂದಮೇಲೆ ಸ್ಟ್ಯಾಟಿಸ್ಟಿತರ್ ಇಲಾಖೆಯವರು ಪ್ರತಿವರ್ಷ ನಮ್ಮ ಸರ್ಕಾರಕ್ಕೆ ಮತ್ತು ಕೇಂದ್ರ ಸರ್ಕಾರಕ್ಕೆ ಈ ಜಿಲ್ಲೆಯಲ್ಲಿ ಆಗತಕ್ಕಂಥ ಬೆಳೆಗಳ ವರದಿಯನ್ನು ಕಳಿಸುತ್ತಿದ್ದಾರೆ. ಇವರ ವರದಿಯನ್ನು ಲೆಕ್ಕಕ್ಕೆ ತೆಗೆದುಕೊಂಡರೆ ನಮ್ಮ ಜಿಲ್ಲೆಯಲ್ಲಿ ಈಗ ಹೆಚ್ಚಾಗಿ ಬೆಳೆಯುತ್ತಿರುವುದು ಕಬ್ಬು ಮತ್ತು ಬತ್ತವೇ ಜಾಸ್ತಿ. ಸಾಂದ್ರ ಬೇಸಾಯ ಪದ್ಧತಿ ಜಾರಿಗೆ ಬಂದಮೇಲೆ ನಮ್ಮ ಜಿಲ್ಲೆಯ 37 ಸಾವಿರ ಎಕರೆಯಲ್ಲಿ ಕಬ್ಬನ್ನು ಬೆಳೆಯುವುದಕ್ಕೆ ಪ್ರಾರಂಭ ಮಾಡಿದರು. 1967-68ರ ಲೆಕ್ಕದ ಪ್ರಕಾರ 42 ಸಾವಿರ ಎಕರೆಯಲ್ಲಿ ಕಬ್ಬನ್ನು ರೈತರು ಬೆಳೆದಿದ್ದಾರೆ. ಈ ವಿಚಾರವನ್ನು ಸ್ಟ್ಯಾಟಿಸ್ಟಿಕಲ್ ಇಲಾಖೆಯವರೇ ಹೇಳಿದ್ದಾರೆ. ಈ ಇಲಾಖೆಯವರು ಒಂದು ಟಿ.ಎಂ.ಸಿ. ಎಫ್.ಟಿ. ಯಷ್ಟು ನೀರು ಎರೆಡೂವರೆ ಎಕರೆಯಲ್ಲಿ ಕಬ್ಬನ್ನು ಬೆಳೆಯುವುದಕ್ಕೆ ಬೇಕಾಗುತ್ತದೆಂದೂ, ಒಂದು ಟಿ.ಎಂ.ಸಿ. ಎಫ್.ಟಿ.ಯಷ್ಟು ನೀರು ನಾಲ್ಕೂವರೆ ಎಕರೆಯಲ್ಲಿ ಬತ್ತವನ್ನು ಬೆಳೆಯುವುದಕ್ಕೆ ಬೇಕಾಗುತ್ತದೆಂದೂ, ಒಂದು ಟಿ.ಎಂ.ಸಿ.ಎಫ್.ಟಿ.ಯಷ್ಟು ನೀರು 10 ಎಕರೆಯಷ್ಟು ಸೆಮಿ ಡ್ರೈ ಏರಿಯಾದಲ್ಲಿ ಬೆಳೆ ಬೆಳೆಯುವುದಕ್ಕೆ ಬೇಕಾಗುತ್ತದೆಂದೂ ಹೇಳಿದ್ದಾರೆ. ನನ್ನ ಲೆಕ್ಕದ ಪ್ರಕಾರ 8 ಎಕರೆಯಷ್ಟು ಸೆಮಿ ಡ್ರೈ ಏರಿಯಾಕ್ಕೆ ಒಂದು ಟಿ.ಎಂ.ಸಿ.ಎಫ್.ಟಿ.ಯಷ್ಟು ನೀರು ಬೇಕಾಗುತ್ತದೆ. ನಾವು ಯಾವ ರೀತಿ ಲೆಕ್ಕ ಹಾಕಿದರೂ ಸಹ ಈಗಿನ ಪದ್ಧತಿಗೇ ನೀರು ಸಾಲದಂತಾಗಿದೆ. ನಾವು ಸರಕಾರದಲ್ಲಿ ಇಷ್ಟೇ ಕಳಕಳಿಯಿಂದ ಮನವಿ ಮಾಡುತ್ತಿರುವುದು. ಹತ್ತಿಪ್ಪತ್ತು ವರ್ಷಗಳಿಂದಲೂ ರೈಟ್ ಬ್ಯಾಂಕು ಚಾನಲ್ ಬಗ್ಗೆ ಕೇಳುತ್ತಿರುವುದು ಬಹಳ ಸಂಕುಚಿತ ದೃಷ್ಟಿಯಿಂದ ಹೇಳುತ್ತಾರೆಂದು ತೋರುತ್ತೆ. ನಲವತ್ತು ವರ್ಷಗಳ ಹಿಂದೆ ಕೃಷ್ಣರಾಜಸಾಗರ ನಿರ್ಮಾಣವಾದಾಗ ಆಗಿನ ತಜ್ಞರು ಅಭಿಪ್ರಾಯ ಕೊಟ್ಟಂತೆ ವಿಶ್ವೇಶ್ವರಯ್ಯ ನಾಲಾದ ಮೂಲಕ ನೀರು ಕೊಡುತ್ತಿದ್ದಾರೆ. ಅದರಂತೆ ಇಲ್ಲಿ ರೈತರು ಆಬಾದು ಮಾಡಿಕೊಂಡು ಭತ್ತ, ಕಬ್ಬು ಇವನ್ನು ಬೆಳೆಯುತ್ತಿದ್ದಾರೆ. ಇದಕ್ಕೆ ಇಲ್ಲಿನ ರೈತರು ವಾಟರ್ ರೇಟು ಹಾಗೂ ಕಾಂಟ್ರಿಬ್ಯೂಷನ್ ಕೊಡುತ್ತಿದ್ದಾರೆ. ತಮ್ಮ ಭೂಮಿಯನ್ನು ಆಬಾದು ಮಾಡಲು ಬಹಳ ಕಷ್ಟಪಟ್ಟಿದ್ದಾರೆ ಮೇಡು ಗುಡ್ಡಗಳನ್ನೆಲ್ಲಾ ಸರಿ ಮಾಡಿಕೊಂಡು ಸಾವಿರಾರು ರೂಪಾಯಿಗಳಷ್ಟು ಖರ್ಚು ಮಾಡಿಕೊಂಡು ವ್ಯವಸಾಯ ಮಾಡುತ್ತಿದ್ದಾರೆ. ನಿಜವಾಗಿಯೂ ಇಂತಹ ಜನಕ್ಕೆ ಈಗ ನೀರು ಕೊಡುವುದಿಲ್ಲ ಎನ್ನುವುದು ತುಂಬಾ ಶೋಚನೀಯವಾದ ವಿಚಾರ. ಇದರ ಬಗ್ಗೆ ಅನೇಕ ರಿಪೋರ್ಟುಗಳು ಬಂದಿವೆ. ಇದರಲ್ಲಿ ಎಷ್ಟು ಎಕರೆಗಳು ಇವೆ ಎನ್ನುವುದಕ್ಕೆ ಮತ್ತು ಎಷ್ಟು ಭತ್ತ ಹಾಗೂ ಎಷ್ಟು ಕಬ್ಬು ಬೆಳೆಯುತ್ತವೆ ಎನ್ನುವುದಕ್ಕೆ ವಿವರಗಳನ್ನು ಕೊಡಲು ಸ್ಟ್ಯಾಟಿಸ್ಟಿಕಲ್ ಡಿಪಾರ್ಟುಮೆಂಟು ಇದೆ, ಇಂಜಿನಿಯರಿಂಗ್ ಡಿಪಾರ್ಟ್‌ಮೆಂಟು ಇದೆ, ಅಗ್ರಿಕಲ್‌ಚರು ಡಿಪಾರ್ಟುಮೆಂಟು ಇದೆ. ಇದಲ್ಲದೆ ಇಲ್ಲಿನ ಜನ ಬಹಳ ಕಷ್ಟಪಟ್ಟು ಭೂಮಿಯನ್ನು ಆಬಾದು ಮಾಡಿ ಬೆಳೆ ಬೆಳೆಯುತ್ತಿದ್ದಾರೆ. ಇನ್ನು ಇದರ ಬಗ್ಗೆ ಅನೇಕರು ವರದಿಗಳನ್ನು ಸರಕಾರಕ್ಕೆ ಕೊಟ್ಟಿದ್ದಾರೆ. ಇದನ್ನು ಮಾಡುವುದು ಸರಿಯಲ್ಲ ಆದಕ್ಕಾಗಿ ನಾವು ಇಲ್ಲಿ ವಿರೋಧಿಸಬೇಕಾಗಿದೆ.

ಇನ್ನೂ ಒಂದು ವಿಚಾರವನ್ನು ಇಲ್ಲಿ ಹೇಳಬೇಕಾಗಿದೆ. ವಿಶ್ವೇಶ್ವರಯ್ಯ ನಾಲಾದಲ್ಲಿ ಒಂದು ಎಂ.ಸಿ.ಎಫ್.ಟಿ. ನೀರಿಗೆ ಇಷ್ಟು ಎಕರೆ ವ್ಯವಸಾಯ ಮಾಡಬಹುದು ಎಂದು ಹಿಂದೆ ಸರಕಾರಕ್ಕೆ ಕೊಟ್ಟಿರುವ ರಿಪೋರ್ಟಿನಲ್ಲೇ ಇದೆ. ಸುಮಾರು ಇಪ್ಪತ್ತೈದು ವರ್ಷಗಳಿಂದಲೂ ಕೃಷ್ಣರಾಜಸಾಗರದಿಂದ ವಿಶ್ವೇಶ್ವರಯ್ಯ ನಾಲಾದವರಿಗೆ ನೀರು ಕೊಡುತ್ತಿದ್ದಾರೆ. ಎಷ್ಟು ನೀರು ಬರುತ್ತಿದೆಯೋ ಅದನ್ನು ಪೂರ್ತಿಯಾಗಿ ಉಪಯೋಗ ಮಾಡಿಕೊಳ್ಳುತ್ತಿದ್ದಾರೆ. ಇಲ್ಲ ನಮಗೆ ಕೊಡುವ ನೀರು ಏನಾದರೂ ಉಳಿದರೆ ಅವರು ಬೇಕಾದರೆ ತೆಗೆದುಕೊಳ್ಳಬಹುದು. ಆದರೆ ನಮಗೆ ಕೊಡುತ್ತಿರುವ ನೀರೇ ಸಾಲುವುದಿಲ್ಲ. ಕಬಿನಿ ಯೋಜನೆ ಮೂಲಕ ನೀರು ತೆಗೆದುಕೊಳ್ಳಬಹುದು ಎಂದು ಇಲ್ಲಿ ಹೇಳುತ್ತಾರೆ. 1952ರಲ್ಲಿ ಸರಕಾರಕ್ಕೆ ಅನಂತಾಚಾರ್ ಎನ್ನುವವರು ಹಿಂದೆ ಚೀಫ್ ಇಂಜಿನೀಯರಾಗಿದ್ದವರು ಒಂದು ರಿಪೋರ್ಟನ್ನು ಕೊಟ್ಟಿದ್ದಾರೆ. ಅದರಲ್ಲಿ ಇದರ ಬಗ್ಗೆ ಎಲ್ಲ ಅಭಿಪ್ರಾಯಗಳನ್ನೂ ಕೊಟ್ಟಿದ್ದಾರೆ. ಅದರಲ್ಲಿ ಅವರೇ ಹೇಳುವಂತೆ ಮಂಡ್ಯವಲ್ಲರುವ ವಿಶ್ವೇಶ್ವರಯ್ಯ ನಾಲಾದ ತುದಿಯಲ್ಲಿರುವ ಜಮೀನಿಗೆ ಈಗ ಬರುತ್ತಿರುವ ನೀರೇ ಸಾಲುವುದಿಲ್ಲ ಇದರಿಂದಾಗಿ ಕೊನೇ ಭಾಗದಲ್ಲಿರುವ ಭೂಮಿಯಲ್ಲಿ ಕಬ್ಬು ಹಾಗೂ ಭತ್ತದ ಬೆಳೆ ಮಾಡಲು ಕಷ್ಟವಾಗುತ್ತದೆ

ಎಂದೂ ಆಗಲೇ ಹೇಳಿದ್ದರು. ಈಗ ಮತ್ತೆ ಇಲ್ಲಿ ಚರ್ಚೆಗೆ ಬಂದಿರುವ ವಿಚಾರ ಒಂದು ದೊಡ್ಡ ಸಮಸ್ಯೆಯಾಗಿದೆ. ಇದು ಹಿಂದೆ ಮಾಡಿರುವುದು ಸರಿಯಾಗಿಲ್ಲ. ಇದನ್ನು ಈಗ ಪುನರ್ವಿಮರ್ಶೆ ಮಾಡಬೇಕಾಗಿದೆ ಎಂದು ಹೇಳುತ್ತಾರೆ. ಇದರಲ್ಲಿ ಒಂದು ವಿಚಾರವನ್ನು ತಮ್ಮ ಗಮನಕ್ಕೆ ಇಲ್ಲಿ ತರಬೇಕಾಗಿದೆ.

1921ನೇ ಇಸವಿಯಲ್ಲಿ ಸರಕಾರದ ಒಂದು ಆರ್ಡರು ಎಂದರೆ ನಂಬರು ಜಿ ವಿ ಪಿ ಡಬ್ಲ್ಯು 411-21 ಕೆ ಎಸ್ ಹೆಚ್2565-75 ತಾರೀಖು 13ನೇ ಮೇ 1921 ಆಗಿ ಇದರಲ್ಲಿ ಯಾವ ರೀತಿಯಾಗಿದೆ ಕೃಷ್ಣರಾಜಸಾಗರ ನಾರಾವಿಂದ ನೀರು ಕೊಡುವ ಬಗ್ಗೆ ವಿವರಗಳಿವೆ. ಇದು ಈ ರೀತಿ ಇದೆ:

"Canals that should be adopted: The possible Canals are as noted below:

K. R. S. Reservoir:

		Net Irrigable area commanded.
1.	High Level Left Bank Canal from K.R.S.	1,50,000 to 1,70,000 acres. The Canal commands a total area of 3,70,000 acres of which, 2,84,000 is cultivable, but water will not be available for more than 1,50,000 to 1,70,000 acres under this canal according to the Agreement.
2.	Right Bank High Level Canal from K. R. S.	... 50,000 acres.
	Kabini Reservoir:	
3.	Kabini Left Bank Canal	... 10,200 acres.
4.	Kabini Right Bank Canal	... 36,000 acres.
5.	Suvarnavathy Canal	... 6,000 acrrs.
6.	Extension of C.D.S. Canal	... 15,000 acres.

There is water in the K.R.S. only for (1) or (2) but not for both. If the High Level Canal on the Left Bank is to be avoided, the combined area under (2), (3), (4), (5) and (6) is about 117,000 acres which is only one half of the area of 2,35,000 acres which Mysore is entitled to irrigate according to the Agreement.

It would in our opinion, be financially disadvantageous to divide the extension of irrigation below the reservoir on the two banks. There is a far greater need for extension of irrigation in the Mandya and Malavalli Taluks than in Mysore, Srirangapatna, Nanjangud or T. Narsipur Taluks."

(ಶ್ರೀ ಎಂ. ನಾಗಪ್ಪ)

ಆಗಲೇ ಮಂಡ್ಯದಲ್ಲಿ ನೀರಾವರಿ ಸೌಕರ್ಯ ಹೆಚ್ಚು ಮಾಡಬೇಕು ಎಂದಿತ್ತು. ಈಗ ವರುಣಾರಾ ಮಾಡಿ ರೈಟ್ ಬ್ಯಾಂಕ್ ಚಾನರ್ ಮೂಲಕ ನಾಲೆ ತೆಗೆಯಬೇಕು ಎಂದರೆ ಇದಕ್ಕೆ ನೀರು ಮೈಸೂರು ತಾಲ್ಲೂಕು ಹಾಗೂ ಶ್ರೀರಂಗಪಟ್ಟಣಗಳ ಮೂಲಕ ನೀರನ್ನು ಒದಗಿಸಬೇಕು ಎನ್ನುವ ದೃಷ್ಟಿ ಇತ್ತು ಎಂದು ತೋರುತ್ತದೆ. ಬಹುಶಃ ಆಗ ಮಂಡ್ಯ ಮಳವಳ್ಳಿ ಹಾಗೂ ಮದ್ದೂರು ಇವರ ದೃಷ್ಟಿಯಲ್ಲಿರಲಿಲ್ಲ. ಹಿಂದೆ ಲೇಟ್ ಕೃಷ್ಣ ಅಯ್ಯರ್ ಎನ್ನುವವರು ಚೀಫ್ ಇಂಜಿನಿಯರಾಗಿದ್ದರು ಎಂದು ಕಾಣುತ್ತದೆ. ಅವರೂ ಕೂಡ ಆಗ ಸರಕಾರಕ್ಕೆ ಒಂದು ರಿಪೋರ್ಟು ಕೊಟ್ಟಿದ್ದಾರೆ. ರೈಟ್ ಬ್ಯಾಂಕ್ ಚಾನರ್ ಎಂದು ಮಾಡುವುದು ಸರಿಯಲ್ಲ ಎಂದು ಆಗಲೇ ಹೇಳಿದ್ದಾರೆ ಮತ್ತು 32 ಮೈಲಿಗಳವರೆಗೆ ನೀರನ್ನು ಇದರಲ್ಲಿ ಉಪಯೋಗಿಸುವುದಕ್ಕೆ ಆಗುವುದಿಲ್ಲ ಎಂದೂ ಹೇಳಿದ್ದಾರೆ. ಆದುದರಿಂದ ಮತ್ತೆ ಈಗ ಕೃಷ್ಣರಾಜಸಾಗರದಿಂದ ರೈಟ್ ಬ್ಯಾಂಕ್ ಚಾನರ್ ಎಂದು ಮಾಡುವುದು ಆಗಲೇ ಫೀವರಬಲ್ ಆಗಿಲ್ಲ ಎನ್ನುವ ಅಭಿಪ್ರಾಯವನ್ನು ಸ್ಪಷ್ಟವಾಗಿ ಕೊಟ್ಟಿದ್ದಾರೆ. ಮೈಸೂರಿನವರು ಕಾವೇರಿ ನೀರನ್ನು ಸರಿಯಾಗಿ ಉಪಯೋಗ ಮಾಡುತ್ತಿಲ್ಲ. ನೀರು ವೇಸ್ಟ್ ಮಾಡುತ್ತಿದ್ದಾರೆ. ಮದ್ರಾಸಿನವರು ಆಗಲೇ ತಕ್ಕ ಕಾರ್ಯಕ್ರಮ ತೆಗೆದುಕೊಂಡು ಅವರು ಅಲ್ಲಲ್ಲಿ ಕಟ್ಟೆಗಳನ್ನು ಕಟ್ಟುತ್ತಿದ್ದಾರೆ. 1967-68ರ ಹೊತ್ತಿಗೆ ಲೆಫ್ಟ್ ಬ್ಯಾಂಕ್ ಚಾನರ್ ಮೂಲಕ 1,50,000 ಎಕರೆಗಳಿಗೆ ನೀರು ಉಪಯೋಗಿಸಬೇಕು ಎಂದು ಇತ್ತು. ಇದರಲ್ಲಿ 1,07,000 ಎಕರೆಗಳಿಗೆ ಮಾತ್ರ ಗ್ರಾವಿಟಿಕ್ಕಿ ಇರಿಗೇಷನ್ ಡೆವಲಪ್ ಮಾಡಲು ಆಯಿತು ಮತ್ತು 1924 ರಲ್ಲಿ ಆದ ಅಗ್ರಿಮೆಂಟಿನಲ್ಲಿ ಕೂಡ ಇದರ ಬಗ್ಗೆ ಸ್ಪಷ್ಟವಾದ ಅಭಿಪ್ರಾಯಗಳನ್ನೂ ಕೊಟ್ಟಿದ್ದಾರೆ. 1952 ರಲ್ಲಿ ಅನಂತಾಚಾರ್ ಕಮಿಟಿ ಮಾಡಿದಾಗಲೇ ಈ ಪ್ರಶ್ನೆಯನ್ನು ಕೂಲಂಕಷವಾಗಿ ವಿಚಾರ ಮಾಡಿ ಒಂದು ಅಭಿಪ್ರಾಯಕ್ಕೆ ಬಂದಿದ್ದರು. ಆಗಲೇ ರೈಟ್ ಬ್ಯಾಂಕು ಚಾನರ್ ಮಾಡರಾಗುವುದಿಲ್ಲ ಮತ್ತು ಇದಕ್ಕೆ ಸರಿಯಾದ ಯಾವ ಪ್ರಾಜೆಕ್ಟ್ ಕೂಡ ಇಲ್ಲ ಎಂದೂ ಹೇಳಿದ್ದರು. ಆದರೆ ಈಗ ಪುನಃ ಇದನ್ನು ಯಾವ ಕಾರಣಕ್ಕಾಗಿ ತರುತ್ತಿದ್ದಾರೆ ಎನ್ನುವುದು ನಮಗೆ ಗೊತ್ತಾಗುತ್ತಿಲ್ಲ. ಸರಕಾರ ಈಗಾಗಲೇ ಸುಮಾರು 30-40 ವರ್ಷಗಳಿಂದಲೂ ವಿಶ್ವೇಶ್ವರಯ್ಯ ನಾಲಾದವರಿಗೆ ರೈತರಿಗೆ ನೀರು ಕೊಡುತ್ತಿದ್ದಾರೆ. ಇದಕ್ಕೆ ಇಲ್ಲಿನ ಸಾವಿರಾರು ರೂಪಾಯಿಗಳನ್ನು ಖರ್ಚು ಮಾಡಿಕೊಂಡು ಅಡಾದು ಮಾಡಿದ್ದಾರೆ ಮತ್ತು ಇಲ್ಲಿ ಬತ್ತ ಕಬ್ಬು ಅಲ್ಲದೆ ಇತರ ಪೆರಿನ್ನಿಯರ್ ಕ್ರಾಪ್‌ಗಳೆಂದು ಅವನ್ನೂ ಬೆಳೆಮಾಡುತ್ತಿದ್ದಾರೆ. ಇದನ್ನು ಯಾವ ತಜ್ಞರೂ ಕೂಡ ಒಪ್ಪಿಲ್ಲ ಮತ್ತು ಇಲ್ಲಿನ ಜನರಿಗೆ ಬರುವ ನೀರನ್ನು ತಪ್ಪಿಸಿದರೆ ಅವರು ಮುಂದೆ ವ್ಯವಸಾಯ ಮಾಡುವುದಕ್ಕೇ ಆಗುವುದಿಲ್ಲ. 1942 ರಲ್ಲೇ ಇಂತಹ ಒಂದು ನಾಲೆ ಮಾಡಬೇಕು ಎನ್ನುವ ವಿಚಾರ ಬಂದಾಗ ಇದನ್ನು ಮಾಡಲಾಗುವುದಿಲ್ಲ ಎಂದು ಕೈ ಬಿಡಲಾಗಿತ್ತು. ಸುಮಾರು ನಲವತ್ತು ವರ್ಷಗಳಿಂದಲೂ ವಿಶ್ವೇಶ್ವರಯ್ಯ ನಾರಾದವರಿಗೆ ನೀರು ಕೊಡುತ್ತಿದ್ದಾರೆ. ಅದನ್ನು ಇಲ್ಲಿ ಉಪಯೋಗ ಮಾಡುತ್ತಿದ್ದಾರೆ. ಮತ್ತು ಈಗ ಹೊಸದಾಗಿ ರೈಟ್ ಬ್ಯಾಂಕ್ ಚಾನರ್ ಮಾಡಬೇಕು ಎಂದು ಇದರ ಅರ್ಗನೈಸರುಗಳು ಮಾಡಲು ಸರಿಯಾದ ಯಾವ ಒಂದು ಪ್ರಾಜೆಕ್ಟ್ ರಿಪೋರ್ಟ್ ಕೂಡ ಇಲ್ಲ. ಆಗ ಇದ್ದ ತಜ್ಞರು ಕೂಡ ಇದರ ಬಗ್ಗೆ ಒಪಿನಿಯನ್ ಕೊಟ್ಟು ಇದು ಸಾಧುವಾದುದಲ್ಲ ಎಂದೂ ಹೇಳಿದ್ದಾರೆ. ಯಾವಾಗಲಾದರೂ ಇಂತಹ ಒಂದು ನಾರಾ ಮಾಡಬೇಕಾದರೆ ಅದಕ್ಕೆ ತಕ್ಕ ಹಾಗೆ ಒಂದು ಯೋಜನೆ ಮಾಡಬೇಕು. ಹೀಗೆ ಯಾವ ಯೋಜನೆಯೂ ಇಲ್ಲದೆ ಮಾಡುವುದು ಅರ್ಥವಿಲ್ಲದ ಪ್ರಯತ್ನವಾಗುತ್ತದೆ. ಈಗಾಗಲೇ ಕೃಷ್ಣರಾಜಸಾಗರದಿಂದ ಬರುವ ನೀರೇ ಕಡಿಮೆಯಾಗುತ್ತ ಬರುತ್ತಿದೆ. ಆದುದರಿಂದ ಸರಕಾರದವರು ರೈಟ್ ಬ್ಯಾಂಕ್ ಚಾನರ್ ಮಾಡಬೇಕು ಎಂದು ಹೇಳುವ ನೀತಿ ಸರಿಯಾದುದಲ್ಲ ಎಂದು ಇಲ್ಲಿ ಹೇಳಬೇಕಾಗಿದೆ.

ಪ್ರತಿವರ್ಷವೂ 8-10 ಸಾವಿರ ಎಕರೆಗಳಿಗೆ ರೆಮಿಷನ್ ಕೊಡುತ್ತಾ ಇದ್ದಾರೆ. ಈ ಸಭೆಯ ಸದಸ್ಯರ ಒಂದು ಡೆಲಿಗೇಷನ್ ಕಳುಹಿಸಿ. ಇಲ್ಲಿಂದ ದಾವಣಗೆಯಲ್ಲಿ ಹೋಗುತ್ತಾ ನೋಡಿದರೆ ಗೊತ್ತಾಗುತ್ತದೆ. ಪ್ರತಿದಿವಸವೂ ರೈತರು ಲ್ಯಾಂಟೀನ್ ಹಿಡಿದುಕೊಂಡು ಹೋಗುತ್ತಾರೆ. ಅಲ್ಲಿ ನೀರೇ ಇರುವುದಿಲ್ಲ. ಕಬ್ಬಿಗೆ ನೀರು ಇಲ್ಲವೇ ಒಣಗಿಹೋಗುತ್ತಾ ಇದೆ. ಹೀಗೆ ಒಣಗಿ ಹೋಗುತ್ತಾ ಇರುವ ಬೆಳೆಗೆ ತೊಂದರೆಯಾಗುತ್ತಾ ಇದೆ. 40 ವರ್ಷದಿಂದಲೂ ಭತ್ತ ಬೆಳೆಯುತ್ತಾ ಇರುವ ಕಡೆ ಕಬ್ಬು ಬೆಳೆಯಿರಿ ಎಂದು ಹೇಳಿಬಿಟ್ಟು ಈವೊತ್ತು ಕಿತ್ತುಹಾಕಬೇಕು ಎನ್ನುವ ಯೋಜನೆ ಮಾಡುತ್ತೀರಾ?

ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬರುವ ಸಂದರ್ಭದಲ್ಲಿ ಶ್ರೀಮಾನ್ ರಾಜಗೋಪಾಲಾಚಾರಿಯವರು ಹಿಂದೂಸ್ಥಾನಕ್ಕೆ ಸ್ವಾತಂತ್ರ್ಯ ಬರಬೇಕಾದರೆ ಹಿಂದೂಸ್ಥಾನ ಪಾಕಿಸ್ತಾನ ಒಟ್ಟಿಗೆ ಇದ್ದರೆ

ಬರುವುದಿಲ್ಲ ಎಂದು ಹೇಳಿದರು ಅದರಂತೆ ಹಿಂದೂಸ್ಥಾನ ಪಾಕೀಸ್ತಾನ ಆದಮೇಲೆ ಸ್ವಾತಂತ್ರ್ಯ ಬಂತು. ಸರ್ಕಾರ ಒಂದುವೇಳೆ ತಪ್ಪು ಮಾಡಿದರೆ ಅದನ್ನು ತಿದ್ದುವುದು ಶ್ರೀಮಾನ್ ಶಿವಪ್ಪನವರಿಗೆ ಗೊತ್ತಿಲ್ಲವೇ? ಏನಾದರೂ ನ್ಯೂನತೆಗಳು ಆದರೆ ಅದು ದೇಶಕ್ಕೆಲ್ಲಾ ಅನ್ವಯಿಸುತ್ತದೆ ಎಂದು ತಿಳಿದುಕೊಳ್ಳಬೇಕು. ಈ ನಾಯಕರ ಮೇಲೆ ಅಂತಹ ವಿಶ್ವಾಸವನ್ನು ಇಟ್ಟುಕೊಂಡಿದ್ದುದರಿಂದಲೇ ನಾವು ಅವರನ್ನು ಚುನಾವಣೆ ಮಾಡಿದ್ದೇವೆ. ಕೆಲವು ವಿಷಯಗಳಲ್ಲಿ ತಪ್ಪು ಇದ್ದರೆ ತಿದ್ದೋಣ. ತಮ್ಮಲ್ಲಿ ಒಂದು ವಿಷಯ ಹೇಳುವುದಾದರೆ ಈಗ 2 ವರ್ಷದ ಹಿಂದೆ ಒಂದು ಸಕ್ಕರೆ ಕಂಪನಿಯ ಲೈಸನ್ಸ್ ವಿಷಯದಲ್ಲಿ ನಾನು ನನ್ನ ಮಿತ್ರರೂ ಡೆಲ್ಲಿಗೆ ಹೋಗಿದ್ದೆವು. ಅಲ್ಲಿ ತಜ್ಞರ ಅಭಿಪ್ರಾಯ ಒಂದು ತರಹ ಇದ್ದರೆ ಲೈಸನ್ಸ್ ಕೊಡುವವರ ಅಭಿಪ್ರಾಯ ಬೇರೆ ತರಹ ಇತ್ತು. ಇವರು ತಜ್ಞರಿಗೆ ನಾವೇ ಹೇಳುತ್ತೇವೆ ಎಂದರು. ಈ ರೀತಿ ನಡೆಯುತ್ತು. ಆದುದರಿಂದ ಈ ವರುಣಾ ನಾಲೆ ಬಗ್ಗೆ ಏನೂ ತೀರ್ಮಾನ ತೆಗೆದುಕೊಳ್ಳದೇ ಇದ್ದರೆ ಹೇಗೆ? ಆದುದರಿಂದ ಸರ್ಕಾರದವರು ಇದನ್ನು ಕೂಲಂಕಷವಾಗಿ ವಿಚಾರಿಸಿ ಈ ಆಚ್ಚುಕಟ್ಟು ಪ್ರದೇಶ ಏನು ಇದೆ ಅವರ ಕಷ್ಟ ಸುಖಗಳನ್ನು ವಿಚಾರಿಸಿ. ಯಾವುದೇ ದೃಷ್ಟಿಯಿಂದ ಅವರಿಗೆ ಅನ್ಯಾಯ ಮಾಡಬೇಡಿ. ಈಗ 40 ವರ್ಷದಿಂದ ಸಾವಿರಾರು ರೂಪಾಯಿಗಳನ್ನು ಖರ್ಚು ಮಾಡಿ ಜಮೀನುಗಳನ್ನು ಅಬಾದು ಮಾಡಿದ್ದಾರೆ. ಅವರಿಗೆ ಖಂಡಿತವಾಗಿ ನೀರು ಸಾಕಾಗುವುದಿಲ್ಲ. ಆದುದರಿಂದ ಈ ವರುಣಾ ನಾಲೆಯನ್ನು ಕೈ ಬಿಡುವುದು ಸೂಕ್ತ ಎಂದು ಹೇಳುತ್ತೇನೆ. ಇಷ್ಟು ಹೇಳಿ ಅಧ್ಯಕ್ಷರು ನನಗೆ ಮಾತನಾಡುವುದಕ್ಕೆ ಇಷ್ಟೊಂದು ಕಾರಾಪಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಡಿ. ಎಸ್. ನಾಡಕರ್ಣಿ (ಅಂಕೋಲ).—ಮಾನ್ಯ ಅಧ್ಯಕ್ಷರೇ, ನಮ್ಮ ಸರ್ಕಾರದ ಮುಖ್ಯ ಉದ್ದೇಶ ಡೆಮೋಕ್ರಾಟಿಕ್ ಸೋಷಿಯಾಲಿಸಮ್ ಆಗಿದೆ. ಅದರ ಪ್ರಕಾರ ನಾವು ನಮ್ಮ ರಾಜ್ಯದ ಉತ್ಪನ್ನದಿಂದ ಹೆಚ್ಚು ಹಣವನ್ನು ಸರ್ಕಾರಿ ವಲಯದ ಉದ್ಯಮಗಳಲ್ಲಿ ತೊಡಗಿಸಬೇಕು. ಇದರ ಜೊತೆಗೆ ಕೇಂದ್ರ ಸರ್ಕಾರದಿಂದಲೂ ಹಣಕಾಸನ್ನು ತೆಗೆದುಕೊಂಡು ಉದ್ಯಮಗಳಿಗೆ ಹಾಕಬೇಕು. ಇದರ ಮುಖ್ಯ ಉದ್ದೇಶ ಕರಭಾರ ಕಡಿಮೆ ಮಾಡಬೇಕು ಎನ್ನುವುದು. ಆದರೆ ಇವೊತ್ತಿನ ದಿವಸ ಏನಾಗಿದೆ ಎಂದರೆ ನಮ್ಮ ಸರ್ಕಾರದ ಉದ್ಯಮಗಳಲ್ಲಿ ನಷ್ಟವಾಗುತ್ತಾ ಇದೆ ಎಂದು ಹೇಳಿದ್ದಾರೆ. ಮತ್ತು ಸರ್ಕಾರಿ ವಲಯಗಳಲ್ಲಿರುವ ಉದ್ಯಮಗಳನ್ನು ಖಾಸಗಿ ವಲಯಕ್ಕೆ ಕೊಡಬೇಕೆಂದು ಹೇಳುತ್ತಿದ್ದಾರೆ. ಬೇರೆ ದೇಶದಲ್ಲಿ ಹೋಗಿ ನೋಡಿದರೆ ಅಲ್ಲಿ ಉದ್ಯಮಗಳು ಬೇಕಾದಷ್ಟು ಹಣವನ್ನು ಸಂಪಾದನೆ ಮಾಡಿ ಸರ್ಕಾರದ ಇತರ ಕೆಲಸಗಳಿಗೆ ಉಪಯೋಗಿಸುತ್ತಿದ್ದಾರೆ. ನಮ್ಮಲ್ಲಿ ನಷ್ಟವಾಗುತ್ತಾ ಇವೆ. ಆದರೆ ಖಾಸಗಿ ಕ್ಷೇತ್ರಗಳಲ್ಲಿ ಉದ್ಯಮಗಳು ಚೆನ್ನಾಗಿ ನಡೆದು ರಾಜ್ಯಕ್ಕೆ 10 ಆಣೆ, 12 ಆಣೆ, 14 ಆಣೆ ಇನ್‌ಕಂ ಟ್ಯಾಕ್ಸ್ ಕೊಟ್ಟು ರಾಭ ಮಾಡುತ್ತಿದ್ದಾರೆ. ಪಬ್ಲಿಕ್ ಸೆಕ್ಟಾರ್‌ನಿಂದ ಉತ್ಪನ್ನ ಕಡಿಮೆಯಾಗಿ ನಷ್ಟ ಜಾಸ್ತಿಯಾಗಿದೆ. ಇದರಿಂದ ಅವಕ್ಕೆ ಹಾಕಿರತಕ್ಕಂಥ ದುಡ್ಡು ಸರ್ಕಾರದ ಬೊಕ್ಕಸಕ್ಕೆ ಬರುತ್ತಾ ಇಲ್ಲ. ಇದು ಏತಕ್ಕೆ ಎನ್ನುವುದನ್ನು ಪರೀಕ್ಷೆ ಮಾಡಬೇಕು. ನನಗೆ ತಿಳಿದಮಟ್ಟಿಗೆ ಹೇಳುವುದಾದರೆ ಈ ಉದ್ಯಮಗಳಲ್ಲಿ ನೇಮಿಸಿಕೊಳ್ಳಬೇಕಾಗಿರತಕ್ಕಂಥ ನೌಕರರು ಅವರು ಬಹಳ ಮಟ್ಟಿಗೆ ಯೋಗ್ಯತೆ ಇಲ್ಲದೇ ಇರತಕ್ಕಂಥವರು ಮತ್ತು ಎಷ್ಟು ಬೇಕೋ ಅದಕ್ಕಿಂತಲೂ ಹೆಚ್ಚು ಸಂಖ್ಯೆಯಲ್ಲಿ ಅವರನ್ನು ನೇಮಿಸಿಕೊಂಡಿದ್ದಾರೆ. ಅದರಲ್ಲಿ ತಮಗೆ ಬೇಕಾದವರಿಗೆ, ಮಿನಿಸ್ಟರ್ಸ್, ಎಂ.ಎಲ್.ಎ. ಇಂತಹವರ ಸಂಬಂಧಿಕರನ್ನು ನೇಮಿಸಿಕೊಂಡಿದ್ದಾರೆ. ಈ ರೀತಿ ನಾನಾ ಅಧಿಕಾರಿಗಳಿಗೆ ಪಗಾರ ಹೆಚ್ಚು ಹೋಗುತ್ತಾ ಇದೆ. ಆ ರೀತಿ ನೇಮಿಸಿಕೊಳ್ಳಲು, ಅದರ ಕೆಲಸ ಇಲ್ಲದೇ ಇದ್ದರೂ ಕೂಡ ಈ ರೀತಿ ನೇಮಿಸಿಕೊಂಡಿರುವುದು ತಪ್ಪು. ಉದಾಹರಣೆ ಹೇಳುವುದಾದರೆ ಮೈಸೂರು ಐರನ್ ಅಂಡ್ ಸ್ಟೀರ್ ವರ್ಕ್ಸ್, ಭದ್ರಾವತಿ.

ಮೈಸೂರು ಐರನ್ ಅಂಡ್ ಸ್ಟೀಲ್ ವರ್ಕ್ಸ್ ಭದ್ರಾವತಿ ಇವರಿಗೆ ಬರ್ಟ್ಸ್ ಬೇಕೆಂದು ಮೆಸರ್ಸ್ ಭಾರತ್ ಸ್ಟೀರ್ ರಿ-ರೋಲಿಂಗ್ ಮಿಲ್ಸ್, ವೈಟ್‌ಫೀಲ್ಡ್ ಇವರಿಗೆ 7 ಲಕ್ಷ ರೂಪಾಯಿ ಸರ್ಕಾರದವರು ಸಾಲ ಕೊಟ್ಟರು. ಅದು ಕೆಲಸ ಮಾಡುತ್ತಾ ಇಲ್ಲ. ಮತ್ತು ಈಗಾಗಲೇ ಆ ಕಂಪನಿ ಮೇಲೆ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದವರದ್ದು 8 ಲಕ್ಷ ರೂಪಾಯಿಯಷ್ಟು ಸಾಲ ಇದೆ. ಮತ್ತು ಅದರ ಬಡ್ಡಿಯೂ ಇದೆ. ಇದು ಮೊದಲನೇ ಥಾರ್ಜು. ಈ 7 ಲಕ್ಷ ರೂಪಾಯಿ ಕೊಟ್ಟಿರತಕ್ಕಂಥಾದ್ದನ್ನು ಸೆಕೆಂಡ್ ಥಾರ್ಜು ಎಂದು ಮಾಡಿದ್ದಾರೆ. ಇದು ಜನಗಳ ಕಣ್ಣು ಒರೆಸುವುದಕ್ಕೆ ಮಾಡತಕ್ಕಂಥಾದ್ದು. ಇದಲ್ಲದೆ ಒಂದು ಸ್ಪೆಷರ್ ಜಿ.ಓ. ಆಯಿತು. ಏನೆಂದರೆ ಎಂ.ಎಸ್. ರೌಂಡ್ಸ್ ಪರ್ಚೇಸ್ ಮಾಡಬೇಕಾದರೆ 33 ಪರ್ಸೆಂಟು ರಿಸರ್ವ್ ಆಗಿರಬೇಕೆಂದು ಮಾಡಿದ್ದಾರೆ. ಆದರೆ 12 ಪರ್ಸೆಂಟ್ ಮೇಲೆ ತೆಗೆದುಕೊಳ್ಳುತ್ತಾ ಇಲ್ಲ. ಏತಕ್ಕೆಂದರೆ ಅಲ್ಲ ಫೆವರಿಟಿಸಮ್ ಇದೆ. ಇದನ್ನು ಎಕ್ಸಿಕ್ಯೂಟೀವ್ ಎಂಜನೀಯರ್ ಚೀಫ್ ಇಂಜನೀಯರ್‌ಗೆ ರಿಪೋರ್ಟ್ ಮಾಡಿದರೂ ಕೂಡ ಯಾರೂ ಗಮನ ತೆಗೆದುಕೊಳ್ಳುತ್ತಾ ಇಲ್ಲ. ಕೆಲವು ಕಚ್ಚಾ ಮಾಲುಗಳನ್ನೂ ತೆಗೆದುಕೊಳ್ಳುತ್ತಾರೆ.

(ಶ್ರೀ ಡಿ. ಎಸ್. ನಾಡಕರ್ಣಿ)

ಉಳಿದುದನ್ನು ಬೇರೆ ಪ್ರೈವೇಟ್ ಕಂಪನಿಯಿಂದ ತೆಗೆದುಕೊಳ್ಳುತ್ತಾರೆ. ಇದರಿಂದ ಅವರಿಗೆ ಸಹಾಯವಾಗುತ್ತದೆ. ಭದ್ರಾವತಿಯಲ್ಲಿ ವಿಪರೀತ ಕರಪ್ಷನ್ ಇದೆ. ಸಣ್ಣಸಣ್ಣ ಉದ್ಯಮ ದಲ್ಲೂ ಕೂಡ ಇದ್ದೇ ಇದೆ. ಓರ್‌ನ್ನು ತೆಗೆದುಕೊಳ್ಳುವುದರಲ್ಲೂ ಕೂಡ ಲಂಚಗುಳಿತನ ಇದ್ದೇ ಇದೆ ಇದರಿಂದ ಪಬ್ಲಿಕ್ ಸೆಕ್ಟಾರ್ ಅಂದರ್ ಟೇಕಿಂಗ್ಸ್ ತೃಪ್ತಿಕರವಾಗಿ ಕೆಲಸ ಮಾಡದೇ ಇರುವುದರಿಂದ ಲಾಭ ಸಂಪಾದನೆ ಮಾಡುತ್ತಾ ಇಲ್ಲ.

ಇನ್ನು ಇದೇ ತರಹ ಜೋಗ್ ಫಾಲ್ಸ್ ಟೂರಿಸ್ಟ್ ಸೆಂಟರ್ ವಿಷಯ. ಜೋಗ ಫಾಲ್ಸ್‌ನ್ನು ಒಂದು ಟೂರಿಸ್ಟ್ ಸೆಂಟರ್ ಮಾಡಿ ಅಲ್ಲಿ ಇಮ್ಮಾರತ್ ಹೊಟೇಲ್ ಬಿಲ್ಡಿಂಗ್‌ನ್ನೂ ಒಬ್ಬ ಖಾಸಗೀ ವ್ಯಕ್ತಿಗೆ ವರ್ಷಕ್ಕೆ 500 ರೂಪಾಯಿಯಂತೆ ಗೊತ್ತುಮಾಡಿ 5 ವರ್ಷಕ್ಕೆ ಗುತ್ತಿಗೆಗೆ ಕೊಟ್ಟಿದ್ದಾರೆ. ಆ ವ್ಯಕ್ತಿ ಒಂದು ಕೋಣೆಗೆ ಒಂದು ದಿವಸಕ್ಕೆ 10 ರೂಪಾಯಿ ಛಾರ್ಜು ಮಾಡುತ್ತಾನೆ. ಇದರಿಂದ ಅವರಿಗೆ ಕನಿಷ್ಠಪಕ್ಷ ವರ್ಷಕ್ಕೆ 50 ಸಾವಿರ ರೂಪಾಯಿ ಉತ್ಪತ್ತಿ ಬರುತ್ತದೆ. ಅದಲ್ಲದೆ ಫುಡ್ ಅಂಡ್ ಅದರ್ ಛಾರ್ಜಸ್ ಬೇರೆ. ವರ್ಷಕ್ಕೆ 10 ತಿಂಗಳೂ ಕೂಡ ಚೆನ್ನಾಗಿ ನಡೆಯುತ್ತದೆ. ಅದನ್ನು ಟೆಂಡರ್ ಕರೆಯದೆ ಒಬ್ಬ ವ್ಯಕ್ತಿಗೆ ಸಹಾಯ ಮಾಡುವುದಕ್ಕೆ ಈ ರೀತಿ ಮಾಡಿದ್ದಾರೆ. ಬೇರೆಯವರಿಗೆ ಅಷ್ಟು ಉತ್ಪತ್ತಿ ಬಂದರೂ ಕೂಡ ನಮ್ಮ ಸರ್ಕಾರ ಅದನ್ನು ನಡೆಸುವುದಕ್ಕಾಗುವುದಿಲ್ಲ.

5-30 P.M.

ಕೃಷ್ಣರಾಜಸಾಗರ ಹೋಟೆಲ್, ಹೋಟೆಲ್ ಮೆಟ್ರೊಪೋಲ್ ಮತ್ತು ಕೃಷ್ಣರಾಜಸಾಗರ ದಲ್ಲಿರುವ ರೆಸ್ಟೋರೆಂಟ್ ಇಷ್ಟೂ ಕೂಡಿ ವರ್ಷಕ್ಕೆ 3,000 ರೂಪಾಯಿಗಳಿಗೆ ಕೊಟ್ಟಿದ್ದಾರೆಂದು ಕೇಳಿದ್ದೇನೆ. ಅದನ್ನು ಬಿರ್ ಕಂಪೆನಿಗೆ ಕೊಟ್ಟಿದ್ದಾರೆ. ಅವರು ಚುನಾವಣಾ ನಿಧಿಗೆ ಹಣ ಕೊಡುತ್ತಿದ್ದಾರೆ. ಅವರು ಒಂದು ಕೋಣೆಗೆ ಒಂದು ದಿವಸಕ್ಕೆ 50 ರೂಪಾಯಿ ಬಾಡಿಗೆ ತೆಗೆದುಕೊಳ್ಳುತ್ತಾರೆ. ಅದು ಏನಾ ರೆಸ್ಟೋರೆಂಟ್‌ನಲ್ಲಿ ಒಂದೇ ಒಂದು ದಿವಸದಲ್ಲಿ ಒಂದು ಸಾವಿರ ರೂಪಾಯಿ ಉತ್ಪನ್ನವಿದೆ. ಈ ಪ್ರಕಾರದಲ್ಲಿ ನಡೆಯುತ್ತಿದೆ. ಅವರ ಕಂಟ್ರಾಕ್ಟ್ ಮುಗಿಯುತ್ತಾ ಬಂದಿದೆ ಎಂದು ಕೇಳುತ್ತೇನೆ. ಇನ್ನು ಮುಂದಾದರೂ ಸಂಬಂಧಪಟ್ಟ ಮಂತ್ರಿಗಳು ಟೆಂಡರ್ ಕರೆದು ಯಾರು ಹೆಚ್ಚು ಕೊಡುತ್ತಾರೆ ಅವರಿಗೆ ಕೊಡಬೇಕೆಂದು ಸೂಚಿಸುತ್ತೇನೆ.

ಬೆಂಗಳೂರು ನಗರದಲ್ಲಿ ಬಿ.ಟಿ.ಎಸ್. ಬಸ್ಸುಗಳು 350ರ ಮೇಲೆ ಓಡಾಡುತ್ತಿವೆ. ಅದರಲ್ಲಿ ಅಡ್ವರ್ಟೈಸ್‌ಮೆಂಟ್ ಇದೆ. ರೈಲ್ವೆ ಖಾತೆಯವರು ರೈಲ್ವೆ ನಿರ್ಮಾಣದಲ್ಲಿ ಎರಡು ಲಕ್ಷ ರೂಪಾಯಿ ಉತ್ಪನ್ನವನ್ನು ಅಡ್ವರ್ಟೈಸ್‌ಮೆಂಟ್‌ನಿಂದ ಪಡೆಯುತ್ತಿದ್ದಾರೆ. ಅದೇ ಬಿ.ಟಿ.ಎಸ್. ಎಷ್ಟು ಉತ್ಪನ್ನ ಮಾಡುತ್ತಿದೆ! ಇದರಲ್ಲಿ ಎಂಟು ಸಾವಿರ ರೂಪಾಯಿಗಳಿಗೆ ಎಂಟು ವರ್ಷಗಳ ಕಾಲಕ್ಕೆ ಗುತ್ತಿಗೆಗೆ ಕೊಟ್ಟಿದ್ದಾರೆ. ಇದರಿಂದ ಎಷ್ಟು ಲುಕ್ಸಾನಾಗುತ್ತದೆ? ಇದರಲ್ಲಿ ಕಂಟ್ರಾಕ್ಟ್ ಪಡೆದಿರುವ ವ್ಯಕ್ತಿಗಳು ಅದನ್ನು ಬೇರೆಬೇರೆಯವರಿಗೆ ಬೋರ್ಡ್ ಹಚ್ಚಲಿಕ್ಕೆ ಕೊಡುತ್ತಿದ್ದಾರೆ ಮತ್ತು ಅವರಿಂದ ಒಂದು ಬಸ್ಸಿಗೆ 200–300 ರೂಪಾಯಿ ತೆಗೆದುಕೊಳ್ಳುತ್ತಾರೆ.

ವಿದ್ಯುಚ್ಛಕ್ತಿ ಮಂಡಲ ವಿಚಾರ ತೆಗೆದುಕೊಂಡರೆ ಅಲ್ಲಿ ಚೇರ್‌ಮನ್ ಆಗಿ ಇದ್ದವರು 25 ಲಕ್ಷ ರೂಪಾಯಿಗಳ ಸಾಮಗ್ರಿಗಳನ್ನು ಖರೀದಿ ಮಾಡಿದರು. ಅದಕ್ಕೆ ಟೆಂಡರ್ ಕರೆಯಲಿಲ್ಲ. 25 ಲಕ್ಷ ರೂಪಾಯಿಗಳ ವ್ಯವಹಾರ ಮಾಡಿ ಹೊರಟಿದ್ದಾರೆ. ಅದರಲ್ಲಿ ಬಂದಂಥ ಪ್ರತಿಫಲ ಯಾರಿಗೆ ಹೋಯಿತು ಎಂದು ನಾನು ಬಿಡಿಸಿ ಹೇಳಬೇಕಾಗಿಲ್ಲ.

ಸ್ವಜನ ಪಕ್ಷಪಾತ ಮಾಡುತ್ತಾರೆ ಎನ್ನುವುದಕ್ಕೆ ಒಂದು ವಿಚಾರ ಹೇಳುತ್ತೇನೆ. ಕಾಂಗ್ರೆಸ್ ವಸ್ತು ಪ್ರದರ್ಶನ ನಡೆಯುತ್ತಿದೆ. ಅದು ವರ್ಷೇ ವರ್ಷೇ ನಡೆಯುತ್ತಿದೆ. ಅದಕ್ಕೆ ಸಾವಿರಾರು ರೂಪಾಯಿ ಬೆಲೆ ಬಾಳುವ ಕಾರುಗೇಟೆಡ್ ಷೀಟುಗಳನ್ನು ಕೊಡುತ್ತಾರೆ. ಅದನ್ನು ಕಾಳಸಂತೆಯಲ್ಲಿ ಮಾರಿ ಅದರಿಂದ ಬರುವ ಹಣ ಯಾರ ಜೇಬಿಗೆ ಹೋಗುತ್ತದೆ! ಹೀಗೆ ಹೇಳಲಿಕ್ಕೆ ಹೋದರೆ ಅನೇಕ ವಿಷಯಗಳುಂಟು. ಹೆಚ್ಚು ವೇಳೆ ಇಲ್ಲದ್ದರಿಂದ ಅವನ್ನೆಲ್ಲಾ ಹೇಳುವುದಕ್ಕೆ ಹೋಗುವುದಿಲ್ಲ.

ಈ ರೀತಿ ಮಾಡುತ್ತಿರಬೇಕಾದರೆ ಸಮಾಜವಾದದಲ್ಲಿ ವಿಶ್ವಾಸ ಎಲ್ಲಿದೆ! ಚುನಾವಣೆಗಳ ಸಮಯದಲ್ಲಿ ಮಾತ್ರ ಸಮಾಜವಾದದ ವಿಷಯವನ್ನು ಹೇಳುತ್ತಾರೆ. ಇವರು ಮಾಡುವುದೇನೆಂದರೆ ಈ ತರಹ ಸರ್ಕಾರಕ್ಕೆ ಬರುವಂಥ ಉತ್ಪನ್ನವನ್ನು ತಮ್ಮ ಜೇಬಿಗೆ ಹಾಕಿಕೊಂಡು ಹೋಗುತ್ತಿ

ದ್ದಾರೆ. 'ಸ್ಲೋ ಡೆತ್' ಎನ್ನುವ ಹಾಗೆ ನಿಧಾನವಾಗಿ ಸಮಾಜವಾದವನ್ನು ಸಾಯಿಸುವುದಕ್ಕೆ ಹೊರಟಿದ್ದಾರೆ. ಈ ವರ್ಷ ಗಾಂಧಿ ಶತಾಬ್ದಿ ವರ್ಷ ಎಂದು ಹೇಳುತ್ತಿದ್ದಾರೆ. ಈ ಸಲ ಸಮಾಜವಾದವನ್ನು ಸಂಪೂರ್ಣವಾಗಿ ಮುಗಿಸಿಬಿಡುತ್ತಾರೆ; ಅದನ್ನು ಸಮಾಧಿ ಮಾಡಲಕ್ಕೆ ಹೊರಟಿದ್ದಾರೆ.

ನಾಲ್ಕನೆ ಯೋಜನೆ ಸಂಬಂಧದಲ್ಲಿ ಒಂದು ಮಾತು. ಪ್ಲಾನಿಂಗ್ ಕಮಿಷನ್ ಉಪಾಧ್ಯಕ್ಷರಾದ ಶ್ರೀ ಗಾಡ್ಗಿಲ್ ಅವರು ಗುಜರಾತ್ ವಿಶ್ವವಿದ್ಯಾಲಯದಲ್ಲಿ ಭಾಷಣ ಮಾಡುತ್ತಾ ಕೆಲವು ವಿಷಯಗಳನ್ನು ಹೇಳಿದ್ದಾರೆ. ನಮ್ಮ ಮೈಸೂರು ರಾಜ್ಯಕ್ಕೆ ಬರುವಂಥ ಪಾಲು ಸರಿಯಾಗಿ ಬರಲಿಲ್ಲ. ರ್ಯಾಪ್ರದಲ್ಲಿರುವ 13 ರಾಜ್ಯಗಳಲ್ಲಿ ಮೈಸೂರು 9ನೇ ಸ್ಥಾನವನ್ನು ಪಡೆದಿದೆ. ಕೆಲವು ಕಡೆ 500 ಕೋಟಿ ರೂಪಾಯಿ, ಕೆಲವು ಕಡೆ 250 ಕೋಟಿ ರೂಪಾಯಿ ಹೀಗೆಲ್ಲ ಕೊಡುತ್ತ, ಬಂದು ನಮ್ಮ ಮೈಸೂರು ರಾಜ್ಯಕ್ಕೆ 30.03 ಕೋಟಿ ರೂಪಾಯಿ ಅಥವಾ ಸೇಕಡ 1.62 ಪ್ರಮಾಣದಲ್ಲಿ ಸಿಕ್ಕಿದೆ. ನಮಗಿಂತ ಕಡಮೆ ಪಂಜಾಬ್, ಅಸ್ಸಾಂ, ಕೇರಳ, ರಾಜಾಸ್ಥಾನ.

ನಮ್ಮ ದೇಶಕ್ಕೆ ವಿದೇಶಿ ವಿನಿಮಯ ಬೇಕಾಗಿದೆ. ಅದು ಸಿಕ್ಕಬೇಕಾಗಿದ್ದರೆ ರಫ್ತು ಮಾಡಬೇಕು. ಸುಲಭವಾಗಿ ನಮ್ಮಲ್ಲಿ ಖನಿಜಗಳು ಸಿಕ್ಕುತ್ತವೆ. ಇದನ್ನು ರಫ್ತು ಮಾಡಿದರೆ ನಮ್ಮಿಂದ ಖರೀದಿ ಮಾಡುವ ದೇಶಗಳು ಕಾಂಪಿಟಿಟಿವ್ ರೇಟ್ಸ್ ನೋಡುತ್ತವೆ. ಕಡಮೆ ದರದಲ್ಲಿ ಸಿಕ್ಕಿದರೆ ಅದನ್ನು ಅವರು ಒಯ್ಯಬಹುದು. ನಮ್ಮ ಸರ್ಕಾರ ಈ ದೃಷ್ಟಿಯಿಂದ ಯಾವ ಯೋಜನೆಯನ್ನೂ ಇಟ್ಟುಕೊಂಡಿಲ್ಲ ಎಂದು ಹೇಳಬೇಕಾಗಿದೆ.

ಉತ್ತಮವಾದ ಕಬ್ಬಿಣದ ಅದಿರು ಹೇರಳವಾಗಿ ಬಳ್ಳಾರಿ ಹೊಸಪೇಟೆ ಭಾಗದಲ್ಲಿ ಸಿಕ್ಕುತ್ತದೆ. ಅದನ್ನು ಕಡಮೆ ಖರ್ಚಿನಲ್ಲಿ ಹೊರಗಡೆಗೆ ಕಳಿಸುವುದು ಹೇಗೆ ಎಂದು ಯೋಚನೆ ಮಾಡಬೇಕು. ಕೆಲವು ತಜ್ಞರು ಕೊಟ್ಟಿರುವ ಅಭಿಪ್ರಾಯಗಳನ್ನು ಈ ಸಂಬಂಧದಲ್ಲಿ ನಾನು ಇಲ್ಲಿ ಒತ್ತಿ ಹೇಳಬಯಸುತ್ತೇನೆ.

> "Karwar port is one of the finest and safest natural harbours in the world. Its superiority over other ports is undisputed. The Chairman of the National Shipping Board has stated: Mysore, a major maritime State should have a ship-building yard. Karwar port is the third best port in the world and should be developed into a major port. Karwar, one of the best natural ports in the country has been neglected for a long time for various political reasons. Mysore has not made enough noise to make itself felt in the matter of port development."

ಇದು ಬೇರೆ ಯಾರೂ ಹೇಳಿದ್ದಲ್ಲ. ನ್ಯಾಷನಲ್ ಷಿಪಿಂಗ್ ಬೋರ್ಡ್ ಚೇರ್‌ಮನ್ ಅವರು ಹೇಳಿದ್ದು. ಇದನ್ನು ಒಂದು ಉದಾಹರಣೆಯಾಗಿ ಹೇಳಿದ್ದೇನೆ. ಇಷ್ಟೇ ಅಲ್ಲದೆ ಹೊಸಪೇಟೆ-ಹುಬ್ಳಿ-ಕಾರವಾರ ರೈಲು ಮಾರ್ಗವನ್ನು ಪೂರೈಸಿದರೆ ಅದಕ್ಕೆ 19 ಕೋಟಿ ರೂಪಾಯಿ ವೆಚ್ಚವಾದರೂ ಅದನ್ನು ಐದಾರು ವರ್ಷಗಳಲ್ಲಿ ಸಂಪೂರ್ಣವಾಗಿ ಹಿಂದಕ್ಕೆ ಪಡೆಯಬಹುದು. ಈ ಯೋಜನೆಯನ್ನು ಮಾಡದೆ ಬೇರೆ ರೀತಿಯಲ್ಲಿ ಯೋಚನೆ ಮಾಡುತ್ತ ಇದ್ದಾರೆ. ಗೋವ, ಮಧ್ಯಾನ್ ಬಂದರುಗಳ ಮೂಲಕ ಅದಿರನ್ನು ಸಾಗಿಸುವುದಕ್ಕೆ ಹೋದರೆ ಸರ್ಕಾರಕ್ಕೆ ಲುಕ್ಸಾನಾಗುತ್ತದೆ.

ನಮ್ಮ ಜಿಲ್ಲೆಯೊಳಗೆ ಅರಣ್ಯ ಸಂಪತ್ತಿದೆ. ಆದರೆ ಅದರಿಂದ ನಮ್ಮ ಜಿಲ್ಲೆಯ ಅಭಿವೃದ್ಧಿಗೆ, ಅಲ್ಲಿಯ ಬಡತನದ ನಿವಾರಣೆಗೆ ಏನೂ ಸಹಾಯವಾಗುತ್ತಿಲ್ಲ. ಅಲ್ಲಿಗೆ ಬೇಕಾದ ಯಾವುದೂ ಯೋಜನೆಗಳನ್ನು ಮಾಡುವುದೂ ಇಲ್ಲ.

ಕಾರವಾರ ಜಿಲ್ಲೆಯಲ್ಲಿ ಬೇಕಾದಷ್ಟು ವಿದ್ಯುತ್ತನ್ನು ಉತ್ಪಾದನೆ ಮಾಡಲಕ್ಕೆ ಶಕ್ಯವಿದೆ. ಮೈಸೂರು ರಾಜ್ಯದಲ್ಲಿ ಮೂರು ನಾಲ್ಕು ವರ್ಷಗಳಿಂದ ಹೆಚ್ಚು ವಿದ್ಯುತ್ತನ್ನು ಉತ್ಪಾದನೆ ಮಾಡುತ್ತಿದ್ದಾರೆ. ನಮ್ಮ ಜಿಲ್ಲೆಯಲ್ಲಿ ಹೊಳೆಗಳು ಬಹಳ ಇವೆ. ಆದರೂ ಅಲ್ಲಿ ವಿದ್ಯುತ್ತನ್ನು ಉತ್ಪಾದನೆ ಮಾಡುವುದಕ್ಕೆ ಬೇಕಾದ ಯೋಜನೆಗಳನ್ನು ಮಾಡಿಲ್ಲ. ನಮ್ಮಲ್ಲಿ ಆಗುವ ವಿದ್ಯುತ್ತನ್ನು ನೆರೆ ರಾಜ್ಯಗಳಿಗೆ ಕೊಡುತ್ತಿದ್ದಾರೆ. ಆದರೆ ಅದನ್ನು ನಮ್ಮ ರಾಜ್ಯದಲ್ಲಿಯೇ ಉಪಯೋಗಿಸಿಕೊಳ್ಳುವ ಹಾಗೆ ರಾಜ್ಯದಲ್ಲಿ, ಮುಖ್ಯವಾಗಿ ಕಾರವಾರ ಜಿಲ್ಲೆಯಲ್ಲಿ ಯಾವ ಉದ್ಯೋಗಗಳನ್ನೂ

(ಶ್ರೀ ಡಿ. ಎಸ್. ನಾಡಕರ್ಣಿ)

ಕ್ಯೆಕೊಳ್ಳುವುದಕ್ಕೆ ಬೇಕಾದ ಪ್ರಯತ್ನಗಳನ್ನು ಮಾಡಿಲ್ಲ. ನಮ್ಮ ರಾಜ್ಯಕ್ಕೆ ಇರುವ 200 ಮೈಲು ಕರಾವಳಿಯಲ್ಲಿ 100 ಮೈಲು ನಮ್ಮ ಜಿಲ್ಲೆಯಲ್ಲದೆ ಮೀನುಗಾರಿಕೆಗೆ ಬಹಳ ಅನುಕೂಲಗಳಿವೆ. ಆದರೂ ಯಾವುದೇ ನಿಶ್ಚಿತವಾದ ಯೋಜನೆಯನ್ನು ಕಾರ್ಯರೂಪಕ್ಕೆ ತರುತ್ತಿಲ್ಲ. ನಮ್ಮಲ್ಲಿ 150 ಇಂಚು ಮಳೆ ಬರುತ್ತದೆ. ಆದರೆ ಆ ನೀರನ್ನು ಉಪಯೋಗ ಮಾಡಿಕೊಂಡು ಎರಡು ಮೂರು ಬೆಳೆ ತೆಗೆದುಕೊಳ್ಳುವಂಥ ಅವಕಾಶ ಇದ್ದರೂ ನೀರಾವರಿ ಅಭಿವೃದ್ಧಿ ಮಾಡಲಿಕ್ಕೆ ಯಾವ ತರಹ ಯೋಜನೆಯನ್ನೂ ಮಾಡದೆ ಮಳೆಯಿಂದ ಬಂದ ನೀರೆಲ್ಲ ಸಮುದ್ರಕ್ಕೆ ಹರಿಯುತ್ತಿದೆ. ಅಲ್ಲಿ ಬತ್ತ ಬೆಳೆಯತಕ್ಕ ಭೂಮಿ ಬಹಳ ಕಡಮೆ ಇದೆ. ನಮ್ಮ ಭಾಗದಲ್ಲಿ ಹಂದಿ ಕಾಟ ಜಾಸ್ತಿಯಾಗಿರುವುದರಿಂದ ಬತ್ತ ಹಾಕಿದರೆ ಅದನ್ನು ಹಂದಿಗಳು ತಿಂದು ಹಾಕಿ ನಮ್ಮ ಉಪಯೋಗಕ್ಕೆ ಹೆಚ್ಚಾಗಿ ಸಿಕ್ಕುವುದಿಲ್ಲ. ಈ ರೀತಿಯಲ್ಲಿ ಎಷ್ಟೋ ತೊಂದರೆಗಳು ಇದ್ದರೂ ಲೆವಿ ಹಾಕುತ್ತಾರೆ. ಇದರಿಂದ ನಮಗೆ ಮುನಾಫೆ ಇಲ್ಲ. ಈ ಬಜೆಟ್ಟಿನಲ್ಲಿ ನಮ್ಮ ಜಿಲ್ಲೆಯ ಮಟ್ಟಿಗೆ ಯಾವುದೇ ಯೋಜನೆಗಳಿಲ್ಲ. ಆದುದರಿಂದ ಇದನ್ನು ವಿರೋಧ ಮಾಡಿ, ಅಧ್ಯಕ್ಷರು ಇಷ್ಟು ಸಮಯ ಕೊಟ್ಟಿದ್ದಕ್ಕೆ ಅವರಿಗೆ ಅಭಿವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀಮತಿ ನಾಗಮ್ಮ (ಕಲಮಾಲ).—ಮಾನ್ಯ ಅಧ್ಯಕ್ಷರೇ, ಈ ಬಜೆಟ್ಟಿನಮೇಲೆ ಒಂದೆರಡು ಮಾತುಗಳನ್ನಾಡಬೇಕೆಂದು ನಾನು ನಿಂತಿದ್ದೇನೆ. ಇನ್ನೂ ಬರಗಾಲ ತಪ್ಪಿಲ್ಲ. ಮೈಸೂರು ಜನರಿಗೆ ಅಲ್ಲಲ್ಲಿ ಡ್ಯಾಂ ಕಟ್ಟಿ ನೀರಾವರಿ ಸೌಕರ್ಯ ಮಾಡಿದ್ದರೂ ಕೂಡ ನೀರು ಕೆಲವು ಕಡೆಗೆ ಇನ್ನೂ ಬಂದಿಲ್ಲ, ಒಂದು ಭಾಗಕ್ಕೆ ಬಂದಿದೆ, ಮೂರು ಭಾಗಕ್ಕೆ ಬಂದಿಲ್ಲ. ಇದರ ನಲುವಾಗಿ ಡ್ಯಾಂ ನಿಂದ ನೀರು ಬರುವಂತೆ ಕಾಲುವೆ ತೆಗೆಸಬೇಕೆಂದು ಕೇಳಿಕೊಳ್ಳುತ್ತೇನೆ. ಚಂದ್ರಬಂಡವರಿಯ ಕಾಲುವೆ ಮಾಡಿ ನೀರು ಕೊಡಬೇಕು, ಕೃಷ್ಣ ಹೊಳೆಯ ನೀರನ್ನು ಉಪಯೋಗಿಸಲು ಲಿಫ್ಟ್ ಇರಿಗೇಷನ್ ಅವಕಾಶ ಮಾಡಿ ಕೊಡಬೇಕು ಎಂದು ಎಸ್ಟಿಮೇಟ್ ಮಾಡಿದ್ದಾರೆ. ಆ ಕೆಲಸ ಮುಂಜೂರು ಮಾಡಿಕೊಡಬೇಕು. ಸರಕಾರ ಬೇಕಾದಷ್ಟು ಅನುಕೂಲಮಾಡಿದೆ. ಆದರೂ ವಿರೋಧ ಪಕ್ಷದವರು ಕಾಂಗ್ರೆಸ್ ಆಡಳಿತವಿರೆಯೆಂದು ಬೇಕಾದಷ್ಟು ಟೀಕೆ ಮಾಡುತ್ತಾರೆ. 8 ಕೋಟಿ ರೂಪಾಯಿಗಳನ್ನು ತಾಲ್ಲೂಕು ಬೋರ್ಡುಗಳಿಗೆ ಖರ್ಚು ಮಾಡಿದ್ದಾರೆಂದು ಹೇಳುತ್ತಿದ್ದರು. ಆದರೆ ಅದಕ್ಕೆ ಅಂಕೆ ಅಂಶ ಉಂಟು, ಲೆಕ್ಕ ಆಡಿಟ್ ಆಗುತ್ತದೆ. ಹೀಗಿರುವಾಗ ಅದನ್ನು ನೋಡಬೇಕು, ಹಾಗೆ ಮಾಡದೆ ವಕ್ಕಲರಾಗಿ ಸಣ್ಣಪುಟ್ಟ ಮಾತುಗಳನ್ನಾಡಬಾರದು. ಇದು ದೇವಲೋಕದ ಸಭೆ ಇದ್ದ ಹಾಗಿದೆ, 8 ಕೋಟಿ ಖರ್ಚು ಮಾಡಿರುವುದನ್ನು ತೋರಿಸುತ್ತೇವೆ, ಒಂದೊಂದು ಜಿಲ್ಲೆಗೂ ಮಾನ್ಯ ಮಂತ್ರಿಗಳು ಹೋಗಿ ಎಷ್ಟು ಕೆಲಸವಾಗಿದೆ, ರಸ್ತೆ ಎಷ್ಟಾಗಿವೆ ಎಂದು ನೋಡಿದ್ದಾರೆ, ಲೆಕ್ಕಪತ್ರ ಇವೆ. ತಾಲ್ಲೂಕು ಬೋರ್ಡ್ ಛೇರ್ಮನ್ ಎಂ. ಎಲ್. ಎ. ಕೂಡಿಕೊಂಡು ಹೋಗಿ ನೋಡಿ ಬಂದಿದ್ದೇವೆ. ಇಷ್ಟು ಕೆಲಸ ಮಾಡಿದ್ದರೂ ಸರಕಾರ ವ್ಯರ್ಥ ಮಾಡಿದೆ ಎಂದು ವಿರೋಧ ಪಕ್ಷ ಹೇಳುತ್ತಿದೆ. ಈ ರೀತಿ ಹೇಳಬಾರದು. ಹೊಟ್ಟೆಕಿಚ್ಚು ಏಕೆ? ನಮಗೆ ನೀರಿನ ಸೌಕರ್ಯ ಮಾಡಿಕೊಡಬೇಕು, ಕಾಲುವೆ ಮಾಡಬೇಕು, ರಸ್ತೆ ಮಾಡಬೇಕು, ಬಾವಿಗಳಿಗೆ ಅವಕಾಶ ಕೊಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ. ಹಾಗೆ ಬೇಕಾದ್ದನ್ನು ಕೇಳದೆ ಭೂತದ ವಿಚಾರ, ಚಾಮುಂಡಿ ಬೆಟ್ಟದ ಮೇಲಿರುವ ಮಹಿಷಾಸುರನ ವಿಚಾರ ಮುಂತಾದ್ದನ್ನೆರ್ಲಾ ಹೇಳುತ್ತಾರೆ. ಯಾವಾಗಲೂ ಸರಿಯಾದ ಮಾತನಾಡಬೇಕು. ನಮ್ಮ ಸಮಾಜ ಕಲ್ಯಾಣ ಮಂತ್ರಿಗಳು ತಪಶೀಲಾಗಿ ವರದಿಮಾಡಿದ್ದಾರೆ. ಏನೇನು ಕೆಲಸಗಳಿಗೆದೆ ಎಂಬುದನ್ನು ಹೇಳಿದ್ದಾರೆ. ಕಾಯಿದೆ ಕಾನೂನು ಇರುವಾಗ ಅದರ ಪ್ರಕಾರ ಖರ್ಚು ಮಾಡುತ್ತಿದ್ದಾರೆ. ಯಾವುದನ್ನು ಹೇಳಬೇಕಾದರೂ ತಿಳಿದುಕೊಂಡು ಹೇಳಬೇಕು. ಈ ಮನೆಯಲ್ಲಿ ಹೇಗೆ ಮಾತನಾಡಬೇಕೆಂಬುದನ್ನರಿತು ಶಾಂತವಾಗಿ ಮಾತನಾಡಬೇಕು. ಇಲ್ಲಿಯ ಸದಸ್ಯರಿಗೆ ಬಹಳ ಜವಾಬ್ದಾರಿಯುಂಟು. ಇಲ್ಲಿ ನಡೆಯುವ ಕಾರ್ಯಕಲಾಪಗಳನ್ನು ನೋಡುವುದಕ್ಕೆ ಅನೇಕರು ಬಂದಿರುತ್ತಾರೆ. ನಮಗೆ ಬೇಕಾದ ಕೆಲಸ ಮಾಡಿಕೊಡಬೇಕೆಂದು ಕೇಳುವುದನ್ನು ಬಿಟ್ಟು ಮಹಿಷಾಸುರನ ಕಥೆ ತೆಗೆದುಕೊಂಡು ಏನೇನೋ ಹೇಳುವುದು ಸರಿಯಲ್ಲ. ಭೂತ ಬೆಟ್ಟದಿಂದ ಬೆಟ್ಟಕ್ಕೆ ಓಡುವಹಾಗೆ ಏನೇನೋ ಹೇಳುತ್ತಾರೆ. ಅದು ಯೋಗ್ಯವಲ್ಲ. ನಮ್ಮ ರೈತರಿಗೆ ಲಿಫ್ಟ್ ಇರಿಗೇಷನ್ ಅನುಕೂಲವಾಗಬೇಕು. ಮೈಸೂರು ಜಿಲ್ಲೆಯಲ್ಲಿ 5 ಲಕ್ಷ 80 ಸಾವಿರ ಎಕರೆಗೆ ನೀರಾವರಿ ಸೌಕರ್ಯ ಕೊಡಲು ಅಂದಾಜಿರುವಾಗ 2 ಲಕ್ಷ ಎಕರೆಗೆ ಅನುಕೂಲವಾಗಿರಬಹುದು. ಇನ್ನೂ 3 ಲಕ್ಷ 80 ಸಾವಿರ ಎಕರೆಗೆ ಅನುಕೂಲವಾಗದೆ ಹಾಗೇ ಇದೆ, ಇದಕ್ಕೆ ನೀರನ್ನೊದಗಿಸಬೇಕೆಂದು ಕೇಳುತ್ತಿದ್ದೇವೆ. ಆದರೆ ವ್ಯವಸಾಯ ಇಲಾಖೆಯವರು ಕೊಡುವುದಿಲ್ಲವೆಂದು ಹೇಳುತ್ತಿದ್ದಾರೆ. ಮಂತ್ರಿಗಳಿಗೆ ಇದನ್ನು ತಿಳಿಸುತ್ತೇನೆ, 15–20 ವರ್ಷ ಆಗಿದೆ, ಇನ್ನೂ ಎರಡು ಲಕ್ಷ ಎಕರೆ ನೀರಾವರಿಯಾಗಿಲ್ಲ. ಇದುವರೆಗೆ ಎರಡೂವರೆ ಲಕ್ಷ ಎಕರೆ ನೀರಾವರಿಯಾಗಿರ

ಬಹುದು. ಅಪ್ಪರ್ ಕೃಷ್ಣ ಪ್ರಾಜೆಕ್ಟ್ ಯಾವಾಗ ಆಗುವುದೋ ಏನೋ. ಅದಾಗುವವರೆಗೆ ನಾವಿರುವುದಿಲ್ಲ. ಆದುದರಿಂದ ನೀರನ್ನು ಜಾಗ್ರತೆ ಕೊಟ್ಟು ವ್ಯವಸಾಯಗಾರರಿಗೆ ಸಂತೋಷ ವನ್ನುಂಟುಮಾಡಬೇಕೆಂದು ಒತ್ತಾಯಮಾಡಿ ಹೇಳುತ್ತೇನೆ. ಇದನ್ನು ಪದೇ ಪದೇ ಹೇಳುತ್ತಿದ್ದೇನೆ. ಅಭಾವ ಪರಿಸ್ಥಿತಿ ಇರುವುದರಿಂದ ಬಾವಿಗಳಿಗೆ ಇನ್ನೂ ಹೆಚ್ಚು ಅವಕಾಶ ಕೊಡಬೇಕು, ಈಗ ಸಾಕಷ್ಟು ಅವಕಾಶ ಕೊಟ್ಟಿದ್ದರೂ ಅದು ಸಾಲದು.

ಇನ್ನೊಂದು ವಿಷಯ. ಹರಿಜನರ ಸಲುವಾಗಿ ಮನೆಗಳಿಗೆ ಮೂರುವರೆ ಕೋಟಿ ರೂಪಾಯಿ ಕೊಟ್ಟಿದ್ದು ಸಾಲದು, ಇದಕ್ಕೆ ಇನ್ನೂ ಮೂರೂವರೆ ಕೋಟಿ ಬೇಕು, ಅಷ್ಟನ್ನು ಕೊಟ್ಟರೆ ಸ್ವಲ್ಪ ಅನುಕೂಲವಾಗಬಹುದು. ಈಗ ಎಂಟು ಸಾವಿರ ಅರ್ಜಿಗಳು ಬಂದಿವೆ, ಇನ್ನೂ ಬರುತ್ತಿವೆ. ಆದುದರಿಂದ ತೀವ್ರವಾಗಿ ಮೂರೂವರೆ ಕೋಟಿ ಕೊಟ್ಟು ಹರಿಜನರಿಗೆ ಮತ್ತು ಗಿರಿಜನರಿಗೆ ಮನೆ ಕಟ್ಟಿಕೊಳ್ಳುವುದಕ್ಕೆ ಅನುಕೂಲ ಮಾಡಿ ಕೊಡಬೇಕು. ಹರಿಜನರಿಗೆ ಮರ ಕೊಡುತ್ತಾರೆ, 200 ರೂಪಾಯಿ ಬೆಲೆಬಾಳುವ ಮರಗಳನ್ನು ಕೊಡುತ್ತಾರೆ. ಕೆಲವು ಕಡೆ ಹೆಚ್ಚು ಕೊಡಬೇಕಾಗುತ್ತದೆ. ಶಿವಮೊಗ್ಗ, ದಾಂಡೇಲಿಗಳಲ್ಲಿ ಹೆಚ್ಚು ಬೇಕಾಗುತ್ತದೆ, ಇದನ್ನು ಮಂತ್ರಿಗಳಿಗೆ ಹೇಳಿದ್ದೇನೆ, ಅವರು ಮಾಡೋಣ ಎಂದು ಹೇಳಿದರು. ಅದರ ಸಲುವಾಗಿ ಮಾನ್ಯ ಮಂತ್ರಿಗಳನ್ನು ಪದೇ ಪದೇ ಮನವಿ ಮಾಡಿಕೊಳ್ಳುತ್ತೇನೆ. ಲಫ್ಟ್ ಇರಿಗೇಷನ್ ಬಗ್ಗೆ ಅದಷ್ಟು ಸೌಕರ್ಯಗಳನ್ನು ಒದಗಿಸಿಕೊಡಬೇಕೆಂದು ಮನವಿ ಮಾಡಿಕೊಂಡು ನನ್ನ ಚಿಕ್ಕ ಭಾಷಣವನ್ನು ಮುಗಿಸುತ್ತೇನೆ.

Sri N. B. SIRDESAI (Khanapur).— Mr. Speaker, while opposing the budget estimates for 1969–70, I would like to point out that in the last year's budget estimate in the beginning there was a surplus of Rs. 11.98 crores. The budget had to be revised and in the revised budget there was a deficit of 0.01 crore. This year there is a deficit of Rs. 13.22 crores. This clearly shows that the financial position of the State is going from bad to worse.

On going through the budget speech and the budget figures, I cannot but call it a bad budget because year by year the deficit is increasing. By placing this deficit budget before the House, I think the Hon'ble Finance Minister has thrown a challenge to the patience of the people of this State and also the administrative ability of this Government. He could have placed a balanced budget before this House by effecting more economy measures. He could not place a balanced budget. Then what of the surplus of the budget ? How is the State going to fill up the deficit ? It must be through Central assistance or local resources or through loans from the public or through overdraft. But whether the Government has attempted to mobilise the local resources is the question to be considered here. It appears that the Government have not tried their level best to mobilise the local rural resources. Now there are no quick-yielding projects and whatever projects this Government has taken up are not yet yielding income. This Government has also not achieved any progress in the agricultural and industrial spheres. This Government has failed to achieve progress in agricultural production and industrial output and so this State shall have to face a very difficult future.

It is disgraceful to note that only about 10 per cent of the cultivable land in the State is under irrigation. It is mentioned on page 3 that the Government has invested money on works of a productive and protective nature. But I may mention here that the works which have

(SRI N. B. SIRDESAI)

been undertaken by the Government are not of a productive and protective nature because the tanks which are restored and constructed are not in a position to irrigate even fifty per cent of the area under their command.

At page 2 of the Budget Speech it is mentioned that this Government is going to spend about Rs. 10 crores for relief works. I have brought to the notice of the Government by putting questions here that the Government is spending uselessly on relief works because they are not being carried out properly and that Government and the departmental heads should exercise strict vigilance in this behalf; but the Hon'ble Minister for Revenue replied to my L. A. question that the works are commensurate with the money spent on them. The works which are feasible are not being undertaken by this Government. At least in Khanapur Taluk, the works which are proposed by the Taluk Development Board and the local M. L. As are not being undertaken and they are being treated as unfeasible though they are feasible. That is why agricultural production has suffered much.

Another reason for the failure to achieve agricultural production is that this Government has not got any definite price policy. As a result the agriculturists are being discouraged and they are losing confidence and enthusiasm because they are not getting a good price for their agricultural produce. They are being discouraged each year and the Government have failed to achieve progress in agriculture.

At page 11, para 20 of the booklet, the Hon'ble Minister has said that about Rs. 3.20 crores have been reserved for the construction and restoration of reservoirs under minor irrigation. But in malnad area such minor works are not being undertaken. Though representations have been submitted and though the local M. L. As have requested many a time, the Government have not paid any heed to their request. For months together applications for the supply of power are being delayed and power supply is not given to the electric pumps for months together by the M. S. E. B. Even the oil engines and electric motors are not being sanctioned for months together by the Agro-Industries Corporation and there are concrete instances of this type from taluka. How then can this Government expect increase in agricultural production ?

As regards industrialisation, there is great disappointment in this State. At page 20, para 40, the Hon'ble Finance Minister has said that many facilities are being offered for the industrialists such as land, water, power, etc. If that were so, many industrialists would have come forward and set up new industries in this State and the Government need not have invited industrialists from outside. For months together their applications are delayed and they are

disappointed and discouraged. That is why the local industrialists are not forthcoming to take up industries here. It is said that one High Power Committee is also constituted under the Chairmanship of the Chief Minister. But of what good it is to those who are not getting benefits from that Committee? Sir, from all angles, this Budget appears to be more pessimistic, but the Hon. Minister for Finance appears to be over-optimistic.

6-00 P.M.

At page 15, para 29, it is stated that provision of Rs. 65 lakhs is made for drinking water wells. The drinking water wells, which have been constructed by the defunct District Boards, go dry immediately after the rainy season; from November to June they are without water. The Government says that it has decided to leave no village without a drinking water well. I would like to submit here that in villages, wherein the existing drinking water wells go dry, new wells should be sanctioned and constructed.

At page 16, para 32 of the booklet, it is rightly said by the Hon. Minister for Finance that educational system in this country has undergone many changes and sufficient attention is not paid for the improvement of the quality of education. As a beginning for the qualitative improvement, this Government has decided to appoint 325 Graduate Head Masters for the higher primary schools. I think, the Graduate Head Masters appointed for the Joint Central Schools under the Bombay Rules, should not be treated on par with these new Graduate Head Masters. Their cadre should be equalised with the cadre of A. D. E. I. s of the Education Department. Government is slow and is hesitating to abolish District School Boards and have a uniform administration of the primary education. Government intends to constitute a new body on the lines of the existing District School Boards at district level for all Districts. It would be a new form and it is done just to provide some facilities for their pets, and they do not want to abolish the District School Boards. I suggest that this administration should be entrusted to the Taluk Development Boards or the Department should take over the administration of these primary schools.

According to the recent decision of the Mysore Government, no grant will be given for the High Schools for Boys for five years which are under the private management. Of course, it is discouraging to the persons who want to open new schools. Without having regard to the demand of the public in rural areas or the needs of public of rural areas, this Government has decided not to give grant for five years to the High Schools under private management. I suggest that at least for malnad rural areas, where there is great need and where the Government is not going to open new High Schools, such rigid rules should not be made applicable.

(SRI N. B. SRIDESAI)

Coming to Co-operative Societies, I would like to say that these societies have become just like grazing lands for office bearers. These societies are in a shattered condition and they are not functioning properly. Really speaking, they are just like the back-bone to build up the assets of the State. But, they are not functioning properly and the money is going a waste. I request the concerned Hon. Minister to look into this matter and see that these co-operative societies function properly and help the State to build up the assets.

There is no special provision for low-paid Government servants such as Patils, Talaties and Shanubhogues. Only Rs. 65 lakhs have been reserved for payment of remuneration for Patels, and One crore of rupees for the payment of salaries to Village Accountants. They are full-fledged servants and therefore some additional provision should have been made for low-paid servants.

Much of the forest revenue is consumed by the officials of the Department of Police. It is deplorable that such things are allowed to happen in this State. Smuggling of Sandalwood and timber is allowed with the connivance of the Government servants. In the beginning they join hands with the businessmen and allow them to take sandalwood and timber, and afterwards they try to make a show by attaching some one or two lorries and prosecute some people nominally. This must be stopped if the Government really intends to bridge the gap of the deficit.

Under economy measures, Government in their letter of 8th October 1968 indicated an economy cut in expenditure to the tune of Rs. 5.47 crores by not permitting filling up of vacant posts in the Government departments. On the other hand, more economy could have been suggested by stopping lavish expenditure in Government Departments. Under public health, a saving of Rs. 0.38 lakhs is shown. I would like to ask the concerned Hon. Minister whether this amount includes the unpaid amount of salary and honoraria to the S.M.P. Doctors serving under the Taluk Boards of Belgam District, because in spite of representations and requests made to the Hon. Minister and the concerned officers, the salaries of these Doctors have not been paid since last one year, and as such they were made to work without any remunerasion. I would like to ask whether the Government wants to effect economy by withholding the salaries and increments of these Government servants ?

Forest lands are not being released for cultivation, though cultivable forest land is available to the turn of 4,000 acres in my Taluk. Government is only making a show by saying that forest land would be released for cultivation. At the time of releasing revenue lands, this Government is levying fee of T.T. Fine for no fault of the cultivators.

Sir, I had no mind to talk about Shiva Sena during the budget speech. But, some hon. members have raised this matter. They should not have raised it. It is being criticised without finding the facts and truth as to who have committed the attrocities. It is no use criticising or condemning a party unless the facts are verified. I do not admit the atrocities committed by any party in this country. Sir, as this matter has been discussed on the floor of this House separately, I think, during the discussion on the Budget, the hon. Members stick to speak only on matters pertaining to the Budget.

I thank the hon. Chair and conclude my speech.

ಶ್ರೀ ಎಸ್. ಬಿ. ವಸ್ತ್ರದ್ (ತಿಕೋಟ).—ಸನ್ಮಾನ್ಯ ಅಧ್ಯಕ್ಷರೇ, ಆರ್ಥಸಚಿವರಾದ ಮಾನ್ಯ ಶ್ರೀ ರಾಮಕೃಷ್ಣ ಹೆಗಡೆಯವರು 1969-70ನೇ ಸಾಲಿನ ಬಗ್ಗೆ ಮಂಡಿಸಿರತಕ್ಕ ಬಡ್ಜೆಟ್ಟನ್ನು ಸಮರ್ಥಿಸಿ ಕೆಲವು ಸಲಹಾಸೂಚನೆಗಳನ್ನು ಕೊಡಲು ಅಪೇಕ್ಷೆ ಪಡುತ್ತೇನೆ.

ಪ್ರಥಮವಾಗಿ ನಮ್ಮ ರಾಜ್ಯದಲ್ಲಿರುವ ಅಭಾವ ಪರಿಸ್ಥಿತಿಯನ್ನು ನಿವಾರಿಸುವುದಕ್ಕಾಗಿ ಸರ್ಕಾರದವರು ಸಾಕಷ್ಟು ತೀವ್ರಗತಿಯಿಂದ ಶೀಘ್ರವಾದ ಕಾರ್ಯಕ್ರಮಗಳನ್ನು ತೆಗೆದುಕೊಂಡು ಅನೇಕ ಕೂಲಿಗಾರರ ಜನತೆಯನ್ನು ಕಾಪಾಡಿದರು. ಅಲ್ಲದೆ ಈ ಬಗ್ಗೆ ಎಷ್ಟು ಹಣ ಖರ್ಚುಮಾಡ ಬೇಕಾಗಿತ್ತೋ ಅದಕ್ಕಿಂತ ಕೆಲವು ಜಿಲ್ಲೆಗಳಲ್ಲಿ ಹೆಚ್ಚಿಗೆ ಹಣ ವ್ಯಯವಾಗಿದೆ. ಕೊಡಬೇಕಾದ ಹಣವನ್ನು ಇನ್ನೂ ಸಾಕಷ್ಟು ಜಿಲ್ಲೆಗಳಿಗೆ ಕೊಡಬೇಕಾಗಿದೆ. ಅದನ್ನು ಕೂಡಲೇ ಆಯಾ ಜಿಲ್ಲೆಗಳಿಗೆ ಕೊಡಬೇಕೆಂದು ನನ್ನ ಸಲಹೆ. ಏಕೆಂದರೆ, ಇನ್ನೂ ಅನೇಕ ಕಾಮಗಾರಿಗಳು ಅಪೂರ್ತಿಯಾಗಿವೆ. ಅಪೂರ್ತಿಯಾಗಿರತಕ್ಕ ಕಾಮಗಾರಿಗಳನ್ನು ಪೂರ್ತಿಯಾಗಿ ಮಾಡುವುದಕ್ಕೆ ಸರ್ಕಾರದವರು ಸಾಕಷ್ಟು ಹಣವನ್ನು ಒದಗಿಸಿಕೊಡಬೇಕು. ಹಣವನ್ನು ಒದಗಿಸಿದ್ದರೂ ಕೂಡ ಪೂರ್ತಿಯಾಗದೇ ಇರುವ ಕೆಲಸಗಳನ್ನು ಜಾಗ್ರತೆಯಾಗಿ ಪೂರ್ತಿಮಾಡಬೇಕೆಂದು ಸಂಬಂಧಪಟ್ಟ ಇರಾಖೆಯ ಅಧಿಕಾರಿಗಳಿಗೆ ಸೂಚನೆ ಕೊಡಬೇಕೆಂದು ಹೇಳುತ್ತೇನೆ. ಆದರೆ ಪ್ರತ್ಯಕ್ಷವಾಗಿ ಕೆಲವು ಜಿಲ್ಲೆಗಳಲ್ಲಿ ನೋಡಿದರೆ ಯಾವ ಕೆಲಸವೂ ಕೂಡ ಮುಂದುವರಿದಿಲ್ಲ. ಎರ್ಲಾ ಕೆಲಸಕಾರ್ಯಗಳೂ ಬಂದ್ ಆಗಿವೆ. ಅಪೂರ್ತಿಯಾಗಿರತಕ್ಕ ಕಾಮಗಾರಿಗಳನ್ನು ಪೂರ್ತಿಗೊಳಿಸುವುದಕ್ಕಾಗಿ ಸರ್ಕಾರದವರು ಬೇಗನೆ ಸಂಬಂಧಪಟ್ಟವರಿಗೆ ಸಲಹೆ ಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ನನ್ನ ಇಚ್ಛೆಯನ್ನು ವ್ಯಕ್ತಪಡಿಸುತ್ತೇನೆ. ಅಲ್ಲದೆ ಈಗ ಕೆಲವು ಸಲಹಾಸೂಚನೆಗಳನ್ನು ಕೂಡಬೇಕೆಂದರೆ, ಮೋಜಣಿ ಇರಾಖೆ ಏನಿದೆ ಅದಕ್ಕೆ ಮೊದಲು ಒಂದು ಸೂಚನೆ ಕೊಡಬೇಕು. ಯಾವ ಒಬ್ಬ ರೈತ ಮೋಜಣಿ ಮಾಡಬೇಕೆಂದರೆ, ಒಂದು ವರ್ಷ, 6 ತಿಂಗಳು, 3 ವರ್ಷಗಳಾದರೂ ಕೂಡ ಮೋಜಣಿಯಾಗದೆ ಬಹಳ ತೊಂದರೆಪಡುತ್ತಾನೆ. ಈ ಮೋಜಣಿ ಕೆಲಸ ಕನಿಷ್ಠಪಕ್ಷ 3-4 ತಿಂಗಳರ್ಲಾದರೂ ಮಾಡಿಕೊಡಬೇಕೆಂದು ನಾನು ಸೂಚಿಸಬಯಸುತ್ತೇನೆ.

ಇನ್ನೊಂದು ವಿಷಯ. ಒಂದು ಊರಿನಿಂದ ಮತ್ತೊಂದು ಊರಿಗೆ ಹೋಗಬೇಕಾದರೆ ಅಲ್ಲಿರ ತಕ್ಕ ಒಂದು ಗ್ರಾಮರಸ್ತೆ, ಏನಿದೆ ಅದು ಅತಿಕ್ರಮಣವಾಗಿ ಅನೇಕ ತೊಂದರೆಗೆ ಜನಗಳು ಒಳ ಗಾಗುತ್ತಿದ್ದಾರೆ. ಅದೇ ರೀತಿಯಾಗಿ ಒಂದು ಗ್ರಾಮದಿಂದ ಇನ್ನೊಂದು ಗ್ರಾಮಕ್ಕೆ ಹೋಗ ಬೇಕಾದರೆ ಇತ್ತೀಚೆಗೆ ಚಕ್ಕಬಂಡಿಯರ್ಲಾಗಲೀ, ಟ್ರಕ್‌ನರ್ಲಾಗಲೀ, ಮೋಟಾರ್‌ನರ್ಲಾಗಲೀ, ಎದುರಾಗಿ ಹೋಗಿ ಬರುವುದಕ್ಕೆ ಆಗುವುದಿಲ್ಲ. ಅಲ್ಲ ಬಹಳ ಶೋಚನೀಯ ಪರಿಸ್ಥಿತಿ. ಅತಿಕ್ರಮಣವಾಗಿರತಕ್ಕ ಗ್ರಾಮದಿಂದ ಹೋಗುವ ರಸ್ತೆಗಳನ್ನು ಸುಗಮವಾಗಿ ಹೋಗುವ ಹಾಗೆ ಮಾಡಿ ರಸ್ತೆ ಸೌಕರ್ಯಗಳನ್ನು ಏರ್ಪಾಡುಮಾಡಿಕೊಡಬೇಕು. ಅಲ್ಲದೆ ಬಾವಿ ನಲುವಾಗಿ ಕೊಡುವ ಹಣ 5 ಸಾವಿರ ರೂಪಾಯಿಗಳಿಗಿಂತ ಜಾಸ್ತಿ ಇಲ್ಲ. ಅದನ್ನು ಜಿರ್ಲಾಧಿಕಾರಿಗಳು ಕೊಡುವ ಏರ್ಪಾಡು ಇದೆ. ಅದಕ್ಕಾಗಿ ಪ್ರಕರಣಗಳು ಬರುವುದು ಆಗಿದೆ. ಮೊದಲು ತಹಸೀರ್ದಾರ್ ಎರ್ಲಾ ನೋಡಿದ ಮೇಲೆ ಎಗ್ಜಿಕ್ಯುಟಿವ್ ಇಂಜನಿಯರ್ ಪುನಃ ನೋಡಿ ಶಿಫಾರಸುಮಾಡಬೇಕಾಗಿದೆ. ಆದ್ದರಿಂದ ಎಗ್ಜಿಕ್ಯುಟಿವ್ ಇಂಜನಿಯರಿಗೆ ಅದನ್ನು ಕಳುಹಿಸುವ ಅವಶ್ಯಕತೆ ಇಲ್ಲ. ಅದನ್ನು ಲಘುವಾಗಿ ಮಾಡಿದರೆ ಜಾಗ್ರತೆಯಾಗಿ ಜನಗಳಿಗೆ ಅದರ ಸೌಕರ್ಯ ಸಿಗುತ್ತದೆ.

ಇನ್ನು ಬಂಡಿಂಗ್ ವಿಷಯ. ನಮ್ಮ ಜಿಲ್ಲೆಯಲ್ಲಿ ಈಗಾಗಲೇ ಬಹಳ ದುಷ್ಕಾಲ ಪರಿಸ್ಥಿತಿ ಇದೆ. ಒಡ್ಡು ಹಾಕುವ ಕೆಲಸ ಮತ್ತು ಮಣ್ಣಿನ ರಸ್ತೆಯ ಕೆಲಸ ಒಳ್ಳೆಯ ರೀತಿಯಾಗಿದೆ. ಆದರೆ ಬಂಡಿಂಗ್ ಕಾರ್ಯಕ್ರಮದಲ್ಲಿ ಹಿಂದಿನ ರೈತರಿಗೆ ಇದಕ್ಕಾಗಿ ಎಷ್ಟು ಖರ್ಚಾಗುತ್ತಿತ್ತೋ ಅದನ್ನು

(ಶ್ರೀ ಎಸ್. ಬಿ. ವಸ್ತ್ರದ್)

ಈಗಿನ ರೈತ ವಸೂಲುಮಾಡುವ ಪದ್ಧತಿ ಇದೆ. ಸಾಮಾನ್ಯವಾಗಿ ಒಬ್ಬ ರೈತನ ಜಮೀನು 4–8 ಎಕರೆ ಇದ್ದರೆ ಅದರ ಕಿಮ್ಮತ್ತು 500–600 ರೂಪಾಯಿಗಳು ಇದ್ದರೆ ಬಂಡಿಂಗ್ ಕೆಲಸದ ಕಿಮ್ಮತ್ತು 1,200 ರೂಪಾಯಿಗಳಾಗುತ್ತದೆ. ಈ ದೃಷ್ಟಿಯಿಂದ ಈ ಬಂಡಿಂಗ್ ಹಾಕುವುದು ಬೇಡವೆಂದು ಅನೇಕ ಜನ ರೈತರು ತಕರಾರು ಮಾಡುತ್ತಿದ್ದಾರೆ. ನಾನು ಇದನ್ನು ಪದೇಪದೇ ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ನನ್ನ ದೃಷ್ಟಿಯಲ್ಲಿ ಈ ಬಂಡಿಂಗ್ ಹಾಕುವ ಕೆಲಸ ಬಹಳ ಯೋಗ್ಯವಾದುದು. ಆದ್ದರಿಂದ ಕ್ವಿಪ್ರವಾಗಿ ಬಂಡಿಂಗ್‌ನ ಖರ್ಚು ಎಷ್ಟು ಬರುತ್ತದೋ ಅದರ ಅರ್ಧದಷ್ಟು ಸರ್ಕಾರದವರು ಸಬ್ಸಿಡಿಯಾಗಿ ಕೊಡಬೇಕೆಂದೂ, ಉಳಿದ ಅರ್ಧದಷ್ಟನ್ನು ರೈತರಿಂದ ವಸೂಲು ಮಾಡಬೇಕೆಂದೂ ನನ್ನ ಸಲಹೆ.

ಇನ್ನು ರೆವಿನ್ಯೂ ಅಧಿಕಾರಿಗಳಿಗೆ ಮತ್ತು ತಹಸೀಲ್ದಾರ್ ಅವರಿಗಾಗಲೀ ಸುಮಾರು 100—120 ಗ್ರಾಮಗಳು ಇರುತ್ತವೆ. ಅವರು ಅಲ್ಲೆಲ್ಲಾ ತಿರುಗಾಡುವುದಕ್ಕೆ ಸರಿಯಾಗಿ ವಾಹನ ಸೌಕರ್ಯವಿಲ್ಲ. ಜೀಪುಗಳ ಸೌಕರ್ಯವಿಲ್ಲ. ಪ್ರತಿಯೊಬ್ಬ ತಹಸೀಲ್ದಾರರಿಗೆ ಹಾಗು ಪ್ರತಿಯೊಂದು ವಿಭಾಗದಲ್ಲಯೂ ಇರತಕ್ಕ ರೆವಿನ್ಯೂ ಅಧಿಕಾರಿಗಳಿಗೆ ಒಂದೊಂದು ಜೀಪನ್ನು ಏರ್ಪಾಡುಮಾಡಿ ಕೊಡಬೇಕೆಂದು ನನ್ನ ಸಲಹೆ.

ಇನ್ನು ನಮ್ಮ ಜಿಲ್ಲೆಯಲ್ಲಿ ಸುಮಾರು 30 ಸಾವಿರ ಎಕರೆಯಷ್ಟು ಜಮೀನು ನವಳು ಆಗಿ ಇದುವರೆಗೂ ಸಾಗುವಳಿಯಾಗಿಲ್ಲ. ಎಂ.ಎಲ್.ಎ. ಮತ್ತು ಎಂ.ಎಲ್.ಸಿ.ಗಳು ಇದು ತೀವ್ರಗತಿಯಿಂದಾಗಬೇಕೆಂದು ಹೇಳಿದ್ದಾರೆ. ದೋಣಾನದಿ ತಗ್ಗಾಗಿ ಹರಿಯುವ ಪ್ರದೇಶ ತೆಗೆದುಕೊಳ್ಳಬೇಕು. ಇದರಿಂದ ಸರ್ಕಾರಕ್ಕೂ ಕೂಡ ದೇಶದ ಹಿತದೃಷ್ಟಿಯಿಂದ ಹಾಗೂ ರಾಷ್ಟ್ರ ಹಿತದೃಷ್ಟಿಯಿಂದ ಬಹಳವಾಗಿ ಹಾನಿಯಾಗುವ ಪರಿಸ್ಥಿತಿ ದೂರಮಾಡಬೇಕು. ಈ 30 ಸಾವಿರ ಎಕರೆಯನ್ನು ಸಾಗು ಮಾಡುವುದರಿಂದ ಬಿಜಾಪುರ ಜಿಲ್ಲೆಯ ಬಾಗೇವಾಡಿ ತಾಲ್ಲೂಕು, ಬಿಜಾಪುರ ತಾಲ್ಲೂಕು ಮತ್ತು ಸಿಂಧನೂರ್ ತಾಲ್ಲೂಕು ಪ್ರದೇಶಗಳಿಗೆ ಹೆಚ್ಚಿನ ಅನುಕೂಲವುಂಟು. ದೋಣಾನದಿಯ ಭೂಮಿ ಸರಿಯಾಗಿ ಸಾಗುವಳಿಯಾಗಿಲ್ಲ. ಈ ದೋಣಾನದಿಯ ಬಳಿ ಬಹಳ ಅತ್ಯುತ್ತಮವಾದ ಭೂಮಿ ಇದೆ. ಆದ್ದರಿಂದ ಇಂತಹ ಬೆಲೆಯಾಗಿರತಕ್ಕ ಭೂಮಿಯನ್ನು ಚೆನ್ನಾಗಿ ರಕ್ಷಣೆಮಾಡಬೇಕು. ಅಲ್ಲಿ ಹೆಚ್ಚು ಬೆಳೆಯುವ ಹಾಗೆ ಮಾಡಬೇಕು. ಈ ಯೋಜನೆಯನ್ನು ತೀವ್ರದಲ್ಲಿ ಕೈಗೊಂಡು ಈ ಜಮೀನಿನಲ್ಲಿ ಹೆಚ್ಚು ಬೆಳೆ ಬೆಳೆಯುವುದಾದರೆ ರೈತರಿಗೆ ಹೆಚ್ಚು ಅನುಕೂಲವಾಗುವುದು. ತನ್ಮೂಲಕ ರಾಜ್ಯಕ್ಕೆ ಒಳ್ಳೆಯ ರಾಭವಾಗುವುದು. ಒಟ್ಟಿನಲ್ಲಿ ತೀವ್ರಗತಿಯಿಂದ ಈ ಯೋಜನೆಯನ್ನು ಕೈಗೊಂಡು ಈ 30 ಸಾವಿರ ಎಕರೆ ಭೂಮಿಯನ್ನು ಫಲವತ್ತಾದ ಹಾಗೂ ಸಾಗುವಳಿಗೆ ಯೋಗ್ಯವಾದ ಪ್ರದೇಶವನ್ನಾಗಿ ಮಾಡಬೇಕೆಂದು ನಾನು ಹೇಳುತ್ತೇನೆ.

ಬಿಜಾಪುರ ಜಿಲ್ಲೆಯಲ್ಲಿ ಲಫ್ಟ್ ಇರ್ರಿಗೇಷನ್ ಸ್ಕೀಂ ಬಗ್ಗೆ ಸಾಕಷ್ಟು ಪ್ಲಾನ್ ಮತ್ತು ಎಸ್ಟಿಮೇಟ್ ಸಿದ್ಧವಾಗಿದೆ. ಅವುಗಳನ್ನು ಕ್ರಮೇಣವಾಗಿ ಸರ್ಕಾರದವರು ತೆಗೆದುಕೊಂಡು ರೈತರಿಗೆ ಹೆಚ್ಚಿಗೆ ನೀರಾವರಿಯಾಗುವಂತೆ ಅನುಕೂಲಮಾಡಿಕೊಡಬೇಕೆಂದು ಹೇಳುತ್ತೇನೆ. ಅಲ್ಲದೆ ನೀರಾವರಿಯ ವಿಷಯದ ಬಗ್ಗೆ ಹೇಳುವುದಾದರೆ, ಅಪ್ಪರ್‌ಕೃಷ್ಣಾದ ಸಲುವಾಗಿ ಸುಮಾರು ಎರಡು ಕೋಟಿ ರೂಪಾಯಿ ಒದಗಿಸಿದ್ದಾರೆ. ಅದು ಬಹಳ ಕಡಿಮೆ. ಅದು 140 ಕೋಟಿ ಇದ್ದಂತಹ ಯೋಜನೆ ಇದೆ. ಅದಕ್ಕೆ ಎರಡು ಕೋಟಿ ಕೊಟ್ಟರೆ ಏನೂ ಸಾಲದು. ಹೆಚ್ಚು ಒದಗಿಸುವುದಕ್ಕೆ ಸಾಧ್ಯವಿಲ್ಲವೆಂದು ಹೇಳುತ್ತಿದ್ದಾರೆ. ಆದ್ದರಿಂದ ಅಪ್ಪರ್ ಕೃಷ್ಣಾ ಯೋಜನೆಯ ಸಲುವಾಗಿ ಕೇಂದ್ರ ಸರ್ಕಾರಕ್ಕೆ ಒತ್ತಾಯ ಮಾಡಿ, ಕೇಂದ್ರ ಸರ್ಕಾರದವರೇ ಈ ಯೋಜನೆಯನ್ನು ವಹಿಸಿಕೊಳ್ಳುವಂತೆ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಆರೋಗ್ಯದ ವಿಚಾರ ಹೇಳುವುದಾದರೆ, ಬಿಜಾಪುರ ಪಟ್ಟಣದಲ್ಲಾಗಲಿ ಅಥವಾ ಬಿಜಾಪುರ ಜಿಲ್ಲೆಯಲ್ಲಾಗಲಿ, ಈ ಒಂದು ಮಹಾ ರೋಗದಿಂದ ಜನರು ನರಳುತ್ತಿದ್ದಾರೆ. ಅವರು ಆರ್ತಧ್ವನಿಯಲ್ಲಿ ಕೂಗಾಡುತ್ತಿದ್ದಾರೆ. ಅವರು ರಸ್ತೆಗಳಲ್ಲಿ ಕೂಡ ಕೂಗಾಡುತ್ತಿದ್ದಾರೆ ಎಂದು ಕೇಳಿದ್ದೇನೆ, ಕಂಡಿದ್ದೇನೆ. ಅವರ ಸಲುವಾಗಿ ಒಂದು ಯೋಜನೆ ಮಾಡಿ, ಇಡೀ ಮೈಸೂರು ರಾಜ್ಯದಲ್ಲೆಲ್ಲೀ, ಈ ಮಹಾ ರೋಗದ ಸರ್ವೆ ಮಾಡಿ, ಇದು ಇಲ್ಲದ ಹಾಗೆ ಮಾಡುವುದಕ್ಕೆ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಉದ್ಯಮದ ಸಲುವಾಗಿ ಬಿಜಾಪುರ ಜಿಲ್ಲೆಯಲ್ಲಿ ತಾಳಿಕೋಟೆ ಎಂಬ ಸಿಟಿ ಇದೆ. ಅಲ್ಲಿ ಒಂದು ಸಿಮೆಂಟ್ ಕಾರ್ಖಾನೆಯಾಗುವಂತೆ ಯೋಜನೆ ಇದೆ. ಅದನ್ನು ಸರ್ಕಾರದವರು ಪರಿಶೀಲನೆ

ಮಾಡಿದ್ದಾರೆ, ಅಲ್ಲಿ ಕಚ್ಚಾಮಾಲೂ ಸಿಗುತ್ತದೆ. ಇದರ ಬಗ್ಗೆ ತಜ್ಞರೂ ಒಳ್ಳೆಯ ಅಭಿಪ್ರಾಯವನ್ನೂ ಕೊಟ್ಟಿದ್ದಾರೆ. ಆದ್ದರಿಂದ ಸರ್ಕಾರದವರು ಈ ಒಂದು ಸಿಮೆಂಟ್ ಕಾರ್ಖಾನೆಯನ್ನು ಪ್ರಾರಂಭ ಮಾಡಬೇಕು, ಮತ್ತು ಇದರಿಂದ ಅಲ್ಲಿನ ಜನರಿಗೂ ಒಂದು ಉದ್ಯೋಗಕ್ಕೆ ಅವಕಾಶ ಸಿಕ್ಕಿದಂತಾಗುತ್ತದೆ ಎಂದು ಹೇಳುತ್ತೇನೆ.

ಶಿಕ್ಷಣದ ವಿಷಯದಲ್ಲಿ ಒಂದು ಉದಾಹರಣೆ ಹೇಳುತ್ತೇನೆ. ಶಿಕ್ಷಣದ ನಲುವಾಗಿ ಹೆಚ್ಚು ಹಣವನ್ನು ಒದಗಿಸಿದ್ದಾರೆ. ಕೆಲವು ಶಾಲಾ ಕಾಲೇಜು ಪ್ರಾರಂಭ ಮಾಡಿದ್ದಾರೆ. ಅದು ಒಳ್ಳೆಯದು. ನಮ್ಮ ಜಿಲ್ಲೆಯಲ್ಲಿ ಕಲವು ಸಂಚಾರಿ ಶಾಲೆಗಳು ಇವೆ. ಅವು ಹನುಮನಕೇರಿ, ನಾಗನೂರು, ಅರೆಮೂರು, ತೇಜ್‌ಪೂರ್, ಚಿಕ್ಕಮಾನಳಿ, ಬನ್ನಿಹಾಳ ಮುಂತಾದ ಕಡೆಗಳಲ್ಲಿ ಈ ಶಾಲೆಗಳಿವೆ. ಸಂಚಾರಿ ಶಾಲೆಗಳೆಂದರೆ, ಮುಂಜಾನೆ ಒಂದು ಶಾಲೆಯಾದರೆ, ಮಧ್ಯಾಹ್ನ ಆ ಉಪಾಧ್ಯಾಯನು ಬೇರೊಂದು ಊರಿಗೆ ಹೋಗಿ ಕಲಸಬೇಕು. ಇದರಲ್ಲಿ ಒಂದೊಂದು ಊರಿಗೆ ಹೋಗುವುದನ್ನು ಮಧ್ಯ ತಪ್ಪಿಸಿಕೊಳ್ಳುತ್ತಾರೆ. ನಮ್ಮಲ್ಲಿ 5 ಸಂಚಾರಿ ಶಾಲೆಗಳು ಇವೆ. ಆ ದೃಷ್ಟಿಯಿಂದ ಪ್ರತಿಯೊಂದು ಗ್ರಾಮಕ್ಕೂ ಕೂಡ ಸ್ವತಂತ್ರವಾದಂತಹ ಸರ್ಕಾರಿ ಶಾಲೆಗಳನ್ನು ಮಾಡಬೇಕು. ಈ ಬಗ್ಗೆ ಬಿಜಾಪುರ ಜಿಲ್ಲಾ ಸ್ಕೂಲ್ ಬೋರ್ಡಿನವರು ಠರಾವು ಮಾಡಿ ಕಳಿಸಿದ್ದಾರೆ. ಇದನ್ನು ಸರ್ಕಾರದವರು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ವಿದ್ಯುಚ್ಛಕ್ತಿ ಇಲಾಖೆಗೆ ಸಂಬಂಧಪಟ್ಟ ವಿಚಾರ. ಇಲ್ಲಿನ ನಮ್ಮ ಕೆಲಸಕಾರ್ಯಗಳು ತ್ವರಿತವಾಗಿ ಆಗುತ್ತಾ ಇಲ್ಲ. ಅಲ್ಲಿ ಎಕ್ಸಿಕ್ಯೂಟಿವ್ ಇಂಜಿನಿಯರ್, ಅಸಿಸ್ಟೆಂಟ್ ಇಂಜಿನಿಯರ್ ಮತ್ತು ಇನ್ನಿತರ ಅಧಿಕಾರಿಗಳನ್ನು ಕರಕೊಂಡು ಹೋಗಿ, ಅಲ್ಲಿ ಸಾಕಷ್ಟು ವಿಚಾರ ವಿನಿಮಯ ಮಾಡಿದ್ದಾಗಿದೆ ಈ ಬಗ್ಗೆ ಒಂದು ಕಾರ್ಯಕ್ರಮದ ಪಟ್ಟಿ ಮಾಡಿಕೊಂಡು ಅಲ್ಲಿ ವಿದ್ಯುಚ್ಛಕ್ತಿ ಒದಗಿಸಬೇಕು. ಅಲ್ಲಿನ ನೀರಾವರಿ ಬಾವಿಗಳಿಗೆ ಮತ್ತು ವಿದ್ಯುತ್ ಪಂಪ್‌ಸೆಟ್‌ಗಳಿಗೆ ವಿದ್ಯುಚ್ಛಕ್ತಿ ಸಿಗದೆ ಬಹಳ ನಿಧಾನವಾದ ಕೆಲಸ ನಡೆಯುತ್ತಿದೆ. ಬಿಜಾಪುರದಲ್ಲಿ ಆರು ಠಾಣಿಗಳಿವೆ, ಅವುಗಳಲ್ಲಿ ಎರಡು ಮೂರು ಕೆಟ್ಟು ಹೋಗಿದೆ ಮತ್ತು ಸ್ಟಾಫ್ ಹೆಚ್ಚು ಇಲ್ಲವೆಂದು ಹೇಳುತ್ತಿದ್ದಾರೆ. ಈ ಬಗ್ಗೆ ನಾನು ಸಂಬಂಧಪಟ್ಟ ಮಂತ್ರಿಯವರಿಗೆ ಕಾಗದ ಬರೆದಿದ್ದೇನೆ. ಉತ್ತರ ಇನ್ನೂ ಬಂದಿಲ್ಲ. ಇನ್ನು ಜಿಜ್ಞೆರಗಿಯಲ್ಲಿ 4–5 ನೂರು ಬಾವಿಗಳಿವೆ. ಸುಮಾರು 100 ರೈತರು ಡಿಪಾಸಿಟ್ ಹಣ ಕಟ್ಟಿದ್ದಾರೆ. ಇವತ್ತು ಸುಮಾರು 80 ಜನ ರೈತರು ವಿದ್ಯುಚ್ಛಕ್ತಿ ಪಂಪ್‌ಸೆಟ್ಟು ತೆಗೆದುಕೊಳ್ಳುವುದಕ್ಕೆ ಸಿದ್ಧವಾಗಿದ್ದಾರೆ. ಅಲ್ಲಿಯ ಜನರೆಲ್ಲಾ ಒಳ್ಳೆಯವರಾಗಿದ್ದಾರೆ. 80 ಮಂದಿ ಸ್ವಂತ ಖರ್ಚಿನಿಂದ ತಾವೇ ದುಡ್ಡು ಹಾಕಿ ಇಟ್ಟುಕೊಳ್ಳುತ್ತೇವೆ ಎಂದು ಹೇಳುತ್ತಿದ್ದಾರೆ. ಈಗ ತಿಕೋಟಾ ಗ್ರಾಮಕ್ಕೆ ವಿದ್ಯುಚ್ಛಕ್ತಿ ಕೊಟ್ಟಿದ್ದಾರೆ. ಅಲ್ಲಿಂದ ಇದು 5–6 ಮೈಲಿ ಇದೆ. ಇವತ್ತು ಅಲ್ಲಿನ ಜನರ ತೆಲಗ್ರಾಮ್ ಕೂಡ ಬಂದಿದೆ. ನಾಳೆ ಇಲ್ಲಿಗೆ 5–6 ಜನ ರೈತರು ಕೂಡ ಬರುವವರಿದ್ದಾರೆ, ಬಿಜಾಪುರ ಜಿಲ್ಲೆಯ ಒಂದು ಡಿವಿಜನ್‌ನ ವಿಚಾರ ಹೇಳುವುದಾದರೆ ಸುಮಾರು ಎರಡು ಸಾವಿರ ರೈತರು ಪಂಪ್‌ಸೆಟ್ ಎಲೆಕ್ಟ್ರಿಸಿಟಿಯ ನಲುವಾಗಿ ಡಿಪಾಸಿಟ್ ಹಣ ಕಟ್ಟಿದ್ದಾರೆ. ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಕ್ರಮ ತೆಗೆದುಕೊಳ್ಳುವಂತೆ, ಅಲ್ಲಿಗೆ ಬೇಕಾದ ಹೆಚ್ಚಿನ ಸೌಕರ್ಯ, ಸಹಾಯವನ್ನು ಒದಗಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನೊಂದು ನಲಹೆ ಏನೆಂದರೆ, ನಮ್ಮ ಉತ್ಪಾದನೆ ಜಾಸ್ತಿಮಾಡಬೇಕಾದರೆ, ಈ ಮನೋರಂಜನೆಯ ತೆರಿಗೆಯಾದ, ಸಿನಿಮಾ ತೆರಿಗೆ, ಕುದುರೆ ಜೂಜಿನ ತೆರಿಗೆ, ಮೋಟಾರ್ ವಾಹನದ ತೆರಿಗೆ, ರೇಡಿಯೋ ತೆರಿಗೆ ಇದನ್ನು ಸಾಕಷ್ಟು ರೀತಿಯಲ್ಲಿ ಜಾಸ್ತಿಮಾಡಬೇಕು. ಇದನ್ನು ಎಷ್ಟು ಹೆಚ್ಚು ಮಾಡಿದರೂ, ಯಾರೂ ಇದನ್ನು ಬಿಡುವುದಿಲ್ಲ. ಇನ್ನು ಏನು ಒಂದು ಲಾಟರಿ ಸ್ಕೀಂ ಮಾಡಬೇಕೆಂದು ಇದ್ದಾರೆ, ಅದನ್ನು ಎರಡ್ಮೂರು ಕಡೆಗಳಿಂದ ನಲಹೆಗಳನ್ನು ತೆಗೆದುಕೊಂಡು ಮಾಡಿದರೆ, ನಾವು ಹೆಚ್ಚಿನ ಸಂಪನ್ಮೂಲಗಳನ್ನು ಕ್ರೋಢೀಕರಿಸುವಂತಾಗಿ, ನಮ್ಮ ಹೆಚ್ಚಿನ ಬೇಡಿಕೆಗಳನ್ನು ಪೂರೈಸುವುದಕ್ಕೆ ನುಲಭವಾಗುತ್ತದೆ. 69–70ನೇ ನಾಲನಲ್ಲಿ ಎರ್ಮೂ ಗ್ರಾಮಗಳಿಗೂ ಕುಡಿಯುವ ನೀರಿನ ಯೋಜನೆ ಮಾಡುತ್ತೇವೆಂದು ಭರವಸೆ ಕೊಟ್ಟಿದ್ದಾರೆ. ನಮ್ಮ ಬಿಜಾಪುರ ಜಿಲ್ಲೆಯಲ್ಲಿ ಬಹಳ ಗ್ರಾಮಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಇಲ್ಲ. ಇದಕ್ಕೆ ಸರ್ಕಾರದವರು ಹೆಚ್ಚು ಹಣ ಒದಗಿಸಿಕೊಟ್ಟು ಸಹಾಯ ಮಾಡಬೇಕೆಂದು, ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಬಿ. ಭಾಸ್ಕರ ಶೆಟ್ಟಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ಆರ್ಥಿಕ ಮಂತ್ರಿಯವರು ಈ ಸಭೆಯು ಮುಂದೆ ಮಂಡಿಸಿರುವ 1969–70 ನೇ ವರ್ಷದ ಆಯವ್ಯಯ ಪತ್ರವನ್ನು ವಿರೋಧ ಮಾಡುತ್ತಾ ಒಂದೆರಡು ನಲಹೆಗಳನ್ನು ಈ ನಂದರ್ಭದಲ್ಲಿ ಕೊಡಲಚ್ಛಿಸುತ್ತೇನೆ.

(ಶ್ರೀ ಬಿ. ಭಾಸ್ಕರ ಶೆಟ್ಟಿ)

ಈ ಆಯವ್ಯಯ ಪತ್ರವನ್ನು ಕೂಲಂಕಷವಾಗಿ ಅವಲೋಕಿಸಿದರೆ, ನಮ್ಮ ಆರ್ಥಿಕ ಪರಿಸ್ಥಿತಿಯು ದಿವಾಳಿಯು ಹಾದಿಯನ್ನು ತುಳಿಯುತ್ತಾ ಇದೆ ಎಂದು ಹೇಳಿದರೆ, ಅತಿಶಯೋಕ್ತಿಯಾಗ ರಾರದು ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಏಕೆಂದರೆ, 1968–69ರಲ್ಲಿ ನಮ್ಮ ಸಾಲ 342 ಕೋಟಿ 80 ಲಕ್ಷ ಇದ್ದರೆ, 1969-70 ರಲ್ಲಿ 425 ಕೋಟಿ 95 ಲಕ್ಷಕ್ಕೆ ಹೋಗಿದೆ. ಹಾಗೆ ನಮ್ಮ ವರಮಾನವನ್ನು ತೆಗೆದು ನೋಡಿದರೆ, 1968–69ಕ್ಕೆ 194 ಕೋಟಿ 74 ಲಕ್ಷ, 1969–70 ರಲ್ಲಿ 213 ಕೋಟಿ 26 ಲಕ್ಷ. ಈ ವರಮಾನದಲ್ಲಿ ಬರುವ ವ್ಯತ್ಯಾಸ 18 ಕೋಟಿ 52 ಲಕ್ಷ. ಈ ವರ್ಷ ವರಮಾನ ಜಾಸ್ತಿಯಾಗಿದೆ. ಅದರಲ್ಲಿ ಸಾಲದ ಲೆಕ್ಕಾಚಾರ ನೋಡುವಾಗ 83 ಕೋಟಿ 19 ಲಕ್ಷ ಸಾಲ ಒಂದು ವರ್ಷದಲ್ಲಿ ಏರಿ ಹೋಗಿದೆ. ಸಾಲ ಮೂಲಗಳ ವ್ಯವಹಾರಗಳನ್ನು ನೋಡುವಾಗ ವರಮಾನ ಒಂದು ಪಾಲಷ್ಟು ಹೆಚ್ಚಿದರೆ, ಸಾಲ 5 ಪಾಲಷ್ಟು ಹೆಚ್ಚಾಗಿದೆ. ಇದು ಒಂದು ವರ್ಷದ ಮಾತನ್ನು ನಾನು ಹೇಳುತ್ತಿದ್ದೇನೆ. ನಮ್ಮ ಬಡ್ಡಿ ಲೆಕ್ಕಾಚಾರ ತೆಗೆದು ನೋಡಿದರೆ, 20 ಕೋಟಿ 27 ಲಕ್ಷ ರೂಪಾಯಿ, ಅಂದರೆ, ವರಮಾನದ ಶೇಕಡಾ 10 ಪರ್‌ಸೆಂಟ್ ನಾವು ಬಡ್ಡಿಯನ್ನು ಕೊಡುತ್ತಿದ್ದೇವೆ.

6–30 P.M.

ನಮ್ಮ ಆರ್ಥಿಕ ಮಂತ್ರಿಗಳು ಹೋದ ವರ್ಷದ ಬಜೆಟ್ ಭಾಷಣಕ್ಕೆ ಉತ್ತರ ಕೊಟ್ಟಿರುವುದನ್ನು ನಾನು ನೋಡಿದ್ದೇನೆ. ನೀವು ಸಾಲವಾಗಿದೆ ಎಂದು ಹೆದರಬೇಡಿ. ಸಾಲಕ್ಕಾಗಿ ನಮ್ಮಲ್ಲಿ ಆಸ್ತಿಗಳು ಇವೆ. ಶರಾವತಿ, ತುಂಗಭದ್ರಾ, ಭದ್ರಾವತಿಯ ಕಾರ್ಖಾನೆ, ವಿಧಾನ ಸೌಧ ಇದನ್ನೆಲ್ಲಾ ತೋರಿಸಿದ್ದಾರೆ. ನಾನಾದರೂ ಹೇಳುತ್ತೇನೆ. ಭದ್ರಾವತಿಯ ಕಾರ್ಖಾನೆ, ತುಂಗಭದ್ರಾ ಪ್ರಾಜೆಕ್ಟ್, ಶರಾವತಿಯ ಯೋಜನೆಗಳಿಂದ ಮುಂದಿನ ಸಾಲಕ್ಕಾಗಿ ಅವುಗಳು ಈಡಾಗುವುದೇ ಎಂದು ನನಗೆ ಅನುಮಾನ ಇದೆ. ನಮ್ಮ ದೇಶದಲ್ಲಿ ಬಡ್ಡಿ ಕೊಡುವುದು ಮಾರ್ವಾಡಿ ಬಡ್ಡಿಯಾಗಿದೆ. ಬಡ್ಡಿ ಕೊಡುವುದು ಏಪರೀತವಾಗಿ ನಮ್ಮ ಆದಾಯದ ಶೇಕಡಾ 10 ರಷ್ಟು ಬಡ್ಡಿಯನ್ನು ಸರ್ಕಾರದವರು ಕೊಡುತ್ತಿದ್ದಾರೆ. ಯಾವ ಸರ್ಕಾರ ಕೂಡ ಈ ರೀತಿಯಿಲ್ಲ ಸರ್ಕಾರವನ್ನು ನಡೆಸುವುದಿಲ್ಲ ಎಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಇದು ದಿವಾಳಿತನದ ಆರ್ಥಿಕ ಪರಿಸ್ಥಿತಿಯಾಯಿತು. ದುರದೃಷ್ಟವಶಾತ್ ನಾವು ನಮ್ಮ ಮುಂದಿನ ಪೀಳಿಗೆಗೆ ಸಾಲದ ಹೊರೆಯನ್ನು ಹೇರಿ, ದಿವಾಳಿ ಸರ್ಕಾರವನ್ನು ಅವರ ತಲೆಯಮೇಲೆ ಹೇರಿ ಹೋಗುವಂತಹ ಸರ್ಕಾರವನ್ನು ನಡೆಸುತ್ತಾ ಹೋದರೆ ಎಷ್ಟರತನಕ ಸರ್ಕಾರ ನಡೆಯಬಹುದು ಎನ್ನುವುದನ್ನು ತಾವಾದರೂ ಆಲೋಚನೆ ಮಾಡಬೇಕು. ಈಗ ಸಾಲದ ಲೆಕ್ಕಾಚಾರವನ್ನು ನೋಡುವುದಾದರೆ ಈ ಪ್ರಜಾಪ್ರಭುತ್ವ ಸರ್ಕಾರ ಪ್ರತಿಯೊಬ್ಬರ ತಲೆಯ ಮೇಲೆಯೂ 170 ರೂಪಾಯಿ 50 ಪೈಸೆ ಸಾಲವನ್ನು ಹೇರಿದ್ದಾರೆ. ಆರ್ಥಿಕ ಪ್ರಗತಿಯನ್ನು ಹೊಂದಿರುವಂತಹ ಯಾವುದೇ ದೇಶವಾಗಲೀ ಸಾಲ ಮಾಡದೇ, ಕೊರತೆಯ ಬಜೆಟ್ಟನ್ನು ಇಡದೆ ಗತ್ಯಂತರವಿಲ್ಲ ಎಂದು ಹೇಳಿದ್ದಾರೆ. ನಮಗೆ ಸ್ವಾರಾಜ್ಯ ಸಿಕ್ಕುವ ಸಂದರ್ಭದಲ್ಲಿ ಎರಡನೇ ಮಹಾ ಯುದ್ಧ ಆದದ್ದು ನಿಜ. ಆಗ ಜಪಾನ್, ಜರ್ಮನಿ ಮುಂತಾದ ದೇಶಗಳು ಯಾವ ಪರಿಸ್ಥಿತಿಯಲ್ಲಿದ್ದುವು ಎಂಬುದು ಎಲ್ಲರಿಗೂ ಗೊತ್ತಿದೆ. ಈಗ ಅವು ಎಷ್ಟರಮಟ್ಟಿಗೆ ಮುಂದುವರಿದಿವೆ ಎಂಬುದು ಎಲ್ಲರಿಗೂ ಗೊತ್ತಿದೆ. ಈಗ ಪಾಶ್ಚಿಮಾತ್ಯ ದೇಶಗಳಿಗೆ ನಾವು ಮಂತ್ರಿಗಳನ್ನು ಕಳುಹಿಸುತ್ತಿದ್ದೇವೆ. ಅವರು ಅಲ್ಲಿಗೆ ಹೋಗಿ ನಮ್ಮನೆ ಮಜಾ ಮಾಡಿಕೊಂಡು ಬರುತ್ತಿದ್ದಾರೆ. ಅವರು ಪರದೇಶಗಳಿಗೆ ಹೋದಾಗ ಅಲ್ಲಿನ ಆರ್ಥಿಕ ಪರಿಸ್ಥಿತಿ ಯಾವರೀತಿ ಇದೆ ಎಂಬುದನ್ನು ತಿಳಿದುಕೊಂಡು ಬಂದು 22 ವರ್ಷಗಳ ಕಾಂಗ್ರೆಸ್ಸಿನವರ ಆಡಳಿತದಲ್ಲಿ ಏನೇನು ಸಾಧಿಸಿದ್ದಾರೆ ಎನ್ನುವ ವಿಷಯವನ್ನು ಮಹಾರಾಷ್ಟ್ರ ಏಕೀಕರಣ ಸಮಿತಿಯ ಸದಸ್ಯರು ಬಹಳ ಚೆನ್ನಾಗಿ ಹೇಳಿದ್ದಾರೆ. ನಾವು ಖರ್ಚು ಮಾಡಿದ್ದಕ್ಕೆ ತಕ್ಕಂತೆ ಪ್ರತಿಫಲ ಸಿಕ್ಕಿದೇ ಹೋದರೆ ನಾವು ಸ್ವಾವಲಂಬಿಗಳಾಗಿ ಕೈಗಾರಿಕೆಯಲ್ಲಿ ಪ್ರಗತಿಯನ್ನು ಹೊಂದುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ಈ ಬಾಬಿಗೆ ನಾವು ಎಷ್ಟು ಖರ್ಚು ಮಾಡಿದ್ದೇವೆ, ಇದರಿಂದ ಎಷ್ಟು ಪ್ರತಿಫಲ ಸಿಕ್ಕಿದೆ ಎನ್ನತಕ್ಕ ಲೆಕ್ಕಾಚಾರವನ್ನು ಇಡಬೇಕು. ನಮ್ಮನೆ ಹೀಗೆ ಸಾಲಮಾಡುತ್ತಾ ಹೋದರೆ ಇವರು ಹೆಚ್ಚು ಕಾಲ ಬದುಕುವುದಿಲ್ಲ. ಇನ್ನು ಮುಂದೆ ಕಾಂಗ್ರೆಸ್ ಸರ್ಕಾರ ಬೇಡ ಕಿಚಡಿ ಸರ್ಕಾರ ಬರಲಿ ಎಂದು ಹೇಳುತ್ತಿದ್ದಾರೆ. ಈ ಸರ್ಕಾರದವರು ಈ ರೀತಿ ಋಣ ಭಾರವನ್ನು ಹೊರಿಸಿ ಮುಂದಿನ ಪೀಳಿಗೆಗೆ ಯಾವ ರೀತಿ ಒಳ್ಳೆಯ ಕೆಲಸವನ್ನು ಮಾಡಿದೆ ? ಹೀಗೆಯೇ ಇವರು ಮುಂದಿನ ಪೀಳಿಗೆಗೆ ಋಣ ಭಾರವನ್ನು ಬಿಟ್ಟುಕೊಟ್ಟು ಹೋಗುತ್ತಾರೆ. ಇದು

ಎಷ್ಟು ಮಾತ್ರಕ್ಕೂ ಸರಿಯಲ್ಲ. ಮಾತ್ರವಲ್ಲದೆ ಇವರು ಖರ್ಚು ಮಾಡುವ ದುಡ್ಡಿನಲ್ಲಿ ಶೇಕಡಾ ಎಷ್ಟು ದುಡ್ಡು ನಿಜವಾಗಿ ದೇಶಕ್ಕೆ ಜನತೆಗೆ ಖರ್ಚಾಗಿದೆ ಎನ್ನುವುದಕ್ಕೆ ಒಂದು ನಣ್ಣ ಉದಾಹರಣೆಯನ್ನು ಕೊಡುತ್ತೇನೆ. ಕನಕಮಾರಾ ಯೋಜನೆ ಯಾವಾಗ ಪ್ರಾರಂಭವಾಯಿತು, ಅದಕ್ಕೆ ಎಷ್ಟು ಖರ್ಚು ಮಾಡಿದ್ದಾರೆ, ಅದರ ಅಂದಾಜು ವೆಚ್ಚ ಎಷ್ಟು ಎಂಬುದನ್ನು ನೋಡಿದರೆ ಇದಕ್ಕೆ ಆದಿ ಅಂತ್ಯ ಯಾವುದೂ ಇಲ್ಲ. ಈ ಯೋಜನೆ 50 ಲಕ್ಷ ರೂಪಾಯಿಗಳ ಖರ್ಚಿನಲ್ಲಿ ಶುರು ಆಯಿತು. ಈಗಾಗಲೇ ಒಂದು ಕೋಟಿ ರೂಪಾಯಿಗಳವರೆಗೂ ಖರ್ಚಾಗಿದೆ. ಆದರೆ ಅದು ಇನ್ನೂ ಅಂತ್ಯವಾಗುವ ಪರಿಸ್ಥಿತಿಯಲ್ಲಿಲ್ಲ. ಒಂದು ವೇಳೆ ಅದು ಕಂಪ್ಲೀಟ್ ಆದರೂ ಕೂಡ ಅದರಲ್ಲಿ ಸಾಕಷ್ಟು ನೀರೇ ಇಲ್ಲ. ನೀರೆಲ್ಲಾ ಬಿತ್ತಿ ಹೋಗಿದೆ. ಇದು ಏನಾಗಿದೆ ಎಂದರೆ ಮಹಾತ್ಮಾ ಗಾಂಧೀಜಿಯವರು ಪ್ರತಿ ನಿತ್ಯ ಈಶ್ವರ ಅಲ್ಲಾ ತೇರೇನಾಂ ಸಬಕೋ ಸನ್‌ಮತಿ ದೇ ಭಗವಾನ್ ಎನ್ನುತ್ತಿದ್ದರು. ಈಗ ನೀವು ಏನು ಹೇಳುತ್ತಿದ್ದೀರಿ ಎಂದರೆ ತಾತಾ ಬಿರ್ಲಾ ತೇರೇನಾಂ ಲೈಸೆನ್ಸ್ ಪರ್ಮಿಟ್ ದೇ ಭಗವಾನ್ ಎಂದು ಹೇಳುತ್ತಿದ್ದೀರಿ. ಇವರ ಕಂಟ್ರಾಕ್ಟ್‌ದಾರರಿಗೆ ಇವರ ಇನ್‌ಫ್ಲೂಯೆನ್ಸ್‌ದಾರರಿಗೆ ಹಣ ಕೊಡುವುದಕ್ಕೆ ಯೋಜನೆಗಳನ್ನು ತಯಾರು ಮಾಡುತ್ತಿದ್ದಾರೆ ಎಂದು ಅನಿಸುತ್ತದೆ. ನಿಜವಾಗಿಯೂ ಇದರಲ್ಲಿ 100ಕ್ಕೆ 50 ಕ್ಕಿಂತ ಜಾಸ್ತಿ ಹಣ ದೇಶಕ್ಕೆ ಖರ್ಚಾಗಿಲ್ಲ ಎಂಬುದು ನಮಗೂ ಗೊತ್ತಿದೆ, ನಿಮಗೂ ಗೊತ್ತಿದೆ. ಆಡಳಿತದಲ್ಲಿ ಎಷ್ಟರತನಕ ಆಡಳಿತದ ಲಗಾಮು ಏನಿದೆ ಅದನ್ನು ಸರಿಯಾಗಿ ಹಿಡಿಯುವುದಿಲ್ಲವೋ ಅಷ್ಟರವರೆಗೆ ಎಷ್ಟೇ ಸಾಲ ಮಾಡಿದರೂ, ಎಷ್ಟೇ ಯೋಜನೆಗಳನ್ನು ಕೈಗೊಂಡರೂ ಕೂಡ ಆ ಯೋಜನೆಗಳು ಫಲಕಾರಿಯಾಗುವುದಿಲ್ಲ.

ಇನ್ನೊಂದು ವಿಷಯ ಮಾನ್ಯ ಮುಖ್ಯ ಮಂತ್ರಿಗಳು ಒಪ್ಪಿಕೊಂಡಿದ್ದಾರೆ. ಕೇಂದ್ರ ಸರ್ಕಾರದವರು ನಮ್ಮ ವಿಚಾರದಲ್ಲಿ ತಾರತಮ್ಯವನ್ನು ತೋರಿಸುತ್ತಿದ್ದಾರೆ ಎಂದು ಅವರು ಒಂದು ಸಭೆಯಲ್ಲಿ ಹೇಳಿದ್ದಾರೆ. ಕೇಂದ್ರ ಸರ್ಕಾರದವರು ನಮ್ಮ ರಾಜ್ಯದಲ್ಲಿ ಕೈಗಾರಿಕೆಯನ್ನು ಸ್ಥಾಪನೆ ಮಾಡುವ ಸಂದರ್ಭದಲ್ಲಿ ಲೈಸೆನ್ಸ್ ಕೊಡುವುದರಲ್ಲಿ ವಿಳಂಬ ಮಾಡುತ್ತಿದ್ದಾರೆ ಎಂದು ಅವರು ಹೇಳಿದ್ದಾರೆ. 1952ನೇ ಇಸವಿಯಿಂದ ಕೇಂದ್ರ ಸರ್ಕಾರದವರು ಕೈಗಾರಿಕೆಗಳ ಮೇಲೆ ಹೂಡಿರುವ ಬಂಡವಾಳದಲ್ಲಿ ಮೈಸೂರು ರಾಜ್ಯಕ್ಕೆ ಯಾವುದೂ ಕೊಟ್ಟಿಲ್ಲ ಎಂದರೆ ಇದು ನಾಚಿಕೆಗೇಡಿನ ವಿಷಯ. ನಿಮ್ಮಿಂದ ಈ ರಾಜ್ಯಕ್ಕೆ ಏನೂ ಮಾಡುವುದಕ್ಕೆ ಸಾಧ್ಯವಿಲ್ಲ. ಈಗ 22 ವರ್ಷಗಳಿಂದ ಕೊಟ್ಟಿರತಕ್ಕಂಥ ಅಂಕೆ ಸಂಖ್ಯೆಗಳನ್ನು ನೋಡುವುದಾದರೆ ಕೇಂದ್ರಸರ್ಕಾರಕ್ಕೆ ಅದಾಯದ ದೃಷ್ಟಿ ಇದೆ. ಮುಂದೆ ಅನುಕೂಲವಾಗಬಹುದು ಎನ್ನುವ ಆಶೆಯನ್ನು ಇಟ್ಟುಕೊಂಡರೆ ಕೇಂದ್ರದಲ್ಲಿ ನಿಮ್ಮ ರಾಜ್ಯದ ನಾಯಕರ ಮಾತನ್ನು ಯಾರೂ ಕೇಳುವುದಿಲ್ಲ. ನಿಮಗೆ ಕೇಂದ್ರದಲ್ಲಿ ಬೆಲೆಯಿಲ. ಇದನ್ನು ಮುಖ್ಯ ಮಂತ್ರಿಗಳೇ ಒಪ್ಪಿಕೊಂಡಿದ್ದಾರೆ. ಇನ್ನು ಮುಂದಕ್ಕೆ ಕೇಂದ್ರದಿಂದ ಹಣ ಸಹಾಯ ಸಿಕ್ಕುವ ಪರಿಸ್ಥಿತಿಯಲ್ಲಿ ಇಲ್ಲ. ಈ ರಾಜ್ಯ ಯಾವ ದೃಷ್ಟಿಯಿಂದಲಾದರೂ ಕೇಂದ್ರ ಸರ್ಕಾರದಿಂದ ಸಹಾಯವನ್ನು ಪಡೆದು ಅಭಿವೃದ್ಧಿಯಾಗುತ್ತದೆ ಎಂದರೆ ಅದು ಆಗುವುದಿಲ್ಲ. ಹಣವನ್ನು ಪೋಲು ಮಾಡುವಂತಹ ಈ ಆಯವ್ಯಯ ಪಟ್ಟಿಯನ್ನು ನಾನು ಬುವಾಗಿ ವಿರೋಧಿಸುತ್ತೇನೆ. ಮಾನ್ಯ ಆರ್ಥಿಕ ಮಂತ್ರಿಗಳು ಆಯವ್ಯಯ ಪತ್ರದಲ್ಲಿ 13—32 ಕೋಟಿ ರೂಪಾಯಿಗಳ ಕೊರತೆಯ ಆಯವ್ಯಯ ಮುಗಂಡ ಪತ್ರವನ್ನು ಈ ಸಭೆಯಮುಂದೆ ಇಟ್ಟಿದ್ದಾರೆ. ಈ 13—32 ಕೋಟಿ ರೂಪಾಯಿಗಳನ್ನು ಹೇಗೆ ಸಂಪಾದನೆ ಮಾಡುತ್ತಾರೆ. ಯಾವ ರೀತಿಯಲ್ಲಿ ಜನತೆಯಿಂದ ವಸೂಲು ಮಾಡುತ್ತಾರೆ. ಬೇರೆ ಬೇರೆ ಮೂಲಗಳಿಂದ ಹೇಗೆ ಹಣವನ್ನು ಸಂಪಾದನೆ ಮಾಡುತ್ತಾರೆ ಎನ್ನುವುದನ್ನು ಬಡ್ಜೆಟ್ಟಿನಲ್ಲಿ ತೋರಿಸಿಲ್ಲ. ಕಳೆದ ಬಡ್ಜೆಟ್ ಅಧಿವೇಶನದಲ್ಲಿ ಮಾನ್ಯ ಆರ್ಥಿಕ ಮಂತ್ರಿಗಳು ಸಂಪನ್ಮೂಲಗಳನ್ನು ವರಮಾನವನ್ನು ಹೆಚ್ಚು ಮಾಡುವುದಕ್ಕಾಗಿ ಲಾಟರಿ ನಡೆಸುತ್ತೇವೆಂದು ಹೇಳಿದ್ದರು. ಆದರೆ ಅದನ್ನು ಮಾಡಲಿಲ್ಲ. ಮದ್ರಾಸ್ ಸರ್ಕಾರದವರು ಲಾಟರಿಯನ್ನು ಮಾಡಿದ್ದಾರೆ, ಕೇರಳ ಸರ್ಕಾರದವರು ಮಾಡಿದ್ದಾರೆ. ಮೈಸೂರಿನಲ್ಲಿ ಲಾಟರಿ ಮಾಡುತ್ತೇವೆ, ಆದ್ದರಿಂದ 4—5ಕೋಟಿ ರೂಪಾಯಿಗಳು ಉತ್ಪತ್ತಿ ಬರಬಹುದು ಎಂದು ಲೆಕ್ಕಾಚಾರವನ್ನು ಹಾಕಿದ್ದರು. ಆದರೆ ಅದರ ಬಗ್ಗೆ ಏನು ಮಾಡಿದರು ಎಂಬುದನ್ನು ಬಜೆಟ್ಟಿನಲ್ಲಿ ತೋರಿಸಿಲ್ಲ. ಈ ಬಗ್ಗೆ ನನ್ನ ವೈಯ್ಯಕ್ತಿಕ ಅಭಿಪ್ರಾಯವೇನೆಂದರೆ ಬೇರೆ ಬೇರೆ ರಾಜ್ಯಗಳವರು ಲಾಟರಿಯನ್ನು ನಡೆಸಿ ಲಕ್ಷಾಂತರ ರೂಪಾಯಿಗಳನ್ನು ಸಂಪಾದನೆ ಮಾಡಿದ್ದಾರೆಂದು ನಾನು ಕೇಳಿದ್ದೇನೆ. ದಕ್ಷಿಣ ಕನ್ನಡ ಜಿಲ್ಲೆಯವರು ಒಬ್ಬರು ಬೆಂಗಳೂರಿನಲ್ಲಿ ಇದ್ದಾರೆ. ಅವರು ಹೇಳಿದರು ಬೆಂಗಳೂರಿನಲ್ಲಿ ಒಂದು ತಿಂಗಳಿಗೆ 20 ಲಕ್ಷ ರೂಪಾಯಿಗಳ ಲಾಟರಿ ಟಿಕೆಟ್ ಮಾರಾಟವಾಗುತ್ತಿದೆ ಎಂದು ಹೇಳಿದರು, ಎಂದ ಮೇಲೆ ನಮ್ಮ ರಾಜ್ಯದವರು ಲಾಟರಿಯನು ಏತಕ್ಕೆ ಮಾಡಲಲ್ಲ. ಆದ್ದರಿಂದ ನಮ್ಮ ರಾಜ್ಯದ ಹಣವನ್ನು ಬೇರೆ ರಾಜ್ಯಗಳ ಲಾಟರಿಗಳಿಗೆ ಕೊಡುವುದಕ್ಕಿಂತ ನಮ್ಮ ರಾಜ್ಯದಲ್ಲೇ ಲಾಟರಿಯನ್ನು ಪ್ರಾರಂಭ ಮಾಡಿದರೆ ನಮ್ಮ ರಾಜ್ಯದ ವರಮಾನವನ್ನು ಹೆಚ್ಚಿಸಿ

(ಶ್ರೀ ಬಿ. ಭಾಸ್ಕರ ಶೆಟ್ಟಿ)

ಕೊಳ್ಳಲು ಅನುಕೂಲವಾಗುತ್ತದೆ ಎಂದು ಈ ಸಂದರ್ಭದಲ್ಲಿ ಸಲಹೆ ಮಾಡುತ್ತೇನೆ. ನಮ್ಮ ಆರ್ಥಿಕ ಮಂತ್ರಿಗಳು ಕಳೆದ ಸಾಲಿನಲ್ಲಿ ತಮ್ಮ ಬಡ್ಜೆಟ್‌ನಲ್ಲಿ ಹೇಳಿದ ಕೆಲವು ಸಂಗತಿಗಳನ್ನು ಈ ಸಾರಿಯ ಬಡ್ಜೆಟ್‌ನಲ್ಲಿ ಪ್ರಸ್ತಾಪ ಮಾಡಿಲ್ಲ ಆ ಬಗ್ಗೆ ಮರೆತಿದ್ದಾರೆಂದು ಕಾಣುತ್ತದೆ. ಈಗ ಪಾನನಿರೋಧ ವನ್ನು ರದ್ದು ಮಾಡಿದ್ದಾರೆ. ಯಾರು ಎಷ್ಟು ಬೇಕಾದರೂ ಕುಡಿಯಬಹುದು. ಈ ಬಾಬಿನಿಂದ 14 ಕೋಟಿ ರೂಪಾಯಿಗಳ ವರಮಾನ ಸರ್ಕಾರಕ್ಕೆ ಬರುತ್ತಿದೆ. ಶೇಂದಿ ಮತ್ತು ಷರಾಬನ್ನು ತಯಾರು ಮಾಡಿ ಜನರಿಗೆ ಒದಗಿಸುವಾಗ, ಆ ಬಗ್ಗೆ ಎಚ್ಚರಿಕೆ ವಹಿಸಿ ಅದರಲ್ಲಿ ಏನಾದರೂ ಬದಲಾವಣೆ ಮಾಡುವುದಕ್ಕೆ ಸಾಧ್ಯವೇ ಎಂಬುದನ್ನು ಸರ್ಕಾರದವರು ಆಲೋಚನೆ ಮಾಡಬೇಕು. ಏಕೆಂದರೆ ಜನರು ಬೇರೆ ರೀತಿಯಲ್ಲಿ ತಯಾರು ಮಾಡಿದ ಶೇಂದಿ ಷರಾಬನ್ನು ಕುಡಿದು ಹಾಳಾಗುತ್ತಿದ್ದಾರೆ. 1968—1969ರಲ್ಲಿ ಬಡ್ಜೆಟ್ ಬಗ್ಗೆ ಈ ವಿಷಯದಲ್ಲಿ ಮಾನ್ಯ ಆರ್ಥಿಕ ಮಂತ್ರಿಗಳು ಮಾತನಾಡುವಾಗ ಒಂದು ವಿಚಾರವನ್ನು ಹೇಳಿದ್ದರು, ಏನೆಂದರೆ, ಜನರು ಕೆಟ್ಟ ಪಾನೀಯ ಗಳನ್ನು ಕುಡಿದು ಹಾಳಾಗುವುದನ್ನು ತಪ್ಪಿಸುವುದಕ್ಕಾಗಿ, ಅವರ ಒಂದು ದುಶ್ಚಟವನ್ನು ತಪ್ಪಿಸುವ ಸಲುವಾಗಿ ಮದ್ಯಪಾನವನ್ನು ಕುಡಿಯುವುದರಿಂದ ಆಗುವ ದುಷ್ಪರಿಣಾಮ ಗಳನ್ನು ಸಾರ್ವಜನಿಕರಿಗೆ ತಿಳಿಸುವುದಕ್ಕಾಗಿ ಒಂದು ಪಾನನಿರೋಧ ಸಮಿತಿಯನ್ನು ರಚಿಸಬೇಕೆಂದಿದ್ದೇವೆ. ಇದರಿಂದ ಮಾನ್ಯ ಸದಸ್ಯರುಗಳಿಗೆ ಸಂತೋಷವಾದೀತೆಂದು ನಾನು ಭಾವಿಸಿದ್ದೇನೆ ಎಂಬುದಾಗಿ ಹೇಳಿದ್ದರು. ಈ ಸಮಿತಿಗಳು ಎಲ್ಲಿ ಹೋದವು ಎಂದು ಕೇಳುತ್ತೇನೆ. ಜನರ ದುಶ್ಚಟವನ್ನು ತಪ್ಪಿಸುವುದಕ್ಕೆ ಈ ಸರ್ಕಾರದಿಂದ ಆಗಲಲ್ಲ. ಆದಕಾರಣ ಈಗ ಇರುವ 29 ಜನ ಮಂತ್ರಿಗಳು ಪ್ರತಿಯೊಂದು ಶೇಂದಿ ಅಂಗಡಿಗಳ ಮುಂದೆ ಒಬ್ಬೊಬ್ಬರು ನಿಂತುಕೊಂಡು ಈ ಬಗ್ಗೆ ಭಾಷಣ ಬಿಗಿಯುವುದು ಒಳ್ಳೆಯದು.

ಶ್ರೀ ಎಸ್. ಶಿವಪ್ಪ.—ಅವರೇ ಕುಡಿಯುತ್ತಾರೆ?

ಶ್ರೀ ಬಿ. ಭಾಸ್ಕರ ಶೆಟ್ಟಿ.—ಈ ಅಂಗಡಿಗಳನ್ನು ನಡೆಸುತ್ತಿರುವವರಲ್ಲಿ ಕಾಂಗ್ರೆಸ್ ಸಂಸ್ಥೆಯ ವರೇ ಹೆಚ್ಚು ಜನರಿದ್ದಾರೆ. ನಮ್ಮ ಜಿಲ್ಲೆಯ ಮಟ್ಟಿಗೆ ಹೇಳುವುದಾದರೆ ನಾನು ತಿಳಿದಮಟ್ಟಿಗೆ ಹೆಂಡ ಷರಾಬ್ ಮಾರಾಟ ಮಾಡುತ್ತಿರುವವರಲ್ಲಿ ಸೆಂಟ್ ಪರ್‌ಸೆಂಟ್ ಕಾಂಗ್ರೆಸ್ ಮೆಂಬರ್‌ಗಳಾಗಿದ್ದಾರೆ. ನಮ್ಮ ಆಹಾರ ಮಂತ್ರಿಗಳು ನಮ್ಮ ಜಿಲ್ಲೆಯಲ್ಲಿ ಪ್ರವಾಸ ಮಾಡುತ್ತಿರುವಾಗ ಮಧ್ಯದಲ್ಲಿ ತಮ್ಮ ಕಾರ್ಯಕ್ರಮವನ್ನು ಬದಲಾವಣೆ ಮಾಡಿಕೊಂಡು ಮಧ್ಯಾಹ್ನ ನನ್ನ ಕ್ಷೇತ್ರಕ್ಕೆ ಕಾಫಿಗೆ ಬರುತ್ತೇನೆಂದು ನನಗೆ ಕಾಗದ ಬರೆದಿದ್ದರು. ಆ ಕಾಗದದಲ್ಲಿ ಯಾವ ಕಾರ್ಯಕ್ರಮಕ್ಕಾಗಿ ಬರುತ್ತೇನೆ ಎಂಬುದನ್ನು ತಿಳಿಸಿರಲಿಲ್ಲ. ಮಧ್ಯಾಹ್ನ ಆಲ್ಲಿಗೆ ಬಂದು ಹೊರಟು ಹೋದರು. ನಂತರ ನಾನು ಅವರು ಏತಕ್ಕೆ ಬಂದಿದ್ದರು ಎಂದು ವಿಚಾರಿಸಿದಾಗ, ಒಬ್ಬ ದೊಡ್ಡ ಷರಾಬ್ ಕಂಟ್ರಾಕ್ಟರ್‌ಗೆ ಊಟ ತಯಾರು ಮಾಡಲಕ್ಕೆ ಹೇಳಿದ್ದರು, ಅದರಂತೆ ಊಟ ಮಾಡಿಕೊಂಡು ಹೋಗುವುದಕ್ಕೆ ಬಂದಿದ್ದರು ಎಂದು ತಿಳಿದುಬಂತು. ಈ ಮಂತ್ರಿಗಳಿಗೆ ಊಟ ತಯಾರು ಮಾಡಲು ಷರಾಬ್ ಕಂಟ್ರಾಕ್ಟರೇ ಆಗಬೇಕು. ಮಂತ್ರಿಗಳು ಬಂದರೆ ಅವರ ಹಿಂದೆ 50 ಜನರು ಬರುತ್ತಾರೆ. ಅಧಿಕಾರಿಗಳು, ನೆಂಟರು, ಸಂಬಂಧೀಕರು ಮುಂತಾಗಿ ಎಲ್ಲರೂ ಬರುತ್ತಾರೆ. ಅಫೀಸರ್‌ಗಳಿಗೆ ಸರ್ಕಾರದವರು ಕೊಡುವ ಭತ್ಯ ಊಟಕ್ಕೆ ಸಾಕಾಗುವುದಿಲ್ಲವೆಂದು ಕಾಣುತ್ತದೆ, ಅದಕ್ಕಾಗಿ ಮಂತ್ರಿ ಗಳ ಜೊತೆಯಲ್ಲಿ ಊಟಕ್ಕೆ ಬರುತ್ತಾರೆ. ಇಷ್ಟೊಂದು ಜನಕ್ಕೆ ಊಟ ತಯಾರು ಮಾಡುವವರು ಬೇರೆ ಯಾರು ಸಿಗುವಾರರೆಂದು ತಿಳಿದುಕೊಂಡು ಈ ಷರಾಬ್ ಕಂಟ್ರಾಕ್ಟರನ್ನು ಹಿಡಿದಿದ್ದಾರೆ. ನಾನಾದರು ಇಷ್ಟು ಮಾತ್ರ ಹೇಳುತ್ತೇನೆ, ಈ ದೇಶದಲ್ಲಿ ಗಾಂಧಿವಾದವನ್ನು ಬೆಳೆಸಬೇಕೆಂದಿದ್ದರೆ, ಗಾಂಧಿವಾದವನ್ನು ಜಾರಿಗೆ ತರಬೇಕೆಂದಿದ್ದರೆ ನಮ್ಮ ಆರ್ಥಿಕ ಮಂತ್ರಿಗಳು ಹೇಳಿರುವ ಪ್ರಕಾರ ಪಾನನಿರೋಧ ಪ್ರಚಾರ ಸಮಿತಿಗಳನ್ನು ಕೂಡಲೇ ಜಾರಿಗೆ ತರಬೇಕೆಂದು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ.

ಇನ್ನು ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಒಂದು ವಿಚಿತ್ರ ಸಂಗತಿ ಏನೆಂದರೆ, ಈ ಜಿಲ್ಲೆ ಮದ್ರಾಸ್ ರಾಜ್ಯದಲ್ಲಿ ಸೇರಿದ್ದಾಗ ಅಲ್ಲಿಯ ಜನರು ಒಂದು ತರಹ ಇದ್ದರು. ಈಗ ಮೈಸೂರಿಗೆ ಸೇರಿದ ಮೇಲೆ ಅಲ್ಲಿಯ ಜನರು ನತದೃಷ್ಟರಾಗಿದ್ದಾರೆ. ಏತಕ್ಕಾಗಿ ಈ ಜಿಲ್ಲೆಯನ್ನು ಮಾದ್ರಾಸ್ ರಾಜ್ಯದಿಂದ ಮೈಸೂರು ರಾಜ್ಯಕ್ಕೆ ಸೇರಿಸಿದರೋ ಎನ್ನುವ ಪರಿಸ್ಥಿತಿಗೆ ಅಲ್ಲಿಯ ಜನರು ಬಂದಿದ್ದಾರೆ. ಈ ರಾಜ್ಯಕ್ಕೆ ಸೇರಿದಮೇಲೆ ನಮ್ಮ ರಾಜ್ಯದ ಜನರ ಪರಿಸ್ಥಿತಿ ಹೇಗಾಯಿತಾನವಾಗಿದೆ. ಅಂಕಿ ಅಂಶಗಳ ಮೂಲಕ ಇದನ್ನು ಹೇಳುತ್ತೇನೆ. 1962ರಿಂದಲೂ ನಾನು ಈ ಸಭೆಯ ಸದಸ್ಯನಾಗಿದ್ದೇನೆ.

ಪ್ರತಿವರ್ಷದ ಬಡ್ಜೆಟ್‌ನಲ್ಲಿಯೂ ಸಹ ಈ ಸರ್ಕಾರದವರು ನಮ್ಮ ಜಿಲ್ಲೆಯಲ್ಲಿ ಗೊಬ್ಬರದ ಕಾರ್ಖಾನೆ, ಅಲ್ಯೂಮಿನಿಯಂ ಕಾರ್ಖಾನೆ ಮುಂತಾದ ಕಾರ್ಖಾನೆಗಳು ಪ್ರಾರಂಭವಾಗುತ್ತದೆಂಬ ಆಶ್ವಾಸನೆಯು ಸುರಿಮಳೆಯನ್ನೇ ಕೊಡುತ್ತಾ ಬಂದಿದ್ದಾರೆ. ಆದರೆ ಈ ಸಾರಿಯ ಬಡ್ಜೆಟ್ ಪುಸ್ತಕವನ್ನು ತಿರುವಿ ಹಾಕಿದರೆ ಗೊಬ್ಬರದ ಕಾರ್ಖಾನೆಯ ಸುದ್ದಿಯೇ ಇಲ್ಲ. ಮಾನ್ಯ ಮುಖ್ಯ ಮಂತ್ರಿಗಳಿಗೆ ಈ ವಿಚಾರದಲ್ಲಿ ಸರಿಯಾದ ಸಂಗತಿ ಗೊತ್ತಿಲ್ಲ. ಇವತ್ತು ಬೆಳಿಗ್ಗೆ ಪ್ರಶ್ನೋತ್ತರ ಕಾಲದಲ್ಲಿ ಈ ಗೊಬ್ಬರದ ಕಾರ್ಖಾನೆಯ ಬಗ್ಗೆ ಹೇಳುತ್ತಾ, ವಿದೇಶಿ ಸಂಸ್ಥೆಯೊಂದಿಗೆ ಮಾತುಕತೆ ನಡೆದಿದೆ. ಇಷ್ಟರಲ್ಲಿಯೇ ಗೊಬ್ಬರದ ಕಾರ್ಖಾನೆ ಪ್ರಾರಂಭವಾಗುತ್ತದೆಂದು ಹೇಳಿದರು. ಆದರೆ ಸರ್ಕಾರದ ವಕ್ತಾರರು ಅಂದರೆ ಸರ್ಕಾರದ ಮುಖ್ಯಾಧಿಕಾರಿಗಳು 31 ಜನವರಿ 1969ರಲ್ಲಿ ಈ ಬಗ್ಗೆ ಒಂದು ಹೇಳಿಕೆಯನ್ನು ಕೊಟ್ಟರು. ಅದು ಪತ್ರಿಕೆಗಳಲ್ಲಿ ಸಹ ಬಂದಿದೆ. ಏನೆಂದರೆ ಮೈಸೂರು ಸರ್ಕಾರ ಬ್ರಿಟಿಷ್-ಡಚ್ ಸಂಸ್ಥೆಯ ಸಹ ಭಾಗಿತ್ವದಲ್ಲಿ ಮಂಗಳೂರಿನಲ್ಲಿ ಒಂದು ರಾಸಾಯನಿಕ ಗೊಬ್ಬರ ಕಾರ್ಖಾನೆಯನ್ನು ಸ್ಥಾಪಿಸುವ ನಲುವಾಗಿ ಮಾತುಕತೆಯಾಗಿದೆ, ಈ ಬಗ್ಗೆ ಕೇಂದ್ರ ಸರ್ಕಾರದ ಅಂತಿಮ ನಿರ್ಧಾರವನ್ನು ನಿರೀಕ್ಷಿಸುತ್ತಿದ್ದೇವೆ ಎಂದುದಾಗಿ. ಈ ವಿಚಾರ ಮುಖ್ಯ ಮಂತ್ರಿಗಳಿಗೆ ಗೊತ್ತಿಲ್ಲವೆಂದು ಕಾಣುತ್ತದೆ. ಮಾನ್ಯ ಸದಸ್ಯರಾದ ಶ್ರೀಮಾನ್ ನಂಜೇಗೌಡರು ಈ ಬಗ್ಗೆ ಒಂದು ಉದಾಹರಣೆಯನ್ನು ಕೊಟ್ಟರು, ಏನೆಂದರೆ ನನ್ನಂಥ ಹಡ್ಡರು ಬೇಕಾದರೆ ಮಕ್ಕಳಾಗುವುದಕ್ಕೆ ಮುಂಚೆ ಕುರಾಪಿಯನ್ನು ಹೊಲಿಸಿಡಬಹುದು. ಆದರೆ ಈ ಸರ್ಕಾರದವರು ಮುದುಪೆಗೆ ಮುಂಚೆಯೇ ಕುರಾಪಿಯನ್ನು ಹೊಲಿಸಿಡುತ್ತಿದ್ದಾರೆ ಎಂದು ಹೇಳಿದರು. ಅಂದರೆ ಈ ಗೊಬ್ಬರದ ಕಾರ್ಖಾನೆ ಇನ್ನೂ ಪ್ರಾರಂಭವಾಗಿಲ್ಲದಿದ್ದರೂ ಎರಡೂವರೆ ಕೋಟಿ ರೂಪಾಯಿಗಳ ಪೆಚ್ಚಿದಲ್ಲಿ ನೀರು ಸರಬರಾಜಿನ ಯೋಜನೆಯನ್ನು ತಮ್ಮ ಕಡೆಯ ಕಂಟ್ರಾಕ್ಟರಿಗೆ ಸಹಾಯ ಮಾಡುವ ನಲುವಾಗಿ ಪ್ರಾರಂಭ ಮಾಡಿದ್ದಾರೆ. ಇದು ಸರ್ಕಾರದ ಅಂಧ ನೀತಿಯೆಂದು ಹೇಳಿಬಹುದು. ಈ ಯೋಜನೆಗಾಗಿ ಆ ಕಂಟ್ರಾಕ್ಟರಿಗೆ 50 ಲಕ್ಷ ರೂಪಾಯಿಗಳ ಅಡ್ವಾನ್ಸ್ ಬೇರೆ ಕೊಟ್ಟಿದ್ದಾರೆ. ಮುಂದೆ ಈ ನೀರನ್ನು ಸಮುದ್ರಕ್ಕೆ ಬಿಡುತ್ತಾರೋ ಏನೋ ಗೊತ್ತಿಲ್ಲ. ಈ ಸುದ ಬಡ್ಜೆಟ್‌ನಲ್ಲಿ ಈ ಗೊಬ್ಬರದ ಕಾರ್ಖಾನೆಯ ಬಗ್ಗೆ ಏನೂ ಹೇಳಿಲ್ಲದಿರುವುದರಿಂದ, ಈ ಬಗ್ಗೆ ಸರ್ಕಾರದಲ್ಲಿ ಯಾವ ಒಂದು ಮಾಹಿತಿಯೂ ಇಲ್ಲವೆಂದು ಕಾಣುತ್ತದೆ. ಈ ವಿಚಾರದಲ್ಲಿ ಯಾವ ಶಬ್ದವನ್ನು ಉಪಯೋಗಿಸಬೇಕೆಂಬುದು ನನಗೆ ತಿಳಿಯುತ್ತಿಲ್ಲ. ಕೆಟ್ಟ ಶಬ್ದವನ್ನು ಉಪಯೋಗಿಸಬೇಕಾಗುತ್ತದೆ. ಈ ಅಂಧ ಸರ್ಕಾರದವರು ಯಾವುದನ್ನೂ ಸರಿಯಾಗಿ ಯೋಚನೆ ಮಾಡದೆ ತಪ್ಪು ಹೇಳಿಕೆ ಕೊಡುತ್ತಿದ್ದಾರೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ನಮ್ಮ ಮಾನ್ಯ ವಿೀನುಗಾರಿಕೆಯ ಮಂತ್ರಿಗಳು ಪ್ರತಿದಿವಸ ಪತ್ರಿಕಾ ಹೇಳಿಕೆಯನ್ನು ಕೊಡುತ್ತಿರುತ್ತಾರೆ. ಮೊನ್ನೆ ಒಂದು ಪತ್ರಿಕಾ ಹೇಳಿಕೆ ಕೊಡುತ್ತಾ ಮೈಸೂರು ರಾಜ್ಯದಲ್ಲಿ ಮೂರು ಕೋಟಿ ರೂಪಾಯಿಗಳ ಪೆಚ್ಚಿದಲ್ಲಿ ಒಂದು ಫಿಷರೀಸ್ ಕಾರ್ಪೊರೇಷನ್ನನ್ನು ರಚನೆ ಮಾಡುತ್ತೇವೆಂದು ಹೇಳಿದ್ದಾರೆ. ಹಿಂದೆ ಇದೇ ಇರಾಕೆಯನ್ನು ನೋಡಿ ಕೊಳ್ಳುತ್ತಿದ್ದ ಶ್ರೀಮಾನ್ ದೇವರಾಜ ಅರಸ್ ಅವರೂ ಸಹ ಇದೇ ರೀತಿ ಹೇಳಿಕೆ ಕೊಡುತ್ತಿದ್ದರು. ಆದರೆ ಈ ಸಾಲಿನ ಬಡ್ಜೆಟ್‌ನಲ್ಲಿ ಫಿಷರೀಸ್ ಕಾರ್ಪೊರೇಷನ್ ಬಗ್ಗೆ ಏನೂ ಹೇಳಿಲ್ಲ. ಆ ಮೂರು ಕೋಟಿ ರೂಪಾಯಿಗಳು ಎಲ್ಲಿಗೆ ಹೋಯಿತು, ಗೊಬ್ಬರದ ಕಾರ್ಖಾನೆಯು ರೀತಿ ಇದೂ ಆಗಬಹುದೆಂದು ನಾನು ತಿಳಿಯುತ್ತೇನೆ. ಮತ್ತು ಈ ಕಾರ್ಪೊರೇಷನ್ ರಚನೆಯ ವಿಚಾರವೂ ಸಹ ಡೋಲಾಯಮಾನವಾಗಿದೆ. ಇನ್ನೊಂದು ವಿಶೇಷವಾದ ಸಂಗತಿ ಎಂದರೆ ಮೊನ್ನೆ ವಿೀನುಗಾರಿಕೆಯ ಮಂತ್ರಿಗಳು ಅಖಿಲ ಭಾರತದ ಕಾಂಗ್ರೆಸ್ ಅಧ್ಯಕ್ಷರನ್ನು ಮಲ್ಪೆಗೆ ಕರೆದುಕೊಂಡು ಬಂದು, 9.56 ಕೋಟಿ ರೂಪಾಯಿಗಳ ಪೆಚ್ಚಿದಲ್ಲಿ ವಿೀನುಗಾರಿಕೆ ಬಂದರಿನ ನಿರ್ಮಾಣ ಕಾರ್ಯವನ್ನು ಕೈಗೊಳ್ಳುವ ನಲುವಾಗಿ ಅಡಿಗಲ್ಲನ್ನು ಹಾಕಿಸಿದರು. ಈ ಮಲ್ಪೆ ಬಂದರು ಯೋಜನೆಗೆ ಕೇಂದ್ರ ಸರ್ಕಾರದ ಅನುಮತಿ ಸಿಕ್ಕಿಲ್ಲ ಎಂಬುದನ್ನು ಸರ್ಕಾರದವರೇ ತಿಳಿಸಿದ್ದಾರೆ. ಮಂಜೂರಾತಿ ಇಲ್ಲದ ಯೋಜನೆಗೆ ಅಡಿಗಲ್ಲನ್ನು ಹಾಕಿಸಿದ್ದಾರೆ. ಸರ್ಕಾರೀ ರಂಗಗಳಲ್ಲಿ ಪ್ರಾರಂಭವಾಗುವ ಕೆಲಸಗಳಿಗೆ ಅಡಿಗಲ್ಲನ್ನು ಯಾವ ರಾಜಕೀಯ ಪಕ್ಷಗಳ ಮುಖಂಡರೂ ಸಹ ಹಾಕಬಾರದೆಂದು ಸರ್ಕಾರದವರು ಆಜ್ಞೆ ಹೊರಡಿಸಿದ್ದಾರೆ. ಈ ರೀತಿ ಆರ್ಡರ್ ಇದ್ದರೂ ಸಹ ಅಖಿಲಭಾರತದ ಕಾಂಗ್ರೆಸ್ ಅಧ್ಯಕ್ಷರ ಕೈಯಲ್ಲಿ ಈ ಮಂಜೂರಾತಿ ಇಲ್ಲದ ಯೋಜನೆಗೆ ಅಡಿಗಲ್ಲನ್ನು ಹಾಕಿಸಿ ಕಾಂಗ್ರೆಸ್‌ನ ಪ್ರಚಾರ ಕಾರ್ಯವನ್ನು ಮಾಡಿದ್ದಾರೆ. ನಮ್ಮ ರಾಜ್ಯದ ಸ್ಥಿತಿ ಒಂದು ರೀತಿಯಾದ ಡೋಲಾಯಮಾನವಾದ ಸ್ಥಿತಿಯಲ್ಲಿ ನಡೆಯುತ್ತಿದೆ. ಇದೇಕೆ ಹೀಗೆ ಆಗುತ್ತಿದೆ ಎನ್ನುವುದು ನನಗೆ ಅರ್ಥವಾಗುತ್ತಿಲ್ಲ. ಇಲ್ಲಿನ ಸದಸ್ಯರುಗಳು ಸರಕಾರದ ಬಗ್ಗೆ ಎಷ್ಟು ನ್ಯಾಯಪರವಾಗಿ ಟೀಕೆ ಮಾಡಿದರೂ ಅದನ್ನು ಸರಕಾರ ಗಮನಕ್ಕೆ ತಗೆದುಕೊಳ್ಳುವುದಿಲ್ಲ. ಇವರ ಬಗ್ಗೆ ಮಾನ್ಯ ಸದಸ್ಯರಾದ ಶ್ರೀಮಾನ್ ಸಿದ್ದವೀರಪ್ಪನವರು ಹೇಳಿದಹಾಗೆ ಸರಕಾರದ ಚರ್ಮ ಬಹಳ ದಪ್ಪವಾಗಿ ಧಾರವಾಡದ ಎಮ್ಮೆಗಳಂತೆ ಬರಬರುತ್ತಾ ಆಗುತ್ತಿದೆ. ಇದಕ್ಕೆ ಎಷ್ಟು ದಪ್ಪ ದೊಣ್ಣೆ

(ಶ್ರೀ ಬಿ. ಭಾಸ್ಕರ ಶೆಟ್ಟಿ)

ತೆಗೆದುಕೊಂಡು ಹೊಡೆದರೂ ಅದರಿಂದ ಏನು ಉಪಯೋಗವಾಗುವುದಿಲ್ಲ. ಇಂತಹ ಒಂದು ಡೋರಾಯಮಾನವಾದ ಪರಿಸ್ಥಿತಿ ಇಂದು ನಮ್ಮ ರಾಜ್ಯದಲ್ಲಿ ಇರುವುದರಿಂದ ಯಾವ ಯೋಜನೆಯೇ ಆಗಲೀ ಇಂದು ಪ್ರಯೋಜನವಾಗುತ್ತಿಲ್ಲ. ಇದರ ಕಡೆಗೆ ಸರ್ಕಾರ ಸೂಕ್ತವಾದ ಕಾರ್ಯಕ್ರಮ ಗಳನ್ನು ಕೈಗೊಳ್ಳಬೇಕು ಎಂದು ಹೇಳಿ ಇಷ್ಟು ಅವಕಾಶ ಕೊಟ್ಟ ಅಧ್ಯಕ್ಷರನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎ. ನಂಜಪ್ಪ (ಶಾಂತಿನಗರ—ಬೆಂಗಳೂರು ಅರ್ಬನ್).—ಮಾನ್ಯ ಅಧ್ಯಕ್ಷರೇ, ಹಣಕಾಸಿನ ನಟವರು ಮಂಡಿಸಿರುವ ಬಜೆಟ್ಟನ್ನು ಸ್ವಾಗತ ಮಾಡುತ್ತಾ ಒಂದೆರಡು ಮಾತುಗಳನ್ನು ಇಲ್ಲಿ ಹೇಳಲು ಇಚ್ಛೈಪಡುತ್ತೇನೆ.

ಇಂದು ಸರಕಾರ ಟ್ಯಾಕ್ಸ್ ಎಂದು ಏನು ಹಾಕುತ್ತಿದ್ದಾರೆ ಅದರ ವಸೂಲಿ ಕಡೆಗೆ ಸರಕಾರ ಗಮನ ಕೊಡುತ್ತಿಲ್ಲ. ಇದರಿಂದ ಕೆಲವರು ಕಳ್ಳಲೆಕ್ಕಗಳನ್ನು ಇಟ್ಟುಕೊಂಡು ಇರುತ್ತಾರೆ. ಸೇಲ್ಸ್ ಟ್ಯಾಕ್ಸ್ ವಸೂಲಿಗೆ ತೋರಿಸುವುದು ಒಂದು ಲೆಕ್ಕ ಇನ್ನೊಂದು ಲೆಕ್ಕ ಯಾರಿಗೂ ತೋರಿಸು ವುದಿಲ್ಲ. ಇದರಿಂದಾಗಿ ಎಷ್ಟೋ ಜನ ಅಧಿಕಾರಿಗಳಿಗೆ ಮಾಮೂಲು ಎಂದು ಬರುತ್ತಿದೆ ಮತ್ತು ಅವರಿಗೆ ಬೇಕಾದಹಾಗೆ ಸಂವಾದನೆಯಾಗುತ್ತಿದೆ. ಸರಕಾರಕ್ಕೆ ಇದರಿಂದ ನ್ಯಾಯವಾಗಿ ಬರ ಬೇಕಾದ ಎಷ್ಟೋ ಹಣ ಬರುತ್ತಿಲ್ಲ. ದಿನ ನಿತ್ಯ ಇದರಲ್ಲಿರುವ ಅಧಿಕಾರಿಗಳು ಯಾವುದೋ ಒಂದು ನಿರ್ದಿಷ್ಟ ಕಾಲಕ್ಕೆ ಹೋಗಿ ಅವರ ಮಾಮೂಲುಗಳನ್ನು ವಸೂಲು ಮಾಡಿಕೊಳ್ಳಲು ಹೋಗುತ್ತಾರೆ. ಇದರಿಂದಾಗಿ ಸರಕಾರಕ್ಕೆ ಬರುವ ಹೆಚ್ಚಿಗೆ ದುಡ್ಡು ಹಾಳಾಗಿ ಹೋಗುತ್ತಿದೆ.

ಎರಡನೇದು ಸರಕಾರದಲ್ಲಿ ರಾರಿಗಳನ್ನು ಚೆಕ್ ಮಾಡುವುದಕ್ಕಾಗಿ ಚೆಕ್‌ಪೋಸ್ಟುಗಳನ್ನು ನೇಮಕ ಮಾಡಿರುತ್ತಾರೆ. ಅಲ್ಲಿರುವ ಅಧಿಕಾರಿಗಳು ರಾರಿಗಳು ಬಂದ ಕೂಡಲೇ ಅದಕ್ಕೆ ಸಂಬಂಧ ಪಟ್ಟ ಎಲ್ಲ ಬ್ರೇಕ್ ಇತ್ಯಾದಿಗಳು ಸರಿಯಾಗಿವೆಯೇ ಇಲ್ಲವೇ ಎನ್ನುವುದನ್ನೆರ್ಾ ಸರಿಯಾಗಿ ನೋಡಿ ಆ ನಂತರ ಅದರ ಬಗ್ಗೆ ಫಿಟ್ ನರ್ಟಿಫಿಕೇಟು ಕೊಡಬೇಕು. ಆದರೆ ಹೀಗೆ ಮಾಡದೆ ಇರುವುದರಿಂದ ಎಷ್ಟೋ ರಾರಿಗಳ ಅಪಘಾತಕ್ಕೆ ಕಾರಣವಾಗಿವೆ. ರಾರಿಗಳನ್ನು ತಂದಾಗ ಅವು ಸರಿಯಾಗಿಲ್ಲದೇ ಇದ್ದರೆ ಅಂತಹ ರಾರಿಗಳಿಗೆ ನರ್ಟಿಫಿಕೇಟನ್ನು ಕೊಡಲೇಬಾರದು ಮತ್ತು ಆರ್. ಟಿ. ಅಫೀಸುಗಳಲ್ಲಿ ಚೆಕ್ ಮಾಡಲು ಬ್ರೇಕ್ ಇನ್ಸ್‌ಪೆಕ್ಟರುಗಳು ಎಂದಿರುತ್ತಾರೆ. ಇವರುಗಳು ರಾರಿಗಳು ಬಂದಾಗ ಅವನ್ನು ಸರಿಯಾಗಿ ನೋಡಿ ಚೆಕ್ ಮಾಡಬೇಕಾದುದು ಅಗತ್ಯ. ಆದರೆ ಈಗ ಹಾಗೆ ಮಾಡುತ್ತಿಲ್ಲ. ರಾರಿಗಳಲ್ಲರುವ ಸ್ಟಿಡಾಮೀಟರು ಸರಿಯಾಗಿದೆಯೇ ಇದರ ಬ್ರೇಕುಗಳು ಸರಿಯಾಗಿವೆಯೇ ಇಲ್ಲವೇ ಎನ್ನುವುದೊಂದನ್ನೂ ನೋಡುತ್ತಿಲ್ಲ ನುಮ್ಮನೆ ಒಂದು ಕಡೆ ಒಂದು ರೌಂಡು ಸುತ್ತಿಸಿ ಆ ನಂತರ ಕಳುಹಿಸುತ್ತಾರೆ. ಇದರಿಂದ ಎಷ್ಟೋ ಕಡೆಗಳಲ್ಲಿ ಓಡುವ ರಾರಿಗಳು ಸರಿಯಾಗಿಲ್ಲದೆ ಇವೊತ್ತು ದಿನಂ ಪ್ರತಿ ಒಂದಲ್ಲ ಒಂದು ಕಡೆ ರಾರಿ ಅಪಘಾತಗಳು ಆಗುತ್ತಿರುತ್ತವೆ ಎನ್ನುವುದನ್ನು ದಿನಪತ್ರಿಕೆ ಪೇಪರು ಗಳಲ್ಲಿ ಓದುತ್ತಿರುತ್ತೇವೆ. ಆದುದರಿಂದ ಸರಕಾರದವರು ಇದರ ಕಡೆಗೆ ಗಮನ ಕೊಟ್ಟು ಇಲ್ಲರುವ ಬ್ರೇಕ್ ಇನ್ಸ್‌ಪೆಕ್ಟರುಗಳು ಸರಿಯಾಗಿ ಕೆಲಸ ಮಾಡುತ್ತಿದ್ದಾರೆಯೇ ಇಲ್ಲವೇ ಎನ್ನುವುದಕ್ಕೆ ಒಂದು ಕಮಿಟಿಯನ್ನಾದರೂ ಮಾಡಿ ಅದರ ಮೂಲಕ ಜನತೆಗೆ ಅನುಕೂಲ ಮಾಡಿದರೆ ಎಷ್ಟೋ ಸಹಾಯ ವಾಗುತ್ತದೆ. ಕಮಿಟಿಯವರು ಇದರ ಬಗ್ಗೆ ಹೋಗಿ ಬ್ರೇಕ್ ಇನ್ಸ್‌ಪೆಕ್ಟರ್‌ಗಳು ಸರಿಯಾಗಿ ಪರಿಶೀಲನೆ ಮಾಡಿ ಕೆಲಸ ಮಾಡುತ್ತಿದ್ದಾರೋ ಇಲ್ಲವೋ ಎನ್ನುವುದನ್ನೆರ್ಾ ಪರಿಶೀಲನೆ ಮಾಡಿ ನರಕಾರಕ್ಕೆ ವರದಿ ಕಳುಹಿಸಿದ ಮೇಲೆ ಅದರ ಮೇಲೆ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳಬಹುದು. ಅಲ್ಲದೆ ಡ್ರೈವರುಗಳು ಎಂದು ರಾರಿ ಓಡಿಸುವವರಿಗೆ ಸರಿಯಾದ ತರಬೇತಿ ಇಲ್ಲದೆ ಇರುವುದರಿಂದ ಎಷ್ಟೋ ಕಡೆಗಳಲ್ಲಿ ಅಪಘಾತಕ್ಕೆ ಕಾರಣವಾಗಿರುತ್ತದೆ. ಈಚೀಚೆಗೆ ಬೆಂಗಳೂರಿನಲ್ಲಿ ರಾರಿಗಳ ಅಪಘಾತಗಳು ದಿನೇ ದಿನೇ ಹೆಚ್ಚುತ್ತಿವೆ ಎನ್ನುವುದು ಪೇಪರುಗಳನ್ನು ನೋಡಿದರೆ ನಮಗೆಲ್ಲರಿಗೂ ಗೊತ್ತಾಗುತ್ತದೆ. ಇದಕ್ಕೆ ಮುಖ್ಯ ಕಾರಣ ಬ್ರೇಕ್ ಇನ್ಸ್‌ಪೆಕ್ಟರುಗಳು ವೆಹಿಕಲ್‌ಗಳನ್ನು ಸರಿಯಾಗಿ ಇನ್ಸ್‌ಪೆಕ್ಟ್ ಮಾಡುತ್ತಿಲ್ಲ. ಇದರ ಕಡೆಗೆ ಸರಕಾರ ತೀವ್ರವಾದ ಗಮನ ಕೊಡ ಬೇಕಾಗಿದೆ.

ಮೂರನೇದು, ಬೆಂಗಳೂರು ನಗರವಲ್ಲ ಹಿಂದೆ ಐದು ಲಕ್ಷ ಜನಸಂಖ್ಯೆ ಇತ್ತು. ಇಂದು ನಗರ ಬಹಳ ದೊಡ್ಡದಾಗಿ ಬೆಳೆಯುತ್ತಾ ಬರುತ್ತಿದೆ. ಇದರಿಂದಾಗಿ ಜನಸಂಖ್ಯೆ ಕೂಡ ನ.ಮಾರು 17–18 ಲಕ್ಷದವರೆಗೆ ಏರುತ್ತಿದೆ. ಇದಕ್ಕೆ ತಕ್ಕಂತೆ ಎಲ್ಲ ಕಡೆಗಳಲ್ಲಿಯೂ ಆಸ್ಪತ್ರೆಗಳನ್ನು ಹೆಚ್ಚು ಮಾಡಬೇಕು ಮತ್ತು ಜನಗಳಿಗೆ ಹೆಚ್ಚು ಅನುಕೂಲಗಳನ್ನು ಮಾಡಿಕೊಡಬೇಕು. ಇವೊತ್ತಿನ ದಿವಸ ಇದರ ಲೆಕ್ಕ ತೆಗೆದುಕೊಂಡರೆ ಬೆಂಗಳೂರಿನಲ್ಲಿ ಇಲ್ಲಿನ ಜನಕ್ಕಿಂತ ಹೊರಗಿನಿಂದ ಬಂದ ಜನರೇ

ಹೆಚ್ಚಾಗಿರುತ್ತಾರೆ. ಆಸ್ಪತ್ರೆಗಳಲ್ಲಿ ಹೋಗಿ ನೋಡಿದರೆ ರೋಗಿಗಳಿಗೆ ಮಂಡಗಳಿಲ್ಲದೆ ವರಾಂಡದಲ್ಲಿ ನೆಲದ ಮೇಲೆ ಹಾಸಿಗೆಗಳನ್ನು ಹಾಕಿರುವುದು ಕಾಣುತ್ತದೆ. ಇದಕ್ಕೆ ಕಾರಣ ಆಸ್ಪತ್ರೆಗಳಲ್ಲಿ ಸ್ಥಳದ ಅಭಾವವಿರುವುದರಿಂದ ಎನ್ನುವುದು ಎಲ್ಲರಿಗೂ ಗೊತ್ತಾಗುತ್ತದೆ. ಇದನ್ನು ನಿರಪಡಿಸುವುದರ ಕಡೆಗೆ ಸರಕಾರದವರು ಗಮನ ಕೊಡಬೇಕಾದುದು ಅಗತ್ಯ. ಇದರಲ್ಲಿ ಬೆಂಗಳೂರಿನವರಿಗೆ ಅನುಕೂಲ ಮಾಡಬೇಕೆಂದು ಹೇಳುತ್ತಿಲ್ಲ. ಎಲ್ಲರಿಗೂ ಅನುಕೂಲ ಮಾಡಿಕೊಡುವುದು ಅವಶ್ಯಕ. ಇವೊತ್ತು ನಾವು ಬೌರಿಂಗ್ ಆಸ್ಪತ್ರೆಯಲ್ಲಿ ನೋಡಿದರೆ ಅಲ್ಲರುವವರೆಲ್ಲ ಎಂ. ಎಲ್. ಎ. ಮತ್ತು ಆಫೀಸರುಗಳನ್ನು ನೋಡುತ್ತಾರೆ. ಬಡವರನ್ನು ನೋಡುವುದಿಲ್ಲ. ಸಾಧಾರಣ ಜನರು ಬಂದು ಆಸ್ಪತ್ರೆಗೆ ಅರ್ಜೆಂಟಾಗಿ ಸೇರಬೇಕು ಎಂದರೆ ಅವರಿಗೆ ಸರಿಯಾದ ಪ್ರಭಾವ ಇಲ್ಲದೇ ಹೋದರೆ ಅವರಿಗೆ ಸೇರಲು ಅವಕಾಶವೇ ಸಿಗುವುದಿಲ್ಲ. ಇವೊತ್ತು ಹಣವಂತರಾಗಿರುವವರು ಹೇಗಾದರೂ ದುಡ್ಡು ಕೊಟ್ಟು ಕೊಂಡು ಅವರು ಆಸ್ಪತ್ರೆಗಳಿಗೆ ಸೇರುತ್ತಾರೆ. ಬಡ ಜನರಿಗೆ ನ್ಯಾಯವಾಗಿ ಸಿಗಬೇಕಾದ ಸೌಲಭ್ಯಗಳು ಇಂದು ಆಸ್ಪತ್ರೆಗಳಲ್ಲಿ ಸಿಗುತ್ತಿಲ್ಲ. ಅಲ್ಲದೆ ಈಗ ಇರುವ ಆಸ್ಪತ್ರೆಗಳು ಇಲ್ಲಿರುವ ಜನಸಂಖ್ಯೆಗೆ ಅನುಗುಣವಾಗಿಲ್ಲ. ನಗರ ದಿನೇ ದಿನೇ ದೊಡ್ಡದಾಗುತ್ತಾ ಬರುತ್ತಿದೆ. ಇದಕ್ಕಾಗಿ ರಾಜಾಜಿನಗರ, ಜಯನಗರ, ಶಾಂತಿನಗರ ಇತ್ಯಾದಿ ದೊಡ್ಡ ದೊಡ್ಡ ಬಡಾವಣೆಗಳಿರುವ ಕಡೆಗಳಲ್ಲಿ ಒಂದೊಂದು ಜನರಲ್ ಆಸ್ಪತ್ರೆಗಳನ್ನು ಸರಕಾರ ಮಾಡಲು ಏರ್ಪಾಡು ಮಾಡಬೇಕು. ನಾನು ಇದೇ ವಿಚಾರವಾಗಿ ಸಾಧಾರಣವಾಗಿ ಮಾನ್ಯ ಆರೋಗ್ಯ ಮಂತ್ರಿಗಳವರ ಗಮನಕ್ಕೂ ತರುತ್ತಿದ್ದೇನೆ ಮತ್ತು ಒಂದು ಕಾಗದ ಕೂಡ ಮಂತ್ರಿಗಳಿಗೆ ಬರೆದು ಸುಮಾರು ಒಂಬತ್ತು ತಿಂಗಳಾದರೂ ಇದುವರೆಗೆ ಆ ಕಾಗದಕ್ಕೆ ಯಾವ ಜವಾಬೂ ನನಗೆ ಬರಲಿಲ್ಲ. ಮತ್ತು ಒಂದು ಸಾರಿ ಒಬ್ಬ ಪೇಷಂಟನ್ನು ಬೌರಿಂಗ್ ಆಸ್ಪತ್ರೆಗೆ ಸೇರಿಸಬೇಕು ಎಂದು ಒಂದು ಸಾರಿ ನಾನೇ ಕರೆದುಕೊಂಡು ಹೋಗಿದ್ದೆ. ಅಲ್ಲಿ ಅವರನ್ನು ಅಡ್ಮಿಟ್ ಮಾಡಲು ಸುಮಾರು ಒಂದೂವರೆ ಗಂಟೆಗಳ ಕಾಲ ಕಾಯಬೇಕಾಗಿ ಬಂತು. ನನ್ನಂತಹವನೇ ಹೀಗೆ ಕಾಯಬೇಕಾದರೆ ಇನ್ನು ಸಾಮಾನ್ಯ ನಾಗರೀಕನ ಪಾಡೇನು? ಇದರ ಬಗ್ಗೆ ನಾನು ಕಾಗದ ಬರೆದು ಮಾನ್ಯ ಚೀಫ್ ಮಿನಿಸ್ಟರ್‌ರವರಿಗೆ ಹಾಗೂ ಹೆಲ್ತ್ ಮಿನಿಸ್ಟರಿಗೆ ಸುಮಾರು ಎಂಟು ತಿಂಗಳಾದರೂ ನನಗೆ ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡು ಬಂದಿದ್ದಾರೆ ಎನ್ನುವುದಕ್ಕೆ ಯಾವ ವಿಚಾರಗಳನ್ನೂ ತಿಳಿಸಲಿಲ್ಲ. ಇದೂ ಅಲ್ಲದೆ ಬೌರಿಂಗ್ ಆಸ್ಪತ್ರೆಯಲ್ಲಿ ರಾತ್ರಿ ವೇಳೆ ರೋಗಿಗಳಿಗೆ ಕುಡಿಯಲು ನೀರೇ ಸಿಗುತ್ತಿಲ್ಲ. ನಾನು ರಾತ್ರಿ ಹೋಗಿದ್ದಾಗ ಒಂದು ಸಲ ನೀರು ಸಿಗದೇ ಬಹಳ ಕಷ್ಟ ಪಡಬೇಕಾಯಿತು. ಇದರ ಬಗ್ಗೆ ಆಗಲೇ ನಾನು ಹೆಲ್ತ್ ಮಿನಿಸ್ಟರಿಗೆ ಪೋನಿನ ಮೂಲಕ ತಿಳಿಸಿದ್ದೆ ಮತ್ತು ಇಲ್ಲರುವ ಎಲ್ಲ ಅಧಿಕಾರಿಗಳ ಗಮನಕ್ಕೂ ಇದರ ವಿಚಾರವಾಗಿ ಹೇಳಿದ್ದೆ. ಇದರ ಬಗ್ಗೆ ಪರಿಶೀಲನೆ ಮಾಡಿ ಏನು ಕಾರ್ಯಕ್ರಮ ತೆಗೆದುಕೊಂಡರು ಎನ್ನುವುದಕ್ಕೆ ತಿಳಿಸಬೇಕೆಂದು ನಾನು ಪತ್ರ ಬರೆದು ಕೇಳಿದ್ದರೂ ಇದುವರೆಗೂ ನನಗೆ ಇನ್ನೂ ತಿಳಿಸಲಿಲ್ಲ. ಇಂತಹ ಮುಖ್ಯವಾದ ವಿಚಾರದಲ್ಲೂ ಕೂಡ ಸರಕಾರ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳದೇ ಇರುವುದು ನೋಡಿದರೆ ನಿಜವಾಗಿಯೂ ಬಹಳ ವ್ಯಥೆಯಾಗುತ್ತದೆ. ನಾನು ಕಾರ್ಪೊರೇಷನ್ ಸದಸ್ಯನಾಗಿ ನಗರದ ಪ್ರತಿನಿಧಿಯಾಗಿ ಇಲ್ಲಿ ಬಂದು ಸರಕಾರಕ್ಕೆ ನಮ್ಮ ಮನವಿಗಳನ್ನು ಸಲ್ಲಿಸಿದರೂ ಇದರ ಬಗ್ಗೆ ಸರಕಾರ ಸರಿಯಾದ ಕೆಲಸಗಳನ್ನು ಮಾಡುತ್ತಿಲ್ಲ. ಅಲ್ಲದೆ ನಮ್ಮ ಬೆಂಗಳೂರು ನಗರದಲ್ಲಿ ಹಿಂದೆ ನಾವು ಸದಸ್ಯರಾಗಿದ್ದಾಗ ಮೂರು ಮೂರು ಡಿವಿಜನ್‌ಗಳಿಗೆ ಒಂದೊಂದು ಹೆರಿಗೆ ಆಸ್ಪತ್ರೆ ಕಟ್ಟಿದೆ ಎಂದು ಏನು ಮಾಡಲಾಗಿತ್ತೋ ಇಂದು ಅದೇ ರೀತಿ ಲೋಕರ್ ಫಂಡ್ ಆಸ್ಪತ್ರೆಗಳು ಇವೆಯೋ ಹೊರತು ಇದರ ಸಂಖ್ಯೆಗಳನ್ನು ಜಾಸ್ತಿ ಮಾಡುತ್ತಿಲ್ಲ. ಹೆಚ್ಚು ಆಸ್ಪತ್ರೆಗಳು ಬೇಕು ಎಂದು ಕೇಳಿದರೆ ಸರಕಾರ ದುಡ್ಡಿಲ್ಲ ಎನ್ನುತ್ತಾರೆ. ಆದರೆ ದುಡ್ಡು ಕೊಡುತ್ತೇವೆ. ಇಲ್ಲಿಗೆ ಆಸ್ಪತ್ರೆ ಮಂಜೂರು ಮಾಡಿಸಿಕೊಡಿ ಎಂದು ಕೇಳಿದರೂ ಸರಕಾರದವರು ಇದರ ಕಡೆಗೆ ಗಮನ ಕೊಡುತ್ತಿಲ್ಲ. ಇಂದು ಮೈಕ್ರೋ ಫ್ಯಾಕ್ಟರಿ ಇಂದು ಆಡುಗೋಡಿಯಲ್ಲಿದೆ. ಇಲ್ಲಿ ಇದೇ ಕಂಪನಿಯವರು ಸುಮಾರು 38 ಸಾವಿರ ರೂಪಾಯಿಗಳ ವೆಚ್ಚದಲ್ಲಿ ಒಂದು ಆಸ್ಪತ್ರೆ ಕಟ್ಟಿಸುತ್ತೇವೆ ಎಂದು ಇದರ ಪ್ಲಾನ್ ಎಸ್ಟಿಮೇಟುಗಳನ್ನು ಕೊಟ್ಟು ಕಾರ್ಪೊರೇಷನ್‌ಗೆ ಅಜಿ- ಹಾಕಿದ್ದರೂ ಇದುವರೆಗೂ ಇದು ಸರಕಾರದ ಗಮನಕ್ಕೆ ಬಂದಿಲ್ಲ ಎಂದು ಕೇಳುತ್ತೇವೆ. ಈಚೇಗೇನೋ ಕಾರ್ಪೊರೇಷನ್‌ರವರು ಸರಕಾರದವರ ಕಡೆಗೆ ಕಳುಹಿಸುತ್ತಾರೆಂದು ಕೇಳಿದೆ. ಇದರ ಪ್ಲಾನು ಮತ್ತು ಅಂದಾಜುಗಳೆಲ್ಲಾ ಸಿದ್ಧವಾಗಿವೆ. ಇದನ್ನು ನಾನು ಹೆಲ್ತ್ ಮಿನಿಸ್ಟರ ಗಮನಕ್ಕೂ ತಂದಿದ್ದೇನೆ. ಇಂತಹ ಒಂದು ಆಸ್ಪತ್ರೆ ಆದರೆ ಇಲ್ಲರುವ ಆಡುಗೋಡಿ, ನೀಲಸಂದ್ರ, ಬನ್ನಮಂಗಲ ಇತ್ಯಾದಿ ಪ್ರದೇಶಗಳಲ್ಲಿನ ಜನರಿಗೆ ಬಹಳ ಅನುಕೂಲವಾಗುತ್ತದೆ. ಇದರ ಬಗ್ಗೆ ಸರಕಾರಕ್ಕೆ ಎಷ್ಟು ಒತ್ತಾಯ ಮಾಡುತ್ತಿದ್ದರೂ ಇನ್ನೂ ಸರಕಾರ ಯಾವ ಕಾರ್ಯಕ್ರಮವನ್ನೂ ತೆಗೆದುಕೊಂಡಿಲ್ಲ. ಇದನ್ನು ನೋಡಿದರೆ ಸರಕಾರದ ಉದ್ದೇಶವೇನ ಎನ್ನುವುದು ನಮಗೆ ಗೊತ್ತಾಗುತ್ತಿಲ್ಲ. ಇದರ ಬಗ್ಗೆ ಸರಕಾರ ತೀವ್ರವಾಗಿ ಗಮನ ಕೊಡಬೇಕೆಂದು ಒತ್ತಾಯ ಮಾಡುತ್ತೇನೆ. ಇದರ ಬಗ್ಗೆ ಹೆಲ್ತ್ ಡೆಪ್ಯುಟಿ ಮಿನಿಸ್ಟರಿಗೂ ತಿಳಿಸಿದ್ದೇನೆ.

(ಶ್ರೀ ಎ. ನಂಜಪ್ಪ)

ಇನ್ನು ನಮ್ಮ ಕಂಟೋನ್‌ಮೆಂಟು ಏರಿಯಾದಲ್ಲಿ ಒಂದು ಕಾಲೇಜು ಕೂಡ ಇಲ್ಲ. ನಾನು ಮತ್ತು ಮಾನ್ಯ ಸದಸ್ಯರಾದ ಶ್ರೀ ಅಮರೋರಪವರವರೂ ಕೂಡ ಜನಸಂಖ್ಯೆ ಇಲ್ಲಿ ಹೆಚ್ಚಾಗಿದೆ, ಇಲ್ಲಿಗೆ ಸರಕಾರದವರು ಒಂದು ಕಾಲೇಜು ಮಾಡಬೇಕೆಂದು ಹೇಳುತ್ತಲೇ ಇದ್ದರೂ ಇನ್ನೂ ಇದರ ಕಡೆಗೆ ಗಮನ ಕೊಡಲಿಲ್ಲ. ಸರಕಾರ ಇದಕ್ಕೆ ವೆಚ್ಚ ಮಾಡಕೂಡದು ಎಂದು ಇದ್ದರೆ ಇಲ್ಲಿ ಯ್ಯಾರಾರು ದೊಡ್ಡ ಮನುಷ್ಯರು ಹಾಗೂ ಹಣ ಇರುವವರೂ ಇದ್ದಾರೋ ಅವರಲ್ಲಿ ಹೋಗಿ ಹೇಳಬಹುದು. ಅವರ ಮಕ್ಕಳ ವಿದ್ಯಾಭ್ಯಾಸಕ್ಕೆ ಹಾಗೂ ಇಲ್ಲಿನ ಜನರ ಮಕ್ಕಳ ಎಲ್ಲರ ವಿದ್ಯಾಭ್ಯಾಸಕ್ಕೆ ಅನುಕೂಲವಾಗುವಂತೆ ಸುಮಾರು 50–60 ಸಾವಿರ ರೂಪಾಯಿಗಳಷ್ಟು ಡೊನೇಷನ್ ಕೊಡಿ ನಿಮ್ಮ ಹೆಸರಿನಲ್ಲೇ ಶಾಲೆಯನ್ನು ಕಟ್ಟಿಸಬಹುದು ಎಂದು ಹೇಳಿದರೆ ಉದಾರವಾಗಿರುವ ಕೆಲವರು ದುಡ್ಡು ಕೊಡುತ್ತಾರೆ. ಇದರ ಕಡೆಗೆ ಸರಕಾರ ಯಾವ ಪ್ರಯತ್ನವನ್ನೂ ಮಾಡುತ್ತಿಲ್ಲ. ಇದರಿಂದ ಸರಕಾರಕ್ಕೆ ಆಗುವ ಹಣದ ಉಳಿತಾಯವಾಗುತ್ತದೆ. ಇದೇ ರೀತಿ ಹೆಲ್ತ್ ಮಿನಿಸ್ಟರೂ ಕೂಡ ಹಣವಂತರನ್ನು ದುಡ್ಡು ಕೇಳಿ ಅವರ ಹೆಸರಿನಲ್ಲಿ ಒಂದೊಂದು ವಾರ್ಡು ಮಾಡುತ್ತೇವೆ ಎಂದು ಇದರಿಂದ ಜನಕ್ಕೆ ಅನುಕೂಲವಾಗುತ್ತದೆ ಎಂದು ಹೇಳಿದರೆ ಅಂತಹವರಿಂದಲೂ ದುಡ್ಡು ಸಿಗಬಹುದು.

7-00 P.M.

ಮೂರನೆಯದಾಗಿ ಬೆಂಗಳೂರು ಕಾರ್ಪೊರೇಷನ್ ವಿಚಾರವಾಗಿ ಹೇಳುತ್ತೇನೆ. ಈ ಬಗ್ಗೆ ಅನೇಕ ಸಲ ಈ ಹೌಸ್‌ಗೂ ತಿಳಿಸಿದ್ದೇನೆ. ಅಲ್ಲಿಯ ಅಧಿಕಾರಿಗಳನ್ನು ಬದಲಾಯಿಸಿ ಒಳ್ಳೆಯ ಅಧಿಕಾರಿಗಳನ್ನು ಹಾಕಿ ಎಂದು ಮಂತ್ರಿಗಳಿಗೂ ಹೇಳಿದ್ದೇನೆ. ಸೈಕಲ್ ಟ್ಯಾಕ್ಸ್ ಏನು ಇದೆಯೋ ಅದನ್ನು ತೆಗೆದಿದ್ದಾರೆ. ಕುಡಿಯುವ ನೀರಿಗೆ ಫ್ರೀ ಅರೋಯನ್ಸ್ ಏನು ಮಾಡಬೇಕೋ ಅದನ್ನು 25 ಸಾವಿರ ಲೀಟರ್‌ವರೆಗೂ ಮುಫತ್ತಾಗಿ ಕೊಡಬೇಕೆಂದು ಮಾಡಿದ್ದಾರೆ. ಅದರೆ ಸರ್ಕಾರದವರು ಯಾವ ತೆರಿಗೆಯನ್ನೂ ಕೂಡ ಹಾಕಬೇ ಇದ್ದ ಸಂದರ್ಭದಲ್ಲಿ ಕಾರ್ಪೊರೇಷನ್ನಿನವರು ಹೊಸ ತೆರಿಗೆಯನ್ನು ಹಾಕುತ್ತಾರೆ ಎಂದರೆ ವ್ಯಸನವಾಗುತ್ತದೆ. ಆದುದರಿಂದ ಕಾರ್ಪೊರೇಷನ್ನಿನವರು ಜನಗಳಿಗೆ ಯಾವ ಟ್ಯಾಕ್ಸನ್ನೂ ಹಾಕಬಾರದು. ಜನಗಳ ಪ್ರತಿನಿಧಿಗಳಾಗಿ ಕಾರ್ಪೊರೇಷನ್ನಿಗೆ ಚುನಾಯಿತರಾಗಿ ಬಂದರೆ ಆವಾಗ ಬೇಕಾದರೆ ಹಾಕಿಕೊಳ್ಳಿ. ಈಗ ಕಾರ್ಪೊರೇಷನ್ನಿನವರು ಯಾವ ರೀತಿಯ ಟ್ಯಾಕ್ಸನ್ನೂ ಹಾಕಬಾರದು ಎಂದು ಕೇಳಿಕೊಳ್ಳುತ್ತೇನೆ.

ಮಾನ್ಯ ಅಧ್ಯಕ್ಷರೇ, ಇನ್ನು ಕಾರ್ಪೊರೇಷನ್ನಿನವರು ಓ.ಡಿ.ಪಿ. ಮಾಡಿಕೊಂಡು ಜನರಿಗೆ ತೊಂದರೆ ಕೊಡುತ್ತಿದ್ದಾರೆ. ಮಾತನಾಡಿದರೆ ಓ.ಡಿ.ಪಿ. ಎನ್ನುತ್ತಾರೆ. ಷಾಪ್ ಏರಿಯಾದಲ್ಲಿ ಲೈಸನ್ಸ್ ಕೊಡುವುದಕ್ಕೆ ಪರ್ಮಿಷನ್ ಇದ್ದರೂ ಕೊಡುವುದಿಲ್ಲ. ಪ್ಲಾನ್ ಸಬ್‌ಮಿಟ್ ಮಾಡಿದರೆ ರಿಜೆಕ್ಟ್ ಮಾಡುತ್ತಾರೆ. ಆದುದರಿಂದ ಸರ್ಕಾರದವರನ್ನು ಪ್ರಾರ್ಥನೆಮಾಡಿಕೊಳ್ಳುತ್ತೇನೆ. ಓಲ್ಡ್ ಮದ್ರಾಸ್ ರೋಡ್‌ನಲ್ಲಿ ಷಾಪ್ ಕಟ್ಟಬೇಕೆಂದು ಪ್ಲಾನ್ ಸಬ್‌ಮಿಟ್ ಮಾಡಿದರೆ ಪ್ಲಾನ್ ಸ್ಯಾಂಕ್ಷನ್ ಮಾಡುವುದಿಲ್ಲ. ಅವನ್ನು ಯಾವ ಕಾನೂನು ಪ್ರಕಾರ ಮಾಡುತ್ತಾರೋ ಗೊತ್ತಿಲ್ಲ. ಆದನ್ನು ಪ್ಲಾನ್ ಕೊಟ್ಟ 10 ತಿಂಗಳು ಆದಮೇಲೆ ರಿಜೆಕ್ಟ್ ಮಾಡಿದ್ದಾರೆ. ಜನಗಳಿಗೆ ಬಹಳ ತೊಂದರೆ ಕೊಡುತ್ತಿದ್ದಾರೆ. ಜನಗಳಿಂದ ಆರಿಸಿ ಬಂದವರು ಈ ರೀತಿ ಯಾವ ಮೋಸವನ್ನೂ ಮಾಡುವುದಿಲ್ಲ. ಒಬ್ಬ ಇಂಜನೀಯರ್ ಪ್ಲಾನ್ ಸ್ಯಾಂಕ್ಷನ್ ಮಾಡಿದ್ದನ್ನು ಪುನಃ ರಿನ್ಯೂಯರ್‌ಗೆ ಹಾಕಿ ರಿಜೆಕ್ಟ್ ಮಾಡಿದ್ದಾರೆ. ಸರ್ಕಾರದವರು ಅವರಿಗೆ ಸರಿಯಾದ ಇನ್‌ಸ್ಟ್ರಕ್ಷನ್ ಕೊಡಬೇಕು.

ಉಪಾಧ್ಯಕ್ಷರು.—ಈ ವಿಚಾರವನ್ನು ಮುನಿಸಿಪಲ್ ಅಡ್ಮಿನಿಸ್ಟ್ರೇಷನ್ ಡಿಮ್ಯಾಂಡ್ ಬಂದಾಗ ಮಾತನಾಡಬಹುದು.

ಶ್ರೀ ಪಾಟಾಳ್ ನಾಗರಾಜ್.—ಅವರ ಮಾತನ್ನು ಇಲ್ಲಿ ಯಾರೂ ಕೇಳುವವರು ಇಲ್ಲ. ಮುಖ್ಯಮಂತ್ರಿಗಳೂ ಇಲ್ಲ. ಮಂತ್ರಿಗಳೂ ಇಲ್ಲ.

ಶ್ರೀ ಎ. ನಂಜಪ್ಪ.—ಇನ್ನು ಮುಖ್ಯ ಮಂತ್ರಿಗಳು ಸೈಕಲ್ ಟ್ಯಾಕ್ಸ್ ತೆಗೆದರು, ವಾಟರ್ ಅರೋಯನ್ಸ್ ಕೊಟ್ಟರು. ಅವರು ಹಾಗೆ ಇವರು ಹೀಗೆ ಎಂದು ಭಾಷಣಮಾಡುವುದಕ್ಕೆ ಈ ಫ್ಲಾಟ್ ಫಾರಂನಲ್ಲಿ ಬರಲಿಲ್ಲ. ಜನಗಳಿಗೆ ಇನ್ನು ಹೆಚ್ಚು ಉಪಕಾರ ಮಾಡಲು ಕಾಂಗ್ರೆಸ್ ಸರಕಾರ

ತಯಾರಾಗಿದ್ದಾರೆ. ಮತ್ತು ಈಗ ಇರತಕ್ಕಂಥ ಅರಿಯರ್ಸ್‌ನ್ನು ಕಡಿಮೆ ಮಾಡಬೇಕೆಂದು ಕೇಳಿ ಕೊಳ್ಳುತ್ತೇನೆ. ಇದರ ವಿಚಾರವಾಗಿ ಎರಡು ವರ್ಷದಿಂದಲೂ ಹೇಳುತ್ತಿದ್ದೇನೆ. ಇದು ಅನ್ಯಾಯ. ಕಾನೂನು ಯಾವ ರೀತಿ ಇದೆಯೋ ಹಾಗೆ ಮಾಡಲಿ. ಅದು ಬಿಟ್ಟು ಯಾವುದಕ್ಕೆ ಲೈಸನನ್ಸ್ ಹಾಕಿದರೂ ಕೂಡ ಓ.ಡಿ.ಪಿ. ಎನ್ನುತ್ತಾರೆ. ಈ ರೀತಿ ಪ್ಲಾನ್ ರಿನ್ಯೂ ಮಾಡದೇ ಹೋದರೆ ಏನು ಪ್ರಯೋಜನ ? ಆದುದರಿಂದ ಆ ಅಧಿಕಾರಿಗಳನ್ನು ಕರೆಸಿ ಹೇಳಬೇಕು ಎಂದು ಇನ್ನೊಂದು ಸಾರಿ ಹೇಳುತ್ತೇನೆ.

ಇನ್ನು ಬೆಂಗಳೂರು ಫುಟ್‌ಬಾಲ್ ಅಸೋಷಿಯೇಷನ್‌ಗೆ ಎಜುಕೇಷನ್ ಡಿಪಾರ್ಟ್‌ಮೆಂಟ ನವರು 26 ಸಾವಿರ ರೂಪಾಯಿ ಕೊಟ್ಟಿದ್ದಾರೆ. ಫುಟ್‌ಬಾಲ್ ಮ್ಯಾಚನ್ನು ಪ್ರತಿಯೊಬ್ಬ ವಿದ್ಯಾರ್ಥಿಯೂ ನೋಡಬೇಕು. ಆದರೆ ಮ್ಯಾಚ್ ಆಗುವಾಗ ಗ್ಯಾಲರಿಗೆ ಒಂದೂವರೆ ರೂಪಾಯಿ ಟಿಕೆಟ್ ಹಾಕಿ ಇಟ್ಟಿದ್ದಾರೆ. ಅಲ್ಲಿ ಬಹಳ ಬಿಸಿಲು ಇದೆ. ಹೆಲ್ಟರ್ ಇಲ್ಲ ಹುಡುಗರು ಅನ್ಯಾಯವಾಗಿ ಬಿಸಿಲಿನಲ್ಲೇ ನಿಂತು ಒಣಗುತ್ತಾರೆ. ಮೊನ್ನೆ ಇದೇ ಕ್ವಾರ್ಟರ್ ಫೈನಲ್ ಮ್ಯಾಚ್ ಆದಾಗ ಇದನ್ನು ನೋಡಿದೆ. ಹುಡುಗರು ಇಷ್ಟು ಕಷ್ಟದಿಂದ ನೋಡುವುದಾದರೆ ಈ ಅಸೋಷಿಯೇಷನ್‌ಗೆ ಸರ್ಕಾರದವರು ಏತಕ್ಕೆ ದುಡ್ಡು ಕೊಡಬೇಕು. ಇದಲ್ಲದೆ ಸೋಲೀಸ್ ಬಂದೋಬಸ್ತನ್ನು ಫ್ರೀ ಆಗಿ ಕೊಡುತ್ತಿದ್ದೇವೆ.

ಇನ್ನು ಫುಟ್‌ಬಾಲ್ ಸ್ಟೇಡಿಯಂನಲ್ಲಿ ಫೈನಲ್ ಮ್ಯಾಚ್ ಬಂದರೆ ಅದೇ ಸೀಟಿಗೆ 2 ರೂಪಾಯಿ 3 ರೂಪಾಯಿ ಹಾಕುತ್ತಾರೆ. ಈ ತರಹ ಮಾಡಿದರೆ ಸಂಬಂಧಪಟ್ಟ ಮಂತ್ರಿಗಳು ಗ್ಯಾರಂಟ್ ಕೊಡುವುದಿಲ್ಲ ಎಂದು ಹೇಳಬೇಕು. ಆದುದರಿಂದ ಟಿಕೆಟ್ ದರವನ್ನು ನಾಳೆಯಿಂದಲೇ ಕಡಿಮೆ ಮಾಡಿಸಬೇಕು ಎಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಇನ್ನು ಫುಟ್‌ಬಾಲ್ ಅಸೋಷಿಯೇಷನ್‌ನಲ್ಲಿ ಪಾಲಿಟಿಕ್ಸ್ ಬಹಳವಾಗಿದೆ. ಅದರ ವಿಚಾರ ಹೇಳುವುದು ಬಹಳ ಇದೆ.

ಉಪಾಧ್ಯಕ್ಷರು.—ಮಾನ್ಯ ಸದಸ್ಯರಿಗೆ ಕೊಟ್ಟಿದ್ದ ವೇಳೆ ಮುಗಿಯಿತು. ಆದ್ದರಿಂದ ಅವರ ಭಾಷಣ ಮುಗಿಸಬೇಕು.

ಶ್ರೀ ಎ. ನಂಜಪ್ಪ.—ಇವರಿಗೆ ಪೋಲೀಸ್ ಬಂದೋಬಸ್ತು ಎಲ್ಲ ಅನುಕೂಲಗಳನ್ನು ಕೊಟ್ಟು ಸರ್ಕಾರ ಹೇಳಿದಹಾಗೆ ಕೇಳದೇ ಹೋದರೆ ಅವರಿಗೆ ಗ್ಯಾರಂಟ್ ಕೊಡಬಾರದು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎನ್. ಲೋಕಯ್ಯನಾಯಕ್.—ಅಧ್ಯಕ್ಷರೇ, ನನಗೆ ಒಂದು ಲಗ್ನಪತ್ರಿಕೆ ಆಮಂತ್ರಣ 27ನೇ ತಾರೀಕು ಬಂದಿದೆ. ಅದು ಕರ್ನಾಟಕ ಯುವಕ ಸಂಘದ ಅಧ್ಯಕ್ಷರಿಂದ. ಶ್ರೀಮಾನ್ ಎಸ್. ಎಂ. ಬನವಯ್ಯ, ಬಿ.ಎ., ಬಿ.ಎಲ್. ಅವರು ಸುಖಾಗಮನವನ್ನು ಬಯಸುವರು. ಅದರಲ್ಲಿ ಶ್ರೀಮಾನ್ ಕೊಠಾವಳಿ, ವಿಧಾನಸಭಾಧ್ಯಕ್ಷರು, ರಾಜ್ಯದ ಮುಖ್ಯಮಂತ್ರಿಗಳು ಮತ್ತು ಅನೇಕ ಮಾನ್ಯ ಮಂತ್ರಿಗಳು, ಉಪಮಂತ್ರಿಗಳು ಮತ್ತು ಲೆಫ್ಟಿನೆಂಟ್ ಗೌರ್ನರ್ ಶ್ರೀ ಬಿ. ಡಿ. ಜತ್ತಿಯವರು ಮತ್ತು ನಮ್ಮ ಸರ್ಕಾರದ ಅನೇಕ ದೊಡ್ಡ ಹುದ್ದೆಯಲ್ಲಿರತಕ್ಕ ಅಧಿಕಾರಿಗಳ ಹೆಸರನ್ನು ಅದರಲ್ಲಿ ಪ್ರಿಂಟ್ ಮಾಡಿಸಿದ್ದಾರೆ. ಈ ರೀತಿ ಸಾಧಾರಣವಾದ ಮದುವೆ ಸಮಾರಂಭಕ್ಕೆ ಇಂತಹ ದೊಡ್ಡ ಹುದ್ದೆಯಲ್ಲಿರತಕ್ಕಂಥ ಜನರನ್ನು ಅಚ್ಚು ಹಾಕಿಸುವುದಕ್ಕೆ ಅನುಮತಿ ಕೊಟ್ಟಿದ್ದೀರಾ ಮತ್ತು ಅಚ್ಚು ಹಾಕಿಸುವ ಔಚಿತ್ಯವೇನು ? ಇದರಿಂದ ದೊಡ್ಡವರ ಹೆಸರನ್ನು ದುರುಪಯೋಗಪಡಿಸಿಕೊಳ್ಳುವ ಸಂದರ್ಭ ಇದೆ. ಅವರು ಅನುಮತಿ ಕೊಟ್ಟಿಲ್ಲವೆಂದರೆ ಈ ವಿಚಾರದಲ್ಲಿ ತಮ್ಮ ಪ್ರತಿಕ್ರಿಯೆ ಏನು ಎಂದು ತಿಳಿಸಬೇಕು. ಈ ಬಗ್ಗೆ ತಾವು ರೂಲಿಂಗ್ ಕೊಡಬೇಕು ಎಂದು ನಾನು ತಮ್ಮನ್ನು ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷರು.—ಇದರಲ್ಲಿ ಸರ್ಕಾರದವರ ಜವಾಬ್ದಾರಿ ಏನೂ ಇಲ್ಲ.

ಶ್ರೀ ಕೆ. ಪುಟ್ಟಸ್ವಾಮಿ.—ಸ್ವಾಮಿ, ಇದು ತೀರ ಹೊಸದಾಗಿ ಕಾಣುತ್ತದೆ. ಯಾವ ಕಾಲದಲ್ಲಿಯೂ ಒಂದು ಸಂಸಾರಕ್ಕೆ ಸಂಬಂಧಪಟ್ಟ ವ್ಯವಹಾರ, ಸಮಾರಂಭ ಆದರೆ ಈ ಸಭೆಯಲ್ಲಿ ಪ್ರಸ್ತಾಪ ಮಾಡುವಂಥದ್ದು ಯಾವತ್ತೂ ನಾನು ಕೇಳಿರಲಿಲ್ಲ. ಈಗ ಶ್ರೀಮಾನ್ ಮಾದೇವಯ್ಯನವರು ಕಳುಹಿಸಿರುವ ಮದುವೆ ಆಹ್ವಾನ ಪತ್ರಿಕೆಯ ವಿಚಾರವನ್ನು ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. ಇದನ್ನು ಯಾವ ಕಾನ್‌ಸ್ಟಿಟ್ಯೂಷನ್ ಮೂಲಕ, ಅಥವಾ ರೂಲ್ ಮೂಲಕ ಅಥವಾ ಸಂಪ್ರದಾಯದ ಮೂಲಕ

(ಶ್ರೀ ಕೆ. ಪುಟ್ಟಸ್ವಾಮಿ)

ಪ್ರಸ್ತಾಪ ಮಾಡಿದ್ದಾರೆನ್ನುವದು ನನಗೆ ಅರ್ಥವಾಗಿಲ್ಲ. ಇದು ಸರ್ಕಾರದ ವ್ಯವಹಾರಕ್ಕೆ ಸಂಬಂಧಪಟ್ಟ ವಿಷಯವಲ್ಲ ಎಂದು ತಾವು ಆಗಲೇ ಹೇಳಿದಿರಿ. ಅದು ಕೇವಲ ಸಾಮಾಜಿಕ ವ್ಯವಹಾರ. ಸಾಮಾಜಿಕ ವ್ಯವಹಾರಕ್ಕೆ ಅವರಿಗೆ ಬೇಕಾದವರೆಲ್ಲರಿಗೂ ಸುಖಾಗಮನವನ್ನು ಬಯಸುತ್ತಾರೆಂದು ಹಾಕಿಕೊಳ್ಳುತ್ತಾರೆ. ಇಲ್ಲಿ ಬಹಳ ಜನಗಳ ಹೆಸರನ್ನು ಹಾಕಿದ್ದಾರೆ. ಬಹುಶಃ ಅವರನ್ನು ಕೇಳಿರ ಬಹುದು ಅಥವಾ ಅವರನ್ನು ಕೇಳದೆ ಅವರ ಹೆಸರನ್ನು ಉಪಯೋಗಿಸಿಕೊಂಡಿದ್ದರೆ, ಸಂಬಂಧಪಟ್ಟವರು ಆ ವಿಚಾರದಲ್ಲಿ ಕಾರ್ಯಕ್ರಮವನ್ನು ತೆಗೆದುಕೊಳ್ಳಬಹುದು, ಹೀಗೆ ಮಾಡಬಾರದು ಎಂದು ಹೇಳಬಹುದು. ಇಂಥದನ್ನು ಜಡ್ಜ್ ಮಾಡುವುದು ಸರಿಯಲ್ಲ ಎಂದು ನನ್ನ ಭಾವನೆ. ಅಧ್ಯಕ್ಷರು ಇದಕ್ಕೆ ಅವಕಾಶ ಕೊಟ್ಟಿದ್ದಾರೆ. ಅವರು ಅವಕಾಶ ಕೊಟ್ಟಿದ್ದರ ಮೇಲೆ ನಾನು ಏನೂ ಟೀಕೆ ಮಾಡುವುದಿಲ್ಲ. ಆದರೆ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದು ಇಂಥ ಅನುಮತಿಯನ್ನು ಕೊಡದೆ ಇದ್ದರೆ ಒಳ್ಳೆಯದು.

Mr. DEPUTY SPEAKER.—Now the House stands adjourned meet tomorrow at 12 NOON.

The House adjourned at Fifteen Minutes past Seven of the Clock to meet again at Twelve of the Clock on Tuesday the 4th March 1969.

V-, 31''N 69

N69-16-5-8

(B) 4850

WD. 12550—GPB—600—20-6-1969

ಮೈಸೂರು ವಿಧಾನಸಭೆ

MYSORE LEGISLATIVE ASSEMBLY

Tuesday, 4th March 1969

The House met in the Assembly Chamber, Vidhana Soudha, Bangalore, at Twelve of the Clock.

Mr. SPEAKER [SRI S. D. KOTHAVALE] in the Chair.

STARRED QUESTIONS

(to which oral answers were given)

ಶ್ರೀ ಗಂಗಾಬೋವಿ.—ಸ್ವಾಮಿ, ನನಗೆ ಕನ್ನಡದಲ್ಲಿ ಕೊಶ್ಚನ್ ಲಿಸ್ಟ್ ಕೊಟ್ಟಿಲ್ಲ.

Sri B. P. GANGADHAR.—Kannada list of questions and Answers have not been supplied to us. Arrangements may kindly be made to supply the same.

Mr. SPEAKER.—I will see that it is done. The Hon. Minister is also not present. I shall take it up after he comes.

Sri M. NAGAPPA.—The question cannot be held up for absence of the Hon'ble Minister. It cannot be held up for no fault of the Hon'ble Member.

Mr. SPEAKER.—Now the Minister has come. The Hon'ble Member can put that question.

Construction of a Well in Gulur Hobli

43. Sri GANGA BOVI (Gulur).—

Will the Minister for Revenue be pleased to state :—

(*a*) whether it is not a fact that a well was constructed behind the tank of Kondapura village coming under Chikkasarangi Panchayathi, Gulur Hobli, Tumkur taluk by them at a cost of about Rs. 3,000 to Rs. 4,000 for famine relief and that the stone work has not been done;

(SRI GANGA BOVI)

(*b*) the reason for the Divisional Commissioner in not taking action regarding the stone work of the well even though the Deputy Commissioner sent the concerned papers to him on 23rd July 1966 ;

(*c*) whether they would take action in this behalf at least now and help the villagers ?

Sri H. V. KOUJALGI (Minister for Revenue).—

(*a*) The said well was dug up through the Tahasildar, Tumkur District at an estimated cost of Rs. 2,600. As there was no provision for stone work in the said estimate the stone work was not done. The said well has been completed as per the estimate and an expenditure of Rs. 1,722-86 has been incurred for the said well.

(*b*) and (*c*) Sanction has been accorded in this behalf.

ಶ್ರೀ ಗಂಗಾಬೋವಿ.—ಇದೇ ರೀತಿ ಇರುವ ಬಾವಿಗಳು ತುಮಕೂರು ತಾಲ್ಲೂಕಿನಲ್ಲಿ ಎಷ್ಟಿವೆ ಎನ್ನುವುದನ್ನು ತಿಳಿಸಲಾಗುತ್ತದೆಯೇ ?

ಅಧ್ಯಕ್ಷರು.—ಅದು ಈ ಪ್ರಶ್ನೆಗೆ ಸಂಬಂಧಪಡುವುದಿಲ್ಲ.

ಶ್ರೀ ಟಿ. ಪಿ. ಗಂಗಾಧರ.—ಈ ಬಾವಿ ಮಣ್ಣಿನ ಬಾವಿ ಎಂದು ಕಾಣುತ್ತದೆ. ಇದಕ್ಕೆ ಕಲ್ಲು ಕಟ್ಟಡವನ್ನು ಕಟ್ಟದೆ ಇದ್ದರೆ ಬಾವಿ ಕುಸಿದು ಬಿದ್ದು ಬಹಳ ನಷ್ಟವಾಗುವ ಸಂಭವವಿರುವುದರಿಂದ ಕಲ್ಲು ಕಟ್ಟಡವನ್ನು ಕಟ್ಟಿಸುವುದಕ್ಕೆ ಏನಾದರೂ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎಚ್. ವಿ. ಕೌಜಲಗಿ.—ಸ್ಟೋನ್ ರಿವೆಟ್‌ಮೆಂಟ್ ಕಟ್ಟಲು ಮಂಜೂರು ಮಾಡಲಾಗಿದೆ.

Mysore Cattle Trespass Act, 1966

98. Sri M. R. PATIL (Hubli).—

Will the Minister of State for Municipal Administration be pleased to state :—

(*a*) the reasons for delay in framing rules by the Government under Section 31 of the Mysore Cattle Trespass Act, 1956;

(*b*) the reasons for delay in not fixing the scale of fine as required by section 10 of the said Act, to be levied by the pound keeper for the cattle impounded;

(*c*) whether the Hubli Taluk Raiyat Sangha has requested the Government—

(i) to fix progressively increasing scales of fine in respect of cattle seized within a distance of 4 miles from the boundary of City survey area of Hubli City as per proviso to sub-section (1) of Section 10, and

(ii) to direct, by notification, a special penalty under sub-section (4) of Section 25 of the said Act, for damage caused by cattle to crops, etc., in the said local area;

(*d*) if so, the steps taken by the Government in that regard?

Sri B. M. PATIL (Minister of State for Municipal Administration).—

(*a*) and (*b*) The draft rules are almost finalised for publication, but for the forms required to be incorporated in the sehedule to the draft rules and the scale of security to be disposited under Section 10 of the Act. These particulars have been called for, from the Divisional Commissioners.

(*c*) Yes.

(*d*) *Vide* notification No. HMA 1 MLR 69, dated 7th January 1969 appended.

Notification. No. HMA 1 MLR 69. Bangalore, dated 7th January 1969.

S.O. 88.—In exercise of the powers conferred by sub-section (4) of Section 25 of the Mysore Cattle Trespass Act, 1966 (Mysore Act No. 19 of 1966), the Government of Mysore hereby directs that with respect to Hubli-Dharwar Taluks' area, Section 25 of the said Act shall be read as if the words "Imprisonment for a period which may extend to three months or with fine which may extend to Five hundred rupees or with both" were substituted for the words "fine which may extend to fifty rupees."

This Notification shall come into force on 25th January, 1969.

Sri M. R. PATIL.—Have the Government taken steps to fix up the scale of fine as required by Section 10 as represented by Hubli Taluka Rayat Sangha ?

† Sri B. M. PATIL.—In accordance with the provision of Section 10, the Divisional Commissioners have already been addressed to submit to Government the scales of fine that are obtaining in different regions.

Sri M. R. PATIL.—May I know how long does it take to finalise the rules under this Act ?

Sri B. M. PATIL.—Rules have already been published and the finalisation is pending till the receipt of information regarding the scales of fine that are obtaining in different regions.

ಶ್ರೀ ಎಂ. ನಾಗಪ್ಪ.—ಈ ಕಾಯಿದೆ ಪಾಸಾಗಿ ಮೂರು ವರ್ಷವಾಯಿತು. ಇನ್ನೂ ಆದಕ್ಕೆ ರೂಲ್ಸ್ ಮಾಡದೇ ಇದ್ದರೆ ಕಾಯಿದೆಯನ್ನು ಪಾಸ್ ಮಾಡಿ ಯಾವ ತರಹ ಉಪಯೋಗಕ್ಕೂ ಬರುವುದಿಲ್ಲ ಎನ್ನುವುದು ಸರ್ಕಾರದ ಗಮನದಲ್ಲಿದೆಯೇ? ಹಾಗಿದ್ದರೆ ನಿಧಾನವಾಗಲಿಕ್ಕೆ ಕಾರಣವೇನು ?

ಶ್ರೀ ಬಿ. ಎಂ. ಪಾಟೀಲ್.—ಈಗಾಗಲೇ ಹೇಳಿದ ಹಾಗೆ ರೂಲ್ಸ್ ಡ್ರಾಫ್ಟ್ ಆಗಿ ಎಲ್ಲ ಕೊನೆಯ ಹಂತದಲ್ಲಿದೆ. ಡಿವಿಜನರ್ ಕಮಿಷನರಿಂದ ಸೆಕ್ಷನ್ 10ರ ಪ್ರಕಾರ ಯಾರಾದರೂ ತಪ್ಪು ಮಾಡಿದ್ದು ಅವರಿಗೆ ದಂಡ ಹಾಕಬೇಕಾದರೆ ಬೇರೆ ಬೇರೆ ಭಾಗಗಳಲ್ಲಿ ಕೆಲವು ಸ್ಕೇಲುಗಳಿವೆ. ಅಲ್ಲಿಯ ಪರಿಸ್ಥಿತಿಗನುಗುಣವಾಗಿ ಯಾವ ಯಾವ ಸ್ಕೇಲ್ಸ್ ಇದೆ ಎನ್ನುವುದು ಸಂಬಂಧಪಟ್ಟ ಅಧಿಕಾರಿಗಳಿಂದ ಬಂದ ನಂತರ ತೀವ್ರವಾಗಿ ಸರ್ಕಾರ ಕಾರ್ಯಗತ ಮಾಡುತ್ತದೆ.

† indicates that remarks or speeches have not been revised by the member concerned.

Sri M. R. PATIL.—Is the Government aware that damage to crops to the tune of several lakhs, is caused round about 5 miles of Hubli on account of stray cattle ?

Sri B. M. PATIL.—Yes. After the receipt of representation from the local ryots, the Government have already issued notification in the month of January prescribing heavy fine and also imprisonment for 3 months.

ಶ್ರೀ ಎನ್. ಹುಚ್ಚಮಾಸ್ತಿಗೌಡ —ರೂಲ್ಸ್ ಮಾಡಿದಮೇಲೆ ಅದನ್ನು ಸಬಾರ್ಡಿನೇಟ್ ರೆಜಿಸ್ಲೇಷನ್ ಕಮಿಟಿಗೆ ಕಳಿಸಿ ವ್ಯತ್ಯಾಸವೇನಾದರೂ ಇದ್ದರೆ ಸರಿಪಡಿಸಿ ಫೈನಲೈಜ್ ಮಾಡುವಂತೆ ವ್ಯವಸ್ಥೆಮಾಡುತ್ತೀರಾ ? ವ್ಯತ್ಯಾಸವಿದ್ದರೆ ಆ ಕಮಿಟಿಯವರು ತಿದ್ದುಪಾಟು ಮಾಡಿದಮೇಲೆ ಕಾರ್ಯರೂಪಕ್ಕೆ ತರುವುದು ಒಳ್ಳೆಯದಲ್ಲವೆ ?

ಶ್ರೀ ಬಿ. ಎಂ. ಪಾಟೀಲ್.—ಈಗೇನು ಆಕ್ಟ್ ಇದೆ ಅದಕ್ಕೆ ಅನ್ಯಯವಾಗುವಂತೆ ರೂಲ್ಸ್ ತಯಾರಿಸುತ್ತಿದ್ದಾರೆ. ವ್ಯತ್ಯಾಸ ಬರಬಹುದು, ಬಂದಾಗ ನೂಕ್ಕ ಬದಲಾವಣೆ ಮಾಡಲಾಗುವುದು.

Supply of water to villages merged in Belgaum City Municipality

152. Sri B. B. SAYANAK (Belgaum).—

Will the Minister of State for Municipal Administration be pleased to state :—

(*a*) daily capacity of water in the reservoir at Belgaum (in terms of litres) ;

(*b*) the number of litres of water supplied to the people of Belgaum City per day ;

(*c*) whether it is a fact that the merged villages in the City Municipality are not supplied with water ;

(*d*) if so, when these villages will be supplied with water ;

(*e*) whether it is a fact that the Government is supplying water to the Aluminium Factory ignoring these villages ?

Sri B. M. PATIL (Minister of State for Municipal Administration).—

(*a*) 40.9 million li res.

(*b*) 7.264 million litres

(*c*) Yes.

(*d*) All efforts are being made to supply water as early as possible.

(*e*) No.

Sri B. B. SAYANAK.—In the year 1967 Marathi speeches were recorded in Marathi. But now there is no provision for recording Marathi speeches. So I boycott the proceedings of today.

(*The Member then withdrew.*)

Construction of Aerodromes

162. Sri H. N. NANJE GOWDA (Arkalgud).—

Will the Minister for Public Works be placed to state :—

(*a*) whether there are any proposals to take up the construction of few more 'Aerodromes' in the District and the estimated cost of each one of them ;

(*b*) whether the Union Government has agreed to the proposals ;

(*c*) whether the funds to be made available for the said works would be met by the Central Government or by the State Government ?

Sri BASAVARAJ MAGAVI (Deputy Minister for Public works).—

(*a*) No.

(*b*) & (*c*) Does not arise in view of reply to clause (*a*).

Sri H. N. NANJE GOWDA.—I would like to know whether the construction of aerodromes in all the districts is taken up by the Government.

Mr. SPEAKER.—I think the question confines to the member's own district.

Sri H. N. NANJE GOWDA.—I mean all district headquarters, Sir.

† Sri BASAVARAJ MAGAVI.—We are not contemplating to have aerodromes at all district headquarters. There is already one in progress in the member's district.

ಶ್ರೀ ಎಚ್. ಎನ್. ನಂಜೇಗೌಡ.—ಮಾನ್ಯ ಮುಖ್ಯ ಮಂತ್ರಿಗಳು ಮೈಸೂರಿನಲ್ಲಿ ನಗರಸಭೆಗೆ ಸಂಬಂಧಪಟ್ಟಂತೆ ಶತಮಾನೋತ್ಸವ ನಡೆದಾಗ ಆ ಸಮಾರಂಭದಲ್ಲಿ ಮಾತನಾಡುವಾಗ ಹಾಸನ, ಬಿಜಾಪುರ, ಮುಂತಾದ ಕಡೆಗಳಲ್ಲಿ ಏರೋಡ್ರೋಂಗಳನ್ನು ಮಾಡಲು ಕೇಂದ್ರ ಸರಕಾರ ಅನುಮತಿ ಕೊಟ್ಟಿದೆಯೆಂದು ಹೇಳಿದ್ದರು. ಅದು ಯಾವ ಹಂತದಲ್ಲಿದೆ ?

ಶ್ರೀ ಬಸವರಾಜ ಮಾಗಾವಿ —ತಮ್ಮ ಪ್ರಶ್ನೆಯಲ್ಲಿ ಎಲ್ಲಾ ಡಿಸ್ಟ್ರಿಕ್ಟ್ ಹೆಡ್ ಕ್ವಾರ್ಟರುಗಳಲ್ಲಿ ಮಾಡುವ ವಿಚಾರ ಕೇಳಲಾಗಿದೆ. ಅದಾಗುವುದಿಲ್ಲ ಎಂದು ಹೇಳಿದೆ, ಆದರೆ ಹಾಸನದಲ್ಲಿ ಟೂರಿಸ್ಟ್ ಇರಾಖೆ ಹೋದ ವರ್ಷ ಟೂರಿಸ್ಟ್ ಈಯರ್ ಆದ ಪ್ರಯುಕ್ತ ಅಲ್ಲಿ ಏರ್ ಸ್ಟ್ರಿಪ್‌ಗೆ ಅವಕಾಶವಿದೆಯೇ ಎಂದು ಇನ್‌ವೆಸ್ಟಿಗೇಟ್‌ಮಾಡಿ ಅಲ್ಲಿ ಸಾಕಷ್ಟು ಟ್ರಾಫಿಕ್ ಪೊಟೆನ್‌ಷಿಯಲ್ ಸಿಕ್ಕುವುದಿಲ್ಲವೆಂದು ಸುಮ್ಮನಾದರು.

ಶ್ರೀ ಎಸ್. ಗೋಪಾಲಗೌಡ.—ಸ್ವಾಮಿ, ಮುಖ್ಯ ಮಂತ್ರಿಗಳ ಭಾಷಣದ ವಿಚಾರ ಒಂದು ಕಡೆ ಇರಲಿ. ರಾಜ್ಯದಲ್ಲಿ ಭಾಗಶಃ ಗೋಳಿಕವಾಗಿ ರೈಲು, ಮೋಟಾರು ಸೌಕರ್ಯವಿದ್ದರೂ ಕೂಡ ರಾಜ್ಯ ವಿಶಾಲವಾಗಿರುವುದರಿಂದ ಬೆಳಗಾವಿ, ಬಿಜಾಪುರ, ಗುಲ್ಬರ್ಗ, ಹುಬ್ಬಳ್ಳಿ ಮುಂತಾದ ಕಡೆಗಳಲ್ಲಿ ಏರ್‌ಸ್ಟ್ರಿಪ್ ಮಾಡುವುದಕ್ಕೆ ನಿರ್ಣಯಮಾಡಿ ಸರಕಾರ ಆ ವಿಚಾರವನ್ನು ಪರಿಶೀಲನೆ ಮಾಡುವಂತೆ ಕೇಂದ್ರ ಸರಕಾರವನ್ನು ರಾಜ್ಯ ಸರಕಾರ ಯಾವಾಗಲಾದರೂ ಒತ್ತಾಯಮಾಡಿತ್ತೇ ?

ಶ್ರೀ ಬಸವರಾಜ ಮಾಗಾವಿ.—ಅನೇಕ ಸಲ ನಾವು ಕೇಂದ್ರಸರ್ಕಾರದವರಿಗೆ ಈ ಬಗ್ಗೆ ಒತ್ತಾಯ ಮಾಡಿದ್ದೇವೆ. ಈಗ ಆದರ ಪ್ರಯುಕ್ತ ಬಿಜಾಪುರದಲ್ಲಿ ಒಂದು ರ್ಯಾಂಡ್ ಕೂಡ ನಮ್ಮಿಂದ ಕೇಳಿದ್ದಾರೆ ಫ್ರೀ ಆಫ್ ಕಾಸ್ಟ್ ಕೊಡಬೇಕೆಂದು. ಅದನ್ನೂ ಕೂಡ ಸರ್ಕಾರದವರು ತೀವ್ರ ಪರ್ಯಾಲೋಚನೆ ಮಾಡುತ್ತಾ ಇದ್ದೇವೆ. ನಾವು ಅನೇಕ ಸಂದರ್ಭಗಳಲ್ಲಿ ಈ ರೀತಿಯಾದ ಒಂದು ಬೇಡಿಕೆಯನ್ನು ಕೇಂದ್ರಸರ್ಕಾರದವರ ಮುಂದೆ ಮಂಡಿಸಿದರೂ ಕೂಡ ಅವರು 4ನೇ ಪಂಚವಾರ್ಷಿಕ ಯೋಜನೆಯಲ್ಲಿ ಏರ್ ಸ್ಟ್ರಿಪ್‌ಗೆ ಸಾಕಾಡಷ್ಟು ಹಣವನ್ನು ಒದಗಿಸಿಲ್ಲ ಎಂಬ ಕಾರಣವನ್ನು ಮುಂದಿಟ್ಟು ಅದನ್ನು ತಟಸ್ಥಗೊಳಿಸಿದ್ದಾರೆ ಎಂದು ಹೇಳಬೇಕಾಗಿದೆ.

ಶ್ರೀ ಎಸ್. ವಿ. ಆಗ್ನಿಹೋತ್ರಿ.—ಪಂಡಿತ ಜವಹರಲಾಲ್ ನೆಹರೂರವರು ಪ್ರಧಾನ ಮಂತ್ರಿಗಳಾಗಿದ್ದಾಗ ಧಾರವಾಡದಲ್ಲಿ ಒಂದು ಏರೋಡ್ರೋಮ್ ಆಗಬೇಕೆಂದು ನಿರ್ಣಯವಾಗಿ ಆ ಬಗ್ಗೆ ಸರ್ವೆ ಕೆಲಸ ಕೂಡ ಆಗಿತ್ತು, ಅದು ಹುಬ್ಬಳ್ಳಿಯಲ್ಲಿ ಆಗಬೇಕೇ, ಧಾರವಾಡದಲ್ಲಿ ಆಗಬೇಕೇ, ಎನ್ನುವ ಬಗ್ಗೆ ಜಿಜ್ಞಾಸೆ ಹುಟ್ಟಿದ್ದರಿಂದ ಆಗಲಿಲ್ಲ, ಇಬ್ಬರೂ ಕೂಡ ಎಲ್ಲಿ ಆಗಬೇಕೆಂಬ ಬಗ್ಗೆ ನಿರ್ಣಯ ಮಾಡಿಕೊಂಡು ಬಂದರೆ ಸರಿ, ಏರೋಡ್ರೋಮ್ ಮಾಡತ್ತೇವೆ ಎಂದು ಅವರು ವಚನ ಕೊಟ್ಟಿದ್ದರು. ಈಗ ಹುಬ್ಬಳ್ಳಿ—ಧಾರವಾಡ ಕಾರ್ಪೊರೇಷನ್ ಆಗಿರುವುದರಿಂದ ಕಾರ್ಪೊರೇಷನ್ ದವರು ತೀರ್ಮಾನ ಮಾಡಿ ಹುಬ್ಬಳ್ಳಿ ಮತ್ತು ಧಾರವಾಡ ಕಾರ್ಪೊರೇಷನ್ ಏರಿಯಾದಲ್ಲಿ ಆಗಬೇಕೆಂದು ನಿರ್ಣಯ ಮಾಡಿ ಕಳುಹಿಸಿದ್ದಾರೆ. ಆ ಬಗ್ಗೆ ಏನು ಯೋಚನೆ ಮಾಡಿದ್ದೀರಿ? ಅಥವಾ ಮಾಡುತ್ತೀರಿ?

ಶ್ರೀ ಬನವರಾಜ ಮಾಗಾವಿ.—ಮಾನ್ಯ ಸದಸ್ಯರಿಗೆ ಇದ್ದಷ್ಟೇ ಆಸಕ್ತಿ ರಾಜ್ಯಸರ್ಕಾರಕ್ಕೂ ಕೂಡ ಇದೆ. ಸಾಧ್ಯವಿದ್ದಷ್ಟೂ ಅನೇಕ ಕಡೆಗಳಲ್ಲಿ ಮಾಡಬೇಕೆಂದು ಯೋಚನೆ ಮಾಡುತ್ತಾ ಇದ್ದೇವೆ. ಆದರೆ ದುರಾದೃಷ್ಟದಿಂದ ಈ ಕಾರ್ಯವನ್ನು ಕೇಂದ್ರಸರ್ಕಾರದವರು ನಿರ್ಣಯಮಾಡಿ ಮಾಡಬೇಕಾಗುತ್ತದೆಯೇ ವಿನಾ ಇದು ರಾಜ್ಯ ಸರ್ಕಾರಕ್ಕೆ ಸಂಬಂಧಪಟ್ಟ ವಿಷಯ ಅಲ್ಲ ಆದ್ದರಿಂದ ಸ್ವಲ್ಪ ತೊಂದರೆಯಾಗುತ್ತಾ ಇದೆ. ಹುಬ್ಬಳ್ಳಿ—ಧಾರವಾಡದಲ್ಲಿ ಆಗಬೇಕೆಂದು ನಾವು ಪ್ರಪೋಸರ್ ಕಳುಹಿಸಿದ್ದೇವೆ. ಮೊನ್ನೆ ಮೊನ್ನೆ ಹುಬ್ಬಳ್ಳಿ—ಧಾರವಾಡ ಕಾರ್ಪೊರೇಷನ್ ಮೇಯರ್‌ರವರೂ ಕೂಡ ಒಂದು ಮನವಿಯನ್ನು ಸರ್ಕಾರಕ್ಕೆ ಸಲ್ಲಿಸಿದ್ದಾರೆ.

ಶ್ರೀ ಸದಾಶಿವಪ್ಪ ಪಾಟೀಲ.—ರಾಜ್ಯಸರ್ಕಾರದಿಂದ ಕೇಂದ್ರಸರಕಾರಕ್ಕೆ ತಾವು ಶಿಫಾರಸು ಮಾಡುವ ಸಂದರ್ಭದಲ್ಲಿ ಯಾವ್ಯಾವ ಕಾರಣಗಳನ್ನು ಇಟ್ಟುಕೊಂಡು ಈ ನಿರ್ಮಾಣದ ಬಗ್ಗೆ ಶಿಫಾರಸು ಮಾಡುತ್ತೀರಿ.

ಶ್ರೀ ಬನವರಾಜ ಮಾಗಾವಿ.—ಯಾವುದಾದರೂ ಒಂದು ಊರಿಗೆ ಟೂರಿಸ್ಟ್ ಇಂಪಾರ್ಟೆನ್ಸ್ ಇದ್ದರೆ ಅಥವಾ ಬೇರೆ ರೀತಿಯಲ್ಲಿ ಅದು ಇಂಟೆನ್‌ಸೀವ್ ಅಗ್ರಿಕಲ್ಚರಲ್ ಡಿಸ್ಟ್ರಿಕ್ಟ್ ಆಗಿದ್ದರೆ—ಈ ರೀತಿ ನಾನಾ ಕಾರಣಗಳನ್ನು ಮುಂದೆ ಇಟ್ಟುಕೊಂಡು ಶಿಫಾರಸು ಮಾಡುತ್ತೇವೆ. ನಾವು ಕೇಂದ್ರ ಸರ್ಕಾರದವರಿಗೆ ಮೇಲಿಂದ ಮೇಲೆ ಪ್ರಪೋಸ್ ಮಾಡುತ್ತಾ ಇದ್ದೇವೆ, ಕೆಲವು ಕಡೆಗಳಿಗೆ ಬಿಟ್ಟು ಬೇರೆ ಕಡೆ ಕೆಳಿಗೆ ಅವರು ಸಾಕಾದಷ್ಟು ಆಸ್ಥೆ ತೋರಿಸುತ್ತಾ ಇಲ್ಲ.

ಶ್ರೀ ಕೆ. ಎಚ್. ಶ್ರೀನಿವಾಸ್.—ಶರಾವತಿ ಯೋಜನೆಯ ಪ್ರದೇಶದಲ್ಲಿ ಒಂದು ವಿಮಾನ ನಿರ್ಮಾಣವನ್ನು ಮಾಡಬೇಕೆಂಬ ಸಲಹೆ ಅನೇಕ ವರ್ಷಗಳಿಂದ ಸರ್ಕಾರದವರ ಪರಿಶೀಲನೆಯಲ್ಲಿತ್ತು, ಆ ಸಲಹೆ ಏನಾಗಿದೆ? ಮತ್ತು ಈಗ ಯಾವ ಸ್ಥಿತಿಯಲ್ಲಿದೆ ಎಂಬುದನ್ನು ತಿಳಿಸಬೇಕು.

ಶ್ರೀ ಬನವರಾಜ ಮಾಗಾವಿ.—ಅದನ್ನು ಶಿವಮೊಗ್ಗಾದಲ್ಲಿ ಮಾಡಬೇಕೆಂದು ಹೇಳಿ ಸರ್ಕಾರ ಹಿಂದೊಮ್ಮೆ ಯೋಚನೆ ಮಾಡಿ ಅದಕ್ಕೆ ಬಜೆಟ್‌ನಲ್ಲೂ ಕೂಡ ಪ್ರೊವಿಜನ್ ಮಾಡಿತ್ತು. ಕೇಂದ್ರದಿಂದ ಆ ಬಗ್ಗೆ ಸಾಕಾದಷ್ಟು ಗ್ಯಾರಂಟಿ ನಮಗೆ ಬಾರದೇ ಇದ್ದುದರಿಂದ ಅಥವಾ ಅವರು ಕೈಗೆದುಕೊಳ್ಳದೇ ಇದ್ದುದರಿಂದ ಇದುವರೆಗೂ ಅದು ತಟಸ್ಥವಾಗಿದೆ. ಅಲ್ಲೂ ಕೂಡ ಮಾಡಬೇಕೆಂಬ ಸರ್ಕಾರದ ಉದ್ದೇಶ ಇದೆ.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್.—ಈ ವಿಮಾನ ನಿರ್ಮಾಣ ನಿರ್ಮಿಸುವ ಕಾರ್ಯದಲ್ಲಿ ಕೇಂದ್ರ ಸರ್ಕಾರಕ್ಕೆ ಆಗಿಂದಾಗ್ಗೆ ಒತ್ತಾಯ ರೂಪವಾಗಿ ಮನವಿಯನ್ನು ಸಲ್ಲಿಸಿದ್ದೇವೆ ಎಂದು ಹೇಳಿದ್ದೀರಿ. ಒಂದು ನಿರ್ಮಾಣವನ್ನು ಸ್ಥಾಪನೆ ಮಾಡಬೇಕಾದರೆ ಆಗತಕ್ಕ ಖರ್ಚು ಎಷ್ಟು, ಸ್ವಾಮಿ?

ಶ್ರೀ ಬನವರಾಜ ಮಾಗಾವಿ.—ಆಜುಮಾಯಿಷು, ಈಗ ಎರಮರಸ್‌ನಲ್ಲಿ ಮಿಲಿಟರಿಯವರು ವಿಮಾನ ನಿರ್ಮಾಣವನ್ನು ಮಾಡಿದ್ದಾರೆ. ಅದಕ್ಕೆ 13 ಲಕ್ಷ ರೂಪಾಯಿ ವೆಚ್ಚವಾಗಿದೆ. ಆದರೆ ಅದು ಸರಿಹೋಗುವುದಿಲ್ಲ. ನಮ್ಮ ವಿಮಾನ ನಿರ್ಮಾಣಕ್ಕೆ 50 ಲಕ್ಷ ರೂಪಾಯಿ ಬೇಕಾಗುತ್ತದೆ.

ಶ್ರೀ ಕೆ. ಎಂ. ಪುಟ್ಟಸ್ವಾಮಿ.—ಕೋಲಾರದ ಹತ್ತಿರ ಹಿಂದೆ ಮಿಲಿಟರಿಯವರು ಬೇಕಾದಷ್ಟು ಹಣ ಖರ್ಚು ಮಾಡಿ ವಿಮಾನ ನಿರ್ಮಾಣವನ್ನು ಮಾಡಿದ್ದರು. ಅಲ್ಲಿ ನಿರ್ಮಾಣ ಮಾಡುವುದಕ್ಕೆ ಸರ್ಕಾರದವರಿಗೆ ಏನಾದರೂ ಆಲೋಚನೆ ಇದೆಯೇ?

ಶ್ರೀ ಬನವರಾಜ ಮಾಗಾವಿ.—ಹಿಂದೆ ಡಿಫೆನ್ಸ್ ಡಿಪಾರ್ಟ್‌ಮೆಂಟಿನವರು ರಾಜ್ಯದಲ್ಲಿ ಅನೇಕ ಕಡೆ ಏರ್ ಸ್ಟ್ರಿಪ್‌ಗಳನ್ನು ಮಾಡಿದ್ದಾರೆ. ಮುಂದೆ ನಾವು ಅವುಗಳನ್ನು ರೆಗ್ಯುಲರ್ ಪ್ಲಾನ್‌ನಲ್ಲಿ ಸೇರಿಸಿ ಇಂಪ್ರೂವ್‌ಮೆಂಟ್ ಮಾಡಬೇಕಾಗುತ್ತದೆ, ಇಲ್ಲದೇ ಇದ್ದರೆ ಅದು ಇನ್‌ಫ್ರಕ್ಚುಯಸ್ ಎಕ್ಸ್‌ಪೆಂಡಿಚರ್ ಆಗುತ್ತದೆ, ಅದನ್ನು ಮಾಡುವುದಕ್ಕಾಗುವುದಿಲ್ಲ.

ಶ್ರೀ ಎಂ. ನಾಗಪ್ಪ.—ಇಂಟೆನ್ಸೀವ್ ಅಗ್ರಿಕಲ್ಚರಲ್ ಡಿಸ್ಟ್ರಿಕ್ಟ್ ಆದರೆ ತೆಗೆದುಕೊಳ್ಳುತ್ತೀವೆ ಎಂದು ಹೇಳಿದಿರಿ. ಎರಮರಸ್‌ನಲ್ಲಿ ಈಗಾಗಲೇ 13 ಲಕ್ಷ ರೂಪಾಯಿ ಖರ್ಚಾಗಿದೆ. ರಾಯಚೂರು ಡಿಸ್ಟ್ರಿಕ್ಟನ್ನು ಇರಿಗೇಷನ್‌ನಲ್ಲಿ ಐ.ಎ.ಡಿ.ಪಿ. ಅಂತ ಡಿಕ್ಲೇರ್ ಮಾಡಿದ್ದಾರೆ. ಈ ಎರಡೂ ದೃಷ್ಟಿಯಿಂದ ಅಲ್ಲದೆ, ಮೊನ್ನೆ ಮಾನ್ಯ ಮುಖ್ಯಮಂತ್ರಿಗಳು ಹೈದ್ರಾಬಾದ್ ಕರ್ನಾಟಕದಲ್ಲಿ ಟೂರ್ ಮಾಡಬೇಕಾದರೆ ಆಂಧ್ರದಲ್ಲಿರತಕ್ಕ ಹೈದ್ರಾಬಾದಿಗೆ ಬಂದು ಇಳಿದು ಅಲ್ಲಿಂದ ಬರಬೇಕಾಗಿ ಬಂತು. ಆ ರೀತಿ ಬರಬಾರದು, ಬರಬೇಕಾದ್ದಿಲ್ಲ ಎಂಬ ಪರಿಸ್ಥಿತಿಯಲ್ಲಿ ಅವರ ಟೂರನ್ನು ಕ್ಯಾನ್ಸಲ್ ಮಾಡಬೇಕಾಗಿ ಬಂತು. ಈ ಎಲ್ಲಾ ವಿಷಯಗಳನ್ನೂ ಗಮನಕ್ಕೆ ತೆಗೆದುಕೊಂಡು ರಾಯಚೂರಿನ ಏರೋಡ್ರೊಮನ್ನು ಆದಷ್ಟು ಜಾಗ್ರತೆ ಕಾರ್ಯಗತಗೊಳಿಸಲು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಬಸವರಾಜ ಮಾಗಾವಿ.—ಎರಮರಸ್ಸಿನಲ್ಲಿ ಒಂದು ವಿಮಾನ ನಿರ್ವಾಣವಾಗಬೇಕೆಂಬುದು ಸರ್ಕಾರದವರ ಆಸೆ. ಅದಕ್ಕಾಗಿ 6 ಲಕ್ಷ 74 ಸಾವಿರ ರೂಪಾಯಿಗಳ ಒಂದು ಅಂದಾಜನ್ನೂ ಕೂಡ ತಯಾರಿಸಿ ಅದನ್ನು ಕೇಂದ್ರದ ಒಪ್ಪಿಗೆಗೆ ಕಳುಹಿಸಿದರಾಗಿದೆ. ಅದನ್ನು ಇಂಪ್ರೂ ಮಾಡುವುದಕ್ಕೆ ಕೇಂದ್ರದವರ ಅನುಮತಿಗಾಗಿ ನಾವು ಪದೇ ಪದೇ ಅವರನ್ನು ಒತ್ತಾಯ ಮಾಡುತ್ತಿದ್ದೇವೆ.

ಶ್ರೀ ಡಿ. ಎಂ. ಸಿದ್ದಯ್ಯ.—ಮೈಸೂರಿನಲ್ಲೂ ಒಂದು ಏರ್‌ಸ್ಟ್ರಿಪ್ ಇತ್ತು. ಸರ್ಕಾರದವರು ಪುನಃ ಅದನ್ನು ನಡೆಸುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಬಸವರಾಜ ಮಾಗಾವಿ.—ಅಲ್ಲಿಗೆ ಸಾಕಷ್ಟು ಟ್ರಾಫಿಕ್ ಪೊಟೆನ್‌ಷಿಯಲ್ ಇಲ್ಲ ಎಂದು ಅದನ್ನು ಕೈಬಿಡಲಾಗಿದೆ. ಆದಾಗ್ಯೂ ಅಲ್ಲಿ ಒಂದು ಗ್ಲೈಂಡಿಂಗ್ ಸೆಂಟರನ್ನು ಮಾಡಬೇಕೆಂಬ ಆಲೋಚನೆ ಇದೆ.

ಶ್ರೀ ಸಿದ್ದಯ್ಯ ಕಾಶೀಮಠ್—ಧಾರವಾಡ-ಹುಬ್ಬಳ್ಳಿಯಲ್ಲಿ ಒಂದು ವಿಮಾನ ನಿರ್ವಾಣ ಮಾಡುವುದಕ್ಕೆ ಅಲ್ಲಿಗೆ ಸಾಕಷ್ಟು ಟ್ರಾಫಿಕ್ ಪೊಟೆನ್‌ಷಿಯಲ್ ಇಲ್ಲ ಎಂದು ಹೇಳೋಣವಾಯಿತು. ಆದರೆ ಅಲ್ಲಿ ಆಗತಕ್ಕ ಲುಕ್ಸಾನನ್ನು ಆ ಕಾರ್ಪೊರೇಷನ್ನಿನವರು ತುಂಬಿಕೊಡಲು ಮುಂದೆ ಬಂದರೆ ಅಲ್ಲಿ ಒಂದು ನಿರ್ವಾಣವನ್ನು ಮಾಡುವುದಕ್ಕೆ ಸಾಧ್ಯವಿದೆಯೇ ?

ಶ್ರೀ ಬಸವರಾಜ ಮಾಗಾವಿ.—ಅದು ಅಷ್ಟು ಹಗುರವಾದ ವಿಚಾರವಲ್ಲ. ಸರ್ಕಾರದವರೇ ಹಿಂದೆ ಆ ಮುಂಗಳೂರು ವಿಮಾನ ನಿರ್ವಾಣದ ಬಗ್ಗೆ ಆಗತಕ್ಕ ಲುಕ್ಸಾನನ್ನು ತುಂಬಿಕೊಡುವುದಾಗಿ ಹೇಳಿದ್ದಾಗ ಕೆಲವು ತಿಂಗಳಲ್ಲೇ ಅದು ಒಂದು ಫೆಂಟ್ಯಾಸ್ಟಿಕ್ ಅಮೌಂಟಾಯಿತು. ಅವರು ಆ ವಿಚಾರದಲ್ಲಿ ಒಂದು ಖಚಿತವಾದ ತೀರ್ಮಾನಕ್ಕೆ ಬಂದರೆ ನಾವು ಸಿವಿಲ್ ಏವಿಯೇಷನ್ನಿನವರಿಗೆ ಬರೆಯುತ್ತೇವೆ.

ಶ್ರೀ ಎಸ್. ರುದ್ರಪ್ಪ.—ರಾಜ್ಯದಲ್ಲಿ ಹಲವಾರು ನಿರ್ವಾಣಗಳನ್ನು ತೆರೆಯತಕ್ಕ ಬಗ್ಗೆ ಕೇಂದ್ರಕ್ಕೆ ಶಿಫಾರಸ್ಸನ್ನು ಮಾಡಲಾಗಿದೆ ಎಂದು ಹೇಳೋಣವಾಯಿತು. ಅಂದಾಗ ಆ ಶಿಫಾರಸ್ಸಿನಲ್ಲಿ ಗುಲ್ಬರ್ಗ ಕೂಡ ಸೇರಿದೆಯೇ ? ಸೇರಿದ್ದರೆ ಅದಕ್ಕೆಷ್ಟು ಅಂದಾಜು ಮಾಡಿದೆ ?

ಶ್ರೀ ಬಸವರಾಜ ಮಾಗಾವಿ.—ಕೇಂದ್ರ ಸರ್ಕಾರದವರು ಇಂಥಾ ಕಡೆ ನಾವು ಒಂದು ಏರ್‌ಸ್ಟ್ರಿಪ್ಪನ್ನು ಮಾಡಬೇಕೆಂದಿದ್ದೇವೆ. ಅದರ ಬಗ್ಗೆ ಅಂದಾಜು ಇತ್ಯಾದಿಗಳನ್ನು ಕಳುಹಿಸಿ ಎಂದು ಅವರು ಕೇಳಿದರೆ ನಾವು ಆಗ ಅವನ್ನು ಕಳುಹಿಸುತ್ತೇವೆ. ಆದರೆ ನಮ್ಮ ಸರ್ಕಾರದವರೇ ಗುಲ್ಬರ್ಗಾದಲ್ಲಿ ಸ್ಪೆಸಿಫಿಕ್ಕಾಗಿ ಒಂದು ಗ್ಲೈಂಡಿಂಗ್ ಸೆಂಟರನ್ನಾದರೂ ಮಾಡಬೇಕೆಂಬ ಆಲೋಚನೆ ಇದೆ.

ಶ್ರೀ ಎಸ್. ಎಸ್. ಅರಕೇರಿ.—ನಮ್ಮ ಗುಲ್ಬರ್ಗದಲ್ಲಿ ಒಂದು ವಿಮಾನ ನಿರ್ವಾಣ ಮಾಡತಕ್ಕ ಸಲುವಾಗಿ ಅಲ್ಲಿ ೫-6 ಲಕ್ಷ ರೂಪಾಯಿಗಳ ಬೆಲೆ ಬಾಳತಕ್ಕ ಭೂಮಿಯನ್ನು ರೈತರು ಫ್ರೀಯಾಗಿ ಕೊಟ್ಟಿದ್ದರೂ ಸರ್ಕಾರದವರು ಅವರ ಬಗ್ಗೆ ಕೇಂದ್ರಕ್ಕೇನು ಶಿಫಾರ್ಸು ಮಾಡಿದ್ದಾರೆ ? ಇದಕ್ಕಾಗಿ ಬಡ್ಜೆಟ್ಟಿನಲ್ಲಿ ಎಷ್ಟು ಹಣವನ್ನು ಒದಗಿಸಲಾಗಿದೆ ?

ಶ್ರೀ ಬಸವರಾಜ ಮಾಗಾವಿ,—ನಾವು ಆ ವಿಜಾಪುರದಲ್ಲಿ ಒಂದು ನಿರ್ವಾಣ ಮಾಡುವುದಕ್ಕೆ ಕೇಂದ್ರ ಸರ್ಕಾರದ ಗೃಹಖಾತೆಗೆ ಶಿಫಾರ್ಸನ್ನು ಮಾಡಿದ್ದೇವೆ. ಅಲ್ಲಿ ಮೊದಲು ಆ ಮೊಹರಂ ಕ್ಯೂರಿಯನ್ನು ಕೊಡುವುದಕ್ಕಾಗುವುದಿಲ್ಲ ಎಂದು ಹೇಳುತ್ತಿದ್ದದ್ದನ್ನು ಈಗ ಕೊಡುವುದಕ್ಕೆ ಒಪ್ಪಿದೆ. ಆದರೆ ಅದರ ಬಗ್ಗೆ ಇನ್ನೂ ಡೀಟೇಲ್ಸ್‌ಗಳನ್ನು ವರ್ಕ್ ಔಟ್ ಮಾಡಿಲ್ಲ. ನರ್ವೆ ಕೆಲಸಗಳು ಮಾತ್ರ ಮುಗಿದಿವೆ. ಕೇಂದ್ರದವರಿಂದ ನಮಗಿನ್ನೂ ನಿರ್ಣಯ ಬಂದಿಲ್ಲ.

12-30 P.M.

ಶ್ರೀ ಬನವರಾಜ ಮಾಗಾವಿ.—ಇದು ಬಹಳ ವ್ಯಾಪ್ತಿಯಾದ ಪ್ರಶ್ನೆಯೆಂದು ಕಾಣುತ್ತದೆ. ಮಾನ್ಯ ಗೋಪಾಲ ಗೌಡರು ಹೇಳಿದ ಹಾಗೆ, ನಮ್ಮ ರಾಜ್ಯದಲ್ಲಿ ಗುಲ್ಬರ್ಗಾದಲ್ಲಿ ಒಂದು ವಿಮಾನ ನಿರ್ವಾಣ ಆಗಬೇಕೆಂದು ಒತ್ತಾಯ ಮಾಡಿದ್ದೇವೆ. ಉಳಿದ ರಾಜ್ಯ ಸರ್ಕಾರದವರು ವಿಮಾನ ಗಳನ್ನು ಇಟ್ಟುಕೊಂಡರೂ ಕೂಡ ನಾವು ಇಟ್ಟುಕೊಂಡಿಲ್ಲ. ಏಕೆಂದರೆ, ಅನೇಕರಿಗೆ ಬಂಡಿ ಹತ್ತುವು ದಕ್ಕೆ ಇಲ್ಲದಿದ್ದಾಗ ನೀವು ವಿಮಾನ ಇಟ್ಟುಕೊಂಡಿದ್ದೀರಿ ಎಂದು ಟೀಕೆಯನ್ನು ನಾಳೆ ಇವರು ಮಾಡ ಬಹುದು. ಆದ್ದರಿಂದ ಈ ಪ್ರಶ್ನೆ ಉದ್ಭವವಾಗುವುದಿಲ್ಲ.

Condition of Tanks in State

264. **Sri B. P. GANGADHAR** (Tumkur).—

Will the Minister for Public Works be pleased to state:—

(*a*) the number of tanks in Tumkur District, both Major and Minor (the statistics of the same, talukwise may be furnished);

(*b*) whether several tanks are breached and several of them have neither sluice nor Waste-Weir, if so, the number of them breached and the number of them that have no sluice and waste-weir;

(*c*) the action taken to restore the said tanks and to repair the same;

(*d*) the number of tanks and pickups in Tumkur Taluk, with particular reference to Kasaba and Bellavi Hoblis in Tumkur Taluk;

(*e*) the number of works for the construction of tanks that Government has undertaken in Tumkur Taluk, with special reference to Kora, Bellavi and Kasaba Hoblis in Tumkur Taluk?

Sri D. PARAMESWARAPPA (Deputy Minister for Major Irrigation) [on behalf of SRI A. J. DODDAMETI (Minister of State for Minor Irrigation)].—

(*a*), (*b*) and (*c*) *Vide* Statement 'A' appended.

(*d*) *Tumkur Taluk*	*Major Tanks*	*Minor Tanks*	*Pickups*
Kasaba Hobli	18	17	...
Bellavi Hobli	7	15	...

(*e*)—	*Construction of new Tanks*	*Construction of pick-ups*	
Kora Hobli	1	1	*
Bellavi Hobli	...	1	
Kasaba Hobli	1	...	

*Statement 'B' appended.

ಶ್ರೀ ಎ. ಮುನಿಯಪ್ಪ.—ಕೋಲಾರ ಜಿಲ್ಲೆಯ ಎಲವಾರದಲ್ಲಿ ಒಂದು ವಿಮಾನ ನಿರ್ಮಾಣವನ್ನು ಕಟ್ಟಲು ಲಕ್ಷಗಟ್ಟಲೆ ಖರ್ಚು ಮಾಡಿದ್ದಾರೆ. ಕೆ.ಜಿ.ಎಫ್. ಚಿನ್ನದ ಗಣಿ ಕೇಂದ್ರ ಸರ್ಕಾರಕ್ಕೆ ಸೇರಿರುವುದರಿಂದ ಅಲ್ಲಿರತಕ್ಕ ಏರೋಡ್ರೋಮನ್ನು ಮಿಲಿಟರಿಯವರಿಂದ ತಮ್ಮ ವಶಕ್ಕೆ ತೆಗೆದು ಕೊಂಡು ಅದನ್ನು ನಡೆಸುವುದಕ್ಕೆ ಇಂಡಿಯಾ ಸರ್ಕಾರದವರಿಗೆ ಏನಾದರೂ ಪತ್ರ ಬರೆದಿದ್ದೀರಾ? ಯಾವ ತಾರೀಖಿನಲ್ಲಿ ಬರೆದಿದ್ದೀರಾ?

ಶ್ರೀ ಬಸವರಾಜ ಮಾಗಾವಿ.—ಮಿಲಿಟರಿಯವರು ಯಾವ ಏರ್‌ಸ್ಟ್ರಿಪ್ ತೆಗೆದುಕೊಳ್ಳಬೇಕೆಂಬುದು ಅವರಿಗೆ ಬಿಟ್ಟ ನಿರ್ಣಯ. ಕೋಲಾರದಲ್ಲಿ ಅದರ ಬಗ್ಗೆ ಐ.ಎ.ಸಿ. ಅವರ ಅಬ್‌ಜಕ್ಷನ್ ಇದೆ. ಬೆಂಗಳೂರಿನಿಂದ 40 ಮೈಲಿ ದೂರದಲ್ಲಿ ಇರುವುದರಿಂದಲೂ ಮತ್ತು ಅನೇಕ ಕಾರಣಗಳಿಂದ ಬೆಂಗಳೂರು ಸಮೀಪ ಏರ್ ಸರ್ವಿಸ್‌ಗಳನ್ನು ನಡೆಸುವುದಕ್ಕೆ ಸಾಧ್ಯವಾಗುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಈಗ ಕೇಂದ್ರ ಸರ್ಕಾರದಿಂದ ಪಡೆಯತಕ್ಕ ಸೌಲಭ್ಯಗಳನ್ನು ಹೆಚ್ಚಿಗೆ ಉತ್ತರ ಇಂಡಿಯಾದವರೇ ಪಡೆದೂಕೊಳ್ಳುತ್ತಿದ್ದಾರೆ ದಕ್ಷಿಣ ಇಂಡಿಯಾದಲ್ಲಿ, ಮದ್ರಾಸ್ ಮತ್ತು ಆಂಧ್ರ ಪ್ರದೇಶದವರು ಇದರ ಸೌಕರ್ಯವನ್ನು ಹೆಚ್ಚಿಗೆ ಪಡೆದಿದ್ದಾರೆ. ಮೈಸೂರಿಗೆ ಬಹಳ ಕಡಿಮೆ ಏರ್‌ಸ್ಟ್ರಿಪ್‌ಗಳನ್ನು ಕೊಟ್ಟಿರುವುದರಿಂದ, ಕೇಂದ್ರ ಸರ್ಕಾರದವರು ಈ ರೀತಿ ಮಾಡುವ ತಾರತಮ್ಯವನ್ನು ರಾಜ್ಯ ಸರ್ಕಾರದವರು ವಿಚಾರ ಮಾಡಿದ್ದಾರೆಯೇ! ಈ ಸೌಕರ್ಯವನ್ನು ಉತ್ತರ ಭಾರತಕ್ಕೆ ಹೆಚ್ಚಿಗೆ ಕೊಟ್ಟು ಇಲ್ಲಿ ಕಡಿಮೆ ಕೊಡುವ ಕಾರಣವಾದರೂ ಏನು?

ಶ್ರೀ ಬಸವರಾಜ ಮಾಗಾವಿ.—ಇದರಲ್ಲಿ ಕೇಂದ್ರ ಸರ್ಕಾರದ ಭೇದಭಾವದ ಪ್ರಶ್ನೆ ಇಲ್ಲ ಐ.ಎ.ಸಿ. ಎಂಬುದು ಆದೊಂದು ವ್ಯಾಪಾರಸಂಸ್ಥೆ. ಟ್ರಾಫಿಕ್ ಪೊಟೆನ್ಶಿಯಲ್ ಎಲ್ಲಿ ಇದೆಯೊ ಅಲ್ಲಿ ಅವರು ಹೇಗಾದರೂ ಮಾಡಬಹುದು.

ಶ್ರೀ ಎಸ್. ಎಚ್. ಪುಟ್ಟರಂಗನಾಥ್.—(ಅ)ಗೆ ಉತ್ತರವಾಗಿ ಇಲ್ಲವೆಂದು ಹೇಳಿದ್ದೀರಿ. ಈಗ ಮಂತ್ರಿಗಳು ಉತ್ತರ ಕೊಡುವಾಗ ಅನೇಕ ಕೇಸುಗಳನ್ನು ಶಿಫಾರಸು ಮಾಡಿದ್ದೇವೆ ಎಂಬುದಾಗಿ ಹೇಳಿದ್ದಾರೆ. ಇಲ್ಲ ಅವನ್ನೆಲ್ಲಾ ಏಕೆ ನಮೂದು ಮಾಡಲಿಲ್ಲ? ಹಾಸನದಲ್ಲಿ ಆಗತಕ್ಕ ಏರ್‌ಸ್ಟ್ರಿಪ್ ಬಹಳ ತೀವ್ರಗತಿಯಿಂದ ನಡೆಯುತ್ತಿದೆಂದು ಹೇಳಿದ್ದೀರಿ. ಅವಕ್ಕೆ ಎಷ್ಟು ಹಣವನ್ನು ಕೇಂದ್ರ ಸರ್ಕಾರದವರು ಮಂಜೂರು ಮಾಡಿದ್ದಾರೆ? ಅದು ಯಾವಾಗ ಮುಗಿಯುತ್ತದೆ?

ಶ್ರೀ ಬಸವರಾಜ ಮಾಗಾವಿ.—ಮಾನ್ಯ ಸದಸ್ಯರು ಜಿಲ್ಲಾ ಹೆಡ್‌ಕ್ವಾರ್ಟರ್ಸ್‌ನಲ್ಲಿ ವಿಮಾನ ನಿರ್ಮಾಣ ಮಾಡುತ್ತೀರಾ ಎಂದು ಕೇಳಿದ್ದಕ್ಕೆ ಇಲ್ಲವೆಂದು ಉತ್ತರ ಹೇಳಿದ್ದೇನೆ. ಎರಡನೇಯದು ಹಾಸನದ ಬಗ್ಗೆ ಮಾನ್ಯ ಸದಸ್ಯರಿಗೆ ಹೇಳುವುದಾದರೆ, 8 ಲಕ್ಷ ರೂಪಾಯಿಗಳನ್ನು ಸೆಂಟ್ರಲ್ ಪಿ.ಡಬ್ಲ್ಯು.ಡಿ.ಯವರು ಅದಕ್ಕಾಗಿ ಈಗಾಗಲೇ ಖರ್ಚು ಮಾಡಿದ್ದಾರೆ. ಇನ್ನೂ 8 ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತಾರೆ. ಅಂದ ಮೇಲೆ ಒಟ್ಟು 16 ಲಕ್ಷ ರೂಪಾಯಿಗಳ ಒಂದು ಯೋಜನೆಯನ್ನು ಇಟ್ಟುಕೊಂಡಿದ್ದಾರೆ. ಮೊದಲನೆಯ ಹಂತದಲ್ಲಿ ಒಟ್ಟು ಅದಕ್ಕೆ 58 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಬೇಕೆಂದು ಯೋಜನೆಯನ್ನು ಇಟ್ಟುಕೊಂಡಿದ್ದಾರೆ ಅದು ಟೂರಿಸ್ಟ್ ಪ್ಲೇಸ್ ಆಗಿರುವುದರಿಂದ ಕೇಂದ್ರ ಸರ್ಕಾರದ ಮೂಲಕ ಟೂರಿಸ್ಟ್ ಡಿಪಾರ್ಟ್‌ಮೆಂಟಿನವರು ಫಾರಿನರ್ಸ್‌ಗೆ ಅನುಕೂಲವಾಗಲೆ ಎಂದು ಮುತುವರ್ಜಿ ವಹಿಸಿ ಆ ಕೆಲಸ ಮಾಡಿದ್ದಾರೆ.

ಶ್ರೀ ಎಸ್. ಗೋಪಾಲಗೌಡ.—ವಿಮಾನ ನಡೆಸುವುದು ರಾಜ್ಯ ಸರ್ಕಾರಕ್ಕೆ ಸಂಬಂಧಪಟ್ಟದ್ದು ಅಲ್ಲ. ಅದನ್ನು ನಾನು ಒಪ್ಪುತ್ತೇನೆ. ವಿಮಾನದಲ್ಲಿ ಓಡಾಟ ಮಾಡುವುದು ಸದ್ಯಕ್ಕೆ ಜನಕೋಟಿಯ ಪ್ರಶ್ನೆಯಲ್ಲ. ಆದನ್ನೂ ಒಪ್ಪುತ್ತೇನೆ. ಆದರೆ ಆಪತ್ತಿನ ದೃಷ್ಟಿಗೆ, ಅವಸರದ ಹಾಗೂ ಆಕಸ್ಮಿಕ ಸಂದರ್ಭಗಳಲ್ಲಿ ಯಾರಾದರೂ ಇದನ್ನು ಉಪಯೋಗಿಸುವ ಅವಕಾಶವಿರುವಾಗ ಈ ರಾಜ್ಯ ಸರ್ಕಾರದವರಿಗೂ ಆ ಸೌಲಭ್ಯ ಇರಬೇಕು, ಸಾರ್ವಜನಿಕರಿಗೂ ಆ ಸೌಲಭ್ಯ ಇರಬೇಕು, ವ್ಯಾಪಾರೋದ್ಯಮಿಗಳಿಗೂ ಆ ಅನುಕೂಲವಿರಬೇಕು. ಕೇಂದ್ರ ಸರ್ಕಾರದವರಾದರೆ ಯಾವುದಾದರೂ ಒಂದು ನದಿಯಲ್ಲಿ ಪ್ರವಾಹ ಬಂದಿದೆಯೆಂದರೆ ವಿಶೇಷವಾಗಿ ಮಂತ್ರಿಗಳು ವಿಮಾನದಲ್ಲಿ ಹೋಗುತ್ತಾರೆ. ಅದೇ ರೀತಿ ಮೈಸೂರಿನಲ್ಲಿಯೂ ಹೋಗಲು ಅವಕಾಶವಿರಬೇಕು. ಮೈಸೂರು ಸರ್ಕಾರದ ಅಧಿಕಾರಿಯಿಂದ ಈ ವಿಷಯದ ಬಗ್ಗೆ ಸಾಕಷ್ಟು ಗಮನವನ್ನು ಕೊಡಲಿಲ್ಲದಿರುವುದರಿಂದ ಮತ್ತು ಕೇಂದ್ರ ಸರ್ಕಾರದ ಮೇಲೆ ಒತ್ತಾಯ ತರಲಿಲ್ಲ. ಬೆಂಗಳೂರು ರಕ್ಷಣಾ ದೃಷ್ಟಿಯಿಂದ ವಿಶೇಷವಾದಂಥ, ಮತ್ತು ಪ್ರಾಧಾನ್ಯವಾದಂಥ ಪ್ರದೇಶವಾದರೂ ಈ ರಾಜ್ಯಕ್ಕೆ ಏನೂ ಸೌಲಭ್ಯವನ್ನು ಒದಗಿಸುತ್ತಿಲ್ಲ. ಇದಕ್ಕೆ ತಾವು ಏನು ಹೇಳುತ್ತೀರಿ?

(SRI D. PARAMESWARAPPA)

STATEMENT 'A'

Sl. No.	Name of the Taluk	Clause (a)		Clause (b)			Clause (c)
		Major tanks	Minor tanks	No. of breached tanks	No. of tanks without wasteweir	No. of tanks without sluice	Action taken to restore the said tanks and repair the ssme
1	Tumkur Taluk ...	64	131	...	...	...	...
2	Gubbi Taluk ...	45	115	2	...	...	Action has been taken to restore the breached tanks and also to repair the sluices and Waste-weir of other tanks.
3	Tiptur Taluk ...	46	106	...	6	12	do
4	Turuvekere Taluk ...	55	22	3	...	...	do
5	Kunigal Taluk ...	25	104	3	...	...	do
6	Sira Taluk ...	59	108	1	1	...	do
7	Madhugiri Taluk ...	58	89	3	12	...	Restoration in respect of two tanks out of 3 breached tanks are under progress. Estimate is being prepared in respect of the other one tank work.

(SRI D. PARAMESWARAPPA)

STATEMENT 'B'

Statement of new tanks and pickups under construction

Sl. No.	Name of Hobli	Construction of new tanks	Construction of pickups
1	Kora Hobli ...	1. Channamuddenahalli new-tank—1,02,000	1. Pickups near Adviswami Mutt. Rs. 35,000
2	Bellavi Hobli ...	Nil	1. Sorekunte Pick-up
3	Kasaba Hobli...	1. New tank near Swadenahalli village—Rs. 86,000	Nil

Sri B. P. GANGADHAR.—In Tumkur Taluk there are no big rivers for constructing projects. So, wherever it is possible to construct minor tanks, is it not the duty of the Government to see that such places are explored and tanks builtup?

Sri D. PARAMESWARAPPA.—Hitherto all those cases have been investigated and wherever there is scope for construction of tanks works have been taken up.

ಶ್ರೀ ಬಿ. ಪಿ. ಗಂಗಾಧರ್.—ಎಲ್ಲೆಲ್ಲ ಕೆರೆಗಳನ್ನು ಕಟ್ಟಿಸಲು ಸಾಧ್ಯ ಇದೆಯೋ ಅದು ವರ್ಕ್ ಔಟ್ ಮಾಡಿ ಒಂದು ಲಿಸ್ಟ್ ಕೊಟ್ಟರೆ, ಅಲ್ಲಿ ಮೈನರ್ ಟ್ಯಾಂಕುಗಳನ್ನು ಕಟ್ಟಲಿಕ್ಕೆ ಪ್ರಾರಂಭ ಮಾಡುತ್ತೀರಾ?

Sri D. PARAMESWARAPPA.—There is no such list before the Government. If my hon. friend suggests any tanks, those cases would be investigated and estimates prepared.

ಶ್ರೀ ಎನ್. ಹುಚ್ಚುಮಾಸ್ತಿಗೌಡ.—ಕೊಟ್ಟಿರತಕ್ಕಂತಹ ಪರಿಶಿಷ್ಟದಲ್ಲಿ ತುರುವೆಕೆರೆ, ಕುಣಿಗಲ್, ಸಿರಾ, ಈ ಮೂರು ತಾಲ್ಲೂಕುಗಳಲ್ಲಿ ತೆಗೆದುಕೊಂಡಿಲ್ಲ. ಉಳಿದ ತಾಲ್ಲೂಕುಗಳಲ್ಲಿ ತೆಗೆದುಕೊಂಡಿದ್ದಾರೆ. ಆದ್ದರಿಂದ ಅವುಗಳನ್ನು ತೆಗೆದುಕೊಳ್ಳುವುದಕ್ಕೆ ಏರ್ಪಾಡು ಮಾಡುತ್ತೀರಾ? ಮತ್ತು ಎಷ್ಟು ದಿವಸಗಳಲ್ಲಿ ಮಾಡುತ್ತೀರಾ?

ಶ್ರೀ ಡಿ. ಪರಮೇಶ್ವರಪ್ಪ.—ತಕ್ಕ ಏರ್ಪಾಡು ಮಾಡುತ್ತೇವೆ. ಅದಷ್ಟು ಜಾಗ್ರತೆ ತೆಗೆದು ಕೊಳ್ಳುವುದಕ್ಕೆ ಏರ್ಪಾಡು ಮಾಡುತ್ತೇವೆ.

ಶ್ರೀ ಬಿ. ಪಿ. ಗಂಗಾಧರ್.—ಮಧುಗಿರಿ ತಾಲ್ಲೂಕಿನಲ್ಲಿ ಬಡವನಳ್ಳಿ ಕೆರೆ ಒಡೆದು ಹೋಗುವ ಪರಿಸ್ಥಿತಿ ಇದೆ; 8-10 ವರ್ಷಗಳಿಂದಲೂ ಆ ಹಳ್ಳಿಯವರು ನೂರಾರು ಅರ್ಜಿಗಳನ್ನು ಸಲ್ಲಿಸಿದರೂ, ಸರ್ಕಾರದವರು ಏನೂ ಕ್ರಮ ತೆಗೆದುಕೊಳ್ಳದಿರುವುದರಿಂದ, ಆ ಕೆರೆ ಬ್ರೀಚ್ ಆಗಿ ನುಮಾರು ಲಕ್ಷಾಂತರ ರೂಪಾಯಿ ಬೆಲೆ ಬಾಳುವ ಆಸ್ತಿಪಾಸ್ತಿಗಳು ಕಳೆದುಕೊಳ್ಳುವ ಪರಿಸ್ಥಿತಿ ಸರ್ಕಾರದ ಗಮನಕ್ಕೆ ಬಂದಿದೆಯೇ, ಹಾಗೆ ಬಂದಿದ್ದರೆ, ಸರ್ಕಾರದವರು ಅವರಿಗೆ ಕಂಪೆನ್‌ಸೇಶನ್ ಕೊಡುತ್ತಾರೆಯೇ ಎರಡನೆಯದು, ಈಗ ಕೊಟ್ಟಿರುವ ಲಿಸ್ಟಿನ ಕೆರೆಗಳಲ್ಲಿ ಪೇಸ್ಟ್‌ಪೆರ್ ಮತ್ತು ನ್ಯೂಯಿನ್ ಗಳಿಲ್ಲ. ಅದನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ?

Sri D. PARAMESWARAPPA.—There are about 27 tanks which have no waste-weirs because there are natural waste-weirs and the Department has examined them; and if it is possible to take them up, they will take them up.

Chamarajanagara-Satyamangala Railway Line

286. Sri D. M. SIDDAIAH (Biligere).—

Will the Minister for Public Works be pleased to state:—

(*a*) when was the proposal sent by the Government to the Central Government to take up the Chamarajanagar Satyamangala Railway Line;

(*b*) the steps taken to urge upon the Centre to implement the same and why nothing has been done though the linking up the Satyamangala-Chamarajanagar line is all important in view of the development of trade and commerce;

(*c*) instead of taking up the abovesaid railway line, is it a fact that there is a move to remove the line from Nanjangud to Chamarajanagar;

(*d*) if so, what are the steps taken by the State Government to prevent such a move?

Sri K. LAKKAPPA (Minister for Public Works).—

(*a*) 7th April, 1955.

(*b*) Government moved again the Central Government for taking up this Railway Line during 1965 and this will be given consideration in the IV Five Year Plan.

(*c*) No.

(*d*) Does not arise in view of reply to clause (*c*).

ಶ್ರೀ ಡಿ. ಎಂ. ಸಿದ್ದಯ್ಯ.—ಚಾಮರಾಜನಗರ—ಸತ್ಯಮಂಗಲ ರೈಲ್ವೆಗೆ 1955ರಲ್ಲಿ ಎಸ್ಟಿಮೇಟ್ ಆಯಿತು ಎಂದು ಹೇಳಿದ್ದೀರಿ. ಇದೇ ಸಮಯಕ್ಕೆ ಕೇಳಿದ ಹಾಸನ – ಮಂಗಳೂರು ರೈಲ್ವೆ ಶುರುವಾದರೂ, ಇದು ಇಷ್ಟು ವಿಳಂಬವಾಗುವುದಕ್ಕೆ ಕಾರಣವೇನು?

† ಶ್ರೀ ಕೆ. ಲಕ್ಕಪ್ಪ.—ಈ ರೈಲ್ವೆ ಲೈನು ಆಗಬೇಕು ಎನ್ನುವ ದೃಷ್ಟಿಯಿಂದ ಬಹಳ ಹಿಂದಿನಿಂದಲೂ ಎಂದರೆ 1891ನೇ ಇಸವಿಯಿಂದಲೂ ಕೇಳುತ್ತಿದ್ದಾರೆ. ಮೈಸೂರಿನವರು ಸಲ್ಲಿಸುತ್ತಿದ್ದಾರೆ ಈ ಬಗ್ಗೆ ಸಾಕಷ್ಟು ಸರ್ವೆ ಸಹ ನಡೆದಿದೆ. 1896 ನೇ ಇಸವಿಯಲ್ಲಿ ಸರ್ವೆ ನಡೆದಿದೆ. 1918ರಲ್ಲಿ ಸರ್ವೆ ನಡೆದಿದೆ. 1927ನೇ ಇಸವಿಯಲ್ಲಿ ಸರ್ವೆ ನಡೆದಿದೆ. 1942ನೇ ಇಸವಿಯಲ್ಲಿ ಸರ್ವೆ ನಡೆದಿದೆ 1948ನೇ ಇನವಿಯಲ್ಲಿ ಸರ್ವೆ ನಡೆದಿದೆ. ಹೀಗೆ ಅನೇಕ ಬಾರಿ ಸರ್ವೆ ನಡೆದಿದೆ. ಸರ್ಕಾರದವತಿಯಿಂದ ಕೂಡ ಪದೇ ಪದೇ ಕೇಂದ್ರ ಸರ್ಕಾರಕ್ಕೆ ಇದನ್ನು ಒತ್ತಾಯ ಹಾಕುತ್ತಿದ್ದಾರೆ. ತಮಗೆ ಉತ್ತರ ಕೊಟ್ಟಿರುವ ಹಾಗೆ 1955 ನೇ ಇಸವಿಯಲ್ಲಿ ಸರ್ಕಾರದವರು ಒತ್ತಾಯ ಮಾಡಿದ್ದಾರೆ. ಪುನಃ 1955 ನೇ ಇಸವಿಯಲ್ಲಿ ಸಹ ಹೆಚ್ಚಿನ ಒತ್ತಾಯ ಮಾಡಿ ಇದನ್ನು ಮಾಡಬೇಕೆಂದು ಸರ್ಕಾರದವರು ಕೇಳಿದ್ದಾರೆ. ಅದಕ್ಕೆ ಉತ್ತರವಾಗಿ ಅವರು ನಾಲ್ಕನೆಯ ಪಂಚವಾರ್ಷಿಕಯೋಜನೆ ಫೈನಲ್ ಆಗುವ ಸನ್ನಿವೇಶದಲ್ಲಿ ಇದನ್ನು ಗಮನದಲ್ಲಿ ಇಟ್ಟುಕೊಂಡು ಪರಿಶೀಲನೆ ಮಾಡುತ್ತೇವೆ ಎಂದು ಉತ್ತರ ಹೇಳಿದ್ದಾರೆ.

ಶ್ರೀ ಡಿ. ಎಂ. ಸಿದ್ದಯ್ಯ.—ಈಗ ಮಾನ್ಯ ಮಂತ್ರಿಗಳು ಅಪ್ಪಣೆ ಕೊಡಿಸಿದ ಹಾಗೆ 1891ನೇ ಇಸವಿಯಿಂದಲೂ ಇದನ್ನು ಪರಿಶೀಲಿಸುತ್ತಿದ್ದಾರೆ. ಅನೇಕವೇಳೆ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದ್ದಾರೆ. ಇಷ್ಟಾದರೂ ಕೂಡ ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ಇದನ್ನು ಸೇರಿಸುವುದಕ್ಕೆ ಯೋಚನೆ ಮಾಡುತ್ತೇವೆ ಎಂದು ಹೇಳಿದರೆ ಇದೇನು ಮುಖ್ಯ ರೈಲ್ವೆ ಮಾರ್ಗವಲ್ಲವೇ, ಇದನ್ನು ಕೇಂದ್ರ ಸರ್ಕಾರದವರು ತೆಗೆದುಕೊಳ್ಳುವುದಕ್ಕೆ ಇಷ್ಟವಿಲ್ಲವೇ, ಅಥವಾ ತಾವು ಒತ್ತಾಯ ಹಾಕಿದ್ದು ಪರಿಣಾಮಕಾರಿಯಾಗಿ ಆಗಿಲ್ಲವೇ ಹೇಗೆ, ಇದಕ್ಕೆ ಮಾನ್ಯ ಮಂತ್ರಿಗಳು ಸ್ಪಷ್ಟವಾದ ಉತ್ತರವನ್ನು ಕೊಡಬೇಕು.

ಶ್ರೀ ಕೆ. ಲಕ್ಕಪ್ಪ.—ಈ ಬಗ್ಗೆ ಸರ್ಕಾರದವರು ಸಾಕಷ್ಟು ಒತ್ತಾಯವನ್ನು ಹಾಕುತ್ತಿದ್ದಾರೆ. ಅದರ ಜೊತೆಗೆ ವಿಧಾನಪರಿಷತ್ತಿನಲ್ಲಿ ಈ ಬಗ್ಗೆ ಒಂದು ಖಾಸಗಿ ನಿರ್ಣಯ ಕೂಡ ಬಂದು ಅದನ್ನು ಅವರು ಒಪ್ಪಿ ಸರ್ಕಾರದ ಮುಂದಿಟ್ಟಿದ್ದಾರೆ. ಮೊನ್ನೆ ಕೇಂದ್ರದ ರೈಲ್ವೆ ಖಾತೆಯ ಮಂತ್ರಿಗಳಾದ ಶ್ರೀಮಾನ್ ಪೂಣಚ್ಚ ಅವರು ಇಲ್ಲಿಗೆ ಬಂದಿದ್ದಾಗ್ಯೆ ಮುಖ್ಯ ಮಂತ್ರಿಗಳ ಚೇಂಬರಿನಲ್ಲಿ ಈ ಬಗ್ಗೆ ಡಿಸ್‌ಕಷನ್ ಮಾಡಿ ಒತ್ತಾಯ ಮಾಡಿದ್ದೇವೆ. ಇಷ್ಟೊಂದು ಒತ್ತಾಯ ಹಾಕಿದರೂ ಕೂಡ ಈ ರೈಲ್ವೆ ಲೈನು ಕಾರ್ಯಗತವಾಗಿಲ್ಲ. ಇನ್ನೂ ನಾವೆಲ್ಲರೂ ಈ ಬಗ್ಗೆ ಹೆಚ್ಚಿನ ಒತ್ತಾಯ ಹಾಕಿದರೆ ಪ್ರಾಯಶಃ ಇದು ಜಾಗ್ರತೆಯಾಗಿ ಫಲಕಾರಿಯಾಗುತ್ತದೆ ಎಂದು ನಾನು ಭಾವಿಸುತ್ತೇನೆ.

ಶ್ರೀ ಎಲ್. ಶ್ರೀಕಂಠಯ್ಯ.—1955ನೇ ಇಸವಿಯಿಂದ ಈಚೆಗೆ ಬೆಂಗಳೂರು-ಸೇಲಂ ರೈಲ್ವೆ ಮಾರ್ಗ ಆಗಿದೆ ಇದು ಮಾತ್ರ ಆಗಲಲ್ಲ. ಏತಕ್ಕೆ ಇದು ಆಗಲಲ್ಲ. ಈ ಬಗ್ಗೆ ಕೇಂದ್ರ ಸರ್ಕಾರದವರ ಎಕ್ಸ್‌ಪ್ಲನೇಷನ್ ತಮ್ಮ ಮುಂದೆ ಇದೆಯೇ?

ಶ್ರೀ ಕೆ. ಲಕ್ಕಪ್ಪ.—ಕೇಂದ್ರ ಸರ್ಕಾರದವರನ್ನು ನಾವು ಎಕ್ಸ್‌ಪ್ಲನೇಷನ್ ಕೇಳುವ ಸ್ಥಿತಿಯಲ್ಲಿ ಇಲ್ಲ. ಇದು ಆಗಬೇಕು ಎನ್ನತಕ್ಕಂಥ ಒತ್ತಾಯವನ್ನು ಹಾಕಿದರೂ ಸಹ ಕೇಂದ್ರ ಸರ್ಕಾರದವರು ಇದನ್ನು ತೆಗೆದುಕೊಂಡಿಲ್ಲ. ಮುಂದೆ ಇದನ್ನು ತೆಗೆದುಕೊಳ್ಳುವುದಕ್ಕೆ ಅವಕಾಶ ಇದೆ. ಇದರ ಪ್ರಾಮುಖ್ಯತೆ ಇದೆ, ಇದನ್ನು ತೆಗೆದುಕೊಳ್ಳಬೇಕು ಎಂದು ಕೇಂದ್ರ ಸರ್ಕಾರದವರು ಇದುವರೆಗೂ ಆ ಕಡೆ ತಮ್ಮ ಗಮನವನ್ನು ಹರಿಸಿಲ್ಲ. ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ಇದನ್ನು ಅಳವಡಿಸುತ್ತಾರೆಯೇ ಹೇಗೆ ಎನ್ನುವುದನ್ನು ನಾವು ಕಾದು ನೋಡಬೇಕಾಗಿದೆ.

ಶ್ರೀ ಎಸ್. ಎಂ. ಗುರೆಡ್ಡಿ.—ಈಗ ತಾವು ಹೇಳುತ್ತಿದ್ದೀರಿ ಕೇಂದ್ರ ಸರ್ಕಾರದವರು ತಮ್ಮ ಕಡೆ ಗಮನ ಕೊಡುತ್ತಿಲ್ಲ ಎಂದು ಹಿಂದೆ ದಾಸಪ್ಪನವರು ರೈಲ್ವೆ ಖಾತೆಯ ಮಂತ್ರಿಗಳಾಗಿದ್ದರು. ಅವರು ನಮ್ಮ ರಾಜ್ಯದವರು. ಈಗ ಮೊನ್ನೆ ತಾನೆ ರೈಲ್ವೆ ಖಾತೆಯನ್ನು ಬಿಟ್ಟು ಕೊಟ್ಟವರು ಶ್ರೀಮಾನ್ ಪೂಣಚ್ಚ ಅವರು ನಮ್ಮ ರಾಜ್ಯದವರು. ಮುಂದೆ ಯಾರು ಬರುತ್ತಾರೆಯೋ ಕಾಣುವುದಿಲ್ಲ. ಈಗಾಗಲೇ ಮಹಾರಾಷ್ಟ್ರದಲ್ಲಿ, ಮತ್ತು ಉತ್ತರ ಹಿಂದೂಸ್ಥಾನದಲ್ಲಿ ಅನೇಕ ಕಡೆಗಳಲ್ಲಿ ಬ್ರಾಡ್ ಗೇಜ್ ರೈಲ್ವೆ ಲೈನುಗಳನ್ನು ಹಾಕುತ್ತಿದ್ದಾರೆ. ಆದರೆ ನಮ್ಮ ರಾಜ್ಯದಲ್ಲಿ ನಾವು ಕೇಳುವಂತಹ ಯಾವ ರೈಲ್ವೆ ಲೈನೂ ಕೂಡ ನಮಗೆ ಬರಲಿಲ್ಲ. ಇದಕ್ಕೆ ಮುಖ್ಯ ಕಾರಣವೇನು ? ಮುಂದೆ ಬರುವಂಥವರ ಮೇಲೆ ಹೀಗೆ ಆಶೆಯನ್ನು ಇಟ್ಟು ಕೊಳ್ಳಬಹುದೇ ?

ಶ್ರೀ ಕೆ. ಲಕ್ಕಪ್ಪ.—ಮುಖ್ಯ ಕಾರಣ ಏನು ಎನ್ನತಕ್ಕಂಥಾದ್ದು ಗೊತ್ತಾಗುವುದಿಲ್ಲ. ಇನ್ನೂ ಯಾವ ರೀತಿಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಒತ್ತಾಯವನ್ನು ಹಾಕುವ ಬಗ್ಗೆ ಏನಾದರೂ ಸಲಹೆಗಳನ್ನು ಕೊಟ್ಟರೆ ಆ ರೀತಿ ಮಾಡೋಣ.

ಶ್ರೀ ಕೆ. ಎಂ. ತಮ್ಮಯ್ಯ.—ಹಾಸನ ಮಂಗಳೂರು ರೈಲ್ವೆ, ಮತ್ತು ಕಡೂರು-ಮಂಗಳೂರು ರೈಲ್ವೆ ಲೈನು ಹಾಕುವ ಬಗ್ಗೆ ನಮ್ಮ ಹತ್ತಿರ ಲಕ್ಷಾಂತರ ರೂಪಾಯಿಗಳನ್ನು ವಸೂಲು ಮಾಡಿದ್ದಾರೆ. ಈಗ ಅದನ್ನು ತಾತ್ಸಾರ ಮನೋಭಾವದಿಂದ ನೋಡುತ್ತಿದ್ದಾರೆ. ಇದನ್ನು ಹಾಗೆಯೇ ಅರ್ಧ ದಾರಿಯಲ್ಲೇ ಕೈಬಿಟ್ಟಿದ್ದಾರೆ. ಕಡೂರು-ಮಂಗಳೂರು ಲೈನನ್ನು ಸಕಲೇಶಪುರದ ಹತ್ತಿರ ಸೇರಿಸಬೇಕು ಎನ್ನುವ ಒಂದು ಪ್ರಪೋಜಲ್ ಇತ್ತು. ಇದನ್ನು ಶಿಫಾರಸ್ಸು ಮಾಡಿ ಮಾಡಿಕೊಡುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಕೆ. ಲಕ್ಕಪ್ಪ.—ತಾವು ಹೇಳುವ ಬಗ್ಗೆ ಸಹ 1965ನೇ ಇಸವಿಯಲ್ಲಿ ಕೇಂದ್ರ ಸರ್ಕಾರಕ್ಕೆ ಬರೆದಿರುವ ಪತ್ರದಲ್ಲಿ ಹರಿಹರ-ಮೂಡಬಿದ್ರೆ-ಶಿವಮೊಗ್ಗ-ಭದ್ರಾವತಿ ಚಿಕ್ಕಮಗಳೂರು ಮಾರ್ಗವಾಗಿ ಒಂದು ರೈಲ್ವೆ ಲೈನ್ ಹಾಕಬೇಕೆಂದು ನಮ್ಮ ಸರ್ಕಾರದವರು—ಕೇಂದ್ರ ಸರ್ಕಾರದವರನ್ನು ಕೇಳಿದ್ದಾರೆ.

Amruthur-Yadavanne Road

331. Sri N. HUTCHMASTHY GOWDA (Kunigal).—

Will the Minister for Public Works be pleased to state :—

(*a*) the places on Amruthur-Yadavanne road where the execution of work has stopped ;

(*b*) when the said work was stopped ;

(*c*) whether acquisition proceeding is in progress ;

(*d*) the stage at which the acquisition proceeding stands at present ?

Sri BASAVARAJ MAGAVI (Deputy Minister for Public Works).—

(*a*) At miles 8/6, 1 and 2/7, 2 and 3/5, 6/2.
(*b*) In 1963-64.
(*c*) Yes.
(*d*) Financial Notification has been issued.

ಶ್ರೀ ಎನ್. ಹುಚ್ಚಮಾಸ್ತಿಗೌಡ.—1963-64ರಿಂದ ಈ ರಸ್ತೆಗೆ ಬೇಕಾಗಿರುವ ಜಮೀನು ತಮ್ಮ ಸ್ನೇಹಿತರಿಗೆ ಬೇಕಾಗಿದ್ದುದು ಎಂದು ಅಕ್ವೈರ್ ಮಾಡಿಕೊಳ್ಳದೆ ಕೈಬಿಟ್ಟಿದ್ದಿರೋ ಅಥವಾ ಈ ರಸ್ತೆಯ ಅವಶ್ಯಕತೆ ಇಲ್ಲವೆಂದು ಕೈಬಿಟ್ಟಿದ್ದಿರೋ, ಅವಶ್ಯಕತೆ ಇದ್ದರೆ ಎಷ್ಟು ಬೇಗ ಜಮೀನನ್ನು ಅಕ್ವೈರ್ ಮಾಡಿಕೊಂಡು ರಸ್ತೆಯನ್ನು ಮಾಡಿಸುತ್ತೀರಾ ಎಂಬುದನ್ನು ಹೇಳಬೇಕು ?

† ಶ್ರೀ ಬಸವರಾಜ ಮಾಗಾವಿ.—ಇದರಲ್ಲಿ ಮುಖ್ಯವಾಗಿರುವ ತೊಂದರೆ ಎಂದರೆ, ಅಂಚಿಪುರ ಗ್ರಾಮದವರು ರೆಕಗ್ನೈಸ್ಡ್ ಪಾತ್ ಬಿಟ್ಟು ಮಾಮೂಲು ರಸ್ತೆಯನ್ನೇ ಇಂಪ್ರೂವ್ ಮಾಡಿಕೊಂಡು ಬಂದರು. ಈ ಕಾರಣದಿಂದ ಗರಾಜೆಯಾಗಿ ರೆವಿನ್ಯೂ ಅಪಲೆಟ್ ಟ್ರಿಬ್ಯುನಲ್‌ಗೆ ತೀರ್ಮಾನಕ್ಕಾಗಿ ಹೋಯಿತು. ಅವರು ತೀರ್ಮಾನ ಕೊಟ್ಟಿದ್ದಾರೆ. ಅವರ ತೀರ್ಮಾನದ ಪ್ರಕಾರ ಭೂಸ್ವಾಧೀನದ ಕಾರ್ಯ ಪಾರಂಭವಾಗಿದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ರೆವಿನ್ಯೂ ಅಪಲೆಟ್ ಟ್ರಿಬ್ಯುನಲ್ ಅವರು ತೀರ್ಮಾನ ಕೊಟ್ಟು 3 ವರ್ಷವಾಯಿತು. ಈ ರಸ್ತೆಯನ್ನು ಆದಷ್ಟು ಬೇಗ ಮಾಡಿಸಲು ಕ್ರಮ ತೆಗೆದು ಕೊಳ್ಳುತ್ತೀರಾ ?

ಶ್ರೀ ಬಸವರಾಜ ಮಗಾವಿ.—ಭೂಸ್ವಾಧೀನ ಮಾಡಿಕೊಳ್ಳುವ ಕೆಲಸ ಸ್ವಲ್ಪ ತೊಂದರೆಯಾಗಿದೆ. ಆದರೂ ಈ ರಸ್ತೆಯನ್ನು ತ್ವರಿತಗತಿಯಿಂದ ಮಾಡಿಸಲು ಫೈನರ್ ನೋಟಿಫಿಕೇಷನ್ ಹೊರಡಿಸಿದ್ದೇವೆ.

Water Supply Scheme

361. Sri M. NAGAPPA (Raichur).—

Will the Minister of State for Municipal Administration be pleased to state :—

(*a*) whether any comprehensive water supply scheme for Raichur Town is pending before the Government ;

(*b*) if so, the stage at which this scheme stands at present ;

(*c*) when the scheme will be completed ?

Sri B. M. PATIL(Minister of State for Municipal Administration). —

(*a*) Yes.

(*b*) The scheme is under examination.

(*c*) As early as possible.

ಶ್ರೀ ಎಂ. ನಾಗಪ್ಪ.—ಈ ಯೋಜನೆಯು ಪರಿಶೀಲನೆಯಲ್ಲಿದೆ ಎಂದು ಹೇಳಿದ್ದೀರಿ. ಈಗ ಯಾವ ಹಂತದಲ್ಲಿ ಇದೆ ಎಂದು ಹೇಳುತ್ತೀರಾ ?

† ಶ್ರೀ ಬಿ. ಎಂ. ಪಾಟೀಲ್.—ಈಗ ಕೊನೆಯ ಹಂತದಲ್ಲಿ ಇದೆ. ಎಸ್ಟಿಮೇಟ್ ತಯಾರಾಗಿದೆ. ಸರ್ಕಾರದ ಮಂಜೂರಾತಿಯಾಡ ಮೇಲೆ ಎಲ್. ಐ. ಸಿ. ಯಿಂದ ಸಾಲ ತೆಗೆದುಕೊಳ್ಳುವ ಬಗ್ಗೆ ಪ್ರಯತ್ನ ಮಾಡಲಾಗುತ್ತದೆ.

ಶ್ರೀ ಎಂ. ನಾಗಪ್ಪ.—ಈ ಯೋಜನೆಯ ಅಂದಾಜು ವೆಚ್ಚ ಎಷ್ಟು ?

ಶ್ರೀ ಬಿ. ಎಂ. ಪಾಟೀಲ್.—ಇದರಲ್ಲಿ ಎರಡು ಸ್ಕೇಜ್‌ಗಳು ಇವೆ. ಮೊದಲನೆ ಸ್ಕೇಜ್‌ಗೆ 67.5 ಲಕ್ಷ ರೂಪಾಯಿಗಳು ಖರ್ಚು ಆಗುತ್ತದೆ. ಎರಡನೆಯ ಸ್ಕೇಜ್‌ಗೆ 7.99 ಲಕ್ಷ ರೂಪಾಯಿಗಳು ಖರ್ಚು ಆಗುತ್ತದೆ.

ಶ್ರೀ ಎಂ. ನಾಗಪ್ಪ.—ಈ ಯೋಜನೆಗೆ ಅಡ್ಮಿನಿಸ್ಟ್ರೇಟಿವ್ ಸಾಂಕ್ಷನ್ ಆಗುವುದಕ್ಕೆ ಇಷ್ಟು ನಿಧಾನ ವಾಗಲು ಕಾರಣವೇನು ?

ಶ್ರೀ ಬಿ. ಎಂ. ಪಾಟೀಲ್.—ಮಾನ್ಯ ಸದಸ್ಯರು ಹೇಳುವಂತೆ ಬಹಳ ದಿವಸಗಳಾಗಿಲ್ಲ. 1968ರಲ್ಲಿ ಮೊದಲನೆಯ ಎಸ್ಟಿಮೇಟ್ 60 ಲಕ್ಷ ರೂಪಾಯಿಗಳಿಗೆ ತಯಾರಾಗಿತ್ತು. ಈಗ ಡೀಟೈಲ್ಡ್ ಪ್ಲಾನ್ ಅಂಡ್ ಎಸ್ಟಿಮೇಟ್ ತಯಾರು ಮಾಡಲಾಗಿದೆ. ಈ ಬಗ್ಗೆ ಅಲ್ಲಿಯ ಮುನಿಸಿಪಾಲಿಟಿಯವರು ತಮ್ಮ ಭಾಗವನ್ನು ಕೊಡುವ ಬಗ್ಗೆ ಒಂದು ಠರಾವನ್ನು ಮಾಡಿ ಕಳಿಸಬೇಕೆಂದು ಬರೆದಿದ್ದೇವೆ. ಅದರಂತೆ ಅವರು ಡಿಸೆಂಬರ್ 1968ರಲ್ಲಿ ಮಾಡಿ ಕಳಿಸಿದ್ದಾರೆ. ಈಗ ಕೊನೆಯ ಹಂತಕ್ಕೆ ತರುವುದಕ್ಕೆ ಪ್ರಯತ್ನ ಮಾಡಿದ್ದೇವೆ.

Sri D. B. KALMANKAR.—What is the source of water supply ?

Sri B. M. PATIL.—The source in Krishna river.

Sri M. NAGAPPA.—It is not Krishna river but is Tunga Bhadra Left Bank Canal.

Sri B. M. PATIL.—I shall verify it.

ಶ್ರೀ ಸದಾಶಿವಪ್ಪ ಪಾಟೀಲ್.—ಕುಡಿಯುವ ನೀರಿನ ಯೋಜನೆಯು ಪ್ರಶ್ನೆ ಬಂದಾಗಲೆಲ್ಲಾ ಸರ್ಕಾರದವರು ಪರಿಶೀಲನೆಯಲ್ಲಿ ಇದೆ ಎಂದು ಉತ್ತರ ಕೊಡುತ್ತಿರುತ್ತಾರೆ. ಅದನ್ನು ಬಿಟ್ಟು ಜಾಗ್ರತೆ ಮಾಡುತ್ತೇವೆ ಎಂಬ ಉತ್ತರವನ್ನು ಇನ್ನು ಮುಂದೆ ಕೊಡುತ್ತಾರೆಯೇ ?

ಶ್ರೀ ಬಿ. ಎಂ. ಪಾಟೀಲ್.—ಈಗಾಗಲೇ ಹೇಳಿದ್ದೇನೆ. ತ್ವರಿತವಾಗಿ ತೆಗೆದುಕೊಳ್ಳುತ್ತೇವೆಂದು ಹೇಳಿದ್ದೇನೆ.

ಶ್ರೀ ಎಂ. ನಾಗಪ್ಪ.—ಎಲ್. ಐ. ಸಿ. ಯಿಂದ ಲೋನ್ ತೆಗೆದುಕೊಂಡರೆ ಇಂಟರೆಸ್ಟ್ ಯಾವರೀತಿ ಹಾಕುತ್ತಾರೆ. ಆ ಇಂಟರೆಸ್ಟ್‌ನ್ನು ಕೊಡುವ ಶಕ್ತಿ ಮುನಿಸಿಪಾಲಿಟಿಯವರಿಗೆ ಸಾಧ್ಯವೇ ಎಂಬುದನ್ನು ಸರ್ಕಾರದವರು ಪರಿಶೀಲಿಸಿ, ಸರ್ಕಾರದವರೇ ಲೋನ್ ಕೊಡುವುದಕ್ಕೆ ಯೋಚನೆ ಮಾಡುತ್ತಾರೆಯೇ ?

ಶ್ರೀ ಬಿ. ಎಂ. ಪಾಟೀಲ್.—ಈಗಾಗಲೇ ಕಂಟ್ರೋಲರ್ ಆಫ್ ಸ್ಟೇಟ್ ಅಕೌಂಟ್ಸ್ ಅವರು ಮುನಿಸಿಪಾಲಿಟಿಯ ಆದಾಯ ಚೆನ್ನಾಗಿದೆ ಎಂದು ಹೇಳಿದ್ದಾರೆ. ಎಲ್. ಐ. ಸಿ. ಅವರಿಂದ ತೆಗೆದುಕೊಂಡ ಸಾಲವನ್ನು 20 ಕುಂತುಗಳಲ್ಲಿ ಕೊಡಬೇಕಾಗುತ್ತದೆ. ಮತ್ತು 6. 34 ಪರ್‌ಸೆಂಟ್ ಇಂಟರೆಸ್ಟ್ ಚಾರ್ಜು ಮಾಡುತ್ತಾರೆ.

Sanction of Loan to Primary Land Development Banks

378. Sri P. VENKATAGIRIYAPPA (Kolar).—

Will the Minister for Development be pleased to state :—

(*a*) whether it has come to the notice of the Government that the State Land Development Bank is not extending the loan facility to the Primary Land Development Banks who have not collected 90 per cent of their dues from their members ;

(*b*) the number of Primary Banks affected by the decision of the State Land Development Bank in the State ;

(*c*) whether they are aware that the condition stipulated by the State Land Development Banks cannot be fulfilled by the Primary Land Development Bank due to successive famine conditions prevailing in their Taluks ?

Sri B. L. GOWDA (Deputy Minister for Co-operation).—

(*a*) Yes.

(*b*) 110.

(*c*) Yes.

ಶ್ರೀ ಪಿ. ವೆಂಕಟಗಿರಿಯಪ್ಪ.—ಬಾವಿಗಳಿಗೆ ಕೊಟ್ಟು ಸಾಲವನ್ನು ಸರಿಯಾಗಿ ವಸೂಲ ಮಾಡಲು ಅವಕಾಶವಿಲ್ಲದುದರಿಂದ ಕನಿಷ್ಟ ಪಕ್ಷ ಶೇಕಡಾ ಐವತ್ತರಷ್ಟು ವಸೂಲಿಯಾಗಿರುವವರಿಗೆ ಸಾಲ ಕೊಡಲು ಪ್ರಯತ್ನ ಮಾಡುತ್ತೀರಾ ?

ಶ್ರೀ ಬಿ. ಎಲ್. ಗೌಡ.—ಇವಾಗುವುದಿಲ್ಲ. ಇದಕ್ಕೆ ರಿಸರ್ವ್ ಬ್ಯಾಂಕಿನವರು ಒಪ್ಪುವುದೂ ಇಲ್ಲ. ಅವರೇ ಹೇಳಿರುವಂತೆ ಸುಸ್ತಿ ಇರುವ ಬ್ಯಾಂಕುಗಳಿಗೆ ಪುನಃ ಸಾಲ ಕೊಡಕೂಡದು ಎಂದು ಹೇಳಿದ್ದಾರೆ. ಆದುದರಿಂದ ಶೇಕಡಾ 90 ರಷ್ಟು ಬಾಕಿ ಇರಕೂಡದು ಎನ್ನುವುದನ್ನು ನಾವು ಸ್ಪೆಷಲ್ ಆಗಿ ಶೇಕಡಾ 80 ರಷ್ಟು ಇಳಿಸರಾಗಿದೆ ಇನ್ನು ಇಳಿಸುವುದಕ್ಕಾಗುವುದಿಲ್ಲ.

ಶ್ರೀ ಎಂ. ಎನ್. ರಾಮಣ್ಣ.—ಕೆಲವು ಕಡೆ ಬಾವಿಗಳಿಗೆ ಸಾಲ ಕೊಟ್ಟು ಬಾವಿ ಕೆಲಸ ಅರ್ಧದಷ್ಟು ಮುಕ್ಕಾಲು ಭಾಗದಷ್ಟು ಕೆಲಸವಾಗಿ ಇನ್ನೂ ಕಾಲು ಭಾಗ ಮಾತ್ರ ಉಳಿದಿದೆ. ಇಂತಹ ಕಡೆಗಳಲ್ಲಿ ಸಾಲ ಕೊಡುತ್ತೀರಾ ಹೇಗೆ ?

ಶ್ರೀ ಬಿ. ಎಲ್. ಗೌಡ.—ಎಲ್ಲೆಲ್ಲಿ ಸಾಲ ಮಾಂಜೂರಾಗಿ ಅದರಲ್ಲಿ ಒಂದೆರಡು ಕಂತುಗಳು ಬಾಕಿ ಇದ್ದರೆ ಅಂತಹ ಕಡೆಗಳಲ್ಲೂ ಸಾಲ ಕೊಡುತ್ತಾರೆ.

ಶ್ರೀ ಎಂ. ಹೆಚ್. ಜಯಪ್ರಕಾಶ ನಾರಾಯಣ್.—ಹೊಸದಾಗಿ ಬಾವಿಗಳಿಗೆ ಸಾಲ ತೆಗೆದು ಕೊಳ್ಳುವ ಬ್ಯಾಂಕುಗಳಿಗೆ ಈಗ ಇರುವ ಪದ್ಧತಿಯಿಂದ ತೊಂದರೆಯಾಗುತ್ತದೆ ಇದರ ಬಗ್ಗೆ ಹೇಗೆ ಮಾಡುತ್ತೀರಿ ?

ಶ್ರೀ ಬಿ. ಎಲ್. ಗೌಡ.—ಇದು ಕೋಆಪರೇಟೀವ್ ಎಫರ್ಟ್ ಮೇಲೆ ಇದೆ. ಸಂಸ್ಥೆಯಲ್ಲಿರುವವರು ಚೆನ್ನಾಗಿ ಕೆಲಸ ಮಾಡಿದರೆ ಇಲ್ಲಿನ ಕೆಲಸಗಳು ಚೆನ್ನಾಗಿರುತ್ತವೆ. ಆದರೆ ಇದರಲ್ಲಿರುವ ವ್ಯಕ್ತಿಗಳು ಸರಿಯಾಗಿ ಕೆಲಸ ಮಾಡದೇ ಇದ್ದರೆ ನಾವೇನೂ ಮಾಡುವುದಕ್ಕಾಗುವುದಿಲ್ಲ. ನಾವು ಸಂಸ್ಥೆಗೆ ಸಹಾಯ ಮಾಡುತ್ತೇವೆ. ವ್ಯಕ್ತಿಗಳಿಗಲ್ಲ.

ಶ್ರೀ ಎಸ್. ಎಂ. ಗುರ್ರೆಡ್ಡಿ.—ರ್ಯಾಂಡು ಮಾರ್ಟ್‌ಗೇಜು ಬ್ಯಾಂಕುಗಳ ಮೂಲಕ ಕೊಡುವಾಗ ಸುಮಾರು 110 ಬ್ಯಾಂಕುಗಳಲ್ಲಿ ತೊಂದರೆಗಳಾಗಿವೆ. ಆದುದರಿಂದ ಪುನಃ ರಿವೆನ್ಯೂ ಖಾತೆಯಲ್ಲಿ ಹಿಂದೆ ಯಾವ ರೀತಿ ಪದ್ಧತಿ ಇತ್ತೋ ಅದರಂತೆ ಮಾಡಲು ಆಗುವುದಿಲ್ಲವೇ ?

ಶ್ರೀ ಬಿ. ಎಲ್. ಗೌಡ.—ಈಗ ಆ ಪ್ರಕಾರ ಮಾಡರಾಗುವುದಿಲ್ಲ. ಸುಮಾರು 30 ಸಾವಿರ ಬಾವಿಗಳನ್ನು ಈಗ ಹಂಚಲು ಅನುಕೂಲವಾಗಿದೆ. ಹಿಂದೆ ರೆವೆನ್ಯೂ ಖಾತೆಯಲ್ಲಿದ್ದಾಗ ಒಂದು ಸಾವಿರ ಅಥವಾ ಎರಡು ಸಾವಿರಕ್ಕೆ ಮೇಲೆ ಬಾವಿಗಳಿಗೆ ಹಣ ಕೊಡರಾಗುತ್ತಿರಲಿಲ್ಲ. ಈಗಿರುವ ಬ್ಯಾಂಕುಗಳಿಂದ ಜನಕ್ಕೆ ಹೆಚ್ಚು ಅನುಕೂಲವಾಗಿದೆ.

ಶ್ರೀ ಇ. ನಾರಾಯಣಗೌಡ.—ಸ್ವಾಮಿ, ಬ್ಯಾಂಕ್‌ನವರು ತಮ್ಮ ಸದಸ್ಯರುಗಳಿಂದ ಶೇಕಡ 90 ರಷ್ಟು ವಸೂಲ್ಮಾಡದಿದ್ದರೆ ಸಾಲದ ಸೌಲಭ್ಯವನ್ನು ಮುಂಜೂರು ಮಾಡುವುದಿಲ್ಲ. ಇದರಿಂದ ಹೊಸದಾಗಿ ಅನುಕೂಲ ಪಡೆಯುತಕ್ಕಂಥ ರೈತರಿಗೆ ತೊಂದರೆಯಾಗುತ್ತದೆ. ಸರ್ಕಾರದವರು ಈ ಧೋರಣೆಯನ್ನು ಬಿಟ್ಟು ಅಭಾವ ಪರಿಸ್ಥಿತಿಯುಲ್ಲಿರುವ ಪ್ರದೇಶಕ್ಕೆ ಅಲ್ಲಿ 50—60 ಪರ್ಸೆಂಟು ವಸೂಲ್ಮಾಡಿದ್ದರೆ ಸಾಲವನ್ನು ಹೊಸದಾಗಿ ಮುಂಜೂರ್ಮಾಡುವುದಕ್ಕೆ ವಿಚಾರ ಮಾಡುತ್ತೀರಾ ?

ಶ್ರೀ ಬಿ. ಎಲ್. ಗೌಡ.—ಅಭಾವ ಪರಿಸ್ಥಿತಿ ಎನ್ನುವುದು ಡೆವಲಪ್‌ಮೆಂಟ್ ಲೋನ್‌ಗೆ ಅಪ್ಲೈ ಆಗುವುದಿಲ್ಲ ಅಲ್ಲಿನ ಅಧಿಕಾರಿಗಳು ಮತ್ತು ಅಧಿಕಾರ ವರ್ಗದವರು ವಸೂಲ್ಮಾಡಿದರೆ ಸಾಧ್ಯವಾಗುತ್ತದೆ. ಬಹುಶಃ ಅವರ ತಾಲ್ಲೂಕಿನಲ್ಲಿ ವಸೂಲ್ಮಾಡಿರುವುದು ಅಷ್ಟು ಚೆನ್ನಾಗಿಲ್ಲ. ಮಧುಗಿರಿ ಮತ್ತು ಕೊರಟಗೆರೆ ತಾಲ್ಲೂಕಿನಲ್ಲಿ ತಕ್ಕ ಕಾರ್ಯಕ್ರಮ ತೆಗೆದುಕೊಂಡು ಚೆನ್ನಾಗಿ ವಸೂಲ್ಮಾಡಿದ್ದಾರೆ. ಆದುದರಿಂದ ಚೆನ್ನಾಗಿ ವಸೂಲಾಗದೇ ಇರುವ ಕಡೆ ಸಾಲವನ್ನು ಮುಂಜೂರ್ಮಾಡುವುದಕ್ಕೆ ಸಾಧ್ಯವಿಲ್ಲ.

Mangalore Fertiliser Factory

395. Sri C. K. RAJAIAH SHETTY (Chikkanayakanahally).—

Will the Minister for Industries, Information and Publicity be pleased to state :—

(*a*) the proposed cost of Mangalore Fertiliser Factory ;

(*b*) whether Government has finally concluded agreement with any foreign collaboration for establishing the factory ;

(*c*) whether any advance has been paid to any private firm as Government share or otherwise ;

(*d*) if so, how much ?

†Sri Y. RAMAKRISHNA (Minister for Health).—Kyasanur Forest Disease is a Virus Disease restricted to a small part of Sagar and Sorab Taluks of Shimoga District. The total area in which human cases have occurred does not exceed 600 Sq. Miles. Even in this area, it is concentrated in a few localities. The population of the entire affected area does not exceed 20,000. This disease also occurred in three villages of Shikaripur Taluk during the year 1968; there were three attacks but no deaths. No cases have been reported in this Taluk since August 1968.

The disease was first detected in 1957 when an abnormal monkey mortality was reported in the Forest Area of Sagar and Sorab Taluks. Due to the frequent occupational contact of the villagers with the forest area, the disease is found to be transmitted through the bite of Vector ticks that inhabit the forests. The human beings acquire the ticks when they go to the forest.

While no period of the year may be free from the disease, the period January to June (drier months) accounted for most of the cases with peaks in March-April. There have been considerable variations in the number of human cases from year to year.

In addition to monkeys, other smaller animals and birds have been found to harbour the virus and the natural cycle occurs in them and keep up the continuity of infection.

Prevention of tick bites and destruction of ticks in the forest require large scale organisations and repeated insecticide applications. Village cattle have to be kept free of the ticks to keep the human infection under control.

Treatment of human cases is at present only symptomatic as no specific drug to destroy the virus in the human cases has been discovered. Attempts are being made to discover a suitable drug.

There has been an increased incidence of human cases of Kyasanur Forest Disease in Sagar and Sorab areas of Shimoga District during the month of December 1968 and January 1969 and February 1969 (up to 15-2-1969) compared to the same period of the previous year, *viz.*, December 1967, and January and February 1968 as can be seen from the enclosed statement. In the previous year, during the period December 1967 to February 1968, there were 80 human cases with one death and 60 monkey deaths, but in the current year from 1st December 1968 to 15th February 1969 there have been 197 human cases with 8 deaths and 68 monkey deaths. Out of the 197 cases, 93 cases were found positive for Kyasanur Forest Disease Virus on

(SRI Y. RAMAKRISHNA)

Laboratory examination. A larger number of villages have been affected this year but most of them are within the previously known infected zone.

The following measures have been undertaken for control of spread of the disease and treatment of human cases.

(1) Notification of the infected areas in Sagar and Sorab Taluks and keeping the villagers informed about monkey deaths and dissuading the villagers from entering such infected areas.

(2) Transportation and hospitalisation of human cases and early treatment in the nearest dispensary or hospital are undertaken. Necessary drugs like glucose, saline, anti coagulents and A.P.C. have been supplied to the dispensaries and hospitals in the area for symptomatic treatment of cases. There are three hospitals and 8 dispensaries in Sagar Taluk and 6 dispensaries in Sorab Taluk for treatment of Kyasanur Forest disease cases in addition to other diseases. In the hospitals and Primary Health Centres there are 1 0 beds available for treatment of Kyasanur Forest Disease cases as well as other diseases, preference being given to Kyasanur Forest Disease cases. During January and February 1969, 81 cases of Kyasanur Forest Disease were admitted and 24 of them have been discharged so far up to 15th February 1969. The remaining cases are undergoing treatment.

2-00 P.M.

An experimental study for tick control with BHC was undertaken during the period January to May 1968 and this has shown good results. Orders will be issued for sanctioning a scheme to take up large scale experiments for control of ticks in 1969. The Director, Virus Research Centre, Poona has opined that it is adviasable to take up these measures from 1st December 1969 onwards in order to keep the ticks under control and thus prevent occurrence of human cases in the next season. He has also stated that it is rather too late to take up tick control measure now as it will not yield good results and as the prevalance of Nymphal stage of the ticks has already reached its peak.

With regard to prevention of occurrence of human cases a killed vaccine prepared by Haffkine Institute, Bombay, was tried last year and did not yield good results as the immunity built up by human being was of a low order. It was not fit for field use. A live vaccine which is under preparation requires elaborate studies and it is hoped that a vaccine considered safe for human use may be made available by the end of 1969 by the Virus Research Centre, Poona. This will be a programme to vaccinate 10,000 persons in December 1969 and January 1970.

ಶ್ರೀ ಎಸ್. ಬಂಗಾರಪ್ಪ. - ಅಧ್ಯಕ್ಷರೇ, ನನಗೆ ಈಗತಾನೆ ಮಂತ್ರಿಗಳು ಮಾಡಿದ ಸ್ಟೇಟ್‌ಮೆಂಟಿನ ಬಗ್ಗೆ ಒಂದು ವಿವರಣೆ ಬೇಕಾಗಿದೆ—ಅದೇನೆಂದರೆ ಈಗ ತರೆಹೋರಿರತಕ್ಕ ಫಾರೆಸ್ಟ್

ರೋಗವನ್ನು ಸಂಪೂರ್ಣವಾಗಿ ಗುಣಪಡಿಸುವುದಕ್ಕೆ ತಕ್ಕ ಔಷಧಿಗಳಿಲ್ಲ ಎಂದು ಹೇಳಿದರು. ಅದಕ್ಕಾಗಿ ಈ ರೋಗದ ಹಾವಳಿಯನ್ನು ತಡೆಗಟ್ಟುವಕ್ಕೆ ಉದ್ದೇಶದಿಂದ ಈ ರೋಗದ ಚಿಕಿತ್ಸೆ ಬೆಡ್ಡುಗಳ ಸಂಖ್ಯೆಯನ್ನು ಇನ್ನೂ ಹಾಸ್ತಿ ಮಾಡಬೇಕು ಎನ್ನುವುದು ಒಂದು ; ಇನ್ನೊಂದು ಗ್ರಾಮಾಂತರ ಪ್ರದೇಶದಲ್ಲಿ ಹೆಚ್ಚಿಗೆ ಬೆಡ್‌ಗಳನ್ನು ಒದಗಿಸುವುದಕ್ಕೆ ಏರ್ಪಾಡನ್ನು ಮಾಡುವುದು— ಈ ಎರಡಕ್ಕೂ ಸರ್ಕಾರದವರು ಸೂಕ್ತ ಕಾರ್ಯಕ್ರಮ ಕೈಗೊಳ್ಳುತ್ತಾರೆಯೇ ಎಂದು ಕೇಳುವುದಕ್ಕೆ ಇಚ್ಛೆ ಪಡುತ್ತೇನೆ.

Sri Y. RAMAKRISHNA.—Necessary arrangements have already been made and if anything more is required we are prepared to supply.

Budget Estimates for 1969-70

(General Discussion)

(Debate Continued)

†ಶ್ರೀ ಬಾಪೂಗೌಡ (ಶಹಪೂರ್).—ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಹಣಕಾಸಿನ ಸಚಿವರು ಈ ಸಭೆಗೆ ಒಪ್ಪಿಸಿರತಕ್ಕ ಆಯವ್ಯಯ ಪಟ್ಟಿಯ ಬಗ್ಗೆ ನಾನು ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುವುದಕ್ಕೆ ಇಚ್ಛೆ ಪಡುತ್ತೇನೆ.

1969-70ರ ಈ ಆಯವ್ಯಯ ಪಟ್ಟಿಯು ಒಂದು ಖೋತಾಪಟ್ಟಿಯಾಗಿದ್ದರೂ ಇದು ತೆರಿಗೆರಹಿತ ವಾದಂಥ ಪಟ್ಟಿಯಾಗಿದೆ. ಈ ಪಟ್ಟಿಯನ್ನು ನಾವು 1965 ರಿಂದ 1969ರ ವರೆಗೂ ಅವಲೋಕನ ಮಾಡಿದರೆ ರಾಜ್ಯದ ಹಣಕಾಸಿನ ಪರಿಸ್ಥಿತಿ ಬಹಳ ಮಟ್ಟಿಗೆ ಸುಧಾರಿಸಿರುವಂತೆ ಕಂಡುಬರುತ್ತದೆ. 1965 ರಲ್ಲಿ 170 ಕೋಟಿ 40 ಲಕ್ಷ ಇದ್ದದ್ದು 1969ಕ್ಕೆ ಇದು 194 ಕೋಟಿಗೇರಿದೆ ಎಂದರೆ ಅದು ತಪ್ಪಾಗುವುದಿಲ್ಲ. ಈ ವರ್ಷಕ್ಕೆ ಎರಡೂ ಬಾಬುಗಳಿಂದಲೂ ಸರ್ಕಾರಕ್ಕೆ ಬರತಕ್ಕ ವರಮಾನ 213 ಕೋಟಿ ಎಂದು ತೋರಿಸಿದ್ದಾರೆ. ಅಂದರೆ 1965 ರಿಂದ 1969 ರವರೆಗೆ ಸುಮಾರು 70 ಕೋಟಿ ರೂಪಾಯಿಗಳ ಹೆಚ್ಚು ಆದಾಯವನ್ನು ನಾವು ಇಂದು ಕಾಣುತ್ತಿದ್ದೇವೆ. ಆದಾಗ್ಯೂ ಏರುತ್ತಿರುವ ಜನಸಂಖ್ಯೆಯ ದೃಷ್ಟಿಯಿಂದ ಈ ಸಮಸ್ಯೆಯನ್ನು ನೋಡಿದರೆ ನಾವು ಇನ್ನೂ ನಮ್ಮ ಆರ್ಥಿಕ ಅಥವಾ ಸಾಮಾಜಿಕ ಸಮಸ್ಯೆಗಳನ್ನು ಸಂಪೂರ್ಣವಾಗಿ ಬಗೆಹರಿಸಿಕೊಂಡಹಾಗೆ ಕಾಣುತ್ತಿಲ್ಲ. ಆದ್ದರಿಂದ ನಮಗೆ ಇನ್ನೂ ಹೆಚ್ಚಿನ ಆದಾಯದ ಅಗತ್ಯವಿದೆ ಎಂಬುದು ಒಪ್ಪತಕ್ಕ ವಿಷಯ. ಆದರೆ ನಮ್ಮ ಸರ್ಕಾರದವರು 1966-67 ರಲ್ಲಿ ಪಂಚವಾರ್ಷಿಕ ಯೋಜನೆಗೆ ಕೊಟ್ಟ ನಿಗಾವನ್ನು ಆ ಹಿಂದಿನ 1-2 ಮತ್ತು 3 ನೆ ಪಂಚವಾರ್ಷಿಕ ಯೋಜನೆಗಳಿಗೆ ಉಳಿದ ವರ್ಷಗಳಲ್ಲಿ ಕೊಡಲಿಲ್ಲ. ಅದರಿಂದ ನಮ್ಮ ವರ್ತಕತನದ ಆರ್ಥಿಕ ಪರಿಸ್ಥಿತಿ ಸ್ವಲ್ಪ ಕುಂಠಿತವಾಗಿದೆ. ರಾಜ್ಯ ಸರ್ಕಾರದವರು ಒಕ್ಕಲು ತನಕ್ಕೆ ಹೆಚ್ಚಿನ ಮಹತ್ವವನ್ನು ಕೊಟ್ಟು ಅದಷ್ಟುಮಟ್ಟಿಗೆ ಹಳ್ಳಿಗಾಡಿನಲ್ಲಿರತಕ್ಕ ರೈತನ ಆರ್ಥಿಕ ಮಟ್ಟವನ್ನು ಅಭಿವೃದ್ಧಿಪಡಿಸಲು ಹೇರಳವಾಗಿ ಹಣವನ್ನು ಕೊಡುತ್ತಿದ್ದಾರೆ. ಸುಮಾರು 3-4 ವರ್ಷಗಳಲ್ಲಿ ನಮ್ಮ ರಾಜ್ಯದಲ್ಲಿ ನೀರಾವರಿ ಪರ್ಸೆಂಟೇಜನ್ನು ಹೆಚ್ಚುಮಾಡತಕ್ಕ ಪ್ರಯತ್ನಮಾಡಿದ್ದರೂ ಕೂಡ ಅದು ತೃಪ್ತಿಕರವಾಗಿಲ್ಲ. 1960 ರಿಂದ ಸಣ್ಣ ನೀರಾವರಿ ಯೋಜನೆ ಮತ್ತು ದೊಡ್ಡ ನೀರಾವರಿ ಯೋಜನೆ ಮತ್ತು ಬಾವಿಗಳ ಪಂಪುಸೆಟ್ಟುಗಳನ್ನು ಹಂಚುವಿಕೆ—ಈ ಕಾಮಗಾರಿಗಳನ್ನು ಕೈಗೊಂಡರೂ ಕೂಡ ಕೇವಲ ಸೇಕಡ 10 ಕ್ಕೆ ಇವತ್ತು ಮುಟ್ಟಿದ್ದೇವೆ. ಕೇವಲ 20 ಲಕ್ಷ ಎಕರೆ ನೀರಾವರಿಗೆ ಬಂದು ಮುಟ್ಟಿದ್ದೇವೆ. ಆದರೂ ತೃಪ್ತಿಕರವಾಗಿಲ್ಲ, ಬಾವಿಗಳ ಮುಖಾಂತರ ಹಾಗೂ ಪಂಪುಸೆಟ್ಟುಗಳ ಮುಖಾಂತರ ಸಣ್ಣ ನೀರಾವರಿ ಯೋಜನೆಗಳನ್ನು ಮೈಸೂರು ರಾಜ್ಯದಲ್ಲಿ ಕೈಕೊಂಡರೂ ಕೂಡ ತ್ವರಿತ ರೀತಿಯಿಂದ ಒಕ್ಕಲಿಗರಿಗೆ ಅದರ ಪ್ರತಿಫಲ ತೀವ್ರವಾಗಿ ಮುಟ್ಟಿಲ್ಲ.

ಇನ್ನೊಂದು ವಿಷಯ. ಈ ದಿವಸ ಯಾವ ಒಕ್ಕಲಿಗ ತನ್ನ ಭೂಮಿಯಲ್ಲಿ ಬಾವಿ ಇದೆ, ಯಾವನಿಗೆ 4-5 ಎಕರೆ ಭೂಮಿ ಇದೆ, ಅವನಿಗೆ ಬೇಕಾಗಿರತಕ್ಕ ಪಂಪುಸೆಟ್ಟು ಮತ್ತು ಬೇಕಾದಂಥ ಅನುಕೂಲತೆಗಳನ್ನು ಅವನು ಕೇಳಿದಾಕ್ಷಣ ತೀವ್ರಗತಿಯಲ್ಲಿ ಕೊಡತಕ್ಕ ವ್ಯವಸ್ಥೆಯನ್ನು ಸರ್ಕಾರದವರು ಮಾಡಿದ್ದಾರೆ. ಒಂದು ವೇಳೆ ನಾಲೆಗಳ ಅನುಕೂಲ ಇದ್ದರೂ ಕೂಡ ಅಲ್ಲಿ ನಾಲೆಯ ದಂಡೆಯಲ್ಲಿರತಕ್ಕ ಒಕ್ಕಲಿಗ ತನ್ನ ಭೂಮಿಯಲ್ಲಿ ಬಾವಿ ಇದೆ, ತನಗೆ ಪಂಪುಸೆಟ್ಟು ಬೇಕೆಂದು ಹೇಳಿದ್ದ

(ಶ್ರೀ ಬಾಪೂಗೌಡ)

ಪಂಪುಸೆಟ್ಟುಗಳನ್ನು ನಿರ್ದಿಷ್ಟವಾಗಿ ಕೊಟ್ಟು ಅವನಿಗೆ ಬೇಕಾದ ಎಲ್ಲ ಸೌಲಭ್ಯಗಳನ್ನು ಕೊಡಿಸಿ ಆ ಒಕ್ಕಲಿಗನಿಗೆ ನೀರನ್ನು ತ್ವರಿತವಾಗಿ ಒದಗಿಸುವ ಏರ್ಪಾಡು ಮಾಡಿದ್ದಾರೆ. ಸೆಂಟ್ರಲ್ ಕೋ-ಆಪರೇಟಿವ್ ಬ್ಯಾಂಕ್ ಮುಖಾಂತರ ಪಂಪುಸೆಟ್ಟುಗಳನ್ನು ಯಾವ ರೀತಿಯಾಗಿ ಪಡೆಯಬೇಕೆಂಬ ಜ್ಞಾನ ಅಷ್ಟಾಗಿ ರೈತರಿಗೆ ಇಲ್ಲ. ಅವನ್ನು ತೀವ್ರಗತಿಯಿಂದ ಪಡೆಯುವ ಶಕ್ತಿ ಅನೇಕ ರೈತರಿಗೆ ಇಲ್ಲ. ಇಂತಹ ಪರಿಸ್ಥಿತಿಯಲ್ಲಿ ಅದಷ್ಟುಮಟ್ಟಿಗೆ ಸರ್ಕಾರ ಹೆಚ್ಚು ಹಣ ಕೊಡಬೇಕು. ಡೀಸಲ್ ಇಂಜಿನ್ನಿಗೆ ಬೇಕಾದಷ್ಟು ಹಣವಿದೆ. ಆದರೂ ಕೂಡ ಅದನ್ನು ಪಡೆಯುವುದಕ್ಕೆ ಮಾಡಿರುವ ಪ್ರೊಸೀಜರ್ ಹೆಚ್ಚು ಕಂಬರ್‌ಸಂ ಆಗಿರುವುದರಿಂದ ರೈತ ಅದನ್ನು ಜಾಗ್ರತೆ ಪಡೆಯುವುದಕ್ಕಾಗುವುದಿಲ್ಲ. ಅದಷ್ಟುಮಟ್ಟಿಗೆ ನೀರಾವರಿ ಪ್ರಶ್ನೆ ಬಂದಾಗ ಎಲ್ಲ ನಾಲೆಗಳು, ಬಾವಿಗಳು ಇವೆಯೋ ಅಲ್ಲಿ ಬೇಕಾದಷ್ಟು ಪಂಪುಸೆಟ್ಟುಗಳನ್ನು ರೈತರಿಗೆ ಜಾಗ್ರತೆಯಾಗಿ ಒದಗಿಸಿಕೊಡಬೇಕು. ಆಗ ನಾವು ಈ ಬಾಬಿಗೆ ಒದಗಿಸಿರತಕ್ಕ ಹಣ ಸದುಪಯೋಗವಾಗಿ ಆಹಾರ ಯೋಜನೆಗಳು ಸಫಲವಾಗುತ್ತವೆ. ಸುಮ್ಮನೆ ರೈತರಿಗೆ ಬ್ಯಾಂಕಿನ ಮುಖಾಂತರ ಕೊಡುವುದಕ್ಕೆ ಹಣವಿದೆ, ಸಾಕಾದಷ್ಟು ಕರೆಂಟ್, ಪಂಪುಸೆಟ್ಟುಗಳು ಇವೆಯೆಂದು ಹೇಳಿದರೆ ಅದರಿಂದೇನೂ ಆಗುವುದಿಲ್ಲ. ನಾವು ಕೊಟ್ಟ ಹಣ ರೈತನ ಕೈಗೆ ಸೇರಬೇಕು. ಇಲ್ಲದಿದ್ದರೆ ನಾವು ಯಾವ ಒಂದು ದೃಷ್ಟಿಯಿಂದ ರೈತನ ಏಳಿಗೆ ಮಾಡಬೇಕೆಂದು ನಿಂತಿದ್ದೇವೋ ಅದು ಸಫಲವಾಗುವುದಿಲ್ಲ. ಆದರೂ ಕೂಡ ಸರ್ಕಾರದವರು ತೀವ್ರಗತಿಯಿಂದ ರೈತರಿಗೆ ಹಣ ಕೊಡುವ ವ್ಯವಸ್ಥೆ ಮಾಡಬೇಕು. ರಾಜ್ಯದಲ್ಲಿ ಸುಮಾರು 400 ಕೋಟಿ ರೂಪಾಯಿಯ ಯೋಜನೆಯನ್ನು ಕೈಗೊಳ್ಳಬೇಕೆಂದಿದ್ದಾರೆ. ಕೃಷ್ಣಾ ಯೋಜನೆ, ಘಟಪ್ರಭಾ ಯೋಜನೆ ಎಲ್ಲಾ ಇದೆ. ಆದರೆ ನಮ್ಮ ದುರ್ದೈವದಿಂದ ನಮ್ಮ ರಾಜ್ಯ ಸರ್ಕಾರದವರು ಯಾವ ರೀತಿಯಿಂದ ಇದನ್ನೆಲ್ಲಾ ಸಂಪೂರ್ಣ ಮಾಡಿ ರಾಜ್ಯದ ಆರ್ಥಿಕ ಮಟ್ಟವನ್ನು ಹೆಚ್ಚು ಮಾಡಬೇಕೆಂದು ಒಂದು ಪಾಲಿಸಿ ಇಟ್ಟುಕೊಂಡಿದ್ದಾರೋ ಆ ರೀತಿಯಲ್ಲಿ ಸಾಗದೆ, ಈ ವರ್ಷ ಕೇವಲ 12 ಕೋಟಿ ರೂಪಾಯಿ ಇಟ್ಟಿದ್ದಾರೆ. ಹೀಗೆ ಪ್ರತಿ ವರ್ಷ 12 ಕೋಟಿ ರೂಪಾಯಿಯನ್ನು ಒದಗಿಸುತ್ತಾ ಹೋದರೆ, ಈ ಯೋಜನೆ ಎಲ್ಲಾ ಮುಗಿಸಲು 40–50 ವರ್ಷ ಬೇಕಾಗುತ್ತದೆ. ಈ 40 ವರ್ಷದಲ್ಲಿ ರಾಜ್ಯಕ್ಕೆ ಬೇಕಾದಂತಹ ಆಹಾರ, ಈ ನೀರಾವರಿಗೆ ಬೇಕಾದಂತಹ ಹಣ ಎಲ್ಲಾ ಸುಮಾರು 3-4 ಪಟ್ಟು ಹೆಚ್ಚು ಆಗಿ, ಹೆಚ್ಚು ಭಾರ ಸರ್ಕಾರಕ್ಕೆ ಬೀಳುತ್ತದೆ. ವರ್ಷಕ್ಕೆ ಸುಮಾರು 12 ಕೋಟಿ ರೂಪಾಯಿ ಇಟ್ಟರೆ, ಇದನ್ನು ಮಾಡುವುದಕ್ಕಿಂತ, ಕೈಬಿಡುವುದು ಒಳ್ಳೆಯದು ಎಂದು ಹೇಳುತ್ತೇನೆ. ಕೃಷ್ಣಾ ಮೇಲ್ದಂಡೆ ಯೋಜನೆ ಹೈದರಾಬಾದಿನ ಯೋಜನೆಯಾಗಿರುವಾಗ ಕೇವಲ 30 ಕೋಟಿ ರೂಪಾಯಿಯಾಗಿತ್ತು. ಇಂದಿನ ದಿವಸ ಅದರ ಮೊದಲ ಹಂತಕ್ಕೆ ಸುಮಾರು 75 ಕೋಟಿ ರೂಪಾಯಿ ಬೇಕಾಗುತ್ತದೆ. ಆದರೂ ಈ ವರ್ಷದ ಒಂದು ಬಜೆಟ್ಟನ್ನು ನೋಡಿದರೆ, ಕೇವಲ ಎರಡು ಕೋಟಿ ರೂಪಾಯಿ ಇಟ್ಟಿದ್ದಾರೆ. ಅದರಲ್ಲಿ 25 ಲಕ್ಷ ರೂಪಾಯಿ ಸಿಬ್ಬಂದಿಗೆ ಹೋಗುತ್ತದೆ, 22 ಲಕ್ಷ ಟೂಲ್ಸ್ ಅಂಡ್ ಪ್ಲಾಂಟ್ಸ್‌ಗೆ ಹೋಗುತ್ತದೆ, ಮತ್ತು ಉಳಿದಂತದ್ದು ಅರ್ದನ್ ಡ್ಯಾಮ್‌ಗೆ ಹೋಗುತ್ತದೆ. ಅದಕ್ಕೆ ಟೆಂಡರ್ ಕರೆದಿದ್ದಾರೆ. ಒಂದು ಕೋಟಿ 60 ಲಕ್ಷ ಬೇಕಾಗುತ್ತದೆ. ಈ ಕೃಷ್ಣಾ ಮೇಲ್ದಂಡೆ ಯೋಜನೆ ಏನಿದೆ, ಇದಕ್ಕೆ ಎರಡು ಕೋಟಿ ಒದಗಿಸಿದ್ದು ಏನೂ ಸಾಲದು. ಈಗ ಮೇಲ್ಗಡೆ ಕೊಯ್ನಾ ಮಹಾರಾಷ್ಟ್ರದವರದ್ದು. ಕೆಳಗಡೆ ನಾಗಾರ್ಜುನ, ಆಂಧ್ರದವರದ್ದು ಇದೆ. ನಾಗಾರ್ಜುನ ಸಾಗರದಕ್ಕೆ ಒಂದು ಕೋಟಿ ರೂಪಾಯಿ ಕೇಂದ್ರ ಸರ್ಕಾರದವರು ಕೊಡುತ್ತಿದ್ದಾರೆ. ನಮ್ಮ ರಾಜ್ಯಕ್ಕೆ, ರಾಜ್ಯದವರು ಒತ್ತಾಯ ಮಾಡಿದರೂ ಕೂಡ ಕೇಂದ್ರ ಸರ್ಕಾರದಿಂದ ಒಂದು ಪೈಸೆ ಕೂಡ ತೆಗೆದುಕೊಳ್ಳಲು ಸಾಮರ್ಥ್ಯ ಬಂದಿಲ್ಲ. ಈ ರೀತಿ ಕೇಂದ್ರ ಸರ್ಕಾರದ ನೀತಿ, ವರ್ತನೆ ನಮ್ಮ ರಾಜ್ಯದ ಪರವಾಗಿ ಏನೂ ಸಮಾಧಾನಕರವಾಗಿಲ್ಲ. ಅದರಲ್ಲೂ ಮೇಜರ್ ಇರಿಗೇಶನ್ ಸಂಬಂಧವಾಗಿ ಏನೂ ಇಲ್ಲ, ಈ ರೀತಿ ಅದಕ್ಕೆ ಎರಡು ಕೋಟಿ ರೂಪಾಯಿ ಕೊಡತಕ್ಕದ್ದು ಸರಿಯಲ್ಲವೆಂತು, ಇದರಿಂದ 40-50 ವರ್ಷಗಳ ಕಾಲ ಹೋಗುತ್ತದೆ. ಇದರಿಂದ ಉತ್ಪಾದಕರಲ್ಲರತಕ್ಕಂತಹ ರೈತರಿಗೆ ಅನುಕೂಲವಾಗುತ್ತದೆ ಮತ್ತು ಇದರಿಂದ ನಮ್ಮ ಆಹಾರ ಸಮಸ್ಯೆಗೆ ಒಂದು ರೀತಿಯ ಹಾನಿಯಾಗುತ್ತದೆ. ಇದನ್ನು ವರ್ಲ್ಡ್ ಬ್ಯಾಂಕಿನವರು ಕೂಡ ಬಂದು ನೋಡಿದ್ದಾರೆ. ಇದು ಚೆನ್ನಾಗಿದೆ, ಒಳ್ಳೆಯ ಭೂಮಿ ಇದೆ, ಒಳ್ಳೇ ಫಲಬರುತ್ತದೆ ಎಂದು ಎಲ್ಲಾ ಹೇಳಿದ್ದಾರೆ. ಇಂಥ ಪರಿಸ್ಥಿತಿಯಲ್ಲಿ ಸರ್ಕಾರದವರು ಕೃಷ್ಣಾ ಮೇಲ್ದಂಡೆ ಯೋಜನೆಗೆ ಅದಷ್ಟು ಮಟ್ಟಿಗೆ ಹೆಚ್ಚಿನ ಪ್ರಯತ್ನ ಮಾಡಿ, ಸರ್ಕಾರದವರಲ್ಲಿ ಶಕ್ತಿ ಇಲ್ಲದಿದ್ದರೂ, ವರ್ಲ್ಡ್ ಬ್ಯಾಂಕ್ ಮತ್ತು ಇನ್ನಿತರ ಸೋರ್ಸ್‌ನಿಂದ ಹಣವನ್ನು ಪಡೆಯುವುದಕ್ಕೆ ಪ್ರಯತ್ನ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಕೃಷ್ಣಾ ಮೇಲ್ದಂಡೆಯ ಯೋಜನೆಗೆ ಅರ್ಡನ್ ಡ್ಯಾಮ್ ಮತ್ತು ಮೇಸನರಿ ಡ್ಯಾಮ್ ಕಟ್ಟುವುದಕ್ಕೆ, 17 ಮೈಲಿ ಕೆನಾಲ್ ನಿರ್ಮಾಣಕ್ಕೆ ಟೆಂಡರ್ ಕರೆದಿದ್ದಾರೆ. ಅರ್ಡನ್ ಡ್ಯಾಮ್ ಮತ್ತು ಕೆನಾಲ್ ಕೆಲಸವನ್ನು ತೆಗೆದುಕೊಳ್ಳುವುದಕ್ಕೆ ಡಿಸಿಷನ್ ಕೊಟ್ಟಿಲ್ಲ. ಅರ್ಡನ್ ಡ್ಯಾಮ್ ಮತ್ತು ಕೆನಾಲ್‌ಗೆ 1970 ನೆಯ ಇಸವಿಯ ಜೇಳಿಗೆ 7 ಕೋಟಿ ರೂಪಾಯಿಗಳು ಬೇಕಾಗುತ್ತದೆ. ಕೃಷ್ಣಾ ಮೇಲ್ದಂಡೆಯ ಯೋಜನೆ ಮೈಸೂರು ರಾಜ್ಯದ ಆರ್ಥಿಕ ಜೀವಾಳವಾಗಿದೆ. ಆದ್ದರಿಂದ ನಮ್ಮ ಸರ್ಕಾರದವರು ಆದಷ್ಟು ಬೇಗ ಕೇಂದ್ರ ಸರ್ಕಾರದವರ ಮೇಲೆ ಒತ್ತಾಯವನ್ನು ಹಾಕಿ ವರ್ಲ್ಡ್ ಬ್ಯಾಂಕಿನಿಂದ ಹಣ ಸಹಾಯವನ್ನು ಪಡೆಯುವುದಕ್ಕೆ ಪ್ರಯತ್ನ ಮಾಡಬೇಕು. ಈ ಕೃಷ್ಣಾ ಮೇಲ್ದಂಡೆ ಯೋಜನೆಯಿಂದ ಹೈದರಾಬಾದ್ ಕರ್ನಾಟಕ ಮತ್ತು ಬೊಂಬಾಯಿ ಕರ್ನಾಟಕದ ಕೆಲವು ಭಾಗಕ್ಕೆ ಅನುಕೂಲವಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳಿಗೆ ಕಂಬದಕಡ, ಹಾರಂಗಿ ಮೊದರಾದ ಪ್ರಾಜೆಕ್ಟುಗಳು ಏನಿವೆ ಅವುಗಳಿಗೆ ಸಂಬಂಧಪಟ್ಟ ಕೆಲಸಗಳನ್ನು ತೆಗೆದುಕೊಳ್ಳದೆ ಕೃಷ್ಣಾ ಮೇಲ್ದಂಡೆಯ ಯೋಜನೆಯನ್ನು ತೆಗೆದುಕೊಂಡರೆ ಕೆಲವು ಮಾನ್ಯ ಸದಸ್ಯರು ತಪ್ಪು ತಿಳಿದುಕೊಂಡಾರು ಎನ್ನುವ ಭಯ ಇದೆ. ಆದ್ದರಿಂದ ಮಾನ್ಯ ಮುಖ್ಯ ಮಂತ್ರಿಗಳು ಆ ರೀತಿಯ ಒಂದು ನಿರ್ಣಯ ಇಟ್ಟುಕೊಂಡು ಈ ಕೆಲಸವನ್ನು ಮಾಡದೆ ಇದ್ದರೆ ತಪ್ಪಾಗುತ್ತದೆ. ಅಂಥಾ ನಿರ್ಣಯವನ್ನು ಮಾನ್ಯ ಮುಖ್ಯಮಂತ್ರಿಗಳು ಇಟ್ಟುಕೊಳ್ಳಬಾರದು. ಕೇಂದ್ರ ಸರ್ಕಾರದವರ ಮೇಲೆ ಒತ್ತಾಯವನ್ನು ಹಾಕಿ ವರ್ಲ್ಡ್ ಬ್ಯಾಂಕಿನಿಂದಲೋ ಅಥವಾ ಎಲ್.ಐ.ಸಿ.ಯಿಂದಲೋ ಹಣವನ್ನು ಪಡೆದು ಈ ಒಂದು ಯೋಜನೆಯನ್ನು ಪೂರ್ಣ ಮಾಡುವುದಕ್ಕೆ ಪ್ರಯತ್ನ ಮಾಡಬೇಕು ಎಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಈ ಸದನದಲ್ಲಿ ರಾಜ್ಯದ ಅರ್ಥ ಸಚಿವರು ಮಂಡಿಸಿರತಕ್ಕ ಬಡ್ಜೆಟ್ ಭಾಷಣದ ಬಗ್ಗೆ ನಾನು ನಾಲ್ಕು ಮಾತುಗಳನ್ನು ಹೇಳುವುದಕ್ಕೆ ಆಶಿಪಡುತ್ತೇನೆ. ಶ್ರೀಮಾನ್ ಫೋರ್ಜಡೆಯವರು ಮಾತನಾಡುತ್ತಾ, ಬಡ್ಜೆಟ್ಟನ್ನು ತಯಾರು ಮಾಡತಕ್ಕ ಪದ್ಧತಿ, ಮಂತ್ರಿಗಳ ವಿಷಯ, ಹಾಗೂ ರಾಜ್ಯ ಸರ್ಕಾರದ ವಿಷಯ ಇವುಗಳನ್ನು ಪ್ರಸ್ತಾಪ ಮಾಡುತ್ತಾ, ಒಂದು ವಿಷಯವನ್ನು ಹೇಳಿದರು. ಅದನ್ನು ನಾನು ಒಪ್ಪಲಿಲ್ಲ, ಅದನ್ನು ಒಪ್ಪುವುದಕ್ಕೆ ಮನಸ್ಸು ಬರುತ್ತಿಲ್ಲ. ಏತಕ್ಕೆಂದರೆ ಶ್ರೀಮಾನ್ ಫೋರ್ಜಡೆಯವರು ಹೇಳಿದರು ರಾಜ್ಯ ಸರ್ಕಾರಕ್ಕೆ ಆದಾಯ ಎಷ್ಟು ಇದೆ, ಆ ಆದಾಯದ ಆಧಾರದ ಮೇಲೆ ಬಡ್ಜೆಟ್ ತಯಾರು ಮಾಡಬೇಕೇ ವಿನಾ, ಖೋತಾ ಇರತಕ್ಕ ಬಡ್ಜೆಟ್ಟನ್ನು ತಯಾರು ಮಾಡಿ ಕೇಂದ್ರ ಸರ್ಕಾರದಿಂದ ಇಷ್ಟು ಕೋಟಿ ರೂಪಾಯಿಗಳು ಬರಬಹುದು, ಮತ್ತು ನಮ್ಮ ರಾಜ್ಯದ ಸಂಪನ್ಮೂಲಗಳಿಂದ ಇಷ್ಟು ಕೋಟಿ ರೂಪಾಯಿಗಳು ಬರಬಹುದು ಎನ್ನುವ ಆಧಾರದ ಮೇಲೆ ನಾವು ಬಡ್ಜೆಟ್ಟನ್ನು ತಯಾರು ಮಾಡಬಾರದು ಎನ್ನುವ ಮಾತನ್ನು ಹೇಳಿದರು. ಅದನ್ನು ನಾನು ಒಪ್ಪುವುದಕ್ಕಾಗುವುದಿಲ್ಲ. ಏಕೆಂದರೆ ರಾಜ್ಯಸರ್ಕಾರವಾಗಲೀ, ಕೇಂದ್ರಸರ್ಕಾರವಾಗಲೀ, ತಮಗಿರತಕ್ಕಂಥ ಸಂಪನ್ಮೂಲಗಳು ಬರತಕ್ಕಂಥ ಆದಾಯ ನೋಡಿಕೊಂಡು ಬಡ್ಜೆಟ್ ತಯಾರು ಮಾಡುವುದಾದರೆ ನಮ್ಮ ಪ್ರಗತಿ ಕುಂಠಿತವಾಗುತ್ತದೆ. ಏಕೆಂದರೆ ಕೇಂದ್ರಸರ್ಕಾರದ ಮತ್ತು ರಾಜ್ಯಸರ್ಕಾರದ ಆದಾಯಗಳು ಬಹಳ ಕಡಿಮೆ ಇದೆ. ಆದ್ದರಿಂದ ಶ್ರೀಮಾನ್ ಫೋರ್ಜಡೆಯವರು ಹೇಳಿರುವ ಮಾತನ್ನು ನಾನು ಒಪ್ಪುವುದಕ್ಕಾಗುವುದಿಲ್ಲ. ಖೋತಾ ಇರುವ ಬಡ್ಜೆಟ್ ತಯಾರು ಮಾಡಬಾರದೆಂದು ಏನು ಅವರು ಹೇಳಿದ್ದಾರೆ ಆ ಮಾತನ್ನು ನಾನು ಒಪ್ಪುವುದಿಲ್ಲ. ಮಾನ್ಯ ಆರ್ಥಿಕ ಸಚಿವರು ಈ ಸಾಲಿನ ಬಡ್ಜೆಟ್ ತಯಾರು ಮಾಡಿ, ಯಾವ ಯಾವ ಬಾಬುಗಳಿಗೆ ಎಷ್ಟೆಷ್ಟು ಹಣ ಹಂಚಿದ್ದಾರೆಂಬುದನ್ನು ವಿವರವಾಗಿ ಹೇಳಿದ್ದಾರೆ. ಅವರ ಬಡ್ಜೆಟ್‌ನ್ನು ನಾನು ಸಂಪೂರ್ಣವಾಗಿ ಮತ್ತು ಕೂಲಂಕಷವಾಗಿ ಓದಿದ್ದೇನೆ. ಈಗಾಗಲೇ ಅನೇಕ ಮಾನ್ಯ ಸದಸ್ಯರು ವಿದ್ಯಾ ಇಲಾಖೆಯ ಬಗ್ಗೆ, ನೀರಾವರಿಯ ಬಗ್ಗೆ ಹೇಳಿದ್ದಾರೆ. ಆದ್ದರಿಂದ ನಾನು ಆ ವಿಚಾರಗಳನ್ನು ಹೆಚ್ಚು ಹೇಳುವುದಿಲ್ಲ. ರಾಜ್ಯದಲ್ಲಿರುವ ಪ್ರತಿಯೊಂದು ವರ್ಗದವರೂ ಸಹ ಪ್ರಗತಿಯಾಗುವ ರೀತಿಯಲ್ಲಿ ಬಡ್ಜೆಟ್ ತಯಾರು ಮಾಡಿದರೆ ದೇಶಕ್ಕೆ ಒಳ್ಳೆಯದಾಗುತ್ತದೆಯೇ ವಿನಾ ಕೆಲವರಿಗೆ ಮಾತ್ರ ಅನುಕೂಲವಾಗುವಂತೆ ಬಡ್ಜೆಟ್ ತಯಾರು ಮಾಡುವುದರಿಂದ ಏನೂ ಪ್ರಯೋಜನವಾಗುವುದಿಲ್ಲ. ಈ ರೀತಿಯಿಂದ ಕೆಲವರಿಗೆ ಮಾತ್ರ ಅನುಕೂಲವಾಗುವ ರೀತಿ ಬಡ್ಜೆಟ್ ತಯಾರು ಮಾಡುವುದರಿಂದ ನಾನು ಈ ಬಡ್ಜೆಟ್‌ನ್ನು ವಿರೋಧ ಮಾಡಬೇಕಾಗಿದೆ. ಕಾರಣ ಇಷ್ಟೆ, ಅಪ್ಪರ್ ಕೃಷ್ಣಾ ಯೋಜನೆಯನ್ನು, ಕಂಬದಕಡ ಯೋಜನೆಯನ್ನು ಕಾರ್ಯಗತಗೊಳಿಸಲು ಇಷ್ಟು ಕೋಟಿ ರೂಪಾಯಿಗಳನ್ನು ತೆಗೆದಿಟ್ಟಿದ್ದೇವೆಂದು ಹೇಳಿದ್ದಾರೆ. ಈ ದೇಶ ಮನುಷ್ಯನ ದೇಹ ಇದ್ದಂತೆ. ದೇಶದ ಎಲ್ಲಾ ಜನರನ್ನೂ ಒಂದೇ ರೀತಿ ನೋಡಿಕೊಳ್ಳಬೇಕಾಗುತ್ತದೆ. "the haves and have nots are there in our Society". ಕಾಂಗ್ರೆಸ್ ಸರ್ಕಾರಬಂದು 20-21 ವರ್ಷಗಳಾಯಿತು. ಇಷ್ಟು ವರ್ಷಗಳ ಇವರ ಆಡಳಿತದಲ್ಲಿ

(ಶ್ರೀ ಎಸ್. ಬಂಗಾರಪ್ಪ)

ಏನೂ ಇಲ್ಲದಂತಹ ಜನರಿಗೆ ಯಾವ ಒಂದು ಅನುಕೂಲವನ್ನೂ ಸಹ ಮಾಡಿಕೊಟ್ಟಿಲ್ಲ. ದೊಡ್ಡ ದೊಡ್ಡ ಯೋಜನೆಗಳನ್ನು ತಯಾರು ಮಾಡುವ ಬಗ್ಗೆ ನನ್ನ ವಿರೋಧ ಇಲ್ಲ. ದೊಡ್ಡ ದೊಡ್ಡ ಯೋಜನೆಗಳಿಂದ ಆಹಾರದ ಪರಿಸ್ಥಿತಿ ಸುಧಾರಿಸುತ್ತದೆಂದು ನಾನು ತಿಳಿದಿದ್ದೇನೆ. ಆದರೆ ಈ ದೊಡ್ಡ ದೊಡ್ಡ ಯೋಜನೆಗಳಿಂದ ಯಾರಿಗೆ ಅನುಕೂಲವಾಗುತ್ತದೆಂದು ನಾನು ಕೇಳಬೇಕಾಗುತ್ತದೆ. ಜಮೀನು ಇಲ್ಲದ ಜನರು ಲಕ್ಷೋಪಲಕ್ಷ ಸಂಖ್ಯೆಯಲ್ಲಿ ಇದ್ದಾರೆ. ಉದ್ಯೋಗ ಇಲ್ಲದ ನಿರ್ಗತಿಕರು ಬಹಳ ಜನ ಇದ್ದಾರೆ. ಉದ್ಯೋಗ ಇಲ್ಲದೆ ಬೀದಿಯಲ್ಲಿರುವ ಜನರು ಬಹಳ ಇದ್ದಾರೆ. ಯಾರಿಗೋಸ್ಕರ ದೊಡ್ಡ ದೊಡ್ಡ ಯೋಜನೆಗಳನ್ನು ಕೈಗೊಂಡು ಅನುಕೂಲ ಮಾಡಿಕೊಡುತ್ತಿದ್ದೀರೋ ಅದೇ ರೀತಿ ಜಮೀನು ಇಲ್ಲದ ಬೇರೆ ಬೇರೆ ವರ್ಗದ ಜನರಿಗೂ ಸಹ ಅನುಕೂಲ ಮಾಡಿಕೊಡುವುದು ಸರ್ಕಾರದ ಕರ್ತವ್ಯ. ದೊಡ್ಡ ಯೋಜನೆಯ ನೀರಿನಿಂದ ಬೀದಿಯಲ್ಲಿರುವ ಸಾಮಾನ್ಯ ಮನುಷ್ಯನಿಗೆ ಅನುಕೂಲವಾಗುವುದಿಲ್ಲ. ಈ ಬಜೆಟ್‌ನ್ನು ನಾನು ಕೂಲಂಕಷವಾಗಿ ಪರಿಶೀಲನೆ ಮಾಡಿ ನೋಡಿದ್ದೇನೆ. ಸಾಮಾನ್ಯ ವರ್ಗದವರ ಬಗ್ಗೆ ಒಂದು ಮಾತನ್ನೂ ಸಹ ಈ ಕಾಂಗ್ರೆಸ್ ಸರ್ಕಾರದವರು ಹೇಳಿಲ್ಲ.

ಶ್ರೀ ಪಿ. ವೆಂಕಟಗಿರಿಯಪ್ಪ.—ದೊಡ್ಡ ದೊಡ್ಡ ಯೋಜನೆಗಳು ಬೇಡ ಎಂದು ನಿಮ್ಮ ಅರ್ಥವೇ?

ಶ್ರೀ ಎಸ್. ಬಂಗಾರಪ್ಪ.—ದೊಡ್ಡ ದೊಡ್ಡ ಯೋಜನೆಗಳನ್ನು ಸಹ ಕೈಗೊಳ್ಳಬೇಕು. ಆದರೆ ಸಾಮಾನ್ಯ ಮನುಷ್ಯರಿಗೂ ಸಹ ಸಾಕಷ್ಟು ಅನುಕೂಲಗಳನ್ನು ಮಾಡಿಕೊಡಬೇಕು. ಒಬ್ಬ ಸಾಮಾನ್ಯ ಮನುಷ್ಯ ಒಂದು ಮೀಟರ್ ಬಟ್ಟೆ ತೆಗೆದುಕೊಂಡಾಗ ಟ್ಯಾಕ್ಸ್ ಕೊಟ್ಟಿರುತ್ತಾನೆ. ಈ ಟಾಕ್ಸನ್ನು ಕೇವಲ ದೊಡ್ಡ ದೊಡ್ಡ ಯೋಜನೆಗಳಿಗೆ ಖರ್ಚು ಮಾಡುವುದು ಸರಿಯಲ್ಲ. ಹರಿಜನ ಮತ್ತು ಗಿರಿಜನರು ಅಲ್ಲದೆ ಸಾವಿರಾರು ಬಡ ಕುಟುಂಬಗಳು ನಮ್ಮ ರಾಜ್ಯದಲ್ಲಿ ಇವೆ. ಇವರಿಗೆ ವಸತಿ ಸೌಕರ್ಯವನ್ನು ಒದಗಿಸುವುದಕ್ಕಾಗಿ ಎಷ್ಟು ಕೋಟಿ ರೂಪಾಯಿಗಳನ್ನು ತೆಗೆದಿಟ್ಟಿದ್ದಾರೆ ಎಂಬ ವಿಷಯವನ್ನು ಬಜೆಟ್‌ನಲ್ಲಿ ಹೇಳಿದ್ದರೆ ನಾನು ಬಜೆಟ್‌ನ್ನು ಸ್ವಾಗತಿಸುವುದಕ್ಕೆ ಸಿದ್ಧನಾಗಿದ್ದೇನೆ ಎಂದು ಹೇಳಬಹುದಾಗಿತ್ತು. ಇಂತಹ ವಿಷಯದ ಬಗ್ಗೆ ಒಂದು ಮಾತೂ ಇಲ್ಲ. ಇಷ್ಟೇ ಅಲ್ಲ; ನಮ್ಮ ರಾಜ್ಯ ಸರಕಾರದವರು ಇಲ್ಲಿನ ಹಳ್ಳಿಗಾಡಿನ ಜನಕ್ಕೆ ಜಮೀನನ್ನು ಹಂಚಬೇಕು ಎಂದು ಕೇಳುತ್ತಿದ್ದರೂ ನುಮಾರು ಹತ್ತಾರು ವರ್ಷಗಳಿಂದಲೂ ಇವರಿಗೆ ಯಾವ ಜಮೀನೂ ಹಂಚಿಕೆಯಾಗಲಿಲ್ಲ. ಹೀಗಾದರೆ ಇವರು ಜೀವನ ಮಾಡುವುದಾದರೂ ಹೇಗೆ? ನನ್ನ ಹತ್ತಿರ ಒಂದು ಸಣ್ಣ ಪೊಟ್ಟಣ ತಂದಿದ್ದೇನೆ; ಇದರೊಳಗೆ ರಾಗಿ ಕಾಳಿನಂತೆ ಸಣ್ಣ ಸಣ್ಣ ಬೀಜಗಳಿವೆ. ಇವು ಒಣಗಿದ ಹುಲ್ಲು ಬೀಜಗಳು. ಇಲ್ಲಿರುವ ಹಳ್ಳಿ ಜನರು ಇದನ್ನು ನುಮಾರು ಮಳೆ ಬೆಳೆ ಇಲ್ಲದ ಪರಿಸ್ಥಿತಿಯಲ್ಲಿ ಉಪಯೋಗಿಸಿಕೊಂಡು ನುಮಾರು ಮೂರು ನಾಲ್ಕು ತಿಂಗಳ ಕಾಲ ಜೀವನ ಮಾಡಿದರು. ಇದು ಮಾನ್ಯ ಉಪನಟಿವರಾದ ಶ್ರೀಮಾನ್ ಬನವಣ್ಣಪ್ಪನವರ ಕ್ಷೇತ್ರ. ಅವರು ಹಳ್ಳಿಗಾಡಿನ ಜನಕ್ಕೆ ಅನುಕೂಲ ಮಾಡಬೇಕೆಂದೇ ಕಾಂಗ್ರೆಸ್ಸು ಪಕ್ಷಕ್ಕೆ ಸೇರಿದ್ದೇನೆ ಎಂದು ಎಲ್ಲರಿಗೂ ಹೇಳಿ ಬಂದಿದ್ದಾರೆ. ಅವರು ಇರುವ ಹಳ್ಳಿಯ ಜನರ ಪರಿಸ್ಥಿತಿ ಬಗ್ಗೆ ಇಲ್ಲಿ ಹೇಳುತ್ತಿದ್ದೇನೆ. ಅವರು ಇರುವ ಕ್ಷೇತ್ರ ಹಾಗೂ ನನ್ನ ಕ್ಷೇತ್ರ ಪಕ್ಕ ಪಕ್ಕದಲ್ಲೇ ಇದೆ. ಅವರ ಕ್ಷೇತ್ರದಲ್ಲಿರುವ ಜನಕ್ಕೆ ಬಹಳವಾದ ಹಾನಿಯುಂಟಾಗಿದೆ. ಇಲ್ಲಿನ ಜನಕ್ಕೆ ಸ್ವಂತವಾಗಿ ಯಾವ ಜಮೀನೂ ಇಲ್ಲ. ಗೇಣಿಗೂ ಭೂಮಿ ಇಲ್ಲ. ಇಂತಹ ಜನಕ್ಕೆ ಅನುಕೂಲ ಮಾಡುವುದರ ಬಗ್ಗೆ ಈ ಬಜೆಟ್‌ನಲ್ಲಿ ಏನಾದರೂ ಪ್ರಾವಿಷನ್ ಮಾಡಿದ್ದಾರೆಯೇ ಎಂದು ನೋಡಿದರೆ ಇದರ ಬಗ್ಗೆ ಏನೂ ಮಾಡಿಲ್ಲ. ನಾನು ಇಲ್ಲಿ ತೋರಿಸುತ್ತಿರುವ ಪೊಟ್ಟಣದಲ್ಲಿರುವ ಹುಲ್ಲು ಬೀಜಗಳಿಂದ ಇವರು ಜೀವನ ನಡೆಸಬೇಕಾಗಿ ಬಂದಿದೆ. ಇಂತಹ ಕಾಳಿನಿಂದ ರೊಟ್ಟಿ ಮಾಡಿ ತಿಂದು ಜೀವಿಸಬೇಕಾಗಿ ಬಂದಿದೆ. ನುಮಾರು ಮೂರು ತಿಂಗಳ ಕಾಲ ಇಂತಹ ಬೀಜಗಳಿಂದ ಜೀವನ ನಡೆಸಿದರು. ಈ ಪೊಟ್ಟಣವನ್ನು—ಮಾನ್ಯ ಆಹಾರ ಮಂತ್ರಿಗಳು ಇಲ್ಲಿರಬಹುದು ಎಂದು ತೋರುತ್ತೆ ಅವರು ಆಹಾರ ನಟಿವರಲ್ಲ ಕ್ಷಾಮ ನಟಿವರು ಎಂದು ಕಾಣುತ್ತದೆ—ಅಧ್ಯಕ್ಷರ ಮೂಲಕ ಅವರ ಕಡೆಗೆ ಕಳುಹಿಸಿಕೊಡುತ್ತೇನೆ. ಮಾನ್ಯ ಆರೋಗ್ಯ ಖಾತೆಯ ಉಪನಟಿವರ ಕ್ಷೇತ್ರದಲ್ಲೇ ಪರಿಸ್ಥಿತಿ ಹೀಗಿದೆ, ಇದನ್ನು ಸರಕಾರ ಗಮನಿಸಿದಂತೆ ಕಾಣುತ್ತಿಲ್ಲ. ಈ ಕಾಂಗ್ರೆಸ್ಸು ಸರಕಾರ ಬಂದು ಇಪ್ಪತ್ತು ವರ್ಷಗಳಾದರೂ ಕೂಡ ಇಲ್ಲಿಯವರೆಗೆ ಹಳ್ಳಿಗಾಡಿನ ಜನತೆಗೆ ಇನ್ನೂ ಒಳ್ಳೆಯ ವಸತಿ ಸೌಕರ್ಯ ಹಾಗೂ ಜಮೀನು ಹಂಚುವಿಕೆ ಕಾರ್ಯವನ್ನು ಮಾಡಲಾಗಲಿಲ್ಲ. ಇದರಿಂದ ಎಷ್ಟೋ ಕಡೆಗಳಲ್ಲಿ ಇರುವ ಹಳ್ಳಿಗಾಡಿನ ಜನರು ನಿರ್ಗತಿಕರಾಗಿ ಬೀದಿವಾರಾಗಿದ್ದಾರೆ. ಇದರ ಬಗ್ಗೆ ಸರಕಾರ ಇನ್ನಾದರೂ ಉಹೇಕ್ಷೆ ಮಾಡದೆ ಹಳ್ಳಿಗಾಡಿನ ಜನಕ್ಕೆ ಹೆಚ್ಚು ಸೌಲಭ್ಯಗಳನ್ನು ಒದಗಿಸಿಕೊಡುತ್ತಾರೆಂದು ನಾನು ಇಲ್ಲಿ ಆಸೆ ಪಡುತ್ತೇನೆ.

ಇನ್ನು ಈ ದೇಶದಲ್ಲಿರುವ ಅರಣ್ಯ ಸಂಪತ್ತನ್ನು ಲೂಟಿ ಮಾಡುತ್ತಿದ್ದಾರೆ. ಶಿವಮೊಗ್ಗಾ ಜಿಲ್ಲೆಯ ಅರಣ್ಯದ ಬಗ್ಗೆ ಒಂದೆರಡು ಮಾತುಗಳನ್ನು ಇಲ್ಲಿ ಹೇಳಬೇಕಾಗಿದೆ. ಸರಕಾರ ಜಪಾನ್ ದೇಶದ ಇಂಡಸ್ಟ್ರಿಯಲಿಸ್ಟ್‌ಗೆ ಸಹಾಯ ಮಾಡಬೇಕೆಂದು ಜಪಾನಿನ ಮೆಸರ್ಸ್ ಸೇನ್ ಅಂಡ್ ಎಂ. ನರಸ್ವಾರಾ ಎನ್ನುವವರಿಗೆ ಒಂದು ಅಡಿ ಮರಕ್ಕೆ ನೂರರಿಂದ ಮೂನ್ನೂರು ರೂಪಾಯಿಗಳ ವರೆಗೆ ಬೆಲೆ ಬಾಳುವಂತಹ ಮರಗಳನ್ನು ಒಂದು ಸಿ.ಎಫ್.ಟಿ.ಗೆ 20 ರಿಂದ 25 ರೂಪಾಯಿಗಳವರೆಗೆ ಮಾರಿದ್ದಾರೆ. ಇದರಿಂದ ಸರಕಾರಕ್ಕೆ ಸುಮಾರು ನಾಲ್ಕು ಲಕ್ಷದಷ್ಟು ನಷ್ಟವಾಗಿದೆ. ಇದರಲ್ಲಿ ಶಿವಮೊಗ್ಗಾದಲ್ಲಿರುವ ಅರಣ್ಯ ಇಲಾಖೆಯ ಅಧಿಕಾರಿಗಳಿಗೂ ಇದರ ಮಾಹಿತಿ ತಿಳಿದಿದೆ. ಇದರಲ್ಲಿ ಚೀಫ್‌ಕನ್‌ಸರ್‌ವೇಟರ್ ಆಫ್ ಫಾರೆಸ್ಟ್ ಎನ್ನುವ ಉನ್ನತ ಅಧಿಕಾರಿಗಳು ಇದ್ದರೂ ಇದಕ್ಕೆ ಹೇಗೆ ಒಪ್ಪಿಗೆ ಕೊಟ್ಟರು ಎನ್ನುವುದು ನನಗೆ ತಿಳಿಯದ ಸಂಗತಿಯಾಗಿದೆ. ಸರಕಾರಕ್ಕೆ ಹೀಗೆ ಲಕ್ಷಾಂತರ ರೂಪಾಯಿಗಳ ನಷ್ಟ ಮಾಡುತ್ತಿದ್ದರೆ ಇದರ ಕಡೆಗೆ ಗಮನ ಕೊಡಬೇಡವೇ? ಹೀಗೆ ರಾಜ್ಯ ಸರಕಾರಕ್ಕೆ ಬರುವ ಆದಾಯವನ್ನು ಕಡಿಮೆ ಮಾಡಲು ಇದ್ದಂತಹ ಕಾರಣಗಳೇನು? ಇಷ್ಟೇ ಅಲ್ಲ. ಅರಣ್ಯ ಸಂಪತ್ತು ನಾಶವಾಗಲು ಇಲ್ಲಿರುವ ಅರಣ್ಯದ ಅಧಿಕಾರಿಗಳೂ ಕಾರಣರಾಗಿರುತ್ತಾರೆ. ಇವರ ಕೈವಾಡ ಏನು ಕಡಿಮೆ ಇಲ್ಲ. ಶಿವಮೊಗ್ಗಾದಲ್ಲಿ ಎರಡು ಸರ್ಕಲ್‌ಗಳಿವೆ ಇದಕ್ಕೆ ಕನ್‌ಸರ್‌ವೇಟರ್ ಆಫ್ ಫಾರೆಸ್ಟ್ ಎನ್ನುವ ಅಧಿಕಾರಿಗಳು ಹೆಡ್ ಆಗಿರುತ್ತಾರೆ. ಇವರ ಕೈಕೆಳಗೆ ರೇಂಜು ಫಾರೆಸ್ಟ್ ಅಧಿಕಾರಿಗಳಿರುತ್ತಾರೆ. ಇವರನ್ನು ಒಂದು ಕಡೆಯಿಂದ ಇನ್ನೊಂದು ಕಡೆಗೆ ವರ್ಗ ಮಾಡಬೇಕಾದರೆ ಐದು ಸಾವಿರ ರೂಪಾಯಿಗಳನ್ನು ಲಂಚವಾಗಿ ಕೊಟ್ಟರೇನೇ ವರ್ಗಾಯಿಸುತ್ತಾರೆ. ಇಲ್ಲದೇ ಇದ್ದರೆ ಇವರ ವರ್ಗ ಆಗುವುದೇ ಇಲ್ಲ. ಈ ರೀತಿ ಐದು ಸಾವಿರ ರೂಪಾಯಿಗಳು ಕೊಡಬೇಕೆಂದು ನಿಗದಿಯಾಗಿರುತ್ತದೆ. ಇದರಂತೆ ರೇಂಜು ಫಾರೆಸ್ಟ್ ಅಧಿಕಾರಿಗಳಾಗಿರುವವರು ಐದು ಸಾವಿರ ರೂಪಾಯಿಗಳಷ್ಟು ಲಂಚ ಕೊಟ್ಟು ವರ್ಗಾವಣೆ ಮಾಡಿಕೊಳ್ಳುತ್ತಾರೆ. ಒಬ್ಬ ರೇಂಜ್ ಫಾರೆಸ್ಟ್ ಆಫೀಸರ್ ಆಗಿರುವವನು ತಿಂಗಳಿಗೆ ಸುಮಾರು 30 ರಿಂದ 40 ಸಾವಿರ ರೂಪಾಯಿಗಳಷ್ಟು ಸಂಪಾದನೆ ಮಾಡಿಕೊಳ್ಳುವುದಕ್ಕೆ ಅವಕಾಶವಿದೆ. ಇಲ್ಲಿರುವ ನಾಟಾಗಳ ಬೆಲೆ ಒಂದಕ್ಕೆ ಎರಡರಷ್ಟು ಹಾಗೂ ಕೆಲವು ವೇಳೆ ನಾಲ್ಕರಷ್ಟು ಹೆಚ್ಚಾಗಿದೆ. ಇದರಲ್ಲೂ ರೋಸ್‌ವುಡ್ ಹಾಗೂ ಇನ್ನಿತರ ಉತ್ತಮವಾದ ಬೀಟೆ ಮರಗಳ ಬೆಲೆ ಐದು ಸಾವಿರದ ವರೆಗೂ ಇರುತ್ತದೆ.

2–30 P.M.

ಅದಕ್ಕೋಸ್ಕರ 5 ಸಾವಿರ ರೂಪಾಯಿ ಲಂಚ ಕೊಟ್ಟು ದುಡ್ಡನ್ನು ದುಡಿಮೆ ಮಾಡಿಕೊಳ್ಳುತ್ತಿದ್ದಾರೆ. ಶಿವಮೊಗ್ಗಾದಲ್ಲಿ ವರ್ಗಾವರ್ಗಿ ಕಾಲ ಬಂದಾಗ ಸುಮಾರು ಲಕ್ಷಗಟ್ಟಲೆ ದುಡ್ಡನ್ನು ದುಡಿಮೆ ಮಾಡಿಕೊಳ್ಳುತ್ತಾರೆ. ಫಾರೆಸ್ಟ್ ಮಿನಿಸ್ಟರು ಕೇಳಿದರೂ ಕೂಡ ಯಾವ ಆಫೀಸರು ಇದನ್ನು ಹೇಳುವುದಕ್ಕೆ ತಯಾರಿದ್ದಾರೆ. ಅವರು 5 ಸಾವಿರ ರೂಪಾಯಿ ಕೇಳಿದರು, ಅದಕ್ಕೋಸ್ಕರ ಕೊಡುತ್ತೇನೆ ಎಂದು ರುಜುವಾತು ಮಾಡುವುದಕ್ಕೆ ಸಾಧ್ಯವೆ! ಇಂತಹ ಕಳ್ಳರನ್ನು ಹಿಡಿದು ಹಣ ರಾಸ್ ಮಾಡುವುದನ್ನು ನಿಲ್ಲಿಸಬೇಕು. ಶಿವಮೊಗ್ಗ ರೇಂಜ್ ಫಾರೆಸ್ಟ್ ಆಫೀಸರು ಒಬ್ಬೊಬ್ಬರೂ ಲಕ್ಷಾಂತರ ರೂಪಾಯಿ ಬೆಲೆಬಾಳುವ ಮನೆಗಳನ್ನು ಕಟ್ಟಿದ್ದಾರೆ. ಇದು ಫಾರೆಸ್ಟ್ ಮಿನಿಸ್ಟರ್‌ಗೆ ಅರ್ಥವಾಗುತ್ತದೋ ಇಲ್ಲವೋ ಗೊತ್ತಿಲ್ಲ. ಫಾರೆಸ್ಟ್ ಆಫೀಸಿನಲ್ಲಿ ಅನ್ಯಾಯಗಳೂ, ಲೂಟಿಗಳೂ ನಡೆಯುತ್ತಾ ಇವೆ. ಜಪಾನ್ ದೇಶದವರಿಗೂ ಕೂಡ ಇಲ್ಲಿರುವ ರೋಸ್ ವುಡ್‌ನ್ನು ಕಳುಹಿಸಿಕೊಡುತ್ತಿದ್ದಾರೆ. ಡಿಪಾರ್ಟ್‌ಮೆಂಟ್ ಆಫೀಸರ್ಸ್ ಮತ್ತು ಕಂಟ್ರಾಕ್ಟರ್ಸ್ ಸೇರಿಕೊಂಡು ಕೋಟಿ ಕೋಟಿ ರೂಪಾಯಿಗಳವರೆಗೂ ರಾಜ್ಯ ಸರ್ಕಾರದ ಖಜಾನೆಗೆ ಬರುವ ಆದಾಯಕ್ಕೆ ಚ್ಯುತಿ ತಂದಿದ್ದಾರೆ. ಈ ರೀತಿ ಅರಣ್ಯ ಸಂಪತ್ತನ್ನು ಲೂಟಿ ಹೊಡೆಯುವ ವರ್ಗಕ್ಕೆ ರಾಜ್ಯ ಸರ್ಕಾರದವರು ಮೊಗುದಾರ ಹಾಕದೇ ಇದ್ದರೆ ಅವರು ಬಗ್ಗುವ ಹಾಗಿಲ್ಲ. ಇದರ ಜೊತೆಗೆ ಹೇ ಕಮೀಷನ್ ವರದಿಯಂತೆ ರೇಂಜ್ ಫಾರೆಸ್ಟ್ ಆಫೀಸರುಗಳನ್ನು ಗೆಜೆಟೆಡ್ ಆಫೀಸರ್ ದರ್ಜೆಗೆ ಏರಿಸಿ ಸಂಬಳ ಸಾರಿಗೆಗಳನ್ನು ಇನ್ನೂ ಜಾಸ್ತಿ ಮಾಡಬೇಕೆಂದು ಇದ್ದಾರೆ.

ಇನ್ನು ಒಂದು ವಿಷಯ. ಹೊಸಪೇಟೆಯಲ್ಲಿ ಆಗತಕ್ಕಂಥ ಸ್ಟೀಲ್ ಪ್ಲಾಂಟ್ ಬಗ್ಗೆ ಅರ್ಥಿಕ ಸಚಿವರು ಒಂದು ಮಾತನ್ನೂ ಉಲ್ಲೇಖ ಮಾಡಿಲ್ಲ. ಆಂಧ್ರ ಪ್ರದೇಶ ಸರ್ಕಾರದವರು ಸ್ಟೀಲ್ ಪ್ಲಾಂಟ್ ನಮಗೆ ಬೇಕು ಎಂದು ಕೇಂದ್ರ ಸರ್ಕಾರದ ಮೇಲೆ ಒತ್ತಾಯ ಹಾಕಿಕೊಂಡು ಕೂತಿದ್ದಾರೆ. ನಮ್ಮ ಸರ್ಕಾರದವರೂ ಕೂಡ ಕ್ಲೇಂ ಹಾಕಿಕೊಂಡು ಕೂತಿದ್ದಾರೆ. ರಾಜ್ಯ ಸರ್ಕಾರದವರೇ ಸ್ವಂತ ಖರ್ಚಿನಿಂದ ಹೊಸಪೇಟೆಯಲ್ಲಿ ಸ್ಟೀಲ್ ಪ್ಲಾಂಟ್‌ನ್ನು ಮಾಡುತ್ತೇವೆಂದು ಹೇಳುತ್ತಿದ್ದಾರೆ. ಆದರೆ ಈ ವಿಚಾರದಲ್ಲಿ ಏತಕ್ಕೆ ತಡ ಮಾಡುತ್ತಿದ್ದಾರೆ? ರಾಜ್ಯ ಸರ್ಕಾರ

(ಶ್ರೀ ಎಸ್. ಬಂಗಾರಪ್ಪ)

ದವರು ಏನು ಕ್ರಮ ಕೈಗೊಳ್ಳಬೇಕೆಂದು ಇದ್ದಾರೆ, ಏನ್ನುವ ಬಗ್ಗೆ ಈ ಬಜೆಟ್ ಭಾಷಣದಲ್ಲಿ ಒಂದು ಮಾತನ್ನೂ ಹೇಳಲಿಲ್ಲ. ನಾನು ಈಗಲಾದರೂ ಹೇಳುತ್ತೇನೆ, ರಾಜ್ಯ ಸರ್ಕಾರದವರು ಇನ್ನು ಮೇಲಾದರೂ ಕೂಡ ಕೇಂದ್ರ ಸರ್ಕಾರದ ಮೇಲೆ ಒತ್ತಡವನ್ನು ಹಾಕಬೇಕು. ಆಂಧ್ರ ಪ್ರಾಂತದ ಭಾರಿ ಭಾರಿ ಮಂತ್ರಿಗಳು ಸೇರಿಕೊಂಡಿದ್ದಾರೆ, ಅವರು ಒತ್ತಡ ಹಾಕಿ ಸ್ಟೀಲ್ ಪ್ಲಾಂಟ್ ತೆಗೆದುಕೊಳ್ಳುವುದಕ್ಕೆ ಅವರಿಗೆ ಶಕ್ತಿ ಇದೆ. ನಮ್ಮ ರಾಜ್ಯ ಸರ್ಕಾರಕ್ಕೆ ಸಂಬಂಧಪಟ್ಟ ಮಂತ್ರಿಗಳು ಬಹಳ ವೀಕ್ ಆಗಿದ್ದಾರೆ, ಕೇಂದ್ರದಲ್ಲಿ, ಅದರಲ್ಲಿ ಅನುಮಾನವಿಲ್ಲ. ಈಗಲಾದರೂ ರಾಜ್ಯ ಸರ್ಕಾರದವರು ಜವಾಬ್ದಾರಿಯನ್ನು ಹೊತ್ತು ಸ್ಟೀಲ್ ಪ್ಲಾಂಟ್ ಹೊಸಪೇಟೆಗೆ ಪಡೆಯತಕ್ಕ ಯೋಚನೆಯನ್ನು ಮಾಡಬೇಕು. ಈ ವಿಷಯವನ್ನು ಬಜೆಟ್ ಭಾಷಣದಲ್ಲಿ ಹೇಳಿಲ್ಲ. ರಾಜ್ಯ ಸರ್ಕಾರ ಇದರ ಬಗ್ಗೆ ಕೂಡಲೇ ತೀರ್ಮಾನ ಮಾಡಬೇಕು ಎನ್ನುವ ಮಾತನ್ನು ಹೇಳುತ್ತೇನೆ.

ವಿದ್ಯಾಭ್ಯಾಸದ ಬಗ್ಗೆ ಅನೇಕ ಜನ ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಈ ಸಲವೂ ಕೂಡ ಹೆಚ್ಚು ಹಣವನ್ನು ವಿದ್ಯಾಭ್ಯಾಸಕ್ಕಾಗಿ ಮೀಸಲಾಗಿಟ್ಟಿದ್ದಾರೆ. ಯಾವ ನಮೂನೆ ವಿದ್ಯಾಭ್ಯಾಸ ಕೊಡಲಕ್ಕೆ ಎಂದು ಕೇಳುತ್ತೇನೆ. ಕಾಂಗ್ರೆಸ್ ಸರ್ಕಾರದ 21 ವರ್ಷಗಳ ಅಡಳಿತದಲ್ಲಿ ಶಾಲೆಗಳನ್ನು ಕಾರ್ಖಾನೆಗಳ ನಮೂನೆಯಲ್ಲಿ ಪ್ರಾರಂಭ ಮಾಡಿ ಓದತಕ್ಕ ಜನಗಳಿಗೆ ನೌಕರಿ ಕೊಡುತ್ತೇವೆ ಎಂದು ಹೇಳಿ 62ನೇ ಇಸವಿಯಲ್ಲಿ ಪ್ರಾಸಾದ ಡಿಪ್ಲೊಮಾ ಹೋಲ್ಡರುಗಳು, ಪದವೀಧರರು; ಸಿವಿಲ್ ಮತ್ತು ಎಲೆಕ್ಟ್ರಿಕಲ್ ಇಂಜಿನಿಯರಿಂಗ್ ಪದವೀಧರರು ಇವರಿಗೆ ಏನೂ ಉದ್ಯೋಗ ಕೊಡದೆ ಇದ್ದಾರೆ. ಮಾನ್ಯ ವಿದ್ಯಾಖಾತೆಯ ಉಪಮಂತ್ರಿಯವರಾದ ಶ್ರೀಮಾನ್ ಸೋಗಿ ಅವರೂ ಮಾನ್ಯ ಮಂತ್ರಿಗಳಾದ ಶಂಕರ ಗೌಡರೂ ಒಂದು ನಂದರ್ಭದಲ್ಲಿ ಉತ್ತರ ಕೊಡುತ್ತ ಓದಿದವರಿಗೆಲ್ಲ ನೌಕರಿ ಕೊಡುತ್ತೇವೆಂದು ಹೇಳಿಲ್ಲ ಎಂದು ನುಣುಚಿಕೊಳ್ಳುವ ನೀತಿಯನ್ನು ಪರಿಪಾಲನೆ ಮಾಡಿಕೊಂಡು ಬಂದಿದ್ದಾರೆ. ವಿದ್ಯಾಭ್ಯಾಸಕ್ಕೆ ಇಷ್ಟೊಂದು ಹಣವನ್ನು ಖರ್ಚು ಮಾಡಿದರೂ, ರಾಜ್ಯ ಸರ್ಕಾರದ ಮನೆ ಬಾಗಿಲಿಗೆ ಬಂದು ನೌಕರಿ ಕೊಡಿ ಎಂದು "ಬೆಗಿಂಗ್ ಬೌಲ್" ಹಿಡಿದುಕೊಂಡು ಬರಬೇಕಾದರೆ ಅಂಥ ವಿದ್ಯಾಭ್ಯಾಸಕ್ಕೆ ಖರ್ಚು ಮಾಡುವಾಗ ಬಹಳ ಎಚ್ಚರಿಕೆಯಿಂದ ಇರಬೇಕು. ವಿದ್ಯಾಭ್ಯಾಸ ಪಡೆಯುವವನು ದೇಶದ ಸತ್ಪ್ರಜೆಯಾಗುವುದಕ್ಕೆ, ಅವನಿಂದ ದೇಶದ ಅಭಿವೃದ್ಧಿ ಆಗುವುದಕ್ಕೆ ಅನುಕೂಲವಾದ ವಿದ್ಯಾಭ್ಯಾಸವನ್ನು ಕೊಡಬೇಕು. ಹಾಗಿಲ್ಲದೆ ನುಮ್ಮನೆ ಹಣವನ್ನು ಖರ್ಚುಮಾಡಿ ಕಾರ್ಖಾನೆಗಳೋಪಾದಿಯಲ್ಲಿ ಶಾಲೆ ಕಾಲೇಜುಗಳನ್ನು ಮಾಡಿ ಅದಕ್ಕೆ ಹಣವನ್ನು ಖರ್ಚುಮಾಡಿ ಕೊನೆಗೂ ಕೂಡ ಉದ್ಯೋಗವಿಲ್ಲದೆ ಇರುವಂಥ ವಿದ್ಯಾವಂತ ವರ್ಗಕ್ಕೆ ಏನೂ ಕೆಲಸವನ್ನು ಕೊಡದೆ ನುಮ್ಮೀರಿನಲ್ಲಿ ಕೈ ಬಿಡುವಂಥ ಮಾತುಗಳನ್ನು ರಾಜ್ಯ ಸರ್ಕಾರ ಹೇಳಬಾರದು. ಅದಕ್ಕೋಸ್ಕರ ವಿದ್ಯಾಭ್ಯಾಸಕ್ಕಾಗಿ ಖರ್ಚಾಗತಕ್ಕ ಹಣ ಸದುಪಯೋಗವಾಗಲ ಎನ್ನುವಂಥ ಮಾತನ್ನು ಹೇಳುತ್ತೇನೆ.

ಜಮೀನಿಲ್ಲದೆ ಇರುವವರಿಗೆ ಜಮೀನು ಮಂಜೂರು ಮಾಡಲೇ ಬೇಕು. ಸರ್ಕಾರದವರು ಹಾಗೆ ಮಾಡದೆ ಇದ್ದರೆ ನೇರವಾದ ಕ್ರಮ ಹಾಕಿಕೊಳ್ಳಬೇಕಾಗುತ್ತದೆ. ಈಗ ಲ್ಯಾಂಡ್ ರೂಲ್ಸ್ ಹೊಸದಾಗಿ ತರುತ್ತೇವೆ ಎನ್ನುವ ಮಾತನ್ನು ಹೇಳುತ್ತಾರೆ. ಅದು ಯಾವ ನಮೂನೆಯಲ್ಲಿ ಬರುತ್ತದೆ ಎನ್ನುವುದು ನನಗೆ ಗೊತ್ತಿದೆ. ಅದರಿಂದ ಏನೇನೂ ಪ್ರಯೋಜನವಾಗುವುದಿಲ್ಲ. ಜಮೀನಿನ ಮೇಲೆ ಜನ ನುಗ್ಗಿ ನಾಗುವಳಿ ಮಾಡತಕ್ಕ ಕಾಲ ಬರುತ್ತದೆ. ರಾಜ್ಯ ಸರ್ಕಾರ ತಾನು ಹೊತ್ತಿರತಕ್ಕ ಜವಾಬ್ದಾರಿಯನ್ನು 20 ವರ್ಷಗಳಿಂದಲೂ ನಿರ್ವಹಿಸುವುದಕ್ಕೆ ಆಶಕ್ತವಾಗಿರುವುದರಿಂದ ಪ್ರಜೆಗಳೇ ಪ್ರಜಾಸತ್ತೆಯನ್ನು ತಮ್ಮ ಕೈಗೆ ತೆಗೆದುಕೊಂಡು ನೇರವಾಗಿ ಜಮೀನಿಗೆ ನುಗ್ಗುವುದರ ಮೂಲಕ ಜಮೀನನ್ನು ತಮ್ಮ ಸ್ವಾಧೀನಕ್ಕೆ ತೆಗೆದುಕೊಳ್ಳಬೇಕಾಗುತ್ತದೆ; ಮತ್ತು ಅಂತಹ ಜಮೀನನ್ನು ಮಂಜೂರು ಮಾಡಿ ಕೊಡಿ ಎಂದು ಕೇಳಬೇಕಾಗುತ್ತದೆ. ಜಮೀನಿಲ್ಲದವರು ಜಮೀನನ್ನು ನಾಗುವಳಿ ಮಾಡುತ್ತಿದ್ದಾರೆ ಅದಕ್ಕೆ ಅತಿಕ್ರಮ ಪ್ರವೇಶ ಎಂದು ಹೆಸರು ಕೊಟ್ಟಿದ್ದಾರೆ. ಅಕ್ರಮ ಯಾವುದು, ಕ್ರಮ ಯಾವುದು ! ಸರ್ಕಾರದ ಹಣವನ್ನು ಲೂಟಿ ಮಾಡುತ್ತಾ, ಕಂಟ್ರಾಕ್ಟರು ಎಂದು ಹೇಳಿಕೊಂಡು ಅದರ ಹೆಸರಿನಲ್ಲಿ ಲೂಟಿ ಹೊಡೆಯುವುದು ಕ್ರಮ ಎಂದು ಅದಕ್ಕೆ ರಾಜ ಹಾಕುತ್ತಾರೆ. ಬಡವನಾದವನು ಹೊಟ್ಟೆಗಿಲ್ಲದೆ ಜಮೀನಿನ ಮೇಲೆ ನುಗ್ಗಿ ಜಮೀನನ್ನು ನಾಗುವಳಿ ಮಾಡಿಕೊಂಡು ಹೊಟ್ಟೆ ಹೊರೆಯಲು ವ್ಯವಸಾಯ ಮಾಡಿಕೊಂಡು ಆಹಾರಧಾನ್ಯಗಳನ್ನು ಉತ್ಪಾದನೆ ಮಾಡಿದರೆ ಇದು ಅಕ್ರಮ ಪ್ರವೇಶ ಎಂದು ಹೇಳುತ್ತಾರೆ. ನನ್ನ ಅಭಿಪ್ರಾಯದಲ್ಲಿ ಜಮೀನಿಲ್ಲದವನು ಸರ್ಕಾರಿ ಜಮೀನಿನ ಮೇಲೆ ಹೋಗಿ ಅದರಲ್ಲಿ ನಾಗುವಳಿ ಮಾಡಿ ಅದರಿಂದ ಫಸಲು ಪಡೆದರೆ ಅದು ಕ್ರಮವಾದ ಪ್ರವೇಶ! ಅದನ್ನೇ ಈಗಿರುವ ಸರ್ಕಾರ ಮಾನ್ಯತೆ ಮಾಡಬೇಕಾದ ಪ್ರಸಂಗ ಬಂದೀತು ಎನ್ನುವ ಮಾತನ್ನು, ಅದನ್ನು ಎಚ್ಚರಿಕೆ ಎಂದು ಬೇಕಾದರೂ ತಿಳಿದುಕೊಳ್ಳಿ, ನಿಮ್ಮ ಗಮನಕ್ಕೆ ತಂದು ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀಮತಿ ನಾಗರತ್ನಮ್ಮ ಹಿರೇಮಠ್ (ಗಾಂಧಿನಗರ).—ಮಾನ್ಯ ಅಧ್ಯಕ್ಷರೇ, 1969-70ನೆಯ ಸಾಲಿನ ಆಯವ್ಯಯದ ವರದಿಯನ್ನು ಮಾನ್ಯ ಆರ್ಥಿಕ ಮಂತ್ರಿಗಳು ಮಂಡಿಸಿದ್ದಾರೆ. ಅದನ್ನು ಹೃತ್ಪೂರ್ವಕವಾಗಿ ಸ್ವಾಗತಿಸಿ ಒಂದೆರಡು ಸಲಹೆಗಳನ್ನು ಕೊಡಬಯಸುತ್ತೇನೆ. ಮೊದಲನೆಯ ದಾಗಿ ಈ ವರದಿಯ ಬಗ್ಗೆ ಒಂದು ವಿಷಯ ಹೇಳಬೇಕೆಂದರೆ ಈ ವರದಿಯು ಒಬ್ಬ ಪುರೋಹಿತ ನಧೀತೀರದಲ್ಲಿ ನಿಂತು ಸೂರ್ಯನನ್ನು ನೋಡುತ್ತಾ ಅರ್ಘ್ಯ ಬಿಟ್ಟಂತೆ ಜನತೆಗೆ ಆಯವ್ಯಯ ವರದಿಯ ಮೂಲಕ ಅರ್ಘ್ಯ ಬಿಟ್ಟಿದ್ದಾರೆ ನಮ್ಮ ಹಣಕಾಸಿನ ಪುರೋಹಿತ ಹೆಗಡೆಯವರು. ತಾನು ಕೊಟ್ಟ ಅರ್ಘ್ಯದಿಂದ ಸೂರ್ಯನಿಗೆ ಪ್ರೀತಿಯಾಗುವುದೆಂಬ ನಂಬಿಕೆ ಆ ವೈದಿಕ ಪುರೋಹಿತನದಾದರೆ ನಾನು ಕೊಟ್ಟ ಆಯವ್ಯಯ ವರದಿಯ ಅರ್ಘ್ಯದಿಂದ ಜನತೆಗೆ ತೃಪ್ತಿಯಾದೀತೆಂಬ ನಂಬಿಗೆ ರಾಜ್ಯದ ಹಣಕಾಸಿನ ಪುರೋಹಿತ ಹೆಗಡೆಯವರದು. ವೈದಿಕ ಪುರೋಹಿತರು ಅರ್ಘ್ಯ ಕೊಡುವಾಗ ಮಂತ್ರ ಹೇಳಿದಂತೆ ರಾಜ್ಯದ ಆಯವ್ಯಯದ ಸ್ಥಿತಿಗತಿಗಳ ಮಂತ್ರಗಳನ್ನು ವರದಿಯ ಮೂಲಕ ಪಠಿಸಿದ್ದಾರೆ ನಮ್ಮ ಪುರೋಹಿತ ಹೆಗಡೆಯವರು.

ಇಲ್ಲಿ ಸೂರ್ಯ ಕೇಂದ್ರ ಸರಕಾರ, ನದೀತೀರವೇ ಜನತೆ, ಆಯವ್ಯಯ ವರದಿಯೇ ಮಂತ್ರ ಗಳ ಪುಸ್ತಕ, ಅರ್ಘ್ಯ ಬಿಡುವುದೂ ಮಂತ್ರ ಹೇಳುವುದೂ ನನ್ನ ಕರ್ತವ್ಯ, ಅದನ್ನು ಮಾಡಿದ್ದೇನೆ, ನಿಮ್ಮ ಅಭಿಪ್ರಾಯ ನಿರೀಕ್ಷಿಸುತ್ತಿದ್ದೇನೆ ಎಂದು ಹೆಗಡೆಯವರು ವಿಧಾನಸಭೆಯ ಪ್ರತಿಕ್ರಿಯೆ ನಿರೀಕ್ಷಿಸುತ್ತಿದ್ದಾರೆ. ಆ ನಿರೀಕ್ಷಣೆಗೆ ನನ್ನ ಉತ್ತರ ಹೀಗಿದೆ. ಒಬ್ಬ ಪುರೋಹಿತರು ನದೀತೀರದಲ್ಲಿ ಅರ್ಘ್ಯ ಬಿಡುತ್ತಿದ್ದುದನ್ನು ಒಬ್ಬ ರೈತ ನೋಡಿದ. ಕೂಡಲೇ ತಾನೂ ನೀರಿಗಿಳಿದು ಸೂರ್ಯನ ಕಡೆ ಬೆನ್ನುಮಾಡಿಕೊಂಡು ಎರಡು ಕೈಗಳಿಂದ ನದಿ ನೀರನ್ನು ಹೋಗು ಹೋಗು ಎಂದು ತಳ್ಳುತ್ತಿದ್ದ. ಪುರೋಹಿತರಿಗೆ ಆಶ್ಚರ್ಯವಾಗಿ ನೀನು ಮಾಡುತ್ತಿದ್ದೀಯಪ್ಪಾ ಎಂದು ಕೇಳಿದರು, ನನ್ನ ಮಾತಿರಲಿ ನೀವೇನು ಮಾಡುತ್ತಿದ್ದೀರಿ ? ಮೊದಲು ಹೇಳಿ ಎಂದು ರೈತ ಕೇಳಿದ. ನಾನು ಸೂರ್ಯನಿಗೆ ಅರ್ಘ್ಯ ಕೊಡುತ್ತಿದ್ದೇನೆ, ಎಂದು ಪುರೋಹಿತರು ಉತ್ತರಿಸಿದರು. ನಾನು ನಮ್ಮ ತೋಟಕ್ಕೆ ನದೀ ನೀರು ತಳ್ಳುತ್ತಿದ್ದೇನೆ ಎಂದು ರೈತನು ಉತ್ತರ ಹೇಳಿದ. ಏನಯ್ಯಾ ನದಿಯಲ್ಲಿ ನಿಂತು ನೀರು ತಳ್ಳಿದರೆ ತೋಟಕ್ಕೆ ಹೋಗುವುದೇ ಎಂದು ಪುರೋಹಿತನ ಪ್ರಶ್ನೆ. ನೀವು ಕೊಟ್ಟ ಅರ್ಘ್ಯ ಸೂರ್ಯನಿಗೆ ತಲುಪುವುದಾದರೆ ನಾನು ತಳ್ಳಿದ ನೀರು ತೋಟಕ್ಕೆ ಹೋಗರಾದರೆ ಸ್ವಾಮಿ ಎಂದು ರೈತನ ಉತ್ತರ. ಮುಂದೆ ಪ್ರಶ್ನೆ ಮರುಪ್ರಶ್ನೆಯ ಮಾತೇ ಇಲ್ಲ. ಇದರಂತೆ ಶ್ರೀ ಹೆಗಡೆಯವರು ಆಯವ್ಯಯ ಹೇಗಿದೆ ಎಂದು ಕೇಳುವಂತಿಲ್ಲ, ಹೀಗಿದೆ ಎಂದು ನಾವೂ ಹೇಳುವಂತಿಲ್ಲ. ಸರ್ಕಾರಕ್ಕೂ ನೆಗಡಿಯಾಗಿದೆ, ನಮಗೂ ನೆಗಡಿಯಾಗಿದೆ. ರಿ-ರಿ-ರಿ ಕೊಂಚ ನಶ್ಯ ಇದ್ದರೆ ಕೊಡ್ರಿ ಎಂದು ನಾವು ಕೇಳಿದರೆ ಲಲಗೆ ಇಲ್ಲ, ಲಲಗೆಲ್ಲಿ ತರಲಿ ಎಂದು ನೆಗಡಿಯಾಗಿರುವ ಹೆಗಡೆಯವರು ಹೇಳುತ್ತಾರೆ. ಇದು ಈ ವರ್ಷದ ಆಯವ್ಯಯದ ಅಂತರಾಳ.

[MR. DEPUTY SPEAKER in the Chair]

ಪಂಚವಾರ್ಷಿಕ ಯೋಜನೆಗಳ ನೆರವು ನಮ್ಮ ರಾಜ್ಯಕ್ಕೆ ನ್ಯಾಯ ಪ್ರಮಾಣದಲ್ಲಿ ದೊರೆತಿಲ್ಲ ವೆಂಬುದು ಸೂರ್ಯಪ್ರಕಾಶದಷ್ಟೇ ಸತ್ಯವಾದ ವಿಚಾರ. ಅನೇಕ ರಾಜ್ಯಗಳಿಗೆ ಪ್ರಥಮ ದ್ವಿತೀಯ ಸ್ಥಾನ ದೊರೆತಿದ್ದರೆ, ನಮಗೆ ಕೊನೆಯ ಸ್ಥಾನ. ಈ ವಿಚಾರದಲ್ಲಿ ಇತರರು ಆಧುನಿಕ ವಾಹನ ಗಳಲ್ಲಿ ಹೋಗುತ್ತಿದ್ದರೆ, ನಾವು ಎತ್ತಿನ ಗಾಡಿಯಲ್ಲಿ ಪ್ರಯಾಣಮಾಡುತ್ತಿದ್ದೇವೆ. ಹೀಗೇಕೆ ತಾರತಮ್ಯ ? ನಮ್ಮ ಸರಕಾರದ ಪ್ರಯತ್ನ ಪ್ರಭಾಯುತವಾಗಿಲ್ಲವೋ ? ಅಥವಾ ಕೇಂದ್ರವೇ ನಿರ್ಲಕ್ಷಿಸುತ್ತಿದೆಯೋ ! ಎಂದು ಪ್ರಶ್ನಿಸಬೇಕಾಗುತ್ತದೆ. ಡೆಲ್ಲಿಯ ದೊರೆಗಳೇ, ನಾವು ಶ್ರೀಮಂತರಲ್ಲದಿದ್ದರೂ ಪ್ರಭಾವಕ್ಕೆ ಯಾರಿಗೂ ಕಡಮೆಯಿಲ್ಲ ಎಂಬುದನ್ನು ಸ್ಪಷ್ಟವಾಗಿ ಅವರಿಗೆ ಹೇಳಬೇಕು. ಈ ಕೆಲಸವನ್ನು ಅಂಜನೆ ಅಳುಕದೆ ಸರ್ಕಾರ ಮಾಡಲೆಂದು ಹೇಳಬಯಸುತ್ತೇನೆ.

ರಾಜ್ಯದ ತಲಾ ಆದಾಯವನ್ನು ರಾಷ್ಟ್ರೀಯ ತಲಾ ಆದಾಯದೊಡನೆ ಹೋಲಿಸಿ, ತಲಾ ತೆರಿಗೆ ಯನ್ನ ತಲಾ ಆದಾಯದೊಡನೆ ಹೋಲಿಸುವುದು ಸಮಂಜಸವಾಗಿ ಕಾಣುವುದಿಲ್ಲ. ಒಬ್ಬ ಇಂಜಿನೀಯರು ಒಂದು ನದಿಯನ್ನು ದಾಟಬೇಕೆಂದು ನಾರ್ಯಾರು ಕಡೆ ನೀರಿನ ಆಳ ಅಳತೆಮಾಡಿನೋಡಿ ಸರಾಸರಿ ಆಳ ಇಷ್ಟಿರುತ್ತೆ ಎಂದು ಲೆಕ್ಕಹಾಕಿ ದಾಟಲು ಹೋಗಿ ನಡುನದಿಯಲ್ಲಿ ಮುಳುಗಿದಂತಾಗು ತ್ತದೆ. ಈ ಲೆಕ್ಕಾಚಾರ ಆಯಾ ರಾಜ್ಯದ ಆದಾಯ ವ್ಯಯಗಳ ಮೇಲೆ ಲೆಕ್ಕಾಚಾರ ಹಾಕಬೇಕೇ ಹೊರತು, ಯೋಜನಾ ಆಯೋಗದವರ ಲೆಕ್ಕಾಚಾರದಂತೆ ಆದರೆ ನಾವು ಮುಳುಗಿಹೋಗುತ್ತೇವೆ. ಇದನ್ನು ಯೋಜನಾ ಆಯೋಗಕ್ಕೆ ನಿದರ್ಶನಗಳಪೂರ್ವಕ ಮನವರಿಕೆ ಮಾಡಿಕೊಟ್ಟು ಈ ಬಗ್ಗೆ ನಮಗಾಗಬಹುದಾದ ನಷ್ಟಕ್ಕೆ ಗುರಿ ಮಾಡಬಾರದೆಂದು ಆಯೋಗಕ್ಕೆ ಆಗ್ರಹಪೂರ್ವಕ ಹೇಳಬೇಕು.

(ಶ್ರೀಮತಿ ನಾಗರತ್ನಮ್ಮ ಹಿರೇಮಠ)

ಕಲ್ಯಾಣ ಯೋಜನೆಗಳಿಗಾಗಿ ಕೇಂದ್ರವು ಮಾಡುತ್ತಿರುವ ಅತಿ ಹೆಚ್ಚಿನ ವ್ಯಯವನ್ನು ಕಡಿಮೆಮಾಡಿ, ರಾಜ್ಯ ಸರಕಾರಗಳ ವೆಚ್ಚ ಪ್ರಮಾಣವನ್ನು ಹೆಚ್ಚಿಸುವುದು ನ್ಯಾಯವೂ ಹೌದು, ಆವಶ್ಯಕವೂ ಹೌದು. ಆಗ ಸಮಗ್ರ ಭಾರತದ ಜನಸಾಮಾನ್ಯರ ಕಲ್ಯಾಣಕಾರ್ಯ ಸಮಪ್ರಮಾಣದಲ್ಲಿ ನಡೆದಂತಾಗುತ್ತದೆ. ಹೀಗಾಗದಿದ್ದರೆ, ಅತ್ಯಪ್ತ ಜನತೆ, ಅನರ್ಥಕಾರಿ ಮಾರ್ಗದಲ್ಲಿ ಹೋಗಲು ಸಂದೇಹವೇ ಇಲ್ಲ. ಈ ವಿಚಾರದಲ್ಲಿ ಕೇಂದ್ರದ ಸ್ವಲ್ಪ ಪ್ರಮಾಣದ ನಿರ್ಲಕ್ಷ್ಯವೂ ಅಪಾಯಕಾರಿ ಎಂಬುದನ್ನು ಬೇರೆ ಹೇಳ ಬೇಕಾಗಿಲ್ಲ. ಈ ಬಗ್ಗೆ ಕೇಂದ್ರದವರು ಸರಿಯಾದ ತೀರ್ಮಾನ ತೀವ್ರ ತೆಗದುಕೊಳ್ಳಲು, ಒತ್ತಾಯಿಸಿ, ಆಗ್ರಹ ಪಡಿಸಿರೆ ಯಾವುದೇ ಕ್ರಮ ನಮ್ಮ ಸರ್ಕಾರ ಕೈಕೊಂಡರೂ ಜನತೆಯ ಸಂಪೂರ್ಣ ಬೆಂಬಲವುಂಟೆಂಬುದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ.

ಆರ್ಥಿಕ ಆಯೋಗದ ಮುಂದೆ ರಾಜ್ಯದ ಹಣಕಾಸಿನ ಕಷ್ಟ ನಷ್ಟಗಳನ್ನು ಆಯೋಗದ ಮನ ಕರಗುವಂತೆ ಹೇಳಿಕೊಂಡಿರುವುದಾಗಿ ಆರ್ಥಿಕ ಮಂತ್ರಿಗಳು ವರದಿಯಲ್ಲಿ ಪ್ರಸ್ತಾಪಿಸಿದ್ದಾರೆ. ತುಂಬಾ ಸಂತೋಷ. "ಬಾಗಿಲನು ತೆಗಿಸಿ ಪೇವೆಯನು ಕೊಡೋ ಹರಿಯೆ, ಕೂಗುವಾ ಧ್ವನಿಯು ಕೇಳಲಿಲ್ಲವೇ ದೊರೆಯೆ" ಎಂದು ಕನಕದಾಸರು ಕೇಳಿದ್ದಕ್ಕೆ ಶ್ರೀ ಕೃಷ್ಣ ದರ್ಶನ ಕೊಟ್ಟಂತೆ "ಬಗುಮಾನ ತೊರೆಯಿರೆ! ಮಿಗಿಲಾದ ವೆಚ್ಚವಿದೆ–ಸುಗಮ ವೆಚ್ಚಕ್ಕೆ ತಕ್ಕ ಹಣ ನೀಡಿ–ದುಗುಡವಂ ಪರಿಹರಿಸಿ ಆಯೋಗ ಮಂಡಳಿಯೆ" ಎಂದು ನೀವು ಕೇಳಿದ್ದಕ್ಕೆ ಆಯೋಗ ಅಸ್ತು ಅನ್ನಬಹುದೆಂದು ನಿರೀಕ್ಷಿಸೋಣ ಈ ನಿರೀಕ್ಷೆ ಫಲಕಾರಿಯಾಗಲು ನಿಮ್ಮ ಶಕ್ತಿ ಪೂರಿ ಪ್ರಯತ್ನಿಸಿರಿ. ನಮ್ಮ ಬೆಂಬಲ ವುಂಟೆಂದು ಸರ್ಕಾರಕ್ಕೆ ಹೇಳಬಯಸುತ್ತೇನೆ.

ಮೇಲ್ಕಂಡ ಒಂದೆರಡು ಸಲಹೆಗಳು ನೆರವೇರಿದರೆ ಮಾತ್ರ 13 ಕೋಟಿ ರೂಪಾಯಿಯ ಕೊರತೆ, ಮತ್ತು ಕೊರತೆಗೆ ಸೇರಿನದೆ ಇರುವ ನೌಕರರ ತುಟ್ಟಿಭತ್ಯ ವಗೈರೆಯ 3 ಕೋಟಿ 25 ಲಕ್ಷದ ಕೊರತೆ ಇನ್ನೂ ಚಿಕ್ಕಪುಟ್ಟ ಕೊರತೆಗಳು ಸೇರಿ ಆಯವ್ಯಯದ ಒಟ್ಟು ಕೊರತೆ 17–18 ಕೋಟಿಗಳಿಗೇರುತ್ತದೆ ಈ ಕೊರತೆ ನಿವಾರಣೆಯಾಗಲು ಕೇಂದ್ರ ಆರ್ಥಿಕ ಕೊಡುಗೆಯಿಂದ ಮಾತ್ರ ಸಾಧ್ಯ. ಈ ಬಗ್ಗೆ ಕೇಂದ್ರವನ್ನು ಒತ್ತಾಯಿಸಲು ನಮಗೆ ಹಕ್ಕುಂಟು. ಏಕೆಂದರೆ ಪಾಂಚವಾರ್ಷಿಕ ಯೋಜನಾ ಸಹಾಯ ನಮಗೆ ದೊರೆತಿರುವುದು, ತುಂಬಾ ಕನಿಷ್ಠ ದರ್ಜೆಯದು. ಕಣ್ಣೊರೆಸುವಷ್ಟು ಮಾತ್ರ. ಪ್ರಯುಕ್ತ ಈ ಬಗ್ಗೆ ಹೆಚ್ಚು ಒತ್ತಾಯ ಕೇಂದ್ರದ ಮೇರೆ ಸರ್ಕಾರ ಮಾಡಬೇಕೆಂದು ವಿನಂತಿಸುತ್ತೇನೆ.

ವಿದ್ಯಾ ಇಲಾಖೆಗೆ 46 ಕೋಟಿ ನೀಡಿರುವುದು ಅಭಿನಂದನೀಯ. ಇಷ್ಟಾದರೂ ಖಾಸಗಿಯವ ರನ್ನೇಕರಿಂದ ನಡೆಯುವ ಕಾಳ ರೀತಿಯ ವಿದ್ಯಾ ವ್ಯಾಪಾರ ಬೆಳೆಯುತ್ತಿದೆಯೇ ಹೊರತು ಇಳಿಮುಖ ವಾಗುತ್ತಿಲ್ಲ. ಖಾಸಗಿಯವರ ಕರಾಳ ವಿದ್ಯಾ ವ್ಯಾಪಾರ ಎಂದು ನಿಲ್ಲುವುದೋ ಅಂದೇ ವಿದ್ಯಾ ಇಲಾಖೆಗೆ ಪಾವಿತ್ರ್ಯತೆ ದೊರೆಯುತ್ತದೆ. ಖಾಸಗಿಯವರ ಕರಾಳ ವಿದ್ಯಾ ವ್ಯಾಪಾರ ತಡೆಗಟ್ಟಲು ನ್ಯಾಯವಾಗಿ ನಡೆಯಲು ತಕ್ಕ ರೀತಿ, ನೀತಿ, ನಿಯಮಗಳನ್ನು, ಕಟ್ಟುನಿಟ್ಟಾದ ಕಾರ್ಯಕ್ರಮ ಗಳನ್ನು ಕೈಕೊಳ್ಳಬೇಕೆಂದು ಸೂಚಿಸುತ್ತೇನೆ. ಸರ್ಕಾರಿ ಕಾಲೇಜುಗಳ ಶುಲ್ಕದ ಮಟ್ಟಕ್ಕೆ ಖಾಸಗಿ ಶಾಲೆ ಕಾಲೇಜುಗಳ ಶುಲ್ಕವನ್ನು ತರಲಾಗದಿದ್ದರೂ ಈಗಿರುವ ಬೇರೆ ಬೇರೆ ಖಾಸಗಿ ಶಾಲಾ ಕಾಲೇಜುಗಳ ಕರಾಳ ಶುಲ್ಕವನ್ನು ನ್ಯಾಯವಾದ ಮಟ್ಟಕ್ಕೆ ತರುವುದು ಸೂಕ್ತವೆಂದು ನನ್ನ ಅಭಿಪ್ರಾಯ. ಹಣದಾಸೆಯಿಂದ ಸೀಟುಗಳನ್ನು ಬೇರೆ ರಾಜ್ಯದ ಅಭ್ಯರ್ಥಿಗಳಿಗೆ ಮಾರುವ ಖಾಸಗಿ ಯವರ ಕರಾಳ ಪದ್ಧತಿ ತಪ್ಪಬೇಕು. ಶ್ರೀಮಂತರಿಗೆ ಮಾತ್ರ ಸಾಧ್ಯವಾಗಿರುವ ಮೆಡಿಕಲ್ ವಿದ್ಯಾಭ್ಯಾಸ ಅರ್ಹರಾದವರಿಗೆ ಬಡವನಾದರೂ ದೊರೆಯುವಂತಿರಬೇಕು. ಆರೋಗ್ಯ ಮತ್ತು ವಿದ್ಯಾ ಮಂತ್ರಿಗಳು ಈ ಬಗ್ಗೆ ತುಂಬಾ ಗಮನ ಕೊಡಬೇಕೆಂದು ವಿನಂತಿಸುತ್ತೇನೆ. ಬೆಂಗಳೂರು ವಿಶ್ವವಿದ್ಯಾನಿಲಯವನ್ನು ಫೆಡರಲ್ ವಿಶ್ವವಿದ್ಯಾನಿಲಯವಾಗಿ ಮಾಡಲು ಏನೆರ್ಲಾ ಪ್ರಯತ್ನಗಳನ್ನು ಮಾಡಲೆಂದು ಸರ್ಕಾರವನ್ನು ಒತ್ತಾಯಪಡಿಸುತ್ತೇನೆ.

ಆರೋಗ್ಯ ಇಲಾಖೆಗೆ ಈಗಿನ ಮಂತ್ರಿಗಳಿಂದ ಸ್ವಲ್ಪ ಚಟುವಟಿಕೆ ಬಂದಿರುವುದು ಕಂಡುಬಂದಿದೆ. ಆದರೆ ಅಹಂಕಾರ ಮನೋಭಾವದ, ನಿರ್ಲಕ್ಷ್ಯ ಮುಖ್ಯಾಧಿಕಾರಿಗಳಿಂದ ಆಗುತ್ತಿರುವ ಕರುಕುಳ ತಪ್ಪಬೇಕು. ಅನೇಕ ಆಸ್ಪತ್ರೆಗಳಲ್ಲಿ ಹೇಳುವವರಿಲ್ಲ, ಕೇಳುವವರಿಲ್ಲ. ದಾದಿಲ್ಲ, ಫಿರ್ಯಾದಿಲ್ಲ. ಅಕ್ರಮ ವ್ಯಪಹಾರಗಳು ನಡೆಯುತ್ತಲೇ ಇವೆ. ಪ್ರಭಾವ, ಹಣ, ಇದ್ದವರಿಗೆ ಮಾತ್ರ ಆಸ್ಪತ್ರೆ ಸೇವೆ. ಜನ ಸಾಮಾನ್ಯರಿಗೆ ಯಮಧರ್ಮನ ಸೇವೆ ಎಂಬುದು ಬೀದಿ ಮಾತಾಗಿದೆ. "ಬೆಂಕಿಯಿಲ್ಲದೆ ಹೊಗೆ ಬರುವುದಿಲ್ಲ" ಈ ಮಾತಿನಲ್ಲಿ ತಥ್ಯವಿರುವುದರಿಂದಲೇ ಇದು ಬೀದಿ ಮಾತಾಗಿದೆ. ಆಸ್ಪತ್ರೆಯ ಆಡಳಿತಕ್ಕೆ ಮುಸುಗಿರುವ ಧೂಳು ಜಾಡಿಸುವ ಕಾರ್ಯಕ್ರಮ ಆರೋಗ್ಯ ಮಂತ್ರಿಗಳು ಕೈಕೊಂಡರೆ ತುಂಬಾ ಕೀರ್ತಿ ಬರುತ್ತದೆ.

ವ್ಯವಸಾಯದ ಇರಾಖೆ ತುಂಬಾ ಹೊಗ್ಯತವಾಗಿದೆಯೆಂದು ಅರ್ಥಮಂತ್ರಿಗಳ ವರದಿಯಿಂದ ಕಂಡುಬರುತ್ತದೆಯೇ ಹೊರತು ಪ್ರತ್ಯಕ್ಷ ಅದಕ್ಕೆ ನಿದರ್ಶನಗಳು ಕಂಡುಬಂದಿಲ್ಲ. ಮಳೆ ಕಡಿಮೆ ಬೀಳುವ ಪ್ರದೇಶದಲ್ಲಿ ಬೋರ್‌ವೆಲ್ ತೆಗೆಸಲು, ಹದಗೆಟ್ಟ ಜಮೀನನ್ನು ಉತ್ತಮ ಪಡಿಸಲು—ಬುಲ್ ಡೋಜರ್-ಟ್ರ್ಯಾಕ್ಟರ್ ವಗ್ಯೆರೆ ಬಾಡಿಗೆಗೆ ಅಪೇಕ್ಷಿಸಿದರೆ ವ್ಯವಸಾಯ ಇರಾಖೆಯಿಂದ ದೊರೆಯುವುದು ಕಷ್ಟವೆಂಬುದು ನನ್ನ ನಿದರ್ಶನಕ್ಕೆ ಬಂದಿದೆ, ಪಾವಗಡ ತಾಲ್ಲೂಕಿನಲ್ಲಿರುವ ನಮ್ಮ 10 ಎಕರೆ ಜಮೀನನ್ನು ಸರಿಪಡಿಸಲು ಬುಲ್‌ಡೋಜರ್ ಕೇಳಿ 8-10 ತಿಂಗಳಾದರೂ ವ್ಯವಸಾಯ ಇರಾಖೆಯಿಂದ ದೊರೆತಿಲ್ಲ. ಶಾಸಕರು ತಾವಾಗಿಯೇ ಹೋದರೂ ರೈತರಿಗೆ ಬೇಕಾದ ಈ ವ್ಯವಸಾಯದ ಸಲಕರಣೆಗಳನ್ನು ಪಡೆಯಬೇಕಾದರೆ ಎಷ್ಟು ಕಷ್ಟಪಡಬೇಕೆಂಬುದನ್ನು ಮಾನ್ಯ ಸಚಿವರು ಗಮನಿಸಬೇಕೆಂದು ನಾನು ಸೂಚಿಸಬಯಸುತ್ತೇನೆ. ಶಾಸಕರ ಕೋರಿಕೆಯೇ ಈ ರೀತಿಯಾದರೆ ಬಡರೈತನಿಗೆ ದೊರೆಯುವುದು ಮೂರು ನಾಮ. ವ್ಯವಸಾಯ ಇರಾಖೆಯಲ್ಲ ಡೈರಕ್ಟರುಗಳು, ಜಾಯೆಂಟ್ ಡೈರೆಕ್ಟರುಗಳು ಅಸಿಸ್ಟೆಂಟ್ ಡೈರೆಕ್ಟರುಗಳು, ಜಿಲ್ಲಾ ವ್ಯವಸಾಯಾಧಿಕಾರಿಗಳು ವಗ್ಯೆರೆ ಲೆಕ್ಕವಿಲ್ಲದಷ್ಟು ಜನ ಇದ್ದಾರೆ. ಆದಾಗ್ಯೂ ಭೂಮಿ ಸರಿಪಡಿಸಿಕೊಳ್ಳಲು, ಬಾವಿ ತೋಡಿಸಿಕೊಳ್ಳಲು, ಬಾಡಿಗೆಗೆ ಉಪಕರಣಗಳನ್ನು ಕೊಡಿಸಲು ಆಗದಿರುವ ವ್ಯವಸಾಯ ಇರಾಖೆ ಇದ್ದರೂ ಇಲ್ಲದಿದ್ದರೂ ಒಂದೇ ಇದು ನಾಚಿಕೆಗೇಡಿನ ಪ್ರಸಂಗ. ಹೆಸರು ಗಂಗಾಧರ, ಕುಡಿಯಲು ನೀರಿಲ್ಲ ಎಂಬಂತೆ ವ್ಯವಸಾಯದ ಇರಾಖೆಯಿಂದ ರೈತನಿಗೆ ದೊರೆಯುತ್ತಿರುವುದು ಅಪೂರ್ಣ ಮಾತ್ರ. ಈ ಇರಾಖೆಯನ್ನು ಚುರುಕುಗೊಳಿಸಲು ವ್ಯವಸಾಯ ಮಂತ್ರಿಗಳು ಪೂರ್ಣ ನಿಗಾ ತೆಗೆದುಕೊಂಡರೆ ಕೀರ್ತಿಬರುತ್ತದೆ ಎಂದು ಬೇರೆ ಹೇಳಬೇಕಾಗಿಲ್ಲ.

ರಸ್ತೆಸಾರಿಗೆ ಇರಾಖೆಯವರು ಒಂದು ಕಡೆಯಿಂದ ರಾಷ್ಟ್ರೀಕರಣ ಮಾಡುತ್ತಾ ಹೋಗಿ, ಮತ್ತೊಂದು ಕಡೆಯಿಂದ ಖಾಸಗೀ ಬಸ್ಸುಗಳಿಗೆ ಟೂರಿಸ್ಟ್ ಎಂದು ಲೈಸೆನ್ಸ್ ನೀಡುತ್ತಿದ್ದಾರೆ. ಟೂರಿಸ್ಟ್ ಎನ್ನುವ ಹೆಸರಿನಲ್ಲಿ ಮತ್ತೆ ಖಾಸಗೀ ಬಸ್ಸುಗಳು ಓಡಾಟ ಪ್ರಾರಂಭಿಸಿವೆ. ಅವು ಹೆಚ್ಚು ಸೌಕರ್ಯಯುತವಾಗಿರುವುದರಿಂದಲೂ ಥಾರ್ಜೂ ಕೂಡ ಸರ್ಕಾರಿ ಬಸ್ಸುಗಳಷ್ಟೇ ಇರುವುದರಿಂದ ಜನರು ಹೆಚ್ಚಾಗಿ ಅವುಗಳಲ್ಲಿ ಪ್ರಯಾಣಮಾಡುತ್ತಿದ್ದಾರೆ. ಇದರಿಂದ ಇರಾಖೆಗೆ ನಷ್ಟವಾಗುತ್ತಿದೆ. ಸರ್ಕಾರ ಯಾವುದಾದರೊಂದು ನೀತಿಯನ್ನು ಅನುಸರಿಸಿದರೆ ಅದನ್ನು ಕಟ್ಟುನಿಟ್ಟಾಗಿ ಅನುಸರಿಸಬೇಕು. ಅಂದರೆ ಸಂಪೂರ್ಣ ರಾಷ್ಟ್ರೀಕರಣ ಮಾಡಬೇಕು, ಇಲ್ಲವೇ ಖಾಸಗಿಯವರಿಗೆ ಅದನ್ನು ವಹಿಸಿಕೊಡಬೇಕು. ರಸ್ತೆಸಾರಿಗೆ ಇರಾಖೆಯ ವ್ಯವಹಾರದಲ್ಲಿ ಬಂಡವಾಳಕ್ಕೆ ತಕ್ಕ ಆದಾಯ ಬರುತ್ತಿಲ್ಲ. ಆಡಳಿತದಲ್ಲಿ ಜವಾಬ್ದಾರಿತನ ಇಲ್ಲದಿರುವುದರಿಂದ ಹಣ ಪೋಲಾಗುತ್ತಿದೆ. ಈ ಇರಾಖೆಯ ಬಗ್ಗೆ ಸರ್ಕಾರ ಎಷ್ಟು ಬೇಗ ಕ್ರಮ ಕೈಗೊಂಡರೆ ಅಷ್ಟೂ ಒಳ್ಳೆಯದು. ಆದರೆ ಅದೇಕೆ ಕ್ರಮತೆಗೆದುಕೊಳ್ಳಲು ವಿಳಂಬಮಾಡುತ್ತಿದೆಯೋ ತಿಳಿಯದು.

ಇನ್ನು ನಗರಸೌಂದರ್ಯಕ್ಕೆ ಕ್ಯಾನ್ಸರಿನಂತೆ ಬೆಳೆಯುತ್ತಾ ಕುಂದನ್ನು ತರುತ್ತಿರುವ, ಕಂಡರೂ ಕಾಣದಂತೆ ಹೆಚ್ಚುತ್ತಿರುವ ಈ ಕೊಳಚೆ ಪ್ರದೇಶಗಳ ನಿವಾರಣೆ ಆಗದಿರುವುದರಿಂದ ನಗರದಲ್ಲಿ ರೋಗರುಜಿನಗಳ ಅಪರಾಧಗಳ ಹಾಗೂ ದುಷ್ಕಾರ್ಯಗಳ ಮೂಲಸ್ಥಾನಗಳಾದ ಈ ಕೊಳಚೆ ಪ್ರದೇಶಗಳ ಬಗ್ಗೆ ಕೂಡಲೆ ಸರ್ಕಾರ ಸ್ವಲ್ಪ ಕಠಿಣವಾಗಿ ನಿರ್ದಾಕ್ಷಿಣ್ಯವಾಗಿ ನಡೆಯದಿದ್ದರೆ ತುಂಬಾ ಅಪಾಯವಿದೆ. ಅವರು ಅಂಥಾ ಪಾಪಕೂಪಗಳಲ್ಲಿ ವಾಸಿಸುವುದನ್ನು ತಪ್ಪಿಸುವ ಮಾನವೀಯ ಭಾವನೆಯಿಂದಲಾದರೂ ಅಂತಹ ಪ್ರದೇಶಗಳು ಇರಬಾರದು. ಈ ಬಗ್ಗೆ ಕಟ್ಟುನಿಟ್ಟಾದ ಕಾರ್ಯಕ್ರಮವನ್ನು, ಪಂಚವಾರ್ಷಿಕ ಯೋಜನೆಗಳಲ್ಲಾದರೂ ಸರಿಯೇ, ಹಾಕಿಕೊಂಡು ಮತ್ತೆ ಅವು ತಲೆಯೆತ್ತದಂತೆ ನೋಡಿಕೊಳ್ಳಬೇಕು.

ಇನ್ನು ಪಡಿತರ ಖಾತೆ: ಕಡಲತೀರದ ಮುಕ್ಕಾಲು ಮಂತ್ರಿ ಶ್ರೀ ವಿಠಲದಾಸ ಸೆಟ್ಟರ ಕೈಸೇರಿದೆ. ಕಲಬೆರಕೆ, ಅಕ್ರಮ ವ್ಯವಹಾರ ದಾಸ್ತಾನಿನ ಅಂಕೆ ಸಂಖ್ಯೆಗಳಲ್ಲಿ ವಿರಳಿತ ರವೆ ಉಂಡೆಗೆ ಬರುವ ಕ್ಷಯ ವಗ್ಯೆರೆ-ವಗ್ಯೆರೆ ಭ್ರಷ್ಟಾಚಾರಗಳನ್ನು ಮೆಟ್ಟಿನಡೆಯಬೇಕಾಗಿದೆ. ಶ್ರೀ ಶೆಟ್ಟರು "ಅನ್ನವನು ಇಕ್ಕುವುದು ನನ್ನಿಯನು ನುಡಿಯುವುದು; ತನ್ನಂತೆ ಪರರ ಬಗೆದಂದು ಕೈಲಾಸ ಬನಾ ಣವಕ್ಕ ಸರ್ವಜ್ಞ" ಎಂಬಂತೆ ನನ್ನಿಯ ಮಾತಿನಲ್ಲಿ ಶೆಟ್ಟರು ಬಲ್ಲರು. ಇನ್ನು ಪಂಕ್ತಿಭೇದವಿಲ್ಲದೆ ಒಳ್ಳೆಯ ಅನ್ನವನ್ನು ಕೊಡುವುದರಲ್ಲಿ ಇವರು ಸೈ ಅನ್ನಿಸಿಕೊಳ್ಳಬೇಕಾಗಿದೆ. ಜೊಕ್ಕಟವಾಗಿ ಕೆಲಸ ಮಾಡಿ ಮುಕ್ಕಾಲು ಮಂತ್ರಿಯಿಂದ ಪಕ್ಕಾಮಂತ್ರಿಗೇರಬೇಕೆಂದು ಹಾರೈಸುತ್ತೇನೆ. ರಾಜ್ಯದಲ್ಲಿ ಹೆಚ್ಚಾಗಿ ಬೆಂಗಳೂರು ನಗರದಲ್ಲಿ ಅನೇಕ ವ್ಯಕ್ತಿಗಳೂ ಮತ್ತು ಸಂಸ್ಥೆಗಳೂ ಚಿಟ್ ಫಂಡ್‌ಗಳೆಂಬ ಹೆಸರಿನಲ್ಲಿ ಭಾರಿ ಹಣದ ವ್ಯವಹಾರ ನಡೆಸುತ್ತಿವೆ. ಎಲ್ಲ ನೋಡಿದರೂ ನಾಯಿಕೊಡೆಗಳಂತೆ ತರೆ ಎತ್ತುತ್ತಿರುವ ಈ ಚಿಟ್ ಫಂಡ್‌ಗಳಿಂದ ಸಾರ್ವಜನಿಕರಿಗೆ ತುಂಬಾ ಮೋಸವಾಗುತ್ತಿದೆ. ಇವುಗಳ ಸ್ಥಾಪಕರನೇಕರು ಜನರಿಗೆ ಪಂಚಿಸಿ ಹಣದೊಂದಿಗೆ ಪರಾರಿಯಾಗು

(ಶ್ರೀಮತಿ ನಾಗರತ್ನಮ್ಮ ಹಿರೇಮಠ್)

ತ್ತಿದ್ದಾರೆ. ಇದು ಬಹಿರಂಗ ದರೋಡೆ. ಇಂತಹ ಸಂಸ್ಥೆಗಳೂ, ವ್ಯಕ್ತಿಗಳೂ ಪ್ರಕಟವಾಗುತ್ತಾರೆ. ಮಾಯವಾಗುತ್ತಾರೆ. ಈ ಬಗ್ಗೆ ಸರ್ಕಾರದ ಕಾನೂನು ಮತ್ತು ರಕ್ಷಣಾ ಖಾತೆ ತುಂಬಾ ಗಮನವಿಟ್ಟು ಇಂತಹ ಸಾರ್ವಜನಿಕ ವಂಚನ ವ್ಯಕ್ತಿಗಳು ಮತ್ತು ಸಂಸ್ಥೆಗಳ ಮೇಲೆ ಕ್ರಮ ತೆಗೆದುಕೊಳ್ಳುವುದು ಯುಕ್ತವೆಂದು ನನ್ನ ಅಭಿಪ್ರಾಯ. ಕೇರಳ ಸರ್ಕಾರ ತನ್ನ ನಿವಾಸಿಗಳಿಗಾಗಿ ಆರಂಭಿಸುತ್ತಿರುವ ಚಿಟ್ ಫಂಡ್ ವಿಚಾರವನ್ನು ನಮ್ಮ ಸರ್ಕಾರವೂ ಈ ಬಗ್ಗೆ ಯೋಚಿಸಿ ಪರಿಶೀಲನ ಬಹುದಾದ ಅಂಶವಾಗಿದೆಯೆಂದು ನಾನು ಹೇಳಬಯಸುತ್ತೇನೆ.

ರಾಜ್ಯದ ಆರ್ಥಿಕಪರಿಸ್ಥಿತಿ ಚೆನ್ನಾಗಿಲ್ಲದಿರುವಾಗ ಹಣ ರೂಢಿಸಿಕೊಳ್ಳಲು ಹೊಸಮಾರ್ಗ ಗಳನ್ನು ಕಂಡುಹಿಡಿಯಬೇಕು. ಲಾಟರಿ ಎಗ್ಜಿಬಿಷನ್ ವಗೈರೆ ಸೂಕ್ತ ಮಾರ್ಗದಲ್ಲಿ ಸರ್ಕಾರವೇ ನಡೆಸಿ ಹಣ ರೂಢಿಸಿಕೊಳ್ಳುವುದು ಯುಕ್ತವೆಂದು ನನ್ನ ಅಭಿಪ್ರಾಯ. ಕೆಲವರು ಸರ್ಕಾರ ಲಾಟರಿ ಆರಂಭಿಸಲು ವಿರೋಧಿಸುತ್ತಿರುವುದು ಆಶ್ಚರ್ಯ. ಜನರ ನೈತಿಕಮಟ್ಟ ಇದರಿಂದ ಇಳಿಯುತ್ತದೆ ಎಂದು ತಿಳಿದಿರುವುದು ತಪ್ಪುಭಾವನೆ. ಕುದುರೆ, ಕುದುರೆ ಜೂಜು, ಕ್ಲಬ್ಬುಗಳ ಜೂಜಾಟ, ಚಿಟ್‌ಫಂಡ್ಸ್, ಸಾಂಸ್ಕೃತಿಕ ಮೇಳಗಳ ಹೆಸರಿನಲ್ಲಿ ಬಹಿರಂಗ ಜೂಜಾಟ ನಡೆಸಿ ನಮ್ಮ ಹಣ ದೋಚುತ್ತಿರುವಾಗ, ಅಶ್ಲೀಲ ಸಿನಿಮಾ ಚಿತ್ರಗಳು ದೇಶದಲ್ಲಿ ನಡೆಯುತ್ತಿರುವಾಗ ಇತರೇ ರಾಜ್ಯಗಳಲ್ಲಿ ಸರ್ಕಾರಗಳು ಲಾಟರಿಯನ್ನು ಅಧಿಕೃತವಾಗಿ ನಡೆಸುತ್ತಿರುವಾಗ ನಮ್ಮ ರಾಜ್ಯ ಸರ್ಕಾರ ಸೂಕ್ತಮಾರ್ಗದಲ್ಲಿ ನಡೆಸುವುದು ತಪ್ಪೇನೂ ಇಲ್ಲ. ಈ ಪ್ರಶ್ನೆ ಅಖಿಲಭಾರತೀಯ ಪ್ರಶ್ನೆ. ಇಲ್ಲಿ ಲಾಟರಿ ನಡೆದಿದ್ದರೆ, ಬೇರೆ ರಾಜ್ಯಗಳಲ್ಲಿ ನಡೆಯುವ ಲಾಟರಿಗೆ ಇಲ್ಲಿಂದ ಹಣ ಹೋಗು ವುದನ್ನು ತಪ್ಪಿಸಲಾಗುವುದಿಲ್ಲ. ಅಖಿಲಭಾರತದಲ್ಲೇ, ಈ ಪ್ರಶ್ನೆಯ ಬಗ್ಗೆ ನಿರ್ಧಾರವಾಗುವವರೆಗೂ ಆಗುವುದೂ ಕಷ್ಟ. ನಾವು ನಡೆಸುವುದರಲ್ಲಿ ತಪ್ಪೇನೂ ಇಲ್ಲ. ಸರ್ಕಾರ ಈ ಬಗ್ಗೆ ಆಗುಹೋಗು ಗಳನ್ನು ಗಮನಿಸಿ ಆರ್ಥಿಕ ಪರಿಸ್ಥಿತಿಯನ್ನು ಆದಷ್ಟು ಸುಧಾರಿಸಿಕೊಳ್ಳಲಿ ಎಂದು ಅಪೇಕ್ಷಿಸುತ್ತೇನೆ. ಇತ್ತೀಚೆಗೆ ಫೈನಾನ್ಸ್ ಕಾರ್ಪೊರೇಷನ್ ವಗೈರೆ ಹೆಸರುಗಳನ್ನು ಇಟ್ಟುಕೊಂಡು ರೀವಾದೇವಿ ವ್ಯವಹಾರ ನಡೆಸುವ ಅನೇಕ ಸಂಸ್ಥೆಗಳು ತಲೆ ಎತ್ತುತ್ತಿವೆ. ಇವುಗಳ ಕೋಟ್ಯಾಂತರ ವ್ಯವಹಾರ ನಡೆಯುತ್ತಿದೆ. ಕೆಲವು ವ್ಯಕ್ತಿಗಳು ತಮ್ಮ ಭಾರೀ ವ್ಯವಹಾರದ ಅನುಕೂಲಕ್ಕಾಗಿ ಮಾಡಿ ಕೊಳ್ಳುತ್ತಿರುವ ಇಂತಹ ಸಂಸ್ಥೆಗಳಿಂದ ಕೆಲವರ ಶ್ರೀಮಂತಿಕೆ ಬೆಳೆಯಲು ಅನುಕೂಲವಾಗುವುದೇ ಹೊರತು ಬೇರೇನೂ ಇಲ್ಲ. ಬ್ಯಾಂಕುಗಳೇ ರಾಷ್ಟ್ರೀಕರಣವಾಗಬೇಕಾಗಿರುವ ಪ್ರಸಂಗದಲ್ಲಿ ಇಂತಹ ಕಾರ್ಪೊರೇಷನ್ಸ್‌ಗಳಿಂದ ಆರ್ಥಿಕ ಸಮತೋಲನಕ್ಕೇನಾದರೂ ಪರಿಣಾಮವಾದೀತೇ ಎಂದು ಗಂಭೀರವಾಗಿ ಈಗ ಯೋಚಿಸಬೇಕಾಗಿದೆ.

ಇನ್ನು ಕನ್ನಡ ಚಿತ್ರಗಳಿಗೆ ಸಹಾಯಧನ ನೀಡುವುದರಲ್ಲಿ ವಿಚಾರವಿಮರ್ಶೆ ಇರಬೇಕಾಗಿದೆ. ನಮ್ಮ ನಾಡಿನ ಸಂಸ್ಕೃತಿ ಸಭ್ಯತೆಗಳ ಪರಂಪರೆಗೆ ಅಪಚಾರವೆನಿಸುವ ಅನೇಕ ಕೀಳು ದರ್ಜೆಯ ಚಿತ್ರಗಳು ಬರುತ್ತಿವೆ. ದೇಶದ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಚಿತ್ರಗಳಿಗೆ, ನೈತಿಕ ಮಟ್ಟದ ಚಿತ್ರಗಳಿಗೆ, ಸಹಾಯಧನ ಹೆಚ್ಚು ಕೊಟ್ಟರೂ ಚಿಂತೆ ಇಲ್ಲ, ಅತ್ಯುತ್ತಮ ಚಿತ್ರಗಳಿಗೆ ಮಾತ್ರ ಸರಿವು ನೀಡಿರೆಂದು ಸೂಚಿಸಬಯಸುತ್ತೇನೆ.

3-00 P.M.

ಕೊನೆಯದಾಗಿ ಕನ್ನಡಿಗರ ದುರ್ದೈವವೋ, ಅಧಿಕಾರದಲ್ಲಿರುವವರ ಹೊಯ್ದಾಟ ಮನೋ ಭಾವದ ಫಲವೋ ರಾಜ್ಯಕ್ಕೆ ಇನ್ನೂ ಕರ್ನಾಟಕ ಎಂದು ನಾಮಕರಣವಾಗದಿರುವುದು ಒಂದು ದೊಡ್ಡ ಕೊರಗು ಜನತೆಗಿದೆ. ಇಂತಹ ರಾಷ್ಟ್ರೀಯ ಪ್ರಶ್ನೆಯಲ್ಲಿ "ಅಂದರಕಿ ಮುಂಚಿವಾಳ್ಳು ಅನಂತಯ್ಯ" ಆಗುವುದು ಸಾಧ್ಯವಿಲ್ಲ. ಪ್ರಜಾಪ್ರಭುತ್ವದಲ್ಲಿ ಬಹುಮತಕ್ಕೇ ಅಗ್ರಸ್ಥಾನ. ಈ ಪ್ರಜಾಪ್ರಭುತ್ವ ನೀತಿಗೆ ವಿರೋಧ ಹೋಗುವುದೂ ಸರಿಯಲ್ಲ. ಕಾರಣ ಸರ್ಕಾರ ಬಹುಮತಕ್ಕೆ ಮನ್ನಣೆ ಕೊಟ್ಟು ಈ ಬಗ್ಗೆ ಈ ಅಧಿವೇಶನದಲ್ಲೇ ನಾಮಕರಣ ಕಾರ್ಯ ಮಗು ಮುಪ್ಪಾಗು ವವರೆಗೂ ತಳ್ಳದೆ ಸರ್ಕಾರ ನಿರ್ಣಯ ಮಾಡಲೆಂದು ವಿನಂತಿಮಾಡಿಕೊಂಡು, ಆಯವ್ಯಯ ಪಟ್ಟಿಯನ್ನು ಸ್ವಾಗತ ಮಾಡುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಸ್. ಎಸ್. ಅರಕೇರಿ (ಬಳ್ಳೊಳ್ಳಿ).—ಮಾನ್ಯ ಅಧ್ಯಕ್ಷರೇ, ಈ ಆಯವ್ಯಯದ ಮೇಲೆ ಮಾತನಾಡುವ ಪೂರ್ವದಲ್ಲಿ ನಾನು ಹಿಂದೆ ವಿಷಾದದಿಂದ ಈ ಅಸೆಂಬ್ಲಿಯಲ್ಲಿ ಹೇಳಿದ ಸಲಹೆಯನ್ನು ಮತ್ತೊಂದು ಬಾರಿ ಈ ಮಾನ್ಯ ಸಭೆಗೆ ಮತ್ತು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ಕಳೆದ ಎರಡು ವರ್ಷದಲ್ಲಿ ನಾನು ಇದೇ ಸಭೆಯಲ್ಲಿ ಒಂದು ಮಾತನ್ನು ಹೇಳಿದ್ದೆ. ಇಂದು

ಪ್ರಜಾಪ್ರಭುತ್ವವು ಬಾಳಿ ಬೆಳಗಲು ಮತ್ತು ದೇಶದಲ್ಲಿ ಸರ್ವಾಂಗ ಸುಂದರವಾದ ಆಡಳಿತ ನಡೆವ ದೃಷ್ಟಿಯಿಂದ, ದೇಶದ ಹಿತಕ್ಕಾಗಿ ಹೋರಾಡಿ, ಭಾರತ ದೇಶದ ಹಣೆಬರಹವನ್ನು ಬರೆದ ಡಾಕ್ಟರ್ ಅಂಬೇಡ್ಕರ್ ಅವರ ಭಾವ ಚಿತ್ರವನ್ನು ವಿಧಾನಸಭೆಯಲ್ಲಿ ಹಾಕಬೇಕೆಂದು. ಹಾಗೆ ಹಾಕುವುದರಿಂದ ನಾವು ಸಮಯೋಚಿತವಾದಂತಹ ಮತ್ತು ಒಳ್ಳೆಯ ಆದರ ಭಾವನೆಯಿಂದ ಗೌರವ ಸಲ್ಲಿಸುವ ದೃಷ್ಟಿಯಿಂದ ಅನುಕೂಲವಾಗುತ್ತದೆ, ಆದರ ಸಲುವಾಗಿ ಡಾಕ್ಟರ್ ಅಂಬೇಡ್ಕರ್ ಅವರ ಭಾವ ಚಿತ್ರವನ್ನು ಸರ್ಕಾರದವರು ಸರ್ದಾರ್ ವಲ್ಲಭಾಯಿ ಪಟೇಲರ ಫೋಟೋದ ಪಕ್ಕಕ್ಕೆ ಹಾಕಬೇಕೆಂದು ಕೇಳಿಕೊಂಡಿದ್ದೆ. ಏಕೆಂದರೆ ಡಾಕ್ಟರ್ ಅಂಬೇಡ್ಕರ್, ಸರ್ದಾರ್ ಪಟೇಲರ, ನೆಹರೂರವರ, ರಾಜೆಂದ್ರ ಪ್ರಸಾದರ ಮತ್ತು ಡಾ. ರಾಧಾಕೃಷ್ಣನ್‌ರವರ ಮಾಲಿಕೆಯಲ್ಲಿ ಬರುತ್ತಾರೆ ಮತ್ತು ಅದಕ್ಕೆ ಯಾವುದರಲ್ಲೂ ಕಡಿಮೆ ಇಲ್ಲ. ನೆಹರೂರವರು ಹೇಳಿದ್ದಾರೆ ''ಭಾರತ ದೇಶದಲ್ಲಿ ಸಮಾಜ ಕ್ರಾಂತಿಯನ್ನು ಡಾಕ್ಟರ್ ಅಂಬೇಡ್ಕರ್ ಮಾಡಿದ್ದಾರೆ ಇಂಥ ಒಂದು ಅಮೂಲ್ಯ ರತ್ನ ನನ್ನ ಮಂತ್ರಿಮಂಡಲದಲ್ಲಿ ಬೇರೆಯಾರು ಸಿಗುವುದಿಲ್ಲ, ಇವರ ಬಗ್ಗೆ ಯಾವ ವಿಶೇಷವಾದಂತಹ ಗೌರವವನ್ನು ಸಲ್ಲಿಸಿದರೂ ಅದು ಹೆಚ್ಚಾಗದಾರದು'' ಎಂದು. ಒಟ್ಟಾರೆ, ಡಾ. ಅಂಬೇಡ್ಕರವರು ರಾಜ್ಯಾಂಗವನ್ನು ಬರೆದರು. ಅವರು ಅಪಾರವಾದ ರಾಷ್ಟ್ರ ಸೇವೆ ಮಾಡಿರುವುದರಿಂದ ಅವರನ್ನು ಪ್ರಶಂಸಿಸಿ, ಕೇಂದ್ರದವರು ಒಂದು ಕಂಚಿನ ಪ್ರತಿಮೆಯನ್ನು ಪಾರ್ಲಮೆಂಟ್ ಭವನದ ಆವರಣದಲ್ಲಿ ನಿಲ್ಲಿಸಿ ಗೌರವಿಸಿದ್ದಾರೆ. ಅದೇ ರೀತಿ ನಮ್ಮ ಸಂಪ್ರದಾಯವನ್ನು ಉಳಿದ ಪ್ರಾಂತ್ಯಗಳಾದ ಮಹಾರಾಷ್ಟ್ರ, ಆಂಧ್ರಪ್ರದೇಶ, ಮದ್ರಾಸ್ ಮತ್ತು ಉತ್ತರ ಹಿಂದೂ ಸ್ಥಾನದ ಅನೇಕ ಪ್ರಾಂತಗಳಲ್ಲಿ ಡಾ. ಅಂಬೇಡ್ಕರವರ ಭಾವಚಿತ್ರವನ್ನು ಅಸೆಂಬ್ಲಿಯಲ್ಲಿ ಹಾಕಿದ್ದಾರೆ. ಮಹಾರಾಷ್ಟ್ರ ಅಸೆಂಬ್ಲಿ ಮತ್ತು ಹೈಕೋರ್ಟು ಮಧ್ಯದಲ್ಲಿ ಕಂಚಿನ ಪ್ರತಿಮೆಯನ್ನು ನಿಲ್ಲಿಸಿದ್ದಾರೆ. ಅದರ ಸಲುವಾಗಿ, ಈ ವಿಷಯದ ಬಗ್ಗೆ ನಾನು ಹಿಂದಿನ ಅಧ್ಯಕ್ಷರಾದಂತಹ ಶ್ರೀ ವೈಕುಂಠಬಾಳಿಗಾ ರವರಲ್ಲಿ ಚರ್ಚಿಸಿದ್ದೆ. ಆಗ ಅವರು, ಇದು ಉತ್ತಮವಾದ ಸಲಹೆ, ಮಾನ್ಯ ಮುಖ್ಯ ಮಂತ್ರಿಯವರೊಡನೆ ಮಾತನಾಡುತ್ತೇನೆ ಎಂದು ಹೇಳಿದ್ದರು. ಅದೇ ರೀತಿ ಹಿಂದಿನ ಮುಖ್ಯಮಂತ್ರಿ ಶ್ರೀ ನಿಜಲಿಂಗಪ್ಪನವರೊಡನೆ ಕೂಡ ಇದನ್ನು ನಾನು ಮಾತನಾಡಿದ್ದೆ. ಅದನ್ನು ಸಹಾನು ಭೂತಿಯಿಂದ ಪರಿಶೀಲನೆಮಾಡಿ ಒಂದು ತೈಲ ಚಿತ್ರವನ್ನು ಹಾಕುವಂತಹ ಪ್ರಯತ್ನವನ್ನು ಮಾಡಬೇಕು. ಈ ಏಪ್ರಿಲ್ ತಿಂಗಳ 14ನೇ ತಾರೀಖಿನೊಳಗಾಗಿ ಅದನ್ನು ಹಾಕುವುದಾಗಿ ಭರವಸೆಯನ್ನು ಕೊಟ್ಟಿದ್ದರು. ಆ ಇಬ್ಬರು ವ್ಯಕ್ತಿಗಳ ಪೈಕಿ ಒಬ್ಬರು ಕೈರಾಸವಾಸಿಗಳಾಗಿದ್ದಾರೆ. ಇನ್ನೊಬ್ಬರು ಭಾರತದ ಉನ್ನತ ಮಟ್ಟದ ಕಾಂಗ್ರೆಸ್ ಸಂಸ್ಥೆಯಲ್ಲಿ ಅಧಿಕಾರದಲ್ಲಿದ್ದಾರೆ. ಅವರು ಏನೊಂದು ವಚನವನ್ನು ಕೊಟ್ಟಿದ್ದಾರೆಯೋ ಆ ಪ್ರಕಾರ ಈ ಹೊತ್ತಿನ ದಿವಸ ಸರಕಾರ ನಡಿಸಿ ಕೊಡಬೇಕು.

ಇನ್ನೊಂದು ಸಲ ಈ ಸಲಹೆಯನ್ನು ಮಾನ್ಯ ಅಧ್ಯಕ್ಷರಾದ ಶ್ರೀ ಕೊಠಾವಳೆಯವರಿಗೂ ಮತ್ತು ಮುಖ್ಯ ಮಂತ್ರಿಗಳಾದ ಶ್ರೀಮಾನ್ ವೀರೇಂದ್ರಪಾಟೀಲರಿಗೂ ನಾನು ಹೇಳಬಯಸುತ್ತೇನೆ. ಅದು ಏನೆಂದರೆ ಡಾ. ಅಂಬೇಡ್ಕರ್ ಅವರ ಫೋಟೋವನ್ನು ಈ ಅಸೆಂಬ್ಲಿ ಹಾಲಿನಲ್ಲಿ ಹಾಕುವುದಕ್ಕೆ ವ್ಯವಸ್ಥೆ ಮಾಡಬೇಕು. ಇದನ್ನು ಹಾಕುವ ಬಗ್ಗೆ ಶ್ರೀಮಾನ್ ನಿಜಲಿಂಗಪ್ಪನವರು ಮತ್ತು ಶ್ರೀಮಾನ್ ಬಿ. ವೈಕುಂಠ ಬಾಳಿಗಾ ಅವರು ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಆದ್ದರಿಂದ ಇದೇ ಏಪ್ರಿಲ್ ತಿಂಗಳು 14ನೇ ತಾರೀಖಿನ ಒಳಗಾಗಿ ಈ ನಿರ್ಧಾರವನ್ನು ಕೈಗೊಳ್ಳಬೇಕು. ಇನ್ನು ಉಳಿದ ನಮ್ಮ ದೇಶದ ಅನೇಕ ಪ್ರಾಂತ್ಯಗಳು ಡಾ॥ ಅಂಬೇಡ್ಕರ್ ಅವರ ಭಾವಚಿತ್ರವನ್ನು ಹಾಕುವುದರಲ್ಲಿ ಮರ್ಯಾದೆ ಕೊಟ್ಟಿದ್ದಾರೆ. ಆದರಲ್ಲಿ ಮೈಸೂರು ಹಿಂದೆ ಉಳಿಯಬಾರದು. ಇನ್ನೊಂದು ಸಲಹೆಯೇನೆಂದರೆ ಬೇರೆ ಪ್ರಾಂತ್ಯಗಳಲ್ಲಿ ಡಾ॥ ಅಂಬೇಡ್ಕರ್ ಅವರ ಕಂಚಿನ ಪುತ್ಥಳಿ ಯನ್ನು ಮಾಡಿಸಿ ನಿಲ್ಲಿಸಿದ್ದಾರೆ ಅದೇ ರೀತಿ ಮೈಸೂರು ಸರ್ಕಾರದವರು ವಿಧಾನಸೌಧದ ಮುಂದೆ ಒಂದು ಕಂಚಿನ ಪುತ್ಥಳಿಯನ್ನು ನಿರ್ಮಿಸುವ ಬಗ್ಗೆ ಸ್ಥಾಪನೆ ಮಾಡುವ ಬಗ್ಗೆ ಒಂದು ಸಮಿತಿಯನ್ನು ನೇಮಿಸಬೇಕು ಎಂದು ನಾನು ಸೂಚನೆ ಮಾಡುತ್ತೇನೆ. ತಿನೆಯದಾಗಿ ಕೆ. ಆರ್. ಸರ್ಕಲ್‌ನಿಂದ ಕಾಫೀ ಬೋರ್ಡಿನವರೆಗೆ ಇರತಕ್ಕಂಥ ವಿಧಾನಪೀಧಿಗೆ ಡಾ. ಅಂಬೇಡ್ಕರ್ ರೋಡು ಎಂದು ಹೆಸರಿಡಬೇಕು. ಮತ್ತು ಬೆಂಗಳೂರು ನಗರದಲ್ಲಿ ರವೀಂದ್ರ ಕಲಾಕ್ಷೇತ್ರದ ಪಕ್ಕದಲ್ಲಿರತಕ್ಕ ಜಾಗ ದಲ್ಲಿ ಡಾ॥ ಅಂಬೇಡ್ಕರ್ ಭವನ ಒಂದು ಕಟ್ಟಿಸಿ ಅದನ್ನು ಸಾಮಾಜಿಕ ಕೆಲಸಕಾರ್ಯಗಳಿಗೆ ಕೊಡುವಂತಹ ಒಂದು ವ್ಯವಸ್ಥೆ ಮಾಡಬೇಕು ಎಂದು ನಾನು ಹೇಳುತ್ತೇನೆ.

ಬಡ್ಜೆಟ್ಟಿನ ವಿಷಯವಾಗಿ ಹೇಳುವಾಗ ಶ್ರೀಮಾನ್ ರಾಮಕೃಷ್ಣಹೆಗಡೆಯವರು ಇಲ್ಲ ಇಲ್ಲ. ಅವರು ಮುಂದಿನ ವರ್ಷದ ಬಡ್ಜೆಟ್ಟನ್ನು ಮಂಡಿಸುವ ವೇಳೆಗೆ ಇಲ್ಲಿ ಇರುವುದಿಲ್ಲ, ರಾಯಭಾರಿ ಆಗಿ ಹೋಗುತ್ತೇನೆ ಎಂದು ತಿಳಿದುಕೊಂಡಿರುವಂತಿದೆ. ಮುಖ್ಯವಾಗಿ ಈ ಹೊತ್ತಿನ ದಿವಸ ಖೋತಾ ಆಯವ್ಯಯವನ್ನು ಮಂಡಿಸಿರುವುದನ್ನು ನೋಡಿದಾಗ ನಮ್ಮ ನಿರೀಕ್ಷಣೆ ನಿರಾಶೆಯಲ್ಲಿ ಕೊನೆ

(ಶ್ರೀ ಎಸ್. ಎಸ್. ಅರಕೇರಿ)

ಗೊಳ್ಳುವ ಹಾಗೆ ಕಾಣುತ್ತದೆ. 2½ ಕೋಟಿ ಜನತೆಯ 2-3 ಆಯುವ್ಯಯ ಪತ್ರವನ್ನು ನೋಡಿದಾಗ ಬಡವರನ್ನುವಾಗಿ ಯಾವ ಒಂದು ಪ್ರಾವಿಜನ್ನೂ ಮಾಡಿಲ್ಲ. ಇಷ್ಟೇ ಅಲ್ಲದೆ ಈ ಹೊತ್ತಿನ ದಿವಸ ರಾಜ್ಯದಲ್ಲಿ ನಿರುದ್ಯೋಗ ಸಮಸ್ಯೆ ತಾಂಡವವಾಡುತ್ತಿದೆ. ಇದು ಒಂದು ಗಂಭೀರವಾದ ಸಮಸ್ಯೆಯಾಗಿದೆ. ಇದರ ಬಗ್ಗೆ ಹೇಳುವಾಗ ಮನಸ್ಸು ಬಹಳ ನೋಯುತ್ತದೆ. ಪ್ರತಿಯೊಂದು ಜಿಲ್ಲೆಯಲ್ಲಿಯೂ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ಆಫೀಸ್ ಇದೆ. ಜಿಲ್ಲಾ ಎಂಪ್ಲಾಯ್‌ಮೆಂಟ್ ಕಮಿಟಿ ಎಂದು ಪ್ರತಿಯೊಂದು ಜಿಲ್ಲೆಯಲ್ಲಿಯೂ ಒಂದೊಂದು ಕಮಿಟಿಯನ್ನು ಮಾಡಿ ಅದಕ್ಕೆ ಎಂ. ಎಲ್. ಎ. ಗಳನ್ನು ಸದಸ್ಯರನ್ನಾಗಿ ಮಾಡಿದ್ದಾರೆ. ಬಿಜಾಪುರ ಜಿಲ್ಲಾ ಎಂಪ್ಲಾಯ್‌ಮೆಂಟ್ ಕಮಿಟಿಗೆ ನನ್ನನ್ನು ಸಹ ಒಬ್ಬ ಸದಸ್ಯನನ್ನಾಗಿ ಸೇರಿಸಿದ್ದಾರೆ. ಕಳೆದ 1½ ವರ್ಷದಿಂದ ನಮ್ಮ ಜಿಲ್ಲಾ ಎಂಪ್ಲಾಯ್‌ಮೆಂಟ್ ಎಕ್ಸ್‌ಚೆಂಜ್ ಕಮಿಟಿಯ ಮೀಟಿಂಗ್ ಕರೆದಿಲ್ಲ. ಪ್ರತಿಯೊಂದು ಜಿಲ್ಲೆಯಲ್ಲಿಯೂ 50 ಸಾವಿರ ಮತ್ತು 75 ಸಾವಿರದವರೆಗೂ ನಿರುದ್ಯೋಗಿಗಳ ಸಂಖ್ಯೆ ಇದೆ. ಈ ಹೊತ್ತು ಇಡೀ ರಾಜ್ಯದ ದೃಷ್ಟಿಯಿಂದ ನೋಡಿದರೆ 12 ಲಕ್ಷ ಜನ ನಿರುದ್ಯೋಗಿಗಳು ಇದ್ದಾರೆ. 2½ ಲಕ್ಷ ಜನ ಗ್ರಾಜುಯೇಟ್ಸ್ ನಿರುದ್ಯೋಗಿಗಳು ಇದ್ದಾರೆ. 5 ಸಾವಿರ ಜನ ಇಂಜಿನಿಯರುಗಳು ನಿರುದ್ಯೋಗಿಗಳಾಗಿದ್ದಾರೆ. ಒಂದು ಉದಾಹರಣೆ ಹೇಳುತ್ತೇನೆ. ನನ್ನ ಮಿತ್ರರೊಬ್ಬರು ಬ್ರಾಹ್ಮಣರು ಎಂ. ಎಸ್. ಸಿ. ಪಾಸು ಮಾಡಿದ್ದಾರೆ. ಅವರು ಬ್ರಾಹ್ಮಣರಾದಂತಹ ತಪ್ಪಿಗಾಗಿ ಅವರಿಗೆ ಈಗ 3 ವರ್ಷಗಳಿಂದ ಒಂದು ಕೆಲಸ ಸಿಕ್ಕುತ್ತಾ ಇಲ್ಲ. ಇದನ್ನು ನೋಡಿದಾಗ ಬ್ರಾಹ್ಮಣ ಎಂಬ ಒಂದೇ ಕಾರಣದಿಂದ ಕೆಲಸ ಸಿಕ್ಕಿಲ್ಲ ಎಂದು ನನ್ನ ಭಾವನೆಯಾಗಿದೆ.

ಉಪಾಧ್ಯಕ್ಷರು.—ಮುಂದೆ ಆಯಾ ಇಲಾಖೆಗಳ ಡಿಮ್ಯಾಂಡ್ ಬಂದಾಗ ಮಾನ್ಯಸದಸ್ಯರು ಈ ವಿಚಾರಗಳನ್ನು ಪ್ರಸ್ತಾಪ ಮಾಡಬಹುದು. ಈಗ ಜನರಲ್ ಆಗಿ ಮಾತನಾಡಿ ಜಾಗ್ರತೆ ಮುಗಿಸಬೇಕು.

ಶ್ರೀ ಎಸ್. ಎಸ್. ಅರಕೇರಿ.—ಇಂತಹ ಪರಿಸ್ಥಿತಿ ಇರುವುದರಿಂದ ಸರ್ಕಾರದವರು ಆದಷ್ಟು ಜಾಗ್ರತೆ ಈ ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸಲಿಕ್ಕೆ ಪ್ರಯತ್ನ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಭಾರಿ ನೀರಾವರಿ ಯೋಜನೆಗಳ ಬಗ್ಗೆ ಒಂದು ಮಾತನ್ನು ವಿಷಾದದಿಂದ ಹೇಳಬೇಕಾಗಿದೆ. ಸಾಲಾಗಿ ಕುಳಿತಿರುವ ಕಲ್ಲಿನ ದೇವರುಗಳಿಗೆ ಬೆಣ್ಣೆಯನ್ನು ಸ್ವಲ್ಪ ಸ್ವಲ್ಪ ಹಚ್ಚುವಂತೆ ಈ ಆರ್ಥಿಕ ಮಂತ್ರಿಗಳು ಎಲ್ಲಾ ಯೋಜನೆಗಳಿಗೂ ಸ್ವಲ್ಪ ಸ್ವಲ್ಪ ಹಣವನ್ನು ಹಂಚಿದ್ದಾರೆ. ಎಲ್ಲರನ್ನು ಸಮಾಧಾನಪಡಿಸುವುದಕ್ಕೆ ಹೋಗಿ ಯಾವ ಯೋಜನೆಯನ್ನು ಸಹ ಜಾಗ್ರತೆ ಮುಗಿಸಲು ವಿಫಲರಾಗಿದ್ದಾರೆ. ಒಂದು ಯೋಜನೆಯನ್ನು ಕಟ್ಟಿ ಮುಗಿಸಿ ಇನ್ನೊಂದು ಯೋಜನೆಯನ್ನು ತೆಗೆದುಕೊಳ್ಳುವ ನೀತಿ ಈ ಸರ್ಕಾರಕ್ಕೆ ಇಲ್ಲ. ಅಪ್ಪರ್ ಕೃಷ್ಣಾಯೋಜನೆಗೆ ಕೇವಲ 2 ಕೋಟಿ ರೂಪಾಯಿಗಳನ್ನು ಒದಗಿಸಿದ್ದಾರೆ. ಈ ಹಣದಲ್ಲಿ ಆಲಮಟ್ಟಿ ಯೋಜನೆಗೆ ಏನೂ ಸಿಗುವುದಿಲ್ಲವೆಂದು ಕಾಣುತ್ತದೆ. ವಿಶ್ವಬ್ಯಾಂಕ್‌ನವರು ತಾರೀಖು 27-1-1969ರಲ್ಲಿ ಬಂದು ಈ ಯೋಜನೆಯ ಪ್ರದೇಶವನ್ನು ನೋಡಿಕೊಂಡು ಹೋಗಿದ್ದಾರೆ. ಹಿಂದೆ ಪ್ರಧಾನ ಮಂತ್ರಿಗಳಾಗಿದ್ದ ಶ್ರೀ ಲಾಲ್‌ಬಹದ್ದೂರ್ ಶಾಸ್ತ್ರಿಯವರು ಆಲಮಟ್ಟಿಯಲ್ಲಿ ಹಾಕಿದ್ದ ಅಡಿಗಲ್ಲನ್ನು ಯಾರೋ ತೆಗೆದು ಹಾಕಿದ್ದಾರೆ. ಈ ರೀತಿ ತೆಗೆದವರಿಗೂ ಸರ್ಕಾರದವರಿಗೂ ಅಂತರ್ಗತವಾಗಿ ಏನಾದರೂ ಪತ್ರ ವ್ಯವಹಾರ ನಡೆದಿರಬಹುದೆಂದು ಕಾಣುತ್ತದೆ. ಈ ರೀತಿ ತೆಗೆದಿದ್ದರಿಂದ ಹಿಂದಿನ ಪ್ರಧಾನಮಂತ್ರಿಗಳಿಗೆ ಅಗೌರವ ತೋರಿಸಿದಂತಾಗಿದೆಯೆಂದು ತಿಳಿದಿದ್ದೇನೆ. ಈಗ ಆಲಮಟ್ಟಿ ಸ್ಮಶಾನ ಇದ್ದಂತೆ ಇದೆ. ಅತಿ ಮುತುವರ್ಜಿಯಿಂದ ಸರ್ಕಾರದವರು ಈ ಯೋಜನೆಯನ್ನು ಕೈಗೊಳ್ಳುತ್ತಾರೆಯೇ ಎಂಬ ಬಗ್ಗೆ ನಮಗೆ ಸಂಶಯ ಬಂದಿದೆ. ಈ ಯೋಜನೆಯನ್ನು ಕೈಗೊಳ್ಳುವುದರಿಂದ ಹಳೆಯ ಮೈಸೂರಿನ ಯಾರಿಗಾದರೂ ಅನ್ಯಾಯ ಮಾಡಿದಂತಾಗುವುದು ಎಂದು ಮಾನ್ಯ ಮುಖ್ಯ ಮಂತ್ರಿಗಳು ತಿಳಿದುಕೊಂಡಿದ್ದರೆ, ಅವರಿಗೆ ಆ ರೀತಿ ಭಾವನೆ ಇದ್ದರೆ, ಅದನ್ನು ಪೂರ್ತಿಯಾಗಿ ಮರೆತು, ಈ ಯೋಜನೆಯನ್ನು ವಿಶ್ವಬ್ಯಾಂಕ್‌ನಿಂದ ಸಾಲ ಪಡೆದಾದರೂ ಸಹ ಕಾರ್ಯಗತ ಮಾಡಿ ಮುಗಿಸಿದರೆ ಬರಗಾಲದ ಜಿಲ್ಲೆಗಳಾದ ಗುಲ್ಬರ್ಗ, ರಾಯಚೂರು, ಬಿಜಾಪುರ ಜಿಲ್ಲೆಯ ಜನರಿಗೆ ಅನುಕೂಲ ಮಾಡಿದಂತಾಗುತ್ತದೆ. ಆದ್ದರಿಂದ ಸರ್ಕಾರದವರು ಈ ಯೋಜನೆಯನ್ನು ಪ್ರಾಮಾಣಿಕತನದಿಂದ ಜಾಗ್ರತೆ ಮುಗಿಸಬೇಕೆಂದು ಹೇಳುತ್ತೇನೆ.

ಇನ್ನು ಆಸ್ಪತ್ರೆಗಳ ಬಗ್ಗೆ ಹೇಳಬೇಕೆಂದರೆ ಬಿಜಾಪುರಕ್ಕೆ 500 ಹಾಸಿಗೆಗಳು ಉಳ್ಳಂತಹ ಒಂದು ಸಿವಿಲ್ ಆಸ್ಪತ್ರೆಯನ್ನು ಮಂಜೂರು ಮಾಡಬೇಕೆಂದು ಕೇಂದ್ರಸರ್ಕಾರಕ್ಕೆ ಮತ್ತು ರಾಜ್ಯ

ಸರ್ಕಾರಕ್ಕೆ ಕೇಳಿದ್ದೆವು. ಡಿ. ಡಿ. ಸಿ. ಮೀಟಿಂಗ್‌ನಲ್ಲಿ ಈ ಬಗ್ಗೆ ಒಂದು ನಿರ್ಣಯವನ್ನು ಪಾಸ್ ಮಾಡಿ ಸರ್ಕಾರಕ್ಕೆ ಕಳಿಸಿದ್ದೆವು. ಆದರೆ ಈ ಸಾಲಿನ ಬಡ್ಜೆಟ್‌ನಲ್ಲಿ 100 ಹಾಸಿಗೆಗಳು ಉಳ್ಳ ಸ್ಯಾನಿಟೋರಿಯಂ ಒಂದನ್ನು ಮಂಜೂರು ಮಾಡಿರುವುದಾಗಿ ಹೇಳಿದ್ದಾರೆ.

ಇನ್ನು ನಮ್ಮ ಜಿಲ್ಲೆಯಲ್ಲಿ ಟೂರಿಸ್ಟ್ ಸೆಂಟರ್‌ನ್ನು ಪ್ರಾರಂಭ ಮಾಡುವ ಬಗ್ಗೆ ಬಡ್ಜೆಟ್‌ನಲ್ಲಿ ಪ್ರಸ್ತಾಪ ಮಾಡಿಲ್ಲ. ಅಖಿಲ ಭಾರತದ ಮಟ್ಟದಲ್ಲಿ ತೆಗೆದುಕೊಂಡರೆ, ಅನೇಕ ಪ್ರವಾಸಿಗರು ನಮ್ಮ ಜಿಲ್ಲೆಗೆ ಬರುತ್ತಾರೆ. ಅವರು ಇಳಿದುಕೊಳ್ಳುವುದಕ್ಕೆ ಒಂದು ಒಳ್ಳೆಯ ಹೋಟಲ್ ಇಲ್ಲ. ಖಾಸಗೀ ಹೋಟಲ್‌ಗಳಲ್ಲಿ ಸುರಾದೇವಿಯು ಕಾಟ ಇರುವುದರಿಂದ ಒಳ್ಳೆಯ ಜನರು ಅಲ್ಲಿಗೆ ಹೋಗುವುದಕ್ಕಾಗುವುದಿಲ್ಲ. ಎರ್. ಐ. ಜಿ. ಟೂರಿಸ್ಟ್ ಬಂಗ್ಲೆ ಎಂದು ಇದೆ. ಅಲ್ಲಿ 10 ರೂಮ್‌ಗಳು ಮಾತ್ರ ಇವೆ. ಇನ್ನೂ ಹತ್ತು ರೂಮ್‌ಗಳನ್ನು ಕಟ್ಟಿಸಬೇಕೆಂದು ಸರ್ಕಾರಕ್ಕೆ ಕೇಳಿದ್ದೆವು. ಆದರೆ ಆ ಬಗ್ಗೆ ಹಣವನ್ನು ಬಡ್ಜೆಟ್‌ನಲ್ಲಿ ಸೇರಿಸಿಲ್ಲ. ಈ ಹೊತ್ತಿನದಿವಸ ವಿಜಾಪುರಕ್ಕೆ ಬರುವ ಪ್ರವಾಸಿಗಳು ಸರಿಯಾದ ವಸತಿ ಸೌಕರ್ಯವಿಲ್ಲದೆ ನಿರಾಶೆಯಿಂದ ವಾಪಸ್ ಹೋಗಬೇಕಾಗಿದೆ. ಅಲ್ಲಿ ಟೂರಿಸ್ಟ್ ವ್ಯಾನ್‌ಗಳು ಸಹ ಇಲ್ಲ. ಇತಿಹಾಸದ ಸ್ಥಳಗಳು ಒಂದು ಮೈಲಿ ಅರ್ಧ ಮೈಲಿದೂರ ದೂರದಲ್ಲಿ ಇವೆ. ಈ ಸ್ಥಳಗಳಿಗೆ ಹೋಗಿಬರುವುದು ಒಂದು ಸಮಸ್ಯೆಯಾಗಿದೆ. ಆದ್ದರಿಂದ ವ್ಯಾನ್‌ಗಳನ್ನು ಒದಗಿಸುವುದು ಒಳ್ಳೆಯದು. ಈ ಎಲ್ಲಾ ಕುಂದುಕೊರತೆಗಳನ್ನು ಹೋಗಲಾಡಿಸುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡುತ್ತಾರೆಂದು ನಾನು ನಂಬಿದ್ದೇನೆ.

ಮೂರನೇದಾಗಿ ಫಾರೆಸ್ಟ್ ಡಿಪಾರ್ಟ್‌ಮೆಂಟಿನ ಬಗ್ಗೆ ಒಂದು ಮಾತನ್ನು ಇಲ್ಲಿ ಹೇಳಬೇಕಾಗಿದೆ. ಹಿಂದುಳಿದ ಜನಾಂಗದವರನ್ನು ಅಭಿವೃದ್ಧಿ ಮಾಡುವುದಕ್ಕೆ ಅನುಕೂಲವಾಗುವಂತಹ ಸರಿಯಾದ ಪಾಲಿಸಿಗಳನ್ನು ಇಲ್ಲಿ ಮಾಡಬೇಕು. ರ್ಯಾಂಡ್ ರೆವೆನ್ಯೂ ಆಕ್ಟ್‌ನ್ನು ಅಮೆಂಡು ಮಾಡುವಾಗ ಒಂದು ಮಾತನ್ನು ಸರಕಾರ ಲಕ್ಷದಲ್ಲಿ ಇಟ್ಟುಕೊಳ್ಳಬೇಕು ಎಂದು ನಾನು ಹಿಂದೆ ಕೂಡ ಸರಕಾರಕ್ಕೆ ನೂಚನೆಗಳನ್ನು ಕಳುಹಿಸಿದ್ದೆ. ಈಚೆಗೆ ಸರಕಾರ ಈ ಆಕ್ಟ್‌ನ್ನು ಅಮೆಂಡು ಮಾಡುತ್ತಾರೆಂದು ಕೇಳಿದ್ದೇನೆ. ಹಾಗೆ ಅಮೆಂಡ್‌ಮೆಂಟನ್ನು ತರುವಾಗ ಸರಕಾರ ನೇರವಾಗಿ ಹಿಂದುಳಿದವರ ಜನಾಂಗಕ್ಕೆ ಅನುಕೂಲವಾಗುವಂತೆ ಮಾಡಬೇಕು ಎಂದು ಇಲ್ಲಿ ಸರಕಾರವನ್ನು ಕೇಳಿಕೊಳ್ಳುತ್ತೇನೆ.

ಇನ್ನೊಂದು ವಿಚಾರವನ್ನು ಇಲ್ಲಿ ಹೇಳಬೇಕಾಗಿದೆ. ಇಲ್ಲಿ ಪ್ರತಿ ಸಾರಿ ಅಸೆಂಬ್ಲಿ ನಡೆಯುವಾಗಲೂ ಹೇಳುತ್ತಲೇ ಇದ್ದೇನೆ. ಅದು ಈ ಸಭಾ ಭವನದಲ್ಲಿ ನಮ್ಮ ಹಿಂದುಳಿದ ಜನಾಂಗದ ನಾಯಕರಾದ ಮತ್ತು ರಾಷ್ಟ್ರೀಯ ನಾಯಕರಾದ ಶ್ರೀ ಅಂಬೇಡ್ಕರ್‌ರವರ ಫೋಟೋ ಹಾಕಬೇಕೆಂದು ಎಷ್ಟು ಸಾರಿ ಸರಕಾರಕ್ಕೆ ಮನವಿ ಮಾಡಿದರೂ ಇನ್ನೂ ಅದನ್ನು ಕಾರ್ಯಗತ ಮಾಡಲಿಲ್ಲ. ಇಲ್ಲಿ ಇತರ ಎಲ್ಲಾ ನಾಯಕರ ಫೋಟೋಗಳನ್ನು ಹಾಕಿರುತ್ತಾರೆ. ಆದರೆ ಇನ್ನೂ ಇಲ್ಲಿ ಡಾಕ್ಟರ್ ಅಂಬೇದ್ಕರ್‌ರವರ ಫೋಟೋವನ್ನು ಹಾಕಿಲ್ಲ. ರಾಜ್ಯಾಂಗವನ್ನು ರೂಪಿಸಿದ ಇಂತಹ ಮಹಾನಾಯಕನ ಚಿತ್ರವನ್ನು ಇಲ್ಲಿ ಹಾಕುವುದು ಯೋಗ್ಯ. ಇದನ್ನು ಸರಕಾರ ಬೇಗನೆ ಇಲ್ಲಿ ಹಾಕಲು ಪ್ರಯತ್ನ ಮಾಡಬೇಕು ಹಾಗೆ ಮಾಡದೇ ಹೋದರೆ ನಾವು ಚಳವಳಿ ಮಾಡಬೇಕಾಗಿ ಬರುತ್ತದೆ. ನಮ್ಮ ಜನಾಂಗಕ್ಕೆ ಸೇರಿದ ಶ್ರೀ ರಾಚಯ್ಯನವರು, ಶ್ರೀ ರಾಮಕೃಷ್ಣರವರು ಹಾಗೂ ಉಪಾಧ್ಯಕ್ಷರಾದ ಶ್ರೀ ಮಂಜುನಾಥರವರು ಇದ್ದಾರೆ. ಇನ್ನು 1972 ನೇ ಎಲೆಕ್ಷನ್ ಬರುವ ವೇಳೆಗೆ ಯಾರು ಇರುತ್ತಾರೋ ನಮಗೆ ಗೊತ್ತಿಲ್ಲ. ಆದುದರಿಂದ ಇಲ್ಲಿ ಡಾ. ಅಂಬೇದ್ಕರ್‌ರವರ ಫೋಟವನ್ನು ಬೇಗನೆ ಹಾಕಬೇಕೆಂದು ಸರಕಾರದ ಕೀರ್ತಿ ಹಾಗೂ ಹೆಸರನ್ನು ಉಳಿಸಬೇಕೆಂದೂ ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಗುಂಡ್ಲುಪೇಟೆ).—ಮಾನ್ಯ ಅಧ್ಯಕ್ಷರೇ, ಈ ವರ್ಷದ ಬಡ್ಜೆಟ್ಟನ್ನು ಇಟ್ಟಿರುವ ಸಂದರ್ಭದಲ್ಲಿ, ಆ ಬಡ್ಜೆಟ್ಟನ್ನು ಸ್ವಾಗತಿಸುತ್ತಾ ನಾನು ಕೆಲವು ಸೂಚನೆಗಳನ್ನು ಇಡುವುದಕ್ಕಾಗಿ ನಿಂತುಕೊಂಡಿದ್ದೇನೆ.

ಮೊದಲನೇದಾಗಿ ನಮಗೆ ಈ ವರ್ಷ ಬಂದ ಕಷ್ಟದ ಸಮಯದಲ್ಲಿ, ಫ್ಯಾಮಿಲಿ ಬಂತು ಎಂದು, ಕ್ಷಾಮ ಪರಿಹಾರದ ಕೆಲಸಗಳನ್ನು ಕೇಂದ್ರ ಸರಕಾರದವರ ಸಹಾಯದಿಂದ, ರಾಜ್ಯ ಸರಕಾರದವರು ಮಾಡಿದರು ಮತ್ತು ಇನ್ನೂ ಅನೇಕ ಕಾರ್ಯಕ್ರಮಗಳನ್ನು ಮಾಡಲು ಸುಮಾರು ಹತ್ತು ಕೋಟಿ ರೂಪಾಯಿಯಷ್ಟು ಸಹಾಯ ಧನವನ್ನು ಕೊಟ್ಟು ಸುಧಾರಿಸಿದರು. ಇದಕ್ಕಾಗಿ ನಾನು ಇಲ್ಲಿ ಮೊದಲು ಕೇಂದ್ರ ಸರ್ಕಾರಕ್ಕೂ ಮತ್ತು ನಮ್ಮ ಸರ್ಕಾರಕ್ಕೂ ನನ್ನ ಧನ್ಯವಾದಗಳನ್ನು ಹೇಳಬೇಕಾಗಿದೆ. ಏಕೆಂದರೆ ನಾನು ಅಂತಹ ಒಂದು ಏರಿಯಾದಿಂದ ಬರುತ್ತಿದ್ದೇನೆ. ಅಲ್ಲಿನ ಜನರ ಕಷ್ಟಗಳನ್ನು ಸುಧಾರಿಸಬೇಕೆಂದು ಇವರ ಸಲುವಾಗಿ ಕೇಂದ್ರ ಸರಕಾರದವರು ರಾಜ್ಯ ಸರಕಾರಕ್ಕೆ ಸಹಾಯ ಮಾಡಿರುವುದಕ್ಕಾಗಿ ನನ್ನ ಹೃತ್ಪೂರ್ವಕವಾದ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಇದು ನನ್ನ ಮೊದಲನೇ ಕರ್ತವ್ಯ ಎಂತಲೂ ಭಾವಿಸಿದ್ದೇನೆ. ಆದರೆ ಹೀಗೇ ಎಷ್ಟು ದಿವಸ ಡ್ರಾಟ್

(ಶ್ರೀಮತಿ ಕೆ. ಎಸ್. ನಾಗರತ್ನಮ್ಮ)

ಸ್ಪ್ರಿಕನ್ ಏರಿಯಾ, ಇಲ್ಲವೇ ಸ್ಕೇರ್ಸಿಟಿ ಏರಿಯಾ ಎಂದು ಹೇಳಿಕೊಳ್ಳಬೇಕು, ಹೀಗೇ ಎಷ್ಟು ಕಾಲ ಫ್ಯಾಮಿನ್ ರಿಲೀಫ್ ವರ್ಕ್ಸ್ ಮಾಡಬೇಕೆಂದು ಕೇಳಬೇಕು—ಇದನ್ನು ತಡೆಗಟ್ಟಲು ಯಾವ ಯೋಜನೆ ಮಾಡಬೇಕು ಎಂದು ಕೇಳಬೇಕಾಗಿ ಬಂದಿದೆ ? ನಾನೂ ಕೂಡ ಈ ಸಭೆಗೆ ಬಂದು ಸುಮಾರು 12 ವರ್ಷಗಳಾದವು. ಪ್ರತಿ ವರ್ಷವೂ ನಾನು ಮಾಡಿರುವ ಭಾಷಣವನ್ನು ನೋಡಿದರೆ ನಾವು ಕಷ್ಟದಲ್ಲಿ ಸಿಕ್ಕಿಕೊಂಡಿದ್ದೇವೆ, ಇದಕ್ಕಾಗಿ ಕಂದಾಯ ಮಾಫೀ ಮಾಡಿ, ನಮ್ಮ ರೈತರಿಗೆ ತೊಂದರೆಯಾಗುತ್ತಿದೆ, ಕೆಲಸ ಒದಗಿಸಿ, ಮೇವು ಒದಗಿಸಿ, ಆಹಾರ ಸರಬರಾಜು ಮಾಡಿ, ಎಂದು ಗೋಗರೆದೂ ಗೋಗರೆದೂ ಸಾಕಾಗಿದೆ. ಮತ್ತು ನಾಚಿಕೆಯಾಗಿದೆ. ಸರಕಾರದವರು ಇಂತಹ ಫ್ಯಾಮಿನ್ ಏರಿಯಾಗಳು ಯಾವುವು, ಇದನ್ನು ನಿವಾರಣೆ ಮಾಡುವುದಕ್ಕೆ ಏನೇನು ಮಾಡಬೇಕು, ಎನ್ನುವುದನ್ನು ಸರ್ವೆ, ಮಾಡಿಸಿ, ನಿರ್ಧರಿಸಿ ಇದಕ್ಕಾಗಿ ಒಂದು ಸರಿಯಾದ ಪ್ರಾಜೆಕ್ಟ್ ತಯಾರು ಮಾಡಬೇಕು. ಇದನ್ನು ತಯಾರು ಮಾಡಿ ಅದರಂತೆ ಸಾಯಿಲ್ ಕನ್‌ಸರ್‌ವೇಷನ್ ಎರ್ಲ್ಲಾಗಬೇಕು, ಕಾಂಟೂರು ಬಂಡಿಂಗ ಕೆಲಸ ಎರ್ಲ್ಲಾಗಬೇಕು, ಅಫಾರೆಸ್ಟೇಷನ್ ಕೆಲಸಗಳು ಎರ್ಲ್ಲಾಗಬೇಕು ಹಾಗೂ ಅನಿಮರ್ ಹಸ್‌ಬೆಂಡ್ರಿ ಸ್ಕೀಂಗಳು ಎಲ್ಲೆಲ್ಲಿ ಆಗಬೇಕು, Lift Irrigation ಎರ್ಲ್ಲಾಗಬೇಕು ಎನ್ನುವುದನ್ನು ಕಂಡು ಹಿಡಿದು ಇವೆರ್ಲ್ಲಾ ಪ್ಲಾನುಗಳಲ್ಲಿ ಒಳಗೊಂಡಿದೆಯೇ ಇಲ್ಲವೇ ಇಲ್ಲದಿದ್ದರೆ ಇದಕ್ಕೆ ದುಡ್ಡನ್ನು ಎಲ್ಲಿಂದ ಒದಗಿಸಿಕೊಳ್ಳಬೇಕು ಎನ್ನುವುದನ್ನು ಗಮನಕ್ಕೆ ತೆಗೆದುಕೊಂಡು ಆ ಪ್ರಾಜೆಕ್ಟ್ ಮುಂದುವರಿಸಲು ಅಗ್ರಿಕಲ್ಚರಲ್ ರೀ ಫೈನಾನ್ಸ್ ಕಾರ್ಪೊರೇಷನ್ನಿನ ಮೂಲಕ ಸಾಧ್ಯವಾದಷ್ಟು ಹಣವನ್ನೂ ತೆಗೆದುಕೊಂಡು ಅದರ ಮೂಲಕ ಯಾವುದಾದರೂ ಒಂದು ಏಜನ್ಸಿಯನ್ನು ನಿಗದಿ ಮಾಡಬೇಕು. ಇವನ್ನೆರ್ಲ್ಲಾ ಮಾಡಿ ಜನರಿಗೆ ಅನುಕೂಲ ಮಾಡಬೇಕಾದ್ದು ಸರಕಾರವ ಮೊದಲನೇ ಕರ್ತವ್ಯ. ಏಕೆಂದರೆ ನಾವು ಇಲ್ಲಿ ಬಂದು ಪ್ರತಿ ಸಾರಿಯೂ ನಮ್ಮ ಜನರಿಗೆ ಕಷ್ಟವಾಗಿದೆ ಎಂದು ಹೇಳುವುದಕ್ಕಾಗುವುದಿಲ್ಲ. ಇದೇ ತರಹ ಕಷ್ಟಗಳು ದೇಶದ ಎಷ್ಟೋ ಕಡೆಗಳಲ್ಲೂ ಇರುತ್ತವೆ ಅಂತಹ ಕಡೆಗಳಲ್ಲರುವ ತೊಂದರೆಗಳೇನು ಎನ್ನುವುದನ್ನೆರ್ಲ್ಲಾ ಗಮನಕ್ಕೆ ತೆಗೆದುಕೊಂಡು ಅಲ್ಲನ ಜನರಿಗೆ ಏನೇನು ಅನುಕೂಲಗಳು ಬೇಕೋ ಅವನ್ನೆರ್ಲ್ಲಾ ಮಾಡಿಕೊಡಬೇಕು. ನಿಜವಾಗಿಯೂ ಸರಕಾರ ಇದರ ಕಡೆಗೆ ಗಮನ ಕೊಟ್ಟರೆ ಜನರಿಗೆ ತುಂಬಾ ಅನುಕೂಲ ಮಾಡಿಕೊಡಬಹುದು.

ಇನ್ನು ಇರಿಗೇಷನ್ ವಿಷಯವಾಗಿ ಕೆಲವು ವಿಷಯಗಳನ್ನು ಮಾತನಾಡಬೇಕಾಗಿದೆ. ನಮ್ಮ ಸರ್ಕಾರದವರು ಒಂದು ಕೆಂಪು ಪುಸ್ತಕ ಕೊಟ್ಟಿದ್ದಾರೆ. ಅದು ರೆವ್ಯೂ ಆಫ್ ದಿ ವರ್ಕಿಂಗ್ ಆಫ್ ದಿ ಗೌರ್ನಮೆಂಟ್ ಡಿಪಾರ್ಟ್‌ಮೆಂಟ್. ಅದರ 121ನೇ ಪೇಜಿನಲ್ಲಿ ಇರಿಗೇಷನ್ ಬಾಬಿಗಾಗಿ ಇಟ್ಟಿರುವ ಅಂಕಿ ಅಂಶ ಕೊಟ್ಟಿದ್ದಾರೆ. ಹಳೇ ಮೈಸೂರಿಗೆ ಸುಮಾರು 360 ಲಕ್ಷ ರೂಪಾಯಿ, ಹೊಸ ಮೈಸೂರಿಗೆ 814 ಲಕ್ಷ ರೂಪಾಯಿ ಕೊಟ್ಟಿದ್ದಾರೆ. ಈಗತಾನೆ ಮಾನ್ಯ ಸದಸ್ಯರಾದ ಶ್ರೀ ಅರಕೇರಿಯವರು ಹೇಳಿದರು ಏನು ಬೇಕಾದರೂ ಆಗಲಿ ಕೃಷ್ಣಾ ಪ್ರಾಜೆಕ್ಟ್ ಆಗಬೇಕು ಎಂದು. ಅದು ಮಾಡಬೇಕಾದುದೇನೋ ನಿಜ. ಅದು ಕ್ಷಾಮದ ಪ್ರದೇಶ ನಿಜ. ಅವರು ಹೊಸ ಮೈಸೂರಿಗೆ ಬರುವುದಕ್ಕಿಂತ ಮುಂಚಿತವಾಗಿ ಏನು ಮಾಡುತ್ತಾ ಇದ್ದರು ಎನ್ನುವ ಒಂದು ಪ್ರಶ್ನೆ ಕೇಳಬೇಕಾಗಿದೆ. ಅದನ್ನು ಮಾಡಬೇಡಿ ಎಂದು ಹೇಳುವ ಹೈಕಿ ನಾನಲ್ಲ. ನಮ್ಮ ಕುತ್ತಿಗೆಗೆ ಬಂದಿರುವ ಕಾವೇರಿ ಬೇಸಿನ್‌ನಲ್ಲಿರುವ ಕಬಿನಿ ಪ್ರಾಜೆಕ್ಟು ಮುಂತಾದವುಗಳನ್ನು ಮಾಡದೆ ಹೋದರೆ ನಮಗೆ ನೀರು ಇಲ್ಲದೆ ಇರುವ ಹಾಗೆ ಆಗುತ್ತದೆ. ಅದನ್ನು ಮೊದಲು ಯೋಚಿಸಬೇಕು. ಇನ್ನು ಹಾರಂಗಿ ಪ್ರಾಜೆಕ್ಟ್, ಕಂಬದ ಕಡ, ಇವೆರ್ಲ್ಲಾ ಮುಗಿದು ನಮಗೆ ನೀರು ಸಿಕ್ಕುತ್ತದೆ ಎಂದು ಸ್ವಪ್ನ ಕಾಣುತ್ತಿದ್ದೇವೆ.

ಇನ್ನು ಇರಿಗೇಷನ್ ಪ್ರಾಜೆಕ್ಟಿನಲ್ಲಿ ಇನ್ನೊಂದು ದೊಡ್ಡ ಕಾಂಟ್ರವರ್ಸಿ ಪೇಪರ್‌ನಲ್ಲಿ ನೋಡುತ್ತಾ ಇದ್ದೇವೆ. ಅದು ಕೆ. ಆರ್. ಸಾಗರದಿಂದ ವರುಣಾ ಚಾನೆಲ್ ಮುಖಾಂತರ ಮೈಸೂರು ತಾಲ್ಲೂಕಿನವರಿಗೆ ನೀರು ಕೊಡುವುದು; ಇದು ಏನಾಗಿದೆ ಎಂದರೆ ಅರಮನೆಯಲ್ಲಿ ಎರಡು ಹೆಗ್ಗಣಗಳು ಸೇರಿಕೊಂಡು ಅರಮನೆ ಸಾವಾನಿಗೆ ಜಗಳವಾಡುತ್ತಿತ್ತು. ಆ ರೀತಿ ಮಂಡ್ಯ ಮೈಸೂರಿನವರು ಜಗಳ ಆಡುತ್ತಾ ಇದ್ದಾರೆ. ಕಬಿನಿ ಪ್ರಾಜೆಕ್ಟಿನಿಂದ ಶಿಂಶಾಗೆ ನೀರು ಬಿಟ್ಟು—ಕೆ.ಆರ್.ಎಸ್. ನಿಂದ ವರುಣಾ ನಾಲೆಗೆ ನೀರು ಬಿಟ್ಟರೆ ಮಂಡ್ಯದವರು ಜಗಳ ಆಡುತ್ತಾರೆ. ಇವರು ಜಗಳ ಆಡುವುದು ಇರಲಿ. ಕಬಿನಿ ಪ್ರಾಜೆಕ್ಟಿನಿಂದ ಕೆ. ಆರ್. ಎಸ್. ನೀರು ಬಿಡುವುದು ತಪ್ಪು. ಕಬಿನಿ ಪ್ರಾಜೆಕ್ಟ್ area ಮೊದಲು develop ಆಗಬೇಕು. ನುಗು ಏರಿಯಾದಲ್ಲಿ 24 ಸಾವಿರ ಎಕರೆ ಅಚ್ಚು ಕಟ್ಟಿನಲ್ಲಿ 10 ಸಾವಿರ ಎಕರೆಯೂ ಕೂಡ ಇರಿಗೇಟ್ ಆಗಿಲ್ಲ. ಇನ್ನು 14 ಸಾವಿರ ಎಕರೆಗೆ ಆಗುವಷ್ಟು ನೀರು ಬೇಕು. ಅಲ್ಲಿಗೆ ಮೊದಲು ನೀರು ಬಿಡಬೇಕು. ಅಲ್ಲಿಂದ ಮುಂದಕ್ಕೆ ಮೂಳೆಹೊಳೆ ಪ್ರಾಜೆಕ್ಟ್‌ಗೆ ನೀರು ಪಂಪ್ ಮಾಡಬೇಕು. ಈ ವಿಚಾರದಲ್ಲಿ ಗೊತ್ತಿಲ್ಲದೇ ಮಾತನಾಡಬಾರದು ಎಂದು ತಿಳಿದಂಥ expertsರಲ್ಲಿ ವಿಷಯ ತಿಳಿದುಕೊಂಡು ಮಾತನಾಡುತ್ತಿದ್ದೇನೆ. ನುಗು ಎತ್ತರದಲ್ಲದೆ, ಕಬಿನಿ ಕೆಳಗಡೆ

ಇದೆ. ಒಂದಕ್ಕೊಂದಕ್ಕೆ ಸೇರಿಸುವುದಕ್ಕೆ ಕಷ್ಟ ಎಂದು ಈ ರೀತಿ ವರುಣ ಚಾನಲ್‌ಗೆ ಶುರು ಮಾಡಿದ್ದಾರೆ. ಆದರೆ ಇದು ಶುದ್ಧ ತಪ್ಪು ಅಭಿಪ್ರಾಯ ಎಂದು ಗಹಗಹಿಸಿ ನಕ್ಕು, ಈ ಯುಗದಲ್ಲಿ, ಇಷ್ಟೊಂದು ಇಂಜಿನಿಯರಿಂಗ್ ಫೀಟ್ಸ್ ಆಗುತ್ತಿರುವಾಗ ಇಷ್ಟು ಕಷ್ಟ ಏತಕ್ಕೆ. ನುಗು ಹತ್ತಿರ ಇರುವ ಅಕ್ಕಡಕ್ಕ್ ಹತ್ತಿರ ಬೂಸ್ಟರ್ಸ್ ಹಾಕಿ ಪಂಪ್ ಮಾಡಿದರೆ ನುಗು ಪ್ರಾಜೆಕ್ಟ್ ಅಚ್ಚುಕಟ್ಟಿಗೇ ನೀರನ್ನು ಬಿಡಬಹುದು. ಅಲ್ಲಿಂದ ಮೇಲಕ್ಕೂ ತೆಗೆದುಕೊಂಡು ಹೋಗಬಹುದು ಎಂದು ಲವರ ಜೊಕ್ಕ-ನಿರ್ಧಾರ ಅಭಿಪ್ರಾಯ ಪ್ರೇಳಿದರು. ಅಲ್ಲಿನ ಜನಗಳಿಗೆ ನೀರಿಲ್ಲದೆ ನತ್ತು ಹೋಗುತ್ತಿರುವವರನ್ನು ಬದುಕಿಸುವುದು ಬಿಟ್ಟು ಈ ಪ್ರದೇಶದ ಜನಗಳಿಗೆ ಜೀವ ಕೊಡುವುದನ್ನು ಬಿಟ್ಟು, ಅವರ ನೀರನ್ನು, ಅವರಿಗೆ ಹಕ್ಕಿರುವ, ಅವರಿಗೆ ಸಲ್ಲುವ ನೀರನ್ನು, ಅವರಿಗೆ ಮೋಸ ಮಾಡಲು ಪ್ರಯತ್ನ ಮಾಡಿದೆ ಅವರ ಪಕ್ಷ ಪರಪಕ್ಷ ವಹಿಸದೆ ಈ ಜೀವನ ಮರಣ ಸಮಸ್ಯೆ ಬಗ್ಗೆ, ಯೋಚನೆ ಮಾಡಿ ನಂತರ ನೀವು ಯಾವ ಕೆಲಸಕ್ಕಾದರೂ ಕೈಹಾಕಬೇಕಾಗಿ ಕೇಳಿಕೊಳ್ಳುತ್ತೇನೆ.

ಕೆಲವು ಪ್ರಾಜೆಕ್ಟ್‌ಗಳು ಮೂರು ನಾಲ್ಕು ವರ್ಷಗಳಿಂದ ಏಕೆ ಹತ್ತು ವರ್ಷಗಳಿಂದಲೂ ಕಮಿಟೆಡ್ ಪ್ರಾಜೆಕ್ಟ್ಸ್ ಎಂದು ಇದೆ. ಅವುಗಳಿಗೆ ಈ ನಲದ ಪಟ್ಟಿಯಲ್ಲೂ ಹಣವಿಲ್ಲ. ನಿನ್ನೆ ಯಾರೋ ಬಂದಿರುತ್ತಾರೆ, ಯಾರೋ ಅಪ್ಲಿಕೇಷನ್ ಕೊಡುತ್ತಾರೆ, ಅಲ್ಲಿ ಹೋಗಿ ಅಳತೆ ಮಾಡಿ ಸರ್ವೆ ಮಾಡಿ ಅದಕ್ಕೆ ಹಣವನ್ನೂ ಮಂಜೂರು ಮಾಡುತ್ತಾರೆ. ಜೆಂಡರ್ ಸಹ ಕರೆಯುತ್ತಾರೆ. ನಮ್ಮ ತಾಲ್ಲೂಕಿನಲ್ಲಿ ಮಂಗಳ ಪ್ರಾಜೆಕ್ಟ್ ಮಂಜೂರಾಗಿದೆ. ಇದು ಬಂಡೀಪುರ ಕಾಡಿನಲ್ಲಿದೆ. ಅದಕ್ಕೆ 13 ಲಕ್ಷ ರೂಪಾಯಿ ಮಂಜೂರಾಗಿದೆ. ಬಡ್‌ಜೆಟ್ಟಿನಲ್ಲಿ ಕೂಡ ಬಂದಿದೆ. ಅದನ್ನು ಕಟ್ಟಲಿ. ಆದರಿಂದ ಒಬ್ಬಿಬ್ಬರಿಗೆ ಮಾತ್ರ ಅನುಕೂಲವಾಗುತ್ತದೆ. ಬಾಕಿ ಎಲ್ಲ ಕಾಡೇ. ಇದನ್ನ ನೋಡಿದರೆ 'ಹೊಟ್ಟೆಗೆ ಹಿಟ್ಟಿಲ್ಲ, ಜುಟ್ಟಿಗೆ ಮಲ್ಲಿಗೆ ಹೂ' ಎನ್ನುವಂತಾಗಿದೆ. ''ನಳೂರು ಕೆರೆ'' ಕಮಿಟೆಡ್ ಪ್ರಾಜೆಕ್ಟ್. ಅದಕ್ಕೆ ಒಂದು ಕಾಸೂ ಇಲ್ಲ. ಅಲ್ಲ ಪಿಕಪ್ ಮಾಡಲು ನಾಲ್ಕು ಲಕ್ಷ ರೂಪಾಯಿ ಆಗರೇ ಖರ್ಚು ಮಾಡಿದ್ದಾರೆ. ಈ ವರ್ಷ ಅದನ್ನು revise ಮಾಡಿ ರಿಸರ್ವಾಯರ್ ಮಾಡುವುದಕ್ಕೆ 75 ಲಕ್ಷ ರೂಪಾಯಿಗಳಿಗೆ ಅಂದಾಜು ಮಾಡಿ ಐದು ಸಾವಿರ ಎಕರೆ ಅಚ್ಚುಕಟ್ಟು ಇರುವ ಹಾಗೆ ಮಾಡಿದ್ದಾರೆ. ಇದನ್ನು ಮೊದಲು ಪಿಕಪ್ ಆಗಿ ಮಾಡಿ ಈಗ ದೊಡ್ಡ ಕೆರೆಯಾಗಿ ಏಕೆ ಮಾಡುವುದಕ್ಕೆ ಹೋಗಬೇಕಾಗಿತ್ತು? ಮೊದಲೇ ಕೆರೆ ಏಕೆ ಮಾಡಲಿಲ್ಲ? ಈ ಕೆರೆ ಗುಂಡ್ಲುಪೇಟೆಯ ಮಧ್ಯದಲ್ಲಿ (ಹಾರ್ಟ್ ಆಫ್ ಗುಂಡ್ಲುಪೇಟೆ) ಇದೆ. ಐದು ಸಾವಿರ ಎಕರೆ ನಾಗುವಳಿ ಆಗುವ ಕೆರೆಯನ್ನು ಬಿಟ್ಟು ಕಾಡಿನಲ್ಲಿ ಒಬ್ಬಿಬ್ಬರಿಗೆ ಅನುಕೂಲವಾಗುವಂಥ ಪ್ರಾಜೆಕ್ಟನ್ನು ತೆಗೆದುಕೊಳ್ಳುವುದಕ್ಕೆ ಹೊರಟಿದ್ದಾರೆ. ಅದನ್ನು ಮಾಡುವುದಕ್ಕೆ ಅಡ್ಡಿ ಇಲ್ಲ. ಆದರೆ ಈ ಕೆರೆಯನ್ನು ಬಿಟ್ಟು ಅದನ್ನು ಮಾಡುತ್ತೀವೆಂದರೆ ನಿಜವಾಗಿಯೂ ಅನ್ಯಾಯ ಮಾಡಿದ ಹಾಗೆ, ಜನಗಳಿಗೆ ದ್ರೋಹ ಮಾಡಿದ ಹಾಗೆ ಆಗುತ್ತದೆ. ಆದರಲ್ಲಿಯೂ ನಾನು ಹೇಳದೆ ಹೋದರೆ ಅಲ್ಲಿನ ಜನಗಳಿಗೆ ತುಂಬ ದ್ರೋಹ ಮಾಡಿದ ಹಾಗೆ ಆಗುತ್ತದೆ ಎಂದು ಇದನ್ನು ಸರ್ಕಾರದ ದೃಷ್ಟಿಗೆ ತರುವುದಕ್ಕೆ ಇಷ್ಟಪಡುತ್ತೇನೆ.

ಈ ವರ್ಷ ಗಾಂಧಿ ಶತಾಬ್ದಿ ವರ್ಷ. ಅವರಿಗೆ ಅಚ್ಚುಮೆಚ್ಚಾದ ಒಂದು ಕೆಲಸವೆಂದರೆ ಖಾದಿ ಕೆಲಸ. ನಮ್ಮಲ್ಲಿ 1927 ರಲ್ಲಿ ಬದನವಾಳ ಸ್ಪಿನ್ನಿಂಗ್ ಸೆಂಟರ್ ಪ್ರಾರಂಭವಾಯಿತಂತೆ. ನನಗೆ ಗೊತ್ತಿಲ್ಲ. 1958 ರಲ್ಲಿ ಬದನವಾಳ ಖಾದಿ ಸ್ಪಿನ್ನಿಂಗ್ ಸೆಂಟರ್ ಎಂದು ಬದಲಾವಣೆ ಆಯಿತು. ಅವಕ್ಕೆ ಐದು ಬ್ರಾಂಚ್‌ಗಳಿವೆ. ಕಬ್ಬುಹಳ್ಳಿ, ಮಾದ್ರಹಳ್ಳಿ, ಮರೆಯೂರು, ನೇರಳೆ, ಬದನಗುಪ್ಪೆ. ಕಬ್ಬುಹಳ್ಳಿ ಶಾಖೆಗೆ 10—12 ಗ್ರಾಮಗಳು ಸೇರಿಕೊಂಡಿವೆ. ಸುಮಾರು 1500 ಜನ ಸ್ಪಿನ್ನರ್ಸ್ ಇದ್ದಾರೆ. ಅವರು ಒಂದು ಕೆ.ಜಿ. ಹತ್ತಿ ತೆಗೆದುಕೊಂಡರೆ ಅದಕ್ಕೆ 4-50 ರೂಪಾಯಿ ಕೊಡಬೇಕು. ಕಾರ್ಡಿಂಗ್ ಎಂದು ಒಂದು ರೂಪಾಯಿ ಚಾರ್ಜ್ ಮಾಡುತ್ತಾರೆ. ಇದರಲ್ಲಿ ನುಮಾರು 18-20 ಲಡಿ ನೂಲು ಆಗುತ್ತದೆ. ಇವನ್ನೆಲ್ಲಾ ಹೆಣ್ಣುಮಕ್ಕಳು ತಮ್ಮ ಮನೆ ಕೆಲಸವನ್ನು ಮಾಡಿಕೊಂಡು ಬಿಡುವಿನ ವೇಳೆಯಲ್ಲಿ ಮಾಡುತ್ತಾರೆ. ಅದರಲ್ಲಿಯೂ ಹೊಟ್ಟೆಗೆ ಇಲ್ಲದೆ ಇರುವವರು ರಾತ್ರಿ ಹಗಲು ನೂತು ಅದರಿಂದ ಮನೆಗೆ ಬೇಕಾದ ಕೆಲವು ಸಾಮಾನುಗಳನ್ನು ಕೊಂಡುಕೊಳ್ಳುತ್ತಾರೆ. 18 20 ಲಡಿ ನೂಲಿಗೆ ಅವರಿಗೆ ಸಿಕ್ಕುವುದು 8 ರಿಂದ ಒಂಬತ್ತೂವರೆ ರೂಪಾಯಿಗಳವರೆಗೆ ಎಂದರೆ ಹತ್ತಿಯ ಬೆಲೆಯನ್ನು ಕಳೆದರೆ ನುಮಾರು ಮೂರೂವರೆ ಅಥವಾ ನಾಲ್ಕು ರೂಪಾಯಿ ಸಿಕ್ಕುತ್ತದೆ. ಖಾದಿ ಕಮಿಷನ್‌ನವರು ಒಂದು ಕಾಸ್ಟ್ ಚಾರ್ಟ್ ಕೊಟ್ಟಿದ್ದಾರೆ. ಅದರಲ್ಲಿ ಏನಾಗಿದೆ ಎಂದರೆ ಮೂರು ವರ್ಷದ ಹಿಂದೆ ಖಾದಿ ಕಮಿಷನ್‌ನವರು ನಾವು ಇದನ್ನು ನಡೆಸುವುದಕ್ಕೆ ಆಗುವುದಿಲ್ಲ. ನೀವೇ ಯಾರಾದರೂ ಸೊಸೈಟಿಯನ್ನು ಮಾಡಿಕೊಂಡು ಕೆಲಸ ಮಾಡಿ ಎಂದು ಹೇಳಿದ ಮೇಲೆ ಈಗ ಕೆಲವರು ಸೊಸೈಟಿಯಾಗಿ ಕನ್‌ವರ್ಟ್ ಮಾಡಿ ಬದನವಾಳ ಖಾದಿ ಸೊಸೈಟಿ ಮಾಡಿದ್ದಾರೆ. ಇವರುಗಳು ಈಗ ಏನು ಮಾಡುತ್ತಿದ್ದಾರೆ ಎಂದರೆ, ಖಾದಿ commission ನವರು ನಿಗದಿ ಮಾಡಿರುವ ರೇಟು ಕೊಡುತ್ತಿಲ್ಲ. ಅವರು ಕಾಸ್ಟ್ ಚಾರ್ಟ್‌ನಲ್ಲಿ 67 ಪೈಸೆ ಇದ್ದರೆ ಕೊಡುವುದು 18 ಕೌಂಟಿಗೆ 53 ಪೈಸೆ, 64 ಪೈಸೆ ಇದ್ದರೆ ಲಡೀಗೆ 20 ಕೌಂಟಿಗೆ 53 ಪೈಸೆ, 62 ಪೈಸೆ ಇದ್ದರೆ ಲಡೀಗೆ, 22

(ಶ್ರೀಮತಿ ಕೆ. ಎಸ್. ನಾಗರತ್ನಮ್ಮ)

ಕೌಂಟಿಗೆ 52 ಪೈಸೆ, 62 ಪೈಸೆ ಇದ್ದರೆ ಲಡೀಗೆ, 24 ಕೌಂಟಿಗೆ 50 ಪೈಸೆ—ಹೀಗೆ ಕೊಡುತ್ತಿದ್ದಾರೆ. ಈಗ ಮತ್ತೆ price rise ಆಗಿದೆ. ಹೀಗಾಗಿ ಸಾವಿರಾರು ರೂಪಾಯಿ ಬಡ ಹೆಣ್ಣುಮಕ್ಕಳಿಗೆ ಕೊಡಬೇಕಾದ್ದನ್ನು ಕೊಡದೆ ಮೋಸ ಮಾಡುತ್ತಿದ್ದಾರೆ. ಇದಕ್ಕೆ ಅನೇಕ ರೀತಿಯ ಪತ್ರವ್ಯವಹಾರ ಆಯಿತು. ನಾನೂ ಕೂಡ ಸಂಬಂಧಪಟ್ಟ ಸೆಕ್ರೆಟರಿಗಳಿಗೆ, ಉಪನಿಬಂಧಕರಿಗೆ ಹೇಳಿದೆ. ಅವರು ಇನ್‌ಸ್ಪೆಕ್ಟರನ್ನು ಕಳಿಸಿ ಪರೀಕ್ಷೆ ಮಾಡಿಸಿದರು, ಹಣ ಉಳಿದಿರುವುದನ್ನು ಕೊಡಬೇಕೆಂದು ಎರಡು ಸಲ ಹೇಳಿದರು, ಬೆಲಿಗಾಮ್‌ಗೂ ಕೊಟ್ಟರು, ಅದಕ್ಕೆಲ್ಲ ನನ್ನಲ್ಲಿ ದಾಖಲೆ ಇದೆ. ಆಮೇಲೆ ಮೀಟಿಂಗ್ ಒಂದು ಆಯಿತಂತೆ. ಅಲ್ಲಿಯ ದೊಡ್ಡ ಮನುಷ್ಯರ ಜನರು ನನ್ನಲ್ಲಿ ಹೇಳಿಕೊಳ್ಳುವುದಾಗಿ ತಿಳಿಸಿದಕ್ಕೆ ಅವರು ಮಾವನವರ ಮನೆಯಲ್ಲಿ ಬೇಕಾದಷ್ಟಿದೆ, ತಂದುಕೊಡಲು ಎಂದು ಹೇಳಿದರಂತೆ. ಇವರು ಮೋಸ ಮಾಡುವುದಕ್ಕೂ ನಮ್ಮ ಮಾವನವರಿಗೂ ಏನು ಸಂಬಂಧವೋ, ಅವರಿಗೇ ಗೊತ್ತಿರಬೇಕು. ಖರ್ಚು ಮಾಡಿರುವ ವಿವರ ಹೇಳಿದ್ದೇನೆ. ಆ ವ್ಯವಹಾರ ತಿಳಿಸಿದ್ದೇನೆ. ಈ ಗಾಂಧಿ ವರ್ಷದಲ್ಲಿ ಗಾಂಧೀಜಿಯವರಿಗೆ ಮೆಚ್ಚುಗೆಯಾಗುವಂತ ಇಂಥ ಕೆಲಸದಲ್ಲೂ ದರೋಡೆ ಆಗುತ್ತಿದ್ದರೆ ಅದನ್ನು ನೋಡುತ್ತಾ ಸುಮ್ಮನಿರುವುದು ಸರಿಯೇ ! ಎಂದು ಸಂಬಂಧಪಟ್ಟ ಮಂತ್ರಿಗಳನ್ನು ಕೇಳಲು ಇಚ್ಛಿಸುತ್ತೇನೆ.

3-30 P.M.

ಶ್ರೀ ಡಿ. ಎಂ. ಸಿದ್ದಯ್ಯ.—ಅಲ್ಲಿಗೆ ಸಬ್ಸೈಡಿ ಆಗದೆ ಹತ್ತಿಯನ್ನು ನಂಜನಗೂಡಿನಲ್ಲಿರುವ ಕಪಿಲಾ ಚಿಕ್ಸ್‌ಚೈರ್ಸ್‌ಗೆ ಕೊಡುತ್ತಿದ್ದಾರೆ ಎಂಬ ವದಂತಿ ಇದೆ. ಇದು ನಿಮಗೆ ಗೊತ್ತೇ ?

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಅದರ ವಿಚಾರ ನನಗೆ ಗೊತ್ತಿಲ್ಲ. ಇದ್ದರೂ ಇರಬಹುದು. ಹೆಣ್ಣುಮಕ್ಕಳಿಗೆ ಮೋಸಮಾಡಿ ಮ್ಯಾನೇಜರು 180ರಿಂದ 320 ರೂಪಾಯಿಗಳ ಗ್ರೇಡನ್ನು ಮಾಡಿಕೊಂಡರು. ಅಕೌಂಟೆಂಟ್ ಫಸ್ಟ್ ಡಿವಿಜನ್ ಕ್ಲಾರ್ಕ್ ಗ್ರೇಡ್ 110-220 ಇದ್ದುದನ್ನು 270 ರವರೆಗೆ ಏರಿಸಿದರು, ಪೈಸಿಡೆಂಟರಿಗೆ 150 ರೂಪಾಯಿ ಆನರೇರಿಯಂ ಇದ್ದುದು 300 ರೂ ಮಾಡಿಕೊಂಡರು. ಇದರ ಜೊತೆಗೆ ಎಷ್ಟು ಹಣ ಮಾಡಿಕೊಂಡಿದ್ದಾರೋ ಗೊತ್ತಿಲ್ಲ. ಇದಲ್ಲದೆ 7 ಸಾವಿರ ರೂಪಾಯಿ ಕಾರು ಕೊಳ್ಳಲು ಸಾಲ ತೆಗೆದುಕೊಂಡರು, ಅದು ಟ್ಯಾಕ್ಸಿಯಾಗಿ ರನ್ ಆಗುತ್ತಿತ್ತು, ಅದಕ್ಕೆ ಆಕ್ಸಿಡೆಂಟ್ ಆಗಿದೆ. ಅಕೌಂಟೆಂಟಿಗೆ ಮನೆ ಕಟ್ಟಲು ಸಾವಿರಾರು ರೂಪಾಯಿ ಸಾಲ ಕೊಡಲಾಗಿದೆ. ಈ ದುಡ್ಡೆಲ್ಲ ನೂಲುವವರಿಗೆ ಸಲ್ಲಬೇಕಾದದ್ದು ಇವರ ಮನಸ್ಸೋ ಇಚ್ಛೆ ಖರ್ಚು ಮಾಡುವುದು ಸರಿಯೇ ? ಧರ್ಮವೇ ? ಇದೆ ಗಾಂಧಿ ನೀತಿಯೇ ! ಇದೆಲ್ಲಾ ನ್ಯಾಯವೇ ? ಇದೆಲ್ಲಾ ಗಾಂಧಿಯವರಿಗೆ ಆಗಬೇಕೆಂಬ ಇಷ್ಟವಿತ್ತೇ ಎಂದು ಕೇಳುತ್ತೇನೆ. ಏಕೆ ಇದನ್ನು ಹೇಳುತ್ತಿದ್ದೇನೆ ಎಂದರೆ ಇದು ಕೇವಲ ಹೆಣ್ಣುಮಕ್ಕಳ ಕೆಲಸ. ಅವರಿಗೆ ಕೊಡಬೇಕಾದ್ದನ್ನು ಕೊಟ್ಟು ಉತ್ತೇಜನ ಕೊಡಬೇಕು ಎಂಬುದಕ್ಕಾಗಿ ಇದನ್ನು ಹೇಳುತ್ತಿದ್ದೇನೆ. ಅವರು ದುಡಿದಮೇಲೆ ಅವರಿಗೆ ಹೊಟ್ಟೆಬಟ್ಟೆಗೆ ಸರಿಯಾಗಿ ಕೊಡಬೇಕಾದ್ದು ನ್ಯಾಯ. ಇದನ್ನು ಕೈಗಾರಿಕಾ ಮಂತ್ರಿಗಳು ಸರಿಯಾಗಿ ವಿಚಾರಮಾಡಿ ತ್ವರಿತ ವ್ಯವಸ್ಥೆ ಮಾಡಬೇಕು.

ಇನ್ನು ಸಹಕಾರ ಇಲಾಖೆ. ನಮ್ಮ ಗುಂಡಲಹೇಡಿ ಸಹಕಾರ ಸೊಸೈಟಿ ಒಂದು ಗಡವನ ಲಾಯವಾಗಿದೆ. ಅದರ ಕಥೆಯನ್ನು ಇನ್ನೊಂದು ಸಲ ಹೇಳುತ್ತೇನೆ. ಇದರಲ್ಲಿರುವ ದೋಷದೋಷಗಳನ್ನು ಸರಿಪಡಿಸಲು ದೇವರೇ ಬರಬೇಕು.

ವಿದ್ಯಾಭ್ಯಾಸದ ವಿಚಾರದಲ್ಲಿ ಒಂದು ಪಾಲಿಸಿ ಮಾಡಿದ್ದಾರೆ. ಹೊಸದಾಗಿ ಪ್ರಾರಂಭಿಸುವ ಯಾವ ಶಾಲೆಗೂ 5 ವರ್ಷಗಳವರೆಗೆ ಗ್ರಾಂಟು ಕೊಡುವುದಿಲ್ಲ ಎಂದು ತಿಳಿಸಿದ್ದಾರೆ. ಇದು ಹೆಣ್ಣುಮಕ್ಕಳ ಶಾಲೆಗಳಿಗೂ ಅನ್ವಯಿಸುವುದು. ಪಟ್ಟಣಗಳಲ್ಲಿ ಹೆಣ್ಣುಮಕ್ಕಳು ಮತ್ತು ಗಂಡುಮಕ್ಕಳು ಒಟ್ಟಿಗೆ ಓದುವುದಕ್ಕೆ ಅನುಕೂಲವಿದೆ. ಆದರೆ ಕಷ್ಟವಿರುವುದು ಹಳ್ಳಿಗಳಲ್ಲಿ. ಆದುದರಿಂದ ಗ್ರಾಮಾಂತರ ಪ್ರದೇಶಗಳಲ್ಲಿ ಹೆಣ್ಣುಮಕ್ಕಳಿಗೆ ಶಾಲೆ ತೆರೆಯುವುದಾದರೆ ಅದಕ್ಕೆ ಗ್ರಾಂಟು ಕೊಡಬೇಕು. ಮೇಲಿನ ಪಾಲಿಸಿ General policy ಆಗಕೂಡದು.

ವ್ಯವಸಾಯದ ಇಲಾಖೆಯಲ್ಲಿ ಫರ್ಟಿಲೈಜರ್ಸ್ ವಿಚಾರದಲ್ಲಿ ಮಾಡಿರುವ ಅನ್ಯಾಯ ಬಹಳ ವಾಗಿದೆ. ಅಲ್ಲಿ ಸಬ್ಸಿಡಿ ತೆಗೆದು ಬೆಲೆ ಜಾಸ್ತಿ ಮಾಡಿದ್ದಾರೆ. ಫರ್ಟಿಲೈಜರ್ಸ್ ಜಾಸ್ತಿ ಉಪಯೋಗಿಸಬೇಕು ಎಂದು ಜನಗಳಿಗೆ ತಿಳುವಳಿಕೆ ಕೊಟ್ಟು ಆ ದಿಶೆಯಲ್ಲಿ ಈಗತಾನೇ ಕಾಲಿಡುತ್ತಿರುವಾಗಲೇ ಹೀಗೆ ಒಂದೇ ಸಮನೆ ಬೆಲೆ ಜಾಸ್ತಿ ಮಾಡಿರುವುದು ಸರಿಯಲ್ಲ. ಹೂ ಎಂದು ಕೂಗುವುದಕ್ಕೆ ಮೊದಲೇ

ಕತ್ತೆ ಹಾಗೆ ಕೂಗು ಅಂದರೆ ಸಾಧ್ಯವೇ ! ಈಗಿನ ಪರಿಸ್ಥಿತಿ ಹೀಗೇ ಆಗಿದೆ. ಇದು ಸರಿಯಲ್ಲ. ಇದಕ್ಕೆ ನಿಗಾ ಕೊಡಬೇಕು. ಇನ್ನೂ ಹೇಳಬೇಕಾದ ವಿಚಾರಗಳು ಅನೇಕವಾಗಿದ್ದವು. ಆದರೆ ಅಧ್ಯಕ್ಷರು ಮುಂದೆ ಹೇಳಲು ಕಾರಾವಕಾಶ ಕೊಡುತ್ತಾರೆಂದು ನಂಬಿ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ಈ ಬಜೆಟ್ಟನ್ನು ಸ್ವಾಗತಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†Smt.. WINNIFRED F. FERNANDES (Coondapur):—Mr. Speaker, Sir, at the outset, I must thank the Hon. Minister for Finance for the tax-free Budget, because he has not overburdened the common man. Of course, the Central Budget is too harsh on the poor and is too soft on the rich. I must also thank the Finance Minister for giving the enhancement of D.A. to the Government employees. But, I think, he has done some injustice to the Class IV and Class III employees in the pay range of Rs. 90–109. They are the losers by about Rs. 12 p.m.

Sri RAMAKRISHNA HEGDE.—I am getting it examined.

Smt. WINNIFRED F. FERNANDES.—Please see to it, because it should be a fair deal to all.

In various departments, there are about 5,000 local candidates working and their services should be regularised, and no one should be ousted. The Hon. Chief Minister was kind enough to state the other day during Question Hour that they are given a chance to appear for the P.S.C. examination. They should be given age-bar exemption because of their vast experience for having worked for 3 to 4 years. I request the Government to regularise the services of local candidates who have joined after 1965.

The Hon. Finance Minister has stated in his Budget speech that the Local bodies also can give this enhancement of D.A. to their employees. He has given an assurance that every assistance will be given to the Local bodies. Same kind of assurance was given last year when there was enhancement of D.A. I am the President of the Coondapur Town Panchayat, I have written several letters to give us assistance, but not a single paisa has been given so far, even though they say that every assistance will be given to the local bodies. I request the Government to see that some assistance is given to the local bodies in future.

Of course, the Government has given top priority in the Fourth Five Year Plan for agriculture. I think, they do not practice as they preach. When top priority is given to agriculture, they should see to the necessities of the poor ryots. Irrigation pump-sets, fertilizers, seeds, etc., should be supplied to the ryots as and when they need. But now-a-days we see there are several loans which are given to the ryots like the takavi loan, land development loan, etc. But these loans are given only to the landlords. When the poor ryots or the middlemen approach the Government for these loans they are only sent with empty hands. The landlords are given loans at a lower rate of interest and in turn they invest this loan amount in banks and derive higher rate of interest. Is it the policy of the Government to give

(SMT. WINNIFRED F. FERNANDES)

loans to landlords to earn high interest by investing the loan amounts in the banks? s it the way the interest of the poor ryots is served? Is it the way the ryots are encouraged? Therefore Sir, I would urge upon the Minister concerned to look into the matter and see that in future these benefits are given to one and all. I also like the Government to give these benefits to the Chalgeni tenants. According to the present policy of the Government these benefits are not given to them. Mostly in South Kanara there are Chalgeni tenants—of course majority of them have been deprived of these benefits. They should be given these benefits. Also pumpsets for irrigation purposes should be given to these Chalgeni tenants.

In regard to food, I would like to say, that the levy is collected only from the middle class and not from the rich landlords. The revenue officials go house to house and collect the levy by force. They simply send their peons and collect the levy without even giving a receipt and this is the harassment that is being done at present, in Coondapur. The Government should look into this. Also I ask the Hon. Minister for Finance to look into the prices of essential commodities used by common man. Now-a-days the prices are rocketting day by day in regard to the essential commodities and the result is, the Government employees and all alike, are not able to meet both their ends out of what they get. Unless the State Government urges upon the Centre to check the soaring prices, I think, the Government will not be in a position to let go. If the State is to prosper, the soaring prices should be checked.

Regarding Fisheries and Animal Husbandry I would like to say that the provision made in the Budget is very inadequate. If the Government really wants to encourage the fisheries and animal husbandry, more and more amount should be provided for this, and it would also help in solving the food problem, to some extent. The dairy farming, poultry, piggery should be started in every taluka also so that the food problem could de solved to some extent. Sir. I am told, that in Kolar inland fishery is being developed. When Kolar is a famine stricken area how can the inland fisheries be developed there? When there is no possibility of getting water for cultivation, why should the Government spend such a large amount on rearing these fishes in an area like Kolar? I would like to ask the Government why should they spend such huge amount lavishly? Why should it not be spent in coastal belts where all facilities for rearing these fishes are available? Therefore, Sir, it would be better to spend money in coastal belt areas and encourage the fishermen by supplying mechanised boats also.

In regard to Rural Water supply the Government has sanctioned some of the water supply schemes to some villages with the condition that they should give 10 per cent of the contribution of the estimated cost and in some villages they are asked to pay only 5 per cent of the

contribution. I would like to know from the Government as to why they should show partiality of this kind and step-motherly treatment ? Of course, in my village the Water Supply scheme has been sanctioned and the estimated cost of it, is about 4 lakhs and odd and the 10 per cent contribution to be paid to Government, comes to about 50 thousand rupees. On behalf of the Panchayat, I have deposited 5 per cent of the total estimated cost which comes to about Rs. 25,000 few months back and the money is lying in the treasury without any interest thereon. But so far, no technical sanction has been accorded. There has been inordinate delay in this respect even though I have reminded the Government several times in the matter. I request the Government to expedite the matter and also to see that all the villages in the State are given this facility of water supply, in view of the fact that there is a contageous disease called 'fileria' spreading in the villages. I request the Government to take suitable steps to provide rural water supply so as to see that this disease does not spread further.

In regard to pensions to retired teachers I would like to say that teachers who retired before re-organisation of States, do not get any pension, for no fault of theirs. Just because they retired before 1956 they do not get the benefit of pension as against other teachers. I request that Government should see that pension benefits are given even to those teachers who retired before States re-organisation along with other benefits like triple benefit schemes, etc.

I would also like to mention that the applications sent to the revenue authorities are being kept pending for many months together without taking any action on the applications. Though there is a rule that papers should move within two months or so, nothing is being done in this respect. In the Tahsildars' offices the poor and old people when they submit their applications they are kept pending without giving any attention to them. I request the Government to see that these applications are perused and necessary action taken thereon immediately.

Lastly, I want to say something in regard to what I said on 25th instant in connection with the 'Shiva Sena' and 'Bantara Sena' activities at Coondapur. Sir, yesterday I was challenged by hon. Member Smt. Leelavathi Rai that such a thing, as stated by me in my speech on that day, has not at all happened in Coondapur. What I saw with my own eyes, I had stated in this House. It is my responsibility to safeguard the interest of my constituents. I did not blame the entire community in general. When I referred to 'Bantara Sena' at Coondapur I also said that there are both good people and bad people.

Smt. K. LEELAVATHI RAI (Bantwal).—Sir, I rise to a point of order. I am coming from an area where majority of the catholics are supporters of these Senas. What I said, the other day was, that the hon. Member need not bring communalism in this House.

Mr. DEPUTY SPEAKER.—I request the hon. Member not to interrupt. The portion of speech relating to the challenge made against another Member has been expunged from the proceedings.

Smt. WINNIFRED F. FERNANDES.—The incident which happened on the 10th is that the other community people were beaten up severely and with broken legs they were admitted to the Hospital. Majority of the Bunts are supporting me and still supporting me. Only Bunts people voted for me.

Smt. K. LEELAVATHI RAI.—She is again bringing the communal issue. I have not said that. She should not create such a false impression.

Smt. WINNIFRED F. FERNANDES.—So, I want to tell the Hon. Speaker what has happened in Coondapur. There was no need for the Hon. Member to challenge me.

Lastly, I want to tell you about rural communication roads. These be taken up by the P.W.D. because if they are not taken up, the villagers cannot take their produce to the market. So, at an early date all these roads which are left out, should be taken up by the Government. So far as flood protective measures are concerned, in South Kanara, there are heavy floods and so far no protective measures are taken. In order to prevent flood havoc, I request the Government to see that rivetments are built on both sides of the river so that water may not come in and destroy cultivation as well as lives of the people.

Lastly, this being the Gandhi Centenary year, I request that more Mahila Mandals and nursery schools should be opened throughout the State, specially in each Taluk there should be at least 10 such institutions. There are only one or two now. Every woman should be encouraged to come forward and partake in these activities. With these words, I thank the Chair.

† ಶ್ರೀ ಎಂ. ಆರ್. ಪಾಟೀರ್ (ಹುಬ್ಬಳ್ಳಿ ಗ್ರಾಮಾಂತರ).—ಮಾನ್ಯ ಅಧ್ಯಕ್ಷರೇ, ಹಣಕಾಸಿನ ಮಂತ್ರಿಗಳು ನಮ್ಮ ಮುಂದೆ ಮಂಡಿಸಿರತಕ್ಕ ವರದಿಯನ್ನು ನಾನು ಸ್ವಾಗತಿಸುತ್ತಾ, ಅವರು ಮಾಡಿರತಕ್ಕ ಭಾಷಣದ ಬಗ್ಗೆ ಒಂದೆರಡು ಅಂಶಗಳನ್ನು ಪ್ರಸ್ತಾಪಿಸುತ್ತ ನನ್ನ ಮನಸ್ಸಿನ ಪ್ರತಿಕ್ರಿಯೆಯೇನು ಎಂಬುದನ್ನು ವ್ಯಕ್ತಪಡಿಸುವುದಕ್ಕೆ ನಾನು ಇಷ್ಟಪಡುತ್ತೇನೆ.

ಸರ್ಕಾರದವರು ಇತ್ತೀಚೆಗೆ ಕೈಗೊಂಡಂಥ ಮೇಜರ್ ಮತ್ತು ಮಾಡಿಯಂ ಇರಿಗೇಷನ್ ಪ್ರಾಜೆಕ್ಟ್‌ಗಳ ಮೇರೆ ಸರ್ಕಾರದವರು ಕೋಟ್ಯಾನು ಕೋಟಿ ರೂಪಾಯಿಗಳನ್ನು ತೊಡಗಿಸಿರುವುದರಿಂದಲೂ ಹಳ್ಳಿಗಳಲ್ಲರತಕ್ಕ ಜನಕ್ಕೆ ಅಂದರೆ ರೈತಾಪಿ ಜನರಿಗೆ ಇರಿಗೇಷನ್ ಪಂಪ್‌ಸೆಟ್‌ಗಳನ್ನು, ವಿದ್ಯುಚ್ಛಕ್ತಿಯನ್ನು ಒದಗಿಸುವುದಕ್ಕೆ ಕೋಟ್ಯಾನು ಕೋಟಿ ರೂಪಾಯಿಗಳನ್ನು ತೊಡಗಿಸಿರುವುದರಿಂದಲೂ ಮತ್ತು ರೈತರಿಗೆ ಅಗತ್ಯವಾಗಿ ಬೇಕಾಗಿರತಕ್ಕ ಗೊಬ್ಬರ ಇತ್ಯಾದಿಗಳನ್ನು ಒದಗಿಸುವುದಕ್ಕೆ ಸಾಕಷ್ಟು ಹಣವನ್ನು ಸರ್ಕಾರ ತೊಡಗಿಸಿರುವುದರಿಂದಲೂ ರೈತರು ಬಹಳ ರಾಭವನ್ನು ಜಿರಾಯಿತು ಕನುಬಿನಲ್ಲ ಗಳಿಸಿದ್ದಾರೆ. ಹಾಗೆ ಅವರು ಗಳಿಸಿರತಕ್ಕ ರಾಭದಲ್ಲ ಆ ಪ್ರತಿಫಲದಲ್ಲ ಸರ್ಕಾರಕ್ಕೆ ಒಂದು ಭಾಗ ಬರಬೇಕಾಗಿತ್ತು; ಅದು ಬಂದಿಲ್ಲ. ಆ ಜನರು ತೆರಿಗೆಯಿಂದ ಪಾರಾಗಿದ್ದಾರೆಂದು ಅದಕ್ಕಾಗಿ ಈಗ ಭೂತಲಿಂಗಂ ಕಮಿಟಿಯನ್ನು ಕೂಡ ನೇಮಕ ಮಾಡತಕ್ಕ ಅಗತ್ಯವುಂಟಾಗಿದೆ ಎಂದೂ; ಆ ಕಮಿಟಿ ಈಗ ಈ ವಿಚಾರದಲ್ಲಿ ಸಾರಾಸಾರ ವಿಚಾರಣೆ ನಡೆಸಲದೆಯೆಂದೂ ಹಣಕಾಸಿನ ಮಂತ್ರಿಗಳು ತಮ್ಮ ಭಾಷಣದಲ್ಲ ಹೇಳಿದ್ದಾರೆ. ರೈತರ ಪರಿಸ್ಥಿತಿ ಸ್ವಲ್ಪಮಟ್ಟಿಗೆ ಸುಧಾರಿಸಿದೆ ಅನ್ನುವುದು ನಿಜ. ಅಂದ ಮಾತ್ರಕ್ಕೇ ಈ ವಿಚಾರದಲ್ಲಿ ಸರ್ಕಾರವಾಗಲೇ ಅಥವಾ ನಾವಾಗಲೇ ಒಂದು ರಂಜಕವಾದ ರೀತಿಯಲ್ಲ ಅಭಿಪ್ರಾಯ ಪಡಬಾರದು ಅನ್ನುವುದು ನನ್ನ ಅಭಿಪ್ರಾಯ.

ರೈತಾಪಿವರ್ಗವೆಲ್ಲಾ ತನ್ನ ಆರ್ಥಿಕ ಪರಿಸ್ಥಿತಿಯನ್ನು ಬಹಳ ಮಟ್ಟಿಗೆ ಸುಧಾರಣೆ ಮಾಡಿಕೊಂಡಿದೆ, ಅವರೆಲ್ಲಾ ಬಹಳ ಶ್ರೀಮಂತರಾಗಿದ್ದಾರೆ, ಅವರುಮೇಲೆ ತೆರಿಗೆಯನ್ನು ಈ ದಿವಸ ಹಾಕಬಹುದು ಎಂಬುದಾಗಿ ಒಂದು ವರ್ಗದ ಜನರು ಬಹಳ ಪ್ರಚಾರಗಳನ್ನು ನಡೆಸುವುದಕ್ಕೆ ಹತ್ತಿದ್ದಾರೆ. ಉದ್ಯಮ ವರ್ಗದಲ್ಲಿರತಕ್ಕ ಜನತೆ ಇನ್ನು ತಮ್ಮಮೇಲೆ ಎಲ್ಲಿ ಹೆಚ್ಚಿನ ಒಂದು ತೆರಿಗೆ ಹೊರೆ ಬೀಳುತ್ತದೋ ಎಂಬ ಭಯದಿಂದ ಅದನ್ನು ತಪ್ಪಿಸಿಕೊಳ್ಳುವುದಕ್ಕಾಗಿ ಆ ವರ್ಗದವರು ಈ ದಿವಸ ರೈತರ ಮೇಲೆ ಒಂದು ತೆರಿಗೆಯನ್ನು ಸರ್ಕಾರ ಹೇರುವಂತೆ ಮಾಡಲು ಬಹಳ ಪ್ರಯತ್ನಗಳನ್ನು ನಡೆಸಿದ್ದಾರೆ. ಆ ಉದ್ಯಮವರ್ಗದವರು ಸಾಕಷ್ಟು ಅಂಕೆಸಂಖ್ಯೆಗಳನ್ನು ಶೇಖರಣೆ ಮಾಡಿಕೊಂಡಿದ್ದಾರೆ, ಅವರಲ್ಲಿ ಸಂಘಟನಾ ಶಕ್ತಿ ಚೆನ್ನಾಗಿ ಬೆಳೆದಿದೆ. ಸರ್ಕಾರಕ್ಕೆ ಬೇಕಾದ ಅಂಕೆಸಂಖ್ಯೆಗಳನ್ನು ಅವರು ಒದಗಿಸಬಲ್ಲರು. ಸರ್ಕಾರದವರನ್ನು ತಮ್ಮವಾದದತ್ತ ಒಲಿಸಿಕೊಳ್ಳತಕ್ಕ ಚಮತ್ಕಾರ ಅವರಲ್ಲಿದೆ. ಅವರು ಹೇಳತಕ್ಕದ್ದೆಲ್ಲಾ ನಿಜವೇ ಇರಬೇಕು ಅನ್ನುವಷ್ಟು ವಿಷಯಗಳನ್ನು ಅವರು ಸರ್ಕಾರದವರ ಮುಂದೆ ಇಟ್ಟಿದ್ದಾರೆ. ಆದರೆ ರೈತಾಪಿವರ್ಗದಲ್ಲಿ ಅಂಥ ಸಂಘಟನಾ ಶಕ್ತಿ ಇಲ್ಲ. ಅವರಿಗೆ ಈ ಉದ್ಯಮ ವರ್ಗದವರಿಗಿದ್ದ ಹಾಗೆ ಛೇಂಬರ್ ಆಫ್ ಕಾಮರ್ಸ್ ಅಥವಾ ಛೇಂಬರ್ ಆಫ್ ಇಂಡಸ್ಟ್ರೀಸ್‌ಗಳಂಥ ಬಲವಾದ ಸಂಸ್ಥೆಗಳ ಬೆಂಬಲವಿಲ್ಲ. ಆದ್ದರಿಂದ ನಾನು ಈ ವಿಚಾರದಲ್ಲಿ ಸರ್ಕಾರಕ್ಕೆ ವಿನಂತಿಮಾಡಿಕೊಳ್ಳುವುದೇನೆಂದರೆ — ರೈತನ ಆರ್ಥಿಕ ಪರಿಸ್ಥಿತಿಯಲ್ಲಿ ಅಷ್ಟು ಸುಧಾರಣೆಯಾಗಿಲ್ಲ, ಅಷ್ಟು ರಂಜಕವಾದ ಪ್ರಚಾರಕ್ಕೆ ಸರ್ಕಾರದವರು ಕಿವಿಗೊಡಬಾರದು ಎಂದು ಅರಿಕೆ ಮಾಡಿಕೊಳ್ಳುತ್ತೇನೆ. ರೈತಾಪಿ ವರ್ಗ ಸಹಸ್ರಾರು ವರ್ಷಗಳಿಂದ ಬಡತನದಲ್ಲಿ ಬಿದ್ದು ಸಾಲವಂದಿಗರಾಗಿ ಬಹಳ ನರಳಿದ್ದಾರೆ. ಆದರೆ ಈಗೇನೋ ಇತ್ತೀಚಿನ ಕಾಲ ಬದಲಾವಣೆಯಿಂದ ಅವರು ಸ್ವಲ್ಪಮಟ್ಟಿಗೆ ಸುಧಾರಿಸಿದ್ದಾರೆಂಬುದರಲ್ಲಿ ಭಿನ್ನಾಭಿಪ್ರಾಯವಿಲ್ಲ, ಚೇತರಿಸಿಕೊಂಡಿದ್ದಾರೆ. ಆದರೆ ಇದೇ ವೇಳೆಯಲ್ಲಿ ಮತ್ತೆ ಸರ್ಕಾರದವರು ಆ ರೈತನು ಕಡಿದುಬೀಳುವಷ್ಟು ಮಟ್ಟಿಗೆ ಅವನ ಮೇಲೆ ಭದ್ರವಾಗಿ ತೆರಿಗೆಗಳನ್ನು ಹೇರುವುದು ಸರಿಯಲ್ಲ, ನ್ಯಾಯವಾದ್ದೂ ಅಲ್ಲ. ಆದ್ದರಿಂದ ಸರ್ಕಾರದವರು ಅವಸರದಲ್ಲಿ ಯಾವ ತೀರ್ಮಾನವನ್ನೂ ತೆಗೆದುಕೊಳ್ಳಬಾರದೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ನೀರಾವರಿ ಬಾಬುಗಳಲ್ಲಿ ಸರ್ಕಾರದವರೇನೋ ಬಹಳವಾಗಿ ಹಣವನ್ನು ತೊಡಗಿಸಿದ್ದಾರೆ. ಅವರ ಪರಿಸ್ಥಿತಿ ಅಷ್ಟಾಗಿ ಸುಧಾರಿಸಿಲ್ಲ ಎಂದು ನಾನು ಹೇಳುವುದಿಲ್ಲ. ಆದರೆ ಯಾವ ರೈತ ಹೆಚ್ಚಿನ ತೆರಿಗೆಯನ್ನು ಕೊಡಬಲ್ಲ ಎಂಬುದನ್ನು ನೋಡಿ ಇದನ್ನು ತೀರ್ಮಾನ ಮಾಡಬೇಕು. ಸಾಮಾನ್ಯ ರೈತನ ಮೇಲೆ ಈ ಕರಭಾರ ಬೀಳದಂತೆ ಮಾಡಬೇಕೆಂದು ನಾನು ಸರ್ಕಾರದವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಆದ್ದರಿಂದ ಇದರ ಬಗ್ಗೆ ಒಂದು ಅವಸರದ ಕಾಯಿದೆಯನ್ನು ಮಾಡಬಾರದು. ಹಾಗೆ ಮಾಡಿದ್ದೇ ಆದರೆ ರೈತವರ್ಗ ಬಹಳ ವಿಚಿತ್ರ ಹಿಂಸೆಗೆ ಒಳಗಾಗಬೇಕಾಗುವುದು. ಇದನ್ನು ಇಡೀ ದೇಶದಲ್ಲಿರತಕ್ಕ ರೈತವರ್ಗ ವಿರೋಧಮಾಡುತ್ತಿದೆ. ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸ್ ಬಗ್ಗೆ ಸರಿಯಾಗಿ ಲೆಕ್ಕಪತ್ರಗಳನ್ನಿಡಬೇಕು. ಹಾಗೆ ಲೆಕ್ಕಪತ್ರ ಇಡಲು ನಮ್ಮ ಹಳ್ಳಿಗಳ ರೈತರಿಂದ ಸಾಧ್ಯವಿಲ್ಲ. ಅವನು ಒಂದು ವೇಳೆ ಸತ್ಯಸಂಗತಿಯ ಲೆಕ್ಕ ಇಟ್ಟಾಗ್ಯೂ ಅಧಿಕಾರಿಗಳು ಅದನ್ನು ನಂಬುವುದಕ್ಕೆ ಇಷ್ಟಪಡುವುದಿಲ್ಲ. ಇಷ್ಟೇ ಅಲ್ಲ. ಅವನಿಗೆ ಮೇಲಿಂದ ಮೇಲೆ ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸ್ ಆಫೀಸರ್ ಕಡೆಯಿಂದಾಗಲೀ ಅಥವಾ ಮತ್ತೆ ಯಾವ ಆಫೀಸರ್ ಕಡೆಯಿಂದಾಗಲೀ ಅವನಿಗೆ ತೊಂದರೆಗಳು ಬರುತ್ತಾ ಇರುತ್ತವೆ.

4-00 P.M.

ಶ್ರೀ ಎಸ್. ಬಂಗಾರಪ್ಪ.—ಆ ತೆರಿಗೆಯನ್ನು ನೂರಾರು ಎಕರೆ ಜಮೀನು ಇರುವ ಶ್ರೀಮಂತರ ಮೇಲೆ ಹಾಕಬೇಕೇ ಬೇಡವೇ ? ದೊಡ್ಡ ರೈತರ ಮೇಲೆ ಕರಭಾರವನ್ನು ಹೇರಬೇಡವೇ ?

ಶ್ರೀ ಎಂ. ಆರ್. ಪಾಟೀಲ್.—ಆ ರೀತಿ ಹೇರಬಾರದೆಂಬ ಅಭಿಪ್ರಾಯ ನನ್ನದಲ್ಲ. ಈ ಅಗ್ರಿಕಲ್‌ಚರಲ್ ಇನ್‌ಕಂಟ್ಯಾಕ್ಸನ್ನು ಈಗಿನ ರೀತಿ ಹೇರಬಾರದೆಂದು ನಾನು ಹೇಳುತ್ತೇನೆ. ಯಾರೇ ಅಧಿಕಾರಿಗಳಾಗಿರಲಿ, ಅವರು ಇದಕ್ಕೆ ಸಂಬಂಧಪಟ್ಟ ಕಾಯಿದೆಯನ್ನು ಪೂರ್ವ ವಿಚಾರ ಮಾಡದೆ ಹೇರಬಾರದು ಎಂಬುದು ನನ್ನ ಮುಖ್ಯಾಭಿಪ್ರಾಯ. ಸರ್ಕಾರದವರು ಆ ಬಗ್ಗೆ ಯೋಗ್ಯ ವಾದಂಥ ಪೂರ್ವ ಸಿದ್ಧತೆಗಳನ್ನು ಮಾಡಿಕೊಳ್ಳಬೇಕು. ಸುಮಾರು 5 ಸಾವಿರ ರೂಪಾಯಿಗಳ ನಿವ್ವಳ ಉತ್ಪನ್ನ ಬರಬೇಕಾದರೆ, ನೀರಾವರಿ ಇರುವ ಕಡೆಗಳಲ್ಲಿ ಎಷ್ಟು ಭೂಮಿ ಅವನಿಗೆ ಇರಬೇಕೆಂಬುದನ್ನು ಮೊದಲು ನಿರ್ದಿಷ್ಟಪಡಿಸಬೇಕು. ಅದರ ಸಲುವಾಗಿ ಅಧಿಕಾರಿಯಾಗಿರುವವರು ಕೆಲವು ನಾನ್ ಆಫಿಷಿಯಲ್‌ಸ್‌ನ್ನು ಕೂಡಿಸಿಕೊಂಡು ಅವರೆಲ್ಲರೂ ಇಡೀ ಪ್ರಾಂತದಲ್ಲಿ ತಿರುಗಾಡಿ ನೀರಾವರಿ ಪ್ರದೇಶಗಳಲ್ಲಿ ಮತ್ತು ಉಳಿದ ಕಮರ್ಷಿಯಲ್ ಕ್ರಾಪ್ಸ್ ಬೆಳೆಯುವ ಪ್ರದೇಶಗಳಲ್ಲಿ ಸುಮಾರು 5 ಸಾವಿರ ರೂಪಾಯಿಗಳಷ್ಟು ಉತ್ಪನ್ನ ಬರಬೇಕಾದರೆ, ಅವನಿಗೆ ಎಷ್ಟು ಎಕರೆ

(ಶ್ರೀ ಎಂ. ಆರ್. ಪಾಟೀರ್)

ಜಮೀನು ಇರಬೇಕೆಂದು ನಿರ್ಣಯಮಾಡಿಕೊಳ್ಳಬೇಕು. ಹಾಗೆ ಇಷ್ಟೇ ಎಕರೆಯಷ್ಟು ಜಮೀನು ಎಂಬುದಾಗಿ ನಿರ್ಣಯ ಮಾಡಿದಮೇಲೆ, ಅದಕ್ಕಿಂತ ಕಡಿಮೆ ಜಮೀನು ಇರುವವರಿಗೆ ಯಾವ ತರಹ ತೆರಿಗೆಯನ್ನೂ ಹಾಕಬಾರದು. 5 ಸಾವಿರ ರೂಪಾಯಿಗಳಿಗಿಂತ ಹೆಚ್ಚಿಗೆ ಉತ್ಪನ್ನ ಬರುವ ಜಮೀನು ಇದ್ದರೆ, ಅವನು ಆ ಜಮೀನಿನ ಉತ್ಪತ್ತಿಯ ಮೇಲೆ ಅವಲಂಬಿಸಿಕೊಂಡಿದ್ದರೆ, ಹೆಚ್ಚಿನ ಪ್ರಮಾಣದಲ್ಲಿ ತೆರಿಗೆ ಹಾಕದೆ, ಸ್ಲಾಬ್ ರೇಟಿನಲ್ಲಿ ತೆರಿಗೆ ಹಾಕಬೇಕು. ಅದಕ್ಕೆ ನನ್ನ ವಿರೋಧವಿಲ್ಲ. ಯಾವ ದಾದರೂ ಒಂದು ಅಗ್ರಿಕಲ್‌ಚರಲ್ ಇನ್‌ಕಂಟ್ಯಾಕ್ಸ್ ಕಾಯಿದೆ ಮಾಡಿ ರೈತರಿಂದ ಅಗ್ರಿಕಲ್‌ಚರಲ್ ಇನ್‌ಕಂಟ್ಯಾಕ್ಸ್ ತೆಗೆದುಕೊಳ್ಳುತ್ತೇವೆಂದರೆ, ಅದರಿಂದ ರೈತರಿಗೆ ಬಹಳ ತೊಂದರೆಯಾಗುತ್ತದೆ. ಆ ದ್ದರಿಂದ ಸರ್ಕಾರದವರು ರೈತರ ಮೇಲೆ ಯಾವುದಾದರೂ ಒಂದು ತೆರಿಗೆಯನ್ನು ಹಾಕಬೇಕೆಂದು ಮನಸ್ಸು ಮಾಡಿದರೆ, ಯಾವುದೂ ಲೆಕ್ಕಪತ್ರವಿಲ್ಲದೆ ತೆರಿಗೆಯನ್ನು ನಿರ್ಧಾರವಾಗಿ ತಿಳಿದುಕೊಳ್ಳುವಂಥ ಮತ್ತು ತೆರಿಗೆ ವಸೂಲಿಮಾಡುವ ಅಧಿಕಾರಿಯೂ ಸಹ ಇಂತಿಷ್ಟು ಅವನಿಂದ ಬರಬೇಕೆಂಬುದಾಗಿ ಸ್ಪಷ್ಟವಾಗಿ ತಿಳಿಯುವಂಥ ಒಂದು ಯೋಜನೆಯನ್ನು ಸರ್ಕಾರದವರು ಮಾಡಿಕೊಳ್ಳಬೇಕು. ಇದರಿಂದ ಅಗ್ರಿಕಲ್‌ಚರಲ್ ಇನ್‌ಕಂಟ್ಯಾಕ್ಸನ್ನು ನಮ್ಮ ಭಾಗಗಳಲ್ಲಿ ಎಲ್ಲೆಲ್ಲಿ ಅಗ್ರಿಕಲ್‌ಚರಲ್ ಇನ್‌ಕಂಟ್ಯಾಕ್ಸ್ ಇದೆಯೋ ಅದನ್ನೂ ತೆಗೆದುಹಾಕಿ ಇಂತಿಂಥ ಭೂಮಿಗಳಿಗೆ ಇಂತಿಷ್ಟು ಎಕರೆಮೈಜ್ ತೆರಿಗೆಕೊಡಬೇಕೆಂದು ಒಂದು ನಿಯಮ ಹಾಕತಕ್ಕದ್ದು ಒಳ್ಳೆಯದು. ಏಕೆಂದರೆ, ನಾಳೆ ಭೂತಲಿಂಗಂ ಕಮಿಟಿಯವರು ಬಂದಾಗ್ಗೆ ಅವರ ಮುಂದೆ ರೈತರ ಅಭಿಪ್ರಾಯಗಳನ್ನು ಹೇಳುವ ಒಂದು ಸಂಘ ಸಂಸ್ಥೆಯೂ ಇಲ್ಲ. ವ್ಯಾಪಾರಸ್ಥರು ಮತ್ತು ಉದ್ಯಮಗಾರರು ಛೇಂಬರ್ ಆಫ್ ಕಾಮರ್ಸ್ ಎಂಬುದಾಗಿ ಸಂಘಟನೆಮಾಡಿಕೊಂಡು ಅವರ ತೊಂದರೆಗಳನ್ನು ಆ ಕಮಿಟಿಯ ಮುಂದೆ ಮುಂಡಿಸಬಹುದು. ಆದರೆ ನಮ್ಮ ಪ್ರಾಂತದ ರೈತರಿಗೆ ಅಂತಹ ಒಂದು ಸಂಘಟಣೆ ಅಥವಾ ಒಂದು ಸಂಸ್ಥೆ ಇಲ್ಲ. ನಮ್ಮೊಳಗೆ ಯಾವ್ಯಾವ ಭಾಗದಲ್ಲಿ ಎಷ್ಟೆಷ್ಟು ಎಕರೆ ಉತ್ಪನ್ನ ಬರಬಹುದು ಎನ್ನುವ ನಿರ್ಣಯವನ್ನು ತೆಗೆದುಕೊಂಡು ನಾವು ಇಡೀ ಪ್ರಾಂತದ ರೈತರ ಪರವಿಯಿಂದ ಒಂದು ಯೋಜನೆಯನ್ನು ಸರ್ಕಾರದ ಮುಂದಿಡುವುದಕ್ಕೆ ಸಾಧ್ಯವಿಲ್ಲ. ನಾವು ಒಂದು ಪಿಸ್ತಿನ ಜನರಲ್ಲ, ರೈತರು ಅಂತಹ ಪಂಡಿತರಲ್ಲ. ಆದ್ದರಿಂದ ರೈತರ ಪರವಿಯಿಂದ ಅವರ ಮನವಿಯನ್ನು ಆ ಕಮಿಟಿ ಮುಂದೆ ಇಡಬೇಕಾದರೆ ಆ ಕೆಲಸವನ್ನು ಸರ್ಕಾರದವರೇ ಮಾಡಬೇಕು. ಸರ್ಕಾರದವರು ಅವರ ಮೇಲೆ ತೆರಿಗೆ ಹಾಕುವುದಕ್ಕೆ ಜವಾಬ್ದಾರಿ ವಹಿಸಿರುವಾಗ, ಅವರ ತೊಂದರೆಗಳನ್ನು ಆ ಕಮಿಟಿ ಮುಂದೆ ಇಡುವುದಕ್ಕೂ ಸಹ ಅವರೇ ಜವಾಬ್ದಾರಿ ವಹಿಸುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ಯಾರಾದರೂ ಒಬ್ಬರು ಒಂದು ಅಭಿಪ್ರಾಯ ಹೇಳಿದರೆ ಅವರ ಅಭಿಪ್ರಾಯಕ್ಕೆ ಮತ್ತು ಮತ್ತೊಬ್ಬರ ಅಭಿಪ್ರಾಯಕ್ಕೆ ಸ್ವಲ್ಪ ಹೆಚ್ಚುಕಡಿಮೆಯಾಗಬಹುದು. ಆದ್ದರಿಂದ ಈ ವಿಷಯದಲ್ಲಿ ಒಕ್ಕಲಿಗರ ಮೇಲೆ ಯಾವುದೇ ಹೆಚ್ಚಿನ ತೆರಿಗೆ ಹಾಕುವುದು ನ್ಯಾಯವಲ್ಲ. ನಾನು ಅಗ್ರಿಕಲ್‌ಚರಲ್ ಇನ್‌ಕಂಟ್ಯಾಕ್ಸ್ ರೂಲ್ಸನ್ನು ಓದಿದ್ದೇನೆ. ರೈತನ ಉತ್ಪನ್ನ ಏನಿದೆಯೋ ಅದರ ಅರ್ಧದಷ್ಟು ಖರ್ಚಾದರೆ, ಉಳಿದುದು ತನ್ನ ಉತ್ಪನ್ನವೆಂದು ತೆಗೆದುಕೊಳ್ಳುತ್ತಾರೆ. ಸಾಮಾನ್ಯವಾಗಿ ಒಂದು ಕಾಸು ನಿವ್ವಳ ಉತ್ಪನ್ನ ಬಂದರೆ ಅದರ ಮುಕ್ಕಾಲರಷ್ಟು ಕನಿಷ್ಠ ಖರ್ಚಾಗಿರುತ್ತದೆ. ಇಷ್ಟೇ ಅಲ್ಲ ಬಯಲು ಪ್ರದೇಶದಲ್ಲಿ ಸಾಮಾನ್ಯವಾಗಿ ಬೆಳೆ ಬೆಳೆದರೆ, ಆ ಬೆಳೆಯ ಹೈಕಿ ಒಂದು ಪಾಲು ನಿವ್ವಳ ಉತ್ಪನ್ನ ಬರುತ್ತದೆಂದು ಹೇಳುವುದಕ್ಕೆ ಬರುವುದಿಲ್ಲ. ನಮ್ಮ ಪ್ರಾಂತದ 19 ಜಿಲ್ಲೆಗಳ ಹೈಕಿ 14–15 ಜಿಲ್ಲೆಗಳಲ್ಲ ಮೇಲಿಂದ ಮೇರೆ ಬರಗಾಲಕ್ಕೆ ತುತ್ತಾಗುತ್ತವೆ. ಆದುದರಿಂದ ಸರ್ಕಾರದವರು ಅಗ್ರಿಕಲ್‌ಚರಲ್ ಇನ್‌ಕಂಟ್ಯಾಕ್ಸ್ ಎಂಬುದಾಗಿ ಹೆಚ್ಚಿನ ತೆರಿಗೆಯನ್ನು ರೈತರಿಂದ ಅಪೇಕ್ಷೆಮಾಡುವುದು ಒಳ್ಳೆಯದಲ್ಲ. ಈಗಾಗಲೇ ಒಕ್ಕಲುತನದ ಹುಟ್ಟುವಳಿ ಧಾರಣೆಗಳು ಕೆಳಗೆ ಬೀಳಲಿಕ್ಕೆ ಹತ್ತಿವೆ. ಬೆಲ್ಲದ ಧಾರಣೆ ಎಲ್ಲಕ್ಕೂ ಕೆಳಗೆ ಹೋಗಿದೆ. ಸೇಂಗ ಮತ್ತು ಬೇಳೆ ಕಾಳುಗಳ ಗೋಧಿ ಧಾನ್ಯಗಳ ಧಾರಣೆ ಕೆಳಗೆ ಬಿದ್ದಿದೆ. ಇದೇ ಪರಿಸ್ಥಿತಿಯಲ್ಲಿ ರೈತ ಬೆಳೆಯುವ ಪದಾರ್ಥಗಳ ಧಾರಣೆ ಕೆಳಗೆ ಇಳಿಯುತ್ತಾ ಹೋದರೆ, ಇದು ಯಾವ ಮಟ್ಟಕ್ಕೆ ಮುಟ್ಟುತ್ತದೊ ಎಂದು ಹೇಳುವುದಕ್ಕೆ ಬರುವುದಿಲ್ಲ. ಆದ್ದರಿಂದ ನಾನು ಸರ್ಕಾರಕ್ಕೆ ವಿನಂತಿಮಾಡಿಕೊಳ್ಳುವುದೇನೆಂದರೆ, ರೈತನಾದವನು ಇವತ್ತಿನದಿವಸ ಬಹಳ ವರ್ಷಗಳಿಂದ ನರಳಿ ಚೇತರಿಸಿಕೊಳ್ಳುವುದಕ್ಕೆ ಹೊರಟಿದ್ದಾನೆ. ಆದ್ದರಿಂದ ಅವನ ಮೇಲೆ ಈ ಇನ್‌ಕಂಟ್ಯಾಕ್ಸ್‌ನ್ನು ಹೇರದೆ ಅವನಿಗೆ ಒಳ್ಳೆಯದಾಗುವಂಥ ಯೋಜನೆಗಳನ್ನು ಕೈಗೊಳ್ಳಬೇಕೆಂದು ನಾನು ಮತ್ತೊಮ್ಮೆ ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ಆರ್ಥಿಕ ಮಂತ್ರಿಗಳು ಅವರ ಭಾಷಣದಲ್ಲಿ ನಗರವಾಸಿಗಳ ಮೇಲಿನ ತೆರಿಗೆ ಭಾರ ಹೆಚ್ಚಾಗಿದೆ. ಆ ಭಾರವನ್ನು ಅವರು ಹೋರುವುದಕ್ಕೆ ಸಾಧ್ಯವಿಲ್ಲವೆಂಬ ಮಾತನ್ನು ಹೇಳಿದ್ದಾರೆ. ನಾನು ಆ ಮಾತಿಗೆ ಅಷ್ಟು ಒಪ್ಪಿಗೆ ಕೊಡಲಾರೆ. ಇವತ್ತಿನದಿವಸ ನಮ್ಮ ಪ್ರಾಂತ್ಯದಲ್ಲಿ ಸುಮಾರು

22 ಸಾವಿರ ಮೋಟಾರು ಕಾರುಗಳಿವೆ. ಪ್ರತಿವರ್ಷವೂ ಹೊಸದಾಗಿ ಒಂದೊಂದು ಸಾವಿರ ಮೋಟಾರುಕಾರುಗಳು ಹೆಚ್ಚಿಗೆ ಬೆಳೆಯುತ್ತಾ ಹೋಗುತ್ತಿವೆ. ಇದು ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸುವುದಕ್ಕೆ ಹೊರಟಿದೆ ಎಂದು ತೋರಿಸುತ್ತದೆ. ಇದು ಸಾರ್ವಜನಿಕರು ಹೆಚ್ಚಿನ ಕರಭಾರ ಹೊರುವುದಕ್ಕೆ ಸಾಧ್ಯವಿಲ್ಲವೆಂದು ಸೂಚಿಸುವುದಿಲ್ಲ. ಇವತ್ತಿನ ದಿವಸ ಎಷ್ಟೋ ಮಂದಿ ಕಾರುಗಳು ಬೇಕು ಎಂದುದಾಗಿ ಕೇಳುತ್ತಾರೆ. ಅಂತಹವರಿಗೆ ಒಂದು ವರ್ಷಕ್ಕೆ ಒಂದು ಕಾರಿಗೆ 200 ರೂಪಾಯಿಗಳ ತೆರಿಗೆ ಹಾಕಿದರೆ ಸುಮಾರು 30-40 ಲಕ್ಷ ರೂಪಾಯಿಗಳಷ್ಟು ವರಮಾನ ತೆರಿಗೆ ರೂಪದಲ್ಲಿ ಬರುತ್ತದೆ. ಇದಕ್ಕೇನಾದರೂ ಸರ್ಕಾರದವರು ಹಿಂದುಮುಂದು ನೋಡಬೇಕು? ಈ ಯೋಜನೆಗೆ ನಮ್ಮ ಅಧಿಕಾರಿಗಳು ವಿರೋಧಮಾಡುತ್ತಾರೆಂದು ನನಗೆ ಗೊತ್ತಿದೆ. ಅವರಿಗೆ ಕಾರುಗಳನ್ನು ಇಡುವ ಪ್ರಸಂಗ ಬಂದಾಗ, ಅವರಿಗೆ ಹೆಚ್ಚಿನ ಕರಭಾರ ಬಂದರೆ ಅದನ್ನು ಸಹಿಸರಾರರು, ಅದಕ್ಕೆ ವಿರೋಧಮಾಡುವ ಸಂಭವವೂ ಉಂಟು. ಯಾವ ಅಧಿಕಾರಿ ಅವಶ್ಯಕವಾಗಿ ಕಾರುಗಳನ್ನು ಇಡಲೇ ಬೇಕೋ ಅಂತಹವರು ಅವನ್ನು ಕೊಡಬಹುದು. ಒಟ್ಟಿನಲ್ಲಿ ಕಾರುಗಳಮೇಲೆ ಧಾರಾಳವಾಗಿ ತೆರಿಗೆ ಹಾಕಬೇಕೆಂದು ನಾನು ಸರ್ಕಾರದವರಲ್ಲಿ ವಿಜ್ಞಾಪನೆ ಮಾಡಿಕೊಳ್ಳುತ್ತೇನೆ.

ಎರಡನೆಯದಾಗಿ, ಸಿನಿಮಾ ಹೌಸಸ್ ದಿನೇ ದಿನೇ ಬೆಳೆಯುತ್ತಿವೆ. ಲೈಸೆನ್ಸ್ ನವುಗೆ ಕೊಡಿ ಎಂದುದಾಗಿ ಅನೇಕ ಸಿನಿಮಾ ಹೌಲ್ಡರ್ಸ್ ಬಹಳವಾಗಿ ಕೇಳುತ್ತಾ ಇದ್ದಾರೆ. ಅವರ ಮೇಲೆ ಹೆಚ್ಚಿನ ತೆರಿಗೆಯನ್ನು ಹಾಕಿದರೆ, ಸರ್ಕಾರದವರು ಬೇಕಾದಷ್ಟು ಹಣ ವನ್ನು ಪಡೆಯುತ್ತಾರೆ. ಸಾಮಾನ್ಯವಾಗಿ ಒಂದು ವರ್ಷಕ್ಕೆ ಒಬ್ಬರಿಂದ 10 ಸಾವಿರ ರೂಪಾಯಿಗಳಷ್ಟು ಹಣ ತೆಗೆದುಕೊಂಡರೆ, ಅವನಿಗೆ ಯಾವ ಹಾನಿಯೂ ಆಗಲಿಕ್ಕಿಲ್ಲ. ಆ ದೃಷ್ಟಿಯಿಂದ ಈ ಯೋಜನೆಯನ್ನು ಸರ್ಕಾರದವರು ಕೈಕೊಳ್ಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಅದೇ ರೀತಿ ಇವತ್ತು ಸಿನೇಮ ಟಿಕೆಟ್ಟು ಕೂಡ ಬ್ಲಾಕ್ ಮಾರ್ಕೆಟಿನಲ್ಲಿ ಮಾರುತ್ತಿದ್ದಾರೆ. ಈ ದುಡ್ಡು ಯಾರಿಂದ ಬರುತ್ತದೆ? ಅವಕ್ಕೆ ಎಂಟರ್‌ಟೈನ್‌ಮೆಂಟ್ ಟ್ಯಾಕ್ಸನ್ನು, ಮೇಲಿನ ತರಗತಿಗೆ ಇನ್ನೂ ಹೆಚ್ಚು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ವಿದ್ಯುತ್‌ಗೆ ಸಂಬಂಧಪಟ್ಟ ವಿಚಾರ ಮಾನ್ಯ ಆರ್ಥಿಕ ಮಂತ್ರಿಗಳು ಹೇಳಿದ್ದಾರೆ. ಹಳ್ಳಿಗಳಿಗೆ ಇರೆಕ್ಟ್ರಿಫಿಕೇಶನ್ ಕಡಿಮೆ ಇದೆ. ಇವತ್ತು ಹಳ್ಳಿಗಳಲ್ಲಿ ಜನರು ಇರೆಕ್ಟ್ರಿಸಿಟಿಯನ್ನು ಕೊಳ್ಳಲು ಅತುರರಾಗಿದ್ದಾರೆ. ಆದ್ದರಿಂದ ಈ ಟ್ಯಾರಿಫ್ ರೇಟನ್ನು ಏರಿಸಬೇಕೆಂದು ಇದ್ದಾರೆ. ಅದೇ ರೀತಿ ಪಟ್ಟಣದಲ್ಲಿರುವವರಿಗೂ ಏರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನೊಂದು ವಿಚಾರ. ಇವತ್ತು ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಒಂದು ಸಾವಿರ ರೂಪಾಯಿ ಬಾಡಿಗೆ ಬರುವಂತಹ ಮನೆಗಳೂ ಅನೇಕ ಇದ್ದಾವೆ. ಇವತ್ತು ನೋಡಲಿಕ್ಕೆ ಹೋದರೆ, ಬಾಡಿಗೆಗೆ ಮನೆಯೇ ಸಿಗುತ್ತಾ ಇಲ್ಲ. ಮನೆ ಬಾಡಿಗೆಗೆ ಕೊಟ್ಟವರು ಬೇಕಾದಷ್ಟು ಬಾಡಿಗೆಯನ್ನು ವಸೂಲು ಮಾಡುತ್ತಿದ್ದಾರೆ. ಅದಕ್ಕೆ ಒಂದು ಮಿತಿಯೇ ಇಲ್ಲ. ನಾನಾದರೂ ಕೇಳುತ್ತೇನೆ, ಇಂಥವರಿಗೆ ಅರ್ಬನ್ ಪ್ರೊಪರ್ಟಿ ಟ್ಯಾಕ್ಸ್ ಏಕೆ ಹಾಕಬಾರದು? ನಾನು ಏನೂ ಸಣ್ಣ ಮನೆಗಳ ಮೇಲೆ ಹಾಕಿ ಎಂದು ಹೇಳುತ್ತಿಲ್ಲ. ಸುಮಾರು 10 ಸಾವಿರ ಉತ್ಪನ್ನ ಮಾಡುವಂತಹ ಮನೆಗಳಿಗೆ ಟ್ಯಾಕ್ಸ್ ಹಾಕಿ. ಸ್ವತಃ ಮನೆ ಮಾಡಿಕೊಂಡು ತಾವೇ ಆ ಮನೆಯಲ್ಲಿರುವವರಿಗೆ ಹಾಕಬೇಡಿ. ಈ ರೀತಿ ದೊಡ್ಡ ದೊಡ್ಡ ಮನೆಗಳಿಗೆ ಟ್ಯಾಕ್ಸ್ ಹಾಕಿದರೆ, ಲಕ್ಷಾಂತರ ರೂಪಾಯಿ ಸರ್ಕಾರದವರು ದೊರಕಿಸಿಕೊಳ್ಳಬಹುದೆಂದು ನನಗನಿಸುತ್ತದೆ. ಅದೇ ರೀತಿ ಮನೆಯಲ್ಲಿ ಅಲ್ ಎರೆಕ್ಟ್ರಿಕ್ ಏನು ಇದೆ, ಅದಕ್ಕೆಲ್ಲ ಇನ್ನೂ ಬೇಕಾದರೆ ಜಾಸ್ತಿ ಮಾಡಬಹುದು. ಇದರಿಂದ ಯಾರಿಗೂ ತೊಂದರೆಯಾಗುವುದಿಲ್ಲ. ಅದರಿಂದ ಸರ್ಕಾರಕ್ಕೆ ಹೆಚ್ಚು ಉತ್ಪನ್ನ ಬರಬಹುದೆಂದು ಹೇಳುತ್ತೇನೆ. ಇವತ್ತು ನೀವು ರೈತರ ಮೇಲೆ ಟ್ಯಾಕ್ಸ್ ಹಾಕಬಾರದು. ಬೇಕಾದರೆ, ಹೆಚ್ಚಿನ ಉತ್ಪನ್ನ ಬರುವ ರೈತರಿಗೆ ಒಂದು ಭೂಮಿಯ ಕನಿಷ್ಠ ಮಿತಿಯನ್ನು ಇಟ್ಟುಕೊಂಡು ಕರವನ್ನು ಹಾಕಿ. ಅಥವಾ, ಎಕರೆವೈಸ್ ಮಾಡಿ ಕೊಂಡು ಕರವನ್ನು ಹಾಕತಕ್ಕಮ್ಮ ಅವಶ್ಯಕ. ಇವಕ್ಕೆ ಅಂಕೆ ಸಂಖ್ಯೆಗಳನ್ನು ತರಿಸಿಕೊಂಡು, ಭೂತಲಂಗಮ್ ಕಮಿಟಿ ಬರುವ ಮೊದಲು ಯೋಜನೆಯನ್ನು ಹಾಕಬೇಕೆಂದು ಕೇಳಿಕೊಂಡು, ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಎಚ್. ಬಿ. ಪ್ಯಾಲನಯ್ಯ (ಹಾಸನ).—ಸನ್ಮಾನ್ಯ ಅಧ್ಯಕ್ಷರೇ, ಮೈಸೂರು ದೇಶದಲ್ಲಿ, ಕೃಷ್ಣಾ, ತುಂಗಭದ್ರಾ, ಹೇಮಾವತಿ, ಶರಾವತಿ, ಕಾಳಿ ಮೊದಲಾದ ಜೀವನದಿಗಳಿದ್ದೂ, ಸುಮಾರು 200 ಮೈಲುಗಳಷ್ಟು ಕಾವೇರಿ ಪ್ರದೇಶವಿದ್ದೂ, ಹೊಸಹೇಚೆ ಮತ್ತು ಕುದುರೆಮುಖ ಎಂಬ ವಿಶ್ವ ಶ್ರೇಷ್ಠವಾದ ಕಬ್ಬಿಣವು ಅದುರು ದೊರೆಯುವ ಸ್ಥಳಗಳಿದ್ದೂ ವಿಶಾಲವಾದ ಕಾಡು ಪ್ರದೇಶಗಳಿದ್ದೂ, ಅತಿ ಹೆಚ್ಚಿನ ವಿದ್ಯುಚ್ಛಕ್ತಿಯನ್ನು ನಾವು ಉತ್ಪಾದನೆ ಮಾಡುತ್ತಿದ್ದೂ, ಇತರ ಯಾವ ರಾಜ್ಯಗಳಲ್ಲಿಯೂ ನಡೆಸದಷ್ಟು ಕೈಗಾರಿಕೆಗಳು ಈ ರಾಜ್ಯದಲ್ಲಿದ್ದೂ, ಉತ್ತಮವಾದ ವ್ಯವಸಾಯವನ್ನು ಮಾಡುತ್ತಿದ್ದೇವೆಂದು ಹೇಳುತ್ತಾ, ಸಣ್ಣ ನೀರಾವರಿ ಯೋಜನೆಗಳನ್ನು ದೊಡ್ಡ ನೀರಾವರಿ ಯೋಜನೆಗಳನ್ನು 18

(ಶ್ರೀ ಎಚ್. ಬಿ. ಜ್ವಾಲನಯ್ಯ)

ವರ್ಷಗಳಿಂದಲೂ ಮಾಡುತ್ತಿದ್ದೇವೆಂದು ಹೇಳುತ್ತಾ, ನಮ್ಮ ಆರ್ಥಿಕ ಮಂತ್ರಿಯವರು 63–64ನೇ ಇನವಿಯಲ್ಲಿ 5,416 ಲಕ್ಷ ಇದ್ದಂತಹ ತೆರಿಗೆಯನ್ನು 69–70 ರಲ್ಲಿ 10,675 ಲಕ್ಷಕ್ಕೆ ಏರಿಸಿದರೂ ಕೂಡ ನಮ್ಮ ರಾಜ್ಯದಲ್ಲಿರುವಷ್ಟು ತೆರಿಗೆ ಭಾರತದ ಇನ್ನಾವ ರಾಜ್ಯದಲ್ಲಿ ಇಲ್ಲ ಎನ್ನುವ ಸಂಗತಿ ಇದ್ದರೂ, ಭಾರತದಲ್ಲಿ ಇರುವಂತಹ ಬಡ ರಾಜ್ಯಗಳಲ್ಲಿ ಮೈಸೂರು ರಾಜ್ಯ ಎರಡನೇ ಸ್ಥಾನದಲ್ಲಿದೆ ಎಂದರೆ, ನಮ್ಮ ರಾಜ್ಯದಲ್ಲಿ ಇಷ್ಟೆಲ್ಲಾ ಸಂಪತ್ತು ಇದ್ದರೂ ಕೂಡ, ನಮ್ಮ ಸರ್ಕಾರದ ಕೈಗೆ ಸಿಕ್ಕಿದರೂ ಕೂಡ, ಇನ್ನೂ ನಮ್ಮ ರಾಜ್ಯ ಬಡ ರಾಜ್ಯವಾಗಿ ಉಳಿದಿದೆ ಎಂದರೆ, ನಾವು ಯಾವ ರೀತಿಯಲ್ಲಿ ಈ ಬಜೆಟನ್ನು ಸ್ವಾಗತಿಸಬೇಕೆಂದು ಗೊತ್ತಾಗಿಲ್ಲ. ನಮ್ಮ ಆರ್ಥಿಕ ಮಂತ್ರಿಯವರು ಹೇಳಿದ ರೀತಿಯಲ್ಲಿ ನಾವು ಕೊಡಬೇಕಾದ ಸಾಲ 425 ಕೋಟಿ ರೂಪಾಯಿ. ಈ ಸಾರಿ ಮಾನ್ಯ ಆರ್ಥಿಕ ಮಂತ್ರಿಯವರು ನಮ್ಮ ಮುಂದೆ 13·22 ಕೋಟಿ ರೂಪಾಯಿಯ ಖೋತಾ ಬಜೆಟನ್ನು ಇಟ್ಟಿದ್ದಾರೆ. ನಿನ್ನೆ ಮಾತನಾಡಿದಂತಹ ಶ್ರೀ ಘೋರ್ಪಡೆಯವರು "ಡಿಫಿಸಿಟ್ ಬಜೆಟ್ ರಾಜ್ಯ ಸರ್ಕಾರದವರು ಮಂಡಿಸುವುದಕ್ಕೆ ಅವಕಾಶ ಇಲ್ಲ, ಅದು ಕೇವಲ ಕೇಂದ್ರ ಸರ್ಕಾರದವರು ಮಾತ್ರ ಮಂಡಿಸಬಹುದು" ಎಂದು ಹೇಳಿದರು. ಮತ್ತು ಕೇಂದ್ರ ಸರ್ಕಾರದಲ್ಲಿ ಹಣ ಇಲ್ಲದೆ ಇದ್ದರೂ, ಕೂಡ ನೋಟನ್ನು ಪ್ರಿಂಟ್ ಮಾಡಿ ಹಂಚಿ, ಬಿಲ್ಸ್ ಮುಖಾಂತರ ವ್ಯವಹಾರ ನಡೆಸುವುದಕ್ಕೆ ಅವಕಾಶವಾಗುತ್ತದೆ ಎಂದೂ ಹೇಳಿದರು. ಇದು ಸತ್ಯ ಎಂದು ಕಾಣುತ್ತದೆ. ಈ ದೃಷ್ಟಿಯಿಂದ ಖೋತಾ ಬಜೆಟ್ ಮಂಡಿಸಿರುವಂತದ್ದು ಸರಿಯಲ್ಲ. ನನ್ನ ಆರ್ಥಿಕ ಮಂತ್ರಿಯವರು ಹೇಳಿದ್ದಾರೆ, ನಮಗೆ 13 ಕೋಟಿ ಚಿಲ್ಲರೆ ಕಡಿಮೆ ಬೀಳುತ್ತದೆ ಎಂದು. ಅವರು ಕೊಟ್ಟಿರುವಂತಹ ಪ್ರತಿಯೊಂದು ಅಂಶವನ್ನು ವಿಮರ್ಶೆ ಮಾಡಿ ನೋಡಿದರೆ ಸುಮಾರು 30 ಕೋಟಿ ರೂಪಾಯಿ ಕಡಿಮೆ ಬೀಳುತ್ತದೆಂದು ನನಗನಿಸುತ್ತದೆ. ಅವರ ಈ ಸಾಹಸ ನಿಜವಾಗಿಯೂ ಮೆಚ್ಚಬೇಕಾದುದು. ಹೋದ ಸಾರಿಯೂ ಖೋತಾ ಬಜೆಟ್ ಮಂಡಿಸಿದ್ದಾರೆ. ಇತರ ರಾಜ್ಯಗಳೂ ಮಂಡಿಸಿದೆ, ನಾವೇ ಅಲ್ಲ ಮಂಡಿಸಿದ್ದು ಎಂದೂ ಹೇಳಿದ್ದಾರೆ. ಕೊರತೆಯನ್ನು ಕೇಂದ್ರದವರು ಕೊಟ್ಟರೆ ಸರಿದೂಗಿಸಬಹುದು ಎಂದು ಹೇಳುತ್ತಿದ್ದಾರೆ. ಈಗ ಸುಮಾರು 119.61 ಕೋಟಿ ರೂಪಾಯಿ ಸಾಲ ಇದೆ. ಇದನ್ನು ಸರಿದೂಗಿಸಬೇಕಾಗಿದೆ. ಇವರ ಅಂದಾಜು ಪ್ರಕಾರ ಮುಂದಿನ ವರ್ಷದ ವರಮಾನವು 213.26 ಕೋಟಿ ರೂಪಾಯಿಯಷ್ಟಾಗಬಹುದೆಂಬ ನಿರೀಕ್ಷೆ ಇದೆ ಎಂದು ಹೇಳಿದ್ದಾರೆ. ಇದಕ್ಕೆ ಬಡ್ಡಿಯೇ ಸುಮಾರು 30 ಕೋಟಿ ರೂಪಾಯಿಯಾಗುತ್ತದೆ. ಜೊತೆಗೆ 68–69 ರಲ್ಲಿ 6 ಕೋಟಿ ಸಾರ್ವಜನಿಕ ಸಾಲವನ್ನೂ ಮಾಡಿದ್ದಾರೆ. ಇದರ ಬಗ್ಗೆ ಏನು ಹೇಳಬೇಕೆಂದು ಗೊತ್ತಿಲ್ಲ. ಇವತ್ತು ಸರ್ಕಾರದ ಹಣಕಾಸಿನ ಪರಿಸ್ಥಿತಿಯನ್ನು ಒಂದು ಹುಲಿಯಗಾಯಿಕ್ಕೆ ಹೋಲಿಸಬಹುದು. ಹುಲಿಯು ತನ್ನ ಮೈಯಲ್ಲಿ ಒಂದು ಗಾಯವಾದರೆ ಅದನ್ನು ಮುಚ್ಚಿಕೊಳ್ಳುವುದಕ್ಕೆ ಇನ್ನೊಂದು ಭಾಗದ ಮಾಂಸವನ್ನು ಕಿತ್ತು ಮುಚ್ಚುತ್ತದೆ. ಹೀಗೆ ದೇಹವೆಲ್ಲಾ ಗಾಯವಾಗಿ, ಕೊನೆಗೆ ಅದು ಸತ್ತು ಹೋಗುವ ಪರಿಸ್ಥಿತಿ ಬರುತ್ತದೆ. ಅದೇ ರೀತಿ, ನಮ್ಮ ಸರ್ಕಾರದ ಹಣಕಾಸಿನ ಪರಿಸ್ಥಿತಿಯು ಆಗಿದೆ ಎಂದು ಹೇಳಿದರೆ ತಪ್ಪಾಗಲಾರದು.

ಗ್ರಾಮಾಂತರ ಪ್ರದೇಶದ ರೈತರ ಮತ್ತು ಇತರ ಜನತೆಯ ನೆತ್ತರನ್ನು ಡೈರೆಕ್ಟ್ ಮತ್ತು ಇಂಡೈರೆಕ್ಟ್ ಟ್ಯಾಕ್ಸ್ ಮುಖಾಂತರ ನೀವು ಹೀರುತ್ತಿದ್ದೀರಿ. ಹಳ್ಳಿಗಾಡಿನ ಜನತೆ ಯಾರೂ ಸುಖವಾಗಿಲ್ಲ. ಎಲ್ಲಾ ರಾಜ್ಯಗಳ ಮುಖಂಡರೂ ಕೇಂದ್ರದಲ್ಲಿ ನಭೆ ಸೇರಿ ನಾಲ್ಕನೆಯ ಪಂಚವಾರ್ಷಿಕ ಯೋಜನೆಗೆ ಯಾವ ರೀತಿ ಹಣವನ್ನು ಕೂಡಿಸಬೇಕು ಎನ್ನುವುದನ್ನು ವಿಚಾರ ಮಾಡಿದ್ದಾರೆ. ಮತ್ತು ನ್ಯಾಷನರ್ ಡೆವಲಪ್‌ಮೆಂಟ್ ಕೌನ್ಸಿಲ್‌ನಲ್ಲಿ ಕೂಡ ಈ ಬಗ್ಗೆ ವಿಚಾರ ಮಾಡಿದ್ದಾರೆ. ಮೈಸೂರು ರಾಜ್ಯದ ಪರ್‌ಕ್ಯಾಪಿಟಾ ಇನ್‌ಕಂ 2 ಪರ್ಸೆಂಟ್ ಜಾಸ್ತಿ ಇರುವುದರಿಂದ ಶೇಕಡಾ 10 ರಷ್ಟು ಹಣ ಬರುವುದಕ್ಕೆ ಸಾಧ್ಯವಿಲ್ಲದೆ ಬಹಳ ಹಣವನ್ನು ಕಳೆದುಕೊಳ್ಳಬೇಕಾಗುತ್ತದೆ ಎಂದು ಹೇಳಿದ್ದಾರೆ. ನ್ಯಾಷನರ್ ಡೆವಲಪ್‌ಮೆಂಟ್ ಕೌನ್ಸಿಲ್‌ನಲ್ಲಿ ಎಲ್ಲಾ ರಾಜ್ಯದ ಮುಖ್ಯಮಂತ್ರಿಗಳೂ ಇದ್ದರು, ಅದೇ ರೀತಿ ನಮ್ಮ ರಾಜ್ಯದ ಮುಖ್ಯಮಂತ್ರಿಗಳೂ ಅಲ್ಲಿ ಇದ್ದರು. ಮೈಸೂರಿಗೆ ಅನ್ಯಾಯವಾಗುತ್ತದೆ ಎನ್ನುವುದು ವರದಿಯಲ್ಲಿ ಇಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಈ ವಿಚಾರವನ್ನು ಒತ್ತಾಯ ಮಾಡಲಿಲ್ಲವೋ ಏನೋ ಅರ್ಥವಾಗುವುದಿಲ್ಲ. ಇಲ್ಲಿಯವರೆಗೆ ಗ್ರಾಮಾಂತರ ಪ್ರದೇಶದ ಯೋಜನೆಗಳಿಗೆ ಬಹು ಮೊತ್ತದ ಹಣ ಖರ್ಚಾಗಿದೆ, ಆದ್ದರಿಂದ ಇನ್ನು ಮುಂದೆ ಅವರು ಹೆಚ್ಚಿನ ತೆರಿಗೆಯನ್ನು ಹೊರಬೇಕು ಎಂದು ನಮ್ಮ ಮಾನ್ಯ ಅರ್ಥ ಮಂತ್ರಿಗಳು ಹೇಳಿದ್ದಾರೆ. ಇದು ಗ್ರಾಮಾಂತರ ಪ್ರದೇಶದ ಜನಗಳಿಗೆ ಇವರು ಕೊಟ್ಟಿರುವ ಒಂದು ಎಚ್ಚರಿಕೆ ಎಂದು ಹೇಳಬಹುದು. ಬಡ್ಜೆಟ್ಟಿನಲ್ಲಿ ಯಾವ ತೆರಿಗೆಯನ್ನೂ ಸೂಚಿಸಿಲ್ಲ. ತೆರಿಗೆ ಇಲ್ಲದೆ ಇರುವ ಬಡ್ಜೆಟ್ಟು ಎಂದು ಹೇಳುವುದು ಸರಿಯಾದದ್ದಲ್ಲ, ಏತಕ್ಕೆಂದರೆ ಭೂತಲಿಂಗಂ ಅವರ ನೇತೃತ್ವದಲ್ಲಿ

ಒಂದು ಕಮಿಟಿಯನ್ನು ನೇಮಕ ಮಾಡಿ ಹೆಚ್ಚು ತೆರಿಗೆಯನ್ನು ಯಾವು ಯಾವುದರ ಮೇಲೆ ಹಾಕ ಬಹುದು, ಯಾವ ರೀತಿ ನಮ್ಮ ರಾಜ್ಯದ ಸಂಪನ್ಮೂಲಗಳನ್ನು ಹೆಚ್ಚಿಸಿಕೊಳ್ಳಬಹುದು ಎನ್ನುವ ಬಗ್ಗೆ ಸಲಹೆಗಳನ್ನು ಕೊಡುವುದಕ್ಕೋಸ್ಕರ ರಾಜ್ಯ ಸರ್ಕಾರದವರು ಸಮಿತಿಗೆ ತಿಳಿಸಿದ್ದಾರೆ. ಅವರು ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದ ಮೇಲೆ ಯಾವು ಯಾವುದರ ಮೇಲೆ ತೆರಿಗೆಯನ್ನು ಹಾಕಬೇಕೆಂದು ಶಿಫಾರಸ್ಸು ಮಾಡಿರುತ್ತಾರೆಯೋ ಅದನ್ನು ಸರ್ಕಾರದವರು ಕಾರ್ಯರೂಪಕ್ಕೆ ತರಬೇಕಾಗುತ್ತದೆ, ಅದನ್ನು ಮಾಡುತ್ತೇವೆ ಎಂದು ಹೇಳಿದ್ದಾರೆ.

ನಮ್ಮ ರಾಜ್ಯದಲ್ಲಿ ಕಾವೇರಿ ಬೇಸಿನ್‌ನಲ್ಲಿರತಕ್ಕ ಯೋಜನೆಗಳನ್ನು ಕೃಷ್ಣಾ ಬೇಸಿನ್‌ನಲ್ಲಿರತಕ್ಕ ಯೋಜನೆಗಳನ್ನು ಕಾರ್ಯಗತ ಮಾಡಬೇಕಾದರೆ 213 ಕೋಟಿ ರೂಪಾಯಿಗಳು ಬೇಕಾಗುತ್ತದೆ ಎಂದು ಹೇಳಿದ್ದಾರೆ. ಈ ಯೋಜನೆಗಳು ಬಹು ಮುಖ್ಯವಾದ ಯೋಜನೆಗಳು. ಇಂಥಾ ಯೋಜನೆಗಳಿಗೆ ಬಡ್ಜೆಟ್ಟಿನಲ್ಲಿ 12.83 ಕೋಟಿ ರೂಪಾಯಿಗಳನ್ನು ಮಾತ್ರ ಒದಗಿಸಿದ್ದಾರೆ. ಇದರಲ್ಲಿ ಹೇಮಾವತಿ ಪ್ರಾಜೆಕ್ಟಿಗೆ 50 ಲಕ್ಷ ರೂಪಾಯಿಗಳನ್ನು ಮಾತ್ರ ಇಟ್ಟಿದ್ದಾರೆ. ಈ ಹಣದಲ್ಲಿ ಸುಮಾರು 28–30 ಲಕ್ಷ ರೂಪಾಯಿಗಳು ಬರೀ ಸಿಬ್ಬಂದಿಗಾಗಿಯೇ ಖರ್ಚಾಗುತ್ತದೆ. ಇನ್ನು ಉಳಿದ 10–12 ಲಕ್ಷ ರೂಪಾಯಿಗಳಲ್ಲಿ ಈ ಯೋಜನೆಯ ಯಾವ ಕೆಲಸವನ್ನು ಮಾಡುವುದಕ್ಕೆ ಸಾಧ್ಯವಾದೀತು ? ಈ ಯೋಜನೆಯನ್ನು ಪೂರ್ತಿ ಮಾಡಬೇಕಾದರೆ 16 ಕೋಟಿ ರೂಪಾಯಿಗಳು ಬೇಕಾಗುತ್ತದೆ ಎಂದು ಹೇಳಿದ್ದಾರೆ. ಆದರೆ ನನ್ನ ಅಭಿಪ್ರಾಯದ ಪ್ರಕಾರ ಈ ಯೋಜನೆ ಪೂರ್ತಿಯಾಗಬೇಕಾದರೆ 60–70 ಕೋಟಿ ರೂಪಾಯಿಗಳವರೆಗೂ ಹೋಗುತ್ತದೆ. ಸರ್ಕಾರದವರಿಗೆ ಈ ಯೋಜನೆಯನ್ನು ತೆಗೆದು ಕೊಳ್ಳುವುದಕ್ಕೆ ಮನಸ್ಸು ಇದೆಯೋ ಇಲ್ಲವೋ ಗೊತ್ತಿಲ್ಲ. ಜನತೆಯ ಕಣ್ಣಿಗೆ ಮಣ್ಣು ಎರಚು ವುದಕ್ಕೆ ಇವರು ಪ್ರಯತ್ನ ಮಾಡುತ್ತಿದ್ದಾರೆ. ಕಂಬದ ಕಡ ಪ್ರಾಜೆಕ್ಟಿಗೆ 3 ಲಕ್ಷ ರೂಪಾಯಿಗಳನ್ನು ಒದಗಿಸಿದ್ದಾರೆ. ಇದರಿಂದ ಏನೇನೂ ಕೆಲಸ ಆಗುವುದಿಲ್ಲ. ನಿಮ್ಮ ಕೈಯ್ಯಲ್ಲಿ ಈ ಯೋಜನೆಗಳನ್ನು ಮಾಡುವುದಕ್ಕೆ ಶಕ್ತಿ ಇಲ್ಲದೇ ಇದ್ದರೆ ಅದನ್ನು ಮಾಡುವುದಕ್ಕಾಗುವುದಿಲ್ಲ ಎಂದು ಹೇಳಿ. ಹೇಮಾವತಿ ಯೋಜನೆಯಿಂದ ಮುಳಗಡೆಯಾಗುವ ಜಮೀನಿನ ಒಡೆಯರಾದ ರೈತರ ಪರಿಸ್ಥಿತಿ ಹೇಗಿದೆ ಎಂದರೆ ಯಾವ ಯಾವ ಜಮೀನು ಎಷ್ಟೆಷ್ಟು ಯಾವಾಗ ಮುಳುಗಡೆಯಾಗುತ್ತದೆ ಎಂಬುದನ್ನು ಸ್ಪಷ್ಟವಾಗಿ ಹೇಳುತ್ತಿಲ್ಲ. ಆ ಜಮೀನುಗಳನ್ನು ಅಭಿವೃದ್ಧಿ ಮಾಡುವುದಕ್ಕೆ ಅವಕಾಶವಿಲ್ಲದಂತಾಗಿದೆ. ನಾವು ಅನೇಕ ಸಾರಿ ಹೇಮಾವತಿ ಯೋಜನೆಯ ಪ್ರದೇಶಕ್ಕೆ ಹೋದಾಗ ನೋಡುತ್ತಿದ್ದೇವೆ, ಆ ಯೋಜನೆಯ ಕಾರ್ಯಕ್ಕೆ ಸಂಬಂಧಪಟ್ಟ ಸಿಬ್ಬಂದಿವರ್ಗದವರು ತಮ್ಮ ವೇಳೆಯಲ್ಲ ಏನೂ ಕೆಲಸಮಾಡುವುದಕ್ಕೆ ಇಲ್ಲದೆ ಇಸ್ಪೀಟ್ ಆಡುತ್ತಿರುತ್ತಾರೆ. ಈ ಹೇಮಾವತಿ ಯೋಜನೆಯನ್ನು ಆದಷ್ಟು ಜಾಗ್ರತೆ ಕಾರ್ಯಗತ ಮಾಡುವುದಾದರೆ ಒಂದು ಲಕ್ಷ ಎಕರೆಗಿಂತ ಹೆಚ್ಚು ಜಮೀನಿಗೆ ನೀರಾವರಿ ಸೌಲಭ್ಯ ದೊರೆಯುತ್ತದೆ. ಇದರಿಂದ ಆ ಭಾಗದ ಜನತೆಯ ಆರ್ಥಿಕ ಪರಿಸ್ಥಿತಿ ಅಭಿವೃದ್ಧಿಯಾಗುವ ಪರಿಸ್ಥಿತಿ ಬರುತ್ತದೆ. ಇಂಥಾ ಒಂದು ಯೋಜನೆಗೆ ಸರ್ಕಾರದವರು ಒಂದು ವರ್ಷಕ್ಕೆ 2–3 ಕೋಟಿ ರೂಪಾಯಿಗಳನ್ನು ಒದಗಿಸುವುದಕ್ಕೆ ಸಾಧ್ಯವಾಗುವುದಿಲ್ಲ ಎಂದರೆ ಹೇಗೆ ! ಈಗ ಸರ್ಕಾರದವರು ಅನೇಕ ಇರಾಖೆಗಳಿಗೆ ದುಡ್ಡನ್ನು ಹಂಚಿದ್ದಾರೆ. ಒಂದೊಂದು ಇರಾಖೆಯಲ್ಲಿ 5 ಪರ್ಸೆಂಟ್ ಹಣ ವನ್ನು ಕಡಿಮೆ ಮಾಡುವುದಾದರೆ ಅದರಿಂದ 3 ಕೋಟಿ ರೂಪಾಯಿಗಳು ಉಳಿತಾಯವಾಗುತ್ತದೆ. ಆ ಹಣವನ್ನು ಈ ಹೇಮಾವತಿ ಯೋಜನೆಗೆ ಖರ್ಚು ಮಾಡುವುದಾದರೆ ಅದರಿಂದ ಎಷ್ಟೋ ಉಪಯೋಗ ವಾಗುತ್ತದೆ. ಮತ್ತು ಕಂಬದಕಡ, ಹೇಮಾವತಿ, ಹಾರಂಗಿ, ಯಗಚಿ ಈ ಯೋಜನೆಗಳನ್ನು ಕಾರ್ಯಗತ ಮಾಡುವುದಕ್ಕೆ ಬೇಕಾದಂತಹ ಹಣವನ್ನು ಸರ್ಕಾರದವರು ಯಾವರೀತಿಯಿಂದರಾದರೂ ಒದಗಿಸಿಕೊಂಡು ಆ ಯೋಜನೆಗಳನ್ನು ಪೂರ್ತಿ ಮಾಡುವುದಾದರೆ ಅವುಗಳಿಂದ ದೇಶಕ್ಕೆ ಕಾರ್ಯಾಣ ವಾಗುತ್ತದೆ. ಈ ಯೋಜನೆಗಳನ್ನು ತಡ ಮಾಡುವುದರಿಂದ ಯೋಜನೆಗಳ ಅಂದಾಜು ವೆಚ್ಚ ಹೆಚ್ಚು ಕಡಿಮೆಯಾಗುತ್ತದೆ. ಪ್ರತಿ ವರ್ಷ ಪಿ.ಡಬ್ಲ್ಯು.ಡಿ. ರೇಟನ್ನು ರಿವೈಜ್ ಮಾಡುತ್ತಿರುವುದನ್ನು ನಾವು ಪಬ್ಲಿಕ್ ಅಕೌಂಟ್ಸ್ ಕಮಿಟಿ ವರದಿಯನ್ನು ನೋಡಿದಾಗ ಗೊತ್ತಾಗುತ್ತದೆ. ನೆಗೋಷಿಯೇಟ್ ಆದ ಹಣಕ್ಕಿಂತ ಹೆಚ್ಚು ಹಣವನ್ನು ಅನೇಕ ಸಂದರ್ಭಗಳಲ್ಲಿ ಕೊಟ್ಟಿದ್ದಾರೆ. ಸಣ್ಣ ಸಣ್ಣ ಕಾರಣಗಳಿಗೋಸ್ಕರ ಲಕ್ಷಾಂತರ, ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡುವ ಅವ್ಯವಸ್ಥೆಯನ್ನು ನಾವು ನೋಡಿದ್ದೇವೆ.

ವಿದ್ಯುಚ್ಛಕ್ತಿಯ ಬಗ್ಗೆ ಬಹಳ ಹಿರಿಮೆಯ ಮಾತುಗಳನ್ನು ಹೇಳಿದ್ದಾರೆ. ಮಾನ್ಯ ಮುಖ್ಯ ಮಂತ್ರಿಗಳು ಮತ್ತು ಮಾನ್ಯ ಆರ್ಥಿಕ ಮಂತ್ರಿಗಳು ಹೇಳುತ್ತಾರೆ, ವಿದ್ಯುಚ್ಛಕ್ತಿಯಿಂದ ಬೇಕಾದಷ್ಟು ಆದಾಯವನ್ನು ಸಂಪಾದನೆ ಮಾಡುತ್ತಿದ್ದೇವೆಂದು. ಒಂದು ಯೂನಿಟ್ಟಿಗೆ 5 ನಯಾಪೈಸೆಯಂತೆ ಬೇರೆಯವರಿಗೆ ವಿದ್ಯುಚ್ಛಕ್ತಿಯನ್ನು ಮಾರಾಟ ಮಾಡಿ ನಮ್ಮವರಿಗೆ ಮನೆಬಳಕೆಗೆ ಒಂದು ಯೂನಿಟ್ಟಿಗೆ 26 ನಯಾಪೈಸೆಯಂತೆ ಚಾರ್ಜ್ ಮಾಡುತ್ತಿದ್ದಾರೆ. ಗ್ರಾಮಾಂತರ ಪ್ರದೇಶಗಳಿಗೆ ವಿದ್ಯುಚ್ಛಕ್ತಿ ಯನ್ನು ಒದಗಿಸಿ ಎಂದರೆ ಅಲ್ಲಿಂದ 2 ಪರ್ಸೆಂಟ್ ರಿಟರ್ನ್ ಬರುವುದಿಲ್ಲ, ಅದಕ್ಕೋಸ್ಕರ

(ಶ್ರೀ ಎಚ್. ಬಿ. ಜ್ವಾಲನಯ್ಯ)

ಗ್ರಾಮಾಂತರ ಪ್ರದೇಶಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸುವುದಕ್ಕಾಗುವುದಿಲ್ಲ ಎಂದು ಹೇಳುತ್ತಾರೆ. ನಮ್ಮ ರಾಜ್ಯದಲ್ಲಿರುವ 27 ಸಾವಿರ ಗ್ರಾಮಗಳ ಪೈಕಿ 5-6 ಸಾವಿರ ಗ್ರಾಮಗಳಿಗೆ ಮಾತ್ರ ವಿದ್ಯುಚ್ಛಕ್ತಿಯನ್ನು ಒದಗಿಸಿದ್ದಾರೆ. ನಮ್ಮ ರಾಜ್ಯದ ವಿದ್ಯುಚ್ಛಕ್ತಿಯನ್ನೆಲ್ಲಾ ಹೊರಗಡೆಗೆ ಕೊಡುತ್ತಿದ್ದಾರೆ. ಗ್ರಾಮಾಂತರ ಪ್ರದೇಶಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸುವುದಾದರೆ ಅಲ್ಲಿಂದ ಡೈರೆಕ್ಟಾಗಿ 2 ಪರ್ಸೆಂಟ್ ಉತ್ಪತ್ತಿ ಬರುವುದಾದರೂ ಇನ್‌ಡೈರೆಕ್ಟಾಗಿ 25 ಪರ್ಸೆಂಟ್ ಉತ್ಪತ್ತಿ ಬರುವಂತಹ ಅವಕಾಶ ಇದೆ. ಅದು ಬಿಟ್ಟು ನಮ್ಮ ವಿದ್ಯುಚ್ಛಕ್ತಿಯನ್ನು ಬೇರೆ ಕಡೆಗೆ ಕೊಡುವುದು ಸರಿಯಲ್ಲ. ಕೈಗಾರಿಕೆಗಳ ಬಗ್ಗೆ ಅರ್ಥ ಮಂತ್ರಿಗಳು ಅವರ ಅಭಿಪ್ರಾಯವನ್ನು ಹೇಳಿದ್ದಾರೆ. ಅದಕ್ಕಾಗಿ ನಾನು ಅವರನ್ನು ಅಭಿನಂದಿಸುತ್ತೇನೆ. ನಮ್ಮ ಪ್ಯೂನೂರು ರಾಜ್ಯದಲ್ಲಿ ಹಬ್ಬಿನ ಕೈಗಾರಿಕೆಗಳನ್ನೇನೂ ಸರ್ಕಾರದವರು ನಡೆಸುತ್ತಿದ್ದಾರೆ. ಆದರೆ ಆ ಕೈಗಾರಿಕೆಗಳಲ್ಲಿ ಕೋಟ್ಯಾಂತರ ರೂಪಾಯಿಗಳು ನಷ್ಟವಾಗುತ್ತಿದೆ. ಕಷ್ಟಪಟ್ಟು ಸಂಪಾದಿಸಿದ ತೆರಿಗೆಯ ಹಣವನ್ನು ಕೈಗಾರಿಕೆಯ ನಷ್ಟಕ್ಕೋಸ್ಕರ ಉಪಯೋಗಿಸುತ್ತಿದ್ದಾರೆ. ದೇಶದ ಪ್ರಗತಿಗೆ ಉಪಯೋಗಿಸ ಬೇಕಾದಂತಹ ಹಣವನ್ನು ಕೈಗಾರಿಕೆಯ ನಷ್ಟಕ್ಕೆ ಉಪಯೋಗ ಮಾಡುತ್ತಿದ್ದಾರೆ. ಕೈಗಾರಿಕೆಗಳನ್ನು ಬೆಳೆಸಬೇಕಾದರೆ, ಹೊಸ ಹೊಸ ಕೈಗಾರಿಕೆಗಳನ್ನು ಸ್ಥಾಪನೆ ಮಾಡಬೇಕಾಗಿದ್ದರೆ ಸರ್ಕಾರಕ್ಕೆ ಹಣ ಬೇಕು. ಈಗ ಸರ್ಕಾರದವರು ಯಾವ ಕೈಗಾರಿಕೆಗಳನ್ನು ನಷ್ಟದಿಂದ ನಡೆಸುವುದಕ್ಕೆ ಆಗುವುದಿಲ್ಲವೋ ಅಂಥಾ ಕೈಗಾರಿಕೆಗಳನ್ನು ಯಾರಾದರೂ ಖಾಸಗಿಯವರು ನಡೆಸುವುದಾದರೆ ಅವರಿಗೆ ಕೊಟ್ಟು ಆ ಹಣದಿಂದ ಹೊಸ ಕೈಗಾರಿಕೆಗಳನ್ನು ಸ್ಥಾಪನೆ ಮಾಡುವುದು ಒಳ್ಳೆಯದು. ಬೆಂಗಳೂರು, ಹುಬ್ಬಳ್ಳಿ ಬೆಳಗಾಮ್, ಮತ್ತು ಮಂಗಳೂರು ಪಟ್ಟಣಗಳ ಸುತ್ತಮುತ್ತ ಕೈಗಾರಿಕೆಗಳನ್ನು ಕಾನ್‌ಜೆಸ್ಟ್ ಮಾಡುವುದಕ್ಕೆ ಅವಕಾಶವನ್ನು ಕೊಡದೆ ಹಿಂದುಳಿದಿರುವ ಜಿಲ್ಲೆಗಳ ಕಡೆಗೆ ಸರ್ಕಾರದವರು ತಮ್ಮ ಗಮನವನ್ನು ಹರಿಸಿ ಆಲ್ಲಿ ಕೈಗಾರಿಕೆಗಳನ್ನು ಸ್ಥಾಪನೆ ಮಾಡುವುದಕ್ಕೆ ಪ್ರಯತ್ನ ಮಾಡಬೇಕು ; ಈಗ ಸರ್ಕಾರದವರು ಕೆಲವು ಜಿಲ್ಲೆಗಳಲ್ಲಿ ಇಂಡಸ್ಟ್ರಿಯಲ್ ಎಸ್ಟೇಟುಗಳನ್ನು ಕಟ್ಟಿಸಿದ್ದಾರೆ. ಅವುಗಳನ್ನು ಯಾವ ಉದ್ದೇಶಕ್ಕಾಗಿ ಕಟ್ಟಿಸಿದರೋ ಆ ಉದ್ದೇಶಕ್ಕೆ ಉಪಯೋಗ ಮಾಡದೆ ಅವುಗಳಲ್ಲಿ ಕತ್ತೆ, ಕುದುರೆ, ದನಗಳು ನಿಲ್ಲುವುದಕ್ಕೆ ಅವಕಾಶವಾಗಿದೆ. ಕೆಲವು ಕಡೆ ಈ ಇಂಡಸ್ಟ್ರಿಯಲ್ ಎಸ್ಟೇಟುಗಳನ್ನು ಆಹಾರಧಾನ್ಯವನ್ನು ಶೇಖರಣೆ ಮಾಡುವುದಕ್ಕೆ ಗೋಡೌನ್ ಮಾಡಿಕೊಂಡಿದ್ದಾರೆ. ಈ ದೃಷ್ಟಿಯಿಂದ ನಾನು ಹೇಳುವುದೇನೆಂದರೆ ಈಗ ಸರ್ಕಾರದವರು ನಡೆಸುತ್ತಿರುವ ಕೈಗಾರಿಕೆಗಳಲ್ಲಿ ನಷ್ಟದಿಂದ ನಡೆಯುತ್ತಿರುವ ಕೈಗಾರಿಕೆಗಳನ್ನು ಯಾರಾದರೂ ನಡೆಸುವವರು ಮುಂದೆ ಬಂದರೆ ಅವರಿಗೆ ಅವುಗಳನ್ನು ಕೊಟ್ಟು ಅವುಗಳಿಂದ ಬಂದಂಥ ಹಣದಿಂದ ಹೊಸ ಹೊಸ ಕೈಗಾರಿಕೆಗಳನ್ನು ಜಿಲ್ಲೆಗಳಲ್ಲಿ ಪ್ರಾರಂಭ ಮಾಡಬೇಕು. ದೇಶದಲ್ಲಿ ಕೈಗಾರಿಕೆಗಳನ್ನು ಹರಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ನಾನು ಹೇಳುತ್ತೇನೆ.

ಇನ್ನು ವಿದ್ಯಾಭ್ಯಾಸದ ಬಗ್ಗೆ ಹೇಳಬೇಕಾದರೆ ಸರ್ಕಾರದವರು ಈ ಬಗ್ಗೆ ಚಿನ್ನಾಟ ಆಡುತ್ತಿದ್ದಾರೆ. ಈ ಸರ್ಕಾರದವರು ಮಾಡುತ್ತಿರುವಷ್ಟು ಚಿನ್ನಾಟವನ್ನು ಎಕ್ಸ್‌ಪೆರಿಮೆಂಟನ್ನು ಬೇರೆ ಯಾರೂ ಮಾಡುತ್ತಿಲ್ಲ. ತಾವು ಜೇಡಿಮಣ್ಣಿನಿಂದ ಗಣಪತಿಯನ್ನು ಮಾಡುವುದಕ್ಕೆ ಹೋಗಿ ಅವರಪ್ಪನನ್ನು ಮಾಡಿಡುತ್ತಿದ್ದೀರೆಂದು ಹೇಳಬಹುದು. ನಿಮ್ಮ ನೀತಿಯಲ್ಲಿ ಯಾರಿಗೂ ವಿಶ್ವಾಸ ಇಲ್ಲವಾಗಿದೆ. ಬೇಸಿಕ್ ಎಜುಕೇಷನ್ ಮತ್ತು ಕ್ರಾಫ್ಟ್ ಎಜುಕೇಷನ್ ಬಗ್ಗೆ ನಿಮಗೆ ಶ್ರದ್ಧೆ ಇದ್ದರೆ ಆ ಸಂಸ್ಥೆಗಳಿಗೆ ಬೇಕಾಗುವ ಸಾಮಗ್ರಿಗಳನ್ನು ಒದಗಿಸಿ. ಇಲ್ಲದಿದ್ದರೆ ಆ ಸಂಸ್ಥೆಗಳನ್ನು ಮುಚ್ಚಿ ಬಿಡಿ. ಇಂತಹ ಸಂಸ್ಥೆಗಳಲ್ಲಿ ಬೇಕಾಗುವ ನಲಕರಣೆಗಳು ಇಲ್ಲವೆಂದು ಕೇಳಿದ್ದೇನೆ. ಸರಿಯಾದ ಉಪಾಧ್ಯಾಯರುಗಳು ಇಲ್ಲವೆಂದು ಕೇಳಿದ್ದೇನೆ. ಈ ಬಗ್ಗೆ ಸರ್ಕಾರದವರು ಕ್ರಮ ತೆಗೆದುಕೊಳ್ಳ ಬೇಕೆಂದು ಈ ಸಂದರ್ಭದಲ್ಲಿ ಸೂಚನ ಬಯಸುತ್ತೇನೆ. ಇದೇ ರೀತಿ ಪಠ್ಯಪುಸ್ತಕಗಳನ್ನು ರಾಷ್ಟ್ರೀಕರಣ ಮಾಡಿದ್ದೀರಿ. ಅನೇಕ ಖಾಸಗೀ ಪ್ರೆಸ್‌ನವರು ಪಠ್ಯಪುಸ್ತಕಗಳನ್ನು ಪ್ರಿಂಟ್ ಮಾಡಲು ಮುಂದೆ ಬರುತ್ತಿದ್ದರೂ ಸಹ ಸರ್ಕಾರದವರು ಕೆಲವೇ ಖಾಸಗೀ ಪ್ರೆಸ್‌ನವರಿಂದ ಪ್ರಿಂಟ್ ಮಾಡಿಸುತ್ತಿದ್ದಾರೆ. ಈ ಪ್ರೆಸ್‌ನವರು ಸತ್ಯಕ್ಕೆ ದೂರವಾದ ವಿಷಯಗಳನ್ನು ಪ್ರಿಂಟ್ ಮಾಡುತ್ತಿದ್ದಾರೆ. ಇದನ್ನು ಸರಿಪಡಿಸಬೇಕು.

4-30 P.M.

ಇನ್ನು ತೆರಿಗೆಯ ಬಗ್ಗೆ ಹೇಳಬೇಕೆಂದರೆ, ಎಲ್ಲರೂ ತೆರಿಗೆಯನ್ನು ಕೊಡಬೇಕಾಗುತ್ತದೆ. ಆದರೆ ಜಪತ್ತಿನ ದಿವಸ ಯಾರು ಸತ್ಯವಾಗಿ ನ್ಯಾಯವಾಗಿ ತೆರಿಗೆಯನ್ನು ಕೊಡುತ್ತಿದ್ದಾರೋ ಅಂತಹವರಿಗೆ

ಸರ್ಕಾರದ ಅಧಿಕಾರಿಗಳು ಕಿರುಕುಳ ಕೊಡುತ್ತಿದ್ದಾರೆ. ಸೇಲ್ಸ್ ಟ್ಯಾಕ್ಸ್ ವಸೂಲ ಮಾಡುವ ಬಗ್ಗೆ ಸ್ಯಾಕ್ಷಡ್ ಇದೆ. ಅದು ಸರ್ಕಾರದವರು ರಚನೆ ಮಾಡಿದ ಸ್ಯಾಕ್ಷಡೋ ಅಥವಾ ನಕಲಿ ಸ್ಯಾಕ್ಷಡೋ ಎಂಬುದು ಗೊತ್ತಿಲ್ಲ. ಇವರು ಹಾನನ ಮತ್ತು ಅರಸೀಕೆರೆಯಲ್ಲಿ ನಂತೆ ನಡೆಯುವ ದಿನಗಳಲ್ಲಿ ಹೋಗಿ ವರ್ತಕರ ಹತ್ತಿರ ಹಣ ವಸೂಲ ಮಾಡುತ್ತಿದ್ದಾರೆಂದೂ ವರ್ತಕರು ಕೊಡದಿದ್ದರೆ ಅವರ ಸಾಮಾನುಗಳನ್ನು ಹೊರಗೆ ತೆಗೆದು ಹಾಕುತ್ತಿದ್ದಾರೆಂದೂ ನನಗೆ ತಿಳಿದು ಬಂದಿದೆ. ಇವರು ವಸೂಲ ಮಾಡುವ ಹಣ ಸರ್ಕಾರಕ್ಕೆ ಕೂಡ ತಲುಪದೆ ಅವರೇ ತಮ್ಮ ಸ್ವಂತಕ್ಕೆ ಉಪಯೋಗ ಮಾಡಿಕೊಳ್ಳುತ್ತಿದ್ದಾರೆ. ಕೆಲವು ಸತ್ಯವಂತರಾದ ವರ್ತಕರು ಬಳಿ ಹೋಗಿ ಅವರ ಲೆಕ್ಕದ ಪುಸ್ತಕಗಳನ್ನು 20-30 ಸಾರಿ ಹಿಂದೆಮುಂದೆ ತಿರುಗಿಸಿ ನೋಡಿ, ಲೆಕ್ಕ ಸರಿಯಾಗಿದ್ದರೂ ಸಹ ಅವರೇ ತೆಗೆದುಕೊಂಡು ಹೋದರೆಂದೂ, ನಂತರ ಆ ವರ್ತಕರಲ್ಲಿ ಕೆಲವರ ಹೇಳಿಕೆಯ ಪ್ರಕಾರ 100 ರೂಪಾಯಿ ವಾಮಮೂಲು ಕೊಟ್ಟಮೇಲೆ ಆ ಪುಸ್ತಕಗಳು ಎರಡು ನಿಮಿಷದಲ್ಲಿ ಅವರ ಮನೆ ಬಾಗಿಲಿಗೆ ವಾಪಸ್ ಬಂದವೆಂದು ಕೇಳಿದ್ದೇನೆ. ಈ ರೀತಿಯ ಕಿರುಕುಳವನ್ನು ಸರ್ಕಾರದವರು ತಪ್ಪಿಸಬೇಕು. ಕೆಲವು ವರ್ತಕರು ಇವರ ಕಿರುಕುಳವನ್ನು ತಡೆಯುವುದಕ್ಕಾಗುವುದಿಲ್ಲವೆಂದು ಹೇಳುತ್ತಿದ್ದಾರೆ. ಸರ್ಕಾರದವರು ಬೇಕಾದರೆ 2,500 ರೂಪಾಯಿ ತೆರಿಗೆ ಕೊಡಬೇಕೆಂದು ಹೇಳಿದರೆ ಅವರು ಕೊಡುವುದಕ್ಕೆ ತಯಾರಿದ್ದಾರೆ. ಆದರೆ ನಿಮ್ಮ ಅಧಿಕಾರಿಗಳ ಕಿರುಕುಳವನ್ನು ತಪ್ಪಿಸಬೇಕು. ನಿಮ್ಮ ಅಧಿಕಾರಿಗಳು ವರ್ತಕರ ಬಳಿಗೆ ಹೋಗಿ ಅಕೌಂಟೆಂಟ್ ಇಟ್ಟುಕೊಂಡು ಲೆಕ್ಕವನ್ನು ತಯಾರಿಸಿ ಎಂದು ಹೇಳುತ್ತಿರುವುದು ಸರಿಯಿಲ್ಲ. ಈಗಿರುವ ಪದ್ಧತಿಯನ್ನು ಇನ್ನೂ ಸುಲಭಗೊಳಿಸಬೇಕು. ನಿಮ್ಮ ಅಧಿಕಾರಿಗಳು ತೆರಿಗೆ ಕೊಡುವವರಿಗೆ ಗೌರವ ಕೊಡಬೇಕು. ಈ ಬಗ್ಗೆ ನಿಮ್ಮ ಅಧಿಕಾರಿಗಳಿಗೆ ಟ್ರೈನಿಂಗ್ ಕೊಡಬೇಕು.

ಶ್ರೀ ರಾಮಕೃಷ್ಣ ಹೆಗಡೆ.—ಟ್ರೈನಿಂಗ್ ಕೊಡಿಸುತ್ತಿದ್ದೇವೆ.

ಶ್ರೀ ಎಚ್. ಬಿ. ಜ್ವಾಲನಯ್ಯ.—ತೆರಿಗೆ ರೂಪದಲ್ಲಿ ಸರ್ಕಾರಕ್ಕೆ ಬರುವ ಹಣದಲ್ಲಿ 50 ಪರ್‌ಸೆಂಟ್‌ವರೆಗೆ ಈ ಅಧಿಕಾರಿಗಳು ವರ್ತಕರಿಗೆ ಕಿರುಕುಳ ಕೊಡುವ ಮೂಲಕ ವಸೂಲ ಮಾಡಿ ತಮ್ಮ ಸ್ವಂತಕ್ಕೆ ಉಪಯೋಗಿಸಿಕೊಳ್ಳುತ್ತಿದ್ದಾರೆ. ಈ ರೀತಿಯಾಗುವುದನ್ನು ತಪ್ಪಿಸಿದರೆ ವರ್ತಕರಿಗೂ ಅನುಕೂಲವಾಗುವುದಲ್ಲದೆ ಸರ್ಕಾರಕ್ಕೂ ಕೂಡ ಹೆಚ್ಚಿನ ಆದಾಯ ಬರುತ್ತದೆ ಮತ್ತು ದೇಶದ ಅಭಿವೃದ್ಧಿಯೂ ಸಹ ಆಗುತ್ತದೆ. ನಮ್ಮ ಆರ್ಥಿಕ ಮಂತ್ರಿಗಳು ಬಹಳ ಕಷ್ಟದಿಂದ ಬಹಳ ನೋವಿನಿಂದ ತಮ್ಮ ಆತ್ಮಕ್ಕೆ ವಿರುದ್ಧವಾದ ಬಡ್ಜೆಟ್‌ನ್ನು ಮಂಡಿಸಿದ್ದಾರೆಂದು ಹೇಳಿದರೆ ತಪ್ಪಾಗಲಾರದು. ಹೊಸ ತೆರಿಗೆ ಇಲ್ಲದ ಖೋತಾ ಬಡ್ಜೆಟನ್ನು ಮಂಡಿಸಿದ್ದಾರೆ. 13 ಕೋಟಿ ರೂಪಾಯಿಗಳ ಖೋತಾ ಇರಬೇಕಾದರೆ ಮುಂದೆ ತೆರಿಗೆ ಬೀಳುತ್ತದೆಂದು ಹೇಳಬಹುದು. ನಾಲ್ಕನೆಯ ಯೋಜನೆಯ ಗಾತ್ರ ಏನೆಂಬುದು ಇವರಿಗೆ ಗೊತ್ತಿಲ್ಲ. ಈಗ ಜಿಲ್ಲಾ ಮಟ್ಟದಲ್ಲಿ ಯೋಜನೆಗಳನ್ನು ಕೈಗೊಂಡಿದ್ದೀರಿ. ಇದೇ ರೀತಿ ಮುಂದೆ ತಾಲ್ಲೂಕ್ ಮಟ್ಟದಲ್ಲಿ ಕೂಡ ಮಾಡಿದರೆ ಅನುಕೂಲವಾಗುತ್ತದೆ. ಎಲ್ಲಾ ಜಿಲ್ಲೆಗಳಲ್ಲಿ ಯೋಜನೆಗಾಗಿ ಖರ್ಚು ಮಾಡುವ ಹಣದ ವೆಚ್ಚವನ್ನು ಕ್ರೋಢೀಕರಿಸಿ ನಮಗೆ ಅಂಕಿ ಅಂಶಗಳನ್ನು ಒದಗಿಸಿದ್ದರೆ ಚೆನ್ನಾಗಿರುತ್ತಿತ್ತು. ಇನ್ನು ಮುಂದೆ ಯೋಜನೆಗಳನ್ನು ಕೇವಲ ಕಾಗದದಲ್ಲಿ ಮಾಡಿ ತೋರಿಸದೆ ನಿಜವಾಗಿಯೂ ಕಾರ್ಯರೂಪಕ್ಕೆ ತರಬೇಕು. ಕಾರ್ಯರೂಪಕ್ಕೆ ತರದಿದ್ದರೆ ಕೇವಲ ಕಾಗದದ ಹುಲಿಯಾಡೀತೆಂದು ಹೇಳಬೇಕಾಗುತ್ತದೆ. ಒಂದೊಂದು ಯೋಜನೆಗಳಿಗೆ ಮೂರು ನಾಲ್ಕು ಲಕ್ಷ ರೂಪಾಯಿಗಳನ್ನು ಒದಗಿಸುವುದಕ್ಕಿಂತ ಆ ಯೋಜನೆಗಳನ್ನೇ ಮುಚ್ಚಿಬಿಡುವುದು ಒಳ್ಳೆಯದು. ನಾನು ಮೊದಲೇ ಹೇಳಿದಂತೆ ಮಂತ್ರಿಗಳಿಗೆ ಆಗುವ ಖರ್ಚಿನಲ್ಲಿ ಐದು ಪರ್‌ಸೆಂಟ್ ಕಟ್ ಮಾಡಿದರೆ ಸರ್ಕಾರಕ್ಕೆ ಬಹಳ ಹಣ ಉಳಿಯುತ್ತದೆ. ಈ ಹಣವನ್ನು ಸಹ ಯೋಜನೆಗಳಿಗೆ ಉಪಯೋಗಿಸಬಹುದು. ಕಬಿನಿ ಮತ್ತು ಕಂಬದಕಡ ಯೋಜನೆಗಳನ್ನು ಜಾಗ್ರತೆ ಮಾಡಿ ಮುಗಿಸಬೇಕು. ಈ ಯೋಜನೆಗಳನ್ನು ಜಾಗ್ರತೆ ಮಾಡಿ ಮುಗಿಸದಿದ್ದರೆ ಈ ಯೋಜನೆಗಳು ಸರ್ಕಾರವನ್ನೇ ತಿಂದು ಬಿಡುತ್ತವೆಂದು ಹೇಳಿ ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ಈ ಬಡ್ಜೆಟ್‌ನ್ನು ವಿರೋಧಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ (ಮಳವಳ್ಳಿ).—ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಹಣಕಾಸಿನ ನಚಿವರಾದ ಶ್ರೀ ರಾಮಕೃಷ್ಣ ಹೆಗಡೆಯವರು ಮಂಡಿಸಿರುವ ಮುಂಗಡ ಪತ್ರವನ್ನು ನಾನು ಸ್ವಾಗತಿಸುತ್ತಾ, ನನ್ನ ಹಿರಿಯ ಮಿತ್ರರಾದಂಥ ಶ್ರೀ ದೇವರಾಜ ಅರಸ್ ಅವರು ಬಡ್ಜೆಟ್ ವಿಷಯದಲ್ಲಿ ಏನು ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡುತ್ತಾ, ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರೋ ಅದನ್ನು ನಾನು ಪೂರ್ಣವಾಗಿ ಸ್ವಾಗತ ಮಾಡುತ್ತಾ, ಹಾಗೂ ನನ್ನ ಮಿತ್ರರಾದಂಥ ಶ್ರೀ ಪೂರ್ಪಡೆಯವರು ಪ್ರಸ್ತಾಪ

(ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ)

ಮಾಡಿದ ಕೆಲವು ಭಾಗಗಳನ್ನು ಮಾತ್ರ ನಾನು ಒಪ್ಪುತ್ತೇನೆ. ಶ್ರೀ ಘೋರ್ಪಡೆಯವರು ಅರ್ಥ ಶಾಸ್ತ್ರಜ್ಞರು. ಅವರು ಮತ್ತು ನಾನು ಕಳೆದ 15 ವರ್ಷಗಳಿಂದ ಇಲ್ಲಿ ಸದಸ್ಯರಾಗಿದ್ದೇವೆ. ಆದರೆ ಅವರು ವ್ಯಕ್ತಪಡಿಸಿದ ಅಭಿಪ್ರಾಯಗಳಲ್ಲಿ ಕೆಲವನ್ನು ಮಾತ್ರ ನಾನು ಒಪ್ಪುತ್ತೇನೆ. ನನ್ನ ಸಮ್ಮಿತ್ರರಾದಂಥ ಶ್ರೀಮಾನ್ ದುಗ್ಗಪ್ಪನವರು ಸಹ ಕೆಲವು ವಿಚಾರಗಳನ್ನು ಹೇಳಿದರು. ಈ ಸಾಲಿನ ಮಂಗಡ ಪತ್ರದಲ್ಲಿ ಎರಡು ದೊಡ್ಡ ಈವೆಂಟ್ಸ್ ಇದೆ ಎಂದು ಶ್ರೀಮಾನ್ ದುಗ್ಗಪ್ಪನವರು ಹೇಳಿದರು. ಅದನ್ನು ಮಾನ್ಯ ಆರ್ಥಿಕ ಮಂತ್ರಿಗಳು ತಿಳಿದುಕೊಳ್ಳಬೇಕು. ಈ ಸಭಾನಾಯಕರಾಗಿದ್ದವರು ಈಗ ದೊಡ್ಡ ಹೊರೆಯನ್ನು ಹೊತ್ತು ಹೋಗಿದ್ದಾರೆ. ಆ ಬಗ್ಗೆ ಎರಡು ಮಾತುಗಳನ್ನು ಶ್ರೀಮಾನ್ ದುಗ್ಗಪ್ಪನವರು ಹೇಳಿದರು. ಬಹುಶಃ ಅವರೇ ಈ ಗಾಂಧಿ ಶತಮಾನೋತ್ಸವದ ಕಾಲದಲ್ಲಿ ಮುಖ್ಯ ಮಂತ್ರಿಯಾಗಿ ಮುಂದುವರಿದಿದ್ದರೆ ಒಂದು ದೊಡ್ಡ ಘಟನೆಯಾಗುತ್ತಿತ್ತು ಎಂದು ಹೇಳಿದರು. Unfortunately in our country politics has become a matter of numbers. Nowhere else in the world such a thing is happening. ಎಂದು ಇಷ್ಟು ಮಾತ್ರ ಅವರಿಗೆ ಹೇಳುತ್ತೇನೆ. ನಮ್ಮ ಹಣಕಾಸಿನ ಸಚಿವರಾದ ಶ್ರೀ ರಾಮಕೃಷ್ಣ ಹೆಗಡೆಯವರು ಬಜೆಟಿನಲ್ಲಿ ಮಧ್ಯಕಾಲೀನ ಚುನಾವಣೆಯ ಬಗ್ಗೆ, ಅಭಾವದ ಬಗ್ಗೆ, ಆಹಾರದ ಪರಿಸ್ಥಿತಿಯ ಬಗ್ಗೆ, ಫೈನಾನ್ಸ್ ಕಮಿಷನ್ ಮುಂಬೆ ನಡೆದಂಥ ಕಾರ್ಯಚಟುವಟಿಕೆಗಳ ಬಗ್ಗೆ ಮತ್ತು ನಾಲ್ಕನೆಯ ಯೋಜನೆಯ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಇದಕ್ಕಾಗಿ ಒಂದು ಅನ್ಯುಯಲ್ ಪ್ಲಾನ್ ಎಂದು ಮಾಡಬಹುದೊಳ್ಳೆಯದು. ನನ್ನ ಸ್ವಂತ ಅಭಿಪ್ರಾಯದಲ್ಲಿ ಹೇಳಬೇಕಾದರೆ ಈ ಬಜೆಟ್ಟು This is a Budget in embryo. I am putting in unequivocal terms. ನಮ್ಮ ಫೈನಾನ್ಸ್ ಮಿನಿಸ್ಟರ್‌ರವರು ಕೊಟ್ಟಿರುವ ಮೆಮೊರ್ಯಾಂಡಂನಲ್ಲಿ ಈ ವಿಷಯು ಹೇಳುತ್ತಾ ಇದಕ್ಕೆ ಒಂದು ರೂಪ ಕೊಡಬೇಕೆಂದಿದ್ದಾರೆ ಎನ್ನುವುದೂ ಇದೆ. ಅವರೇ ಹೇಳಿರುವ ಭಾಷಣದಲ್ಲಿ ಯೋಜನೆಗಳ ಬಗ್ಗೆ ಹೇಳುತ್ತಾ ಇದಕ್ಕಾಗಿ ಒಂದು ಕಮಿಟಿ ಮಾಡಿದ್ದೇವೆ ಎಂದು ಹೇಳಿದರು. ಆದರೆ ಆ ಸಮಿತಿಯಲ್ಲಿ ಹರಿಜನರು ಒಬ್ಬರನ್ನೂ ಹಾಕಲಿಲ್ಲ. ಇಂತಹ ಸಮಿತಿಯಲ್ಲಿ ಹರಿಜನರು ಒಬ್ಬರನ್ನು ಹಾಕಿದ್ದರೆ ಚೆನ್ನಾಗಿರುತ್ತಿತ್ತು. ನಾನಾದರೂ ಹೇಳುತ್ತೇನೆ ಈ ಸಂದರ್ಭದಲ್ಲಿ ಹೇಳುವುದು ಸರ್ಕಾರ ಇದರಲ್ಲಿ ಕರ್ತವ್ಯ ಲೋಪ ಮಾಡಿದೆ ಎಂದು.

ಇನ್ನು ಟ್ಯಾಕ್ಸೇಷನ್ ವಿಚಾರದಲ್ಲಿ ಮಾನ್ಯ ಫೈನಾನ್ಸ್ ಮಿನಿಸ್ಟರೇ ಹೇಳಿದ್ದಾರೆ, ನಾವು ಹೊಸದಾಗಿ ಇನ್ನೂ ಯಾವ ತೆರಿಗೆಗಳನ್ನು ಹಾಕಲು ಭೂತಲಿಂಗಂ ಎನ್ನುವವರ ರಿಪೋರ್ಟನ್ನು ಕಾಯುತ್ತಿದ್ದೇವೆ. ಅವರು ಏನು ಹೇಳುತ್ತಾರೋ ಅದನ್ನು ನೋಡಿಕೊಂಡು ನಾವು ಇಲ್ಲಿ ನಮ್ಮ ಯೋಜನೆಗಳನ್ನು ಸರಿ ಮಾಡಿಕೊಳ್ಳಬೇಕು ಎಂದು. In the Urban area, taxation has reached the saturation point ಎನ್ನುವುದು ಸರಿಯಾದ ಅಭಿಪ್ರಾಯವಲ್ಲ. ನಗರ ಪ್ರದೇಶಗಳಲ್ಲಿ ನಮ್ಮ ಮಾನ್ಯ ಸದಸ್ಯರಾದ ಶ್ರೀಮಾನ್ ದೇವರಾಜ ಅರಸಿನವರು ಹೇಳಿದಂತೆ ಇನ್ನೂ ತೆರಿಗೆ ಹಾಕಬಹುದು ಮತ್ತು ಅದನ್ನು ಅಲ್ಲಿನ ಜನ ಕೊಡಲು ಶಕ್ತಿ ಕೂಡ ಇದೆ ಎನ್ನುವುದನ್ನು ನಾನೂ ಒಪ್ಪುತ್ತೇನೆ. ಇನ್ನು ಪ್ರಾಮುಖ್ಯವಾದ ಇಂಡಸ್ಟ್ರಿಯಲ್ ಪಾಲಿಸಿ ಬಗ್ಗೆ ಮಾತ್ರ ಇಲ್ಲಿ ಮಾತನಾಡಿ ಬಾಕಿ ವಿಚಾರಗಳ ಬಗ್ಗೆ ಆಯಾ ಡಿಮ್ಯಾಂಡುಗಳು ಬಂದಾಗ ಅದರ ಬಗ್ಗೆ ಮತ್ತೆ ಹೇಳುತ್ತೇನೆ. ಮೊದಲು ರಾಜ್ಯಾಂಗ ಬದ್ಧವಾಗಿರುವ ನಮ್ಮ ಡೈರೆಕ್ಟಿವ್ ಪ್ರಿನ್‌ಸಿಪಲ್ಸ್ ಬಗ್ಗೆ ಹೇಳಬೇಕಾಗಿದೆ. The State shall strive to promote the welfare of the people by securing and protecting as effectively as possible justice, social and political and shall inform all the Institutes of national life ಎಂದು ಚೆನ್ನಾಗಿ ಹೇಳಿದ್ದಾರೆ. ಇದನ್ನೇ ಪಂಡಿತ ಜವಹರರಾಲ್ ನೆಹರೂರವರು 14ನೇ ಮಾರ್ಚ್ 1955ರಲ್ಲಿ ಲೋಕಸಭೆಯಲ್ಲಿ ಒಂದು ಸಾರಿ ಹೇಳಿದ್ದಾರೆ. Pandit Nehru on March 14, 1955, while asking the Loka Sabha to refer the Constitution Fourth Amendment Bill to a Committee, declared that the Fundamental Rights should observe the rights of State Policy. ನಮ್ಮ ದೇಶದಲ್ಲಿ ಉನ್ನತ ಸ್ಥಾನವನ್ನು ಅಲಂಕರಿಸಿರುವವರು ದೇಶದ ಪ್ರಗತಿಯನ್ನು ಸಾಧಿಸಲು ಸರಿಯಾದ ಒಂದು ಸ್ಟೇಟ್ ಪಾಲಿಸಿಯನ್ನು ಹಾಕಿಕೊಳ್ಳದೇ ಇದ್ದರೆ ದೇಶದ ಪ್ರಗತಿ ಕುಂಠಿತವಾಗುತ್ತದೆ. ರಾಜ್ಯಾಂಗದ ಒಂದು ಇತಿಮಿತಿಯೊಳಗೆ ಇವೆಲ್ಲವನ್ನೂ ಕಾರ್ಯಗತ ಮಾಡಲು ಅನುಕೂಲವಾಗುವಂತೆ ನಮ್ಮ ಪ್ಲಾನುಗಳನ್ನು ಮಾಡಬೇಕು. ಇಂದು ನಮ್ಮ ದೇಶದ ಯೋಜನೆಗಳು ಯಾವ ರೀತಿ ಇವೆ ಎಂದರೆ, ಮೊದಲನೇ ಯೋಜನೆಯಾಗಿ, ಎರಡನೇ ಯೋಜನೆ ಮುಗಿದು ಮೂರನೇ

ಯೋಜನೆ ಮುಗಿದು ನಾಲ್ಕನೆಯ ಯೋಜನೆಯನ್ನು ಆರಂಭಿಸುವುದರಲ್ಲಿದ್ದೇವೆ. ಇಷ್ಟು ಯೋಜನೆಗಳನ್ನು ಮಾಡಿದರೂ ಇವರಿಂದ ಜನಕ್ಕೆ ತಕ್ಕ ಪ್ರತಿಫಲ ದೊರೆಯುತ್ತಿದೆಯೇ ಎನ್ನುವುದನ್ನು ನಮ್ಮ ಅರ್ಥ ಮಂತ್ರಿಗಳು ಗಮನಕ್ಕೆ ತೆಗೆದುಕೊಳ್ಳಬೇಕು. ನಮ್ಮ ಸರಕಾರದಲ್ಲಿ ಅತಿ ಮುಖ್ಯವಾದ ಸ್ಥಾನದಲ್ಲಿರುವವರು ಫೈನಾನ್ಸ್ ಮಿನಿಸ್ಟರ್ ಎನ್ನುವುದನ್ನು ತಿಳಿಯಬೇಕು. ಅವರೇ ತಮ್ಮ ಭಾಷಣದಲ್ಲಿ 26ನೇ ಪುಟದಿಂದ ಹತ್ತಿದು ಸುಮಾರು ಮೂರು ನಾಲ್ಕು ಪ್ಯಾಜುಗಳಲ್ಲಿ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿರುತ್ತಾರೆ. ನಾನಾದರೂ ಈ ಸಂದರ್ಭದಲ್ಲಿ ಹೇಳುವುದು ಯಾವ ಒಂದು ಪಬ್ಲಿಕ್ ಸೆಕ್ಟರ್ ಆದರೂ ಅದನ್ನು ನಾವು ಪ್ರಾಮಾಣಿಕವಾಗಿ ಸ್ವಾಗತಿಸಬೇಕು ಎಂದು ಹೇಳಲು ಇಚ್ಛಿಸುತ್ತೇನೆ. We should go on supporting public sector undertakings even at the cost of other sectors' economy. ಇದು 1956ರಲ್ಲಿ ಪ್ರಾಸಾದ ಇಂಡಸ್ಟ್ರಿಯಲ್ ಪಾಲಿಸಿ ರೆಸಲ್ಯೂಷನ್ ಎನ್ನುವುದನ್ನು ಗಮನದಲ್ಲಿ ಇಟ್ಟುಕೊಂಡು ಇಲ್ಲಿ ಹೇಳುತ್ತಿದ್ದೇನೆ. ನಮ್ಮ ಸರಕಾರದ ಅಧಿಕೃತ ಸದಸ್ಯರಾದ ಮತ್ತು ನನ್ನ ಸ್ನೇಹಿತರಾದ ಅರ್ಥ ಮಂತ್ರಿಗಳಿಗೆ ಪಬ್ಲಿಕ್ ಸೆಕ್ಟರಿನಲ್ಲಿ ನಂಬಿಕೆ ಇಲ್ಲದಿರಬಹುದು. ಆದರೂ ಇದು ರಾಷ್ಟ್ರಾದ್ಯಂತ ಇರುವ ನೀತಿ. ಇದನ್ನು ಪಾರ್ಲಮೆಂಟಿನಲ್ಲೂ ಕೂಡ ಒಪ್ಪಿಕೊಂಡಿದ್ದಾರೆ.

At page 23 it is said :

> " The industrial policy resolution of April 1956 says that the adoption of a socialistic pattern of society as a national objective as well as the need for planned and rapid development, requires that all industries of basic and strategic importance which are in the nature of public utility services should be in the public sector. Other industries, which are essential in the present circumstances also should be in the public sector."

†ಶ್ರೀ ಐ. ಪ್ರಂಡಲೀಕಪ್ಪ (ಕುಷ್ಟಗಿ).—ಮಾನ್ಯ ಅಧ್ಯಕ್ಷರೇ, 1969-70ನೇ ಸಾಲಿನ ಬಡ್ಜೆಟ್‌ನ್ನು ನಾನು ಸ್ವಾಗತಿಸುತ್ತಾ ಎರಡು ಸೂಚನೆಗಳನ್ನು ಕೊಡಬಯಸುತ್ತೇನೆ. ಮೊದಲನೆ

ಯದಾಗಿ ಭೂ ಕಂದಾಯದ ಬಗ್ಗೆ ಎರಡು ಮಾತುಗಳನ್ನು ಹೇಳುತ್ತೇನೆ. ನಮ್ಮ ಮುಖ್ಯ ಮಂತ್ರಿಗಳು ಎರಡು ತಿಂಗಳ ಕೆಳಗೆ ಒಂದು ಹೇಳಿಕೆಯನ್ನು ಕೊಟ್ಟರು, ಏನೆಂದರೆ, ರೀ ಸೆಟ್ಲ್‌ಮೆಂಟ್ ಮಾಡುವಾಗ ಅನೇಕ ತಪ್ಪುಗಳಾಗಿವೆ. ಅವನ್ನು ಸರಿಪಡಿಸುವವರೆಗೆ 1965 ಕ್ಕೆ ಮುಂಚೆ ಏನು ಒಂದು ಕಂದಾಯ ಇತ್ತೋ ಅದನ್ನೇ ತೆಗೆದುಕೊಳ್ಳುತ್ತೇವೆಂಬ ಸಣ್ಣ ಹೇಳಿಕೆಯನ್ನು ಕೊಟ್ಟರು. ಮಾನ್ಯ ರೆವಿನ್ಯೂ ಮಂತ್ರಿಗಳು ಸಹ ಇದೇ ಹೇಳಿಕೆಯನ್ನು ಪಬ್ಲಿಕ್ ಮೀಟಿಂಗ್‌ನಲ್ಲಿ ಮೂರು ನಾಲ್ಕು ಸಲ ಕೊಟ್ಟಿದ್ದಾರೆ. ಭೂ ಕಂದಾಯವನ್ನು ಪುನರ್ವಿಮರ್ಶೆ ಮಾಡುವಾಗ ಬಹಳ ತಪ್ಪುಗಳಾಗಿವೆ. ಅನೇಕ ಒಳ್ಳೆಯ ಭೂಮಿಗಳು ಇದ್ದರೂ ಕೂಡ ಆ ಭೂಮಿಗಳಿಗೆ ಹೆಚ್ಚಿನ ಕಂದಾಯವನ್ನು ಹಾಕಿಲ್ಲ. ನನಗೆ ತಿಳಿದ ಮಟ್ಟಿಗೆ ರೀಸೆಟ್ಲ್‌ಮೆಂಟ್ ಮಾಡುವ ಮುನ್ನ ಸಂಬಂಧಪಟ್ಟ ಅಧಿಕಾರಿಗಳು ವಿಶೇಷವಾಗಿ ಹೈದರಾಬಾದ್ ಕರ್ನಾಟಕದೊಳಗೆ ಭೂಮಿಯನ್ನು ನೋಡದೆ, ತಾಲ್ಲೂಕ್ ಆಫೀಸಿನಲ್ಲಿ ಅಥವಾ ಜಿಲ್ಲಾ ಕಛೇರಿಯಲ್ಲಿ ಕುಳಿತುಕೊಂಡು ಎಲ್ಲಾ ಭೂಮಿಗೂ ಒಂದೇ ತರಹದ ಕಂದಾಯವನ್ನು ವಿಧಿಸಿದ್ದಾರೆ. ನಮ್ಮ ಭಾಗದ ಅಂದರೆ ಕುಷ್ಟಗಿ, ಕೊಪ್ಪಳ ಮತ್ತು ಎಲಬುರ್ಗಿ ಭಾಗಗಳಲ್ಲಿರುವ ಜಮೀನನ್ನು ಒಂದನೇ ತರಗತಿಯ ಭೂಮಿ ಎಂದು ತೀರ್ಮಾನ ಮಾಡಿದ್ದಾರೆ. ಆದರೆ ಎಲ್ಲಾ ಜಮೀನು ಒಂದನೇ ತರಗತಿಯವು ಆಗಿಲ್ಲ. ಕೆಲವು ಭಾಗದಲ್ಲಿ ಮಾತ್ರ ಒಳ್ಳೆಯ ಭೂಮಿ ಇದೆ. ಕಂದಾಯ ಕಡಿಮೆ ಮಾಡಿ ಎಂದು ನಾನು ಹೇಳುತ್ತಿಲ್ಲ. ರೀಸೆಟ್ಲ್‌ಮೆಂಟ್ ಮಾಡುವಾಗ ಈ ರೀತಿ ಸಣ್ಣ ಅನ್ಯಾಯಗಳು ಆಗಿರುವುದರಿಂದ ಸರ್ಕಾರದವರು ಈಗ ಹುಕುಂ ಹೊರಡಿಸಿರುವಂತೆ 1965 ರ ಹಿಂದಿನ ಕಂದಾಯವನ್ನೇ ವಸೂಲು ಮಾಡಬೇಕೆಂದು ನನ್ನ ನಮ್ರವಾದ ಸೂಚನೆಯಾಗಿದೆ. ನೀರಾವರಿ ಪ್ರದೇಶದಲ್ಲಿ ರೀಸೆಟ್ಲ್‌ಮೆಂಟ್ ಪ್ರಕಾರ ಅನ್ಯಾಯವಾಗಿದೆಯೆಂದು ಬಯಲುಸೀಮೆಯವರು ರಿಟ್ ಹಾಕಿದ್ದಾರೆ. ಆದರೆ ಅವರಿಗೆ ಮಾತ್ರ ಅನ್ಯಾಯವಾಗಿದೆಯೆಂದು ಹೇಳುವುದು ತಪ್ಪಾಗುತ್ತದೆ. ಸರ್ಕಾರದವರು ಬಯಲುಸೀಮೆಯವರಿಗೆ ಮಾತ್ರ ಅನುಕೂಲ ಮಾಡಿಕೊಡುವುದಾದರೆ ನಮ್ಮ ಭಾಗದವರಿಗೆ ಅನ್ಯಾಯ ಮಾಡಿದಂತಾಗುತ್ತದೆ. ಆದಕಾರಣ ರೀ-ಸೆಟ್ಲ್‌ಮೆಂಟ್ ಮಾಡಿದಾಗ ಏನು ಅನ್ಯಾಯಗಳಾಗಿವೆ, ಅದನ್ನು ಸರಿಪಡಿಸುವವರೆಗೆ ಹಿಂದಿನ ಕಂದಾಯವನ್ನೇ ಅಮಲ್‌ನಲ್ಲಿ ತರಬೇಕೆಂದು ನಾನು ನಮ್ರಪೂರ್ವಕವಾಗಿ ಹೇಳಬಯಸುತ್ತೇನೆ.

ಇನ್ನು ಎರಡನೆಯ ವಿಷಯವೆಂದರೆ ಸರ್ಕಾರದವರು ದೇಶದ ಅಭಿವೃದ್ಧಿಯ ನಿಲುವಾಗಿ ಮತ್ತು ರೈತರ ಅಭಿವೃದ್ಧಿಯನಿಲುವಾಗಿ ಅನೇಕ ಕಡೆಗಳಲ್ಲಿ ಭೂ ಅಭಿವೃದ್ಧಿ ಬ್ಯಾಂಕ್‌ಗಳಿಂದ ಬಾವಿ ತಗೆಸುವುದಕ್ಕೆ ಮತ್ತು ಪಂಪ್‌ಸೆಟ್ಟುಗಳನ್ನು ತೆಗೆದುಕೊಳ್ಳುವುದಕ್ಕೆ ಹಣವನ್ನು ಸಾಲವಾಗಿ ಕೊಡಿಸುತ್ತಿದ್ದಾರೆ. ಈ ವಿಚಾರದಲ್ಲಿ ಮೊದಲು ಬಹಳ ಅನಾನುಕೂಲಗಳು ಇದ್ದವು, ತಾಲ್ಲೂಕ್‌ಮಟ್ಟದ ಅಧಿಕಾರಿಗಳು, ಜಿಲ್ಲಾಮಟ್ಟದ ಅಧಿಕಾರಿಗಳು ಆದೇಶಕೊಡುವವರೆಗೂ ಸಹ ಸಾಲಸಿಗುವುದು ಕಷ್ಟವಾಗುತ್ತಿತ್ತು. ಈಗ ಈ ತೊಂದರೆಗಳು ದೂರವಾಗಿವೆ. ಈಗ ಗ್ರಾಮಸ್ಥರೇನಾದರೂ ಗ್ರಾಮಾಧಿಕಾರಿಗಳಹತ್ತಿರ ಹೋಗಿ ಮೂರುವರ್ಷದ ಪಹಣಿ ಲೆಕ್ಕವನ್ನು ಕೊಡಿ ಎಂದು ಕೇಳಿದರೆ ಕೂಡಲೆ ಬಹಳ ಕಷ್ಟ ಕೊಡುತ್ತಿದ್ದಾರೆ. ಈ ವಿಚಾರದಲ್ಲಿ ಮೇಲಿನ ಅಧಿಕಾರಿಗಳು ಕೆಳಗಿನ ಅಧಿಕಾರಿಗಳಿಗೆ ಸರ್ಕ್ಯುಲರ್ ಮೂಲಕ ತಿಳಿಸಿದ್ದರೂ ಸಹ, ಕೆಳಗಿನ ಅಧಿಕಾರಿಗಳು ಸರಿಯಾಗಿ ನಡೆದುಕೊಳ್ಳುತ್ತಿಲ್ಲ. ಇತ್ತೀಚೆಗೆ ತಹಶೀಲ್‌ದಾರರ ಆಫೀಸ್‌ನಲ್ಲಿ ಮೂರು ವರ್ಷದ ಪಹಣಿ ಲೆಕ್ಕ ಸಿಗುವಂತಹ ವ್ಯವಸ್ಥೆಯಾಗಿದೆ. ಈ ಬಗ್ಗೆ ಫಾರಂಗಳು ಸಹ ಪ್ರಿಂಟ್ ಆಗುತ್ತಿವೆ. ಆದಷ್ಟು ಜಾಗ್ರತೆ ಗ್ರಾಮಸ್ಥರಿಗೆ ಶಾನುಭೋಗರಿಂದ ಸಿಗಬೇಕಾಗಿದ್ದ ಪಹಣಿ ಲೆಕ್ಕ ತಹಶೀಲ್‌ದಾರರ ಆಫೀಸ್‌ನಲ್ಲಿಯೇ ಸಿಗುವಂತೆ ಮಾಡಿದರೆ ಸಣ್ಣ ಸಣ್ಣ ರೈತರಿಗೆ ಬಹಳ ಅನುಕೂಲವಾಗುತ್ತದೆಂದು, ಇದನ್ನು ತೀವ್ರ ಗತಿಯಿಂದ ಮಾಡಿಸಬೇಕೆಂದು ಸರ್ಕಾರದವರಲ್ಲಿ ನಿವೇದನೆ ಮಾಡಿಕೊಳ್ಳುತ್ತೇನೆ. ನನ್ನ ಕ್ಷೇತ್ರವಾದ ಕುಷ್ಟಗಿಯಲ್ಲಿ ಅನೇಕ ವರ್ಷಗಳಿಂದ ಸರಿಯಾಗಿ ಮಳೆಬೆಳೆಯಾಗದೆ ಜನರಿಗೆ ಬಹಳ ತೊಂದರೆಯಾಗಿದೆ. ನನ್ನ ಕ್ಷೇತ್ರ ಬಯಲು ಪ್ರದೇಶ. ಸರಿಯಾಗಿ ಮಳೆಯಾದರೆ ಮಾತ್ರ ಬೆಳೆ ಬೆಳೆಯುಲು ಅನುಕೂಲವಾಗುತ್ತದೆ. ಈಗ ನಾಲ್ಕಾರು ವರ್ಷಗಳಿಂದ ಸರಿಯಾಗಿ ಮಳೆ ಬೆಳೆಯಾಗುತ್ತಿಲ್ಲ. ನನ್ನ ಕ್ಷೇತ್ರದಲ್ಲಿರುವ 177 ಹಳ್ಳಿಗಳ ಪೈಕಿ 172 ಹಳ್ಳಿಗಳಲ್ಲಿ ಆಣೆವಾರಿ ಪದ್ಧತಿಯನ್ನು ಜಾರಿಗೆ ತಂದಿದ್ದಾರೆ. ಉಳಿದ 5 ಹಳ್ಳಿಗಳಲ್ಲಿ ಕಂದಾಯ ವಸೂಲು ಮಾಡಬೇಂದು ಇವೆ. ಸರಕಾರದಲ್ಲಿರುವ ಲೆಕ್ಕದಲ್ಲೇ ನೋಡಿದರೆ ಒಂದೊಂದು ಹಳ್ಳಿಯಲ್ಲಿರುವ ಆಣೆವಾರಿ 15 ಪೈಸೆಇಲ್ಲ 10 ಪೈಸೆ ಇದೆ ಎನ್ನುವುದು ನಮಗೆ ಕಂಡುಬರುತ್ತದೆ; ಮತ್ತು ಇದಕ್ಕೂ ಕಮ್ಮಿ ಕೆಲವು ಕಡೆ ಇದೆ. ಬಹಳ ಹೆಚ್ಚು ಎಂದರೆ ನುಮಾರು 37 ಪೈಸೆವರೆಗೆ ಇದೆ. ಆದರೆ ನಮ್ಮ ತಾಲ್ಲೂಕಿನಲ್ಲಿ ಇನ್ನೂ ಸರ್ವೆಸೆಟಲ್‌ಮೆಂಟ್ ಕೆಲಸವೇ ಆಗಿಲ್ಲ. ಸರಕಾರ ಈಗ ಕಂದಾಯ ವಸೂಲಿಯನ್ನು ನಿಲ್ಲಿಸಿ ರೈತರಿಗೆ ಅನುಕೂಲವಾಗುವ ಕ್ಷಾಮ ಪರಿಹಾರ ಕಾರ್ಯಕ್ರಮಗಳನ್ನು ಆದಷ್ಟು ತೀವ್ರವಾಗಿ

(ಶ್ರೀ ಇ. ಪುಂಡಲೀಕಪ್ಪ)

ಕೈಗೊಂಡು ಅದಕ್ಕಾಗಿ ಹೆಚ್ಚು ದುಡ್ಡು ಕೊಟ್ಟು ಕೆಲಸ ಮಾಡಿದುದಕ್ಕಾಗಿ ನಾನು ಸರಕಾರಕ್ಕೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಸಾಧಾರಣವಾಗಿ ಈ ಇಪ್ಪತ್ತು ವರ್ಷಗಳಲ್ಲಿ ಇಂತಹ ತ್ವರಿತವಾದ ಕೆಲಸಗಳು ಯಾವಾಗಲೂ ನಡೆದಿರಲಿಲ್ಲ ಮತ್ತು ಯಾವ ಕಾಲದಲ್ಲೂ ಆಗದೇ ಇದ್ದಂತಹ ಕೆಲಸಗಳನ್ನು ಇಷ್ಟು ತೀವ್ರಗತಿಯಿಂದ ಇಲ್ಲಿನ ಜಿಲ್ಲಾ ಮಟ್ಟದಲ್ಲಿರುವ ಅಧಿಕಾರಿಗಳು ಹಾಗೂ ತಾಲ್ಲೂಕು ಮಟ್ಟದಲ್ಲಿರುವ ಅಧಿಕಾರಿಗಳು ಹಾಗೂ ನಮ್ಮ ಮಂತ್ರಿಗಳು ಉಪ ಮಂತ್ರಿಗಳು ಎಲ್ಲರೂ ಕೂಡಿಕೊಂಡು ಬಹಳ ತ್ವರಿತವಾಗಿ ಎಲ್ಲ ಕೆಲಸಗಳನ್ನು ಮಾಡಿದುದಕ್ಕಾಗಿ ಅವರಿಗೆ ನನ್ನ ಅಭಿನಂದನೆಗಳನ್ನು ಇಲ್ಲಿ ಸಲ್ಲಿಸುತ್ತೇನೆ. ಆದರೆ ಇದರೊಳಗೆ ಇನ್ನು ಉಳಿದಿರುವ ಕೆಲಸಗಳನ್ನು ತೀವ್ರವಾಗಿ ಮಾಡಿ ಮುಗಿಸಬೇಕೆಂದು ಇಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ನಮ್ಮ ಭಾಗದಲ್ಲಿರುವ ಕುಷ್ಟಗಿ, ಲಿಂಗಸಗೂರು ಹಾಗೂ ಕೊಪ್ಪಳ ಇವು ಬಯಲು ಸೀಮೆಗಳು ಎಂದು ಕೆಲವರು ಸ್ಕ್ರೀಂಗಳನ್ನು ಹಾಕಿಕೊಂಡಿದ್ದಾರೆ. ಅವನ್ನು ತೀವ್ರವಾಗಿ ತೆಗೆದುಕೊಂಡು ಬೇಗನೆ ಮಾಡಬೇಕೆಂದು ಸರಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ನೀರಾವರಿ ಕೆಲಸಗಳನ್ನು ಮಾಡಲು ಅನೇಕ ಕಡೆ ಯೋಜನೆಗಳನ್ನು ಮಾಡುತ್ತಿದ್ದಾರೆ ಇದಕ್ಕೆ ಅನುಕೂಲವಾಗುವಂತೆ ಒಂದು ಟ್ರಾಕ್ಟರು ಯೂನಿಟ್ ಎಂದು ಮಾಡಿದ್ದಾರೆ, ಇದರಲ್ಲಿ ಒಂದೆರಡು ಟ್ರಾಕ್ಟರುಗಳು ಇದ್ದರೂ ಇದರಿಂದ ಹೆಚ್ಚು ಉಪಯೋಗ ಮಾಡಲು ಆಗುತ್ತಿಲ್ಲ. ಆದುದರಿಂದ ತಕಾವಿ ಸಾಲದ ರೂಪದಲ್ಲಿ ಟ್ರಾಕ್ಟರುಗಳನ್ನು ಪಡೆಯಲು ಅನುಕೂಲವಾಗುವಂತೆ ಈ ಟ್ರಾಕ್ಟರು ಯೂನಿಟ್ಟನ್ನು ಮಾಡಿಕೊಡಬೇಕು ಎಂದು ಸರಕಾರದಲ್ಲಿ ಇಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ಅನೇಕ ಕಡೆ ನೀರಾವರಿ ಬಾವಿಗಳಿಗಾಗಿ ಸಾಲ ಕೊಡುತ್ತಿದ್ದಾರೆ. ಆದರೆ ಕೆಲವು ಕಡೆಗಳಲ್ಲಿ ಬಾವಿಗಳನ್ನು ತೋಡುವಾಗ ಕಲ್ಲು ಸಿಗುತ್ತದೆ. ಇಂತಹ ಕಲ್ಲುಬಂಡೆಗಳನ್ನು ಒಡೆದು ನೀರು ತೆಗೆಯಬೇಕಾಗುತ್ತದೆ. ಕೆಲವು ವೇಳೆ ನೀರು ಬಂದರೂ ಬರುತ್ತೆ ಇಲ್ಲದಿದ್ದರೂ ಇಲ್ಲ. ಆದುದರಿಂದ ಇಂತಹ ಕಡೆಗಳಲ್ಲಿ ಬೋರ್‌ವೆಲ್‌ಗಳನ್ನು ಮಾಡಲು ಅನುಕೂಲ ಮಾಡಿಕೊಡಬೇಕು.

ಇನ್ನು ಶಿಕ್ಷಣ ಖಾತೆಯ ಬಗ್ಗೆ ಹೇಳಬೇಕು ಎಂದರೆ ನಮ್ಮ ಹಳ್ಳಿಗಳಲ್ಲಿರುವ ಶಿಕ್ಷಕರು ಸ್ವಲ್ಪವೇ ಮಂದಿ ಇದ್ದರೂ ಇವರು ನುಮಾರು ಒಂದೇ ಸ್ಥಳದಲ್ಲಿ ಇಪ್ಪತ್ತು ವರ್ಷಗಳಿಂದಲೂ ಇದ್ದಾರೆ. ಇದರ ಕಡೆಗೆ ಸರಕಾರ ನಿಗಾ ಇಟ್ಟು ಇವರನ್ನು ಬೇರೆ ಕಡೆಗೆ ವರ್ಗ ಮಾಡಬೇಕು. ಸರಕಾರ ಕೆಲವು ಕಡೆಗಳಲ್ಲಿ ಒಬ್ಬರು ಅಧಿಕಾರಿಗಳನ್ನು ಮೂರು ವರ್ಷಕ್ಕೆ ಮೇಲ್ಪಟ್ಟು ಇಟ್ಟುಕೊಳ್ಳಬಾರದು ಎಂದು ಮೂರು ವರ್ಷಕ್ಕೊಮ್ಮೆ ವರ್ಗಾವರ್ಗಿಗಳನ್ನು ಮಾಡುತ್ತಿರುತ್ತಾರೆ. ಆ ಪ್ರಕಾರ ಎಜುಕೇಷನ್ ಇಲಾಖೆಯಲ್ಲಿ ಮಾಡುತ್ತಿಲ್ಲ ಎಂದು ತೋರುತ್ತೆ. ನಮ್ಮಲ್ಲಿ ನುಮಾರು ಇಪ್ಪತ್ತು ವರ್ಷಗಳಾದರೂ ಇನ್ನೂ ಅವರನ್ನು ಬೇರೆ ಜಾಗಕ್ಕೆ ವರ್ಗ ಮಾಡಿಲ್ಲ.

ಕೊನೆಯದಾಗಿ ಕುಷ್ಟಗಿಯಲ್ಲಿರುವ ಸರಕಾರಿ ಹೈಸ್ಕೂಲಿಗೆ ಒಂದು ಕಟ್ಟಡವನ್ನು ಕಟ್ಟಿಸಿಕೊಡಬೇಕು ಎಂದು ಹೇಳಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ. ಎಂ. ಜಾಲಿಸಟಗಿ (ಭಟ್ಕಳ್).—ಮಾನ್ಯ ಅಧ್ಯಕ್ಷರೇ, ಹಣಕಾಸಿನ ನಟಿವರು ಮಂಡಿಸಿರತಕ್ಕ ಆಯವ್ಯಯ ಪತ್ರವನ್ನು ತಾತ್ವಿಕ ದೃಷ್ಟಿಯಿಂದ ವಿರೋಧಿಸುತ್ತಾ ಕೆಲವು ಮಾತುಗಳನ್ನು ಹೇಳಲು ಇಚ್ಛಿಸುತ್ತೇನೆ.

ಅವರು ಇಲ್ಲಿ ಮಾಡಿರುವ ಭಾಷಣದಲ್ಲಿ ಭೂಸುಧಾರಣೆ ಬಗ್ಗೆ ಯಾವುದೇ ವಿಷಯ ಪ್ರಸ್ತಾಪಕ್ಕೆ ಬರಲಿಲ್ಲ. ಮುಂಬಯಿ ಕರ್ನಾಟಕದವರಿಗೆ ಸ್ಪೆಷಲ್ ರೀಆರ್ಗನೈಸೇಷನ್ ಮಾಡಿರುವುದು ಒಂದು ಶಾಪವಾಗಿ ಪರಿಣಮಿಸಿದೆ. ಏಕೆಂದರೆ 1956-57 ನೇ ಸಾಲಿನವರೆಗೂ ರೈತರು ಸುಗ್ಗಿಯಲ್ಲಿ ಭೂಮಾಲೀಕರಿಗೆ ಅವರ ಗೇಣಿಯನ್ನು ಸರಿಯಾಗಿ ಕೊಡುತ್ತಿದ್ದರು. ಆದರೆ ಸ್ಪೆಷಲ್ ರೀಆರ್ಗನೈಸೇಷನ್ ಆದ ಮೇಲೆ ಭೂಸುಧಾರಣೆ ಕಾಯಿದೆ ಬಂದು ಇದರಲ್ಲಿ ಮೂಲಭೂತವಾದ ಧ್ಯೇಯ ಏನಿತ್ತೋ ,ಅದರಂತೆ ರೈತರು ಭೂಮಾಲೀಕರಿಗೆ ಎಕರೆಗೆ 20 ರೂಪಾಯಿನಂತೆ ಗೇಣಿ ಕೊಡಬೇಕೆಂದು ಇತ್ತೆ. ಆದರೆ ಹಿಂದಿನ ಮುಂಬಯಿ ಸರಕಾರದ ಕಾಯಿದೆ ಪ್ರಕಾರ ಸಾಧಾರಣವಾಗಿ ಗೇಣಿ ಎಕರೆಗೆ 200 ರಿಂದ 300 ರೂಪಾಯಿಗಳವರೆಗೆ ಇತ್ತು. ಈಗ ನಮ್ಮ ಭಾಗದ ರೈತರು ಹೊಸ ಕಾಯಿದೆಯಲ್ಲಿ ಯಾವ ರೀತಿಯ ಗೇಣಿ ಇದೆಯೋ ಅದರಂತೆ ಕೊಡುತ್ತೇವೆ ಎಂದು ಹೇಳಲು ಪ್ರಯತ್ನ ಮಾಡುತ್ತಿದ್ದಾರೆ. ಇನ್ನೂ ಸರಕಾರ ಭೂಸುಧಾರಣೆ ಬಗ್ಗೆ ಯಾವ ಕಾಯಿದೆಯನ್ನೂ ಜಾರಿಗೆ ತಂದಿಲ್ಲ. ಸರ್ಕಾರ ತರುವ ಕಾಯಿದೆಯಿಂದ ನಮ್ಮ ರೈತರಿಗೆ ತೊಂದರೆಯಾಗುತ್ತದೆ

ಎಂದು ಇದಕ್ಕಾಗಿ ಒಂದು ಚಳುವಳಿಯನ್ನು ಹೂಡಬೇಕು ಎಂದು ಪ್ರಯತ್ನ ಮಾಡುತ್ತಿದ್ದಾರೆ. ಆದುದರಿಂದ ಆದಷ್ಟು ಬೇಗ ಭೂಸುಧಾರಣೆ ಕಾನೂನನ್ನು ಮುಂದಿನ ವರ್ಷದಲ್ಲಾದರೂ ತರಲು ಸರಕಾರ ಪ್ರಯತ್ನ ಮಾಡಬೇಕು ಎಂದು ನಾನು ಏನಂತಿ ಮಾಡಿಕೊಳ್ಳುತ್ತೇನೆ. ಭೂಸುಧಾರಣೆ ಕಾಯಿದೆಯಿಂದ ಮೈಸೂರಿನಲ್ಲಿರುವ ಭೂಮಾಲೀಕರಿಗೂ ತೃಪ್ತಿ ಇಲ್ಲ. ಏಕೆಂದರೆ ಈ ಕಾಯಿದೆಯಲ್ಲಿ ಗೇಣಿ ಐದನೇ ಒಂದು ಅಂತಕೊಡಬೇಕು ಎಂದಿದೆ. 1965-66 ನೇ ಸಾಲಿನಿಂದ ಗೇಣಿ ಬಾಕಿ ಇದೆ. ಎಂದು ಇಂದು ರ್ಯಾಂಡ್ ಟ್ರಿಬುನಲ್‌ನಲ್ಲಿ ಎಷ್ಟೋ ಕೇಸುಗಳು ಇವೆ. ಇದರ ಇನ್‌ವೆಸ್ಟಿಗೇಷನ್ ಸರಿಯಿಲ್ಲ ಮತ್ತು ಇಲ್ಲಿನ ರೈತರು ಈಗಿರುವ ಚೆನೆನ್ಸ್ ಕಾಯಿದೆ ಪ್ರಕಾರ ತೆರಿಗೆ ಕೊಡಬೇಕೆಂದು ಕೇಳಿದರೆ ಕೊಡುವುದಿಲ್ಲ ಎನ್ನುವ ದೂರುಗಳು ಈಚೆಗೆ ಬರುತ್ತಿವೆ ಮತ್ತು ಗೇಣಿಯನ್ನು ಭೂಮಾಲೀಕರು ವಸೂಲು ಮಾಡುವುದಕ್ಕೂ ಆಗುತ್ತಿಲ್ಲ. ಈಗಿನ ಕಾಯಿದೆಯಲ್ಲಿ ಎಕರೆಗೆ 20 ರೂಪಾಯಿ ನಂತೆ ಗೇಣಿ ಕೊಡಬೇಕೆಂದು ಇದೆ. ಹಿಂದಿನ ಮುಂಬಯಿ ಕಾಯಿದೆಯಂತೆ ಎಕರೆಗೆ 200 ರೂಪಾಯಿ ಗಳವರೆಗೆ ಗೇಣಿ ಕೊಡುತ್ತಿದ್ದರು. ಇದನ್ನೇ ಮುಂದೆಯೂ ಅನುಸರಿಸುವುದು ಸೂಕ್ತವಾಗಿದೆ. ಇಲ್ಲದಿದ್ದರೆ ನಮ್ಮ ಕಡೆಯ ಜನಗಳಿಗೆ ಬಹಳ ತೊಂದರೆಯಾಗುತ್ತದೆ. ಈ ಕಾಯಿದೆಯಲ್ಲಿ ಸ್ವಲ್ಪ ದೋಷಗಳು ಇವೆ ಎಂದೂ ಇದು ವಾಲ್ಯಾಂಗ್ ಕಮಿಷನ್ ಮುಂದೆ ಹೋಗಿದೆ ಎಂದೂ ಕೇಳುತ್ತೇವೆ. ಆವರಿಂದ ಬೇಗನೆ ಭೂಸುಧಾರಣೆ ಕಾಯಿದೆ ತೀವ್ರವಾಗಿ ಬರುವಂತೆ ಪ್ರಯತ್ನ ಮಾಡಬೇಕು. ಗೇಣಿ ಬಾಕಿ ಇಡುವುದು ಸರಿಯಲ್ಲ. ಭೂಮಾಲೀಕರಿಗೆ ನ್ಯಾಯವಾಗಿ ಕೊಡಬೇಕಾಗಿರುವ ಗೇಣಿ ಯನ್ನು ಉಳಿಸಿಕೊಳ್ಳದೆ ಕಂತಿನ ಮೇಲಾದರೂ ಕೊಡುವ ವ್ಯವಸ್ಥೆ ಮಾಡಬೇಕೆಂದು ನಾನು ಇಲ್ಲಿ ಏನಂತಿ ಮಾಡಿಕೊಳ್ಳುತ್ತೇನೆ.

ಎರಡನೆಯದು, ನಮ್ಮ ಭಾಗದಲ್ಲೇ ಶೇಕಡಾ 81 ರಷ್ಟು ಅರಣ್ಯ ಇದೆ. ಮಲೆನಾಡಿನಲ್ಲಿ ಶೇಕಡಾ 60 ರಷ್ಟು ಇದೆ, ಆದರೆ ಸರಕಾರ ಇದರ ಬಗ್ಗೆ ಒಂದು ನಿರ್ದಿಷ್ಟವಾದ ಆರ್ ಇಂಡಿಯಾ ಪಾಲಿಸಿ ಪಹಿಸುತ್ತಿಲ್ಲ. ನಮ್ಮಲ್ಲಿ ಶೇಕಡಾ 81 ರಷ್ಟು ಇರುವ ಅರಣ್ಯ ಪ್ರದೇಶವನ್ನು ಇನ್ನೂ ಹೆಚ್ಚಾಗಿ ಉತ್ತಮ ಮಾಡುವ ಪ್ರಯತ್ನ ನಡೆಸಬೇಕು ಎಂದು ಮಾನ್ಯ ಅರ್ಥ ಸಚಿವರೂ ತಮ್ಮ ಭಾಷಣದಲ್ಲೂ ಹೇಳಿದ್ದಾರೆ. ಆದರೆ ನಮ್ಮ ಅರಣ್ಯದಲ್ಲಿ ಇರುವ ಪ್ರದೇಶಗಳಿಂದ ಜಮೀನು ಇಲ್ಲದವರಿಗೆ ವ್ಯವಸಾಯ ಮಾಡಲು ಕೊಡುಕ್ಕೆ ಸಾಕಷ್ಟು ಭೂಮಿ ಇದೆ, ಸುಮಾರು ಎರಡು ಲಕ್ಷ ಎಕರೆಗಳಷ್ಟು ಪ್ರದೇಶವನ್ನು ಭೂಮಿ ಇಲ್ಲದವರಿಗೆ ಕೊಡಬಹುದು. ಆದರೆ ಸರಕಾರ ಒಂದು ಲಕ್ಷ ಎಕರೆ ಕೊಡಬಹುದು ಎಂದು ಈಚೆಗೆ ಜಾಹೀರು ಮಾಡಿದ್ದಾರೆಯೇ ವಿನಾ ಅದು ಇನ್ನೂ ಕೃತಿಗೆ ಇಳಿಯಲಿಲ್ಲ. ಸುಮಾರು 8-9 ವರ್ಷಗಳಿಂದಲೂ ಇಲ್ಲಿನ ರೈತರು ತಾಲ್ಲೂಕಾ ಆಫೀಸುಗಳಿಗೆ ಆ ನಂತರ ಅಸಿಸ್ಟೆಂಟ್ ಕಮಿಷನರಿಗೆ ಆಮೇಲೆ ಡೆಪ್ಯುಟಿ ಕಮಿಷನರವರಿಗೆ ಹೋಗಿ ಭೂಮಿ ಕೊಡಬೇಕೆಂದು ಕೇಳಿದರೆ ಆಲ್ಲಿನ ಅಧಿಕಾರಿಗಳು ಈಗಿರುವ ರ್ಯಾಂಡ್ ಗ್ರಾಂಟ್ ರೂಲ್ಸು ಸರಿಯಾಗಿಲ್ಲ, ಇದನ್ನು ಶೀಘ್ರದಲ್ಲೇ ದುರಸ್ತು ಮಾಡುತ್ತೇವೆ. ಸರಕಾರಕ್ಕೆ ಇದನ್ನು ಅನುಮತಿಗಾಗಿ ಕಳುಹಿಸಿದ್ದೇವೆ ಎಂದು ಹೇಳುತ್ತಾರೆ. ಹೀಗೆ ನಿಧಾನ ಮಾಡುತ್ತಾ ಹೋದರೆ ರೈತರಿಗೆ ಭೂಮಿ ಕೊಟ್ಟಂತಾಗುವುದಿಲ್ಲ. ಆದಷ್ಟು ಬೇಗ ಸರಕಾರದವರು ಇದನ್ನು ಗಮನಕ್ಕೆ ತೆಗೆದುಕೊಂಡು ರೈತರಿಗೆ ಭೂಮಿ ಕೊಡುವ ವ್ಯವಸ್ಥೆ ಮಾಡಿದರೆ ಈಗಿರುವ ಆಹಾರ ಸಮಸ್ಯೆ ಬಗೆಹರಿಯುತ್ತದೆ ಮತ್ತು ಬೇಕಾದಷ್ಟು ಆಹಾರವೂ ನಮ್ಮ ಜನಕ್ಕೆ ಸಿಗುತ್ತವೆ.

6-30 P.M.

ಇಡೀ ಮೈಸೂರು ದೇಶದಲ್ಲಿ ನಮ್ಮ ಜಿಲ್ಲೆ ನಾಲ್ಕನೆಯದು. ನಮ್ಮ ಕಡೆ ಒಂದು ಲಕ್ಷ ಎಕರೆ ಜಮೀನನ್ನು ಬಡುಗಡೆ ಮಾಡಿ ಜನರಿಗೆ ಹಂಚಬೇಕು ಬಾಕಿ ಕಡೆ ಮಳೆ ಬೀಳುವುದಿಲ್ಲ ನಮ್ಮಲ್ಲಿ ಮಳೆ ಬರುತ್ತದೆ ಮತ್ತು ಜಮೀನೂ ಇವೆ. ಜನರು ಬೇಸಾಯ ಮಾಡಲು ತಯಾರಿದ್ದಾರೆ. ಈ ತರಹ ಪರಿಸ್ಥಿತಿ ಇದ್ದರೂ ಕೂಡ ಜಮೀನು ವಿತರಣೆ ಮಾಡವೆ ಇದ್ದಾರೆ. ಆದ್ದರಿಂದ ಸರ್ಕಾರದವರು ತೆಗೆದುಕೊಂಡ ನಿರ್ಣಯದಂತೆ ಒಂದು ಲಕ್ಷ ಎಕರೆ ಜಮೀನನ್ನು ಆದಷ್ಟು ಬೇಗ ರೈತರಿಗೆ ಕೊಡುವಂತೆ ಕ್ರಮ ತೆಗೆದುಕೊಳ್ಳಿ ಎಂದು ನಾನು ಸರ್ಕಾರದವರನ್ನು ಬೇಡಿಕೊಳ್ಳುತ್ತೇನೆ.

ಮೂರನೆಯದಾಗಿ ಕಂದಾಯದ ಹಣ ಲೋಕಲ್‌ಬೋರ್ಡಿಗೂ, ಪಂಚಾಯಿತಿಗೂ ಕೊಡುತ್ತೇವೆ ಎಂದು ಸರ್ಕಾರದವರು ಜಾಹೀರು ಮಾಡಿದ್ದಾರೆ. ನಮ್ಮಲ್ಲಿ ಅರಣ್ಯ ಹೆಚ್ಚಿಗೆ ಇರುವುದರಿಂದ ಕಂದಾಯ ಬಹಳ ಕಡಿಮೆ. ತಾಲ್ಲೂಕ್ ಬೋರ್ಡಿಗೂ ಮತ್ತು ಪಂಚಾಯಿತಿಗೂ ಏನು ಕಂದಾಯ ಸಿಕ್ಕುತ್ತದೆ ಅದು ಬಹಳ ಕಡಿಮೆ. ಇಡೀ ಮೈಸೂರು ದೇಶದಲ್ಲಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಅರಣ್ಯ ದಿಂದ ಬರುವಂಥ ಉತ್ಪನ್ನ ಬಾಕಿ ಕಡೆ ಎಲ್ಲೂ ಬರುವುದಿಲ್ಲ. ಆದುದರಿಂದ ನಮ್ಮ ಕಡೆ ಅರಣ್ಯದಿಂದ

(ಶ್ರೀ ಎಂ. ಎಂ. ಜಾಲಸಟಗಿ)

ಬರುವ ಉತ್ಪನ್ನದಲ್ಲಿ ಶೇಕಡ 15 ರಷ್ಟನ್ನಾದರೂ ತಾಲ್ಲೂಕು ಬೋರ್ಡಿಗೂ, ಪಂಚಾಯಿತಿಗೂ ಕೊಡುವಂತೆ ಸರ್ಕಾರದವರು ಒಂದು ಸವಲತ್ತು ಕೊಡುವುದು ಅವಶ್ಯ ಇದೆ. ಏಕೆಂದರೆ ಅಲ್ಲಿ ಕಂದಾಯ ಬಹಳ ಕಡಿಮೆ. ಇದರಿಂದ ಇಲ್ಲಿ ಸಾಕಾದಷ್ಟು ಅಭಿವೃದ್ಧಿ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ಅವಕಾಶ ಇಲ್ಲದೇ ಹೋಗಿದೆ.

ಇನ್ನು ಫಿಷರೀಸ್ ವಿಷಯ. ಮಾನ್ಯ ಅರ್ಥ ಸಚಿವರು ಫಿಷರೀಸ್ ಬಗ್ಗೆ ಯೋಗ್ಯವಾದ ಕ್ರಮ ತೆಗೆದುಕೊಳ್ಳುತ್ತೇವೆ, 510 ಮೆಕನೈಸ್ಡ್ ಬೋಟ್ಸ್ ಕೊಡುತ್ತೇನೆ ಎಂದು ಹೇಳಿದರು. ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ ಜಿಲ್ಲೆ ಇವೆರಡೂ ಕಡೆ ಕರಾವಳಿ ಪ್ರದೇಶ ಸರಿಸಮಾನವಾಗಿದ್ದರೂ ಉತ್ತರ ಕನ್ನಡ ಜಿಲ್ಲೆಯಲ್ಲಿ ಸಾಕಾದಷ್ಟು ಅಭಿವೃದ್ಧಿ ಆಗಿಲ್ಲ. ಮೆಕನೈಸ್ಡ್ ಬೋಟ್ಸ್ ಕಡಿಮೆ. ನಮ್ಮಲ್ಲಿ ಇಂಡೋನಾರ್ವೇಜಿಯನ್ ಸ್ಕೀಮ್ 1962-63 ರಲ್ಲಿ ಬಂದಿರಬಹುದು. ಇಲ್ಲಿಯವರೆಗೆ ಅದು ಕಾರ್ಯರೂಪಕ್ಕೆ ಬರಲಿಲ್ಲ. ಇಂಡೋನಾರ್ವೇಜಿಯನ್ ಸ್ಕೀಮು ಉತ್ತರ ಕನ್ನಡ ಜಿಲ್ಲೆಗೆ ಮಂಜೂರಾಗಿದೆ ಎಂದು ಹೇಳುತ್ತಾರೆ. ಏತಕ್ಕೆ ನರಿಯಾಗಿ ಕೆಲಸ ಮಾಡುವುದಿಲ್ಲವೋ, ಅದರಲ್ಲಿ ಬಾಟಲ್‌ನೆಕ್ ಏನು ಇದೆ ಎನ್ನುವುದನ್ನು ಮಾನ್ಯ ಫಿಷರೀಸ್ ಮಿನಿಸ್ಟರ್ ಹೇಳಬೇಕು. ಕಾರವಾರದಲ್ಲಿ ಫ್ರೀಜಿಂಗ್ ಪ್ಲಾಂಟ್ ಮಾಡಬೇಕು ಎಂದು ಹೇಳುತ್ತಿದ್ದಾರೆ. ಅದು ಅಸ್ತಿತ್ವದಲ್ಲಿ ಬರಲಿಲ್ಲ. ಇದನ್ನು ಬೇಗ ಮಾಡುವುದು ಅವಶ್ಯ ಇದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೆಲಸ ಆಗಿದೆ ಎಂದು ನಾವು ಅವರ ಮೇಲೆ ಅಸೂಯೆಯಿಂದ ಹೇಳುತ್ತಾ ಇಲ್ಲ. ನಮ್ಮ ಜಿಲ್ಲೆ ಹಿಂದೆ ಇದೆ. ಅದು ಮುಂದೆ ಬರುವಂತೆ ಸರ್ಕಾರದವರು ಆದಷ್ಟು ಮುತುವರ್ಜಿ ವಹಿಸಬೇಕು. ಶ್ರೀ ರಾಮಕೃಷ್ಣ ಹೆಗಡೆಯವರು ನಮ್ಮ ಜಿಲ್ಲೆಯ ಮಂತ್ರಿಗಳಾಗಿದ್ದರೂ ಕೂಡ ಬಾಕಿ ಜಿಲ್ಲೆಯವರು ಏನಾದರೂ ತಿಳಿದುಕೊಳ್ಳುತ್ತಾರೆ ಎಂದು ಬಹಳ ನಿಂಕೋಚವಿಂದ ಉತ್ತರ ಕನ್ನಡ ಜಿಲ್ಲೆಗೆ ಸಹಾಯ ಮಾಡುತ್ತಾ ಇಲ್ಲ. ಅದು ಹಾಗಾಗಬಾರದು.

ಇನ್ನು ಆಹಾರ ಸಮಸ್ಯೆಯನ್ನು ಬಿಡಿಸಬೇಕಾದರೆ ನಿಸರ್ಗ ಕೊಟ್ಟ ಆಹಾರದಿಂದ ಬಹುಮಟ್ಟಿಗೆ ಸಾಧ್ಯವಾಗುತ್ತದೆ ಎಂದು ಶ್ರೀ ದಯಾನಂದಸಾಗರ್ ಅವರು ಹೇಳಿದರು. ಈ ಪ್ರೋಟಿನ್‌ಪುಡ್ಡನ್ನು ಹಿಡಿದು ತರುವ ವ್ಯವಸ್ಥೆಗೆ ಸರ್ಕಾರದವರು ಅನುಕೂಲ ಮಾಡಿಕೊಟ್ಟರೆ ಬಹಳ ಜನ ಮುಂದೆ ಬರುತ್ತಾರೆ. ಅಲ್ಲಿನ ಜನಕ್ಕೂ ಕೆಲಸ ಸಿಕ್ಕಿದಂತಾಗುತ್ತದೆ, ನಮ್ಮ ಆಹಾರ ಸಮಸ್ಯೆಯನ್ನೂ ಬಿಡಿಸಲಕ್ಕೆ ಅನುಕೂಲವಾಗುತ್ತದೆ ಎಂದು ಹೇಳುತ್ತೇನೆ. ಆದುದರಿಂದ ಸರ್ಕಾರದವರು ಇದರ ಕಡೆ ಲಕ್ಷ್ಯ ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

[MR. SPEAKER in the Chair]

ಇನ್ನು ನಮ್ಮಲ್ಲಿ ಅರಣ್ಯಬಹಳ ಇದೆ. ಆದುದರಿಂದ ಅರಣ್ಯಕ್ಕೆ ಸಂಬಂಧಪಟ್ಟಂತೆ ಕೈಗಾರಿಕೆಗಳನ್ನು ಬೆಳೆಸಬೇಕು ಎಂದು ಕೇಳಿಕೊಳ್ಳುತ್ತೇನೆ. ಟ್ರೈಲ್‌ಫ್ಯಾಕ್ಟರಿ ಮಾಡಿದರು. ಅದು ಹೆನರಿಗೆ ಇದೆಯೋ ಹೊರತು ಅಲ್ಲಿ ಕಾಡು ಬೆಳೆದುಕೊಂಡಿದೆ. ಅಂತಹ ಇಂಡಸ್ಟ್ರೀಸ್ ಬಗ್ಗೆ ಯೋಗ್ಯ ಲಕ್ಷ್ಯತೆಗೆದುಕೊಳ್ಳಬೇಕು. ನಮ್ಮಲ್ಲಿ ಕೆಲವು ವಿಶಿಷ್ಟ ಪರಿಸ್ಥಿತಿ ಇದೆ. ಸರ್ಕಾರದವರು 15 ಸಾವಿರ ರೂಪಾಯಿ ಬರುವ ಕಡೆ ತಲಾಟಿ ನೇಮಿಸಬಹುದು ಎಂದು ಮಾಡಿದ್ದಾರೆ. ಎಲ್ಲ 5 ಸಾವಿರ ರೂಪಾಯಿ ತೆರಿಗೆ ಕೊಡುತ್ತಾರೋ ಅಲ್ಲಿ ತಲಾಟಿ ಇರಬೇಕೆಂದು ಮೊದಲು ನಿರ್ಣಯ ಮಾಡಿದ್ದರು. ಈಗ 15 ಸಾವಿರ ರೂಪಾಯಿ ಬರುವ ಕಡೆ ಇರಬೇಕು ಎಂದು ಮಾಡಿಬಿಟ್ಟರೆ ಕೆಲಸ ಆಗುವುದಿಲ್ಲ. ಏಕೆಂದರೆ ನಮ್ಮಲ್ಲಿ ತುಂಡು ಜಮೀನುಗಳು ಇವೆ. ಆದುದರಿಂದ ಆ ಕಡೆ ಲಕ್ಷ್ಯ ಕೊಟ್ಟು 5 ಸಾವಿರ ರೂಪಾಯಿ ಬರುವ ಕಡೆ ತಲಾಟಿ ನೇಮಿಸುವುದಕ್ಕೆ ಕ್ರಮ ಕೈಗೊಳ್ಳಬೇಕು ಎಂದು ಕೇಳಿಕೊಳ್ಳುತ್ತೇನೆ.

ಇನ್ನು ನಮ್ಮಲ್ಲಿ ಉಗ್ರಾಣ ಪರಿಸ್ಥಿತಿ ಬಹಳ ಕಷ್ಟ ಇದೆ. ಬಾಕಿ ಕಡೆ ವತನದಾರರು ಇದ್ದು ಉಗ್ರಾಣ ಕೆಲಸ ಮಾಡುತ್ತಾ ಇದ್ದಾರೆ. ನಮ್ಮಲ್ಲಿ ಹಾಗೆ ಇಲ್ಲ, ಅವರು ಇಡೀ ದಿವಸ ಕೆಲಸ ಮಾಡಬೇಕು. ಅವರಿಗೆ ಪಗಾರ 37½ ರೂಪಾಯಿ ಕೊಡುತ್ತಿದ್ದಾರೆ. ಅಷ್ಟಕ್ಕೆ ಅವರು ಕೆಲಸ ಮಾಡಬೇಕಾಗಿದೆ. ಈ ಪರಿಸ್ಥಿತಿ ಶೋಚನೀಯವಾಗಿದೆ. ಇವರ ವಿಷಯಗಳನ್ನು ಪದೇ ಪದೇ ಮುಖ್ಯಮಂತ್ರಿಗಳಿಗೂ ಹೇಳಿದ್ದೇನೆ. ಮೊದಲು 25 ರೂಪಾಯಿ ಇದ್ದುದು ಈಗ 36-37½ ರೂಪಾಯಿ ಮಾಡಿದ್ದಾರೆ. ಇವರಿಗೆ ಟ್ರಾವಲಿಂಗ್ ಅಲೋಯನ್ಸ್ ಇಲ್ಲ. ವಾರಕ್ಕೆ 2-3 ಸಲ ಟಪಾಲಿಗೆ

ಓರಬೇಕು. ಮೊದಲು ಹಳ್ಳಿಗೆ ಹೋದರೆ ಊಟ ಸಿಕ್ಕುತ್ತಿತ್ತು. ಈಗ ಸಿಕ್ಕುವುದಿಲ್ಲ. ಅವರಿಗೆ ಸರಿಯಾದ ಪಗಾರ ಕೊಡಬೇಕು. ಅವರನ್ನು 4ನೇ ಕ್ಲಾಸ್ ಗೌರ್ನಮೆಂಟ್ ಸರ್ವೆಂಟ್ಸ್ ಎಂದು ಎಣಿಸಿ ಅವರಿಗೆ ಪಗಾರ ಕೊಡಬೇಕು.

ಇನ್ನು ಓರ್ ರೋಡ್ಸ್‌ಗಾಗಿ ಸೆಂಟ್ರಲ್ ಗೌರ್ನಮೆಂಟ್‌ನವರು ಹಣ ಕೊಟ್ಟಿದ್ದಾರೆ. ಬಿ. ಹೆಚ್. ರೋಡ್, ಟಿಪ್ಪುಸುರ್ತಾನ್ ರೋಡನ್ನು ಬೆಂಗಳೂರು-ಹೊನ್ನಾವರ ರೋಡ್ ಎಂದು ಮಾಡಿದರು. ಅದು ಹೊನ್ನಾವರ ಮುಟ್ಟಲಿಲ್ಲ. ಹೊಸಪೇಟೆಯಿಂದ ಓರ್ ತೆಗೆದುಕೊಂಡು ಹೋಗುವುದಕ್ಕೆ ಬೆಂಗಳೂರು-ಹೊನ್ನಾವರ ರೋಡ್ ಮಾಡುತ್ತಾ ಇದ್ದಾರೆ. ಬಹಳ ವರ್ಷದಿಂದ ಆ ಕೆಲಸ ನಡೆಯುತ್ತಾ ಇದೆ. ಅದು ಬೇಗನೆ ಆಗಬೇಕು ಇಲ್ಲದಿದ್ದರೆ ಹೊಸಪೇಟೆ ಓರ್ ಮದ್ರಾಸ್, ಗೋವಾಕ್ಕೆ ಬೇರೆಕಡೆಯಿಂದ ಹೋಗುತ್ತದೆ. ಇದಕ್ಕೆ ಸಮೀಪವಾದಂಥ ಹೊನ್ನಾವರದಿಂದ ಈ ಕಬ್ಬಿಣದ ಅದಿರು ಹೋಗಬೇಕೆಂದು ಸೆಂಟ್ರಲ್ ಗೌರ್ನಮೆಂಟ್‌ನವರು ಹಣ ಮಂಜೂರು ಮಾಡಿದ್ದರೂ ರಸ್ತೆ ಕೆಲಸ ಮಾತ್ರ ಕಾರ್ಯಗತವಾಗಿಲ್ಲ. ಈ ಅದಿರು ಬೇರೆ ಕಡೆ ಡೈವರ್ಟ್ ಆದರೆ ಇಲ್ಲಿಗೆ ಬರುವುದು ಕಷ್ಟವಾಗುತ್ತದೆ. ಅದುದರಿಂದ ಓರ್ ರೋಡು ಆದಷ್ಟು ಬೇಗ ಪೂರ್ಣವಾಗುವಂತೆ ಸರ್ಕಾರದವರು ಲಕ್ಷ್ಯ ಕೊಡಬೇಕೆಂದು ತಿಳಿಸಿ ನನ್ನ ಮಾತನ್ನು ಮುಗಿಸುತ್ತೇನೆ. ಇಷ್ಟು ಮಾತು ಗಳನ್ನಾಡಲು ಅಧ್ಯಕ್ಷರು ನನಗೆ ಕಾರಾವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ. ಮಂಜೇಗೌಡ (ಮದ್ದೂರು).—ಸನ್ಮಾನ್ಯ ಸಭಾಪತಿಗಳೇ, ಮಾನ್ಯ ಅರ್ಥಸಚಿವರು ಮಂಡಿಸಿರತಕ್ಕ ಆಯವ್ಯಯ ಪಟ್ಟಿಯನ್ನು ಸಮರ್ಥಿಸುತ್ತ ಕೆಲವು ಅಂಶಗಳನ್ನು ಮಾತ್ರ ಸಭೆಯ ಮುಂದೆ ಇಡಲು ಇಚ್ಛಿಸುತ್ತೇನೆ. ಮಾನ್ಯ ಅರ್ಥಸಚಿವರು ಆಯವ್ಯಯ ಪಟ್ಟಿಯ ಮೊದಲನೆಯ ಭಾಗದಲ್ಲಿ ನಮ್ಮ ದೇಶದ ರಾಜಕೀಯ ಪರಿಸ್ಥಿತಿಯ ಬಗ್ಗೆ ಅವರೋಕಿಸಿ, ಮತ್ತೆ ಕೆಲವು ಸಮಸ್ಯೆಗಳ ಬಗ್ಗೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸದೆ ಅಲ್ಲಿಗೇ ಬಿಟ್ಟಿದ್ದಾರೆ. ಯಾವ ಒಂದು ವಿಷಯದ ಬಗ್ಗೆಯೂ ಕೂಡ ಖಚಿತವಾದ ಅಭಿಪ್ರಾಯವನ್ನು ಅವರು ಕೊಟ್ಟಿಲ್ಲ.

ಮೊದಲನೆಯದಾಗಿ ಮಧ್ಯಂತರ ಚುನಾವಣೆಯ ನಂತರವೂ ಭಾರತದ ಕೆಲವು ರಾಜ್ಯಗಳಲ್ಲಿ ಸುಭದ್ರ ಸರ್ಕಾರದ ರಚನೆ ಸಾಧ್ಯವಾಗದೆ ಹೋಗಿದೆ ಎನ್ನುವುದರ ಬಗ್ಗೆ ಹೇಳಿದ್ದಾರೆ. ನಾನು ಆ ಬಗ್ಗೆ ಎರಡು ಮಾತನ್ನು ಹೇಳುವುದಾದರೆ ಕಳೆದ 18 ವರ್ಷಗಳಿಂದ ಏನು ರಾಜ್ಯ ಮಟ್ಟದಲ್ಲಿ ಮತ್ತು ರಾಷ್ಟ್ರ ಮಟ್ಟದಲ್ಲಿ ಯೋಜನೆಗಳನ್ನು ಹಾಕಿಕೊಂಡು ಬಂದಿದ್ದೇವೆ, ಅವುಗಳನ್ನು ಯಾವರೀತಿ ಕಾರ್ಯಗತ ಮಾಡುತ್ತ ಬಂದಿದ್ದೇವೆ, ಬಹಳ ಮಟ್ಟಿಗೆ ಈ ಅನಿಶ್ಚಿತ ಪರಿಸ್ಥಿತಿಗೆ ಅದೇ ಕಾರಣ ಎಂದು ಹೇಳಿದರೆ ತಪ್ಪಾಗುವುದಿಲ್ಲ ಎನ್ನುವುದು ನನ್ನ ಭಾವನೆ. ಮತ್ತೆ ನಮ್ಮ ಮುಂದೆ ಇರತಕ್ಕ ಆಯ ವ್ಯಯ ಪಟ್ಟಿಯನ್ನು ಪರಿಶೀಲಿಸಿದರೆ ಈ ಅನಿಶ್ಚಿತ ಪರಿಸ್ಥಿತಿ ನಮ್ಮ ರಾಜಕೀಯ ಮಟ್ಟದಲ್ಲಿ ಯಾವ ತ್ತಿಗೂ ಕೂಡ ಬಾರದಂತೆ ತಡೆಯಲು ಸಾಧ್ಯವೇ ಎಂದು ಯೋಚಿಸಿದರೆ ಬಹುಶಃ ಸಾಧ್ಯವಾಗುವುದಿಲ್ಲವೆಂದು ಕಾಣುತ್ತದೆ. ಇದಕ್ಕೆ ಈ ಸರ್ಕಾರದವರೇ ಜವಾಬ್ದಾರರು ಎಂದು ಹೇಳುವುದಿಲ್ಲ. ಮೊದಲನಿಂದಲೂ ಕೂಡ ಆ ರೀತಿಯ ನೀತಿಯನ್ನು ಅನುಸರಿಸಿಕೊಂಡು ಬಂದು ಏಕಾಏಕಿ ಆ ನೀತಿ ಯಿಂದ ತಪ್ಪಿಸಿಕೊಂಡು ಹೋಗಬೇಕಾದರೆ ಯಾರಿಗಾದರೂ ಅಸಾಧ್ಯವಾಗುತ್ತದೆ. ಈಗ ಏನು ಖೋತಾ ಬಜೆಟ್ ಮಂಡಿಸಿದ್ದಾರೆ ಅದರಲ್ಲಿ ಬಹು ಭಾಗವನ್ನು ಸಾಲವನ್ನು ತೀರಿಸುವುದಕ್ಕೋಸ್ಕರ ಮತ್ತು ಬೇರೆ ಬೇರೆ ಅನಾವಶ್ಯಕ ಬಾಬುಗಳಿಗೆ ಕೊಟ್ಟಿದ್ದಾರೆ. ಯಾರು ನಮ್ಮ ರಾಜ್ಯದಲ್ಲಿ ಬಹು ತೇಕ ಮಂದಿ ಗ್ರಾಮಾಂತರ ಪ್ರದೇಶಗಳಲ್ಲಿ ವಾಸ ಮಾಡುತ್ತಿದ್ದಾರೆಯೋ ಆ ಜನರ ಬಗ್ಗೆ, ನೂರಕ್ಕೆ 90ಕ್ಕಿಂತ ಹೆಚ್ಚಾಗಿ ವ್ಯವಸಾಯದ ಮೇಲೆ ಅವಲಂಬಿಸಿಕೊಂಡಿರುವ ರೈತರ ಅಭಿವೃದ್ಧಿಗೆ ಅಥವಾ ಅವರ ಸ್ಥಿತಿಯನ್ನು ಸುಧಾರಿಸುವುದಕ್ಕೆ ಈ ಆಯವ್ಯಯ ಪಟ್ಟಿಯಲ್ಲಿ ಒದಗಿಸಿರುವ ಪೊಲ ಲಗು ಎಷ್ಟರಮಟ್ಟಿಗೆ ಸಹಕಾರಿಯಾಗುತ್ತದೆ ಎಂದರೆ ಏಕಕ್ಕೂ ಕೂಡ ಸಾಲದುದಾಗಿದೆ. ವ್ಯವ ಸಾಯಾಭಿವೃದ್ಧಿ ಎಂದು ವ್ಯವಸಾಯದ ಇಲಾಖೆಗೇ ಸ್ವಲ್ಪ 50 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರೂ ಕೂಡ ಅದೆಲ್ಲ ಇಲಾಖೆಯ ಅಧಿಕಾರಿಗಳ ವೇತನಕ್ಕೆ ಖರ್ಚಾಗಿ ನಮ್ಮಲ್ಲಿನ ಅಭಾವ ಪರಿಸ್ಥಿತಿಯನ್ನು ಸುಧಾರಿಸಲಿಕ್ಕೆ ಸಾಧ್ಯವೇ ಆಗುವುದಿಲ್ಲ. ರೈತರಿಗೆ ಬೇಕಾದಂಥ ಸಪ್ಲೈಸ್ ಅಂಡ್ ಸರ್ವಿಸಸ್ ವ್ಯವಸಾಯ ಇಲಾಖೆಯಿಂದ ಸಹಕಾರ ಇಲಾಖೆಗೆ ವರ್ಗಾವಣೆಯಾಗಿದೆ. ಇನ್ನು ವ್ಯವಸಾಯದ ಇಲಾಖೆಗೆ ಇರುವುದಾದರೂ ಏನು ? ಹೊಸ ತಳಿಯನ್ನು ಕಂಡುಹಿಡಿಯುವುದು, ಜನ ಗಳಿಗೆ ತಿಳುವಳಿಕೆ ಕೊಡತಕ್ಕದ್ದು, ಟೆಕ್ನಿಕಲ್ ನೋ ಹೌ ಜನಗಳಿಗೆ ಒದಗಿಸತಕ್ಕದ್ದು. ಇದನ್ನು ಒದಗಿಸಬೇಕಾದರೆ 10 ಕೋಟಿ ರೂಪಾಯಿ ಬೇಕೇ ಎಂದು ಕೇಳುತ್ತೇನೆ. ಬೇಕಾಗಿಲ್ಲ ಎನ್ನುವುದು ನನ್ನ ಅಭಿಪ್ರಾಯ. ಏಳನೇ ಪುಟದಲ್ಲಿ ಅರ್ಥ ಸಚಿವರು ಒಂದು ವಿಷಯವನ್ನು ಹೇಳಿದ್ದಾರೆ,

(ಶ್ರೀ ಎಂ. ಮಂಚೇಗೌಡ)

ಗ್ರಾಮಾಂತರ ಪ್ರದೇಶಗಳಿಗೆ ವಿದ್ಯುದ್ದೀಪಗಳ ಪೂರೈಕೆ, ಮತ್ತು ಪಂಪ್‌ಸೆಟ್‌ಗಳ ಪೂರೈಕೆ ಇವುಗಳನ್ನು ಮಾಡಲಾಗಿದೆ ಎಂದು ಹೇಳಿದ್ದಾರೆ. ನಾನು ಹೇಳುತ್ತೇನೆ ನಮ್ಮ ರಾಜ್ಯದಲ್ಲಿ ಬಹಳವಾದ ಕಠಿಣ ಪರಿಸ್ಥಿತಿ ಒದಗಿದ್ದು 1968ನೇ ಇಸವಿಯಲ್ಲಿ. 1968ನೇ ಇಸವಿಯಲ್ಲಿ ಎಷ್ಟು ಬಾವಿಗಳು ಮಂಜೂರಾಗಿವೆ ಎಂದು ನೋಡಿದರೆ ಬಹಳ ನಿರಾಸೆಯಾಗುತ್ತದೆ. ಒಂದೇ ಒಂದು ಉದಾಹರಣೆ ಕೊಡುವುದಾದರೆ ಹಾಸನದಲ್ಲಿ ನಾಲ್ಕು ಬಾವಿಗಳು, ಮಂಡ್ಯದಲ್ಲಿ 17, ಮೈಸೂರಿನಲ್ಲಿ 25 ಹೀಗೆ ಕೊಟ್ಟಿದ್ದಾರೆ. ಇದಕ್ಕೆ ಕಾರಣವೇನು ? ಭೂ ಅಭಿವೃದ್ಧಿ ಬ್ಯಾಂಕುಗಳಿಗೆ ಈ ಕೆಲಸವನ್ನು ವಹಿಸಲಾಗಿದೆ ಎಂದು ಅತ್ತಕಡೆ ಕೈ ತೋರಿಸುತ್ತಾರೆ. ಅಲ್ಲ ಎರಡನೇ ಕಂತು ಕೊಡುವುದಕ್ಕೆ ಹಣವಿಲ್ಲ.

ಗ್ರಾಮಾಂತರ ಪ್ರದೇಶದಲ್ಲಿ ಆದಾಯ ಹೆಚ್ಚಿದೆ, ರೈತರ ಆದಾಯ ಹೆಚ್ಚಿದೆ, ಆದ್ದರಿಂದ ತೆರಿಗೆ ಹಾಕಲಿಕ್ಕೆ ಸಾಧ್ಯವಿದೆ ಎಂದು ಹೇಳಿದ್ದಾರೆ. ತೆರಿಗೆ ಹಾಕುವ ವಿಚಾರದಲ್ಲಿ ಸಲಹೆಗಳನ್ನು ಕೊಡಲು ಭೂತಲಿಂಗಂ ಕಮಿಟಿ ಮಾಡಿದ್ದಾರೆ. ಬಹುಶಃ ಆ ಕಮಿಟಿ ಮಾಡಿರುವುದು ವ್ಯರ್ಥ ಎಂದರೂ ತಪ್ಪಾಗುವುದಿಲ್ಲ. ಈ ಸಂದರ್ಭದಲ್ಲಿ ನೀರಾವರಿಗೆ ಒದಗಿಸಿರುವ ಪೊಬಲಗನ್ನು ನೋಡಿದರೆ ಇದೇ ಮಟ್ಟದಲ್ಲಿ ಸಾಗಿದರೆ ಇನ್ನು ನೂರು ವರ್ಷಗಳಾದರೂ ಕೂಡ ಮಂಜೂರಾಗಿರುವ ಕೆಲಸಗಳನ್ನು ಮುಗಿಸುವುದಕ್ಕೆ ಸಾಧ್ಯವಿಲ್ಲ. ನೀರಾವರಿ ನಮ್ಮ ಪ್ರದೇಶದಲ್ಲಿ ಬಹಳ ಅಗತ್ಯವಾಗಿ ಆಗಬೇಕಾಗಿರುವ ಕೆಲಸ. ಏನಾದರೂ ಮಾಡಿ ಬೇರೆ ಬೇರೆ ಬಾಬುಗಳಿಗೆ ಕೊಟ್ಟಿರುವ ಹಣವನ್ನು ಕಡಮೆ ಮಾಡಿ ನೀರಾವರಿ ಬಾಬಿಗೆ ಹೆಚ್ಚು ಹಣವನ್ನು ಒದಗಿಸಬೇಕು ಮತ್ತು ನೀರಾವರಿ ಜಮೀನನ್ನು ಹೆಚ್ಚಿಸತಕ್ಕ ಸಂದರ್ಭದಲ್ಲಿ ಹೊಸ ಹೊಸದಾಗಿ ಕೆರೆ ಕಟ್ಟೆಗಳನ್ನು ಕಟ್ಟಿ ಹೆಚ್ಚಿಸಬೇಕೇ ವಿನಾ ಇರುವ ಕೆರೆಗಳಿಗೆ ಎರಡು ತೂಬು ಮಾಡುವುದರಿಂದ ಅಥವಾ ಇತರ ಸಣ್ಣ ಪುಟ್ಟ ಕೆಲಸಗಳಿಂದ ನೀರಾವರಿ ಆಗುವ ಪ್ರದೇಶವನ್ನು ಹೆಚ್ಚಿಸುವುದಕ್ಕಾಗುವುದಿಲ್ಲ.

ಕೃಷ್ಣರಾಜ ಸಾಗರವನ್ನು ಕಟ್ಟತಕ್ಕ ಸಂದರ್ಭದಲ್ಲಿ ಬಲದಂಡೆ ನಾಲೆ ಇರಬೇಕೇ, ಎಡದಂಡೆ ನಾಲೆ ಇರಬೇಕೇ ಎನ್ನುವುದನ್ನು ತಜ್ಞರು ಪರಿಶೀಲಿಸಿ 1923ನೇ ಇಸವಿಗೆ ಮುಂಚೆಯೇ ಒಂದು ತೀರ್ಮಾನಕ್ಕೆ ಬಂದು ಎಡದಂಡೆ ನಾಲೆ ಮಾತ್ರ ಇರಬೇಕು, ಬಲದಂಡೆ ನಾಲೆಯನ್ನು ಕೈಬಿಡಬೇಕು ಎಂದು ಆಗಲೇ ಬಿಟ್ಟಿದ್ದಾರೆ. ಇಂಥದನ್ನು ಮತ್ತೆ ಮಾಡುವುದು ಎಂದರೆ ಇದು ಅರ್ಥವಿಲ್ಲದ ಮಾತು. ನಾನು ಒಂದೇ ಮಾತಿನಲ್ಲಿ ಹೇಳುವುದಾದರೆ ವರುಣಾನಾಲೆ ಮಾಡುವುದಾದರೆ ಮಂಡ್ಯ ಜಿಲ್ಲೆಯ ಜನಗಳ ಸಮಾಧಿಯ ಮೇಲೆ ಮಾತ್ರ ಆ ರೀತಿ ಮಾಡಲು ಸಾಧ್ಯವೇ ವಿನಾ ಇನ್ನು ಯಾವ ರೀತಿಯಿಂದಲೂ ಕೂಡ ಸಾಧ್ಯವಿಲ್ಲ. ಮೈಸೂರು ರಾಜ್ಯದಲ್ಲಿ ಕಾಂಗ್ರೆಸ್ ಜನ್ಮ ತಾಳಿದ್ದು ಮಂಡ್ಯ ಜಿಲ್ಲೆಯಲ್ಲಿ. ಧೈರ್ಯ, ಸ್ಥೈರ್ಯ, ಮಂಡ್ಯಜಿಲ್ಲೆ ಜನಗಳಿಗೆ ಹೇಳಿಕೊಡಬೇಕಾಗಿಲ್ಲ. ಹೋರಾಟ ಮಾಡುವುದನ್ನು ಕಲಿಸಿಕೊಡಬೇಕಾಗಿಲ್ಲ. ಏನೇ ಆಗಲೀ, ಶತಾಯ ಗತಾಯ ಬಲದಂಡೆ ನಾಲೆಯನ್ನು ಮಾಡುವುದಕ್ಕೆ ಬಿಡುವುದಿಲ್ಲ. ಈಗ ತಜ್ಞರು ಯಾವ ದೃಷ್ಟಿಯಿಂದ ಒಂದು ತೀರ್ಮಾನಕ್ಕೆ ಬಂದರು ಎಂದರೆ, ಅವರು ಸಾಕಷ್ಟು ಅಂಕಿಅಂಶಗಳನ್ನು ಪಡೆದುಕೊಂಡು ತೀರ್ಪು ಕೊಡುವುದಕ್ಕೆ ಸಾಕಷ್ಟು ಕಾಲಾವಕಾಶವನ್ನು ತೆಗೆದುಕೊಳ್ಳಲಿಲ್ಲ ಎಂದು ನನಗನ್ನಿಸುತ್ತದೆ. ನಮ್ಮ ತಜ್ಞರು ಕಷ್ಟಪಟ್ಟು ಶ್ರಮ ವಹಿಸಿ ಹಿಂದೆ ಇದರ ಬಗ್ಗೆ ಏನೇನು ಅಭಿಪ್ರಾಯಗಳನ್ನು ತಜ್ಞರು ಕೊಟ್ಟಿದ್ದಾರೆ ಎನ್ನುವುದನ್ನೆಲ್ಲ ಪರಿಶೀಲನೆ ಮಾಡಿ ಒಂದು ತೀರ್ಮಾನಕ್ಕೆ ಬಂದಂತೆ ನನಗೆ ಕಾಣುತ್ತಿಲ್ಲ. ನಾನು ನಮ್ಮ ತಜ್ಞರ ಬಗ್ಗೆ ಟೀಕೆ ಮಾಡುವುದಕ್ಕೆ ಇಷ್ಟಪಡುವುದಿಲ್ಲ. ಅವರು ಅದನ್ನೆಲ್ಲಾ ಪರಿಶೀಲಿಸಿದ್ದರೆ ಆ ರೀತಿಯಲ್ಲಿ ಹೇಳುತ್ತಿರಲಿಲ್ಲ ಎಂದು ನನ್ನ ನಂಬಿಕೆ.

ಸರ್ಕಾರದವರು ನೀರಾವರಿ ಬಾಬಿಗೆ ಹೆಚ್ಚು ಹಣವನ್ನು ಒದಗಿಸಿ ನೀರಾವರಿ ಪ್ರದೇಶವನ್ನು ಹೆಚ್ಚು ಮಾಡಬೇಕೆಂದು ಹೇಳಿ, ಇಷ್ಟು ಮಾತನಾಡಲು ಅವಕಾಶ ಕೊಟ್ಟಂಥ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ನದಾಶಿವಪ್ಪ ಪಾಟೀಲ್ (ದೇವದುರ್ಗ).—ಮಾನ್ಯ ಅಧ್ಯಕ್ಷರೇ, ಅರ್ಥ ಸಚಿವರು 1969-70ನೆಯ ಸಾಲಿನ ಮುಂಗಡ ಪತ್ರವನ್ನು ಮಂಡಿಸಿದ್ದಾರೆ, ಅದನ್ನು ವಿರೋಧಿಸುತ್ತಾ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಮೊದಲನೆಯದಾಗಿ ಶ್ರೀ ಹೆಗಡೆಯವರು ತಮ್ಮ ಭಾಷಣದಲ್ಲಿ ಶ್ರೀ ನಿಜಲಿಂಗಪ್ಪನವರನ್ನು ಪ್ರಶಂಸೆ ಮಾಡಿದ್ದಾರೆ. ಶರಾವತಿ ವಿಷಯದ ಘಟನೆ ಮತ್ತು ಜನರಲ್ ಎಲೆಕ್ಷನ್ನಿನಲ್ಲಿ ಅವರು ಅರಿಸಿ ಬಂದಿರುವುದು – ಈ ಒಂದು ಘಟನೆ ಹೀಗೆ ಎರಡು ಘಟನೆಗಳಿವೆ. ಆಯವ್ಯಯ ಭಾಷಣದಲ್ಲಿ ಇಂಥವರ ಹೆಸರನ್ನು ಸೂಚಿಸಬಾರದಾಗಿತ್ತು. ಅದಲ್ಲದೆ

ಈಗಿನ ಮುಖ್ಯ ಮಂತ್ರಿಗಳ ಬಗ್ಗೆ ಶ್ಲಾಘನೆ ಮಾಡಿ ಒಳ್ಳೆಯ ರೀತಿಯಿಂದ ಪ್ರಸ್ತಾಪ ಮಾಡಿದ್ದಾರೆ. ಇದಕ್ಕೆ ಕಾರಣ ಗೊತ್ತಿಲ್ಲ. ಅವರು ಸುಪ್ರೀಂಕೋರ್ಟಿನ ತೀರ್ಮಾನ ಎಕ್ಸೈಜು ಬಾಬಿನ ವಿಚಾರದಲ್ಲಿ ಬಂದಮೇಲೂ ಬಹಳ ಧೈರ್ಯದಿಂದ ಇದ್ದಾರೆ, ಅವರು ನಿಸ್ವಾರ್ಥಿಗಳು ಎಂದು ತೋರಿಸಿ ಪ್ರಶಂಸೆಮಾಡಿದ್ದಾರೆ.

ಮಾನ್ಯ ಮಂತ್ರಿಗಳು ಎಲ್ಲಾ ರಾಜ್ಯಗಳಲ್ಲೂ ಖೋತ ಬಜೆಟ್ ಮಂಡಿಸಿರುವುದರಿಂದ ಇಲ್ಲೂ ಕೂಡ ಅದೇ ರೀತಿ ಖೋತ ಬಜೆಟ್ಟನ್ನು ಮಂಡಿಸಿರಬಹುದು. ಮದ್ರಾಸು ರಾಜ್ಯದಲ್ಲಿ ಶಿಕ್ಷಣದ ಬಾಬು ನೋಡಿದರೆ ಪಿ.ಯು.ಸಿ.ವರೆಗೆ ಉಚಿತ ಶಿಕ್ಷಣ ಕೊಡುತ್ತೇವೆಂದು ಹೇಳಿ ಖೋತ ಬಜೆಟ್ ಮಂಡಿಸಿರುವಾಗ ನಮ್ಮ ನಚಿವರು ಸೆಕೆಂಡರಿ ಶಿಕ್ಷಣದವರೆಗೆ ಮಾತ್ರ ರಿಯಾಯಿತಿ ತೋರಿಸಿ ಖೋತ ಬಜೆಟ್ ಮಂಡಿಸಿರುವುದು ಕೋಚನೀಯವಾಗಿದೆ. ಮಾನ್ಯ ಚಾಗರವರು ಹೇಳಿದ ಹಾಗೆ ಕಮರ್ಷಿಯಲ್ ಟ್ಯಾಕ್ಸ್ ಎಜುಕೇಷನ್ ನಮ್ಮ ಸರಕಾರದಲ್ಲಿದೆ. ಉದಾಹರಣೆಗೆ ಟೆಕ್ನಿಕಲ್ ಎಜುಕೇಷನ್ ಎಲ್ಲಾ ಕಡೆಯೂ ಇದೆ, ಎಂಜಿನಿಯರಿಂಗ್ ಕಾಲೇಜು, ಮೆಡಿಕಲ್ ಕಾಲೇಜು ಗುಲ್ಬರ್ಗದಲ್ಲಿವೆ. ಅಲ್ಲಿಗೆ ಒಂದು ಕೋಟಿ ಕೊಟ್ಟಿದ್ದಾರೆ, ಅಲ್ಲಿ ನೋಡಿದರೆ ಏನೂ ಇಲ್ಲ. ಏನು ಮೆರಿಟ್ಟಿನ ಮೇಲೆ ಕೊಟ್ಟಿದ್ದಾರೆ ! ಅಲ್ಲಿ ರೊಕ್ಕ ಇದ್ದರೆ ಸಾಕು, ಕರ್ಣಾಟಕದವರಲ್ಲದೆ ಬೇರೆ ದೇಶಗಳವರಿಗೂ ಸೀಟು ದೊರೆಯುವುದು, ಶ್ರೀಮಂತರಾದರೆ ಸಾಕು, ಅವರಿಗೆ ಸ್ಥಾನ ದೊರೆಯುವುದು. ಅಲ್ಲಿ ಸೀಟಿಗೆ ಬೆಲೆ ಇಲ್ಲ. ಅಂಥ ಸಂಸ್ಥೆಯನ್ನು ಸರಕಾರ ನಡೆಸಿ ಸಾವಿರಾರು ಇಂಜಿನಿಯರುಗಳನ್ನು ಮತ್ತು ಡಾಕ್ಟರುಗಳನ್ನು ತಯಾರಿಸುತ್ತಿದೆ. ಅಲ್ಲಿ ಯೂನಿವರ್ಸಿಟಿಯಲ್ಲಿ ಅಥವ ಕಾಲೇಜುಗಳಲ್ಲಿ ಮಂತ್ರಿಗಳು ಹೋಗಿ ಭಾಷಣ ಮಾಡುವಾಗ, ನಾಯಕರು ಹೋಗಿ ಭಾಷಣ ಮಾಡುವಾಗ ವಿದ್ಯಾರ್ಥಿಗಳು ನಿಸ್ವಾರ್ಥ ಸೇವೆ ನಲ್ಲಿನಬೇಕೆಂದು ಹೇಳುತ್ತಿದ್ದಾರೆ. ಆದರೆ ಅದು ಹೇಗೆ ಸಾಧ್ಯ ? 20 ಸಾವಿರ ರೂಪಾಯಿಗಳನ್ನು ಕೊಟ್ಟು ಸೀಟನ್ನು ಪಡೆದ ಮೇಲೆ ಮುಂದೆ ಡಾಕ್ಟರಾದ ಮೇಲೆ, ಇಂಜಿನಿಯರಾದ ಮೇಲೆ ಕೊಟ್ಟಿರುವ ಹಣವನ್ನು ಅವರು ಮೊದಲು ಪಡೆಯಬೇಕಾಗಿದೆ. ಹಾಗಿರುವಾಗ ಯಾವ ರೀತಿಯಿಂದ ಪ್ರಾಮಾಣಿಕವಾಗಿ ನಿಸ್ವಾರ್ಥ ಸೇವೆ ನಲ್ಲಿಸಲು ಸಾಧ್ಯವಾಗುವುದು ! ನಮ್ಮ ಸರಕಾರ ಯಾರು ಬಂದರೂ ಕಲಿಸುವುದಕ್ಕೆ ಹೊರಟಿದೆ. ಈ ಬಗ್ಗೆ ಘೋಷಣೆಯಿದೆ. ಪ್ರಜಾಪ್ರಭುತ್ವದಲ್ಲಿ ಶಿಕ್ಷಣವು ಮುಖ್ಯ ಪಾತ್ರವನ್ನು ವಹಿಸುವುದು. ಇದನ್ನು ವಿಶ್ವಾಸದಿಂದ ನಾಯಕರು ಬಾಯಲ್ಲಿ ಹೇಳುತ್ತಾರೆ, ಆದರೆ ಕಾರ್ಯತಃ ಆಚರಣೆಗೆ ತರುವುದಿಲ್ಲ. ಹೀಗಾದರೆ ಪ್ರಜಾಪ್ರಭುತ್ವ ಯಶಸ್ವಿಯಾಗುವುದಿಲ್ಲ.

ಮುಂದಿನ ವಿಷಯ ನೀರಾವರಿ. ಇದರ ಬಗ್ಗೆ ಹೇಳಬೇಕಾದರೆ ತುಂಗಭದ್ರ ಯೋಜನೆಯಲ್ಲಿ ಒಂದು ಲಕ್ಷ ಎಕರೆ ಲೋಕಲೈಜ್ ಮಾಡುತ್ತೇವೆಂದು ಹೇಳಿದ್ದಾರೆ. ಸುಮಾರು 9 ಲಕ್ಷ ಎಕರೆ ಲೋಕಲೈಜ್ ಆಗಿದೆಯೆಂದು ಹೇಳುತ್ತಾರೆ. ಆದರೆ ನಿಜವಾಗಿ ನೀರಾವರಿಯಾಗಿರುವುದು 3 ಲಕ್ಷ ಎಕರೆ ವಾಸ್ತವ. ಉಳಿದ 6 ಲಕ್ಷ ಎಕರೆಗೆ ನೀರೇ ಬಂದಿಲ್ಲ. ಅವರು ಜನರಿಗೆ ಹೇಳುವುದು ಬೇರೆ ಪ್ರಾಂತಗಳಿಗೆ ನಿಜವೇ, ಅಲ್ಲವೇ ಎಂಬುದು ಗೊತ್ತಾಗುವುದಿಲ್ಲ. ನೀರು ಬಹಳವಾಗಿ ಕೊಡಲಾಗಿದೆ ಎಂದು ಹೇಳುವುದು ಕಾಡುಬರುತ್ತದೆ. ನೀವು ಹೇಳಿದಂತೆ ಮಾಡಬೇಕು ಎಂದು ಕೇಳಿದಾಗ ತುಂಗಭದ್ರ ಡ್ಯಾಂ ಮಾಡಿ ನೀರು ಕೊಟ್ಟಿದ್ದೇವೆಂದು ಹೇಳುತ್ತಾರೆ. ಆದರೆ ನೀರು ಮಾತ್ರ ದೊರೆತಿಲ್ಲ. ಡಿಸ್ಟ್ರಿಕ್ಟ್ ಲೆವರ್‌ನಲ್ಲಿ ನಾಲ್ಕನೆ ಪಂಚವಾರ್ಷಿಕ ಯೋಜನೆ ಮೊತ್ತವನ್ನು ತೀರ್ಮಾನ ಮಾಡಿ ಸರಕಾರಕ್ಕೆ ಕಳಿಸಿದ್ದಾರೆ. ಆದರ ಬಗ್ಗೆ ಅಭಿಪ್ರಾಯ ಪಡೆಯುವುದಾಗಿ ಹೇಳಿದರು. ನಾವು ನಮ್ಮ ಜಿಲ್ಲೆಯಲ್ಲಿ ಕಾಲುವೆ ಕೆಲಸ ಪ್ರಾರಂಭಿಸಿ, 200 ರೂಪಾಯಿನಂತೆ ಕೊಡುತ್ತೇವೆ ಎಂದು ಹೇಳಿದೆವು. ಸುಮಾರು 2 ಕೋಟಿಯ ಯೋಜನೆ ಇವೆ. ಬಹುಶಃ ಆ ಹಣವನ್ನು ಅಫಿಷಿಯರ್ಸ್ ಕ್ವಾರ್ಟರ್ಸ್‌ಗೆ ಮತ್ತಿತರ ಕೆಲಸಗಳಿಗಾಗಿ ಕೊಟ್ಟಿರಬಹುದು. ವಿಚಾರ ಗೊತ್ತಿಲ್ಲ.

ಇನ್ನೊಂದು ವಿಷಯ, ದೇಶದಲ್ಲಿ ಸಂಪನ್ಮೂಲ ಹೆಚ್ಚಿನಬೇಕು ಎಂದು ಹೇಳಿದ್ದಾರೆ, ಆದಾಯ ಬಹಳ ಕಡಮೆ ಬರುತ್ತಿದೆ ಎಂದು ತಿಳಿಸಿದ್ದಾರೆ. ನಿಜವಾಗಿಯೂ ಸಂಪನ್ಮೂಲಗಳು ಹೆಚ್ಚಾಗಿದ್ದರೂ ಅವನ್ನು ಉಪಯೋಗ ಮಾಡುವ ಶಕ್ತಿ ಸರಕಾರಕ್ಕಿಲ್ಲ. ಸರಕಾರದವರೇ ಮೂಲದಲ್ಲಿ ಭಾಗ ಪಡೆಯುತ್ತಿದ್ದಾರೆ, ಅವರು ಇಲ್ಲೀಗಲ್ ಭಾಗಸ್ಥರಾಗಿದ್ದಾರೆ. ಎಕ್ಸೈಜ್ ಬಾಬಿನಲ್ಲಿ ಬಹಳ ಲಾಭವಿದೆ, ಹರಾಜು ಮಾಡಿದರೆ ಆದರಿಂದ 20 ಕೋಟಿ ಬರಬಹುದು. ಆದರೆ ಮಂತ್ರಿಗಳು ಮತ್ತು ಮುಖ್ಯ ಮಂತ್ರಿಗಳು ಎಲ್ಲಾ ಕೂಡಿ ಭಾಗವಹಿಸಿದರೆ ಡಿಸ್ಟ್ರಿಕ್ಟ್ ಲೆವರ್‌ನಲ್ಲಿ ಹರಾಜಾಗುವುದು ಸ್ವಾಭಾವಿಕ. ಬರುವ ಆದಾಯದಲ್ಲಿ ಇಲ್ಲೀಗಲ್‌ನಲ್ಲಿ ಲಾಭ ಪಡೆಯಬಾರದು. ದೇಶದ ಆದಾಯವನ್ನು ದುರುಪಯೋಗ ಪಡಿಸುವ ಕೆಲಸ ಮಾಡಬಾರದು. ಬೇಕಾದರೆ ಮಂತ್ರಿ ಪದವಿಗೆ ರಾಜೀನಾಮೆ ಕೊಟ್ಟು ದಿಗಂಬರರಾಗಬಹುದು.

† ಶ್ರೀ ಬಿ. ಎಂ. ಸಾಣಿಕೊಪ್ಪ (ಕಿತ್ತೂರು).—ಮಾನ್ಯ ಸಭಾಪತಿಗಳೇ, ಮಾನ್ಯ ಆರ್ಥಿಕ ಸಚಿವರು ಸಭೆಯ ಮುಂದಿಟ್ಟಿರುವ 1969-70ನೆಯ ಸಾಲಿನ ಆಯವ್ಯಯ ಪಟ್ಟಿಯನ್ನು ಸ್ವಾಗತಿಸಿ ಕೆಲವು ಮಾತುಗಳನ್ನು ಹೇಳುತ್ತೇನೆ. ನಮ್ಮ ರಾಜ್ಯದ ಉತ್ಪತ್ತಿ ಈ ಸಾರಿ 213 ಕೋಟಿ 26 ಲಕ್ಷ, ವ್ಯಯ 226 ಕೋಟಿ 48 ಲಕ್ಷ ಇವೆ, 13 ಕೋಟಿ 22 ಲಕ್ಷ ರೂಪಾಯಿಗಳ ಕೊರತೆಯಿದೆ. ಆದರೂ ಕೂಡ 3 ವರ್ಷಗಳಿಂದ ನಮ್ಮ ಪ್ರಾಂತಗಳಿಗೆ ದೊಡ್ಡ ಉಪಕಾರ ಮಾಡಿದ್ದಾರೆ.

7-00 P.M.

ಯಾವುದೇ ಹೊಸ ತೆರಿಗೆಗಳನ್ನು ಹೇರಿಲ್ಲ. ಈ ವರ್ಷ ಕೊರತೆಯಾಗಿದ್ದರೂ ಸಹ ಹೊಸ ತೆರಿಗೆ ಇಲ್ಲದೇ ಇರುವುದರಿಂದ ಜನರು ಬಹಳವಾಗಿ ಅವರನ್ನು ಹೊಗಳುತ್ತಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ಏಕೆಂದರೆ ಅವರು ಕೊರತೆ ಇದ್ದಂತಹ ಹಣವನ್ನು ಯಾವುದೋ ರೀತಿಯಿಂದ ಮುಂದೆ ತುಂಬಿಕೊಳ್ಳಲಿಕ್ಕೂ ಸಹ ಸಮರ್ಥರು ಇದ್ದಾರೆ. ಇನ್ನು ಕೆಲವು ಮಾತುಗಳನ್ನು ಹೇಳುತ್ತೇನೆ. ಚಿಕ್ಕ ನೀರಾವರಿ ಬಗ್ಗೆ ಬಹಳ ಕಡಮೆ ಹಣ ಇಟ್ಟಿದ್ದಾರೆ ಎಂದು ಹೇಳಬಹುದು. ಮೂರು ಕೋಟಿ 80 ಲಕ್ಷ ರೂಪಾಯಿ ಇದೆ. ನಿಜವಾಗಿಯೂ ಈ ಚಿಕ್ಕನೀರಾವರಿ ಯೋಜನೆಗಳೇ ತಾತ್ಕಾಲಿಕವಾಗಿ ತೀವ್ರವಾಗಿ ಫಲ ಕೊಡತಕ್ಕವುಗಳು. ಸಣ್ಣ ಸಣ್ಣ ಕೆರೆಗಳು ಕಟ್ಟೆಗಳು ಇವುಗಳಿಂದ ಬಹಳ ಕೆಲಸವಾಗುತ್ತದೆ. ನೀರಾವರಿ ಹೆಚ್ಚಾಗುತ್ತದೆ ಅದಕ್ಕೆ ಸರ್ಕಾರದವರು ಹೆಚ್ಚು ಹಣವನ್ನು ಇಟ್ಟಿದ್ದರೆ ಹೆಚ್ಚು ಪ್ರಯೋಜನವಾಗುತ್ತಾ ಇತ್ತು. ಅದರ ಕಡೆಗೆ ಗಮನ ಕೊಡಬೇಕೆಂದು ಹೇಳುತ್ತೇನೆ. ಈ ಪ್ರಸಂಗದಲ್ಲಿ ಒಂದು ಮಾತು ಎಂದರೆ ಬೆಳಗಾಂ ಜಿಲ್ಲೆಯ ಕೃಷ್ಣಾ ವ್ಯಾಲಯಲ್ಲಿರುವಂತಹ ನದಿಗಳು ಆ ಪ್ರಾಂತ್ಯದಲ್ಲಿ ಹರಿಯುಹೋಗುತ್ತವೆ. ಅದೇ ಕಾರಣ ಮಹಾರಾಷ್ಟ್ರ ಸರ್ಕಾರದವರು ಕೃಷ್ಣಾ ಆಗಲಿ, ದೂಧಗಂಗಾ ಆಗಲಿ, ವೇದಗಂಗಾ ಆಗಲಿ, ಹಿರಣ್ಯಕೇಶಿ ಆಗಲಿ ಮೇಲೆ ಒಡ್ಡು ಹಾಕಿದ್ದೇ ಆದರೆ ಕೆಳಗೆ ನೀರು ಹರಿಯುವುದಿಲ್ಲ. ಕೊಯ್ನಾ ಭೂಕಂಪವಾಗಿ ಅಲ್ಲಿ ಹರಿಯತಕ್ಕ ನೀರನ್ನು ಸಮುದ್ರದ ಕಡೆಗೆ ಬಿಡುತ್ತಾರೆಯೇ ವಿನಾ ನಮ್ಮ ಕಡೆಗೆ ಹರಿಸುವುದಿಲ್ಲ. ನಮ್ಮ ಸರ್ಕಾರದವರು ಮಾತ್ರ ಮಹಾರಾಷ್ಟ್ರ ಸರ್ಕಾರದವರಮೇಲೆ ಹಚ್ಚು ಪ್ರೇಮದಿಂದಲೋ ಆಥವಾ ದಯೆ ತೋರಿನಬೇಕೆಂತಲೋ ಅವರಿಗೆ ವಿದ್ಯುತ್ತನ್ನು ಹೊರ್ತೈಸುತ್ತೇವೆ ಎಂದು ಅನ್ನುತ್ತಾರೆ. ಅದಕ್ಕೆ ಅಡ್ಡಿಇಲ್ಲ. ಆದರೆ ಒಂದು ಮಾತು : ವಿದ್ಯುತ್ತನ್ನು ಪೂರ್ತೈಕೆ ಮಾಡುವ ಕಾಲಕ್ಕೆ ಕೊಯ್ನಾದಲ್ಲಿರುವಂತಹ ನೀರನ್ನು ನಮಗೆ ಕೊಡುವೇ ಇದ್ದಮೇಲೆ ಅವರಿಗೆ ನೀವು ವಿದ್ಯುತ್ತನ್ನು ಏಕೆ ಕೊಡುತ್ತೀರಿ ? ಅಲ್ಲಿದ್ದಂತಹ ಹೆಚ್ಚು ನೀರನ್ನು ನಮ್ಮ ಪ್ರಾಂತ್ಯದಲ್ಲಿರುವಂತಹ ಬೆಳಗಾಂ ಜಿಲ್ಲೆಗಾಗಲಿ, ಬಿಜಾಪುರ ಜಿಲ್ಲೆಗಾಗಲಿ ಕೊಡಬೇಕು. ಆ ರೀತಿ ಕೊಡವೇ ಇರುವುದರಿಂದ ಬೆಳಗಾಂ ಜಿಲ್ಲೆಯಲ್ಲಿ ಸಾಂಗಲಿ ಹತ್ತಿರ ಇರುವಂತಹ ನದಿಯಲ್ಲಿ ನೀರು ಇಲ್ಲ ಎಂಬುದನ್ನು ತಿಳಿದುಕೊಳ್ಳಬೇಕಾಗಿದೆ. ಅದರಿಂದಾಗಿ ಉಗಾರ್ ಷುಗರ್ ಫ್ಯಾಕ್ಟರಿ, ಹಿರಣ್ಯಕೇಶಿ ಷುಗರ್ ಫ್ಯಾಕ್ಟರಿಯಲ್ಲಿ ನೀರು ಸರಬರಾಯಿ ಇಲ್ಲದೇ ಕಬ್ಬನ್ನು ಕ್ರಷ್ ಮಾಡುವುದಕ್ಕೆ ಅವಕಾಶವಿಲ್ಲದಂತವಾಗಿದೆ. ಈ ಪ್ರಕಾರ ನೀರಿನ ಕೊರತೆಯಾಗಿದೆ. ಆದ್ದರಿಂದ ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ ತಾವು ಯಾವುದು ಹೇಗಾದರೂ ಮಾಡ್ರಿ ಮಹಾರಾಷ್ಟ್ರ ಸರ್ಕಾರಕ್ಕೆ ವಿದ್ಯುತ್ತನ್ನು ಕೊಡುವಾಗ ಒಂದು ಕಂಡೀಷನನ್ನು ಹಾಕ್ರಿ, ಕೊಯ್ನಾದಿಂದ ನದಿಯಲ್ಲಿ ನೀರನ್ನು ಬಿಡಲೇ ಬೇಕು ಎಂದು ತಿಳಿಸಿ, ಇಲ್ಲದೇ ಇದ್ದರೆ ವಿದ್ಯುತ್ ಅಗ್ರಿಮೆಂಟ್‌ನ್ನು ಮಾಡಿಕೊಳ್ಳಬಾರದು ಎಂದು ಸರ್ಕಾರಕ್ಕೆ ಸಲಹೆ ಮಾಡುತ್ತೇನೆ.

ಇನ್ನು ದೊಡ್ಡ ನೀರಾವರಿ ಯೋಜನೆಗಳಾದಂತಹ ಘಟಪ್ರಭಾ ಮತ್ತು ಮಲಪ್ರಭಾ ಯೋಜನೆಗಳಿಗೆ ತಾವು ಹಣ ಒದಗಿಸಿದ್ದೀರಿ ಇದೂ ಕೂಡ ಬಹಳ ಕಡಿಮೆ ಎಂದು ಹೇಳಬಹುದು. ಏಕೆಂದರೆ ಘಟಪ್ರಭಾ ಯೋಜನೆಯಿಂದ 5 ಲಕ್ಷ ಎಕರೆಯಷ್ಟು ಭೂಮಿ ತೀವ್ರವಾಗಿ ನೀರಾವರಿಯಾಗುತ್ತದೆ. ಅದೇ ಪ್ರಕಾರ ಮಲಪ್ರಭಾ ಯೋಜನೆಯಿಂದ ಸಹಿತ ಐದುಲಕ್ಷ ಎಕರೆ ನೀರಾವರಿಯಾಗುತ್ತದೆ, ಆದರೆ ಇದಕ್ಕೆ ಒದಗಿಸಿದಂತಹ ಹಣ ನೋಡಿದರೆ ಬಹಳ ಕಡಿಮೆ. ಘಟಪ್ರಭಾ ಯೋಜನೆಗೆ ಎರಡು ಕೋಟಿ 91 ಲಕ್ಷ ರೂಪಾಯಿ ಮತ್ತು ಮಲಪ್ರಭಾ ಯೋಜನೆಗೆ ಎರಡು ಕೋಟಿ 45 ಲಕ್ಷ ರೂಪಾಯಿಗಳನ್ನು ಒದಗಿಸಿದ್ದೀರಿ. ನಿಜವಾಗಿಯೂ ಒಂದೆರಡು ವರ್ಷದಲ್ಲೇ ಸಾಕಾದಷ್ಟು ಫಲಕೊಡುವಂತಹ ಅವಕಾಶ ಇದರಿಂದ ಇದೆ, ಮಳೆಗಾಲದಲ್ಲಿ ಸಾಕಾದಷ್ಟು ನೀರು ಬರುತ್ತದೆ. ಬಿಜಾಪುರ ಮತ್ತು ಬೆಳಗಾಂ ಜಿಲ್ಲೆಗೆ ಇದರ ಉಪಯೋಗವಾಗುತ್ತದೆ. ಇಂತಹ ನದಿಗಳ ನೀರನ್ನು ಉಪಯೋಗ ಮಾಡಿಕೊಳ್ಳಲು ಸರ್ಕಾರದವರು ಹೆಚ್ಚಿನ ಹಣವನ್ನು ಒದಗಿಸುವುದು ಅವಶ್ಯಕ. ಕೃಷ್ಣಾ ಮೇಲ್ ದಂಡೆ ಯೋಜನೆ ಆಗುಹದು ಅವಶ್ಯಕ, ಅದಕ್ಕೆ ಹೆಚ್ಚಿನ ಹಣ ಬೇಕು, ಹಣ ಕೊಡುವ ಪರಿಸ್ಥಿತಿಯಲ್ಲಿ ಸರ್ಕಾರ ಇಲ್ಲ ಎಂದು ನಮಗೆ ಅನಿಸುತ್ತದೆ. ಈ ಘಟಪ್ರಭಾ

ಮತ್ತು ಮಲಪ್ರಭಾದಲ್ಲಿರುವಂತಹ ನೀರನ್ನು ಲಿಫ್ಟ್ ಇರಿಗೇಷನ್ನಿನಿಂದ ಮತ್ತು ಬೇರೆ ರೀತಿಯಿಂದ ಎಂದರೆ ಘಟಪ್ರಭಾಕ್ಕೆ ಬಲದಂಡೆ ಕಾಲುವೆ ಮತ್ತು ಮಲಪ್ರಭಾಕ್ಕೆ ಎಡದಂಡೆ ಕಾಲುವೆ ಹಾಕುವುದರಿಂದ ಸಾಧಾರಣ ಹತ್ತು ಲಕ್ಷ ಎಕರೆ ಭೂಮಿ 1976ನೇ ಇಸ್ವಿಯಲ್ಲಿ ನೀರಾವರಿಯಾಗುವ ಸಂಭವ ಇದೆ. ಆ ಪ್ರಕಾರ ಸರ್ಕಾರದವರು ಇದರ ಪೂರ್ಣ ಉಪಯೋಗ ಮಾಡಿಕೊಳ್ಳಬೇಕು. ಇಲ್ಲದೇ ಇದ್ದರೆ ನಾಗಾರ್ಜುನ ಸಾಗರ ಕಟ್ಟಿ ಪೂರ್ತಿಸಿದ ಮೇಲೆ ಇನ್ನೂ ಕೂಡ ಕೃಷ್ಣ ಮೇಲ್‌ದಂಡೆಯ ಯೋಜನೆಯನ್ನು ಲಾಗು ಮಾಡದಿದ್ದರೆ ಅದನ್ನು ಬಿಟ್ಟುಕೊಡಬೇಕಾಗುತ್ತದೆ. ಆದ್ದರಿಂದ ಘಟಪ್ರಭಾ ಮತ್ತು ಮಲಪ್ರಭಾ ನೀರನ್ನು ಪೂರ್ಣವಾಗಿ ಉಪಯೋಗ ಮಾಡಿಕೊಳ್ಳಬೇಕೆಂದು ಹೇಳುತ್ತೇನೆ. ಇಷ್ಟು ವೇಳೆ ಕೊಟ್ಟದ್ದಕ್ಕಾಗಿ ಮಾನ್ಯ ಅಧ್ಯಕ್ಷರನ್ನು ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—ಮಾನ್ಯ ಅಧ್ಯಕ್ಷರೇ, ಕೊನೆಯದಾಗಿ, ಈ ರಾಜ್ಯದ ಮತ್ತು ರಾಷ್ಟ್ರದ ಅರ್ಥ ವ್ಯವಸ್ಥೆಯ ದುರ್ಗತಿಯ ಬಗ್ಗೆ ಒಂದೆರಡು ಮಾತನ್ನು ಹೇಳಿ ಮುಗಿಸೋಣ ಎಂದು ನಾನು ಇದ್ದೇನೆ. ನಮಗೆ ಅನಿಸುತ್ತದೆ, ಮಾನಸಿಕವಾಗಿ ಏನೇನೂ ಉತ್ಸಾಹ ಇಲ್ಲ, ಏಕೆಂದರೆ ಹೇಳಿದ್ದೇ ಹೇಳುವ ಕಿನುಬಾಯಿದಾಸ ಅನ್ನುವ ಗಾದೆಯ ತರಹ ಆಗಿದೆ ನಾವು ಹೇಳುವ ಭಾಷಣಗಳ ಗತಿ. ಶ್ರೀಮಾನ್ ಮಂಜೇಗೌಡರು ಹೇಳಿದ ಹಾಗೆ ಬುನಾದಿ ಭದ್ರ ಇದ್ದರೆ ಮೇಲೆ ಕಟ್ಟುವ ಕಟ್ಟಡ ಭದ್ರವಾಗಿ ಇರುವುದಕ್ಕೆ ಸಾಧ್ಯ. ಗಾಂಧೀಜಿಯವರನ್ನು ರಾಷ್ಟ್ರಪಿತ ಅಂತ ಹೇಳಿ ಕರೆದದ್ದೂ ಆಯಿತು. ಗುಂಡಿಕ್ಕಿ ಅವರನ್ನು ಕೊಂದದ್ದೂ ಆಯಿತು. ಹೆಸರಿಗಾಗಿ ರಾಜಘಾಟನ್ನು ಕಟ್ಟಿದ್ದೂ ಆಯಿತು, ವರ್ಷಕ್ಕೊಮ್ಮೆ ನೆನಪಿಗಾಗಿ ಪ್ರಧಾನಿಯವರು ಹೋಗಿ ಅಲ್ಲಿ ನೂಲು ತಗೆದದ್ದೂ ಆಯಿತು. ಏಕೆಂದರೆ ತಾವು ಸ್ವಲ್ಪ ಪ್ರಸ್ತಾಪ ಮಾಡಿದ್ದೀರಿ, ಕೇವಲ ಅರ್ಥ ವ್ಯವಸ್ಥೆಯನ್ನು ಪ್ರಸ್ತಾಪ ಮಾಡಿಲ್ಲ, ಶ್ರೀಮಾನ್ ನಿಜಲಿಂಗಪ್ಪನವರನ್ನು ಪ್ರಸ್ತಾಪ ಮಾಡಿದ್ದೀರಿ, ವೀರೇಂದ್ರ ಪಾಟೀಲ್‌ರವರನ್ನು ಪ್ರಸ್ತಾಪ ಮಾಡಿದ್ದೀರಿ. ನಾನು ಸ್ವಲ್ಪ ಆಳಕ್ಕೆ ಹೋಗಿ ಪ್ರಸ್ತಾಪ ಮಾಡಿದರೆ ಅಧ್ಯಕ್ಷರು ಕ್ಷಮಿಸಬೇಕು. ಗಾಂಧೀಜಿಯವರನ್ನು ಕೊಂದದ್ದೂ ಆಯಿತು, ಅವರ ಬೂದಿಯನ್ನು ಗಂಗಾ, ಜಮುನಾದಲ್ಲಿ ತೇಲಿ ಬಿಟ್ಟೂ ಆಯಿತು. 17-18ವರ್ಷಗಳ ಕಾಲ ಈ ರಾಷ್ಟ್ರದ ಚುಕ್ಕಾಣಿಯನ್ನು ಹಿಡಿದಿದ್ದಂಥ ಶ್ರೀಮಾನ್ ನೆಹರೂರವರು ನಿಧನರಾದರು. ರಾರ್‌ಬಹಾದ್ದೂರ್ ಶಾಸ್ತ್ರಿಯವರು ಬಂದರು, ಅವರು 18 ತಿಂಗಳಿನಲ್ಲಿ ಅತಿ ದೊಡ್ಡ ಚಮತ್ಕಾರವನ್ನು ತೋರಿಸಿ ನಿಧನರಾದರು. ನನಗೆ ಈ ಹಳತೆಲ್ಲಾ ಏಕೆ ನೆನಪು ಬಂತು ಎಂದರೆ ಮೈನೂರು ರಾಜ್ಯದ ಪ್ರಥಮ ಮುಖ್ಯ ಮಂತ್ರಿಯಾಗಿದ್ದಂಥ ಶ್ರೀಮಾನ್ ಕೆ. ಸಿ. ರೆಡ್ಡಿಯವರು ನಮ್ಮ ರಾಜ್ಯಕ್ಕೆ ಬಂದಿದ್ದಾರೆ ಅವರನ್ನು ನಾನು ನೋಡಿದೆ, ಈಗಲೂ ಇಲ್ಲ ಕುಳಿತಿದ್ದಾರೆ. ನಮಗೆಲ್ಲಾ ಬಹಳ ಸಂತೋಷ—ಅದನ್ನು ಹೇಳಬಾರದು ಎಂದು ಗಂಟೆ ಬಾರಿಸುತ್ತೀರಿ ಅದೂ ಒಳ್ಳೆಯದೇ. ನನ್ನ ನೆನಪನ್ನು ತಮ್ಮ ಮೂಲಕ ನಭೆಗೆ ತರುತ್ತಾ ಇದ್ದೇನೆ. ಶ್ರೀಮಾನ್ ರೆಡ್ಡಿಯವರು ಮುಖ್ಯ ಮಂತ್ರಿಗಳಾಗಿದ್ದುದನ್ನು ನಾವು ನೋಡಿದೆವು. ಇವತ್ತು ನುಧಾರಣಾ ಆಯೋಗ ಅಂತ ಹೇಳಿ ಒಂದು ರಚನೆ ಮಾಡಿಕೊಂಡು ದೇಶಾದ್ಯಂತ ಓಡಾಡುತ್ತಾ ಇರತಕ್ಕ ಬೆಂಗಳೂರಿನ ಲೋಕ ಸಭಾ ಸದಸ್ಯರು ಮುಖ್ಯ ಮಂತ್ರಿ ಆಗಿದ್ದನ್ನು ನಾವು ನೋಡಿದೆವು (ಶ್ರೀಮಾನ್ ಕೆ. ಹನುಮಂತಯ್ಯನವರನ್ನು). ಕಡಿದು ಆಳುವ ಮಂಜಪ್ಪನವರು ಮುಖ್ಯ ಮಂತ್ರಿಗಳಾಗಿದ್ದರು. ಶ್ರೀಮಾನ್ ನಿಜಲಿಂಗಪ್ಪನವರು, ಶ್ರೀಮಾನ್ ಹೆಗಡೆಯವರು ಹೇಳಿರುವ ಪ್ರಕಾರ ಸರಿಯಾದ ರೀತಿಯಲ್ಲಿ ಆಡಳಿತ ನಡೆಸಿ ಈ ರಾಜ್ಯಕ್ಕೆ ಬಹುಮುಖ ಸೇವೆ ಸಲ್ಲಿಸಿ ಇನ್ನೂ ಗುರುತರವಾದ ಹೊಸ ಹೊಣೆಯನ್ನು ವಹಿಸಿ ಬಹಳವಾಗಿ ನಿರ್ವಹಿಸುತ್ತಾ ಇದ್ದಾರೆ ಅಂತ, ಅವರ ರಾಜ್ಯವನ್ನು ನಾವು ನೋಡಿ ಆಯಿತು, ನಾನು ನಮ್ಮ ರಾಜ್ಯದ್ದನ್ನು ಮಾತ್ರ ಹೇಳುತ್ತಿದ್ದೇನೆ. ಶ್ರೀಮಾನ್ ಹೆಗಡೆಯವರು ಹೇಳೋ ಪ್ರಕಾರ ಶ್ರೀ ವೀರೇಂದ್ರ ಪಾಟೀಲರಿಗೆ ಸಂಬಂಧಪಟ್ಟ ಹಾಗೆ ಅವರಲ್ಲಿ ಕರ್ತವ್ಯ ಶಕ್ತಿ ಇದೆ, ಉತ್ಸಾಹವಿದೆ, ಅವರಲ್ಲಿ ಹುರುಪಿದೆ; ಆದುದರಿಂದ ನೀವುಗಳ್ಯಾರೂ ರಾಜ್ಯದ ಪ್ರಗತಿಯ ಬಗ್ಗೆ, ಶೈಯೋಭಿವೃದ್ಧಿಯ ಬಗ್ಗೆ ಗಾಬರಿಯಾಗಬೇಕಾಗಿಲ್ಲ. ಹೆದರಬೇಕಾಗಿಲ್ಲ ಎಂದು ಅವರು ನಮಗೆಲ್ಲರಿಗೂ ಭರವಸೆಯನ್ನು ಕೊಟ್ಟಿದ್ದಾರೆ. ಇದನ್ನೆಲ್ಲಾ ಕೇಳಿದ ಮೇರೆ ನನಗೆ ಬೇಂದ್ರೆಯವರು ಹೇಳಿದ್ದ ಒಂದು ಪದ್ಯ ಜ್ಞಾಪಕಕ್ಕೆ ಬರುತ್ತೆ—ಅದೇನೆಂದರೆ: ಯಾರು ಯಾರೋ ಬಂದರು ಯುದ್ಧದೇವ ಬಂದ, ಬುದ್ಧದೇವ ಬಂದ; ಆದರೆ ಕನ್ನ ದೇವರು ಮಾತ್ರ ಇನ್ನೂ ಬರಲಿಲ್ಲ ಎಂದು. ಆ ಪ್ರಾಣದೇವರು ಮಾತ್ರ ಇನ್ನೂ ಬರಲಿಲ್ಲ. ಅಂಥ ಒಬ್ಬ ದೇವರು ಬಾರದೆ ನಮಗಿಲ್ಲ ಪ್ರಾಣ ಹೋಗುತ್ತಿದೆ. ನಾನು ಹೀಗೆ ಇಲ್ಲಿಗೆ ಬಂದಂಥ ಅನೇಕಾನೇಕ ಮಹನೀಯರನ್ನು ನೋಡಿದ್ದೇನೆ. ಹಾಗೆ ನೋಡಿದವರಲ್ಲಿ ಶ್ರೀಮಾನ್ ಕೆ. ಸಿ. ರೆಡ್ಡಿಯವರೂ ಕೂಡ ಒಬ್ಬರು. ನಾನು ಇಲ್ಲಿರತಕ್ಕದ್ದು ಕುರುಕ್ಷೇತ್ರದಲ್ಲಿ ಯುದ್ಧನಡೆಯುತ್ತಿದ್ದಾಗ ಬಬ್ರುವಾಹನನ ತರೆ ಅಲ್ಲಿದ್ದಂತೆ ನಾನು ಇಲ್ಲಿದ್ದೇನೆ.

(ಶ್ರೀ ಎಸ್. ಗೋಪಾಲಗೌಡ)

ಅಂಥ ಅಂಥ ಮಹಾನುಭಾವುಗಳನ್ನು ನೋಡಿದ್ದಾಗ ನಾನು ಈ ದಿವಸ ಇಲ್ಲಿ ಈ ಸಣ್ಣಪುಟ್ಟ ವಿಷಯಕ್ಕೆಲ್ಲಾ ಅಂಕಿಅಂಶಗಳನ್ನು ಕೊಡಿಸಿ ಅದರ ಬಗ್ಗೆ ತಲೆಕೆಡಿಸಿಕೊಳ್ಳುವಷ್ಟು ಆಸೆ ಆಶೋತ್ಸರಗಳು ನನಗಿಲ್ಲ. ನನ್ನ ಮಾನಸಿಕ ವ್ಯವಹಾರವೂ ಅಷ್ಟು ತೃಪ್ತಿಕರವಾಗಿಲ್ಲ. ಆದರೆ ನಾನು ಹೇಳುತ್ತಿರುವುದು ಇಂಥಾ ಒಂದು ದೊಡ್ಡ ರಾಷ್ಟ್ರದಲ್ಲಿ ಇಲ್ಲಗೆ 20 ವರ್ಷಗಳ ಮೇಲ್ಪಟ್ಟು ಒಂದು ಪಕ್ಷವು ಆಡಳಿತವನ್ನು ನಡೆಸುತ್ತಿದ್ದಾಗ್ಗೂ ಇಂಥ ಒಂದು ಮಹಾರಾಷ್ಟ್ರಕ್ಕೆ ಅನ್ನವನ್ನು ಸಂಪಾದಿಸತಕ್ಕ ಮಾರ್ಗಕಾಣದೆ ಪರದೇಶದಲ್ಲಿ ಭಿಕ್ಷೆಬೇಡತಕ್ಕ ಸ್ಥಿತಿಯಲ್ಲಿ ನಾವಿನ್ನೂ ಇದ್ದೇವಲ್ಲಾ ಎಂದು ನನಗೆ ಬಹಳ ವ್ಯಥೆಯಾಗುತ್ತಿದೆ. ದೇಶಕ್ಕೆ ಸ್ವಾತಂತ್ರ್ಯ ಬಂದು 20 ವರ್ಷಗಳ ಮೇಲಾಯಿತು. ದೇಶದಲ್ಲಿ ಕೋಟ್ಯಾನು ಕೋಟಿ ಹೊನ್ನಿನ ಹೊಳೆಯನ್ನೇ ಹರಿಸಿದ್ದಾಯಿತು. ಆದರೆ ಉಣ್ಣುವುದಕ್ಕೆ ಅನ್ನವಿಲ್ಲ—ತೊಡುವುದಕ್ಕೆ ಬಟ್ಟೆಯಿಲ್ಲ. ಆದರೆ ಇದಕ್ಕೆಲ್ಲಾ ಕಾರಣರು ಈ ರಾಮಕೃಷ್ಣಹೆಗಡೆ ಅವರು ಅಥವಾ ಕೆ. ಸಿ. ರೆಡ್ಡಿಯವರು ಎಂದು ಹೇಳುವುದಕ್ಕಾಗುತ್ತದೆಯೇ? ನಮ್ಮಲ್ಲಿ ಯೋಜನೆಗಳ ಮೇಲೆ ಯೋಜನೆಗಳಾದವು. ಮೂರು ಪಂಚವಾರ್ಷಿಕ ಯೋಜನೆಗಳು ಮುಗಿದವು. ನಾಲ್ಕನೆಯ ಪಂಚವಾರ್ಷಿಕ ಯೋಜನೆ ಏನಿವೆ ಅದನ್ನು ನಡೆಸೇತೀರುತ್ತೇವೆಂದು ಆಡಳಿತದಲ್ಲಿರತಕ್ಕವರು ಹೇಳುತ್ತಿದ್ದಾರೆ ಇದು 1966ಕ್ಕೆ ಪ್ರಾರಂಭವಾಗಬೇಕಾಗಿತ್ತು. ಆದರೆ ಅದಿನ್ನೂ ಪ್ರಾರಂಭವಾಗಿಲ್ಲ. ನಾನು ಮೊನ್ನೆ ದೆಹಲಿಗೆ ಹೋಗಿದ್ದಾಗ ಶ್ರೀ ಹೆಗಡೆಯವರನ್ನು ಕೇಳ್ದಾಕ್ಕೆ ಈ ವರ್ಷ ಕೂಡ ಅದನ್ನು ಪ್ರಾರಂಭಮಾಡುವಹಾಗಿಲ್ಲ ಎಂಬುದಾಗಿ ತಿಳಿಸಿದರು; ಅಂಥ ಸಂಭವ ಕಾಣುವುದಿಲ್ಲ ಎಂದು ಹೇಳಿದರು. 196 –69 ರಿಂದ ಕೇಂದ್ರದವರು ಒಂಬೊಂದು ವರ್ಷಕ್ಕೇ ಒಂದೊಂದು ಪ್ಲಾನನ್ನು ತಯಾರಿಸಿ ಅದನ್ನು ಕಾರ್ಯರೂಪಕ್ಕೆ ತರಲು 1,903 ಕೋಟಿ ರೂಪಾಯಿಗಳನ್ನು ಈ ಯೋಜನೆಗಾಗಿ ಸಿದ್ಧಮಾಡಿಕೊಂಡಿದ್ದೇವೆಂದು ಹೇಳುತ್ತಿದ್ದರು. ಇದನ್ನು ಪಂಚವಾರ್ಷಿಕ ಯೋಜನೆಯಂತ ಕರೆಯುವುದರ ಬದಲು ಅದನ್ನು ವಾರ್ಷಿಕ ಯೋಜನೆ ಅಂತ ಕರೆದರು. ಬೇರೆ ರಾಜ್ಯಗಳವರು ಈ ಯೋಜನೆಯ ಬಗ್ಗೆ ಹಣವನ್ನು ಅವರ ಬಡ್ಜೆಟ್ಟಿನಲ್ಲೇ ಸೇರಿಸಿ ಅದನ್ನು ಅವರು ಮುಂದುವರಿಸಿದ್ದರೆ ನಾವಿಲ್ಲಿ ಅದರ ಗಾತ್ರ 62 ಕೋಟಿ ಇರಬೇಕೇ ಅಥವಾ 63 ಕೋಟಿ ಇರಬೇಕೇ ಎನ್ನುವ ಚರ್ಚೆಯಲ್ಲೇ ಮುಂದುವರಿಯುತ್ತಿದ್ದೇವೆ. ನನಗೆ ಗುರುಗಳಾಗಿದ್ದ ಅಶೋಕಮೆಹತಾ ಅವರು ಸಮಾಜವಾದದ ಥೋರಣಿಯನ್ನು ತರಲು ಪಣ ತೊಟ್ಟಿದ್ದವರು ಈಗ ಕಾಂಗ್ರೆಸ್ಸಿಗೆ ಸೇರಿಕೊಂಡು ಕಣ್ಣು ಕಣ್ಣು ಬಿಡುತ್ತಿದ್ದಾರೆ. ಅವರಿಗೆ ಈ ದಿವಸ ಯಾವ ಒಂದು ಇಂಥ ಯೋಜನೆಯನ್ನೂ ಕೂಡ ಕೈಗೊಳ್ಳುವುದಕ್ಕೆ ಸಾಧ್ಯವಾಗುತ್ತಿಲ್ಲವಲ್ಲ ಎಂದು ಕಣ್ಣು ಕಣ್ಣು ಬಿಡುತ್ತಿದ್ದಾರೆ. ಈ ದಿವಸ ಇವರಿಗೆ ಯಾರು ಅಷ್ಟು ಹಣವನ್ನು ಕೊಡುವುದಕ್ಕೆ ಸಿದ್ಧವಾಗಿದ್ದಾರೆ? ನಮ್ಮ ರಾಷ್ಟ್ರ ಈಗಾಗಲೇ ಮಾಡಿರತಕ್ಕ ಸಾಲದ ಬಡ್ಡಿಗಾಗಿ ದಿನ ಒಂದಕ್ಕೆ ಸುಮಾರು ಒಂದು ಒಂದೂವರೆ ಕೋಟಿ ರೂಪಾಯಿಗಳನ್ನು ತೆರಬೇಕಾಗಿದೆ. ನಮ್ಮ ರಾಜ್ಯದಲ್ಲಿ ನಾವು ಸಾಲದ ಬಡ್ಡಿಗಾಗೇ ಸುಮಾರು 52 ಕೋಟಿ ರೂಪಾಯಿಗಳನ್ನು ಕೊಡಬೇಕಾಗಿದೆ. ಹೀಗಾಗಿ ಈ ದಿವಸ ಈ ರಾಜ್ಯದಲ್ಲಿರತಕ್ಕ ಪ್ರತಿಯೊಬ್ಬ ಪ್ರಜೆಯೂ ಬಡ್ಡಿಮಕ್ಕಳಾಗಿದ್ದಾರೆ; ಅಂದರೆ ಬಡ್ಡಿಯನ್ನು ತೆರತಕ್ಕ ಮಕ್ಕಳಾಗಿದ್ದಾರೆ. ಇಷ್ಟು ಬಡ್ಡಿಯನ್ನು ನಾವೀಗ ತೀರಿಸಬೇಕಾಗಿದೆ. ಇಷ್ಟಕ್ಕೆಲ್ಲಾ ನಾವೀಗ ಹಣವನ್ನು ಒದಗಿಸಬೇಕಾಗಿದೆ. ಆದರೆ ನಾವು ಈ ಹಿಂದೆ ಶ್ರೀಮಾನ್ ನಿಜಲಿಂಗಪ್ಪನವರ ಮೇಲೆ ಹೊರಿಸಿದ್ದ ಅಪಾದನೆಗಳ ಬಗ್ಗೆ ಶ್ರೀಮಾನ್ ಹೆಗ್ಗಡೆಯವರು ಬಹಳ ದಕ್ಷತೆಯಿಂದ ಅಂಕಿಸಂಖ್ಯೆಗಳನ್ನು ದಿವಂಗತ ರಾಲ್‌ಬಹದ್ದೂರ್ ಶಾಸ್ತ್ರಿಗಳ ಮುಂದೆ ಒದಗಿಸಿ ಅವರನ್ನು ನಿರಪರಾಧಿಗಳನ್ನಾಗಿ ಮಾಡಿದರು. ಅದಕ್ಕಾಗಿ ಅವರು ಆ ದಿವಸ ನಿಜಲಿಂಗಪ್ಪನವರಿಂದ ಒಬ್ಬ ಪುಟ್ಟವೀರ ಎಂದು ಹೊಗಳಿಸಿಕೊಂಡರು. ಅದಕ್ಕೆ ಮೂಲ ಕಾರಣ ಅಂದರೆ ಶ್ರೀಮಾನ್ ಹೆಗಡೆಯವರೂ ಮತ್ತು ದಿವಂಗತ ರಾಲ್‌ಬಹದ್ದೂರ್ ಶಾಸ್ತ್ರಿಗಳೂ ಇಬ್ಬರೂ ಅಧ್ಯಾಯನಮಾಡಿದ್ದು ಆ ಕಾಶೀಪೀಠದಲ್ಲೇ. ಆ ಒಂದು ಪರಿಚಯವನ್ನು ಹೆಗಡೆಯವರು ಬಳಸಿಕೊಂಡು ನಿಜಲಿಂಗಪ್ಪನವರನ್ನು ನಿರಪರಾಧಿಗಳನ್ನಾಗಿ ಮಾಡಲು ಶ್ರಮಿಸಿದರು. ನನಗೆ ಇದರ ಬಗ್ಗೆ ಬೇಸರವೇನೂ ಇಲ್ಲ. ಕಳೆದ ಫೆಬ್ರುವರಿ ತಿಂಗಳ 22ರ ಬ್ಲಿಟ್ಜ್ ಪತ್ರಿಕೆಲ—ಆ ಪತ್ರಿಕೆಯಲ್ಲಿ ಬರತಕ್ಕದ್ದೆಲ್ಲಾ ಸತ್ಯವಾದುದೆಂದು ನಾನು ಹೇಳುತ್ತಿಲ್ಲ, ಆದರೆ ಅದರಲ್ಲಿ ಮಿ. ಹೆಗಡೆ ಟು ಕ್ವಿಟ್ ದಿ ಮೈಸೂರು ಕ್ಯಾಬಿನೆಟ್ ಎಂದು ಬರೆದಿದೆ. ಕ್ಯಾಬಿನೆಟ್ಟಿಗೇ ಇಂಥ ಒಂದು ಪ್ರಮುಖವಾದ ಸ್ಥಾನವನ್ನು ಪಡೆದಿರತಕ್ಕ ಹೆಗಡೆಯವರನ್ನೇ ಹೀಗೆ ಹೊರಗೆ ಹಾಕುವುದಕ್ಕೆ ಪ್ರಯತ್ನಗಳನ್ನು ನಡೆಸಿದ್ದರೆ ಅವರು ಏಕೆ ತಲೆಕೆಡಿಸಿಕೊಂಡು ಇಲ್ಲಿ ಸದಸ್ಯರು ಎತ್ತಿರುವ ಎಲ್ಲಾ ಆಕ್ಷೇಪಣೆಗಳಿಗೂ ಉತ್ತರ ಕೊಡುತ್ತಾರೆ? ಅದರೆ ಅವರು ಹೇಳಿರತಕ್ಕ ಆ ವರದಿಯಲ್ಲಿ ಜಾತಿ, ನೀತಿ ಇತ್ಯಾದಿ ನಾನಾ ಪ್ರಶ್ನೆಗಳಿರುತ್ತವೆ. ಎಲ್ಲವನ್ನೂ ಸ್ವಲ್ಪಮಾತ್ರ ಹೇಳಿದ್ದಾರೆ, ಆದರೆ ಆ

ಪತ್ರಿಕೆಯಲ್ಲಿ ಬಂದಿರತಕ್ಕದ್ದು ಬರೀ ಒಂದು ಉಹಾಪೋಹ ಆದರೆ ಪರವಾ ಇಲ್ಲ. ಹಾಗಲ್ಲದೆ ಅದೇನಾದರೂ ನಿಜವಾಗಿದ್ದರೆ ಅದೊಂದು ಬಹಳ ವ್ಯಸನಕರವಾದ ಸಂಗತಿ. ಅವರು ಎಲ್ಲಿದ್ದರೂ ಬದುಕಬಲ್ಲರು. ಅವರು ಮಂತ್ರಿಯಾಗೇ ಕೆಲಸಮಾಡಬೇಕೆಂಬ ಅಗತ್ಯ ಅವರಿಗಿಲ್ಲ. ನಾವು ಇಷ್ಟು ಕೆಟ್ಟಮೇಲೂ ನಮಗಿನ್ನೂ ಬುದ್ಧಿ ಬರಲಿಲ್ಲ ಎಂದರೆ ನನಗೆ ಬಹಳ ವ್ಯಸನವಾಗುತ್ತದೆ. ನಾವಷ್ಟೆ ಇದರ ಬಗ್ಗೆ ಇದಕ್ಕಿಂತ ಹೆಚ್ಚಿಗೆ ಏನು ಮಾಡುವುದಕ್ಕೂ ಆಗುವುದಿಲ್ಲ. ನಾವೆಲ್ಲರೂ ಒಂದು ದಿನ ಸಾಯಲೇ ಬೇಕು. ಕೆಲವರು ಅಂಥ ಆಸೆ ಇಟ್ಟುಕೊಂಡಿರತಕ್ಕವರ ಫೊಟೋಗಳನ್ನು ತೆಗೆಸಿ ಇಟ್ಟುಕೊಳ್ಳಬಹುದು. ಇಲ್ಲಿ ಖಾಲಿ ಬಿದ್ದಿರುವ ಬಡವರ ತುತ್ತಿನ ಚೀಲವನ್ನು ಭರ್ತಿಮಾಡತಕ್ಕ ಒಬ್ಬ ದಾತ ಬರಲಿಲ್ಲಾ. ಇಲ್ಲಿ ಜನರು 8 ಆಣೆ, 10 ಆಣೆ, 12 ಆಣೆಗಳಿಗೆ ದುಡಿಯತಕ್ಕ ಜನ ಬಹಳ ಇದ್ದಾರೆ, ಇಷ್ಟು ಅಲ್ಪ ಕೂಲಿಗೆ ದುಡಿಯತಕ್ಕ ಜನ ಬೇರಾವ ದೇಶದಲ್ಲೂ ಇಲ್ಲ. ಬೇರೆ ರಾಷ್ಟ್ರಗಳಲ್ಲಿ, ಇಲ್ಲಿರತಕ್ಕ ಒಂದು ಪೆಟ್ಟಿಗೆಯನ್ನು ಇಲ್ಲಿಂದ ಎತ್ತಿ ಮತ್ತೊಂದು ಕಡೆ ಇಡಬೇಕು ಎಂದರೆ ಅದಕ್ಕೆ 2 ಡಾಲರನ್ನು ಕೂಲಿ ಕೇಳುತ್ತಾರೆ.

ಈ ದೇಶದಲ್ಲಿ 10 ಆಣೆ ಕೊಡಿ 8 ಆಣೆ ಕೊಡಿ ಅಥವಾ 50 ಪೈಸೆ ಕೊಡಿ. 8 ಘಂಟೆ ಕೆಲಸಮಾಡುತ್ತಾರೆ. ಲಕ್ಷಗಟ್ಟಲೆ, ಕೋಟಿಗಟ್ಟಲೆ ಜನ ಅನ್ನ, ಅನ್ನ ಎಂದು ರಸ್ತೆಗಳಲ್ಲಿ ಮತ್ತು ಹೊಲಗಳಲ್ಲಿ ಬಿದ್ದಿರುವಾಗ ನಿಮ್ಮ ತಲೆಗಳಲ್ಲಿ ಏನು ಯೋಚನೆ ಬರುತ್ತಾ ಇದೆಯೆಂದರೆ, ಎಲ್ಲಿ ಯಾವ ಕಟ್ಟಡಗಳನ್ನು ಕಟ್ಟಬೇಕೆಂಬುದೇ ಆಗಿದೆ. ಒಂದೊಂದು ಕಾಸನ್ನೂ ಕೂಡಿ ಕೂಡಿ ಹಾಕಿ ಕೋಟಿ ರೂಪಾಯಿಗಳಷ್ಟು ಮಾತಿರುವಂಥಾದ್ದನ್ನು ಹೀಗೆ ನೀವು ಖರ್ಚುಮಾಡಿಕೊಂಡು ಬಂದಿದ್ದೀರಿ ಇದನ್ನೇನಾದರೂ ಕೂತು ವಿಚಾರ ಮಾಡುತ್ತೀರಾ ? ಇಲ್ಲ. ಸುಮ್ಮನೆ ಡೆಲ್ಲಿಗೆ ಹೋಗುತ್ತೀರಿ. ಅಲ್ಲಿ ಎಲ್ಲಾ ಮುಖ್ಯಮಂತ್ರಿಗಳೂ ಸೇರುತ್ತೀರಿ. ಮಾನ್ಯ ಶ್ರೀ ಡಿ. ಆರ್. ಗಾಡ್ಗಿಲ್ ಅವರ ಅಧ್ಯಕ್ಷತೆಯಲ್ಲಿ ಒಂದು ಆಯೋಗವನ್ನು ಮಾಡಿದ್ದೀರಿ. ಯಾವ ದೇವರಿಗೆ ತೃಪ್ತಿಮಾಡುವುದಕ್ಕೆ ನೀವು ಅದನ್ನೆಲ್ಲಾ ಮಾಡುತ್ತಿದ್ದೀರೋ ನನಗೆ ಗೊತ್ತಿಲ್ಲ. ಯಾರ ತಲೆ ತೆಗೆದರೂ, ಬಡವರ ತಲೆ ತೆಗೆಯಲಿಕ್ಕೆ ಹೋಗಬೇಡಿ. ಬಹಳ ಜನರು ಮತ್ತು ಡಾಕ್ಟರು ನನಗೆ ಹೇಳುತ್ತಾರೆ, ನೀವು ತಲೆ ಕೆಡಿಸಿಕೊಳ್ಳಬೇಡಿ, ರಕ್ತದ ಒತ್ತಡ ಜಾಸ್ತಿಯಾಗುತ್ತದೆಂದು ಹೇಳಿದ್ದಾರೆ. ಬಹುಶಃ ನಾನೂ ಸಾಯುತ್ತೇನೆ. ನೀವೂ ಸಾಯುತ್ತೀರಿ. ರಾಷ್ಟ್ರದಲ್ಲಿ ಎಲ್ಲರೂ ಸಾಯುವವರೇ. ಆದರೆ ರಾಷ್ಟ್ರ ಇರುತ್ತದೆ. ಸ್ವಾತಂತ್ರ್ಯ ನಂತರದಲ್ಲಿ ಇತಿಹಾಸವನ್ನು ಬರೆಯುವಾಗ ಮಹಾತ್ಮಗಾಂಧಿ, ನೆಹರೂ ಅವರನ್ನು ಹೊಗಳಿ ಇತಿಹಾಸ ಬರೆಯಬಹುದು, ಇನ್ನೊಬ್ಬ ಅವರ ವಿರೋಧವಾಗಿ ಬರೆಯಬಹುದು. ಮಾನ್ಯ ಶ್ರೀ ರಾಮಕೃಷ್ಣ ಹೆಗಡೆಯವರು ಸಂಪನ್ಮೂಲಗಳನ್ನು ಹುಡುಕುವುದ ಕ್ಕಾಗಿ ಒಂದು ತೆರಿಗೆ ಸಮಿತಿ ಎಂದು ಮಾಡಿದ್ದಾರೆ. ಮಾನ್ಯ ಶ್ರೀ ಮೊರಾರ್ಜಿಯವರು 150 ಕೋಟಿ ರೂಪಾಯಿಗಳ ಹೊಸ ತೆರಿಗೆ ಹಾಕಿಯೂ ಕೂಡ 250 ಕೋಟಿ ರೂಪಾಯಿಗಳ ಖೋತಾ ಬಜೆಟ್ಟನ್ನು ಮಂಡಿಸಿದ್ದಾರೆ. ಆ ವಿಷಯು ನಿಮಗಿಂತ ಸಿಗರೇಟ್ ಸೇದುವವರಿಗೆ ಗೊತ್ತು. ಅದು ಒಂದು ತಿಂಗಳಿಂದ ಮಂಗಮಾಯವಾಗಿದೆ. ಹೀಗೆ ಪ್ರತಿವರ್ಷವೂ ಅವರದು ತೆರಿಗೆ ಹಾಕುವ ನೀತಿಯೇ ಆಗಿದೆ. ಆದರೆ ಎಲ್ಲಿ ತೆರಿಗೆ ಹಾಕಬೇಕೆಂಬುದನ್ನು ಯೋಚನೆಮಾಡಬೇಕು. ದೊಡ್ಡವರು ಸಿಕ್ಕಿಬೀಳುವಂಥ ರೀತಿಯಲ್ಲಿ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಇರುವವರಿಗೆ ತೆರಿಗೆ ಯನ್ನು ಹಾಕಬೇಕು. ಇಲ್ಲದಿದ್ದರೆ ಸಮುದ್ರದಲ್ಲಿ ಮೀನು ಹಿಡಿದಂತಾಗುತ್ತದೆ. ಮಾನ್ಯ ಶ್ರೀ ರಾಜಗೋಪಾಲಚಾರಿಯವರೇ ತಮಗೆ ಒಂದು ಸಂಪನ್ಮೂಲವನ್ನು ಒದಗಿಸಿಕೊಟ್ಟಿದ್ದಾರೆ. ಅದು ಸೇಲ್ಸ್‌ಟ್ಯಾಕ್ಸ್. ಒಂದು ಕೆ. ಜಿ. ಅಕ್ಕಿ ತೆಗೆದುಕೊಂಡರೆ ಸೇಲ್ಸ್ ಟ್ಯಾಕ್ಸ್. ಇದರಿಂದ ಬರುವ ಆದಾಯ ಒಂದು ಕೋಟಿಯಿಂದ ಆರಂಭವಾಗಿ ಇಪ್ಪತ್ತು 25 ಕೋಟಿ ಮೀರಿ ಆದಿನ್ನೂ 30 ಕೋಟಿಗೂ ಹೋಗುತ್ತದೋ ಏನೋ ಗೊತ್ತಿಲ್ಲ. ಹೋಟಲಿನವರು ಮತ್ತು ಇತರ ಅಂಗಡಿಗಳವರು ನಾವು ಕೊಡತಕ್ಕ ಸೇಲ್ಸ್‌ಟ್ಯಾಕ್ಸನ್ನು ಸರ್ಕಾರಕ್ಕೆ ಕೊಡದೆ, ತಾವೇ ಉಪಯೋಗಿಸಿಕೊಳ್ಳುತ್ತಿದ್ದಾರೆ. ಹೊಟ್ಟೆಗೆ ಅನ್ನವಿಲ್ಲದಿದ್ದರೂ ಎಷ್ಟೋ ಜನ ಹಳ್ಳಿಗಳಲ್ಲಿ ಹೊಗೆಸೊಪ್ಪು ತಿನ್ನುತ್ತಿದ್ದಾರೆ. ಅಂಥಾದ್ದರಲ್ಲಿ ಈಗ ಅದನ್ನು ತಿನ್ನುವವರು ಸರ್ಕಾರಕ್ಕೆ ಒಂದಾಣೆಯಲ್ಲಿ ಮೂರು ಪೈಸೆ ತೆತ್ತಿರು ತ್ತಾರೆ. ಅದು ನಿಮ್ಮ ರೆಕ್ಕದಲ್ಲಿಲ್ಲ. ನಿಮ್ಮ ಓಟರುಗಳ ಲಿಸ್ಟ್‌ನಲ್ಲಿ ಬಡ ಜನರೇ ಇಲ್ಲ. ಇಂತಹ ಸ್ಥಿತಿಗೆ ನಾವು ಬಂದು ಮುಟ್ಟಿದ್ದೇವೆಂದು ನಾನು ಬಹಳ ದುಃಖದಿಂದ ಹೇಳುತ್ತಿದ್ದೇನೆ. ನಿಮ್ಮ ಸರ್ಕಾರ ಶಾಶ್ವತವಲ್ಲ. ಯಾರೋ ಹೇಳುತ್ತಿದ್ದಾರೆ, ಪತ್ರಿಕೆಯಲ್ಲಿಯೂ ಓದಿದೆ. ಕಾಂಗ್ರೆಸ್‌ಗೆ ಹೊಸ ಕಳೆ ಬಂದಿದೆ ಎಂದು. ಕೆಟ್ಟಮಾತು ಹೇಳಬೇಕೆಂದರೆ, ಒಬ್ಬ ನೂಳೆಯ ಮನೆಗೆ ಹೋಗಿ ಅವಳ್ಳದ್ದ ಪೌಡರನ್ನು ಮುಖಕ್ಕೆ ಬಳಿದುಕೊಂಡು ಬಂದರೆ ಹೇಗಿರುತ್ತದೋ ಆ ರೀತಿ ಈಗ ಆಗಿದೆ. ನಮ್ಮ ಕನುಬು ಭಾಷಣ ಮಾಡುವುದಲ್ಲ. ಹಾವಿ ತಪ್ಪಿ ಇಲ್ಲಿ ಬಂದಿದ್ದೇವೆ. ಭಾಷಣ ಮಾಡಬೇಕು ಜನರನ್ನು ಮೆಚ್ಚಿಸಬೇಕು, ಸರ್ಟಿಫಿಕೇಟ್ ತೆಗೆದುಕೊಳ್ಳಬೇಕು ಎಂಬುದು ನಮ್ಮ

(ಶ್ರೀ ಎಸ್. ಗೋಪಾಲಗೌಡ)

ಕನುಬಲ್ಲ. ಗದ್ದೆ ಹೂಡುತ್ತೇವೆ, ಮಣ್ಣು ಹೊಡೆಯುತ್ತೇವೆ. ಇದೆಲ್ಲಾ ನಮ್ಮ ಅಜ್ಜ, ಅಪ್ಪನ ಕನುಬು. ಇವತ್ತಿನ ದಿವಸ ಈ ದೇಶ ಬಹಳ ಅಭದ್ರತೆಯಿಂದ ಕೂಡಿರುವ ದೇಶವಾಗಿದೆ. ನಿಮ್ಮ ಇಂದಿರಾರವರ ಸರ್ಕಾರ ಎಷ್ಟು ಅಭದ್ರವಾಗಿದೆಯೆಂದರೆ ನಿಮ್ಮ ಕೇಂದ್ರ ಸರ್ಕಾರದ ಗಡಿಯಾರವ ಮುಳ್ಳು ಅಲ್ಲಾಡುವಂತಾಗಿದೆ.

ಅಧ್ಯಕ್ಷರು.—ವೇಳೆಯಾಯಿತು. ಭಾಷಣ ಜಾಗ್ರತೆ ಮುಗಿಸಿ.

ಶ್ರೀ ಎಸ್. ಗೋಪಾಲಗೌಡ.—ತಮಗೆ ಬೇಜಾರು ಆಗುತ್ತದೆಯೇ? ಸಮಯವಾಗುತ್ತದೆಯೇ?

ಅಧ್ಯಕ್ಷರು.—ಬೇಜಾರು ಇಲ್ಲ. ಕೇಂದ್ರಸರ್ಕಾರದ ವಿಷಯ ಬೇಡಿ. ಈ ಸರ್ಕಾರದ್ದು ಹೇಳಿ.

ಶ್ರೀ ಎಸ್. ಗೋಪಾಲಗೌಡ.—ಮಾನ್ಯ ಶ್ರೀ ವೀರೇಂದ್ರ ಪಾಟೀಲ್ ಅವರು ಈ ದಿವಸ ಅವರ ಸರ್ಕಾರ ಭವ್ಯವಾಗಿದೆಯೆಂದು ಹೇಳುವುದಕ್ಕಾಗುವುದಿಲ್ಲ. ಮಾನ್ಯ ಶ್ರೀ ಭಕ್ತವತ್ಸಲಂರವರೆಡ್ಡಿಯವರು ಹೇಳುವುದು ಬೇಡ, ಮಾನ್ಯ ಶ್ರೀ ಚವಾಣ್ ಅವರು ಹೇಳುವುದು ಬೇಡ; ಗುಜರಾತಿನ ದೇಸಾಯಿಯವರು ಹೇಳುವುದು ಬೇಡ, ಮಧ್ಯಪ್ರದೇಶದ ಕಥೆ ನಮಗೆ ಗೊತ್ತು. ಇಲ್ಲಿಗೆ ದಯಮಾಡಿಸಿರುವ ರಾಜ್ಯಪಾಲರಿಗೂ ಗೊತ್ತು. ಸಮಾಜವಾದ ಸಮಾಜ ಸ್ಥಾಪಿಸುವುದಾಗಿ ಹೇಳಿದ ಕಾಂಗ್ರೆಸ್ಸಿನವರಿಗೆ ಯಾವರೀತಿ ಬೆಂಬಲ ಜನರು ಕೊಡುತ್ತಾರೆಂಬುದು ಗೊತ್ತು. ಜನರು ಬಹಳ ಕಷ್ಟಪಟ್ಟು ಸಂಪಾದಿಸಿದ್ದನ್ನು ನೀವು ತಿನ್ನುತ್ತಿದ್ದೀರಿ. ಸಮಾಜವಾದ ಪ್ರಭುತ್ವ ತಳಹದಿಯನ್ನು ಕಟ್ಟಬೇಕೆಂದು ಹೊರಟಿದ್ದೀರಿ. ಮೇಲೆ ಏರಿದವರು ಕೆಳಗೆ ಇಳಿಯುವಾಗ ಸೊಟಮುರಿಯುತ್ತದೆ, ಆಗ ದುಃಖವಾಗುತ್ತದೆ. ಕಾಂಗ್ರೆಸ್ಸಿನ ಅವನತಿಯೂ ನಿಮ್ಮ ಅವನತಿಯೂ ಸಂತೋಷ ಕೊಡುವುದಿಲ್ಲ, ದುಃಖಕೊಡುತ್ತದೆ. ಹುಟ್ಟಿದ ಸಂಸ್ಥೆ ಯಾವತ್ತಾದರೂ ಸಾಯುತ್ತದೆ. ಕೋಟ್ಯಾಂತರ ಜನಗಳು ಈ ರಾಷ್ಟ್ರವನ್ನು ನಿರ್ಮಾಣಮಾಡಿದ್ದರೂ ಅಮೇರಿಕಾದ ಗೋಧಿ ತಿಂದು ಅವರ ಗುಲಾಮರಾಗಿ ಬಂದ ಸ್ವಾತಂತ್ರ್ಯವನ್ನು ಕಳೆದುಕೊಳ್ಳುತ್ತೇವೋ ಏನೋ ಎನ್ನುವ ಭಯ ನಮ್ಮ ಎದೆ ಹೊಡೆಯುವ ಹಾಗೆ ಮಾಡುತ್ತದೆ. ದೇವರು ಸೃಷ್ಟಿಮಾಡಿದಂಥ ಈ ಜಗತ್ತನ್ನು ಇಷ್ಟು ಕಂಗಾಲು ಸ್ಥಿತಿಗೆ ತಂದಿರುವ ನೀವು ಅಧಿಕಾರಕ್ಕಾಗಿ ಕಚ್ಚಾಟ ಮಾಡುತ್ತಿದ್ದರೆ, ನಾವು ತಾನೆ ಏನು ಮಾಡಬಲ್ಲೆವು? ನೀವು ಕಾಂಗ್ರೆಸ್ ಹೆಸರಿನಲ್ಲಿ ನಡೆಸುತ್ತಿರುವ ಕಪಟನಾಟಕವನ್ನು ನಿಲ್ಲಿಸುವುದಕ್ಕೆ ಸಾಧ್ಯವಿಲ್ಲವಲ್ಲಾ ಎನ್ನುವ ದುಃಖ ನಮ್ಮನ್ನು ಕಾಡುತ್ತಿದೆ. 1969ನೇ ಇಸವಿಯಲ್ಲಿ ಗಾಂಧಿ ಶತಾಬ್ದಿ ಆಚರಿಸುತ್ತಿದ್ದೇವೆ, ತಾವೆಲ್ಲರೂ ಗಾಂಧಿ ಅನುಯಾಯಿಗಳೆಂದು ಹೇಳುತ್ತಿದ್ದೀರಿ. ಆಮೇಲೆ ಆದರೂ ಕಾಂಗ್ರೆಸ್ಸನ್ನು ವಿಸರ್ಜನೆಮಾಡಿ.

7-30 P.M.

ನೀವು ಅಂಡವಾನಿಗೆ ಹೋಗಿ ಬಂದರೂ ಏನೂ ಪ್ರಯೋಜನವಾಗುವುದಿಲ್ಲ. ಅಲ್ಲಿ ಎಲ್ಲಾ ಪೊನ್ನೆ ನೋಡಿಕೊಂಡು ಬಂದಿದ್ದೀರಿ. ಆದ್ದರಿಂದ ನಾನು ಹೇಳುವುದು, ಮೊರಾರ್ಜಿಯವರು ಶ್ರೀಮಂತರನ್ನು ಮತ್ತಷ್ಟು ಶ್ರೀಮಂತರನ್ನಾಗಿಮಾಡಬೇಕೆಂದು ಪಣತೊಟ್ಟು ಅದರಂತೆ ವರ್ಷ ವರ್ಷ ಉಡುಗೊರೆಯನ್ನು ಈ ದೇಶದ ಜನರಿಗೆ ಕೊಡುತ್ತಿದ್ದಾರೆ. ಇದ್ದ 101 ಕಂಪೆನಿಗಳಲ್ಲಿ, 10 ರಿಂದ 15 ಕೋಟಿ ರೂಪಾಯಿ ಬಂಡವಾಳ ಇರುವಂತದ್ದು 36, 15 ರಿಂದ 26 ಕೋಟಿಯವರೆಗೆ ಇರುವಂತದ್ದು 40, 25 ರಿಂದ 50 ಕೋಟಿ ಬಂಡವಾಳ ಇರುವಂತದ್ದು 16, 50 ಕೋಟಿಗಿಂತ ಮೇಲ್ಪಟ್ಟು ಬಂಡವಾಳ ಇರುವಂತದ್ದು 9. ಹೀಗೆ 101 ಕಂಪೆನಿಗಳು. ಅವಡಿ ನಿರ್ಣಯವನ್ನು ಮುಖರ್ಜಿಯಾಗಲಿ, ನಂಬೂದ್ರಿಪಾಡಾಗಲಿ, ಕಾರ್ಯಗತ ಮಾಡಿದರೆ, ನಾವೆಲ್ಲಾ ಅಧಿಕಾರ ಬಿಟ್ಟುಬಿಡುತ್ತೇವೆಂದು ಹೇಳುತ್ತಿದ್ದಾರೆ. ಮುಖರ್ಜಿಯವರನ್ನು ಸೋಲಿಸುವುದಕ್ಕೆ ಅತುಲ್ಯ ಘೋಷರು ರಾಜಿನಾಮೆ ಕೊಟ್ಟರು. ಆ ಒಂದು ಜುನಾವಣೆಯ ಕತೆಯೇ ಬೇರೆ ಇದೆ, ಇನ್ನು ಮುಂದಿನ ಚಿತ್ರ ಪರದೆಯ ಮೇಲೆ ನೋಡಬೇಕಾಗಿದೆ. ನಾವು ಏನೋ ಭಾಷಣ ಮಾಡಿಕೊಂಡು ಇದ್ದರೆ ಅದು ಒಂದು ದೊಡ್ಡ ವಿಷಯವಾಗುವುದಿಲ್ಲ. ನಂಬೂದ್ರಿಪಾಡರನ್ನು ತೆಗೆಯುವುದು ಕೇಂದ್ರಸರ್ಕಾರದಲ್ಲರತಕ್ಕಂತಹ ಗೊವಿಂದ ಮೆನನ್ ಸಾಹೇಬರಿಗೆ ಕಠಿಣ ಇವೆ. ಗಾಂಧೀಜಿಯವರನ್ನು ತೆಗೆದ ಮೇರೆ, ಮಾರ್ಟಿನ್ ಲೂತರನ್ನು ತೆಗೆದ ಮೇರೆ, ಕನೆಡಿಯವರನ್ನು ತೆಗೆದಮೇರೆ, ಮಂತ್ರಿಗಳನ್ನು ತೆಗೆಯುವುದು ದೊಡ್ಡ ವಿಷಯವಲ್ಲ. ಅದು ನನಗೆ ದೊಡ್ಡದೆಂದು ಎನಿಸಲಲ್ಲ.

ಆದರೆ ನಮಾಜವಾದವನ್ನು ತರುವುದು ಹೇಗೆ ? ನೀರು ಇಲ್ಲದಿರತಕ್ಕಂತಹ ಜನರಿಗೆ ಏನಾದರೂ ನಮ್ಮ ಕಾಲದಲ್ಲಿ ಒಂದು ಅಶ್ರಯವನ್ನು ಜೊರಕಿಸಿಕೊಳ್ಳುವುದಕ್ಕಾಗುತ್ತದೆ ಎನ್ನುವ ಒಂದು ಹಂಬಲದಿಂದ ಇವತ್ತಿನ ದಿವಸ ನಿಮ್ಮ ಜೊತೆಗೆ ನಾವು ರಾಜಕಾರಣಿಗಳಾಗಿದ್ದೇವೆ. ಆದರೆ ನೀವು ಮಾತ್ರ ಹೇಗೆ ಜಾಲಿಮರನೆರಳಲ್ಲಪೋ, ಹಾಗೆ ಕಾಂಗ್ರೆಸ್ ನೆರಳಾಗಿಲ್ಲ. ಘಟಪ್ರಭಾ ಮಲಪ್ರಭಾ ಯೋಜನೆಯ ಬಗ್ಗೆ ಕೃಷ್ಣಾ ಯೋಜನೆಯ ಬಗ್ಗೆ ಏನೂ ಹೇಳಿಲ್ಲ. ಬ್ರಿಟಿಷರು ಇರುವಾಗ ಕ್ವಿಟ್ ಇಂಡಿಯಾ ಮೂವ್‌ಮೆಂಟ್ ಇತ್ತು. ಆಗ ಅವರನ್ನೆಲ್ಲಾ ಹೋಗಿಬಿಡಿರಿ, ಎಂದು ಹೇಳುತ್ತಿದ್ದೆವು ಅವರು ಬಂಗಾರ ಎಲ್ಲಾ ಇಲ್ಲಿಂದ ಸಾಗಿಸುತ್ತಿದ್ದಾರೆ, ಅದ್ದರಿಂದ ನಾವು ನಿರ್ಗತಿಕರಾಗಿದ್ದೇವೆ ಎನ್ನುವಂತಹ ಕಾಲವೂ ಇತ್ತು. ನಮ್ಮ ದೇಶ ಅಂದರೆ ಏನು, ನಮ್ಮ ಜನ ಅಂದರೆ ಏನು, ನಮ್ಮ ಇತಿಹಾಸ ಏನು ? ಹರಿಶ್ಚಂದ್ರ ರಾಮ ಪರಮಾತ್ಮರಂತಹ ಮಹಾ ವ್ಯಕ್ತಿಗಳು ಹುಟ್ಟಿದಂತಹ ನಾಡು, ವಿಶ್ವಕ್ಕೇ ಒಂದು ಸಂಸ್ಕೃತಿಯನ್ನು ತೋರಿಸುವಂತಹ ನಾಡು. ಇದನ್ನೆಲ್ಲಾ ಕೆಡಿಸಿ ಬ್ರಿಟಿಷರು ಹಾಳು ಮಾಡಿಬಿಟ್ಟಿದ್ದಾರೆ. ಅದ್ದರಿಂದ ಅವರನ್ನು ಓಡಿಸೋಣ ಎಂದು ಗಾಂಧೀಜಿಯವರು ಕರೆ ಕೊಟ್ಟರು ನಾವು ಅದರಂತೆ ನಡೆದೆವು. ಅವರು ಇದನ್ನು ನೋಡಿಬಿಟ್ಟು ಓಡಿಹೋದರು. ನಂತರ ಬಂತು ಕಾಂಗ್ರೆಸ್ ರಾಜ್ಯ. ರಾಷ್ಟ್ರ ಕಟ್ಟುವುದು ಹೀಗೆ ಅಲ್ಲವೆಂದು ಹೇಳಿದ್ದೇವೆ. ರಾಷ್ಟ್ರ ಕಟ್ಟುವಾಗ ದಿಣ್ಣೆ, ಹಳ್ಳ ಎರಡೂ ಇರುತ್ತದೆ; ಅವೆರಡನ್ನೂ ನೋಡಿಕೊಂಡು, ದಿಣ್ಣೆಯನ್ನು ಸ್ವಲ್ಪ ಕಡಿಮೆ ಮಾಡಬೇಕು, ಹಳ್ಳವನ್ನು ಸ್ವಲ್ಪ ತುಂಬಬೇಕು. ಶ್ರೀಮಂತರಿಗೆ ಕೊಡುವುದರಲ್ಲಿ ಸ್ವಲ್ಪ ಬಡವರಿಗೂ ಕೊಡಿ. 30-40 ಕೋಟಿ ಎಕರೆ ಜಮೀನು ಇದೆ, ಅದರಲ್ಲಿ ಸ್ವಲ್ಪ ಜಮೀನು ಇವರಿಗೂ ಕೊಡಿ, ನೀರಾವರಿ ಸೌಲಭ್ಯ ಕೊಡಿ. ಬೆಳೆ ಹೋದರೆ ಸ್ವಲ್ಪ ಕಂದಾಯವನ್ನು ಮಾಫಿ ಮಾಡುವುದನ್ನು ಮಾಡಬೇಕು. ಬ್ರಿಟಿಷರು ತುಳಿದ ರಾಜ್ಯವನ್ನು ಸ್ವಲ್ಪ ಸರಿಪಡಿಸಿಕೊಳ್ಳೋಣ. ಜನರು ಇದನ್ನು ಸ್ವಲ್ಪ ತಿಳಿದುಕೊಳ್ಳಲಿ. ರಾಷ್ಟ್ರದ ದುರ್ಗತಿಯನ್ನು ಅರ್ಥ ಮಾಡಿಕೊಳ್ಳಲಿ. ನಾನು 1948ರಲ್ಲಿ ಹೇಳಿದ ಮಾತನ್ನು ಇವತ್ತೂ ಕೂಡ ಹೇಳುತ್ತೇನೆ. ಆದರೆ ನಮ್ಮ ಕಾಂಗ್ರೆಸ್ಸಿನ ಮಿತ್ರರಿಗೆ ಮನಸ್ಸು ಯಾವಾಗಲೂ ಸುಖದ ಕಡೆಗೇ ಎಳೆಯುವುದು. ಸುಮಾರು 20 ವರ್ಷ ಅಧಿಕಾರದಲ್ಲಿದ್ದರೆ, ಯಾವಾಗಲೂ ನಂತರ ಅವನ ಮನಸ್ಸು ಅಧಿಕಾರಕ್ಕೇ ಎಳೆಯುತ್ತದೆ. ಗಾಂಧೀಜಿಯ ನಿಜವಾದ ಭಕ್ತರಿಗೆ ಕೂಡ, ಆ ಒಂದು ಸುಖ ಮೈಗೆ ಅಂಟಿಬಿಡುತ್ತದೆ. ಅದಕ್ಕೆ ಯಾವ ಸಾಬೂನೂ ಹಿಡಿಯುವುದಿಲ್ಲ. ಎಷ್ಟೋ ಜನರು, ಈಗಲೂ ಅವರ ಅಕ್ಕತಂಗಿಯರು, ಬಂಧುಬಳಗದವರು, ನಿರ್ಗತಿಕರಾಗಿದ್ದಾರೆ. ಅಂಥವರ ಮಕ್ಕಳಾಗಿ ಅಂಥವರ ಮನೆಯಲ್ಲಿ ಬೆಳೆದಿರುವಂತವರು, ಇಂದು ಎಂ.ಎಲ್.ಎ. ಗಳಾಗಿದ್ದಾರೆ ; ಮಂತ್ರಿಗಳಾಗಿದ್ದಾರೆ, ಆದರೆ ಅಂಥ ಜನರ ಕೂಗನ್ನು ಇವತ್ತು ಇವರು ಕೇಳುತ್ತಾ ಇಲ್ಲ. ಅವುಗಳನ್ನು ಕಣ್ಣೆತ್ತಿ ನೋಡುತ್ತಿಲ್ಲ, ಕಿವಿಕೊಟ್ಟು ಕೇಳುತ್ತಿಲ್ಲ. ಇಂಥ ಒಂದು ಮೌಢ್ಯ ಆವರಿಸಿ, ಈ ರಾಷ್ಟ್ರವನ್ನು ನೀವು ದುರ್ಗತಿಗೆ ತಗೆದುಕೊಂಡು ಹೋಗುವುದಾದರೆ, ಈ ಬಗ್ಗೆ ನಾನು ಬಹಳ ದುಃಖವನ್ನು ಮಾತ್ರ ವ್ಯಕ್ತಪಡಿಸಬೇಕಾಗಿದೆ. ಶ್ರೀಮಾನ್ ಹೆಗಡೆಯವರು ಹೇಗೆ ಸಂಪನ್ಮೂಲಗಳನ್ನು ಒದಗಿಸುತ್ತಾರೆಂದು ಗೊತ್ತಿಲ್ಲ. ಪೊರಾರ್ಜಿಯವರು ಹೇಗೆ ಈ 150 ಕೋಟಿ ರೂಪಾಯಿ ತೆರಿಗೆಯನ್ನು ರಾಷ್ಟ್ರದ ಜನತೆಯಿಂದ ವಸೂಲು ಮಾಡುತ್ತಾರೆಂದು ಗೊತ್ತಿಲ್ಲ, 250 ಕೋಟಿ ರೂಪಾಯಿಯನ್ನು ಹೇಗೆ ನಿರ್ದೂಗಿಸುತ್ತಾರೆಂದು ಗೊತ್ತಿಲ್ಲ. ಈ ಆಯವ್ಯಯಪಟ್ಟಿಯಲ್ಲಿ ತಾವು ಹಳ್ಳಿಗಳ ಜನರು ಏನು ಬಹಳ ಸೌಲಭ್ಯವನ್ನು ಪಡೆದಿದ್ದಾರೆಂದು ಹೇಳುತ್ತಿದ್ದೀರಿ, ಅದು ಸರಿಯಲ್ಲ. ಪಟ್ಟಣದಲ್ಲಿ ತೆರಿಗೆ ಹಾಕುವುದಕ್ಕೆ ಮನಸ್ಸಿಲ್ಲವೆಂದು ಹೇಳಿದ್ದೀರಿ. ಕೊನೆಗೆ ಮೊರಾರ್ಜಿಯವರು ತಮ್ಮ ಭಾಷಣದಲ್ಲಿ ತಿದ್ದುಪಡಿ ಮಾಡಿಕೊಂಡಿದ್ದಾರೆ. ಇವತ್ತು 5 ಲಕ್ಷ ಹಳ್ಳಿಗಳಿವೆ. ಅಲ್ಲ ಹೋದಂತವನಿಗೆ ಕರುಳು ಕಿತ್ತುಕೊಂಡು ಬರುತ್ತಿದೆ. ನಮಗೆ ಅಲ್ಲಿಗೆ ಬಿಳಿ ಬಟ್ಟೆ ಹಾಕಿಕೊಂಡು ಹೋದವರಿಗೆ ನಾಚಿಕೆಯಾಗುತ್ತದೆ.

ನಾವೆಲ್ಲರೂ ಹಳ್ಳಿಯಲ್ಲಿ ಹುಟ್ಟಿ ದನಕರುಗಳು ಮತ್ತು ಕುರಿಗಳ ಜೊತೆಯಲ್ಲಿ ಬೆಳೆದಿದ್ದೇವೆ. ಇವೊತ್ತೇನೋ ಒಳ್ಳೆಯ ಬಟ್ಟೆಗಳನ್ನು ಹಾಕಿಕೊಂಡು ಈ ಜಾಗದಲ್ಲಿ ಬಂದು ಕುಳಿತುಕೊಂಡಿದ್ದೇವೆ. ಈಗಾಗಲೇ ನಮಗೆ ಸ್ವಾತಂತ್ರ ಬಂದು 20 ವರ್ಷಗಳು ಉರುಳಿ ಹೋಗಿವೆ. ಆದರೂ ಸಹ ನಮ್ಮ ಹಳ್ಳಿಯ ಜನಗಳ ಪರಿಸ್ಥಿತಿ ಸುಧಾರಿಸಿಲ್ಲ. ನಮ್ಮ ರಾಜ್ಯದಲ್ಲಿ 110 ಅಡಮಾನ ಬ್ಯಾಂಕುಗಳು ದೀಫಾರ್ ಆಗಿವೆ. ಅರ್ಥಬಾಏ ತೆಗೆದಿರತಕ್ಕವರ ಗತಿ ಏನು ? ಅವನು ಯಾವರೀತಿ ಎಲ್ಲಿಂದ ಹಣವನ್ನು ತಂದು ಆ ಕೆಲಸವನ್ನು ಪೂರ್ತಿಮಾಡಬೇಕು ! ಅವನು ಮತ್ತೊಂದು ಬಾವಿಯನ್ನು ಹಾರಿ ಸಾಯಬೇಕು ಎಂಬುದು ಸ್ಪಷ್ಟವಾಗಿದೆ. ಭೂಸುಧಾರಣಾ ಕಾನೂನನ್ನು ಯಾವಾಗ ಜಾರಿಗೆ ತರುತ್ತೀರಿ ಶ್ರೀಮಾನ್ ಕೌಜಲಗಿಯವರು ಹೇಳಿದರು ಭೂಸುಧಾರಣೆಯನ್ನು ಜಾರಿಗೆ ತರಬೇಕಾದರೆ 32 ಕೋಟಿ ರೂಪಾಯಿಗಳ ಪರಿಹಾರವನ್ನು ಈ ಸಂಬಂಧದಲ್ಲಿ ಭೂಮಾಲೀಕರಿಗೆ ಕೊಡಬೇಕಾಗುತ್ತದೆ. ಪರಿಹಾರವನ್ನು ತೆಗೆದುಕೊಳ್ಳತಕ್ಕವರು ಸರ್ಕಾರದವರು ಕೊಟ್ಟಂಥ ಪರಿಹಾರ ಸಾಲಲಲ್ಲ

(ಶ್ರೀಸ್. ಗೆ ಗೋಪಾಲಗೌಡ)

ಎಂದು ಬಹುಶಃ ಯಾರಾದರೂ ಕೋರ್ಟಿಗೆ ಹೋದರೆ ಒಂದು ಸಾವಿರ ರೂಪಾಯಿಗಳ ಪರಿಹಾರವನ್ನು ಕೊಡುವಂಥಾದ್ದಕ್ಕೆ ನ್ಯಾಯಾಧೀಶರು 8 ಸಾವಿರ ರೂಪಾಯಿಗಳನ್ನು ಕೊಡಬೇಕೆಂದು ಬರೆಯಬಹುದು. ಇಂಥಾದ್ದೆಲ್ಲಾ ಬರುತ್ತದೆ. ಇದಕ್ಕೆ ಸರ್ಕಾರದವರು ತಕ್ಕ ವ್ಯವಸ್ಥೆಯನ್ನು ಮಾಡಿಕೊಳ್ಳಬೇಕಾಗುತ್ತದೆ. ದುಡಿಯುವ ಜನಗಳಿಗೆ ಪ್ರೋತ್ಸಾಹವನ್ನು ನೀಡಿ. ನಿಮ್ಮ ಈ ಮರುಳು ಬುದ್ಧಿವಂತಿಕೆಗೆ ನಿರಕ್ಷರ ಕುಕ್ಷಿಗಳಾದಂತಹ ಜನ ಮರುಳಾಗಿ ನಿಮಗೆ ವೋಟು ಕೊಟ್ಟಿದ್ದಾರೆ. ಕಾಂಗ್ರೆಸ್ಸಿಗೆ ಹೊಸ ಕಳೆ ಬರುವುದಿಲ್ಲ. ಬೇರೆ ಕಳೆ ಬರುತ್ತದೆ. ಅದನ್ನು ನೀವು ಅನುಭವಿಸಬೇಕಾಗುತ್ತದೆ. ನಿಮ್ಮ ದುಂದುವೆಚ್ಚ, ನೀವು ಹಾಳುಮಾಡಿರುವ ದುಡ್ಡು, ನೀವು ಜನಗಳಿಗೆ ಕೊಟ್ಟಿರುವ ದವನ, ನೀವು ಜನಗಳಿಗೆ, ರೈತರಿಗೆ ಕೊಟ್ಟಿರುವ ಸಾಲಗಳು, ಕಂತು ಬಿಟ್ಟಿರುವ ಸಾಲಗಳು ಇವೆಲ್ಲವೂ ಇವೆ. ನೀವು 30 ಸಾವಿರ ಕೋಟಿ ರೂಪಾಯಿಗಳನ್ನು ಹಾಳು ಮಾಡಿರುವುದನ್ನು ನಾನು ಮಾಫಿ ಮಾಡುತ್ತೇನೆ. ಆದರೆ 23 ವರ್ಷಗಳನ್ನು ಹಾಳುಮಾಡಿರುವುದನ್ನು ಯಾರು ಮಾಫಿ ಮಾಡುತ್ತಾರೆ? ಸಾಧನೆ ಇಲ್ಲದೆ ನಮುಖ ಹೋಯಿತು ಎಂದು ದುಃಖ. ನಷ್ಟವಾಯಿತು ಮನುಷ್ಯ ಎಡವುತ್ತಾನೆ ಎಲ್ಲಾ ಸರಕಾರಗಳೂ ತಪ್ಪುಮಾಡುತ್ತವೆ. ಆದರೆ ಜನಗಳಿಂದ ನೀವು ವೋಟು ಹಾಕಿಸಿಕೊಂಡು ಅವರಿಗೆ ಮೋಸ ಮಾಡಿದ್ದೀರಿ, ಜನ ನಿಮ್ಮನ್ನು ಸುಮ್ಮನೆ ಬಿಡುವುದಿಲ್ಲ. ಈಗ ನಾನು ಒಬ್ಬ ರಾಜಕಾರಣಿ, ರಾಜಕಾರಣಿಯಾಗಿರುವವನು ಏನೂ ತಪ್ಪು ಮಾಡಿದ್ದರೂ, ಏನೂ ತಿನ್ನಬೇಡ ಇದ್ದರೂ ಏನಾಕಾರಣ ನಮ್ಮ ತಲೆಗೆ ಕಳಂಕವನ್ನು ಹೊರಿಸುತ್ತಾರೆ. ಇಡೀ ದೇಶದಲ್ಲಿರತಕ್ಕ ರಾಜಕಾರಿಣಿಗಳ ಕೊರಳಿಗೆ ಒಂದು ದೊಡ್ಡ ಕಳಂಕವನ್ನು ಸುತ್ತುತ್ತಾರೆ. ಈ ದೃಷ್ಟಿಯಿಂದ ಮಂತ್ರಿಗಳಾಗಲೀ ಯಾರೇ ಆಗಲೀ ಪ್ರಮಾಣಬದ್ಧ ಕೆಲಸ ಮಾಡುಬೇಕು. ಭ್ರಷ್ಟಾಚಾರದ ಬಲೆಗೆ ಬೀಳದ ಹಾಗೆ ಕೆಲಸ ಮಾಡಬೇಕು. ಪುಣ್ಯ ಮಾಡದೆ ಪುಣ್ಯದ ಫಲ ದೊರೆಯುವುದಿಲ್ಲ. ದುಡಿಯಬೇಕು. ದುಡಿಯುವವರಿಗೆ ಪ್ರೋತ್ಸಾಹವನ್ನು ಕೊಡಬೇಕು. ವ್ಯವಸಾಯ ಮಾಡುವವರಿಗೆ ಭೂಮಿ ಕೊಡಬೇಕು, ನೀರಾವರಿ ಸೌಲಭ್ಯ ಒದಗಿಸಿ ಕೊಡಬೇಕು. ಅವರ ಮಕ್ಕಳಿಗೆ ವಿದ್ಯೆ ಕೊಡಬೇಕು, ಅವರಿಗೆ ಎಲ್ಲಾ ವಿಧವಾದ ಸೌಕರ್ಯವನ್ನು ಒದಗಿಸಿಕೊಡುವ ಕಡೆ ಸರ್ಕಾರ ಗಮನವನ್ನು ಕೊಡಬೇಕೆಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ, ಆಯವ್ಯಯ ಮುಂಗಡ ಪತ್ರ ಜಾದೂ ಪೆಟ್ಟಿಗೆ ಅಲ್ಲ. ಹಾಗೇನಾದರೂ ಆಗಿದ್ದರೆ ಈ ರಾಜ್ಯದ ಪ್ರತಿಯೊಬ್ಬ ನಾಗರೀಕನಿಗೂ ಅವನ ಆಶೆ ಆಕಾಂಕ್ಷೆ ಬಯಕೆ ಏನೇನು ಇದೆಯೋ ಅದನ್ನೆಲ್ಲಾ ಪೂರೈಸತಕ್ಕಂಥ ಉಪಾಯವನ್ನು ಹೊರಗಡವಿನ ಬಹುದಾಗಿತ್ತು. ಆಯವ್ಯಯ ಮುಂಗಡ ಪತ್ರ ಕೇವಲ ಅಂಕೆ ಸಂಖ್ಯೆಗಳ ಜಂಜಾಟವಲ್ಲ. ಮಾನ್ಯ ಸದಸ್ಯರು ತಿಳಿದಿರುವ ಹಾಗೆ ನಾನು ಈ ಮಾನ್ಯ ಸಭೆಗೆ ಒಪ್ಪಿಸುತ್ತಾ ಇರತಕ್ಕದ್ದು ನಾಲ್ಕನೆಯ ಆಯವ್ಯಯ ಮುಂಗಡ ಪತ್ರ. ಈ ಆಯವ್ಯಯ ಮುಂಗಡ ಪತ್ರವನ್ನು ಕುರಿತು ತಯಾರು ಮಾಡಿದಂತಹ ಭಾಷಣದಲ್ಲಿ ಆದಷ್ಟು ಮಟ್ಟಿಗೆ ತಾಂತ್ರಿಕ ಜಂಜಾಟವನ್ನು ತಪ್ಪಿಸುವುದಕ್ಕೆ ನಾನು ಪ್ರಯತ್ನ ಮಾಡಿದ್ದೇನೆ. ಮತ್ತು ನಮ್ಮ ಹತ್ತಿರ ಎಷ್ಟರಮಟ್ಟಿಗೆ ಸಾಧ್ಯವೋ ಅಷ್ಟರಮಟ್ಟಿಗೆ ಮಾನ್ಯ ಸದಸ್ಯರಿಗೆ ಇಂದಿನ ಆರ್ಥಿಕ ಸ್ಥಿತಿಯನ್ನು ಸರಿಯಾಗಿ ತಿಳಿದುಕೊಳ್ಳುವುದಕ್ಕೆ ಅನುಕೂಲವಾಗುವಂತೆ, ಸಹಾಯಕವಾಗುವಂತೆ ಅನೇಕ ಮಾಹಿತಿಯನ್ನು ಮತ್ತು ಲಿಟರೇಚರ್ ಅನ್ನು ಇದರ ಜೊತೆಗೆ ಇಟ್ಟಿದ್ದೇನೆ. ಮಾನ್ಯ ಸದಸ್ಯರು ಯಾರಾದರೂ ಆಯವ್ಯಯ ಮುಂಗಡ ಪತ್ರ ರಾಮ್ಯಕ್ಕೆ ಬೇಕಾದಂತಹ ಎಲ್ಲಾ ಕೆಲಸಗಳನ್ನೂ ಮಾಡತಕ್ಕಂಥ ಒಂದು ಕಾರ್ಯಕ್ರಮ ಎಂದು ತಿಳಿದುಕೊಂಡಿದ್ದರೆ ಅದು ಸರಿಯಲ್ಲ ಎಂದು ನಾನು ನವ್ರತೆಯಿಂದ ಹೇಳುವುದಕ್ಕೆ ಬಯಸುತ್ತೇನೆ. ಆರ್ಥಿಕ ಪರಿಸ್ಥಿತಿಯ ಚೌಕಟ್ಟಿನಲ್ಲಿ ಆದಷ್ಟು ಮಟ್ಟಿಗೆ ವಾಸ್ತವಿಕವಾದ ಅಂದಾಜು ಸಭೆಯಮುಂದೆ ಇಡುವುದು ಇದರ ಉದ್ದೇಶ. ಈ ಉದ್ದೇಶವನ್ನು ಗಮನದಲ್ಲಿಟ್ಟುಕೊಂಡು ಚರ್ಚೆ ಯಾದರೆ ಅದರಿಂದ ನಮ್ಮ ಸಮಸ್ಯೆಗಳ ಮೇಲೆ ಹೆಚ್ಚಿನ ಬೆಳಕನ್ನು ಚೆಲ್ಲುವುದಕ್ಕೆ ಸಾಧ್ಯವಾಗುತ್ತದೆ. ಈ ಸಂದರ್ಭದಲ್ಲಿ ಕೆಲವು ಸ್ಥಾನಿಕ ಸಮಸ್ಯೆಗಳ ನ್ಯಾಗಲೀ ಅಥವಾ ಇನ್ನಿತರ ಸಮಸ್ಯೆಗಳನ್ನು ಆಗಲೀ ಚರ್ಚೆ ಮಾಡಿದರೆ ಅದು ಅಪ್ರಾಸಂಗಿಕವಾಗುತ್ತದೆ. ಇಷ್ಟೇ ಅಲ್ಲ, ಏನಾಕಾರಣ ನಮ್ಮ ಸಮಯದ ವ್ಯಯವಾದಂತಾಗುತ್ತದೆ. ಮೈಸೂರು ರಾಜ್ಯದ ಸುಂದರವಾದ ನೈಸರ್ಗಿಕ ಸಂಪತ್ತಿನ ದೃಷ್ಟಿಯಿಂದ ನೋಡುವುದಾದರೆ ಬೇರೆ ಯಾವುದೇ ರಾಜ್ಯಗಳಿಗೆ ಕಡಿಮೆಯಿಲ್ಲ. ನಮಗೆ ನೀರಿನ ಸಂಪತ್ತು ಇದೆ, ಅರಣ್ಯ ಸಂಪತ್ತು ಇದೆ, ಭೂಮಿ ಸಂಪತ್ತು ಇದೆ, ಭೂಗರ್ಭದ ಸಂಪತ್ತು ಇದೆ, ಸಮುದ್ರದ ಸಂಪತ್ತು ಇದೆ, ಸಮುದ್ರದ ಗರ್ಭದಲ್ಲಿರುವ ಸಂಪತ್ತು ಇದೆ. ಇದು ಎಲ್ಲರಿಗೂ ತಿಳಿದಿರುವ ಸಮಾಚಾರ. ಆದರೆ ಇದನ್ನು ಹೊರತೆಗೆದು ಜನತೆಯ ಕಲ್ಯಾಣದ ದೃಷ್ಟಿಯಿಂದ ಯಾವ ರೀತಿ ಮತ್ತು ಎಷ್ಟು ಬೇಗ

ಕಾರ್ಯಕ್ರಮ ಹಾಕಿಕೊಳ್ಳಬೇಕು ಎಂಬುದೇ ಸರ್ಕಾರದ ಕಾರ್ಯಕ್ರಮ ಮತ್ತು ಆದರ್ಶ. ಆ ದೃಷ್ಟಿಯಿಂದ ನಾವು ಅಳತೆ ಮಾಡಿ ನೋಡುವುದಾದರೆ ನಮಗೆ ಇರತಕ್ಕಂಥ ವಿಶಿಷ್ಟವಾದ ಸೀಮೆ, ಮೇರೆಯನ್ನು ನೋಡಿದರೆ ನಮ್ಮ ಸಂಪತ್ತಿನ ಶಕ್ತಿಯನ್ನು ನೋಡಿದರೆ ನಾವು ಇಲ್ಲಿಯವರೆಗೂ ಮಾಡಿರುವ ಸಾಧನೆ ನೋಡಿದರೆ ನಾವು ಅಷ್ಟೊಂದು ಅವಹೇಳನಕ್ಕೆ ಕಾರಣರಾಗಿಲ್ಲವೆಂದು ಪ್ರಾರಂಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಈ ದೇಶದಲ್ಲಿ ಬಡತನ ದೂರವಾಗಿಲ್ಲ. ಈ ದೇಶದಲ್ಲಿ ನಿರುದ್ಯೋಗಿತನ ಬಹಳ ಇದೆ. ಈ ದೇಶದಲ್ಲಿ ನಿರಕ್ಷರತನ ಇನ್ನೂ ಇದೆ. ಸಾಮಾನ್ಯವಾದಂಥ ಜನರಿಗೆ ಹೊಟ್ಟೆತುಂಬಾ ಅನ್ನ, ಮೈತುಂಬಾ ಬಟ್ಟೆ, ವಾಸಕ್ಕೆ ಮನೆಯನ್ನು ಇನ್ನೂವರೆಗೆ ಕೊಡುವುದಕ್ಕೆ ನಮಗೆ ಸಾಧ್ಯವಾಗಿಲ್ಲ. ಈ ವಿಚಾರವನ್ನು ಆ ಕಡೆ ಕುಳಿತಿರುವವರು ಹೇಳುವ ಅಗತ್ಯವಿಲ್ಲ. ಅದನ್ನು ನಾವೇ ತಿಳಿದುಕೊಂಡಿದ್ದೇವೆ. ಮತ್ತು ಅದನ್ನು ಒಪ್ಪಿಕೊಂಡಿದ್ದೇವೆ. ಆದರೆ ಒಂದೇ ಉಸಿರಿನಲ್ಲಿ ಎಲ್ಲಾ ಕೆಲಸಗಳು ಆಗಬೇಕು, ಹೊರದೇಶಗಳಿಂದ ಸಹಾಯ ತರಬಾರದು, ಎಲ್ಲಾ ಕೆಲಸಗಳಿಗೂ ಸಾಕಷ್ಟು ಹಣ ಒದಗಿಸಬೇಕು, ಎಂದರೆ ಇದೆಲ್ಲಾ ಜಾದೂಗಾರನಿಗೆ ಸಾಧ್ಯವಾಗುತ್ತದೆಯೇ ಹೊರತು, ಈ ರಾಜ್ಯದ ಆರ್ಥಿಕ ಮಂತ್ರಿಗಳಿಗಾಗಲೀ, ಕೇಂದ್ರದ ಆರ್ಥಿಕ ಮಂತ್ರಿಗಳಿಗಾಗಲೀ, ಕೇಂದ್ರದ ಪ್ರಧಾನ ಮಂತ್ರಿಗಳಿಗಾಗಲೀ ಸಾಧ್ಯವಾಗುವುದಿಲ್ಲ. ಉದಾಹರಣೆಗೆ ಹೇಳುವುದಾದರೆ, ಇಲ್ಲಿ ಬಂದಂಥ ಟೀಕೆಗಳನ್ನು ಗಮನಿಸಿದರೆ, ಇದು ಕೊರತೆಯ ಮುಂಗಡ ಪತ್ರ ಎಂದು ಹೇಳುವುದು ಒಂದು ಟೀಕೆ, ಕೊರತೆಯ ಮುಂಗಡಪತ್ರವಾಗಬಾರದು ಉಳಿತಾಯದ ಮುಂಗಡಪತ್ರವಾಗಬೇಕು, ಹೊಸ ತೆರಿಗೆ ಹಾಕಬಾರದು, ಸಾಧ್ಯವಾದರೆ ಇರುವ ತೆರಿಗೆಯನ್ನು ಕಡಿಮೆ ಮಾಡಬೇಕು, ಅದು ಕಂದಾಯವಾಗಲೀ, ವಾಟರ್ ರೇಟ್ ಆಗಲಿ ಅಥವಾ ಮತ್ತೊಂದೇ ಆಗಲೀ ಎಂದು ಹೇಳುವುದು ಒಂದು ಟೀಕೆ. ಅದೇ ರೀತಿಯಲ್ಲಿ ಕೇಂದ್ರದಿಂದ ಹೆಚ್ಚು ಸಾಲ ತರಬಾರದು, ನಮ್ಮ ಮಕ್ಕಳನ್ನು ಬಡ್ಡಿಮಕ್ಕಳನ್ನಾಗಿ ಮಾಡಬಾರದು, 120 ಕೋಟಿ ರೂಪಾಯಿಗಳ ಯೋಜನೆಗೆ ಕೇವಲ 2 ಕೋಟಿ ರೂಪಾಯಿಗಳನ್ನು ಒದಗಿಸಿರುವುದು ಸಾಲದು. ಹೇಮಾವತಿ ಯೋಜನೆಗೆ 50 ಲಕ್ಷ ರೂಪಾಯಿಗಳನ್ನು, ಹಾರಂಗಿಗೆ 3 ಲಕ್ಷ ರೂಪಾಯಿಗಳನ್ನು ಒದಗಿಸಿರುವುದು ಸಾಲದು, ಇನ್ನಿತರ ವೀಡಿಯಂ ಮತ್ತು ಮೇಜರ್ ಪ್ರಾಜೆಕ್ಟ್‌ಗಳಿಗೆ ಸಾಕಷ್ಟು ಹಣ ಒದಗಿಸಿಲ್ಲವೆಂದು ಹೇಳಿರುವುದು, ಶಿಕ್ಷಣ ಮತ್ತು ಆರೋಗ್ಯ ಇರಾಖೆಗಳಿಗೆ ಒದಗಿಸಿರುವ ಹಣ ಸಾಲದು, ಇನ್ನೂ ಹೆಚ್ಚು ಒದಗಿಸಬೇಕೆಂದು ಕೇಳಿರುವುದು, ಮೀನುಗಾರಿಕೆಯ ಬಗ್ಗೆ ಬೇಕಾದಷ್ಟು ಅವಕಾಶವಿರುವುದರಿಂದ ಈ ಬಗ್ಗೆ ಒದಗಿಸಿರುವ ಹಣ ಸಾಲದು ಎಂದು ಹೇಳುವುದನ್ನು ನೋಡಿದರೆ, ಒಬ್ಬ ಮನುಷ್ಯನನ್ನು ಹಿಮಾಲಯದ ಪರ್ವತದ ಬಳಿ ಕರೆದುಕೊಂಡು ಹೋಗಿ ಅವರ ಕೈಕಾಲು ಕಟ್ಟಿ, ಒಂದು ಮರಕ್ಕೆ ಕಟ್ಟಿ ಅವನನ್ನು ಶಿಖರದ ಮೇಲೆ ಹತ್ತು ಎಂದು ಹೇಳಿದಂತಾಗಿದೆ. ಅವನು ಯಾವ ರೀತಿ ಹತ್ತುವುದಕ್ಕಾಗುತ್ತದೆ?

ಶ್ರೀ ಎಸ್. ಶಿವಪ್ಪ. – ತಮಗೆ ಹಗ್ಗ ಕಟ್ಟಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಒಂದು ಮಾತನ್ನು ಮಾನ್ಯ ಸದಸ್ಯರಲ್ಲಿ ಕಳಕಳಿಯಿಂದ ಪ್ರಾರಂಭದಲ್ಲಿಯೇ ಹೇಳುತ್ತೇನೆ. ಕೇವಲ ರಾಜಕೀಯ ಉದ್ದೇಶದಿಂದ ಆಳುವ ಪಕ್ಷದವರೆಲ್ಲಾ ಟೀಕೆ ಮಾಡುವುದು ಅಗತ್ಯವೆಂದು ಕಂಡುಬಂದರೆ, ಆ ರೀತಿ ಟೀಕೆ ಮಾಡಲಿಕ್ಕೆ ನನ್ನ ಆಕ್ಷೇಪಣೆ ಇಲ್ಲ. ಆದರೆ ಇಂದು ಈ ದೇಶದಲ್ಲಿರುವ ಪರಿಸ್ಥಿತಿ, ನಾಲ್ಕು ವರ್ಷದ ಹಿಂದೆ ಇದ್ದ ಪರಿಸ್ಥಿತಿ ಮತ್ತು 10 ವರ್ಷದ ಹಿಂದೆ ಇದ್ದ ಪರಿಸ್ಥಿತಿಯಂತೆ ಇಲ್ಲ. ಈಗ ಮಾನ್ಯ ಗೋಪಾಲಗೌಡರು ಬಹಳ ಮನನೋಂದು ಮಾತನಾಡಿದರು. ಅವರ ಕಂಠ ಗದ್ಗಿತವಾಗಿತ್ತು. ಬಹಳ ಪ್ರಾಮಾಣಿಕತನದಿಂದ ಮಾತನಾಡಿದರು. ಆ ಬಗ್ಗೆ ಸಂದೇಹ ಇಲ್ಲ. ಅದೇ ತರಹದ ಒಂದು ವೇದನೆ ನಮ್ಮ ಹೃದಯದಲ್ಲಿಯೂ ಇದೆ. ಈ ದೇಶದ ಯೋಜನೆಯನ್ನು ನಾವು ತಯಾರುಮಾಡುವಾಗ, ಅದು ಕೇವಲ ಕಾಂಗ್ರೆಸ್ ಪಕ್ಷದವರು ತಯಾರುಮಾಡುವ ಯೋಜನೆ ಎಂದು ಮಾನ್ಯ ಸದಸ್ಯರುಗಳು ತಿಳಿದುಕೊಂಡಿದ್ದರೆ ಸರಿಯಲ್ಲ. ಯೋಜನೆ ತಯಾರು ಮಾಡಬೇಕಾದರೆ ಆಳುವ ಪಕ್ಷದವರು ಅಲ್ಲದೆ ಪರಿಣತರು ತಜ್ಞರು ಇರುತ್ತಾರೆ, ರಾಷ್ಟ್ರೀಯ ಆಯೋಗ ಇರುತ್ತದೆ, ಇವರುಗಳು ಸೇರಿಕೊಂಡು ಬೇರೆ ಬೇರೆ ಹಂತದಲ್ಲಿ ಬೇರೆ ಬೇರೆ ಮಟ್ಟದಲ್ಲಿ ನಮಗೆ ಲಭ್ಯವಿರತಕ್ಕಂಥ ಸಾಧನ ಸಂಪತ್ತು, ಸಂಪನ್ಮೂಲಗಳ ಒಂದು ಮಿತಿಯಲ್ಲಿ ಒಂದು ಚೌಕಟ್ಟಿನಲ್ಲಿ ಎಷ್ಟರಮಟ್ಟಿಗೆ ನಾವು ಮುಂದಕ್ಕೆ ಹೋಗುವುದಕ್ಕೆ ಸಾಧ್ಯವಿದೆ ಎಂಬ ಬಗ್ಗೆ ಚರ್ಚೆ ನಡೆಸಿ ನಂತರ ಯೋಜನೆಯನ್ನು ತಯಾರು ಮಾಡುತ್ತಾರೆ. ನಂತರ ಅದು ಪಾರ್ಲಿಮೆಂಟ್‌ನಲ್ಲಿ ಅಪ್ರೂವ್ ಆಗುತ್ತದೆ. ಈ ವಿಚಾರವನ್ನು ನಾವು ಮರೆಯಬಾರದು. ಸ್ವಾತಂತ್ರ್ಯ ಬಂದು 22 ವರ್ಷಗಳಾದವು. ಈ 22 ವರ್ಷಗಳಲ್ಲಿ ನಾವು ಎಲ್ಲ ಜನರಿಗೆ ಸಾಕಷ್ಟು ಆಹಾರವನ್ನು ಬೆಳೆಯುವುದಕ್ಕೆ ಏತಕ್ಕೆ ಸಾಧ್ಯವಾಗಿಲ್ಲ ಎಂಬುದನ್ನು ಯೋಚನೆ ಮಾಡಬೇಕು. ಕೇವಲ ವ್ಯವಸಾಯ ಕ್ಷೇತ್ರದಲ್ಲಿ ಉತ್ಪಾದನೆ ಹೆಚ್ಚು ಆಗಲಿಲ್ಲ ಎಂಬುದು ಒಂದೇ ಕಾರಣ

(ಶ್ರೀ ರಾಮಕೃಷ್ಣ ಹೆಗಡೆ)

ವಲ್ಲ. ಅದಕ್ಕಿಂತ ಬಲವತ್ತರವಾದ ಕಾರಣವೆಂದರೆ ನಮಗೆ ಸ್ವಾತಂತ್ರ್ಯ ಬಂದಾಗ ಈ ದೇಶದಲ್ಲಿ 30 ಕೋಟಿ ಜನರು ಇದ್ದರೆ ಈಗ 52-53 ಕೋಟಿ ಜನರು ಇವ್ವಾರೆ. ಅದನ್ನು ನಾವು ಮರೆಯಬಾರದು. ಶ್ರೀಮಾನ್ ಗೋಪಾಲಗೌಡರಿಗೆ ಈ ವಿಚಾರವನ್ನು ಹೇಳಬಯಸುತ್ತೇನೆ. ಯಾವುದೇ ಒಂದು ದೇಶವ ಆರ್ಥಿಕಾಭಿವೃದ್ಧಿ ಆ ದೇಶ ಹೊರದೇಶಗಳಿಂದ ಆಹಾರ ಪದಾರ್ಥಗಳನ್ನು ತರಿಸುತ್ತದೋ ಇಲ್ಲವೋ ಎನ್ನುವ ಒಂದೇ ಕಾರಣದಿಂದ ನಿರ್ಧಾರವಾಗುವುದಿಲ್ಲ.

8-00 P.M.

ಜಪಾನ್ ಪ್ರಪಂಚದಲ್ಲಿ ಅತಿ ಹೆಚ್ಚಿನ ಔದ್ಯೋಗಿಕ ಪ್ರಗತಿ ಸಾಧಿಸಿದಂತಹ ದೇಶ. ಈ ಹೊತ್ತು ಅವರಿಗೆ ಬೇಕಾಗಿರತಕ್ಕ ನೂರರಲ್ಲಿ ಅರವತ್ತರಷ್ಟು ಪದಾರ್ಥಗಳನ್ನು ಬೇರೆ ಕಡೆಗಳಿಂದ ತರಿಸುತ್ತಿದ್ದಾರೆ. ಆದರೆ ನಮ್ಮ ದೇಶವ ಪರಿಸ್ಥಿತಿ ಎಂತಹುದು ಎಂದರೆ, ನಮ್ಮದೇಶದ ಒಟ್ಟು ರಾಷ್ಟ್ರೀಯ ಆದಾಯ ನೂರರಲ್ಲಿ 50 ರಷ್ಟು ಭಾಗ ವ್ಯವಸಾಯ ಕ್ಷೇತ್ರದಿಂದ ಬರಬೇಕು. ಆದರೆ ವ್ಯವಸಾಯ ಕ್ಷೇತ್ರದಲ್ಲಿ ಕ್ರಾಂತಿ ಎಲ್ಲಿಯವರೆಗೆ ಆಗುವುದಿಲ್ಲವೋ ಅಲ್ಲಿಯವರೆಗೆ ರಾಷ್ಟ್ರೀಯ ಆದಾಯ ಹೆಚ್ಚಾಗುವುದಿಲ್ಲ ಮತ್ತು ನಮ್ಮ ಜನರ ಕಲ್ಯಾಣವಾಗುವುದಿಲ್ಲ ಎನ್ನುವ ವಿಚಾರವನ್ನೂ ನಾವು ಮನಗಂಡಿದ್ದೇವೆ. ನಮ್ಮ ಮೈಸೂರಿನಲ್ಲಿ ಇರುವ ನೈಸರ್ಗಿಕ ಸಂಪತ್ತುಗಳಿಂದ ನಾವು ನಮ್ಮ ಜನರ ಕಲ್ಯಾಣದ ಅಭಿವೃದ್ಧಿ ಮಾಡುವುದಕ್ಕೆ ನ್ಯಾಯಂ ಬದ್ಧವಾದ ಒಂದು ಯೋಜನೆ ಇರಬೇಕು. ಅವನ್ನು ಒಪ್ಪುತ್ತೇನೆ. ಒಂದೇ ಒಂದು ಮಾತನ್ನು ಮಾನ್ಯ ಸದಸ್ಯರ ಗಮನಕ್ಕೆ ತರಬೇಕಾಗಿದೆ. ಇದರಲ್ಲಿರುವ ತೊಂದರೆಗಳೇನು ಎನ್ನುವುದನ್ನು ಇಲ್ಲಿ ವಿಚಾರ ಮಾಡಬೇಕಾಗಿದೆ. ನಮಗೆ ನೀರಾವರಿ ಯೋಜನೆ ಇಲ್ಲದೆ ವ್ಯವಸಾಯ ಕಡಿಮೆಯಾಗಿದೆ. ನೀರು ಏರಿ ಇಲ್ಲದೆ, ಒಣ ನೆಲಕ್ಕೆ ಎಷ್ಟು ಗೊಬ್ಬರ, ಬೀಜಗಳು ಹಾಗೂ ಹೊಸ ಹೊಸ ಯಂತ್ರೋಪಕರಣಗಳನ್ನು ಕೊಟ್ಟರೆ ಅದರಿಂದೇನೂ ಪ್ರಯೋಜನವಾಗುವುದಿಲ್ಲ. ನಮಗೆ ಇರತಕ್ಕ ಒಟ್ಟು ನೀರಾವರಿ ಭೂಮಿ ಒಟ್ಟು ಬೇಸಾಯಕ್ಕೆ ಇರತಕ್ಕ ಕ್ಷೇತ್ರದಲ್ಲಿ ಎಷ್ಟಿದೆ ಎಂದರೆ ನೂರಕ್ಕೆ 9 ಅಥವಾ ಒಂಭತ್ತೂವರೆಯಷ್ಟು ಇದೆ. ರಾಜ್ಯದಲ್ಲಿ ಹರಿಯುವ ನದಿಗಳಿಂದ, ಹಳ್ಳಗಳಿಂದ ಮತ್ತು ಪ್ರವಾಹಗಳಿಂದ ಹಾನಿಯಾಗಿ, ಒಟ್ಟು ನೂರಕ್ಕೆ 20 ಅಥವಾ 25 ರಷ್ಟು ನೀರಾವರಿ ಭೂಮಿ ಸಿಗುತ್ತದೆ. ಇಷ್ಟು ನದಿಗಳು ಹಳ್ಳಗಳು ನಮ್ಮ ರಾಜ್ಯವೊಂದರಲ್ಲೇ ಹರಿಯುತ್ತಿಲ್ಲ. ಬೇರೆ ಬೇರೆ ರಾಜ್ಯಗಳಲ್ಲೂ ಹರಿಯುತ್ತಿವೆ. ಇದರಲ್ಲಿ ನಮ್ಮ ರಾಜ್ಯಕ್ಕೆ ಎಷ್ಟು ನೀರು ಇರಬೇಕು ಬೇರೆ ರಾಜ್ಯಗಳಿಗೆ ಎಷ್ಟು ನೀರು ಹೋಗಬೇಕು ಎನ್ನುವುದರ ಬಗ್ಗೆ ಈ ಹೊತ್ತಿನ ದಿವನ ವಾದವಿವಾದಗಳು ಬಂದಿವೆ. ಸ್ವಲ್ಪಮಟ್ಟಿಗೆ ವಿವೇಕ ಇರುವ ಯಾವ ಇರಿಗೇಷನ್ ಮಂತ್ರಿಯೇ ಆಗಲೀ ರಾಜ್ಯದ ಬೊಕ್ಕಸದಲ್ಲಿ ಇರುವ ಹಣವನ್ನು ನೂರೆಂಟು ಯೋಜನೆಗಳ ಮೇಲೆ ಸರಿಯಾಗಿ ಹಂಚಿದರೆ ಯಾವ ಯೋಜನೆಯೂ ಮುಗಿಯುವುದಿಲ್ಲ. ಯಾವ ಹೊಸ ಯೋಜನೆಯನ್ನು ಮಾಡಬೇಕಾದರೂ ಅವಕ್ಕೆ ದುಡ್ಡು ಬೇಕು. ಇದು ನಮ್ಮಲ್ಲಿ ಮೊದಲಿಗೆ ಉದ್ಭವವಾಗುವ ವಿಚಾರ. ನಾವು ಹಾಕಿಕೊಂಡಿರುವ ಯೋಜನೆಗಳನ್ನು ಮುಗಿಸುವುದಕ್ಕೆ ಆಗುತ್ತಿಲ್ಲ. ಎಲ್ಲಿಯವರೆಗೆ ಯೋಜನೆಗಳು ಸಂಪೂರ್ಣವಾಗಿ ಮುಗಿಯುವುದಿಲ್ಲವೋ ಅಲ್ಲಿಯವರೆಗೆ ಸರಕಾರಕ್ಕೆ ಹಾಗೂ ಜನರಿಗೆ ಅಭಿವೃದ್ಧಿ ಮಾಡಲಾಗುವುದಿಲ್ಲ. ಮಾನ್ಯ ಸದಸ್ಯರು ಒಂದು ವಿಚಾರ ಗಮನದಲ್ಲಡಬೇಕು. ನಮ್ಮ ರಾಜ್ಯವೊಂದೇ ನೀರಾವರಿ ಯೋಜನೆಗಳನ್ನು ಕೈಗೊಳ್ಳುತ್ತಿಲ್ಲ. ಸುಮಾರು 30-35 ರಾಜ್ಯದಲ್ಲಿ ದೊಡ್ಡ ದೊಡ್ಡ ನೀರಾವರಿ ಯೋಜನೆಗಳನ್ನು ಹಾಗೂ ಪ್ರಾಜೆಕ್ಟ್‌ಗಳನ್ನು ಕೈಗೊಂಡಿದ್ದಾರೆ. ಇದಕ್ಕೆ ಬೇಕಾದ ಹಾಗೆ ಖರ್ಚು ಮಾಡಬೇಕೆಂದು ನಿಗದಿ ಮಾಡಿದ್ದಾರೆ. ಖರ್ಚೂ ಕೂಡ ಸುಮಾರು 250 ಕೋಟಿಯವರೆಗೆ ಆಗಬಹುದು. ನಾವು ಇಷ್ಟೆಲ್ಲಾ ಯೋಜನೆಗಳನ್ನು ಕೈಗೊಂಡರೂ ಸಾಕಷ್ಟು ಪ್ರತಿಫಲ ಇನ್ನೂ ದೊರೆತಿಲ್ಲ. ಇದಕ್ಕೆ ಕಾರಣವೇನು ಎನ್ನುವುದನ್ನು ಯೋಚನೆ ಮಾಡಬೇಕು. ಒಂದು ವಿಚಾರ ಇಲ್ಲಿ ಮರೆಯಬಾರದು ಈ ನದೀ ನೀರಿನ ಯೋಜನೆಗಳನ್ನು ಕೈಗೊಳ್ಳದೇ ಹೋದರೆ ಎಲ್ಲಿ ನಮ್ಮ ಹಕ್ಕು ಹೋಗುತ್ತದೋ ಎನ್ನುವ ಭಯವೂ ಇದೆ ಮತ್ತು ಎರಡನೇದು ಇದಕ್ಕೆ ರಾಜಕೀಯ ಒತ್ತಡವೂ ಇದೆ. ಇವೊತ್ತು ನೀರಾವರಿ ಮಾಡುತ್ತಿರುವ ಯೋಜನೆಗಳಲ್ಲಿ ನೂರಕ್ಕೆ 50 ರಷ್ಟು, ನೂರಕ್ಕೆ 70 ರಷ್ಟು ನೂರಕ್ಕೆ 80 ರಷ್ಟು ಎಂದು ಹಣ ಕೊಡುತ್ತಾ ಹೋದರೆ ಬಾಕಿ ಇತರ ಯೋಜನೆಗಳಿಗೆ ಹಣವನ್ನು ತರುವುದಾದರೂ ಎಲ್ಲಿಂದ? ಇವನ್ನೆಲ್ಲಾ ಮುಗಿಸಿದಮೇಲೆ ಇತರ ನೀರಾವರಿಯೋಜನೆಗಳನ್ನು ತೆಗೆದುಕೊಂಡರೆ ಇದರ ಪ್ರತಿಫಲ ಸುಮಾರು 2-3-4 ವರ್ಷಗಳಲ್ಲ ಸಿಗುತ್ತದೆ. ಬಾಕಿ ಇರುವ ಇತರ ಯೋಜನೆಗಳನ್ನು ಇನ್ನು ಐದು ಹತ್ತು ವರ್ಷಗಳಾದ್ದಾದರೂ ಮುಗಿಸಬಹುದು. ಇವೊತ್ತು ನಮ್ಮ ಮೈಸೂರಿಗೆ ಬಂದಿರತಕ್ಕ

ಒಂದು ದೊಡ್ಡ ಸಮಸ್ಯೆ ಏನೆಂದರೆ ಒಂದು ಕಡೆಗೆ ಇರುವ ನೀರನ್ನು ಉಪಯೋಗಿಸಿಕೊಳ್ಳದೇ ಹೋದರೆ ನಮಗೆ ನೀರಿನ ಮೇಲಿರುವ ಹಕ್ಕು ಹೋಗುತ್ತದೆ. ಮತ್ತೊಂದು ಕಡೆ ಮಾನ್ಯ ಸದಸ್ಯರು ಹೇಳುತ್ತಾರೆ ನಾವು ಇಷ್ಟು ದುಡ್ಡು ಹಾಕಿದರೂ ಇದರಿಂದ ಯಾವ ಪ್ರಯೋಜನವೂ ಸಿಗುವುದಿಲ್ಲ ಮತ್ತು ರೈತರಿಗೆ ಏನಾದರೂ ಅನುಕೂಲವಾಗುತ್ತದೆ ಎಂದರೆ ಏನೂ ಇಲ್ಲ, ರೈತರ ಒಕ್ಕಲುತನಕ್ಕೆ ಹಾಗೂ ಹಕ್ಕುಬಾಧ್ಯತೆಗೆ ಚ್ಯುತಿಬರುತ್ತಿದೆ. ಯಾವ ಅನುಕೂಲಗಳೂ ಆಗುತ್ತಿಲ್ಲ ಎಂದು ಹೇಳುತ್ತಾರೆ ಮತ್ತು ಯಾವ ಯೋಜನೆಗಳಿಗೆ ಹಣ ಹಾಕಿದರೂ ಅದರಿಂದ ಬರಬೇಕಾದ ಪ್ರತಿಫಲ ಬರುತ್ತಿಲ್ಲ, ಇನ್ನೊಂದು ಕಡೆ ರೈತರು ಬಹಳ ದಿನಗಳಿಂದಲೂ ನೀರನ್ನು ಉಪಯೋಗಿಸುತ್ತಿದ್ದಾರೆ ಅದಕ್ಕೆ ತಕ್ಕಂತೆ ಬೆಟರ್‌ಮೆಂಟು ಫೀಗಳನ್ನು ಹಾಗೂ ಇತರ ಕಂದಾಯಗಳನ್ನು ಕೊಡುತ್ತಿದ್ದಾರೆ ಅದರೆ ಅವರಿಗೆ ಸರಿಯಾದ ಫಲ ಸಿಗುತ್ತಿಲ್ಲ ಎಂದು, ಇಪೆಲ್ಲಾ ವಿಚಾರಗಳನ್ನು ಮಾನ್ಯ ಸದಸ್ಯರು ಗಮನದಲ್ಲಿ ಇಟ್ಟುಕೊಳ್ಳಲಿ ಎಂದು ನಾನು ಇಲ್ಲಿ ಹೇಳುತ್ತಿದ್ದೇನೆ.

Sri H. N. NANJE GOWDA.—I would suggest to you to cut down the other expenditure and earmark Rs. 25 Crores for Irrigation purposes, Sir.

ಶ್ರೀ ರಾಮಕೃಷ್ಣ ಹೆಗಡೆ.—ಅ ಕೆಲಸ ಮಾಡಿಲ್ಲ. ತಾವು ಇಲ್ಲಿ ಒಂದು ನಿರ್ಣಯ ಮಾಡಿ, ಇಷ್ಟು ಶಾಲೆಗಳನ್ನು ಶಿಕ್ಷಣಕ್ಕಾಗಿ ತೆಗೆಯಬೇಕಾಗಿಲ್ಲ ಮತ್ತು ಹೊಸ ಹೊಸ ಹೈಸ್ಕೂಲುಗಳನ್ನು ಹಾಗೂ ಹೈಮರಿ ಶಾಲೆಗಳನ್ನು ತೆರೆಯುವುದು ಅವಶ್ಯಕವಿಲ್ಲ ಮತ್ತು ಇಂತಹ ಕೆಲಸಗಳಿಗೆ ಈಗ ದುಡ್ಡು ಕೊಡುವ ಅಗತ್ಯವಿಲ್ಲ ಮತ್ತು ಹೊಸದಾಗಿ ಯಾವ ನೀರಾವರಿ ಯೋಜನೆಗಳನ್ನು ತೆಗೆಯುತ್ತೀರೋ ಅದಕ್ಕೆ ಹಣ ಕೊಡಿ ಎಂದು ನಿರ್ಧಾರ ಮಾಡಿ, ಅದಕ್ಕೆ ದುಡ್ಡು ಕೊಡಲು ನನ್ನ ಆಕ್ಷೇಪಣೆ ಇಲ್ಲ. ಎಲ್ಲ ದುಡ್ಡನ್ನೂ ಅಲ್ಲಿಗೆ ಹಾಕೋಣ ಮತ್ತು ಅಲ್ಲಿ ವಿನಿಯೋಗಿಸೋಣ.

ಶ್ರೀ ಕೆ. ಹೆಚ್. ರಂಗನಾಥ್.—ಯೋಜನೆಗಳನ್ನು ಮಾಡುವಾಗ ಆಗಿಂದಾಗ್ಗೆ ಪ್ಲಾನುಗಳು ಮತ್ತು ಅಂದಾಜುಗಳನ್ನು ಬದಲಾವಣೆ ಮಾಡುತ್ತಾರೆ ಮತ್ತು ಇದರಿಂದಾಗಿ ವರ್ಷ ವರ್ಷಕ್ಕೂ ಎಸ್ಟಿಮೇಟುಗಳ ರೆಕ್ಕ ಹೆಚ್ಚಾಗುತ್ತಾ ಇರುತ್ತವೆ. ಇದಕ್ಕೆಲ್ಲಾ ಕಾರಣರು ಯಾರು ?

ಶ್ರೀ ರಾಮಕೃಷ್ಣ ಹೆಗಡೆ.—ಯೋಜನೆಗಳನ್ನು ಏಕೆ ಮುಗಿಸಲಿಲ್ಲ ಎನ್ನುವುದಕ್ಕೆ ಬೇಕಾದಷ್ಟು ಕಾರಣಗಳನ್ನು ಕೊಡಬಹುದು. ಹಿಂದೆ 15–20 ವರ್ಷಗಳ ಹಿಂದೆ ಏಕೆ ಆಗಲಿಲ್ಲ ಎನ್ನುವುದನ್ನು ಕೇಳಬೇಕಾದರೆ ಹಿರಿಯರು ನಮ್ಮ ತಾತಂದಿರು ಹಾಗೂ ಅಜ್ಜಂದಿರನ್ನು ಕೇಳಬೇಕಾಗುತ್ತದೆ. ಆಗ ಅವರು ಇದಕ್ಕೆಲ್ಲಾ ಕಾರಣವೇನು ಎನ್ನುವುದಕ್ಕೆ ಉತ್ತರ ಕೊಡಲು ತಯಾರಾಗಿದ್ದರು. ಈ ತರಹ ವಾದಗಳನ್ನು ಹೇಳುವುದರಿಂದೇನೂ ಪ್ರಯೋಜನವಾಗುವುದಿಲ್ಲ. ಅಂದು ನಮ್ಮ ರಾಜ್ಯದ ಹಣಕಾಸಿನ ಪರಿಸ್ಥಿತಿ ಇಷ್ಟೊಂದು ಹದಗೆಟ್ಟಿದೆ ಎಂದು ನಾನು ಹೇಳುತ್ತಿಲ್ಲ. ನಾನು ಮೊದಲೇ ಹೇಳಿದ ಹಾಗೆ ನಾನು ಈ ಮನೆಯಲ್ಲಿ ಮಂಡಿಸುತ್ತ ಇರುವ ಈ ಬಡ್ಜೆಟ್ಟು ನಾಲ್ಕನೆಯದು. ಇದಕ್ಕೆ ಮೊದಲು ಮೂರು ಬಡ್ಜೆಟ್ಟುಗಳು ಇಲ್ಲಿ ಬಂದಿದ್ದವು. ಹಿಂದೆ ನಮ್ಮ ರಾಜ್ಯದ ವರಮಾನ ಒಟ್ಟು ನೂರ ಇಪ್ಪತ್ತು ಕೋಟಿಗಿಂತಲೂ ಕಡಿಮೆ ಇತ್ತು. ಸುಮಾರು 110 ರಿಂದ 120 ಕೋಟಿ ರೂಪಾಯಿಯೊಳಗೆ ಇತ್ತು. ಈಗ ಇದು ಸುಮಾರು 213 ಕೋಟಿಯವರೆಗೆ ಏರಿದೆ. ಈ ರಾಜ್ಯದ ವರಮಾನ ಎಷ್ಟು ನಿರೀಕ್ಷೆಗಿನ ಬಹುದೋ ಅಷ್ಟೂ ಏರಿದೆ ಮತ್ತು ಮಾನ್ಯ ಸದಸ್ಯರು ಒಪ್ಪಿಕೊಂಡಂತೆ ಟ್ಯಾಕ್ಸನ್ನು ಹೆಚ್ಚು ಮಾಡಿರುವುದರಿಂದ ಇಷ್ಟು ವರಮಾನ ಬರಲು ಕಾರಣವಾಯಿತು ಎಂದು ಹೇಳಬಹುದು.

ಶ್ರೀ ಕೆ. ಹೆಚ್. ರಂಗನಾಥ್.—ಟ್ಯಾಕ್ಸ್ ಪೇಯಿಂಗ್ ಕೆಪಾಸಿಟಿ ಜಾಸ್ತಿಯಾಯಿತು ಎನ್ನುವುದನ್ನು ತಾವು ಇಲ್ಲಿ ಹೇಳಲಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಟ್ಯಾಕ್ಸ್ ಪೇಯಿಂಗ್ ಕೆಪಾಸಿಟಿ ಜಾಸ್ತಿಯಾಯಿತು ಎನ್ನುವುದಲ್ಲ. ಇದರಲ್ಲಿ ಎರಡು ವಿಷಯಗಳು ನ್ಯಯಂಸಿದ್ಧವಾದುದು. ಮೊದಲನೆಯದು ಉತ್ಪಾದನೆ ಹೆಚ್ಚಿದೆಯೇ ಹೇಗೆ ಮತ್ತು ಟ್ಯಾಕ್ಸ್‌ಗಳಿಂದ ಬರುತ್ತಿರುವ ವರಮಾನ ಹೆಚ್ಚಾಗಿದೆಯೇ ? ಇದರಲ್ಲಿ ಮೊದಲನೆಯದನ್ನು ತೆಗೆದುಕೊಂಡರೆ ಲ್ಯಾಂಡ್ ರೆವೆನ್ಯೂ ಹಿಂದೆ ಹೆಚ್ಚಾಗಿರಲಿಲ್ಲ ಮತ್ತು ಅಗ್ರಿಕಲ್‌ಚರಲ್ ಇನ್‌ಕಂ ಟ್ಯಾಕ್ಸ್ ಹಾಗೂ ಇತರ ಟ್ಯಾಕ್ಸ್‌ಗಳು ಹೆಚ್ಚಾಗಿರಲಿಲ್ಲ. ಇದರಲ್ಲಿ ಮತ್ತೊಂದು ಏನಾಗಿದೆ ಎಂದರೆ ಸರಕಾರದಲ್ಲ ಈಗ ಅಗಿರುವಂತೆ ನಿರ್ದಿಷ್ಟವಾದ ಸಾಧನೆಗಳು ಮೊದಲು ಆಗಿರಲಿಲ್ಲ. ಟ್ಯಾಕ್ಸ್ ಕಲೆಕ್ಷನ್ ಮೆಷಿನರಿಯಲ್ಲಿ ಸ್ವಲ್ಪಮಟ್ಟಿನ ಸುಧಾರಣೆಯಾಗಿದೆ. ಇದು ಇಲ್ಲದಿದ್ದರೆ ಕೇವಲ ನಾಲ್ಕೈದು ವರ್ಷಗಳ ಹಿಂದೆ ಸುಮಾರು 12–13 ಕೋಟಿಯಷ್ಟು ಬರುತ್ತಿದ್ದ ಉತ್ಪತ್ತಿ ಇಂದು ಸೇಲ್ಸ್ ಟ್ಯಾಕ್ಸ್ ಬಾಬುಗಳಿಂದ 30 ಕೋಟಿಯವರೆಗೆ ಬರುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ.

ಶ್ರೀ ಎಸ್. ಶಿವಪ್ಪ.—ರೇಟುಗಳನ್ನು ಜಾಸ್ತಿ ಮಾಡಿದಿರಿ. ಅವಕ್ಕೆ ತಕ್ಕಂತೆ ಬಂದಿದೆ.

ಶ್ರೀ ರಾಮಕೃಷ್ಣ ಹೆಗಡೆ.—ಎಷ್ಟು ಜಾಸ್ತಿ ಮಾಡಿದೆ ಎನ್ನುವ ಲೆಕ್ಕಗಳಿಲ್ಲ ಇದೆ. ಅದನ್ನು ತಾವು ನೋಡಬಹುದು. ನಾನು ಇಲ್ಲಿ ಮಾನ್ಯ ಸದಸ್ಯರಿಗೆ ರಾಜ್ಯದ ಒಂದು ಚಿತ್ರವನ್ನು ಕೊಡಲಕ್ಕೆ ಬಯಸುತ್ತೇನೆ. ನಮ್ಮ ರಾಜ್ಯದ ಹಣಕಾಸಿನ ಪರಿಸ್ಥಿತಿ ರೆವೆನ್ಯೂ ಸ್ಟೈಡ್‌ನಲ್ಲಿ ಏನಿತ್ತು, ಯೋಜನೆಗಳು ಯಾವ ರೀತಿ ಇತ್ತು, ಇವನ್ನೆಲ್ಲಾ ಒಂದೇ ಸಾರಿಗೆ ಬದಲಾವಣೆ ಮಾಡುವುದಕ್ಕಾಗುವುದಿಲ್ಲ. ಇದನ್ನು ವಿವೇಚನೆಗೆ ತೆಗೆದುಕೊಂಡರೆ ನಮ್ಮ ಕ್ಯಾಪಿಟಲ್ ಎಕ್ಸ್‌ಪೆಂಡಿಚರಿಗಾಗಿ ನಾವು ಎಷ್ಟು ಖರ್ಚು ಮಾಡಿದರೂ ಸಾಲದು. ಇನ್ನೂ ಇದರ ಅವಶ್ಯಕತೆ ಇದೆ ಮತ್ತು ಹೆಚ್ಚು ಉದ್ದಿಮೆಗಳನ್ನು ಮಾಡುವುದೂ ಇದೆ. ಇದಕ್ಕಾಗಿ ಪ್ರತಿ ವರ್ಷ ಎಷ್ಟು ಖರ್ಚು ಮಾಡಬೇಕು ಎಂದು ಹಾಕಿಕೊಂಡಿದ್ದೀವೋ ಅದಕ್ಕಿಂತ ಹೆಚ್ಚು ಖರ್ಚು ಮಾಡಬೇಕು ಎನ್ನುವ ಒಂದು ಅಂದಾಜೂ ಇತ್ತು.

ಈ ವರ್ಷ ಪ್ಲಾನಿಂಗ್ ಕಮೀಷನ್ನಿನವರು 50 ಕೋಟಿ ರೂಪಾಯಿ ಕೊಡುತ್ತೇವೆ ಎಂದು ಒಪ್ಪಿಕೊಂಡು ಅನಂತರ ಆಗುವುದಿಲ್ಲ ಎಂದು ಹೇಳಿದರು. ನಾವು ಹೇಳಿದವು ಹೊದನಲ 36–37 ಕೋಟಿ ರೂಪಾಯಿ ಸೆಂಟ್ರಲ್ ಗೌರ್ನಮೆಂಟ್ ಅಸಿಸ್ಟೆನ್ಸ್ ಕೊಟ್ಟಿದ್ದರು ಈ ವರ್ಷ 50 ಕೋಟಿ ರೂಪಾಯಿಗಿಂತ ಒಂದು ಕಾಸು ಕಡಿಮೆ ಕೊಟ್ಟರೂ ತೆಗೆದುಕೊಳ್ಳುವುದಿಲ್ಲ ಎಂದು ಅವರ ಹತ್ತಿರ ಆಗ್ರ್ಯೂ ಮಾಡಿದ ಮೇಲೆ ಅವರು ಒಪ್ಪಿದರು. ಅದರಂತೆ ನಾವು ಸ್ಟೇಟ್ ಪ್ಲಾನ್ ಸೈಜ್‌ನ್ನು 56 ಕೋಟಿ ರೂಪಾಯಿ ಮಾಡಿದ್ದೆವು. ಆದರೆ ಇಲ್ಲಿ ಬಂದು ಯಾವ ಯಾವ ಬಾಬುಗಳಿಗೆ ಎಷ್ಟು ಹಣವನ್ನು ಒದಗಿಸಬೇಕು ಎಂದು ನೋಡಿದಾಗ ಸ್ಟಿಲ್ ಓವರ್ ಸ್ಕೀಂ ಒಂದನ್ನೇ ಪರಿಗಣನೆಗೆ ತೆಗೆದುಕೊಂಡರೆ 56 ಕೋಟಿ ರೂಪಾಯಿ ಆಯಿತು. ಬಾಕಿ ಇತರ ಬೇರೆ ಬೇರೆ ಬಾಬುಗಳಿಗೆ ಹಂಚಲು ಸಾಧ್ಯವಿಲ್ಲವಾಯಿತು. ಆದುದರಿಂದ ಇದನ್ನು 62 ಕೋಟಿ ರೂಪಾಯಿಗೆ ಏರಿಸಲು ಪ್ರಯತ್ನ ಮಾಡಿದ್ದೇವೆ. ಆದುದರಿಂದ ಮಾನ್ಯ ಸದಸ್ಯರು ನಾನು ಕೊಟ್ಟಿರುವ ಅಂಕಿಸಂಖ್ಯೆಗಳನ್ನು ದಯವಿಟ್ಟು ನೋಡಿದ್ದರೆ ನನ್ನ ಕೆಲಸ ಇನ್ನೂ ಸುಲಭವಾಗುತ್ತಿತ್ತು. ಕಳೆದ 3 ವರ್ಷದ ಅಂದಾಜು ತೆಗೆದುಕೊಂಡರೆ ಅಂದರೆ 1966–67, 67–68, 68–69ರಲ್ಲಿ ಅಗ್ರಿಕಲ್‌ಚರಲ್ ಪ್ರೋಗ್ರಾಂಗೆ ಒದಗಿಸಿದ ಹಣ 1966–67ರಲ್ಲಿ 15 ಕೋಟಿ 54 ಲಕ್ಷ ರೂಪಾಯಿಗಳು, 1967–68ರಲ್ಲಿ 17 ಕೋಟಿ 49 ಲಕ್ಷ ರೂಪಾಯಿಗಳನ್ನು ಒದಗಿಸಿದ್ದೇವೆ. ಈ ವರ್ಷ ಹೆಚ್ಚು ಕಡಿಮೆ ಅಷ್ಟೇ ಪೊಬಲಗನ್ನು ಒದಗಿಸಿದ್ದೇವೆ. ಮೊದಲನೇ ವಾರ್ಷಿಕ ಯೋಜನೆಯಲ್ಲಿ ಇರ್ರಿಗೇಷನ್ ಮತ್ತು ಪವರ್‌ಗೆ 16½ ಕೋಟಿ ರೂಪಾಯಿ, ಎರಡನೇ ಪ್ಲಾನ್‌ನಲ್ಲಿ 19 ಕೋಟಿ ರೂಪಾಯಿ 36 ಲಕ್ಷ ರೂಪಾಯಿ ಒದಗಿಸಿದ್ದೇವೆ.

ಶ್ರೀ ಎಸ್. ಶಿವಪ್ಪ.—ಈ ಪ್ಲಾನ್ ಸ್ಕೀಂನಿಂದ ರೆವಿನ್ಯೂ ಹೆಚ್ಚಾಗಿ ಬರುವುದಿಲ್ಲವೇ ?

ಶ್ರೀ ರಾಮಕೃಷ್ಣ ಹೆಗಡೆ.—ರೆವಿನ್ಯೂನಲ್ಲಿ ಎಷ್ಟು ಸರಪ್ಲಸ್ ಬರುತ್ತದೋ ಅದನ್ನು ಪ್ಲಾನಿಂಗ್‌ಗೆ ತೆಗೆದುಕೊಳ್ಳುತ್ತೇವೆ. ಕಡೆಯಲ್ಲಿ ರೆವಿನ್ಯೂ ಹೆಚ್ಚಾಗುತ್ತದೆ. ಯಾವರೀತಿ ರೆವಿನ್ಯೂ ಹೆಚ್ಚಾಗುತ್ತದೆಯೋ ಅದೇ ರೀತಿಯಲ್ಲಿ ಪ್ರಾಜೆಕ್ಷನ್ನು ಜಾಸ್ತಿ ಮಾಡುತ್ತಾ ಇದ್ದೇವೆ. ಮೇಂಟೆನೆನ್ಸ್ ಕೂಡ ಜಾಸ್ತಿ ಆಗುತ್ತಾ ಬರುತ್ತೆ. ಇದಕ್ಕೆ ಹೋದವರ್ಷ 31 ಕೋಟಿ ರೂಪಾಯಿ ಒದಗಿಸಿದ್ದರೆ, ಈ ವರ್ಷ 46½ ಕೋಟಿ ರೂಪಾಯಿ ಒದಗಿಸಬೇಕಾದ ಪ್ರಸಂಗ ಬಂತು. ಅದರಲ್ಲಿ ಯಾವ ಪ್ಲಾನಿಂಗ್ ಸ್ಕೀಮೂ ಇಲ್ಲ. ಹೋದವರ್ಷ ಹೆಲ್ತ್‌ಗೆ 7 ಕೋಟಿ ರೂಪಾಯಿ ಒದಗಿಸಿದ್ದರೆ ಈ ವರ್ಷ 10 ಕೋಟಿ ರೂಪಾಯಿ ಒದಗಿಸಿದ್ದೇವೆ. ಈ ಸ್ಕೀಮನ್ನು ರೆವಿನ್ಯೂ ಬಜೆಟ್‌ನಲ್ಲಿ ಸೇರಿಸಕೂಡದು. ನಾನ್ ಪ್ಲಾನ್ ಸ್ಕೀಂಗೂ ಪ್ಲಾನ್ ಸ್ಕೀಂಗೂ ಸೇರಿಸಕೂಡದು. ಇದು ಅವರಿಗೆ ಗೊತ್ತಿದೆ. ಮಾನ್ಯ ಸದಸ್ಯರಿಗೆ ಹೇಳುವುದಾದರೆ ಈ ವರ್ಷವೂ ಕೂಡ ಅಗ್ರಿಕಲ್‌ಚರಲ್ ಮತ್ತು ಇರ್ರಿಗೇಷನ್ ಅಂಡ್ ಪವರ್ ಇವೆರಡಕ್ಕೂ ಅದೇ ಪ್ರಾಮುಖ್ಯತೆಯನ್ನು ಕೊಡುತ್ತಾ ಬಂದಿದ್ದೇವೆ. ಮತ್ತು ಇನ್ನೂ ಹೆಚ್ಚಿನ ಪ್ರಾಮುಖ್ಯತೆಯನ್ನು 4ನೇ ಪಂಚವಾರ್ಷಿಕ ಯೋಜನೆಯಲ್ಲಿ ಕೊಡಬೇಕು ಎಂದು ತೀರ್ಮಾನ ಮಾಡಿದ್ದೇವೆ. ಇದರ ಬಗ್ಗೆ ಫೈನಾನ್ಸ್ ಕಮೀಷನ್‌ಗೆ ಏನೇನು ಶಿಫಾರಸ್ಸು ಮಾಡಿದ್ದೇವೆ ಎನ್ನುವುದು ಈಗಾಗಲೇ ಸ್ವಲ್ಪಮಟ್ಟಿಗೆ ಚರ್ಚೆಯಾಗಿದೆ. ಅದು ಮಾನ್ಯ ಸದಸ್ಯರಿಗೆ ನೆನಪು ಇದ್ದರೆ ಸಾಕು.

ಇನ್ನು ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ 3ನೇ ಫೈನಾನ್ಸ್ ಕಮೀಷನ್ನಿನವರು ನಮ್ಮ ರಾಜ್ಯಕ್ಕೆ 6 ಕೋಟಿ ರೂಪಾಯಿ ಶಿಫಾರಸ್ಸು ಮಾಡಿದ್ದರು. ಕಳೆದ 4 ವರ್ಷದಿಂದಲೂ ನಮಗೆ ಪ್ರತಿವರ್ಷವೂ 20 ಕೋಟಿಗಿಂತ ಹೆಚ್ಚು ಗ್ರಾಂಟ್ ಅವರ ಶಿಫಾರಸು ಮುಖಾಂತರ ಸಿಕ್ಕುತ್ತಾ ಇದೆ. ಈಗ ವರ್ಷಕ್ಕೆ 20 ಕೋಟಿ ರೂಪಾಯಿ ಬಡ್ಡಿ ಕೊಡುವ ಪ್ರಶ್ನೆ ಬಂದಿದೆ ನಿಜ. ಅಲ್ಲದೆ ಸುಮಾರು 52 ಕೋಟಿ ರೂಪಾಯಿಯಷ್ಟು ಇನ್‌ಸ್ಟಾಲ್‌ಮೆಂಟ್ ಮುಖಾಂತರ ಕೊಡಬೇಕಾಗುತ್ತದೆ. ಆದರೆ ನಾವು ಏನು ಬಡ್ಡಿ ಕೊಡಬೇಕಾಗುತ್ತದೋ ಅದು ಗ್ರಾಂಟ್ ರೂಪವಾಗಿ

ಬರುತ್ತದೆ. ಅದು ರೆವಿನ್ಯೂ ಎಕ್ಸ್‌ಪೆಂಡಿಚರ್ ಎಂದು ತೆಗೆದುಕೊಳ್ಳುವುದು. ಫೈನಾನ್ಸ್ ಕಮೀಷನ್ನಿನವರ ಮುಂದೆ ನಮ್ಮ ವಾದ ಅದನ್ನು ರೆವಿನ್ಯೂ ಎಕ್ಸ್‌ಪೆಂಡಿಚರ್ ಎಂದು ತಿಳಿದುಕೊಂಡರೆ ಸಾಲದು, ಮೊದಲು ಕೊಟ್ಟಿದ್ದಂತೆ ಆ ಸಾಲವನ್ನು ರಿ-ಪೆಡ್ಯೂಲ್ ಮಾಡಬೇಕಾಗಿರುವುದರಿಂದ ಯಾವ ಯಾವ ಯೋಜನೆಗೆ ಎಷ್ಟು ಅವಧಿ ಸಾಲ ಇರಬೇಕು ಅದನ್ನು ಗೊತ್ತು ಮಾಡಬೇಕೆಂದು ಹೇಳಿದ್ದೇವೆ. ಈಗ ನೀರಾವರಿ ಯೋಜನೆ ತೆಗೆದುಕೊಂಡರೆ ಅದು 10 ವರ್ಷದಲ್ಲಿ ಪ್ರತಿಫಲ ಕೊಡತಕ್ಕಂಥಾದ್ದು. ಅದಕ್ಕೆ 30 ವರ್ಷದ ಅವಧಿ ಕೊಡಬೇಕು, 10 ವರ್ಷದ ನಂತರ ಕಂತು ಪ್ರಾರಂಭವಾಗಬೇಕು. ಇನ್ನು ಎರೆಕ್ಟಿಸಿಟಿ ಬೋರ್ಡ್‌ಗೆ, ಭೂ ಅಭಿವೃದ್ಧಿಯೋಜನೆಗೆ ಇಂತಿಷ್ಟು ವರ್ಷ ಇರಬೇಕು ಈ ರೀತಿ ಮಾಡಬೇಕು ಎಂದು ಅವರಿಗೆ ಮನವರಿಕೆಯಾಗುವಂತೆ ನಾವು ಹೇಳಿದ್ದೇವೆ. ಇನ್ನು ನಮ್ಮ ಆಕ್ಷೇಪಣೆಗಳು ಏನು ಇವೆ ಎಂದರೆ ಹಿಂದೆ ಫೈನಾನ್ಸ್ ಕಮೀಷನ್ ನವರು ಮೈನಾರಿನ ಬಗ್ಗೆ ಯಾವರೀತಿ ಯೋಗ್ಯವಾದ ಶಿಫಾರಸ್ಸು ಮಾಡಿದ್ದರೋ ಅಂಥಾದ್ದೇ ಶಿಫಾರಸ್ಸು ಮಾಡುತ್ತಾರೆಂದು ಒಂದು ವಿಶೇಷವಾದ ನಂಬಿಕೆ ಅವರ ಮೇಲೆ ನಮಗೆ ಇದೆ. ಇದರ ಬಗ್ಗೆ ಇನ್ನು ಹೆಚ್ಚು ವಾದಮಾಡಲು ಬಯಸುವುದಿಲ್ಲ. ಅದು ಅಷ್ಟು ಸಮಂಜಸವಾಗಿ ಕಾಣುವುದಿಲ್ಲ.

ಇನ್ನು ಈ ವರ್ಷ ಮುಗಿಯುವದರೊಳಗಾಗಿ ಅಂದರೆ 1969-70ರ ಒಳಗಾಗಿ 425 ಕೋಟಿ ರೂಪಾಯಿ ಅಥವಾ 426 ಕೋಟಿ ರೂಪಾಯಿಯಷ್ಟು ಪಬ್ಲಿಕ್ ಡೆಟ್ ಬರುತ್ತೆ. ಅದಕ್ಕೆ ಪ್ರತಿಯಾಗಿ ನಮ್ಮ ಆಸ್ತಿ 485 ಕೋಟಿ ರೂಪಾಯಿಯಷ್ಟು ಒಟ್ಟು ಆಸ್ತಿ ಇದೆ. ಅದಲ್ಲದೆ ಸರ್ಕಾರದವರು ಸುಮಾರು 16½—17 ಕೋಟಿ ರೂಪಾಯಿಯಷ್ಟು ಬೇರೆ ಬೇರೆ ಬಾಬುಗಳಿಗೆ ಕೊಟ್ಟಂಥ ಸಾಲ ಮತ್ತು ಇನ್ನೂ ಇತರ ಅಡ್ವಾನ್ಸ್‌ಗಳೂ ಕೂಡ ಇದರ ಜೊತೆಗೆ ಸೇರಿಸಿದರೆ ಸುಮಾರು 656 ಕೋಟಿ ಟಿಲ್ಲರೆ ರೂಪಾಯಿ ನಮ್ಮ ಸರ್ಕಾರದ ಆಸ್ತಿ ಆಗುತ್ತದೆ.

ಶ್ರೀ ಎಸ್. ಶಿವಪ್ಪ.—ಲಯಬಿಲಿಟೀಸ್ ಎಷ್ಟು ಇದೆ ?

ಶ್ರೀ ರಾಮಕೃಷ್ಣ ಹೆಗಡೆ.—353ನೇ ಪೇಜು ಬಡ್ಜೆಟ್ ಮೆಮೋರ್ಯಾಂಡಂನಲ್ಲಿ ಎಕ್ಸೆಸ್ ಆಫ್ ಅಸೆಟ್ಸ್ ಅಂಡ್ ಲಯಬಿಲಿಟೀಸ್ 1969-70ಕ್ಕೆ ಕೊಟ್ಟಿರುವುದು 93 ಕೋಟಿ ರೂಪಾಯಿ ಇದೆ ಎಂದು ಹೇಳುತ್ತೇನೆ. ಈಗ ಒಟ್ಟು ಅಸೆಟ್ಸ್ 656 ಕೋಟಿ ರೂಪಾಯಿಯಲ್ಲಿ 93 ಕೋಟಿ ರೂಪಾಯಿ ಕಳೆದರೆ 563 ಕೋಟಿ ರೂಪಾಯಿ ಆಗುತ್ತದೆ. ಅದಕ್ಕೆ 16½—17 ಕೋಟಿ ರೂಪಾಯಿಯಷ್ಟು ಅಸೆಟ್ಸ್ ಲೋನ್ಸ್ ಅಂಡ್ ಅಡ್ವಾನ್ಸ್ ಕೊಟ್ಟಂಥಾದ್ದನ್ನು ಸೇರಿಸಿಕೊಳ್ಳಬೇಕಾಗುತ್ತದೆ.

ಇನ್ನು ಈಗ ಕಾಂಗ್ರೆಸ್ ಪಕ್ಷದ ಆಡಳಿತ ಏನು ಇದೆ ಅದು ಅವರ ದೃಷ್ಟಿಯಿಂದ ಅಪರಾಧ ಮಾಡಿರಬಹುದು. ಆದರೆ ನಾನು ಹೇಳುವುದು 3 ವರ್ಷ ಬೇರೊಬ್ಬರ ಆಡಳಿತ, ಇನ್ನು 3 ವರ್ಷ ಮತ್ತೊಬ್ಬರ ಆಡಳಿತ, ಈ ರೀತಿ ಒಬ್ಬೊಬ್ಬರ ಆಡಳಿತಗಳು ಬಂದ ಮೇಲಾದರೂ ಕೊನೆಗೆ ಇನ್ನು 50 ವರ್ಷದಮೇಲಾದರೂ ಪುನಃ ಕಾಂಗ್ರೆಸ್‌ನವರ ಆಡಳಿತ ಬಂದನಂತರ ಇಂತಹವರ ಆಡಳಿತ ಹೀಗಿತ್ತು, ಎನ್ನುವುದನ್ನು ನಾನು ಇಲ್ಲದೆ ಇದ್ದರೂ ನಮ್ಮ ಪಕ್ಷದ ಪ್ರತಿನಿಧಿಗಳಾಗಿ ಬಂದವರು ಹೇಳುತ್ತಾರೆ. ವಿರೋಧಪಕ್ಷದವನಾಗಿ ಕೂತು ಕೇಳುವಂಥಾದ್ದು ಒಳ್ಳೆಯದು ಎಂದು ನನಗೆ ಅನ್ನಿಸುತ್ತದೆ. ಆಗ ಅವರು ದೇಶದ ಆಡಳಿತದ ಭಾರ ನತೆಸಿದರೆ ಇದರಲ್ಲಿರುವ ಕಷ್ಟ ಏನು ಎನ್ನುವುದು ತಿಳಿಯುತ್ತದೆ.

ಮದ್ರಾಸಿನಲ್ಲಿ ಅಥವಾ ಬೇರೆ ರಾಜ್ಯಗಳಲ್ಲಿ ಬೇರೆ ಪಕ್ಷಗಳ ಸರ್ಕಾರ ಬಂದಿದೆ. ಆ ಪಕ್ಷದವರು ಎಲ್ಲಿಯವರೆಗೆ ಅಧಿಕಾರ ನಡೆಸುವುದಕ್ಕೆ ಸಾಧ್ಯವೋ ಅಲ್ಲಿಯವರೆಗೂ ನಡೆಸಬೇಕು. ಇತರರು ರಚನಾತ್ಮಕವಾಗಿ ವಿರೋಧ ಮಾಡಬಹುದು. ಯಾವುದೇ ರಾಜಕೀಯ ಪಕ್ಷ 40 ವರ್ಷ, 50 ವರ್ಷ, ಶತಮಾನದವರೆಗೆ ಯುಗದವರೆಗೆ, ಅಧಿಕಾರದಲ್ಲಿ ಇರಬೇಕು ಎನ್ನುವ ಪ್ರತಿಪಾದನೆಯನ್ನು ನಾನು ಮಾಡುತ್ತಿಲ್ಲ. ಎಲ್ಲರೂ ಮಾಡತಕ್ಕ ಕೆಲಸ ಒಂದೇ, ಎಲ್ಲರ ಗುರಿಯೂ ಒಂದೇ. ಎಲ್ಲರೂ ಈ ದೇಶದವರು. ಅದನ್ನು ಏಕೆ ಮರೆಯಬೇಕು. 20 ವರ್ಷಗಳಿಂದ ಕಾಂಗ್ರೆಸ್ ಪಕ್ಷ ಅಧಿಕಾರದಲ್ಲಿದ್ದರೆ ಏಕೆ ಆ ಪಕ್ಷದ ನಾಯಕರನ್ನು ಗಲ್ಲಿಗೆ ಹಾಕುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆಯೋ ಗೊತ್ತಿಲ್ಲ. ಕಾಂಗ್ರೆಸ್ ಒಂದು ಪಕ್ಷ. ಸ್ವಾತಂತ್ರ್ಯ ಬಂದಂದಿನಿಂದ ಆಳುವ ಪಕ್ಷವಾಗಿದೆ. ಮೂರು ಸಲ ಚುನಾವಣೆಗಳು ನಡೆದಿವೆ ಈ ದೇಶದಲ್ಲಿ. 1967ರ ವರೆಗೆ ಮೂರು ಸಲ ಚುನಾವಣೆಗಳು ನಡೆದಿವೆ. ಚುನಾವಣೆಯಲ್ಲಿ ಕಂದಾಯ ಕೊಡುವವರು, ಕೇವಲ ತೀರ್ವೆ ಕೊಡುವವರು, ವರಮಾನ ತೆರಿಗೆ ಕೊಡುವವರು, ಇಂಥ ಜಾತಿಯವರು ಮಾತ್ರ ಮತ ಕೊಡುವುದೆಂದಿಲ್ಲ. ಎಲ್ಲರಿಗೂ ಸಮಾನವಾದ ಮತದಾನದ ಹಕ್ಕು ಇದೆ. ಆವರೆಲ್ಲಸೇರಿ ಕಾಂಗ್ರೆಸ್ ಪಕ್ಷದವರೇ ಆಳಬೇಕು ಎಂದು ಹೇಳಿದರೆ ನಿಜಲಿಂಗಪ್ಪನವರನ್ನಾಗಲೀ, ರಾರ್‌ಬಹದ್ದೂರ್ ಶಾಸ್ತ್ರಿಯವರನ್ನಾಗಲೀ, ಅಥವಾ

(ಶ್ರೀ ರಾಮಕೃಷ್ಣ ಹೆಗಡೆ)

ಬೇರೆ ಯಾರನ್ನೇ ಆಗಲೀ ಏಕೆ ಗಲ್ಲಿಗೆ ಹಾಕುತ್ತೀರಿ ! ಪ್ರಜಾಪ್ರಭುತ್ವವೆಂದರೆ ಆ ಒಂದು ತತ್ವವನ್ನು ನಾವೆಲ್ಲ ಒಪ್ಪಿಕೊಂಡಿದ್ದೇವೆ ಬೇರೆ ಒಂದು ಪಕ್ಷ ಅಧಿಕಾರಕ್ಕೆ ಬಂದರೆ ನಾನು ಆ ಪಕ್ಷವನ್ನು ದೂರಿದರೆ ನಾನು ಪ್ರಜಾಪ್ರಭುತ್ವದಲ್ಲಿ ಶ್ರದ್ಧೆ ಇಟ್ಟು, ನಿಜವಾದ ಶ್ರದ್ಧೆ ಇಟ್ಟು ಇರತಕ್ಕ ತತ್ವವಾಗುವುದಿಲ್ಲ. ಈ ದೇಶದ ಕಲ್ಯಾಣ ಯಾವಾಗ ಆಗುತ್ತದೆಯೋ ಗೊತ್ತಿಲ್ಲ. ಇಂದು ಒಂದು ಪದ್ಧತಿಯನ್ನು ನಾವು ಅನುಸರಿಸಿದ್ದರಿಂದ ಆ ಪದ್ಧತಿಯಲ್ಲಿರತಕ್ಕ ಗುಣ ದೋಷ ಇವೆರಡನ್ನೂ ತಿಳಿದುಕೊಂಡು ಅದನ್ನೇ ಅನುಭವಿಸಲಕ್ಕೆ ನಾವು ತಯಾರಾಗಬೇಕು. ಪದ್ಧತಿ ಬೇಕು, ಗುಣ ಬೇಕು, ದೋಷ ಬೇಡ ಎಂದರೆ ಅದು ಸರಿಯಾಗಲಾರದು. ಇದನ್ನು ನಾವು ತಿಳಿದುಕೊಳ್ಳಬೇಕು. ಈ ಹೊತ್ತು ನಮಗೆ ಅಧಿಕಾರವಿದ್ದರೆ, ಈ ಹೊತ್ತು ನಾವು ಇಲ್ಲ ಕುಳಿತವರು ಅಯೂಬ್ ಖಾನ್ ಮಕ್ಕಳಲ್ಲ, ಚೀಣಾ ಅಥವಾ ಕಮ್ಯುನಿಸ್ಟ್ ದೇಶಗಳಲ್ಲರುವ ಹಾಗೆ ನಾಲ್ಕು ಜನರ ಅಥವಾ 10 ಜನರ ಒಂದು ಕೂಟವಲ್ಲ. ಬದಲಾವಣೆ ಆಗಿಯೇ ಆಗುತ್ತದೆ. ನಾವು ಬೇಡ ಎಂದರೂ ಆಗುತ್ತದೆ, ನೀವು ಬೇಡ ಎಂದರೂ ಆಗುತ್ತದೆ. ಬದಲಾವಣೆ ಆಗುವುದು ನೈಸರ್ಗಿಕ ಕ್ರಮ. ಏನು ವರ್ಷ ಹೆಚ್ಚಾಗಬಹುದು ಅಷ್ಟೆ. ಯಾವ ದಿವಸದಿಂದ ಈ ಪದ್ಧತಿ ಬೇಡ ಎಂದು ಹೇಳುತ್ತಾರೋ ನಾಳೆ ಅಂಥ ಒಂದು ಪ್ರಸಂಗ ಈ ದೇಶದಲ್ಲಿ ಬರಬಹುದು. ಈ ದೇಶದಲ್ಲಿ ಪ್ರಜಾಪ್ರಭುತ್ವ ಬೇಡ ಎಂದು ಹೇಳತಕ್ಕ ಪ್ರಸಂಗ ಬರಬಹುದು; ನನಗೆ ಗೊತ್ತಿಲ್ಲ. ಅದರ ಬಗ್ಗೆ ನಾವು ಏಕೆ ಇಷ್ಟೊಂದು ತರ್ಕ ಮಾಡತಕ್ಕದ್ದು ? ನಮ್ಮ ಕೈಯಲ್ಲಿ ಎಷ್ಟರಮಟ್ಟಿಗೆ ಸಾಧ್ಯವೋ ಅಷ್ಟನ್ನು ಪ್ರಾಮಾಣಿಕವಾಗಿ ಮಾಡೋಣ, ಮನ ಮುಟ್ಟಿ ಮಾಡೋಣ. ಒಬ್ಬನಿಗೆ ದೊಡ್ಡ ಶಕ್ತಿ ಇರಬಹುದು, ಒಬ್ಬನಿಗೆ ಸಣ್ಣ ಶಕ್ತಿ ಇರಬಹುದು. ಸಣ್ಣ ಶಕ್ತಿ ಇರುವವನು ಸಣ್ಣ ಸೇವೆ ಮಾಡುತ್ತಾನೆ ಎನ್ನುವುದು ತಪ್ಪು. ಆದರಾಣ ಮಾಡತಕ್ಕದನ್ನು ಪ್ರಾಮಾಣಿಕವಾಗಿ ಮಾಡಬೇಕು ಎನ್ನುವುದನ್ನು ನಾನು ಕೂಡ ಮಾನ್ಯ ಗೋಪಾಲಗೌಡರು ಹೇಳಿದ ಹಾಗೆ ಒಪ್ಪಿಕೊಳ್ಳುತ್ತೇನೆ.

ನಾಲ್ಕನೇ ಪಂಚವಾರ್ಷಿಕ ಯೋಜನೆ ವಿಚಾರದಲ್ಲಿ ಮಾನ್ಯ ಸದಸ್ಯರು ಕೆಲವೊಂದು ಭಯವನ್ನು ವ್ಯಕ್ತ ಮಾಡಿದ್ದಾರೆ. ಅದನ್ನು ನಾನೇ ಹೇಳಿದೆ. ನಾಲ್ಕನೇ ಯೋಜನೆ 1966 ನೇ ಇಸವಿಯಲ್ಲಿ ಪ್ರಾರಂಭವಾಗಬೇಕಾಗಿದ್ದುದು ಆಗಲಿಲ್ಲ. ಇದು ಸೂರ್ಯಪ್ರಕಾಶವಷ್ಟು ಸತ್ಯ. ಇದಕ್ಕೆ ಕಾರಣವೂ ಉಂಟು ಎರಡು ವರ್ಷ ಭಯಂಕರವಾಗಿ ಇಡೀ ದೇಶಕ್ಕೆ ವ್ಯಾಪಿಸಿದಂಥ ಬರಗಾಲ ಬಂತು. ಅದಕ್ಕೆ ಮೊದಲು ಒಂದು ಸಲ ಪಾಕಿಸ್ತಾನ, ಒಂದುಸಲ ಚೀಣಾ ಮತ್ತೊಂದು ಸಲ ಪಾಕಿಸ್ತಾನದ ಆಕ್ರಮಣವಾಯಿತು. ಅದರಿಂದ ನಮ್ಮ ಆರ್ಥಿಕಸ್ಥಿತಿ ಬುಡಮೇಲಾಯಿತು. ಈ ಎಲ್ಲ ಕಾರಣದಿಂದ ನಮಗೆ ಸಾಕಷ್ಟು ಸಂಪನ್ಮೂಲಸಿಕ್ಕಲಿಲ್ಲ. ಒಮ್ಮೆ ಮೂರು ವರ್ಷ ಮುಂದೆ ಹೋಗಿದೆ. ಯೋಜನಾ ಆಯೋಗದವರು ಬರುವ ವರ್ಷದಿಂದ ಎಂದರೆ 1969—70 ರಿಂದ ನಾಲ್ಕನೆ ಯೋಜನೆಯನ್ನು ಪ್ರಾರಂಭ ಮಾಡಬೇಕೆಂದಿದ್ದಾರೆ. ನಮ್ಮ ಅಭಿಪ್ರಾಯವೇನೆಂದರೆ ಇಂದು ಯಾವ ಉದ್ದೇಶದಿಂದ, ಯಾವ ಕಾರಣಕ್ಕಾಗಿ ನಾಲ್ಕನೆ ಯೋಜನೆಯನ್ನು ಮುಂದೆ ಹಾಕಿದರೋ ಆ ಕಾರಣಗಳು ಈವೊತ್ತು ಇಲ್ಲವೇ ಹೇಗೆ ? ಆ ಕಾರಣಗಳು ಈವೊತ್ತು, ಕಳೆದುಹೋಗಿದ್ದಾವೆಯೇ ಹೇಗೆ ? ಅದಕ್ಕಾಗಿ ಎಷ್ಟರಮಟ್ಟಿಗೆ ಬೆಲೆಗಳ ಸ್ಥಿರೀಕರಣ ಮಾಡತಕ್ಕದ್ದು ಸಾಧ್ಯವಾಗುತ್ತದೆ; ಎಷ್ಟರಮಟ್ಟಿಗೆ ನಮ್ಮ ದೇಶಕ್ಕೆ ಆರ್ಥಿಕ ವ್ಯವಸ್ಥೆಯಲ್ಲಿ ಸ್ವಲ್ಪ ಮಟ್ಟಿಗೆ ದೃಢತೆ ಬರುತ್ತದೆ ? ಮೂರನೆ ಯೋಜನೆಯ ಕೊನೆ ಭಾಗದಲ್ಲಿ ಮತ್ತು ಕಳೆದ ಮೂರು ವರ್ಷಗಳ ವಾರ್ಷಿಕ ಯೋಜನೆಯಲ್ಲಿ ಬೆಲೆ ಸ್ಥಿರೀಕರಣ ಮಾಡುವುದು ನಮಗೆ ಸಾಧ್ಯವಾಗಲಲ್ಲ. ಅದಕ್ಕಾಗಿ ನಾನು ಈ ಸಭೆ ಮುಂದೆ ಪ್ರಸ್ತಾಪ ಮಾಡಿದ್ದೇನೆ, 42 ಕೋಟಿ ರೂಪಾಯಿಗಳ ಸಂಪನ್ಮೂಲಗಳನ್ನು ತೆಗೆದುಕೊಳ್ಳುವಾಗ ಅದರಲ್ಲಿ 32 ಕೋಟಿ ರೂಪಾಯಿಗಳನ್ನು ತುಟ್ಟಿಭತ್ಯಕ್ಕಾಗಿ ಖರ್ಚು ಮಾಡಿದ್ದೇವೆ. ಇದಕ್ಕೆ ನಾನು ಸರ್ಕಾರಿ ನೌಕರರನ್ನು ದೂಷಣೆ ಮಾಡುವುದಿಲ್ಲ, ಬೇರೆ ಯಾರಿಗೂ ದೋಷ ಕೊಡುವುದಿಲ್ಲ. ಹೇಜೆಯಲ್ಲಿ ವಿಪರೀತವಾಗಿ ಧಾರಣಿವಾಸಿಗಳು ಏರುವಾಗ ತಿಂಗಳಿಗೆ 90 ರೂಪಾಯಿ, 100 ರೂಪಾಯಿ ಅಥವಾ 200 ರೂಪಾಯಿ ತೆಗೆದುಕೊಳ್ಳುವವರು ಮನೆಯಲ್ಲಿ 10—12 ಜನವಿದ್ದರೆ ಏನು ಮಾಡಬೇಕು ? ಅದು ನನಗೆ ಗೊತ್ತಾಗುತ್ತಿಲ್ಲ. ಅದಕ್ಕಾಗಿ ಮಾನ್ಯ ಮುಖ್ಯ ಮಂತ್ರಿಗಳು ಪ್ಲಾನಿಂಗ್ ಕಮಿಷನ್ ಮುಂದೆ ನಾಲ್ಕು ವಿಚಾರಗಳನ್ನು ಇಟ್ಟಿದ್ದಾರೆ. ಮೊಟ್ಟಮೊದಲನೆಯದಾಗಿ ಒಂದು ತೀರ್ಮಾನ ಮಾಡಿ, ಇನ್ನು ಮುಂದಿನ ಐದು ವರ್ಷಗಳ ಅವಧಿಯಲ್ಲಿ ಪ್ರತಿ ವರ್ಷ ಎಕನಾಮಿಕ್ ಪಾಲಿಸಿ ಅಡಾಪ್ಟ್ ಮಾಡುತ್ತೀರಾ ! ಯಾವ ಪಾಲಿಸಿಯಿಂದ ಬೆಲೆಗಳನ್ನು ಹತೋಟಿಯಲ್ಲಿಡುವುದಕ್ಕೆ ಸಾಧ್ಯವಾಗುತ್ತದೆ ಎನ್ನುವುದನ್ನು ಮೊದಲು ತಿಳಿಯಬೇಕು. ಎರಡನೆಯದು ರಾಜ್ಯ ಸರ್ಕಾರಗಳು 1500 ಕೋಟಿ ರೂಪಾಯಿಗಳು, ಕೇಂದ್ರ ಸರ್ಕಾರದವರು 2500 ಕೋಟಿ ರೂಪಾಯಿಗಳ ಹೊಸ ಸಂಪನ್ಮೂಲಗಳನ್ನು ಎತ್ತಬೇಕೆಂದು ಹೇಳುತ್ತೀರಿ. ಕೇಂದ್ರ ಸರ್ಕಾರದವರು ಎಷ್ಟರಮಟ್ಟಿಗೆ ಅದನ್ನು

ಮಾಡುವುದಕ್ಕೆ ಸಾಧ್ಯವಾಗುತ್ತದೆ? ಹೊಸ ನೋಟ್ ಮುದ್ರಿಸಿ ಮಾಡುತ್ತೀರಾ ಅಥವಾ ನಿಜವಾಗಿ ಈ ಹಣ ಬರುತ್ತದೆಯೇ? ಇದು ಎರಡನೇ ವಿಚಾರ. ಮೂರನೆ ವಿಚಾರ ಇಂದು ನಾವು ರೀಜಿನರ್ ಇಂಬ್ಯಾರೆನ್ಸ್ ಎಂದು ಏನು ಕರೆಯುತ್ತೇವೆ ಆ ರೀಜನರ್ ಇಂಬ್ಯಾರೆನ್ಸ್‌ಗೆ ಯಾವ ತರಹ ಪರಿಹಾರ ಹುಡುಕುತ್ತೀರಿ? ರಾಷ್ಟ್ರದಲ್ಲಿರುವ ಒಟ್ಟು ಸಕ್ಕರೆ ಕಾರ್ಖಾನೆಗಳಲ್ಲಿ ಸೇಕಡ 75 ರಷ್ಟು ಉತ್ತರ ಪ್ರದೇಶ ಮತ್ತು ಬಿಹಾರದಲ್ಲಿವೆ. ಅಲ್ಲಿ ಇಳುವರಿ ಬರತಕ್ಕದ್ದು 6 ಪರ್ಸೆಂಟ್. ಇದು ಎಷ್ಟು ಸಾಧುವೋ ಅದೇ ರೀತಿ ಆಗಬಹುದು. ನಾಲ್ಕನೆಯದು ನಮಗೆ ನಾಲ್ಕನೆ ಯೋಜನೆಗೆ ಬೇಕಾಗತಕ್ಕ ಸಂಪನ್ಮೂಲಗಳನ್ನು ಕಂಡು ಹಿಡಿಯುವುದು. ಸೆಂಟ್ರರ್ ಡಿವಿಜಿಬಲ್ ಪೂಲ್‌ನಲ್ಲಿ ಏನು ರಿಸೋರ್ಸಸ್ ಇದೆ ಅದರಲ್ಲಿ ನಮ್ಮ ಅಂಶ ಎಷ್ಟು ಎನ್ನುವುದು ನಮಗೆ ಖಚಿತವಾಗಿ ಗೊತ್ತಾಗಬೇಕು.

8-30 P.M.

ಇದು ಆಲ್ಲ ಚರ್ಚೆಯಾಗಿ ಬಂದಮೇಲೆ ಖಚಿತವಾಗಿ ಮೈಸೂರಿನವರಿಗೆ ಇದರ ಬಗ್ಗೆ ನಿರ್ಧಾರ ಹೇಳುವವರೆಗೆ ಹೊಸ ಪ್ಲಾನ್ ಮಾಡುವುದು ಕಷ್ಟ ಮತ್ತು ನಾಲ್ಕನೆಯ ಪಂಚವಾರ್ಷಿಕ ಯೋಜನೆಯನ್ನು ಒಂದು ವರ್ಷ ಮುಂದಕ್ಕೆ ಹಾಕಿದರೂ ಪರವಾಗಿಲ್ಲ ಎಂದು ಹೇಳಲಾಯ್ತು. ಇಲ್ಲಿಯವರೆಗೆ ಖಚಿತವಾದ ಉತ್ತರ ಬಂದಿಲ್ಲ. ರಾಷ್ಟ್ರೀಯ ಅಭಿವೃದ್ಧಿ ಮಂಡಲ ಬಹುಶಃ ಈ ತಿಂಗಳು ಮಧ್ಯ ಭಾಗದಲ್ಲಿ ಅಥವ ಮೂರನೆಯ ವಾರದಲ್ಲಿ ಸೇರಬಹುದೆಂಬ ಸುದ್ದಿ ಇದೆ. ಈ ಬಜೆಟ್ಟಿನಲ್ಲಿ ನಾಲ್ಕನೆಯ ಪಂಚವಾರ್ಷಿಕ ಯೋಜನೆ ಅಡಕವಾಗಿಲ್ಲ, ಇದರಲ್ಲಿ ತೆಗೆದುಕೊಂಡಿರುವುದು ಮುಂದಿನ ವರ್ಷದ ಯೋಜನೆ ಮಾತ್ರ. ಇದಕ್ಕಿಂತ ಹೆಚ್ಚಿನ ಯಾವ ನಿರೀಕ್ಷೆಯೂ ಇಲ್ಲ. ಮೊನ್ನೆ ಚರ್ಚೆ ಮಾಡುವುದಕ್ಕೆ ಹೋದಾಗ ಇದನ್ನು ಪೂರ್ಣ ಮಾಡದೆ ಬಂದಿರುವ ಉದ್ದೇಶ ಇದೇ. ಈಗ ಕೈಕೊಂಡಿರುವ ಕೆಲವು ಕೆಲಸಗಳನ್ನು ಬೇಗ ಮುಗಿಸಬೇಕು, ನೀರಾವರಿ ಕುಡಿಯುವ ನೀರಿನ ಯೋಜನೆಗಳು ಮುಂತಾದವುಗಳನ್ನು ಮುಗಿಸಲು, ನಮ್ಮದೇ ಆದ ರೀತಿಯಲ್ಲಿ ಒಪ್ಪಿದರೆ 440 ಕೋಟಿ ರೂಪಾಯಿಗಳಾದರೂ ಬೇಕು. ಶ್ರೀ ಎಂ. ವೈ. ಘೋರ್ಪಡೆಯವರು ಒಂದು ಮಾತು ಹೇಳಿದರು, ನಾಲ್ಕನೆಯ ಪಂಚವಾರ್ಷಿಕ ಯೋಜನೆಗೆ ಸಂಬಂಧಪಟ್ಟಂತೆ ಅವರು ರಾಜ್ಯದ ಯೋಜನಾ ಮಂಡಲಿಯ ಸದಸ್ಯರು. ಅವರು 440 ಕೋಟಿ ರೂಪಾಯಿ ಯೋಜನೆಗೆ 115 ಕೋಟಿ ರಾಜ್ಯ ಸರಕಾರ ಹೊಸದಾಗಿ ಹಣ ಒದಗಿಸಬೇಕು, ಅದಕ್ಕೆ ಯಾವ ರೀತಿ ಅವಕಾಶವಿದೆ ಎಂದು ಕೇಳಿದರು. ಈಗ ಹೇಳುತ್ತೇನೆ. ನಮ್ಮ ಕೇಂದ್ರ ಸರಕಾರ ಮತ್ತು ಯೋಜನಾ ಆಯೋಗದ ಅಂದಾಜು ಒಟ್ಟು ಈ ದೇಶಕ್ಕೆ ಬರುವ 5 ವರ್ಷಗಳಲ್ಲಿ ನಾಲ್ಕನೆಯ ಯೋಜನೆಗೆ 1502 ಕೋಟಿ, ಇಷ್ಟಕ್ಕೆ ರಾಜ್ಯ ಸರಕಾರ ಒಪ್ಪಬೇಕು ಇದರಲ್ಲಿ ಮೈಸೂರು ಸರಕಾರ ಸುಮಾರು 115 ಕೋಟಿಗೆ ಒಪ್ಪಬಹುದು, ಅವರಿಗೆ ಅಷ್ಟು ಶಕ್ತಿ ಇದೆ ಎಂದು ಅಂದಾಜಿದೆ. ಇದರಲ್ಲಿ 5 ವರ್ಷಗಳಿಗೆ ವ್ಯವಸಾಯ ವರಮಾನ ತೆರಿಗೆಯಿಂದ 21 ಕೋಟಿ, ರೂರರ್ ಡಿಬೆಂಚರ್‌ನಿಂದ 21 ಕೋಟಿ ಇರಿಗೇಷನ್‌ದರ ಸ್ವಲ್ಪ ಹೆಚ್ಚು ಮಾಡುವುದರಿಂದ 17 ಕೋಟಿ, ಸ್ಟೇಟ್ ಎಕ್ಸೈಜ್ ಡ್ಯೂಟಿಯಿಂದ 7 ಕೋಟಿ ಮಾರಾಟತೆರಿಗೆಯಿಂದ 11 ಕೋಟಿ, ಇದು ಹೆಚ್ಚಿನ ವರಮಾನ, ಒಟ್ಟು ವರಮಾನವಲ್ಲ. ವಿದ್ಯುಚ್ಛಕ್ತಿಯಿಂದ 17 ಕೋಟಿ, ರೋಡ್ ಟ್ರಾನ್ಸ್ ಪೋರ್ಟ್ ಇಲಾಖೆಯಿಂದ 3 ಕೋಟಿ, ಇತರ ಬಾಬುಗಳಿಂದ 17 ಕೋಟಿ ಬರುವುದು. ನಮ್ಮ ಅಂದಾಜಿನ ಪ್ರಕಾರ ಇಂದು ನಮ್ಮ ದೇಶದಲ್ಲಿ ಇರುವ ಪರಿಸ್ಥಿತಿ ನೋಡಿದರೆ ಹೆಚ್ಚು ಅಂದರೆ ಸುಮಾರು 43 ಕೋಟಿ ಸಂಪನ್ಮೂಲಗಳಿಂದ ಪಡೆಯಬಹುದು. ವ್ಯವಸಾಯ ವರಮಾನ ತೆರಿಗೆಯಿಂದ 2 ಕೋಟಿ, ರೂರರ್ ಡಿಬೆಂಚರಿನಿಂದ 6 ಕೋಟಿ, ಇರಿಗೇಷನ್ ದರವಿಂದ, ಅದನ್ನು ಹೆಚ್ಚಿಸುವುದರಿಂದ 3 ಕೋಟಿ, ಸ್ಟೇಟ್ ಎಕ್ಸೈಜ್ ಡ್ಯೂಟಿಯಿಂದ 7 ಕೋಟಿ, ಮಾರಾಟ ತೆರಿಗೆಯಿಂದ 5 ಕೋಟಿ, ವಿದ್ಯುಚ್ಛಕ್ತಿಯಿಂದ 3 ಕೋಟಿ, ರೋಡ್ ಟ್ರಾನ್ಸ್‌ಪೋರ್ಟ್ ಬಾಬಿನಿಂದ 2 ಕೋಟಿ, ಅರಿಯರ್ಸ್ ವಸೂಲಿಯಿಂದ 5 ಕೋಟಿ, ಇತರ ಬಾಬುಗಳಿಂದ 10 ಕೋಟಿ, ಹೀಗೆ 43 ಕೋಟಿ ಬರಬಹುದೆಂಬ ಅಂದಾಜಿದೆ. 440 ಕೋಟಿಯ ಯೋಜನೆ ನಮ್ಮದು, 43 ಕೋಟಿ ಸಂಪನ್ಮೂಲದಿಂದ ಮತ್ತು 200 ಕೋಟಿ ಕೇಂದ್ರ ಸರಕಾರದ ಕಡೆಯಿಂದ ಬರಬಹುದು ಎಂದು ಟೆಂಟೇಟಿವ್ ಆಗಿ ಕೊಟ್ಟಿರುವ ಅಂಕಿ. ಈ ಮೂರೂ ನಮ್ಮೆದುರಿಗಿಟ್ಟರೆ ಯಾವ ರೀತಿ ರಾಜ್ಯದ ಅಭಿವೃದ್ಧಿ ಮಾಡಬೇಕು ಎಂಬುದನ್ನು ಯೋಚನೆ ಮಾಡಬೇಕು. ಇಷ್ಟನ್ನು ಹೇಳುವುದಕ್ಕೆ ಕಾರಣ ಇಷ್ಟೆ: ಪ್ರತಿಯೊಬ್ಬರಿಗೂ ನಮ್ಮ ರಾಜ್ಯವನ್ನು ಬೇಗ ಚೆನ್ನಾದ ನಾಡನ್ನಾಗಿ ಮಾಡಬೇಕೆಂಬ ಆಸೆಯಿದೆ. ಅದೇಕೆ ಚೆನ್ನಾದ ನಾಡು ಎಂಬ ಹೆಸರು ಬಂದಿದೆಯೋ ಏನೋ, ಅದು ಚೆನ್ನಾದ ಸರಪಣಿಯಾಗಿದೆ. 20 ವರ್ಷದ ಹಿಂದಿದ್ದ ಪರಿಸ್ಥಿತಿ ನೋಡಬೇಕು. 1947 ರಲ್ಲಿ ರಾಜ್ಯದ ಒಟ್ಟು ಆದಾಯವೆಷ್ಟಿತ್ತು ಎಂದು ನೋಡಿದರೆ 5–6 ಕೋಟಿ ಇತ್ತು. ಒಂದು ಗಾದೆಯಿದೆ, ಸತ್ತ ಎಮ್ಮೆಗೆ ಪಂಚೇರು ಹಾಲು ಎಂದು. ಅದು ಅಷ್ಟು ಹಾಲು ಕೊಡುವಿದ್ದರೂ ಕೂಡ ಹಾಗೆ ಹೇಳುವುದುಂಟು. ಎಮ್ಮೆ ಸತ್ತು ಹೋಯಿತು, ಆಮೇಲೆ ಹೆಂಗಸರು ಅದು ಹಾಗಿತ್ತು,

(ಶ್ರೀ ರಾಮಕೃಷ್ಣ ಹೆಗಡೆ)

ಹೀಗಿತ್ತು, ಚೆನ್ನಾಗಿತ್ತು., 5 ಸೇರು ಹಾಲು ಕೊಡುತ್ತಿತ್ತು, ಒಂದು ಹೊತ್ತಿಗೆ ಅಪ್ಪು ಅದರಿಂದ ಸಿಕ್ಕುತ್ತಿತ್ತು ಎಂದು ಹೇಳುವುದುಂಟು. ಕಥೆ ಹೀಗಿದೆ. ಈ ದಿವಸ ನಮ್ಮ ಬೆಂಗಳೂರು ಕಾರ್ಪೊರೇಷನ್ ಆದಾಯ ಎಷ್ಟಿದೆ ಅಷ್ಟು ಆದಾಯ 1946 ರಲ್ಲಿತ್ತು.

ಶ್ರೀ ಎಸ್. ಚೆನ್ನಯ್ಯ.— ರಿಸರ್ವ್ ಫಂಡು ಎಷ್ಟಿತ್ತು ?

ಶ್ರೀ ರಾಮಕೃಷ್ಣ ಹೆಗಡೆ.—18 ಕೋಟಿ ಕಾಂಗ್ರೆಸ್ ರಾಜ್ಯ ಬಂದಮೇಲೆ ಇತ್ತು.

ಶ್ರೀ ಎಸ್. ಚೆನ್ನಯ್ಯ.—ಆಗ ರಿಸರ್ವ್ ಫಂಡು ಇಲ್ಲದಿದ್ದರೆ ಶರಾವತಿ ಯೋಜನೆಯನ್ನು ಮಾಡುವುದಕ್ಕೆ ಇವರ ಕೈಲಿ ಆಗುತ್ತಿರಲಿಲ್ಲ. 1946-47 ರಲ್ಲಿ ಕಾಂಗ್ರೆಸ್ ಸರಕಾರ ಬಂದಮೇಲೆ ಶರಾವತಿ ಯೋಜನೆ ಕೆಲಸವನ್ನು ಮಾಡಲು ಪುರು ಮಾಡಿದರು.

ಶ್ರೀ ರಾಮಕೃಷ್ಣ ಹೆಗಡೆ.—ಇಡೀ ದೇಶಕ್ಕೆ ಒಂದು ಹೊಸ ಮಾರ್ಗದರ್ಶನವನ್ನು ಮಾನ್ಯ ದಿವಂಗತ ಸರ್ ಎಂ. ವಿಶ್ವೇಶ್ವರಯ್ಯನವರು ಹಾಕಿಕೊಟ್ಟಿದ್ದರು. ಅದರ ಬಗ್ಗೆ ಯಾವ ವಿಧವಾದ ಅಭಿಪ್ರಾಯ ಬೇಧವೂ ಇಲ್ಲ. ಅಧಿಕಾರದಲ್ಲಿ ಅವರಿದ್ದಾಗ ಅಷ್ಟಾಗಿ ಇಲ್ಲದಿದ್ದ ಯಾವ ಒಂದು ಗೌರವ ಮತ್ತು ಅಭಿಮಾನವಿತ್ತೋ ಅದು ಇಂದು ಹೆಚ್ಚಿದೆ. ಈಗ ಕಾಂಗ್ರೆಸ್ ಸರಕಾರ ಸ್ಥಾಪನೆಯಾದ ಮೇಲೆ ಬಂಡವಾಳ ಐದೂವರೆ 6 ಕೋಟಿ ಇತ್ತು, 1946-47 ರಲ್ಲಿ. ಅದರಿಂದ ಒಟ್ಟು ಬರುವ ಉತ್ಪತ್ತಿ ಸುಮಾರು 10 ಲಕ್ಷ ರೂಪಾಯಿ ಭದ್ರಾವತಿ ಕಾರ್ಖಾನೆ ಬಗ್ಗೆರೆ ಎರಡಾ ನೀರಿದೆ. ಆಗಲೂ ಕೂಡ ಚೆನ್ನಾಗಿತ್ತು ಎಂದು ಹೇಳುವಾಗ ಔದ್ಯೋಗಿಕ ಅಭಿವೃದ್ಧಿ ಇಂದು ಪರಮೋಚ್ಚ ಮಟ್ಟ ಮುಟ್ಟಿರಾಗ ನಾವು ಹಾಕಿದ ಬಂಡವಾಳದಮೇಲೆ ಸೇಕಡ ಒಂದೂವರೆಯಷ್ಟು ಮಾತ್ರ ಅದರಿಂದ ಬರುತ್ತಿದೆ ಹತ್ತು ವರ್ಷದ ಹಿಂದಿನ ಸ್ಮರಣೆ ಇಂದು ನೆನಪಿಗೆ ಬರುತ್ತಿದೆ.

ಬೇಕಾದಷ್ಟು ಯತ್ನ ಆಗಿದೆ, ಅದೆರ್ಲಾ ಈಗ ಸ್ಮೃತಿಯಾಗಿ ಉಳಿದಿದೆ. ಅದನ್ನು ಪುನಃ ನೆನಸಬೇಕಾಗಿಲ್ಲ. ಹಿಂದೆ ಅದದ್ದೆರ್ಲಾ ಬಹಳ ಚೆನ್ನಾಗಿತ್ತು, ಹಾಗಿತ್ತು, ಹೀಗಿತ್ತು ಎಂದು ಈಹೊತ್ತು ಹೇಳುತ್ತೇವೆ. ಇನ್ನು ಹತ್ತುವರ್ಷದ ನಂತರ ಬಹುಶಃ ಜನರು ಏನು ಹೇಳುತ್ತಾರೆ ಎಂದರೆ ಹತ್ತು ವರ್ಷದ ಹಿಂದೆ ಚೆನ್ನಾಗಿತ್ತು ಎಂದು ಹೇಳುತ್ತಾರೆಯೋ ಏನೋ ; ಇರಲಿ. ನಾನು ನಿನ್ನ ಭಾಷಣದಲ್ಲಿ ಒಂದು ಮಾತನ್ನು ಹೇಳಿದ್ದೇನೆ, ಅದೇನೆಂದರೆ ಇವತ್ತಿನ ಇಂದಿನ ಪರಿಸ್ಥಿತಿಯಲ್ಲಿ ನಾವು ಏನು ಹಣವನ್ನು ಸರ್ಕಾರಿ ಕ್ಷೇತ್ರದ ಉದ್ಯಮಗಳಲ್ಲಿ ತೊಡಗಿಸಿದ್ದೇವೆ ಅದಕ್ಕೆ ಸಾಕಾದಷ್ಟು ಪ್ರಾಪ್ತಿ ಇವತ್ತು ಬರುತ್ತಾ ಇಲ್ಲ. ಅದಕ್ಕೆ ನಮ್ಮ ಔದ್ಯೋಗಿಕ ನೀತಿ ಇನ್ನು ಮುಂದೆ ಪುನರ್ಮಾರ್ಪೆಯಾಗುವುದು ಅಗತ್ಯ ಎಂಬ ಮಾತನ್ನು ಹೇಳಿದ್ದೇನೆ. ಇದನ್ನು ನಾನು ಹೇಳುವುದಕ್ಕೆ ಕಾರಣವೇನು ? ಕೇಂದ್ರ ಸರ್ಕಾರದವರು ಔದ್ಯೋಗಿಕ ಪಾಲಿಸಿಯನ್ನು ನಿರೂಪಣೆ ಮಾಡತಕ್ಕವರು, ಯಾವುದೇ ಒಂದು ರಾಜ್ಯದ ಸರ್ಕಾರ ಅದು ಕಾಂಗ್ರೆಸ್ ಸರ್ಕಾರ ಆಗಿರಲಿ, ಕಮ್ಯೂನಿಸ್ಟ್ ಸರ್ಕಾರ ಆಗಿರಲಿ ಈ ದೇಶದ ಆರ್ಥಿಕ ನೀತಿಯನ್ನು ನಿರೂಪಣೆ ಮಾಡತಕ್ಕ ಅಧಿಕಾರ ಇವತ್ತು ರಾಜ್ಯ ಸರ್ಕಾರಕ್ಕೆ ಇಲ್ಲ, ನಾವು ನಮ್ಮದೇ ಆದ ಒಂದು ಸಣ್ಣ ಕ್ಷೇತ್ರದಲ್ಲಿ ಇಷ್ಟು ಮಾಡಬಹುದೇ, ಕಡಿಮೆ ಮಾಡಬಹುದೇ ಅಂತ ಯೋಚನೆ ಮಾಡಬಹುದೇ ಹೊರತು ಬೆರೆಗಳ ಹತೋಟಿಯಾಗಲಿ, ಯಾರ ಮೇಲೆ ಎಷ್ಟು ಟ್ಯಾಕ್ಸ್ ಹಾಕಬೇಕೆನ್ನುವ ವಿಚಾರವಾಗಲಿ ಅಥವಾ ನಮ್ಮ ಆರ್ಥಿಕ ಮೂಲಭೂತ ಸಿದ್ಧಾಂತಕ್ಕೆ ಸಂಬಂಧಪಟ್ಟ ಯಾವುದೇ ವಿಚಾರವನ್ನೇ ಆಗಲಿ ನಿರೂಪಣೆ ಮಾಡತಕ್ಕ ಅಧಿಕಾರ ರಾಜ್ಯಸರ್ಕಾರಕ್ಕೆ ಇವತ್ತು ಇಲ್ಲ. ಅದನ್ನು ಕೇಂದ್ರಸರ್ಕಾರವದವರು ಮಾಡಬೇಕು. ಇಂದು ನಾವು ನಮ್ಮ ರಾಜ್ಯದಲ್ಲಿ ಸರ್ಕಾರಿ ಉದ್ಯಮಕ್ಕೆ ಮತ್ತು ಕೆಲವು ಕಡೆಗಳಲ್ಲಿ ಖಾಸಗಿ ಉದ್ಯಮಕ್ಕೆ ಸ್ವಲ್ಪಮಟ್ಟಿನ ಬಂಡವಾಳವನ್ನು ಹಾಕಿದ್ದೇವೆ. ಅವೆಲ್ಲವನ್ನೂ ಸೇರಿಸಿದರೆ ಒಟ್ಟು ಸುಮಾರು 90 ಕೋಟಿ ರೂಪಾಯಿಯಷ್ಟು ಬಂಡವಾಳ ಆಗುತ್ತದೆ. ಬಹಳ ಕಡಿಮೆ ಪ್ರಮಾಣದಲ್ಲಿ ಖಾಸಗಿ ಕ್ಷೇತ್ರದ ಉದ್ಯಮಗಳಲ್ಲಿ ಷೇರ್ ಕ್ಯಾಪಿಟಲ್ ಕೊಟ್ಟಿದ್ದೇವೆ. ಅದು ಸುಮಾರು ಎರಡು ಕೋಟಿ ರೂಪಾಯಿಗಳಾಗುತ್ತದೆ. ನಮ್ಮ ಉದ್ಯಮಗಳಲ್ಲಿ ಸುಮಾರು 82 ಕೋಟಿ ರೂಪಾಯಿಗಳಷ್ಟು ನಮ್ಮ ಬಂಡವಾಳ ಇವತ್ತು ಇದೆ. ಅದರಲ್ಲಿ ಸುಮಾರು 20 ಕೋಟಿ ರೂಪಾಯಿಯಷ್ಟು ಸಹಕಾರಿ ಕ್ಷೇತ್ರದಲ್ಲಿ ಇದೆ. ಈ ಇಂಡಸ್ಟ್ರಿಯರ್ ಕನ್ಸರ್ನ್ಸ್‌ನಿಂದ ಒಟ್ಟುಬರತಕ್ಕ ಉತ್ಪಾದನೆ ಇಲ್ಲಿಯವರೆಗೂ ಮೈನಸ್. ಅದನ್ನು ನನ್ನ ಬಜೆಟ್ ಭಾಷಣದಲ್ಲಿ ಕೊಟ್ಟಿದ್ದೇನೆ. 14 ಲಕ್ಷ ರೂಪಾಯಿಗಳಷ್ಟು ಕಳೆದ ವರ್ಷ ಬಂದಿದೆ.

1963-64 ರಲ್ಲಿ ... ಸುಮಾರು 65 ಲಕ್ಷ ರೂಪಾಯಿ,

1964-65 ರಲ್ಲಿ ... ತುಸ ಹೆಚ್ಚು ಕಮ್ಮಿ ಅಷ್ಟೆ, 65 ಲಕ್ಷ ರೂಪಾಯಿ

1965–66 ರಲ್ಲಿ ... ಸುಮಾರು 123 ಲಕ್ಷ ರೂಪಾಯಿ
1966–67 ರಲ್ಲಿ ... ಸುಮಾರು 101 ಅಥವಾ 102 ಲಕ್ಷ ರೂಪಾಯಿ
1967–68 ರಲ್ಲಿ ... ಸುಮಾರು 149–150 ಲಕ್ಷ ರೂಪಾಯಿ 1968–69 ರಲ್ಲಿ 46 ಲಕ್ಷ ರೂಪಾಯಿನಷ್ಟು ಲುಕ್ಸಾನಾಗಿದೆ.

1969–70 ರಲ್ಲಿ ಸುಮಾರು 14 ಲಕ್ಷ ರೂಪಾಯಿನಷ್ಟು ಉತ್ಪಾದನೆ ಬರಬಹುದು ಎಂದು ಅಂದಾಜು ಇದೆ. ಈಗ ಒಂದು ಕಡೆ ನದೀ ನೀರಿನ ಮೇಲೆ ನಮ್ಮ ಅಧಿಕಾರ ಹೊರಟು ಹೋಗುತ್ತದೆ, ಅದಕ್ಕೆ ಹೆಚ್ಚು ಖರ್ಚು ಮಾಡಬೇಕೆಂದು ನಾವು ಬಯಸುತ್ತೇವೆ. ಮತ್ತೊಂದು ಕಡೆ ವ್ಯವಸಾಯ ಕ್ಷೇತ್ರದಲ್ಲಿ ಹಚ್ಚಿನ ಉತ್ಪಾದನೆ ಇನ್ನೂ ಆಗಿಲ್ಲ ಅದಕ್ಕೆ ಹೆಚ್ಚು ತೆರಿಗೆಯನ್ನು ಹಾಕ ಕೂಡದು ಎಂದು ವಾದ ಮಾಡುತ್ತೇವೆ. ಮತ್ತೊಂದು ಕಡೆ ಶಹರದಲ್ಲಿ ಸಾಕಾದಷ್ಟು ತೆರಿಗೆಯ ಮಟ್ಟ ಮುಟ್ಟಿದ್ದೇವೆ ಅಲ್ಲಿ ಹೆಚ್ಚು ಹಾಕಕೂಡದು ಎಂಬ ವಾದ ಕೂಡ ಇದೆ. ಇರಿಗೇಷನ್‌ಗೆ ಹಾಕುವುದು ಇಷ್ಟು ದೊಡ್ಡ ಬಂಡವಾಳ ಸರುಪಯುಕ್ತವಾದ ಬಂಡವಾಳ ಎಂದು ಏನು ಹೇಳುತ್ತೇವೆ, ಅದನ್ನು ಅದಕ್ಕೆ ಕೊಡಬೇಕು, ನಡೆಸಿಕೊಂಡು ಹೋಗಬೇಕು, ಇದೆರ್ಲಾ ಹೇಗೆ ಸಾಧ್ಯ ! ಈ ಮಾತನ್ನೆರ್ಲಾ ಕೆಲವರು ಅವರ ಭಾಷಣದಲ್ಲಿ ಹೇಳಿದ್ದಾರೆ, ಅವರ ಹೆಸರು ನನ್ನಲ್ಲಿ ಉಂಟು. ಅದನ್ನೆರ್ಲಾ ಓದಿದ್ದೇನೆ. ಇದಕ್ಕೆ ಸೋಷಿಯಲಸಂ ಅಂತ ಕರೆದರೆ ನಾನು ಏನು ಹೇಳಿದೆ ! ಈಗ ಸರಿಯಾಗಿ ನಡೆಯದೇ ಇರತಕ್ಕ ಸರ್ಕಾರಿ ಕ್ಷೇತ್ರದಲ್ಲರತಕ್ಕ ಉದ್ಯಮಗಳು ಅವು ಸರಿಯಾಗಿ ನಡೆಯುತ್ತವೆ ಎಂದು ಅನ್ನತಕ್ಕ ಒಂದು ವಿಶ್ವಾಸ ನಮಗೆ ಇದೆ. ಖಾಸಗಿ ವಲಯದ ಜನರ ಸಹಾಯವನ್ನು ತೆಗೆದುಕೊಂಡು ಅವನ್ನು ಒಂದು ವ್ಯವಸ್ಥೆಗೆ ತರಲಕ್ಕೆ ಸರ್ಕಾರ ಹಿಂದುಮುಂದು ನೋಡುವುದಿಲ್ಲ ಎಂಬ ಮಾತನ್ನು ಹೇಳಿದ್ದೇನೆ. ಆ ಮಾತನ್ನು ಹೇಳುವಾಗ ನನಗೆ ಸ್ವಲ್ಪಮಟ್ಟಿಗೆ ಸಮಾಜವಾದದಲ್ಲಿ ನಂಬಿಕೆ ಇರುವುದರಿಂದ ಇವತ್ತಿನ ಪರಿಸ್ಥಿತಿಯನ್ನು ನೋಡಿ ನಾವು ವಾಸ್ತವಿಕವಾದಂತಹ ಮತ್ತು ಪ್ರೊಜೆಂಟ್ ಆದಂತಹ, ಬುದ್ಧಿವಂತಿಕೆಯಾದಂತಹ ಕ್ರಮವನ್ನು ತೆಗೆದುಕೊಳ್ಳುವುದು ಒಳ್ಳೆಯದು. ನಮ್ಮ ಜನತೆಗೆ ಕಲ್ಯಾಣವಾಗ ಬೇಕಾದರೆ. ಎರ್ಲಾ ಮನಾಪಲಿಯನ್ನೂ ರಾಜ್ಯಕ್ಕೆ ಕೊಡಬೇಕೆಂದು ಅಲ್ಲ. 1957ನೇ ಇನವಿ ಇಂಡಸ್ಟ್ರಿಯಲ್ ರೆವಲ್ಯೂಷನ್ ಕೂಡ ಎಸ್ಕೆಡ್ ಎಕಾನಮಿ ಇರಬೇಕೆಂದು ಆಯಿತು. ಮದ್ರಾನು ಒಂದನ್ನು ಬಿಟ್ಟು, ಪ್ರತಿಯೊಂದು ಸರ್ಕಾರಿ ವಲಯದಲ್ಲೇ ಆಗಬೇಕು, ಪ್ರತಿಯೊಂದು ಸರ್ಕಾರದಪರೇ ಸ್ಥಾಪನೆ ಮಾಡಬೇಕು ಎಂದು ಹೇಳುವವರಿಗಿಂತ ಅಲ್ಲಿ ಹೆಚ್ಚು ಪಟ್ಟು ಅಭಿವೃದ್ಧಿಯಾಗಿದೆ, ಜನರಿಗೆ ಉದ್ಯೋಗ ಸಿಕ್ಕಿದೆ. ಅವರ ಆದಾಯ ಹೆಚ್ಚಾಗಿದೆ, ಅನೇಕ ರೀತಿಯಲ್ಲಿ ರಾಭ ಸಮಾಜಕ್ಕೆ ಆಗಿದೆ.

ಶ್ರೀ ಎಸ್. ಗೋಪಾಲಗೌಡ.—ಅವರು ರಾಷ್ಟ್ರೀಕರಣ ಬಿಟ್ಟರು, ಟಿ. ಎ. ಎಸ್. ಸುಂದರಂ ಅವರಿಗೆ ಕೊಟ್ಟರು.

ಶ್ರೀ ರಾಮಕೃಷ್ಣ ಹೆಗಡೆ.—ನಾನು ಹೇಳುತ್ತೇನೆ ಅದರ ಬಗ್ಗೆ ಭಿನ್ನಾಭಿಪ್ರಾಯ ಇರಬಹುದು. ನನ್ನ ಖಚಿತವಾದ ಅಭಿಪ್ರಾಯವೇನೆಂದರೆ ಯಾವ ಒಂದು ಕ್ಷೇತ್ರಕ್ಕೆ ಖಾಸಗಿ ಬಂಡವಾಳ ಬರತಕ್ಕುದು ಸಾಧ್ಯವಿದೆಯೋ, ಉತ್ಪಾದನೆ ಅದರಲ್ಲಿ ನಿರಾತಂಕವಾಗಿ ನಡೆಯುವುದಕ್ಕೆ ಸಾಧ್ಯ ವಿದೆಯೋ ಅಲ್ಲಿ ಸರ್ಕಾರದವರು ಬಂಡವಾಳವನ್ನು ಹಾಕುವುದು ಯೋಗ್ಯವಲ್ಲ. ಇವತ್ತು ಬಸ್ಸಿನ ವಿಚಾರ ತಾವು ಗಮನಿಸಬೇಕು. ಎಂ. ಎಸ್. ಆರ್. ಟಿ. ಸಿ. ಯಲ್ಲಿ 20 ಕೋಟಿರೂಪಾಯಿಗಳನ್ನು ಹಾಕಿದ್ದೇವೆ. ಜನರಿಗೆ ಕಲ್ಯಾಣವಾಗತಕ್ಕ ಮಾರ್ಗ ಅದನ್ನು ಒಪ್ಪುತ್ತೇವೆ. ಆದರೆ ಕೆಲವು ಕಡೆ ಕುಡಿಯಲಕ್ಕೆ ನೀರು ಇಲ್ಲದಂತಹ ಹಳ್ಳಿಗಳು ಇವೆ, ಬರಗಾಲ ಪೀಡಿತವಾದ ಸ್ಥಳಗಳು ಇವೆ ಅವಕ್ಕೆ ಪ್ರಯಾರಿಟಿ ಕೊಡಬೇಕೇ ಅಥವಾ ಪ್ರಯಾಣಿಕರ ಸುಖವನ್ನು ಬಯಸಿ ಲುಕ್ಸಾನಾಗಲ, ಹಾನಿಯಾಗಲ ರಾಷ್ಟ್ರೀಕರಣ ಮಾಡಿದ್ದೇವೆ ಎಂದರೆ ಸಂತೋಷವಾಗುತ್ತದೆ ಎಂದು ಹೇಳಿ ಆ ದೃಷ್ಟಿಯಿಂದ ಮಾಡಬೇಕೇ ?

ಶ್ರೀ ಎಸ್. ಶಿವಪ್ಪ.—ನೀವು ಯೋಚನೆ ಮಾಡಿ ಹೇಳಿ.

ಶ್ರೀ ರಾಮಕೃಷ್ಣ ಹೆಗಡೆ.—ಅದಕ್ಕೆ ಹೇಳಿದೆ ಯಾರಾದರೂ ತಪ್ಪು ಮಾಡಿದ್ದರೆ ಪುನಃ ಅದೇ ತಪ್ಪನ್ನು ಮುಂದೆ ಮಾಡಕೂಡದು. ಈಗ 82 ಕೋಟಿ ರೂಪಾಯಿಗಳನ್ನು ಏನು ಹಾಕಿದ್ದೇವೆ ಕನಿಷ್ಠ ಪಕ್ಷ ಅದಕ್ಕೆ ಸರಿಯಾದ ಪ್ರಾಪ್ತಿ ಬರಬೇಕು. ಸರ್ಕಾರಿವಲಯದಲ್ಲರುವ ಕಾರ್ಖಾನೆಗಳು ಯೋಗ್ಯವಾಗಿ ನಡೆಯುವಂತಹದು ಎರಡು ಪರಿಸ್ಥಿತಿಯಲ್ಲ ಸಾಧ್ಯ. ಮೊದಲನೆಯ ಪರಿಸ್ಥಿತಿ ಈ ದೇಶದ ಪ್ರತಿಯೊಬ್ಬ ನಾಗರಿಕನೂ ಪ್ರಾಮಾಣಿಕನಾಗಿರಬೇಕು, ಕಷ್ಟಪಟ್ಟು ದುಡಿಯಬೇಕು, ರಾಷ್ಟ್ರೀಯ ಭಾವನೆಯಿಂದ ಪ್ರೇರಿತನಾಗಿರಬೇಕು.

ಶ್ರೀ ಎಸ್. ಚೆನ್ನಯ್ಯ.—ಅದನ್ನು ತಾವು ತಮ್ಮ ಆಡಳಿತದಲ್ಲಿ ತೋರಿಸಿಕೊಡಬೇಕು, ಮಾರ್ಗದರ್ಶನ ಮಾಡಬೇಕು.

ಶ್ರೀ ರಾಮಕೃಷ್ಣ ಹೆಗಡೆ.—ಎರಡನೆಯದು ಎಂದರೆ ಪ್ರಜಾಪ್ರಭುತ್ವ ಅಲ್ಲದೇ ಸರ್ವಾಧಿಕಾರತ್ವ ಕೂಡ ಇರಬೇಕು. ಇವತ್ತು ರಷ್ಯಾದಲ್ಲಿ ನಡೆಯುತ್ತಾ ಇದೆ, ಯುಗೋಸ್ಲೊವಿಯಾದಲ್ಲಿ ನಡೆಯುತ್ತಾ ಇದೆ.

ಶ್ರೀ ಎಂ. ಎಸ್. ಕೃಷ್ಣನ್.— ಹೊಸ ನೀತಿಯನ್ನು ಪ್ರತಿಪಾದನೆ ಮಾಡುತ್ತಾ ಇದ್ದೀರಿ.

ಶ್ರೀ ರಾಮಕೃಷ್ಣ ಹೆಗಡೆ.—ಹೊಸದೇನೂ ನಾನು ಪ್ರತಿಪಾದನೆ ಮಾಡುತ್ತಾ ಇಲ್ಲ. ಮೈಸೂರಿನ ಇಂಡಸ್ಟ್ರಿಯಲ್ ಪಾಲಿಸಿ ವಿಚಾರದಲ್ಲಿ ನಮ್ಮ ಸ್ನೇಹಿತರಾದಂತಹ ಶ್ರೀಮಾನ್ ಐ, ಎಂ, ಎಸ್, ನಂಬೂದ್ರಿಪಾದ್‌ರವರು ಕೇರಳದಲ್ಲಿ ಯಾವ ಪಾಲಿಸಿಯನ್ನು ಅನುಸರಿಸುತ್ತಾ ಇದ್ದಾರೋ ಅದನ್ನೇ ಅನುಸರಿಸುತ್ತಾ ಇದ್ದೇವೆ. ಶ್ರೀ ಕೃಷ್ಣನ್‌ರವರು ನಾನು ನನ್ನ ಮಾತುಗಳನ್ನು ಮುಗಿಸಿದ ಮೇಲೆ ಅವರು ಎಷ್ಟು ಪ್ರಶ್ನೆಯನ್ನಾದರೂ ಕೇಳಲಿ, ಅದಕ್ಕೆ ಉತ್ತರ ಕೊಡಬಲ್ಲೆ. ಆದರೆ ಮಧ್ಯೆ ಬಾಯಿ ಹಾಕುವುದು ಬೇಡ ಎಂದು ಹೇಳುತ್ತೇನೆ. ನನ್ನ ಸ್ನೇಹಿತರೊಬ್ಬರು ಯುಗೋಸ್ಲೋವಿಯಾದ ವಿಚಾರ ಹೇಳಿದರು, ಅಲ್ಲಿರತಕ್ಕ ಪಬ್ಲಿಕ್ ಸೆಕ್ಟಾರಿನಲ್ಲಿ ಕೂಲಿಗಾರರಿಗೆ ಇಂತಿಷ್ಟು ಎಂದು ಒಂದು ಮಿನಿಮಂ ವೇಜಸ್‌ನ್ನು ನಿಗದಿ ಮಾಡಿದ್ದಾರೆ. ಅಲ್ಲಿ ಸರ್ಕಾರದ ಪರವಾಗಿ ಒಬ್ಬ ಪ್ರತಿನಿಧಿ ಇರುತ್ತಾನೆ. ಕೆಲಸಗಾರರ ಪರವಾಗಿ ಐದು ಜನ ಪ್ರತಿನಿಧಿಗಳಿರುತ್ತಾರೆ. ಅಲ್ಲಿ ಸರ್ಕಾರದವರು ಇಂತಿಷ್ಟು ಗುರಿಯನ್ನು ಸಾಧಿಸಲೇಬೇಕೆಂದು ಒಂದು ಟಾರ್ಗೆಟ್ಟನ್ನು ಫಿಕ್ಸ್ ಮಾಡುತ್ತಾರೆ ಅವರು ನಿಗದಿ ಮಾಡಿರತಕ್ಕ ಗುರಿಗಿಂತ ಜಾಸ್ತಿ ಉತ್ಪನ್ನ ಮಾಡಿದರೆ ಆ ಹೆಚ್ಚು ಉತ್ಪನ್ನದಲ್ಲಿ ಅವರಿಗೆ ಹೆಚ್ಚಿನ ರಿಬೇಟ್, ಡಿವಿಡೆಂಟ್ ಇತ್ಯಾದಿಗಳನ್ನು ಕೊಡಲಾಗುತ್ತದೆಂದು ಹೇಳಿದ್ದಾರೆ. ಆ ನಿರ್ಧಾರ ಮಾಡಿರತಕ್ಕ ಗುರಿಗಿಂತ ಕಡಮೆ ಉತ್ಪನ್ನವಾದರೆ ಅವರಿಗೆ ಯಾವ ಹೆಚ್ಚಿನ ಪ್ರತಿಫಲವೂ ಸಿಕ್ಕುವುದಿಲ್ಲ. ಪೂರ್ಣ ಕಮ್ಯುನಿಜಂನಲ್ಲಿ ಕೂಡ ಏನು ಹೇಳಿದ್ದಾರೆ :

" From each according to his ability, to each according to his work. "

But, this priniciple has never been implemented in any of the commu nist countries till today.

Sri M. S. KRISHNAN.—You are thoroughly wrong, Sir.

ಶ್ರೀ ರಾಮಕೃಷ್ಣ ಹೆಗಡೆ.—ಅವರು ಹೀಗೆ ಫಾಸ್ ಈಚ್ ಮ್ಯಾನ್ಸ್ ಆಕಾರ್ಡಿಂಗ್ ಟು ಹೀಸ್ ಎಬಿಲಿಟಿ ಎಂದು ಹೇಳಿದ್ದಾರೆ. ನಮ್ಮಲ್ಲಿಯೂ ಅದನ್ನು ಪಾರಿಗೆ ತಂದರೆ ಇಲ್ಲಿಯೂ ಅನುಕೂಲವಾಗುತ್ತದೆ ಎಂಬುದನ್ನು ನಾನು ಹೇಳಿದೆ. ಆದರೆ ನಾವಿಲ್ಲಿ ಒಂದು ನೀಡ್‌ಬೇಸ್ ಇಟ್ಟುಕೊಂಡು ಅದರ ಪ್ರಕಾರ ಕೆಲಸಮಾಡುತ್ತಿದ್ದೇವೆ. ಇಲ್ಲಿರತಕ್ಕ ಪರಿಸ್ಥಿತಿಗಳೇನು ಎಂಬುದನ್ನು ನಾವು ಮೊದಲು ತಿಳಿದುಕೊಳ್ಳೋಣ. ಇರತಕ್ಕ ಕೈಗಾರಿಕೆಗಳನ್ನು ಉತ್ತಮಪಡಿಸುವುದಕ್ಕೆ ಏನೇನು ಸಾಧ್ಯವಾಗುತ್ತದೋ ಅದೆಲ್ಲವನ್ನೂ ಮಾಡುವುದಕ್ಕೆ ನಾವು ಸಿದ್ಧವಾಗಿದ್ದೇವೆ. ನಮ್ಮಲ್ಲಿರತಕ್ಕ ಇಷ್ಟು ಮಾನ್ಯ ಸದಸ್ಯರುಗಳ ಹೆಸರು ಯಾರಾದರೂ ಮುಂದೆ ಬರಲಿ ಅವುಗಳನ್ನು ನಡೆಸಿ ಅವುಗಳಿಂದ ಉತ್ತಮ ಫಲವನ್ನು ತರುತ್ತೇವೆಂದು ಹೇಳತಕ್ಕವರೆಗೆ ನಾವು ಅವುಗಳ ಆಡಳಿತವನ್ನು ವಹಿಸಿಕೊಡುವುದಕ್ಕೆ ತಯಾರಾಗಿದ್ದೇವೆ. ಯಾರಿಂದರಾದರೂ ಸರಿ ಅವು ಉತ್ತಮ ಸ್ಥಿತಿಗೆ ಬಂದರೆ ಸಾಕು. ನಮ್ಮಲ್ಲಿ ಹಣವೊಂದಿದ್ದರೆ ಬೇಕಾದಷ್ಟು ಯೋಜನೆಗಳನ್ನು ನಾವು ರೂಪಿಸಿಕೊಳ್ಳಬಹುದು. ಆದರೆ ನಾನು ಹೇಳುತ್ತಿರುವುದು ನಮ್ಮಲ್ಲಿರತಕ್ಕ ಪಬ್ಲಿಕ್ ಸೆಕ್ಟಾರ್ ಅಂಡರ್ ಟೇಕಿಂಗ್ಸ್‌ನಲ್ಲಿ ಅಂದರೆ ಸರ್ಕಾರಿ ಉದ್ದಿಮೆಗಳಲ್ಲಿ ಮೊದಮರಕೆರಾದಲ್ಲಿರತಕ್ಕ ಕಾರ್ಖಾನೆಯಿಂದ ಸ್ವಲ್ಪ ನಷ್ಟವಾಗುತ್ತಿದೆ, ಅಂದರೆ ಸುಮಾರು 1½ ಲಕ್ಷದವರೆಗೂ ನಷ್ಟವಾಗುತ್ತಿದೆ. ಹಾಸನದಲ್ಲಿರತಕ್ಕ ಮೈಸೂರು ಇಂಪ್ಲಿಮೆಂಟ್ಸ್ ಫ್ಯಾಕ್ಟರಿಯಿಂದ 1965-66 ವರೆಗೂ ಲಾಭದಲ್ಲೇ ಕೆಲಸಮಾಡುತ್ತಿದ್ದುದು ಈ ಸಾಲಿನಲ್ಲಿ ಅಂದರೆ 1966-67 ಕ್ಕೆ 2 ಲಕ್ಷ ನಷ್ಟವಾಗಿದೆ. ಹಾಗೇ ಮೈಸೂರು ಗಾರ್ಮೆಂಟ್ ಸಿರ್ಕ್‌ಫಿಲೇಚರಿನಲ್ಲಿ ಮೂರುವರೆ ಲಕ್ಷ ನಷ್ಟವಾಗಿದೆ. ಇನ್ನು ಗಾರ್ಮೆಂಟ್ ಫಿಲೇಚರ್ ಮೈಸೂರು ಕೊಳ್ಳೇಗಾಲ ಅಲ್ಲಿ 40 ಲಕ್ಷ ನಷ್ಟವಾಗಿದೆ. ಆದರೆ ಮೊನ್ನೆತಾನೆ ಕೇಂದ್ರ ಸರ್ಕಾರದೊಡನೆ ಈ ಫಿಲೇಚರ್ ಕೈಗಾರಿಕೆ ವಿಚಾರವಾಗಿ ಪ್ರಸ್ತಾಪಮಾಡಿದ್ದೇವೆ. ಇದನ್ನು ಕೇಂದ್ರದವರೂ ಮತ್ತು ರಾಜ್ಯ ಸರ್ಕಾರದವರಿಬ್ಬರೂ ಸೇರಿ ಒಂದು ಕಾರ್ಪೊರೇಷನ್ ಮಾಡಿ

ಕೊಂಡು ತನ್ಮೂಲಕ ಕೆಲಸ ನಡೆಸುವಂತೆ ಮಾತುಕತೆಗಳಾಗಿವೆ. ಇನ್ನು ರೆಂಕೋದಲ್ಲಿ 1966-67 ಕ್ಕೆ 10.55 ಲಕ್ಷ 1967-68 ಕ್ಕೆ 29 ಲಕ್ಷ ನಷ್ಟವಾಗಿದೆ ಅದಕ್ಕೆ ಕಾರಣಗಳೂ ಅನೇಕ ಇರುತ್ತವೆ. ಅಂದರೆ ಇದರ ತಾತ್ಪರ್ಯ ನಮ್ಮ ಅಭಿಪ್ರಾಯಗಳೇ ಸರ್ವೋತ್ತಮ ಎಂದು ಹೇಳುವುದಿಲ್ಲ. ನಾವು ಇನ್ನಾದರೂ ನಮ್ಮ ರಾಜ್ಯದಲ್ಲಿ ವ್ಯವಸಾಯ ಮತ್ತು ನೀರಾವರಿ ಕಾಂಗಾರಿಗಳಿಗೆ ಒಂದು ಹೆಚ್ಚಿನ ಆದ್ಯತೆಯನ್ನು ಕೊಡದಿದ್ದರೆ ಮೈಸೂರು ರಾಜ್ಯ ಖಂಡಿತವಾಗಿ ಅಭಿವೃದ್ಧಿಗೆ ಬರಬೇಕಾದರೆ ಬಹಳ ಕಷ್ಟವಾಗುತ್ತದೆ. ಆದರೆ ಕೈಗಾರಿಕೆಗಳೂ ಬೇಕು. ಅವುಗಳನ್ನು ಬೇಡವೆಂದು ನಾನು ಹೇಳುತ್ತಿಲ್ಲ. ಆದರೆ ಕೈಗಾರಿಕೆಗಳಿಂದ ಮೈಸೂರು ರಾಜ್ಯದಲ್ಲಿ ಕೆಲವು ಭಾಗಗಳು ಅಭಿವೃದ್ಧಿಗೆ ಬರಬಹುದು. ದಾವಣಗೆರೆಯ ಸುತ್ತಮುತ್ತ ಇರತಕ್ಕ ನಾರ್ಯಾರು ಹಳ್ಳಿಗಳಿಗೆ ಅಲ್ಲನ ಕೈಗಾರಿಕೆಗಳಿಂದ ರಾಭವಾಗಬಹುದು. ಆದರೆ ಬೇಸಾಯದ ಅಭಿವೃದ್ಧಿಯಿಂದ ದೇಶಕ್ಕೆ ಅನುಕೂಲವಾದಂತೆ ಆ ಬಾಬಿನಿಂದ ಸಾಧ್ಯವಿಲ್ಲ ಎಂಬುದು ನನ್ನ ವಾದ. ಆದರೆ ಎಲ್ಲೆಲ್ಲ ಖಾಸಾಗೀ ಬಂಡವಾಳವನ್ನು ತೊಡಗಿಸಿ ಜನರು ಉದ್ದಿಮೆಯನ್ನೂ ಪ್ರಾರಂಭಿಸಬಲ್ಲರೋ ಅಂಥ ಕಡೆಗಳಲ್ಲಿ ಸರ್ಕಾರದವರು ಕೈ ಹಾಕಬಾರದು ಎಂಬುದು ನನ್ನ ಅಭಿಪ್ರಾಯ. ಈ ದಿವಸ ಯಾವುದಾದರೊಂದು ಖಾಸಗೀ ಸಂಸ್ಥೆಗೆ ಶ್ರೀಮಾನ್ ಕೆ. ಎಚ್. ಪಾಟೀಲರನ್ನು ಅಧ್ಯಕ್ಷರನ್ನಾಗಿಡೋಣ. ಆಗ ಅಲ್ಲಿ ಕೆಲಸ ಕಾರ್ಯಗಳು ಯಾವ ರೀತಿ ನಡೆಯುತ್ತವೆಂಬುದನ್ನು ಅವರನ್ನು ತಪ್ಪಿಸಿ ಅನಂತರ ಅಲ್ಲಿ ಬೇರೆ ಯಾರಾದರೂ ಎ. ಬಿ. ಸಿ. ಅನ್ನುವವರನ್ನು ಇಟ್ಟರೆ ಆಗ ಅದರಲ್ಲಿ ಎಷ್ಟು ವ್ಯತ್ಯಾಸ ಕಾಣುತ್ತದೆಂಬುದನ್ನು ತಾವೆಲ್ಲರೂ ನೋಡಬಹುದು. ಖಾಸಗೀ ಉದ್ಯಮಗಳವರು ದಕ್ಷರಾದ ಅಧಿಕಾರಿಗಳಿಗೆ ತಿಂಗಳಿಗೆ 10 ಸಾವಿರ ರೂಪಾಯಿಗಳನ್ನಾದರೂ ಕೊಡುವುದಕ್ಕೆ ಸಿದ್ಧರಾಗಿರುತ್ತಾರೆ. ಅಲ್ಲ ಜಾತೀಯತೆ, ಸೀನಿಯಾರಿಟಿ ಪ್ರಶ್ನೆಗಳ ಉಪಟಳವಿಲ್ಲ. ನಮ್ಮ ಸರ್ಕಾರಿ ಉದ್ದಿಮೆಗಳಲ್ಲಿ ಹಾಗೆ ಮಾಡುವುದಕ್ಕಾಗುವುದಿಲ್ಲ. ಇಲ್ಲಿ ನೂರೊಂದು ತಕರಾರುಗಳು ಬರುತ್ತವೆ. ನಾಳೆ ಇದೇ ಸಭೆಯಲ್ಲಿ ಆ ಅಧಿಕಾರಿಗಳನ್ನು ಜಾತೀಯತೆ ಮೇರೆ ತಂದಿದ್ದಾರೆ, ಅವರಿಗೆ ಸೀನಿಯಾರಿಟಿ ಇಲ್ಲ ಎಂಬು ಕೂಗು ಏಳುತ್ತದೆ. ನಮ್ಮಲ್ಲಿ ಸರ್ಕಾರದ ಪರವಾಗಿ 3500 ಕೋಟಿ ರೂಪಾಯಿಗಳ ಬಂಡವಾಳದ ಕಾರ್ಖಾನೆಗಳಿವೆ. ಕೇರಳದಲ್ಲಿ ಒಂದೆರಡಿರಬಹುದು. ಅಲ್ಲಿಯೂ ಕೂಡ ಈ ಬಾಬಿನಲ್ಲಿ 35ಕೋಟಿ ರೂಪಾಯಿ ಹಾನಿಯಾಗಿದೆ. ಆದ್ದರಿಂದ ನಾನು ಇಲ್ಲಿ ಈಗ ಅವುಗಳನ್ನು ಪುನರ್ವಿಮರ್ಶೆ ಮಾಡಬೇಕೆಂದು ಹೇಳುತ್ತಿದ್ದೇನೆ.

ಆದರೆ ನಾನು ಸಭೆಗೆ ತಿಳಿಸಬೇಕಾದ ಇನ್ನೆರಡು ಮಹತ್ವದ ವಿಚಾರಗಳಿವೆ. ಅದರಲ್ಲಿ ಮೊದಲನೆಯದು ಗ್ರಾಮೀಣ ಪ್ರದೇಶದಲ್ಲಿರತಕ್ಕ ರೈತರ ಪರಿಸ್ಥಿತಿ ಸುಧಾರಿಸಿದೆ, ಅಲ್ಲ ಹೊದಲದ್ದೆ ಪರಿಸ್ಥಿತಿ ಇಲ್ಲ. ಆ ಭಾಗಗಳು ಅಭಿವೃದ್ಧಿಯಾಗಿವೆ. ಆದಾಗ್ಯೂ ಅವರಿಗೂ ತೆರಿಗೆ ಕಟ್ಟೆಯಲ್ಲಿ ಬಂದಿರುವುದಿಲ್ಲ. ಅದನ್ನೇ ನಾನು ನನ್ನ ವರದಿಯಲ್ಲೂ ಹೇಳಿದ್ದೇನೆ. ಮಾನ್ಯ ಸದಸ್ಯರಿಗೆ ನಾನು ಹೇಳುವುದಿಷ್ಟೆ ಲೇಟೆಸ್ಟ್ ಫಿಗರ್ಸ್ ನನ್ನ ಹತ್ತಿರ ಇಲ್ಲ. ಒಟ್ಟು ವ್ಯವಸಾಯಬಾಬಿನಿಂದ ರೈತನಿಗೆ ಬರತಕ್ಕ ಆದಾಯ 14500 ಕೋಟಿ ರೂಪಾಯಿಗಳು ಅದರಲ್ಲಿ, ರಾಜ್ಯ ಸರ್ಕಾರಗಳಿಗೆ ಕಂದಾಯ ಮತ್ತು ನೀರು ತೆರಿಗೆ ಮತ್ತು ವ್ಯವಸಾಯ ವರಮಾನ ತೆರಿಗೆಯಿಂದ ಬರುವುದು 120 ಕೋಟಿ ಆದರೆ ನಾನ್ ಅಗ್ರಿಕಲ್ಚರಲ್ ಇನಕಂ 688 ಕೋಟಿ ರೂಪಾಯಿಗಳು.

9-00 P.M.

ಶ್ರೀ ಎಸ್. ಗೋಪಾಲ ಗೌಡ.—ಇದರಲ್ಲಿ ಏನಾಗಿದೆಯೆಂದರೆ,ಒಬ್ಬ ಹಳ್ಳಿಯ ರೈತ ಒಂದು ಕ್ಯಾಮರಾ ತೆಗೆದುಕೊಂಡರೆ, ಅವನು ಇನ್‌ಡೈರೆಕ್ಟ್ ಟ್ಯಾಕ್ಸ್ ಎಷ್ಟು ಕೊಡುತ್ತಾನೆ ಎನ್ನುವುದನ್ನು ಗಮನದಲ್ಲಿಟ್ಟುಕೊಂಡರೆ, ಅದರಿಂದ ಎಷ್ಟು ಆದಾಯ ಬರುತ್ತದೆಂಬುದನ್ನು ನೋಡಬಹುದು. ಹಳ್ಳಿಗಳ ಸಂತೆಯಲ್ಲಿ ಬಂದು ವಾರಾಟ ಮಾಡುವವರ ಕಂಟ್ರಿಬ್ಯೂಷನ್ ಎಷ್ಟು ಎಂದು ಇಲ್ಲಿ ಹೇಳುತ್ತಾ ಇಲ್ಲ. 30 ಕೋಟಿ ರೂಪಾಯಿಗಳಷ್ಟು ವಾರಾಟ ತೆರಿಗೆಯಿಂದ ಬರುತ್ತದೆ.

ಶ್ರೀ ರಾಮಕೃಷ್ಣ ಹೆಗಡೆ.—ನಾನು ಮಾತನಾಡುತ್ತಾ ಇರುವುದು ಎರಡು ಪಾಯಿಂಟ್ಸ್. ಇನ್‌ಡೈರೆಕ್ಟ್ ಟ್ಯಾಕ್ಸ್ ಹಳ್ಳಿಯವ ಮತ್ತು ಪಟ್ಟಣದವ ಎಷ್ಟು ಕೊಡತ್ತಾನೆಂಬುದು. ಬೆಂಗಳೂರಿನಲ್ಲಿ ಕೆಲಸಮಾಡುವ ನೌಕರ ಮತ್ತು 50 ಮೈಲಿ ದೂರದಲ್ಲಿ ಗದ್ದೆಯಲ್ಲಿ ಕೆಲಸಮಾಡುವ ರೈತ ಒಂದೇ ರೀತಿಯಾಗಿ ಇನ್‌ಡೈರೆಕ್ಟ್ ಟ್ಯಾಕ್ಸ್ ಕೊಡುತ್ತಾನೆಯೇ ?

ಶ್ರೀ ಎಸ್. ಗೋಪಾಲಗೌಡ.—ಮೈಸೂರು ರಾಜ್ಯದಲ್ಲಿ 50 ಲಕ್ಷ ಜನರು ಪಟ್ಟಣದಲ್ಲಿಯೇ ಇದ್ದಾರೆ.

Sri RAMAKRISHNA HEGDE.—The following table shows Indirect Tax per capita per month (In Rupees) :

Year	*Rural*	*Urban*
1953-54	0·59	1·62

According to the recent study conducted, the per capita tax per month (in rupees) is as follows :

Rural	...	0·93
Urban	...	2·70

Tax percentage of consumer expenditure is as follows :

1958-59 2.9 (Rural) 5·9 (Urban)

According to study conducted by Finance Ministry during 1958-59 it was :

1958-59 4.4 (Rural) 9.3 (Urban)

According to study conducted by Dr. T. N. Raj with reference to National Income, the National Income rose from 4.2 per cent in 1952-53 to 5.4 per cent in 1957-58 in respect of Rural sector, whereas in Urban sector, the corresponding figure was 13 per cent in 1952-53 to 16.5 per cent in 1957-58, thus indicating a steep increase in the taxation of the Urban sector.

The following table indicates the details of approximate share in National Income tax payment :

National Income	1952-53	1957-58
from Rural	(in crores)	
Sector.	6,850	7,900
National Income from Urban Sector. ...	2,980	3,500

So the additional increment in the Rural sector was Rs. 1,050 crores ; the additional increase during the same period in Urban Sector was Rs. 520 crores.

TAX PAYMENT

(in crores)

Year	*Rural*	*Urban*
1952-53	289	383
1957-58	430	575

The increase in taxes in Rural areas during the above period was from 4.2 to 5.4 ; whereas in case of Urban areas it was from 13.0 to 16.5.

According to the study made by the National Council of Applied Economic Research, the marginal rate of tax rose from 10 per cent in 1956-61 to 20 per cent rate of tax rose from 10 per cent in 1960-64 in the Rural Sector; and in Urban sector from 24 per cent in 1956-61 to 42 per cent in 1960-64, as could be seen from the table.

According to another study conducted by Mr. P. Gandhi the per capita tax rate was 3/5th of the per capita tax in non-agricultural sector in 1961-62.

The figures arrived at by the Planning Commission also show that the tax burden on the Rural sector is much less than on the Urban Sector, as summarised in the table. Of course, I am not going into details of it. If any hon. Members are interested they can look into the details.

The following table indicated the instances of taxes and expenditure on agricultural and non-agricultural sectors.

	Agricultural sector	*Non-Agricultural sector*
1950-51	185·52	391·28

It goes on increasing year by year.

ನಾನು ಒಂದು ಮಾತನ್ನು ಹೇಳಬೇಕೆಂದಿದ್ದೇನೆ. ಇದನ್ನು ನಾನು ಒಂದು ವಾದಮಾಡುವ ಉದ್ದೇಶಕ್ಕಾಗಲಿ, ಗ್ರಾಮಾಂತರ ಪ್ರದೇಶಗಳಲ್ಲಿ ತೆರಿಗೆ ಹಾಕುವ ಉದ್ದೇಶದಿಂದಾಗಲಿ ಹೇಳತ್ತಾ ಇಲ್ಲ. ಇದನ್ನು ಏಕೆ ಹೇಳುತ್ತಿದ್ದೇನೆಂದರೆ, ನಾವು ತಿಳಿದುಕೊಳ್ಳಬೇಕಾದುದು ಇವತ್ತು ಟ್ಯಾಕ್ಸ್ ಹಾಕಬೇಕೇ ಬೇಡವೇ? ಹಾಕುವುದಾದರೆ ಎಲ್ಲೆಲ್ಲಿ ಎಷ್ಟೆಷ್ಟು ಹಾಕಬೇಕು?

Sri H. N. NANJE GOWDA.—Have they taken into account the loss incurred by the agriculturist class due to levy rate?

Sri RAMAKRISHNA HEGDE.—I appeal to the hon. Members not to jump to the conclusion. I am not holding brief either for urban sector or rural sector. It is not my intention to argue either on behalf of former or the latter. My only point is to convince the hon. Members about the real situation today in the country in both the sectors.

Sri S. SIVAPPA.—My doubt is the whole statistics is unreal.

Sri RAMAKRISHNA HEGDE.—The hon. Leader of the Opposition questions the very authority of the figures I have. In argument, we have to rely on certain figures and these figures are published by a well-known organisation of National Council for Applied Economic Research and also Government source. This is very interesting statistics so that all of us can know if there is any area where we can have little potential for further taxation. I am not trying to convince the Members to take any decision just now.

Sri S. SIVAPPA.—Figures are arguing for themselves.

Sri RAMAKRISHNA HEGDE.—It is very unfair. So, in agricultural sector, the total incidence of taxes in 1950-51 was 185.52; in 1964-65 it rose to 618.76; and the corresponding figures for non-agricultural sector during the same period of 1950-51 was 391.23; in 1964-65 it was 1750.06

ಇವತ್ತು ನಾವು ನಮ್ಮ ರಾಜ್ಯದ ಒಂದು ಉದಾಹರಣೆ ತೆಗೆದುಕೊಳ್ಳೋಣ. ಒಟ್ಟು ಎಲ್ಲಾ ಸೆಕ್ಟರಿಂದ ಬರತಕ್ಕ ಉತ್ಪನ್ನ ಅಗ್ರಿಕಲ್ಚರಲ್ ಸೆಕ್ಟರಿಂದ ಬರತಕ್ಕ ಉತ್ಪನ್ನ ಅವುಗಳ ಪರ್‌ಸೆಂಟೇಜ್ ಎಷ್ಟು ಎಂದು ಹೇಳುತ್ತೇನೆ.

1960-61 ರಲ್ಲಿ ಅಗ್ರಿಕಲ್ಚರಲ್ ಸೆಕ್ಟರ್ ರಾಜ್ಯದ ಒಟ್ಟು ಉತ್ಪನ್ನ 396 ಕೋಟಿ 20 ಲಕ್ಷ ಇತ್ತು. 1964-65 ರಲ್ಲಿ 573 ಕೋಟಿ 39 ಲಕ್ಷ ರೂಪಾಯಿ ಇದ್ದು ಇತ್ತೀಚೆಗಿನ ಅಂಕಿ ಅಂಶ.

Sri H. N. NANJE GOWDA.—May I know whether the quantity of commodity had increased or was it because of devaluation? Have you taken them into consideration?

Sri RAMAKRISHNA HEGDE.—It may be due to greater production. Secondly it might also be due to rise in prices. There are several factors. The fact is, during the last several years, the total value of agricultural production has gone up considerably. What I have furnished is only an estimate. It is on the basis of available figures. The latest figure in respect of 1967-68 is about Rs. 700 crores. ಈಗ ಸರ ಕಾರಕ್ಕೆ ಪ್ರತಿಯಾಗಿ ಬರತಕ್ಕುದು ಸುಮಾರು 7 ಕೋಟಿ ರೂಪಾಯಿಯಷ್ಟು ಕಂದಾಯ. ಆಮೇಲೆ ಅಗ್ರಿಕಲ್ಚರಲ್ ಒಂದು ಕೋಟಿ ಚಿಲ್ಲರೆ ವಾಟರ್ ರೇಟ್ ಬೆಟರ್‌ಮೆಂಟ್ ಲೆವಿ ಎಲ್ಲಾ ಸೇರಿಸಿದರೆ ಸುಮಾರು ಮೂರು ಕೋಟಿ ರೂಪಾಯಿ ಬರುತ್ತದೆ.

Sri K. H. RANGANATH.—What is the total percentage of population that is residing in rural area?

Sri RAMAKRISHNA HEGDE.—That is applicable to everybody.

Sri D. DEVARAJ URS.—In addition to what he has been saying in regard to national income and incidence of taxation, it is better for our appreciation if he could give us the per capita income of urban sector people and the rural sector people.

ಶ್ರೀ ರಾಮಕೃಷ್ಣ ಹೆಗಡೆ.—ಈ ವಿಚಾರದಲ್ಲಿ ಸ್ವಲ್ಪ ವಿವಾದವಾಗುತ್ತಿರುವುದರಿಂದ ನನ್ನ ಹತ್ತಿರ ಎಷ್ಟು ಮೆಟೀರಿಯಲ್ಸ್ ಇದೆಯೋ, ಅದನ್ನು ಸೈಕ್ಲೋಸ್ಟೈರ್ ಮಾಡಿ ಎಲ್ಲಾ ಮಾನ್ಯ ಸದಸ್ಯರಿಗೆ ಕೊಡುತ್ತೇನೆ. ಅದನ್ನು ಅವರು ಸ್ಟಡಿ ಮಾಡಲಿ. ಅದನ್ನು ನೋಡಿದ ಮೇಲೆ ಇವರು ಕಲ್ಪಿತವಾಗಿ ಹೇಳತಕ್ಕ ವಿಚಾರ ಸರಿಯಿಲ್ಲವೆಂದು ತಿಳಿಯುವುದು. ಯಾವ ಕ್ಷೇತ್ರದಲ್ಲಿ ಸ್ವಲ್ಪ ಆದಾಯ ಬರತಕ್ಕದ್ದು ಸಾಧ್ಯವಿದೆ, ಅದರಲ್ಲಿ ಬಡವರಿಗೆ ಅನ್ಯಾಯಮಾಡಿಲ್ಲ, ಶ್ರೀಮಂತರಿಗೆ ಅನುಕೂಲ ಮಾಡಿಕೊಟ್ಟಿಲ್ಲ.

(*Sri S. Sivappa rose*)

This is not the way of asking for information. I will give all the material to him.

Sri S. SIVAPPA.—When he says there is increase of agricultural production, how fallacious his argument is!

Sri RAMAKRISHNA HEGDE.—That only shows he does not want. to proceed on the line of argument or logic.

ನನ್ನ ನೂಚನೆ ಇಷ್ಟೆ. ನಾವು ರೂರಲ್ ಏರಿಯಾದಲ್ಲಿ ಸುಮಾರು 210 ಕೋಟಿಯಷ್ಟು ಹಾಕಿದ್ದೇವೆ. ಎಲ್ಲಾ ಕಡೆಗೂ ಏನೂ ಸುಧಾರಣೆಯಾಗಿಲ್ಲವೆಂದು ಏನೂ ಇಲ್ಲ. ನೀರಾವರಿ ಯೋಜನೆಯಾಗಿದೆ, ದೊಡ್ಡ ನೀರಾವರಿ ಯೋಜನೆಯಾಗಿದೆ, ಚಿಕ್ಕ ನೀರಾವರಿ ಯೋಜನೆಯಾಗಿದೆ, ಮಧ್ಯಮ ತರದ ಯೋಜನೆಯಾಗಿದೆ ಮತ್ತು ಬಾವಿ ತೋಡುವುದಕ್ಕೆ ಸಹಾಯ ಕೊಡುವುದಾಗಲಿ, ಮತ್ತು ಇನ್ನಿತರ ಸಹಾಯದ ಮುಖಾಂತರವಾಗಲಿ ಎಲ್ಲಾ ಉತ್ತಮ ಕೆಲಸಗಳು ಆಗಿವೆ.

ಎಲ್ಲಾ ಕಡೆ ಅಲ್ಲದಿದ್ದರೂ ಕೆಲವು ಕಡೆಗಳಲ್ಲಿ ಈಗ ಉತ್ಪನ್ನ ಹಿಂದಿಗಿಂತ ಮುಮ್ಮಡಿ, ನಾಲ್ಮಡಿ ಹೆಚ್ಚಾಗಿದೆ. ಕೋರಾರದ ಎಲ್ಲಾ ಭಾಗಗಳಲ್ಲಿಯೂ ಹೆಚ್ಚಾಗಿದೆ ಎಂದು ನಾನು ಹೇಳುವುದಿಲ್ಲ. ಚಿತ್ರದುರ್ಗ ಜಿಲ್ಲೆಯಲ್ಲಿ ಎಲ್ಲಾ ಕಡೆಗಳಲ್ಲಿ ಉತ್ಪತ್ತಿ ಹೆಚ್ಚಾಗಿದೆ ಎಂದು ನಾನು ಹೇಳುವುದಿಲ್ಲ. ಚಿತ್ರದುರ್ಗ ಜಿಲ್ಲೆಯಲ್ಲಿ ಕೆಲವು ಭಾಗಗಳಲ್ಲಿ ರಾಯಚೂರು ಜಿಲ್ಲೆಯಲ್ಲಿ ಗಂಗಾವತಿ ಮುಂತಾದ ಭಾಗಗಳಲ್ಲಿ, ಶಿವಮೊಗ್ಗ ಜಿಲ್ಲೆಯಲ್ಲಿ ಕೆಲವು ಭಾಗಗಳಲ್ಲಿ, ಮಂಡ್ಯಾಜಿಲ್ಲೆಯಲ್ಲಿ ಕೆಲವು ಭಾಗಗಳಲ್ಲಿ, ಹಾಗೂ ರಾಜ್ಯದ ಇನ್ನೂ ಕೆಲವು ಭಾಗಗಳಲ್ಲಿ ಉತ್ಪತ್ತಿ ಹೆಚ್ಚಾಗಿಲ್ಲ ಎಂದು ಹೇಳಿದರೆ ಯಾರೂ ಒಪ್ಪತಕ್ಕ ಮಾತು ಅಲ್ಲ. ಎಲ್ಲಾ ಹಾವನ್ನೂ ತೆಗೆದುಕೊಂಡು ಹೋಗಿ ಕೆಲವು ಪ್ರದೇಶದ ಅಭಿವೃದ್ಧಿಗೆ ಪ್ರಗತಿಗೆ ಖರ್ಚು ಮಾಡಿದ್ದೇವೆಂದು ತಮಗೆ ಅಭಿಪ್ರಾಯವಾದಮೇಲೆ, ಬೇರೆ ಪ್ರದೇಶದ ಅಭಿವೃದ್ಧಿ ಮಾಡುವುದಕ್ಕೆ ದುಡ್ಡು ಕೊಡುವುದಿಲ್ಲ ಎಂಬ ಪ್ರವೃತ್ತಿ ಯಾವತರಹದಲ್ಲಿ ಯೋಗ್ಯವಾಗಿ ಕಾಣುತ್ತದೆ? ಹೆಚ್ಚು ನೀರಾವರಿ ಕೆಲಸಗಳನ್ನು ಕೈಗೊಳ್ಳಬೇಕಾದರೆ ಯಾರು ಹಿಂದೆ ಸರ್ಕಾರದಿಂದ ಸಹಾಯವನ್ನು ಪಡೆದು ಪ್ರಯೋಜನವನ್ನು ಪಡೆದುಕೊಂಡಿದ್ದಾರೆಯೋ ಅವರು ಸ್ವಲ್ಪಮಟ್ಟಿಗೆ ಈಗ ತ್ಯಾಗ ಮಾಡಬಿದ್ದರೆ ನಮ್ಮದೇ ರಾಜ್ಯದ ಜನರು ಅಭಿವೃದ್ಧಿ ಹೊಂದತಕ್ಕ ಬಗೆ ಹೇಗೆ! ಸರ್ಕಾರದಿಂದ ಸಾಲವನ್ನು ತೆಗೆದುಕೊಂಡು 15 ಸಾವಿರ ರೂಪಾಯಿಗಳ ಸಾಲವನ್ನು ತೆಗೆದುಕೊಂಡು ಹೋಗಿ ಬಾವಿ ತೆಗೆದು ಪಂಪುಸೆಟ್ಟು ಹಾಕಿಕೊಂಡು ವರ್ಷಕ್ಕೆ 3 ಬೆಳೆ ಬೆಳೆಯುತ್ತಿರುವ ರೈತರು ಎಕರೆಗೆ 15 ರೂಪಾಯಿಗಳನ್ನು ಸರ್ಕಾರಕ್ಕೆ ಕೊಡಿ ಎಂದು ಕೇಳಿದರೆ ಅದಕ್ಕೆ ಅವರು ಒಪ್ಪದಿದ್ದರೆ ರಾಜ್ಯಕ್ಕೆ ದ್ರೋಹಮಾಡಿದಂತಾಗುತ್ತದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈ ಪ್ರಶ್ನೆಯನ್ನು ತಮ್ಮ ಪಕ್ಷದವರ ಮೇಲೆಯೂ ಹಾಕಿಕೊಳ್ಳಿ.

ಶ್ರೀ ರಾಮಕೃಷ್ಣ ಹೆಗಡೆ.—ನನ್ನ ಮಾತು ಎಲ್ಲರಿಗೂ ಅನ್ವಯಿಸುತ್ತದೆ. ಒಂದು ಉದ್ದೇಶದಿಂದ ನಾವು ಸ್ವಲ್ಪಮಟ್ಟಿಗೆ ನಿಸ್ವಾರ್ಥದೃಷ್ಟಿಯಿಂದ ನೋಡೋಣ. ನಮ್ಮ ರಾಜ್ಯದಲ್ಲಿ ಯಾವ ಯಾವ ಭಾಗದಲ್ಲಿ ನೀರಾವರಿ ಅನುಕೂಲತೆ ಆಗಿದೆಯೋ ಅಲ್ಲಿ ದೇವರ ದಯೆಯಿಂದರಾಗಲೀ, ನಮ್ಮ ಅದೃಷ್ಟದಿಂದರಾಗಲೀ, ಸರ್ಕಾರದಿಂದ ಏನು ಕೆಲಸ ಆಗಿದೆಯೋ ಆಂಧ್ರವರು ನಮ್ಮ ಕೆಲಸ ಮಾಡಿಯಿತು, ನಮ್ಮ ಹತ್ತಿರ ದುಡ್ಡು ಕೇಳಬೇಡಿ ಎಂದರೆ ನಮ್ಮ ರಾಜ್ಯದ ಕೆಲಸ ಆಗುವುದಕ್ಕೆ ಸಾಧ್ಯವಿಲ್ಲ.

ಶ್ರೀ ಎಸ್. ಚನ್ನಯ್ಯ.—ಯಾವ ಏರಿಯಾದವರು ಆ ರೀತಿ ಹೇಳುತ್ತಾರೆ?

ಶ್ರೀ ರಾಮಕೃಷ್ಣ ಹೆಗಡೆ.—ಆ ಏರಿಯಾ ಈ ಏರಿಯಾ ಎಂದು ನಾನು ಹೇಳುವುದಿಲ್ಲ ಯಾವುದೇ ಏರಿಯಾ ಇರಲಿ. ಅವರು ಆ ರೀತಿ ಹೇಳಿದರೆ ತಪ್ಪು. ಅದಕ್ಕಾಗಿ ನಾವು ಸ್ವಲ್ಪಮಟ್ಟಿಗೆ ನಿಷ್ಠೂರವಾಗಿಯಾದರೂ ಕ್ರಮತೆಗೆದುಕೊಳ್ಳತಕ್ಕ ಅಗತ್ಯ ಬಂದಿದೆ. ನಮಯ ಸನ್ನಿಹಿತವಾಗಿದೆ. ನಾನು ಬಹಳ ಸಮಯವನ್ನು ತೆಗೆದುಕೊಂಡಿದ್ದೇನೆ. ಇಷ್ಟೊಂದು ದೀರ್ಘವಾಗಿ ಮಾತನಾಡ ಬೇಕಾಗುತ್ತದೆ ಎಂದು ನಾನು ಭಾವಿಸಿರಲಿಲ್ಲ. ಆದರೆ ಮಧ್ಯೆ ಮಧ್ಯೆ ಮಾನ್ಯ ಸದಸ್ಯರು ಕೆಲವರು ಪ್ರಶ್ನೆಗಳನ್ನು ಕೇಳಿದ್ದರಿಂದ ಅದಕ್ಕೆಲ್ಲಾ ಉತ್ತರವನ್ನು ಹೇಳಬೇಕಾಗಿ ಬಂದದ್ದರಿಂದ ಹೆಚ್ಚಿನ ಸಮಯವನ್ನು ನಾನು ತೆಗೆದುಕೊಂಡಿದ್ದೇನೆ.

ಕೊನೆಯಲ್ಲಿ ಒಂದು ಮಾತು. ರಾಮಕೃಷ್ಣಹೆಗಡೆಯವರ ಭವಿಷ್ಯವೇನು ಎಂದು ಕೆಲವು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದರು. ಎಷ್ಟೋ ಜನ ಸಮಾಜವಾದಿಗಳು ಎಂದು ಹೇಳಿಕೊಳ್ಳುವವರು ತಮ್ಮ ನಿಜವಾದ ಜೀವನದಲ್ಲಿ ಎಷ್ಟರಮಟ್ಟಿಗೆ ಸಮಾಜವಾದಿಗಳಾಗಿದ್ದಾರೆ ಎನ್ನುವುದು ನನಗೆ ಗೊತ್ತುಂಟು. ಕೆಲವು ಪತ್ರಿಕೆಗಳ ಉಲ್ಲೇಖವನ್ನು ಶ್ರೀಮಾನ್ ಗೋಪಾಲ ಗೌಡರು ಪ್ರಸ್ತಾಪ ಮಾಡಿದ್ದಾರೆ. ಪತ್ರಿಕೆಗಳಲ್ಲಿ ಬರತಕ್ಕ ವರದಿ ಸತ್ಯದ ಆಧಾರದ ಮೇಲೆ

(ಶ್ರೀ ರಾಮಕೃಷ್ಣ ಹೆಗಡೆ)

ಬರುತ್ತದೆ ಎಂದು ಹೇಳತಕ್ಕದ್ದು, ನಂಬತಕ್ಕದ್ದು ಅಲ್ಲ. ಅನೇಕನಲ ಪತ್ರಿಕೆಗಳಲ್ಲ ಗುಹಾ ಪೋಹೆಯಮೇರೆ ವರದಿಗಳು ಬರುತ್ತವೆ. ಅನೇಕ ನಲ ಪತ್ರಿಕೆಗಳವರು ತಮ್ಮ ಸ್ವಂತ ಕಲ್ಪನೆಯ ಮೇರೆಯೂ ಬರೆಯುತ್ತಾರೆ. ಎಲ್ಲವೂ ನರಿ ಎಂದು ಹೇಳುವುದಕ್ಕಾಗುವುದಿಲ್ಲ. ಇದೇನೇ ಇರಲ. ನನ್ನ ಭವಿಷ್ಯದಲ್ಲ ಏನೂ ಬದಲಾವಣೆ ಇಲ್ಲ. ಈ ಬಗೆಗೆ ಹೆಚ್ಚಿನ ಚರ್ಚೆ ಬೇಡ.

ಶ್ರೀ ಪಾಟಾಳ್ ನಾಗರಾಜ್.—ಇರ್ಲೆ ಇರಿ ಸ್ವಾಮಿ.

ಶ್ರೀ ರಾಮಕೃಷ್ಣ ಹೆಗಡೆ.—ನೀವು ಇರಿ ಎಂದರೆ ಇರುವುದಕ್ಕಾಗುವುದಿಲ್ಲ. ನೀವು ಹೋಗಿ ಎಂದರೆ ಹೋಗುವುದಕ್ಕಾಗುವುದಿಲ್ಲ. ಒಂದು ಮಾತು ಹೇಳುತ್ತೇನೆ. ಯಾವ ಒಂದು ಉದ್ದೇಶದಿಂದ ನನ್ನ ಭವಿಷ್ಯದ ನಮಾಚಾರ ಪತ್ರಿಕೆಯಲ್ಲಿ ಬಂದಿದೆಯೋ ಅದು ನಿಜವಲ್ಲ. ಅದಕ್ಕೆ ಯಾವುದೇ ತರಹ ಆಧಾರವಿಲ್ಲ. ಅದರಲ್ಲ ಸತ್ಯವಿಲ್ಲ ಎಂದು ನಾನು ಹೇಳುವುದಕ್ಕೆ ಬಯಸುತ್ತೇನೆ. ಈ ಬಗ್ಗೆ ಹೆಚ್ಚಿನ ಚರ್ಚೆ ಅಗತ್ಯವಿಲ್ಲ. ಯಾವುದೇ ಒಂದು ಅವಕ ಶವನ್ನು ತೆಗೆದುಕೊಂಡು ಬೇರೆಯವರು ಯಾರಾದರೂ ಅದರ ಉಪಯೋಗ ಮಾಡಿಕೊಳ್ಳತಕ್ಕ ಅಗತ್ಯವಿಲ್ಲ. ಇಷ್ಟು ಮಾತುಗಳನ್ನು ಮಾತ್ರ ನಾನು ಹೇಳುತ್ತೇನೆ. ಮಾನ್ಯ ಸದಸ್ಯರನೇಕರು ಒಳ್ಳೆಯ ಸೂಚನೆಗಳನ್ನು ಮಾಡಿದ್ದಾರೆ. ಅದಕ್ಕಾಗಿ ನಾನು ಅವರಿಗೆ ಕೃತಜ್ಞನಾಗಿದ್ದೇನೆ. ಮತ್ತು ನನಗೆ ಈ ಒಂದು ಅವಕಾಶವನ್ನು ಕಲ್ಪಿಸಿಕೊಟ್ಟದ್ದಕ್ಕಾಗಿ ನಾನು ಕೃತಜ್ಞನಾಗಿದ್ದೇನೆ.

ಕೊನೆಯದಾಗಿ ನಮ್ಮ ರಾಜ್ಯದ ನೌಕರರಿಗೆ ಡಿ. ಎ. ಅನ್ನು ಕೊಡುವಾಗ ರೇಟಿನಲ್ಲಿ ಸ್ವಲ್ಪ ಹೆಚ್ಚು ಕಡಿಮೆಯಾಗಿ ಮೂರು ಮತ್ತು ನಾಲ್ಕನೆಯ ದರ್ಜೆಯ ನೌಕರರಿಗೆ ಮೊದಲಗಿಂತ ಕಡಿಮೆ ಯಾಗುತ್ತದೆ ಎನ್ನುವ ಸಮಾಚಾರ ಬಂದಿದೆ. ಹಾಗೆ ಆಗದ ಹಾಗೆ ಅವರಿಗೆ ಮೊದಲಗಿಂತಲೂ ಕಡಿಮೆ ಆಗದಂತೆ ಮತ್ತು ಅದಕ್ಕಿಂತಲೂ ಹೆಚ್ಚು ಆಗುವ ಹಾಗೆ ಅದನ್ನು ಸರಿಪಡಿಸಿ ನಾಳೆ ಅಥವಾ ನಾಡಿದ್ದು ಆಜ್ಞೆಯನ್ನು ಹೊರಡಿಸುತ್ತೇವೆ. ಎಂದು ಹೇಳಿ ನಾನು ನನ್ನ ಮಾತನ್ನ ಮುಗಿಸುತ್ತೇನೆ.

Mr. SPEAKER.—The House will now adjourn and meet again at 1 p. m. on Wednesday the 5th March 1969.

The House adjourned at Twenty-Five Minutes past Nine of the Clock to meet again at One of the Clock on Wednesday the 5th March 1969.

WD 12549—GPB—600—27-6-1969